ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೨೪-(ii)

ಶ್ರೀ ವ್ಯಾಸಮಹರ್ಷಿಪ್ರಣೀತವಾದ

ಶ್ರೀ ಸೌರಪುರಾಣವು

(ಸಂಸ್ಕೃತ ಮೂಲ, ಕನ್ನಡ ಅರ್ಥಾನುವಾದದೊಡನೆ ಪರಿಷ್ಕೃತವಾಗಿದೆ)

ದ್ವಿತೀಯ ಸಂಪುಟ

ಅನುವಾದಕ

ಆಸ್ಥಾನ ವಿದ್ವಾನ್

ಎಚ್. ಗಂಗಾಧರಶಾಸ್ತ್ರೀ

ಕನ್ನಡ ಪಂಡಿತ

ಶ್ರೀ ವಿನಾಯಕ್ ಪ್ರಿಂಟಿಂಗ್ ವರ್ಕ್ಸ್
ಮೈಸೂರು

೧೯೪೫

॥ ಮಂಗಳಾಶಂಸನಂ ॥

ಭಾರದ್ವಾಜಕುಲೋತ್ಪನ್ನೋ ವಿಪ್ರವಂಶಸಮುದ್ಭವಃ ।
ಗೈರ್ವಾಣ್ಯಾಮಥಕಾರ್ಣಾಟ್ಯಾಂ ದತ್ತವಿದ್ವತ್ಪರೀಕ್ಷಕಃ ।
ಗಂಗಾಧರಾಭಿಧಾನೋಽಹಂ ವೇಂಕಟೇಶತನೂಭವಃ ।
ಕೃಷ್ಣದ್ವೈಪಾಯನಾತ್ಪ್ರೋಕ್ತಂ ಪುರಾಣಂಸೌರಮುತ್ತಮಂ ।
ಸತ್ಕರ್ಣಾಟಕಭಾಷಾಯಾಂ ವ್ಯಲಿಖಂ ವಿದುಷಾಂ ಮುದೇ ।
ಸರ್ವತ್ರ ಸಂಪದಸ್ಸಂತು ನಶ್ಯಂತು ವಿಪದಸ್ಸದಾ ।
ರಾಜಾ ಶ್ರೀಜಯಚಾಮೇಂದ್ರಶ್ಚಿರಂ ರಕ್ಷತು ಮೇದಿನೀಂ ।

ಮಂಗಳಂ ಶ್ರೀ ಸೂರ್ಯದೇವಗೆ ।
ಮಂಗಳಂ ಗಿರಿಜಾಧಿರಾಜಗೆ ।
ಮಂಗಳಂ ಹರಭಕ್ತನೆನಿಸಿಹ ವ್ಯಾಸಮುನಿವರಗೆ ।
ಮಂಗಳಂ ಜಯಚಾಮಭೂಪಗೆ ।
ಮಂಗಳಂ ನೃಪಬಂಧುವರ್ಗಕೆ ।
ಮಂಗಳಂ ಜಗಕಕ್ಕೆ ಚಾಮುಂಡಾಂಬಿಯೊಲವಿಂದೇ ॥

ಶ್ರೀ ಶಿವಾರ್ಪಣಮಸ್ತು.

|| ಶ್ರೀಃ ||

ಮುನ್ನುಡಿ.

ಓಂ ನಮಸ್ಸೂರ್ಯಾಯ.

ನಮ್ಮನ್ನಾಳುವ ಶ್ರೀಮನ್ಮಹಾಪ್ರಭುಗಳವರ ಉದಾರಾಶ್ರಯದಿಂದ ಈಗ ಸೌರಪುರಾಣದ ಎರಡನೆಯ ಭಾಗವೂ ಪರಿವರ್ತಿತವಾಗಿ ಪ್ರಕಾಶಕ್ಕೆ ಬಂದಿದೆ. ಸೌರಪುರಾಣದಲ್ಲಿ ಒಟ್ಟು ಅರುವತ್ತೊಂಬತ್ತು ಅಧ್ಯಾಯಗಳಿವೆ. ಅವುಗಳಲ್ಲಿ ಮೂವತ್ತೈದು ಅಧ್ಯಾಯಗಳನ್ನು ಒಂದನೆಯ ಭಾಗದಲ್ಲಿಯೂ, ಉಳಿದವುಗಳನ್ನು ಈ ದ್ವಿತೀಯ ಭಾಗದಲ್ಲಿಯೂ ಅಡಕಮಾಡಲಾಗಿದೆ. ಪರಿವರ್ತನೆಯ ಕಾಲದಲ್ಲಿ ನನಗೆ ಮೂರು ಪ್ರತಿಗಳು ದೊರೆತವು. ಅವುಗಳಲ್ಲಿ ಹೆಚ್ಚು ವ್ಯತ್ಯಾಸಗಳಿರಲಿಲ್ಲ. ಆನಂದಾಶ್ರಮಮುದ್ರಣಾಲಯದಲ್ಲಿ ಮುದ್ರಿತವಾದ ಪ್ರತಿಯು ಅನೇಕ ಗ್ರಂಥಗಳ ಶೋಧನೆಯಿಂದ ಸಮೀಚೀನವಾಗಿದೆಯೆಂದು ಕಂಡುಬಂದಿತು. ಅದಕ್ಕಾಗಿ ಆ ಪ್ರತಿಯನ್ನೇ ಈಗ ಸಮಗ್ರವಾಗಿ ಭಾಷಾಂತರಿಸಿದ್ದೇನೆ.

'ದೇವರು ಒಬ್ಬನೇ. ನಾನಾ ಮುಖಗಳಿಂದ, ನಾನಾ ಆಕಾರಗಳಿಂದ ಜನರಿಗೆ ನಾನಾವಿಧವಾಗಿ ತೋರಿಬರುತ್ತಿರುವನು' ಎಂಬ ಒಂದು ಸಿದ್ಧಾಂತವನ್ನು ದೃಢಪಡಿಸುವುದೇ ಸಮಸ್ತಪುರಾಣಗಳ ಮುಖ್ಯಧ್ಯೇಯ. ಅದಕ್ಕಾಗಿ ಒಂದೊಂದು ಪುರಾಣದಲ್ಲಿ ಒಂದೊಂದು ದೇವತೆಗೆ ಪ್ರಾಶಸ್ತ್ಯಕೊಟ್ಟು, ಮಿಕ್ಕ ದೇವತೆಗಳು ಆ ಪ್ರಧಾನದೇವತಾನುಸರಣೆಯಿಂದ ಪ್ರಸಿದ್ಧಿಗೊಂಡಿವೆ ಎಂದು ವಿವರಿಸುವುದುಂಟು. ಹಾಗೆಯೇ ಈ ಸೌರಪುರಾಣದಲ್ಲಿ ಶಿವಪಾರಮ್ಯವನ್ನು ವಿವರಿಸಿ, ವಿಷ್ಣ್ವಾದಿಸಕಲದೇವತೆಗಳೂ ಶಿವಾಂಶಸಂಭೂತರೆಂದೂ, ವ್ಯವಹಾರಮಾರ್ಗದಲ್ಲಿ ಎಲ್ಲರೂ ಶಿವನನ್ನೇ ನಂಬಿ ಶಿವಾಭೇದವನ್ನು ಪಡೆದರೆಂದೂ ಹೇಳಲ್ಪಟ್ಟಿದೆ. ಹಾಗೆಯೇ ಶಿವ, ವಿಷ್ಣು, ಬ್ರಹ್ಮಾದಿಗಳಿಗೆ ಯಾವನು ಭೇದ ಭಾವವನ್ನು ತೋರ್ಪಡಿಸುವನೋ, ಅವನು ಮಹಾ ಪಾಪಿಯೆನಿಸುವನು ಎಂದೂ, ಒಂದು ಕಡೆ ವ್ಯಾಸರು ನಿರೂಪಿಸಿರುವರು. ಇದೆಲ್ಲವನ್ನೂ ವಿಮರ್ಶಿಸಿದರೆ, ಸಕಲ ದೇವತೆಗಳೂ ಪರಬ್ರಹ್ಮಸ್ವರೂಪವಾದವುಗಳೇ ಎಂಬುದನ್ನು ನಾವು ಸ್ಪಷ್ಟವಾಗಿ ತಿಳಿಯಬಹುದು.

ಇನ್ನು ಒಂದು ದೇವತಾಸ್ವರೂಪಕ್ಕೆ ಪ್ರಾಧಾನ್ಯ ಕೊಡುವಾಗ, ಮಿಕ್ಕ ದೇವತೆಗಳನ್ನು ಸಾಮಾನ್ಯರೀತಿಯಿಂದ ವರ್ಣಿಸುವುದು ಹೇಗೆ ಸ್ವಭಾವವಾಗಿ ಬಂದಿದೆಯೋ, ಅದೇರೀತಿ, ಒಂದು ಮತದ ತತ್ತ್ವವನ್ನು ಪ್ರತಿಪಾದಿಸುವಾಗ, ಉಳಿದ ಮತಗಳಲ್ಲಿರುವ ನ್ಯೂನತೆಗಳನ್ನು ಎತ್ತಿ ಆಡುವುದು ನೈಸರ್ಗಿಕವಾಗಿದೆ. ಅದರಂತೆ, ಜಗನ್ಮಿಥ್ಯಾವಾದಿಗಳಾದ ಅದ್ವೈತಿಗಳ ತತ್ತ್ವವನ್ನು ಪ್ರತಿಪಾದಿಸುವ ಭರದಲ್ಲಿ, ದ್ವೈತಮತದ ತತ್ತ್ವವು ಸಮರ್ಪಕವಾದುದಲ್ಲವೆಂಬುದನ್ನು ಈ ಗ್ರಂಥಕಾರರು ೩೯-೪೦-೪೧ ನೇ ಅಧ್ಯಾಯಗಳಲ್ಲಿ ವಿವರಿಸಿರುವರು. ಅಲ್ಲದೆ ಪ್ರತರ್ದನ ರಾಜನ ಇತಿಹಾಸವನ್ನು ನಿರೂಪಿಸುವ ಸಂದರ್ಭದಲ್ಲಿ, ವೈಷ್ಣವಾಭಾಸನ ಚರ್ಯೆಗಳನ್ನೂ, ಕಲಿಯುಗದ ಭವಿಷ್ಯವನ್ನು ವಿವರಿಸುವಾಗ ಮಧ್ವಾಚಾರ್ಯರ ನಡತೆಗಳನ್ನೂ, ಖಂಡನೀಯಾತ್ಮಕವಾಗಿ ವರ್ಣಿಸಿರುವರು. ಸರ್ವಜ್ಞರಾದ ವ್ಯಾಸಮಹಾಮುನಿಗಳು, ದಿವ್ಯದೃಷ್ಟಿಯಿಂದ ಮುಂದೆ ಅದ್ವೈತಮತತತ್ತ್ವಕ್ಕೆ ಕೆಲವಂಶಗಳಲ್ಲಿ ವಿರೋಧವಾಗಿ ಹುಟ್ಟತಕ್ಕ ಮತಗಳ ಮತ್ತು ಮತಾಚಾರ್ಯರ ವಿಷಯವನ್ನು ಪ್ರತಿಪಾದಿಸಿ ಗ್ರಂಥರೂಪವಾಗಿ ಬರೆದಿಡುವುದು ನ್ಯಾಯವಾಗಿದೆಯೆಂದು ಕೆಲವರ ಅಭಿಪ್ರಾಯ. ಮತ್ತೆ ಕೆಲವರು ಈ ಭಾಗವನ್ನು ಯಾರೋ ಮತಾಭಿಮಾನಿಗಳು ಬರೆದು ಸೇರಿಸಿರಬಹುದೆಂದು ಊಹಿಸುವರು. ಈ ಚರ್ಚೆಯೂ, ಈ ಮನಃಪರಿಪಾಕವೂ, ಮತಗಳ ಗೊಂದಲದಲ್ಲಿ ಸಿಕ್ಕಿ ನರಳುತ್ತಿರುವ ಭರತಖಂಡದಲ್ಲಿ ಭಾರತೀಯರಿಗೆ ಹೊಸ ವಿಷಯವೇನೂ ಅಲ್ಲ. ಇಂತಹ ಸಂದರ್ಭಗಳು ಭಿನ್ನ ಭಿನ್ನ ಮತಗಳ ತತ್ತ್ವವನ್ನು ಪ್ರತಿಪಾದಿಸುವುದರಲ್ಲಿ ತೊಡಗಿವೆ ಎಂಬುದನ್ನರಿತು, ತಾತ್ತ್ವಿಕದೃಷ್ಟಿಯಿಂದಲೂ, ಸಮಾಧಾನ ದೃಷ್ಟಿಯಿಂದಲೂ, ಅವುಗಳನ್ನು ಚೆನ್ನಾಗಿ ವಿಮರ್ಶಿಸಿ, ಅದನ್ನೂ ತಮ್ಮ ಜ್ಞಾನಸಾಧನೆಗೆ ಕಾರಣವನ್ನಾಗಿ ಮಾಡಿಕೊಳ್ಳುವುದು, ವಿವೇಕಿಗಳಾದ ವಾಚಕರ ಕರ್ತವ್ಯವೆನಿಸುತ್ತದೆ.

ಈ ಗ್ರಂಥದ ೪೧ನೆಯ ಅಧ್ಯಾಯದಲ್ಲಿ ಸುದರ್ಶನ ಚಕ್ರವನ್ನು ಪಡೆದ ವಿಷ್ಣುವು ಶಂಕರನನ್ನು ಸಹಸ್ರ ಕಮಲಗಳಿಂದ ಅರ್ಚಿಸಿದ ಕಥೆಯು ಬಂದಿದೆ. ಆ ಸಹಸ್ರಶಿವನಾಮಗಳನ್ನೂ ಗ್ರಂಥಕಾರರು ಪ್ರಥಮಾವಿಭಕ್ತಿಯಲ್ಲಿಟ್ಟು ಶ್ಲೋಕರೂಪವಾಗಿ ರಚಿಸಿರುವರು. ಅದೇ ನಾಮಾವಳಿಗಳನ್ನೇ, ಈಗ ಶಿವಪೂಜಕರೆಲ್ಲರೂ ಶಿವಸಹಸ್ರನಾಮಾರ್ಚನೆಯಲ್ಲಿ ಬಳಸುತ್ತಿರುವರು. ಅಂತಹವರ ಸೌಕರ್ಯಕ್ಕಾಗಿ, ಅದೇ ಶಿವಸಹಸ್ರನಾಮಗಳನ್ನು ಚತುರ್ಥ್ಯಂತವಾಗಿ ಮಾಡಿ ಪ್ರತ್ಯೇಕವಾಗಿ ಸೇರಿಸಿರುತ್ತೇನೆ. ಈ ಸಮಯದಲ್ಲಿ ಬ್ರಂ॥ ಶ್ರೀ॥ ಆಸ್ಥಾನಮಹಾವಿದ್ವಾನ್ ಮೈಸೂರು ಸೀತಾರಾಮಶಾಸ್ತ್ರಿಗಳವರಿಂದ ರಚಿತವಾದ ಸಹಸ್ರನಾಮಾವಳಿಯೆಂಬ ಗ್ರಂಥದ ಸಹಾಯವನ್ನು ಪಡೆದಿರುತ್ತೇನೆ. ಮೂಲಶ್ಲೋಕಗಳಲ್ಲಿ ಒಂದುಸಾವಿರದತೊಂಬತ್ತೊಂದು ನಾಮಗಳು [೧೦೯೧] ಕಂಡುಬರುತ್ತಿವೆ. ಸಹಸ್ರನಾಮಾವಳಿಯು ಸಾವಿರಕ್ಕಿಂತ ಜಾಸ್ತಿಯಿರುವುದು ನ್ಯಾಯವಲ್ಲವೆಂದು ತಿಳಿದು ತೊಂಬತ್ತೊಂದು ಹೆಚ್ಚಿನ ನಾಮಗಳನ್ನೂ, ಅಲ್ಲಲ್ಲಿಯೇ ಬೇರೆಬೇರೆ

ನಾಮಗಳಿಗೆ ಹೊಂದಿಕೆಯಾಗುವಂತೆ ಸೇರಿಸಲಾಗಿದೆ. ಪ್ರಾಯಿಕವಾಗಿ ಈ ಸಹಸ್ರ ನಾಮಾವಳಿಯೇ ಹೆಚ್ಚು ಪ್ರಚಾರದಲ್ಲಿರುವುದರಿಂದ ಇವರ ಸಹಾಯವು ಶಿವಾರಾಧಕರಿಗೆ ದೊರಕಬಹುದೆಂದು ನಂಬಿದ್ದೇನೆ.

ಹೀಗೆ ಪಂಡಿತಪಾಮರರೆಲ್ಲರಿಗೂ ಅತ್ಯುಪಯುಕ್ತವಾಗುವ ಸಂಸ್ಕೃತ ಪುರಾಣ ಗ್ರಂಥಗಳು, ಬೇರೆಬೇರೆ ಭಾಷೆಗಳಲ್ಲಿ ಭಾಷಾಂತರವಾಗಿದ್ದರೂ, ಕನ್ನಡಿಗರಿಗೆ ಮಾತ್ರ ಅವು ಕನ್ನಡಿಯೊಳಗಿನ ನಿಧಿಯಂತಾಗಿದ್ದುವು. ಈ ಕೊರತೆಯನ್ನು ಪರಿಹರಿಸಲು ಕನ್ನಡತಾಯಸೇವೆಗೆ ಬದ್ಧಾದರರಾಗಿ ನಿಂತಿರುವ ನಮ್ಮನ್ನಾಳುವ ಶ್ರೀಮನ್ಮಹಾರಾಜ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ.,** ಮಹಾ ಪ್ರಭುಗಳವರ ಉದಾರಾಶ್ರಯದಿಂದ ನೂರಾರು ಇಂತಹ ಅಮೂಲ್ಯಗ್ರಂಥಗಳು ಕನ್ನಡಕ್ಕೆ ಪರಿವರ್ತಿತವಾಗುತ್ತಿವೆ. ಕನ್ನಡನಾಡಿನ ಕೀರ್ತಿಪತಾಕೆಯಂತಿರುವ ನಮ್ಮ ಶ್ರೀಮನ್ಮಹಾರಾಜರವರಿಗೆ ಸರ್ವೇಶ್ವರನು ಅನಂತಾನಂತಸುಖಸಂಪತ್ತುಗಳನ್ನು ಕರುಣಿಸಿ, ಸಲಹುತ್ತಿರಲೆಂದೇ ನಮ್ಮ ಮುಖ್ಯ ಪ್ರಾರ್ಥನೆಯಾಗಿದೆ.

ಅನುವಾದಕ;

ಹೊನ್ನೇನಹಳ್ಳಿ, ಗಂಗಾಧರಶಾಸ್ತ್ರೀ,

ಆಸ್ಥಾನ ವಿದ್ವಾನ್

ಡಿ. ಬನುಮಯ್ಯನವರ ಹೈಸ್ಕೂಲು ಪಂಡಿತ

ಮೈಸೂರು.

ವಿಷಯಾನುಕ್ರಮಣಿಕೆ

ಅಧ್ಯಾಯ ಮತ್ತು ವಿಷಯಗಳು ಪುಟಗಳು

ಅಧ್ಯಾಯ ಮತ್ತು ವಿಷಯಗಳು **ಪುಟಗಳು**

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ಷಟ್ತ್ರಿಂಶೋಽಧ್ಯಾಯಃ.

(ದ್ವಿತೀಯ ಭಾಗಃ)

॥ ಋಷಯ ಊಚುಃ ॥

ಗಾಣಾಪತ್ಯಂ ಕಥಂ ಲಬ್ಧಮೀಶ್ವರಾದುಪಮನ್ಯುನಾ ।
ಕ್ಷೀರೋದಧಿಃ ಕಥಂ ಲಬ್ಧೋ ಹ್ಯೇತದಾಖ್ಯಾತುಮರ್ಹಸಿ ॥ ೧ ॥

॥ ಸೂತ ಉವಾಚ ॥

ಉಪಮನ್ಯುರಿತಿ ಖ್ಯಾತೋ ಯೋಽಸೌ ಧೌಮ್ಯಾಗ್ರಜೋ ಮುನಿಃ ।
ಮಹಾದೇವಾಲ್ಲಬ್ಧವರೋ ದ್ವಿತೀಯ ಇವ ಷಣ್ಮುಖಃ ॥ ೨ ॥

ಮೂವತ್ತಾರನೆಯ ಅಧ್ಯಾಯ.

೧. ಹಿಂದಿನ ಕಥೆಯನ್ನೆಲ್ಲಾ ಭಕ್ತಿಯಿಂದ ಕೇಳಿದ ಶೌನಕಾದಿಮಹರ್ಷಿಗಳು, ಪುನಃ ಸೂತಪುರಾಣಿಕರನ್ನು ಕುರಿತು "ಎಲೈ ಮಹರ್ಷಿಯೇ, ಉಪಮನ್ಯುವು ಪರಮೇಶ್ವರನ ಅನುಗ್ರಹವನ್ನು ಸಂಪಾದಿಸಿ ಹೇಗೆ ಪ್ರಮಥಗಣಗಳಿಗೆ ಒಡೆಯನಾದನು? ಮತ್ತು ಆ ಉಪಮನ್ಯುವು ಕ್ಷೀರಸಮುದ್ರವನ್ನು ಹೊಂದಿದುದು ಹೇಗೆ? ಈ ವಿಷಯವನ್ನು ಕೇಳಲು ನಮಗೆ ಬಹಳ ಇಚ್ಛೆಯಿದೆ. ಅದನ್ನು ವಿವರಿಸಬೇಕು" ಎಂದ ವಿನಯದಿಂದ ಕೇಳಿಕೊಳ್ಳಲು.

೨. ಸೂತರು ಹಾಗೆಯೇ ಆಗಲೆಂದು ಉಪಮನ್ಯುವಿನ ವೃತ್ತಾಂತವನ್ನು ಹೇಳಲುಪಕ್ರಮಿಸಿದರು:- ಧೌಮ್ಯಋಷಿಯ ಅಣ್ಣನಾದ ಉಪಮನ್ಯುವು ಮಹಾತಪಸ್ವಿಯು. ಆತನು ಪರಶಿವಭಕ್ತನು. ಘೋರತಪಸ್ಸಿನಿಂದ ಶಂಕರನನ್ನು ಮೆಚ್ಚಿಸಿ ಎರಡನೆಯ ಷಣ್ಮುಖನೋ ಎಂಬಂತೆ, ಅನೇಕ ವರಗಳನ್ನು ಪಡೆದು ಶಿವನ ಪ್ರೀತಿಗೆ ಪಾತ್ರನಾಗಿದ್ದನು.

ಕ್ರೀಡಮಾನೋ ಮಹಾಭಾಗಃ ಕದಾಚಿನ್ಮಾತುಲಾಶ್ರಮೇ ।
ತಸ್ಯೈವ ಚ ಗೃಹೇ ಪೀತಂ ಕ್ಷೀರಂ ತೇನೋಪಮನ್ಯುನಾ ॥ ೩ ॥

ಅಬ್ರವೀನ್ಮಾತರಂ ಬಾಲಃ ಪುನರೇತ್ಯ ಸ್ವಮಾಶ್ರಮಂ ।
ಮಾತರ್ಮಮಾದ್ಯ ತದ್ದೇಹಿ ಕ್ಷೀರಂ ಸ್ವಾದುತರಂ ತತಃ ॥ ೪ ॥

ತನ್ಮಾತಾ ದುಃಖಿತಾ ಭೂತ್ವಾ ಪುತ್ರಮಾಲಿಂಗ್ಯ ಸಾದರಂ ।
ಬೀಜಾನ್ಯಥ ಸಮಾದಾಯ ಪಿಷ್ಟ್ವಾ ಸಾ ಕಲಭಾಷಿಣೀ ॥ ೫ ॥

ಪುತ್ರಾಯ ಪ್ರದದೌ ಕ್ಷೀರಂ ಸಾಮಪೂರ್ವಂ ಚ ಕೃತ್ರಿಮಂ ।
ಮಾತ್ರಾ ದತ್ತಂ ಪುನಃ ಪೀತ್ವಾ ಪಯಃ ಸ ಮುನಿಪುಂಗವಾಃ ॥ ೬ ॥

ಮಾತಃ ಪಯಸ್ತ್ವಯಾ ದತ್ತಂ ನೈತದಿತ್ಯಬ್ರವೀದ್ವಚಃ ।
ಅಶ್ರುಪೂರ್ಣೇಕ್ಷಣಂ ದೃಷ್ಟ್ವಾ ಪುತ್ರಂ ಮಾತಾ ಸುದುಃಖಿತಾ ॥ ೭ ॥

---

೩. ಒಂದುಸಾರಿ ಮಹಾತ್ಮನಾದ ಉಪಮನ್ಯುವು ತನ್ನ ಬಾಲ್ಯದಲ್ಲಿ ಸೋದರ ಮಾವನ ಆಶ್ರಮದಲ್ಲಿ ಆಟವಾಡುತ್ತಿದ್ದನು. ಆಗ ಅವರು ಕೊಟ್ಟ ಶುದ್ಧವಾದ ಹಾಲನ್ನು ಪಾನಮಾಡಿದನು.

೪. ಒಡನೆಯೇ ತನ್ನ ಆಶ್ರಮಕ್ಕೆ ಹಿಂದಿರುಗಿ ಬಂದು ತನ್ನ ತಾಯಿಯನ್ನು ಕುರಿತು "ಅಮ್ಮಾ, ನನಗೆ ಅಂತಹ ರುಚಿಯಾದ ಹಾಲನ್ನು ಕುಡಿಯಲು ಕೊಡು" ಎಂದು ಕೇಳಿಕೊಂಡನು.

೫. ಅದನ್ನು ಕೇಳಿದ ತಾಯಿಗೆ ಮನಸ್ಸು ಕರಗಿತು. ಅಂಥ ಹಾಲು ತನಗೆ ದೊರೆಯದಿದ್ದುದಕ್ಕಾಗಿ ವ್ಯಥೆಪಟ್ಟಳು. ಹಾಗೂ ಮಗನನ್ನು ಮುದ್ದಿಸಿ, ಕೆಲವು ಬೀಜ ಗಳನ್ನು ಅರೆದು ಹಾಲಿನಂತೆಮಾಡಿ, ಅದನ್ನು ಮಗುವಿಗೆ ಕುಡಿಯಲು ಕೊಟ್ಟಳು.

೬. ಹೀಗೆ ತಾಯಿಯು ಒಳ್ಳೆಯಮಾತಿನಿಂದ ಕೊಟ್ಟ ಆ ಕೃತ್ರಿಮವಾದ ಹಾಲನ್ನು ಉಪಮನ್ಯುವು ಸಂತೋಷದಿಂದ ಕುಡಿದನು.

೭. ಆದರೆ, ಹಿಂದೆ ತಾನು ಕುಡಿದಿದ್ದ ಹಾಲಿನ ರುಚಿಯು ಅದರಲ್ಲಿ ಕಾಣಲಿಲ್ಲ. ಅದರಿಂದ ಉಪಮನ್ಯುವು ಅದು ಹಾಲಲ್ಲವೆಂದು ಅಳಲು ಆರಂಭಿಸಿದನು. ಅದನ್ನು ಕಂಡು ತಾಯಿಯು ಮನಸ್ಸಿನಲ್ಲಿ ಬಹುವಾಗಿ ನೊಂದುಕೊಂಡಳು.

ನೇತ್ರೇ ಸಂಮಾರ್ಜ್ಯ ಹಸ್ತಾಭ್ಯಾಂ ಪುತ್ರಂ ಪ್ರತೀದಮಬ್ರವೀತ್ ।
ವನೇ ನಿವಸತಾಂ ಪುತ್ರ ದರಿದ್ರಾಣಾಂ ವಿಶೇಷತಃ ॥ ೮ ॥

ಯತ್ತ್ವಯಾ ಯಾಚ್ಯತೇ ಕ್ಷೀರಂ ತತ್ಸದಾ ದುರ್ಲಭಂ ಹಿ ನಃ ।
ಭುಕ್ತಿಶ್ಚ ಶಿವಕಾರುಣ್ಯಾಲ್ಲಭ್ಯತೇ ನಾನ್ಯಥಾ ಸುತ ॥ ೯ ॥

॥ ಸೂತ ಉವಾಚ ॥

ಏವಂ ಮಾತುರ್ವಚಃ ಶ್ರುತ್ವಾ ಬಾಲೋಽಪಿ ಮುನಿಪುಂಗವಾಃ ।
ಮಾತರಂ ಪ್ರಾಹ ಕಲ್ಯಾಣೀಂ ವಿನಯೇನ ತಪಸ್ವಿನೀಂ ॥ ೧೦ ॥

॥ ಉಪಮನ್ಯುರುವಾಚ ॥

ಮಾತಃ ಶೋಕಂ ತ್ಯಜ ಕ್ಷಿಪ್ರಂ ಯದ್ಯಸ್ತಿ ಭಗವಾನ್ ಶಿವಃ ।
ಕ್ವಚಿದಪ್ಯಾನಯಾಮ್ಯಾಶು ಕ್ಷೀರಾಬ್ಧಿಂ ತವ ಸನ್ನಿಧೌ ॥ ೧೧ ॥

---

೮. ಅಲ್ಲದೆ ಅಳುತ್ತಿದ್ದ ತನ್ನ ಮಗನ ಕಣ್ಣುಗಳನ್ನು ತನ್ನ ಕೈಗಳಿಂದ ಒರಸಿ, ಮಗುವೇ, ಕಾಡಿನಲ್ಲಿ ವಾಸಿಸುವ ದರಿದ್ರರಾದ ನಮಗೆ ಆ ಭಾಗ್ಯವು ಎಲ್ಲಿಂದ ಬರಬೇಕು ?

೯. ನೀನು ಅಪೇಕ್ಷಿಸುವಂತಹ ಹಾಲು ನಮಗೆ ಎಂದಿಗೂ ಸಿಕ್ಕಲಾರದು. ಶಿವನ ಅನುಗ್ರಹದಿಂದಲ್ಲದೇ ಮತ್ತಾವುದರಿಂದಲೂ ನಾವು ಆ ಪುಣ್ಯವನ್ನು ಪಡೆಯಲಾರೆವು.

೧೦. ಎಂದು ಹೇಳಿದ ತಾಯಿಯ ಮಾತನ್ನು ಕೇಳಿ ಉಪಮನ್ಯುವು ತಪಸ್ವಿನಿಯಾದ ತನ್ನ ತಾಯಿಯನ್ನು ಕುರಿತು ಹೀಗೆ ಹೇಳಿದನು.

೧೧. " ತಾಯಿಯೇ ನೀನು ದುಃಖಿಸಬೇಡ. ನೀನು ಹೇಳಿದಂತೆ ಈಶ್ವರಾನುಗ್ರಹದಿಂದ ಆ ಪುಣ್ಯವು ಲಭಿಸುವುದಾದರೆ, ಈಶ್ವರನನ್ನು ಮೆಚ್ಚಿಸಿ ನಿನ್ನ ಸಮೀಪಕ್ಕೆ ಹಾಲಿನ ಸಮುದ್ರವನ್ನೇ ತರಿಸುವೆನು."

ಏವಮುಕ್ತ್ವಾಥ ತಾಂ ನತ್ವಾ ಮಾತರಂ ಮುನಿಬಾಲಕಃ ।
ಜಗಾಮ ಸ ತಪಸ್ತಪ್ತುಂ ಮಾತುರಾಜ್ಞಾಪ್ರಚೋದಿತಃ ॥ ೧೨ ॥

ಉಪಮನ್ಯುಸ್ತಪಸ್ತೇಪೇ ಗತ್ವಾ ತು ಹಿಮಪರ್ವತಂ ।
ಭೂತ್ವಾऽನಿಲಾಶನೋ ವಿಪ್ರಾ ಬಹೂನ್ಯಬ್ದಶತಾನಿ ಸಃ ॥ ೧೩ ॥

ತಸ್ಯೋಪಮನ್ಯೋಸ್ತಪಸಾ ಪ್ರದೀಪ್ತಂ ಭುವನತ್ರಯಂ ।
ದೃಷ್ಟ್ವಾ ತದೀದೃಶಂ ದೇವಾ ವಿಷ್ಣುಂ ಗತ್ವೇದಮಬ್ರುವನ್ ॥ ೧೪ ॥

॥ ದೇವಾ ಊಚುಃ ॥

ದೇವದೇವ ಜಗನ್ನಾಥ ಪುರಾಣಪುರುಷೋತ್ತಮ ।
ತ್ರೈಲೋಕ್ಯಂ ದಹತೋ ವಹ್ನೇರಸ್ಮಾಂಸ್ತ್ರಾತುಮಿಹಾರ್ಹಸಿ ॥ ೧೫ ॥

ಶ್ರುತ್ವಾ ತದೀರಿತಂ ವಿಷ್ಣುಃ ಸಂಚಿಂತ್ಯ ಮನಸಾ ತದಾ ।
ಜಗಾಮ ಶಂಕರಂ ದ್ರಷ್ಟುಂ ಮಂದರಂ ಪರ್ವತೋಪಮಂ ॥ ೧೬ ॥

---

೧೨. ಎಂದು ಹೇಳಿ ತಾಯಿಗೆ ನಮಸ್ಕರಿಸಿ, ತಾಯಿಯ ಅಪ್ಪಣೆಯನ್ನು ಪಡೆದು ಈಶ್ವರನನ್ನು ಕುರಿತು ತಪಸ್ಸುಮಾಡಲು ಪ್ರಯಾಣಮಾಡಿದನು.

೧೩. ಉಪಮನ್ಯುವು ಅಲ್ಲಿಂದ ಹಿಮಾಲಯಪರ್ವತಕ್ಕೆ ಹೋಗಿ ಅಲ್ಲಿ ಕೇವಲ ವಾಯು ಸೇವನೆಯಿಂದಲೇ ನೂರಾರು ವರ್ಷಗಳು ಘೋರವಾಗಿ ಶಂಭುವನ್ನು ಕುರಿತು ತಪಸ್ಸುಮಾಡಿದನು.

೧೪. ಆ ಉಪಮನ್ಯುವಿನ ಘೋರತಪಸ್ಸಿನಿಂದ ಹೊರಟ ಜ್ವಾಲೆಯು ಮೂರು ಲೋಕವನ್ನೂ ಸುಡಲಾರಂಭಿಸಿತು. ಅದನ್ನು ಕಂಡ ದೇವತೆಗಳು ಭಯದಿಂದ ವಿಷ್ಣುವಿನ ಸಮೀಪಕ್ಕೆ ಓಡಿ ಹೋದರು.

೧೫. ಅಲ್ಲಿ ಭಗವಂತನಾದ ಮಹಾವಿಷ್ಣುವನ್ನು ನೋಡಿ ದೇವತೆಗಳು "ಸ್ವಾಮಿಯೇ, ಪುರುಷಶ್ರೇಷ್ಠನೇ, ಜಗನ್ನಾಥನೇ, ಈಗ ಮೂರು ಲೋಕವನ್ನು ಸುಡುತ್ತಿರುವ ಅಗ್ನಿಯನ್ನು ತಪ್ಪಿಸಿ ನಮ್ಮನ್ನು ಕಾಪಾಡು, ಎಂದು ಕೇಳಿಕೊಂಡರು.

೧೬ ಇದನ್ನು ಕೇಳಿದ ವಿಷ್ಣುವು ಮನಸ್ಸಿನಲ್ಲಿ ಬಹುವಾಗಿ ಯೋಚಿಸಿ, ಉಪಾಯಗಾಣದೆ ಕೊನೆಗೆ ಮಂದರ ಪರ್ವತದಲ್ಲಿರುವ ಶಂಕರನನ್ನು ನೋಡಲು ಪ್ರಯಾಣಮಾಡಿದನು.

ಮಹಾದೇವಂ ಪ್ರಣಮ್ಯಾಥ ದೃಷ್ಟ್ವಾ ವಿಷ್ಣುಃ ಕೃತಾಂಜಲಿಃ |
ಅಬ್ರವೀದ್ಭಗವಾನ್ ಕಶ್ಚಿತ್ ಬಾಲಕೋ ಹಿಮವದ್ಗಿರೌ ॥ ೧೭ ॥

ಉಪಮನ್ಯುರಿತಿ ಖ್ಯಾತಃ ಕ್ಷೀರಾರ್ಥೀ ತಪಸಿ ಸ್ಥಿತಃ |
ತಪೋಽಗ್ನಿಸ್ತಸ್ಯ ಭಗವನ್ ದಂದಹೀತಿ ಜಗತ್ತ್ರಯಂ ॥ ೧೮ ॥

ಅಥ ದೇವೋ ಮಹಾದೇವಃ ಪರಮಾತ್ಮಾ ಶಿವಃ ಸ್ವಯಂ |
ಇಂದ್ರರೂಪಂ ಸಮಾಸ್ಥಾಯ ಜಗಾಮ ಹಿಮವದ್ಗಿರಿಂ ॥ ೧೯ ॥

ಐರಾವತಂ ಸಮಾರುಹ್ಯ ದೇವಸಂಘೈಸ್ಸಮಾವೃತಃ |
ವಾಮೇನ ಶಚ್ಯಾ ಸಹಿತೋ ಮುನೇಸ್ತಸ್ಯ ತಪೋವನಂ ॥ ೨೦ ॥

ಶಕ್ರರೂಪಧರಶ್ಶಂಭುಃ ಪ್ರೀತ್ಯಾ ಭೂತ್ವಾಽಥ ಸುವ್ರತಾಃ |
ಪರಂ ಬ್ರೂಹೀತ್ಯುವಾಚೇದಮುಪಮನ್ಯುಂ ಮಹಾಮುನಿಂ ॥ ೨೧ ॥

---

೧೭. ಅಲ್ಲಿ ಮಹಾದೇವನನ್ನು ನೋಡಿ ಸಾಷ್ಟಾಂಗ ಪ್ರಣಾಮಮಾಡಿದನು. ಮತ್ತು ಹಿಮಾಲಯಪರ್ವತದಲ್ಲಿ ತಪಸ್ಸುಮಾಡುತ್ತಿರುವ ಉಪಮನ್ಯುವಿನ ವಿಷಯವನ್ನು ಶಂಕರನಲ್ಲಿ ವಿವರಿಸುತ್ತಾ,

೧೮. "ಎಲೈ ಸ್ವಾಮಿಯೇ, ಉಪಮನ್ಯುವೆಂಬ ಬಾಲಕನು ಹಾಲನ್ನು ಸಂಪಾದಿಸಬೇಕೆಂದು ಉಗ್ರವಾದ ತಪಸ್ಸಿನಲ್ಲಿರುವನು. ಅವನ ತಪೋಜ್ವಾಲೆಯು ಮೂರು ಲೋಕಗಳನ್ನೂ ಸುಡುತ್ತಿದೆ". ಎಂದು ಹೇಳಲು,

೧೯. ದೇವದೇವನಾದ ಪರಮೇಶ್ವರನು ಒಡನೆಯೇ ಇಂದ್ರನ ವೇಷವನ್ನು ಧರಿಸಿ ಹಿಮಾಲಯಕ್ಕೆ ತೆರಳಿದನು.

೨೦. ಇಂದ್ರನ ವೇಷಕ್ಕೆ ತಕ್ಕಂತೆ ಐರಾವತವನ್ನೇರಿ, ದೇವಸಂಘಗಳಿಂದ ಕೂಡಿ ಎಡಭಾಗದಲ್ಲಿ ಶಚೀವೇಷಧಾರಿಣಿಯಾದ ಪಾರ್ವತಿಯೊಡನೆ ಆ ಉಪಮನ್ಯುವಿನ ತಪೋಭೂಮಿಗೆ ತಲಪಿದನು.

೨೧. ಇಂದ್ರವೇಷಧಾರಿಯಾದ ಶಂಭುವು ಉಪಮನ್ಯುಮುನಿಗೆ ಪ್ರತ್ಯಕ್ಷನಾಗಿ ಅಯ್ಯಾ, ಋಷಿಯೇ ನಿನ್ನ ತಪಸ್ಸಿಗೆ ಮೆಚ್ಚಿರುವೆನು. ವರವನ್ನು ಕೇಳು" ಎಂದು ಹೇಳಿದನು.

ಇತೀರಿತಂ ವಚಸ್ತಸ್ಯ ಶ್ರುತ್ವಾ ವಜ್ರಧರಸ್ಯ ಸಃ ।
ತತಃ ಪ್ರಹಸಿತಃ ಪ್ರಾಹ ಶಿವೇಽರ್ಪಿತಮನಾಃ ಸ್ವಯಂ ॥ ೨೨ ॥

ಭಕ್ತಿಂ ಶೂಲಿನ್ಯಹಂ ಯಾಚೇ ಶಿವಾದೇವ ನ ಚಾನ್ಯಥಾ ।
ಅಲಮನ್ಯೈರ್ವರೈಃ ಶಕ್ರ ತರಂಗೈರಿವ ಚಂಚಲೈಃ ॥ ೨೩ ॥

ನಿಮಿಷಂ ನಿಮಿಷಾರ್ಧಂ ವಾ ಮುಹೂರ್ತಂ ಕ್ಷಣಮೇವ ವಾ ।
ನಸ್ಯಾಲಬ್ಧಪ್ರಸಾದಸ್ಯ ಭಕ್ತಿರ್ಭವತಿ ಶಂಕರೇ ॥ ೨೪ ॥

ತತ್ಪದಂ ತುಚ್ಛವದ್ಭಾತಿ ಬ್ರಹ್ಮತ್ವಂ ಚಾಪಿ ವೃತ್ರಹನ್ ।
ಭಕ್ತಿರೇವ ವಿರೂಪಾಕ್ಷೇ ಭವತ್ವಿತಿ ಮತಿರ್ಮಮ ॥ ೨೫ ॥

ತಸ್ಮಿನ್ ಮಹೇಶ್ವರೇ ಶಕ್ರ ಭಕ್ತಿಶ್ಚೇದ್ಯದಿ ಲಭ್ಯತೇ ।
ಬ್ರಹ್ಮತ್ವಮಪಿ ಮೇ ಭಾತಿ ಪಲಾಲಮಿವ ನಾನ್ಯಥಾ ॥ ೨೬ ॥

---

೨೨. ಹೀಗೆ ಹೇಳಲ್ಪಟ್ಟ ಇಂದ್ರನ ಮಾತುಗಳನ್ನು ಕೇಳುತ್ತಾ ಉಪಮನ್ಯುವು ಶಿವನನ್ನು ಮನಸ್ಸಿನಲ್ಲಿ ಭಜಿಸಿ ನಗುತ್ತಾ ಹೀಗೆ ಹೇಳಿದನು.

೨೩. ಎಲೈ ಇಂದ್ರನೇ, ನನಗೆ ಯಾವಾಗಲೂ ಶಿವನಲ್ಲಿ ಭಕ್ತಿಯುಂಟಾಗುವಂತೆ ಶಿವನಿಂದಲೇ ವರವನ್ನು ಬೇಡುವೆನು. ಬೇರೆ ಯಾರಿಂದಲೂ ಯಾವ ವರಗಳೂ ಬೇಡ ಏಕೆಂದರೆ ಆ ವರಗಳೆಲ್ಲವೂ ಸಮುದ್ರದ ಅಲೆಗಳಂತೆ ಸ್ಥಿರವಾದವುಗಳಲ್ಲ.

೨೪. ಈಶ್ವರಾನುಗ್ರಹವಿಲ್ಲದಿದ್ದರೆ ಯಾವ ಮನುಷ್ಯನಿಗೂ, ಒಂದು ನಿಮಿಷವಾಗಲಿ, ಒಂದುಕ್ಷಣವಾಗಲಿ, ಒಂದು ಮುಹೂರ್ತವಾಗಲಿ ಪರಮೇಶ್ವರನಲ್ಲಿ ಭಕ್ತಿಯುಂಟಾಗಲಾರದು.

೨೫. ಎಲೈ ವೃತ್ರಹನೇ, ನಿನ್ನ ಇಂದ್ರಪದವಿಯೂ ಬ್ರಹ್ಮಪದವಿಯೂ ಸಹ ನನ್ನ ದೃಷ್ಟಿಗೆ ತುಚ್ಛವಾದದ್ದಂದೇ ತೋರುತ್ತಿದೆ. ಪರಮೇಶ್ವರನಲ್ಲಿ ಶಾಶ್ವತವಾದ ಭಕ್ತಿಯುಂಟಾಗುವುದೇ ಒಂದು ಸ್ಥಿರವಾದ ಪದವಿಯೆಂಬುದು ನನ್ನ ಭಾವನೆ.

೨೬. ಎಲೈ ದೇವೇಂದ್ರನೇ ಮಹೇಶ್ವರನಲ್ಲಿ ನಿಜವಾದ ಭಕ್ತಿಯುಂಟಾದುದೇ ಆದರೆ, ಆಗ ಬ್ರಹ್ಮಪದವಿಯೂ ಸಹ ನನಗೆ ಜಳ್ಳು ಎಂಬ ಭಾವನೆಯೊದಗುವುದು.

ಏವಂ ಮುನೇರ್ನಿಗದಿತಂ ಶ್ರುತ್ವಾ ಕುಪಿತವತ್ಪ್ರಭುಃ ।
ತಮಬ್ರವೀಚ್ಛಚೀನಾಥೋ ನ ಮಾಂ ವೇತ್ಸಿ ಕಥಂ ಮುನೇ ॥ ೨೭ ॥

ಮತ್ಪರೋ ಮನ್ನಮಸ್ಕಾರೀ ಮತ್ಪೂಜನಪರೋ ಭವ ।
ಮಯಿ ಪ್ರಸನ್ನೇ ಜಗತಿ ದುರ್ಲಭಂ ಕಿಮಿಹಾಸ್ತಿ ತೇ ॥ ೨೮ ॥

ಕಿಂ ತೇನ ಪಾರ್ವತೀಶೇನ ನಿರ್ಗುಣೇನ ಮಹಾತ್ಮನಾ ।
ಕ್ರಿಯತೇ ಮುನಿಶಾರ್ದೂಲ ತಸ್ಮಾನ್ಮತ್ತೋ ವರಂ ಶೃಣು ॥ ೨೯ ॥

ಏವಂ ಶಕ್ರಸ್ಯ ವಚನಂ ಶ್ರುತ್ವಾ ಮುನಿವರಾಗ್ರಣೀಃ ।
ಉಪಮನ್ಯುರಭೂತ್ಕ್ರುದ್ಧಶ್ಚಿಂತಯಾನಸ್ತದಾ ದ್ವಿಜಾಃ ॥ ೩೦ ॥

ಅಹೋ ಕಶ್ಚಿದಿಹಾಯಾತಃ ಪಾಪಾತ್ಮಾ ರಾಕ್ಷಸಾಧಮಃ ।
ಶಕ್ರರೂಪಂ ಸಮಾಸ್ಥಾಯ ಮತ್ತಪೋವಿಘ್ನಹೇತವೇ ॥ ೩೧ ॥

---

೨೭. ಎಂದು ಇಂದ್ರಪದವಿಯನ್ನು ಧಿಕ್ಕರಿಸಿ ಮಾತನಾಡಲು ಶಂಭುವು ಕುಪಿತನಾದವನಂತೆ ನಟಿಸಿ, ಎಲೈ ಮುನಿಯೇ ನೀನು ನನ್ನನ್ನು ಯಾರೆಂದು ತಿಳಿದಿರುವೆ ?

೨೮. ನನ್ನನ್ನು ನಂಬು. ನನಗೆ ನಮಸ್ಕಾರಮಾಡು, ನನ್ನ ಆರಾಧನೆಯಲ್ಲಿ ಮನಸ್ಸಿಡು. ನಾನು ಪ್ರಸನ್ನನಾದರೆ ನಿನಗೆ ಲೋಕದಲ್ಲಿ ದುರ್ಲಭವಾದದ್ದು ಮತ್ತೊಂದಿರಲಾರದು.

೨೯. ಪಾರ್ವತೀಪತಿಯಾದ ಶಂಕರನು ನಿರ್ಗುಣಸ್ವಭಾವದವನು. ಅಂಥವನಿಂದ ನಿನಗೆ ಬರುವ ಗುಣವಾವುದು ?ಎಲೈ ಋಷಿಯೇ, ನೀನು ನನ್ನಿಂದ ವರವನ್ನು ಬೇಡು. ಬೇಕಾದದ್ದು ಕೊಡುವೆನು, ಎಂದು ಶಕ್ರರೂಪಿಯಾದ ಶಿವನು ಹೇಳಲಾಗಿ

೩೦. ಆ ಮಾತುಗಳನ್ನು ಕೇಳಿ ಉಪಮನ್ಯು ಮಹರ್ಷಿಯು ಬಹುವಾಗಿ ಇಂದ್ರನಮೇಲೆ ಕೋಪಿಸಿಕೊಂಡನು. ಮತ್ತು ಹೀಗೆ ಯೋಚಿಸಿದನು.

೩೧. ಅಯ್ಯೋ! ಯಾವನೋ ಪಾಪಿರಾಕ್ಷಸನು ಇಂದ್ರನ ವೇಷವನ್ನು ಧರಿಸಿ ನನ್ನ ತಪಸ್ಸನ್ನು ಕೆಡಿಸಲೋಸುಗ ಇಲ್ಲಿಗೆ ಬಂದಿರುವನಲ್ಲಾ ! ಈಗ ಏನುಮಾಡಲಿ, ಎಂದು ಬಹುವಾಗಿ ಪರಿತಪಿಸಿದನು.

ತಸ್ಮಾದಸೌ ನಿಹಂತವ್ಯಃ ಶಿವನಿಂದಾಕರೋ ಯತಃ ।
ತನ್ನಿಂದಾಶ್ರವಣಾತ್ಪಾಪಾದಧಿಕಂ ತದುಪೇಕ್ಷಣಾತ್ ॥ ೩೨ ॥

ಶಿವನಿಂದಾಕರಂ ದೃಷ್ಟ್ವಾ ಘಾತಯಿತ್ವಾ ಪ್ರಯತ್ನತಃ ।
ಹತ್ವಾಽತ್ಮಾನಂ ಪುನರ್ಯಸ್ತು ಸ ಯಾತಿ ಪರಮಾಂ ಗತಿಂ ॥ ೩೩ ॥

ಇತಿ ಶಾಸ್ತ್ರಂ ಸಮುದ್ದಿಶ್ಯ ಶಕ್ರಂ ಹಂತುಂ ಸಮುದ್ಯತಃ ।
ಅಬ್ರವೀತ್ಸುರರಾಜಾನಮುಪಮನ್ಯುರ್ಮುನೀಶ್ವರಾಃ ॥ ೩೪ ॥

ಕ್ಷೀರಾರ್ಥಂ ಯತ್ತಪಸ್ತಾವದಾಸ್ತಾಮತ್ರ ಶಚೀಪತೇ ।
ತ್ವಾಂ ನಿಹತ್ಯಾತ್ಮನೋ ದೇಹಂ ದಹಿಷ್ಯೇ ಯೋಗವಹ್ನಿನಾ ॥ ೩೫ ॥

ಏವಮುಕ್ತ್ವಾ ಸಮಾದಾಯ ಭಸ್ಮನೋ ಮುಷ್ಟಿಮಾದರಾತ್ ।
ಅಥರ್ವಾಸ್ತ್ರೇಣ ತಜ್ಜಪ್ತ್ವಾ ಶಕ್ರಂ ದಗ್ಧುಂ ಮುಮೋಚ ಸಃ ॥ ೩೬ ॥

---

೩೨. ಅಲ್ಲದೆ ಇವನು ಶಿವನನ್ನು ಬಹುವಾಗಿ ನಿಂದಿಸಿರುವುದರಿಂದ ಇವನನ್ನು ಕೊಲ್ಲುವುದು ತಪ್ಪಲ್ಲ. ಆ ಈಶ್ವರನಿಂದೆಯನ್ನು ಕೇಳುವುದು ಎಂಥ ಪಾಪಕರವಾದದ್ದೋ, ಅದಕ್ಕಿಂತಲೂ ಇವನನ್ನು ಈ ಕಾಲದಲ್ಲಿ ಕೊಲ್ಲದೆ ಬಿಡುವುದು ಇನ್ನೂ ಹೆಚ್ಚಿನ ಪಾಪವನ್ನು ಕೊಡತಕ್ಕದ್ದಾಗುವುದು.

೩೩. ಶಿವನಿಂದನೆಯನ್ನು ಕೇಳಿದೊಡನೆ, ಆ ಶಿವದೂಷಕನನ್ನು ಪ್ರಯತ್ನದಿಂದ ಕೊಂದು, ಅನಂತರ ತಾನು ಮೃತನಾದರೆ ಆತನಿಗೆ ದಿವ್ಯಲೋಕಪ್ರಾಪ್ತಿಯಾಗುವುದು.

೩೪. ಹೀಗೆಂಬ ಶಾಸ್ತ್ರವನ್ನು ಸ್ಮರಿಸಿಕೊಂಡು ಆ ಇಂದ್ರನನ್ನು ಕೊಲ್ಲಲು ಮನಸ್ಸುಮಾಡಿ, ಅವನನ್ನು ಕುರಿತು ಉಪಮನ್ಯುವು ಒಂದು ಮಾತನ್ನು ಹೇಳಿದನು.

೩೫. "ಎಲೈ ಇಂದ್ರನೇ, ಹಾಲಿಗಾಗಿ ಮಾಡುತ್ತಿರುವ ತಪಸ್ಸು ಇಷ್ಟಕ್ಕೇ ನಿಂತು ಹೋಗಲಿ. ಈಗ ಮೊದಲು ನಿನ್ನನ್ನು ಕೊಂದು ಅನಂತರ ಯೋಗವೆಂಬ ಅಗ್ನಿಯಿಂದ ನನ್ನ ದೇಹವನ್ನು ನಾನು ದಹಿಸಿಕೊಳ್ಳುವೆನು".

೩೬, ಎಂದು ಹೇಳಿ ಮುಷ್ಟಿಯಲ್ಲಿ ಭಸ್ಮವನ್ನು ಹಿಡಿದು, ಅಥರ್ವಾಸ್ತ್ರಮಂತ್ರವನ್ನು, ಜಪಿಸಿ ಇಂದ್ರನನ್ನು ಸುಡಬೇಕೆಂದು ಇಂದ್ರನಮೇಲೆ ಪ್ರಯೋಗಿಸಿದನು.

ವಹ್ನಿಧಾರಣಯಾತ್ಮಾನಂ ದಗ್ಧುಂ ಸಮುಪಚಕ್ರಮೇ ।
ಧ್ಯಾಯನ್ನಿಶ್ವೇಶ್ವರಂ ದೇವಂ ಪರಮಾತ್ಮಾನಮವ್ಯಯಂ ॥ ೩೭ ॥

ಏವಂ ವ್ಯವಸಿತೇ ತಸ್ಮಿನ್ ಪಿನಾಕೀ ನೀಲಲೋಹಿತಃ ।
ಸೌಮ್ಯಧಾರಣಯಾಗ್ನೇಯೀಂ ವಾರಯಾಮಾಸ ಶಂಕರಃ ॥ ೩೮ ॥

ಶೈಲಾದಿನಾಽನ್ಯಥಾ ತತ್ರ ಸಂಹೃತಾಂ ಚಾತಿಭೀಷಣಾಂ ।
ಅಥ ವಿಶ್ವಾಧಿಪೋ ರುದ್ರೋ ಭಕ್ತಿಂ ಜ್ಞಾತ್ವಾ ದೃಢಾಂ ಮುನೇಃ ॥ ೩೯ ॥

ಆತ್ಮಾನಂ ದರ್ಶಯಾಮಾಸ ಕೋಟಿಸೂರ್ಯಸಮಪ್ರಭಂ ।
ಪಂಚವಕ್ತ್ರಂ ದಶಭುಜಂ ಬಾಲೇಂದುಕೃತಶೇಖರಂ ॥ ೪೦ ॥

ದ್ವೀಪಿಚರ್ಮಪರೀಧಾನಂ ತ್ರಿಪಂಚನಯನಂ ವಿಭುಂ ।
ತಂ ದೃಷ್ಟ್ವಾ ಕೃತಕೃತ್ಯೋಽಭೂದುಪಮನ್ಯುರ್ಮಹಾಮುನಿಃ ॥ ೪೧ ॥

---

೩೭. ತಾನು ಯೋಗಾಗ್ನಿಯನ್ನು ಹೃದಯದಲ್ಲಿ ಧರಿಸಿಕೊಂಡು, ಮನಸ್ಸಿನಲ್ಲಿ ನಾಶರಹಿತನೂ, ಪರಮಾತ್ಮರೂಪಿಯೂ ಆದ ವಿಶ್ವೇಶ್ವರನನ್ನು ಸ್ಮರಿಸುತ್ತಾ ತನ್ನ ದೇಹವನ್ನು ಸುಟ್ಟುಕೊಳ್ಳಲು ಆರಂಭಿಸಿದನು.

೩೮. ಹೀಗೆ ಈಶ್ವರನಮೇಲೆ ಆಗ್ನೇಯಾಸ್ತ್ರವನ್ನು ಉಪಮನ್ಯುವು ಪ್ರಯೋಗಿಸಲು, ಈಶ್ವರನು ಸೌಮ್ಯಮಂತ್ರೋಪಾಸನೆಯಿಂದ ಈ ಅಸ್ತ್ರದ ಉರಿಯನ್ನು ತಪ್ಪಿಸಿಕೊಂಡನು.

೩೯. ಮತ್ತು ಆ ಅಸ್ತ್ರದ ವೇಗವೆಲ್ಲವೂ ಬೆಟ್ಟಗಳಮೇಲೆ ಹಾದುಹೋಗುವಂತೆ ಆ ಅಸ್ತ್ರವನ್ನು ವ್ಯರ್ಥವನ್ನಾಗಿಮಾಡಿದನು. ಅನಂತರ ಲೋಕದೊಡೆಯನಾದ ಪರಶಿವನು ಆ ಉಪಮನ್ಯುವಿನ ದೃಢಭಕ್ತಿಯನ್ನು ಕಂಡು,

೪೦–೪೧. ಆ ಉಪಮನ್ಯುವಿಗೆ ಕೋಟಿಸೂರ್ಯಪ್ರಕಾಶಮಾನವಾದ ತನ್ನ ಸ್ವರೂಪವನ್ನು ತೋರ್ಪಡಿಸಿದನು. ಪರಶಿವನ ಆಕಾರದಲ್ಲಿ ಐದು ಮುಖಗಳೂ, ಹತ್ತು ತೋಳುಗಳೂ, ಕಾಣುತ್ತಿದ್ದುವು. ಬಾಲಚಂದ್ರನನ್ನು ತಲೆಯಲ್ಲಿ ಧರಿಸಿ, ಗಜಚರ್ಮವನ್ನು ಶರೀರದಲ್ಲಿ ಹೊದ್ದು, ವಿಶಾಲವಾದ ಮೂರು ಕಣ್ಣುಗಳಿಂದ ಕೂಡಿರುವ ಮಹೇಶ್ವರನ ರೂಪವನ್ನು ಕಂಡು ಉಪಮನ್ಯುವು ತಾನು ಧನ್ಯನಾದನೆಂದು ತಿಳಿದನು.

ಸ್ತೋತ್ರೈರ್ನಾನಾವಿಧೈರ್ದಿವ್ಯೈಸ್ತುಷ್ಟಾವ ಪರಮೇಶ್ವರಂ ।
ತಸ್ಮೈ ಪ್ರಸನ್ನೋ ಭಗವಾನ್ ದತ್ತವಾನ್ ಕ್ಷೀರಸಾಗರಂ ॥ ೪೨ ॥

ಗಾಣಾಪತ್ಯಂ ಚ ದುಷ್ಪ್ರಾಪಂ ಬ್ರಹ್ಮಾದ್ಯೈರಪಿ ಸುವ್ರತಾಃ ।
ಯದ್ದತ್ತಂ ದೇವದೇವೇನ ನಾಭೂತ್ತತ್ರಾಽದರೋ ಮುನೇಃ ॥ ೪೩ ॥

ಭಕ್ತಿಮೇವ ವಿರೂಪಾಕ್ಷೇ ಪುನಃಪುನರಯಾಚತ ।
ಏವಂ ದತ್ವಾ ವರಂ ತಸ್ಮೈ ಮಹಾದೇವಃ ಸಹೋಮಯಾ ॥ ೪೪ ॥
ಸ್ತೂಯಮಾನಃ ಸುರಗಣೈಸ್ತತ್ರೈವಾಂತರಧೀಯತ ॥ ೪೫ ॥

ಯಃ ಪಠೇದಿದಮಾಖ್ಯಾನಮುಪಮನ್ಯೋರ್ಮಹಾತ್ಮನಃ ।
ಸರ್ವಪಾಪವಿನಿರ್ಮುಕ್ತೋ ಬ್ರಹ್ಮಲೋಕಂ ಸ ಗಚ್ಛತಿ ॥ ೪೬ ॥

---

೪೨. ನಾನಾವಿಧವಾದ ಸ್ತೋತ್ರಗಳಿಂದ ಪರಶಿವನನ್ನು ಸ್ತುತಿಸಿದನು. ಇದರಿಂದ ತೃಪ್ತನಾದ ಮಹಾದೇವನು ಉಪಮನ್ಯುಮಹರ್ಷಿಗೆ ಅವನ ಇಷ್ಟದಂತೆ ಕ್ಷೀರಸಾಗರವನ್ನು ಅನುಗ್ರಹಿಸಿದನು.

೪೩. ಬ್ರಹ್ಮಾದಿಗಳಿಗೂ ದೊರೆಯಲಾಗದಂತಹ ಪ್ರಮಥಗಣಗಳ ಒಡೆತನವನ್ನು ದಯಪಾಲಿಸಿದನು. ಆದರೆ ಆ ಅಧಿಕಾರದಲ್ಲಿ ಉಪಮನ್ಯುವಿಗೆ ಅಷ್ಟಾಗಿ ಪ್ರೀತಿಯುಂಟಾಗಲಿಲ್ಲ.

೪೪–೪೫. ಅದಕ್ಕಿಂತಲೂ ಹೆಚ್ಚಾಗಿ ಯಾವಾಗಲೂ ತನ್ನ ಹೃದಯದಲ್ಲಿ ಈಶ್ವರಭಕ್ತಿಯು ದೃಢವಾಗಿರುವಂತೆ ವರಗಳನ್ನು ದಯಪಾಲಿಸಬೇಕೆಂದು ಪದೇಪದೇ ಬೇಡಿಕೊಂಡನು. ಹಾಗೆಯೇ ಆಗಲೆಂದು ಪರಶಿವನು ಅನುಗ್ರಹಿಸಿ, ದೇವತೆಗಳು ವಿಧವಿಧವಾಗಿ ಹೊಗಳುತ್ತಿರಲು, ಪಾರ್ವತೀ ಸಮೇತನಾಗಿ ತಾನು ಅಂತರ್ಧಾನನಾದನು.

೪೬. ಈ ಉಪಮನ್ಯು ಮಹರ್ಷಿಯ ಕಥೆಯನ್ನು ಯಾರು ಭಕ್ತಿಯಿಂದ ಪಠಿಸುವರೋ ಅವರು ಸಮಸ್ತಪಾಪಗಳನ್ನೂ ಕಳೆದುಕೊಂಡು ಬ್ರಹ್ಮಲೋಕವನ್ನು ಹೊಂದುವರು.

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಉಪಮನ್ಯೂಪಾಖ್ಯಾನ ಕಥನಂ ನಾಮ ಷಟ್‌ತ್ರಿಂಶೋಽಧ್ಯಾಯಃ.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದ ರೂಪವಾದ ಉಪಮನ್ಯುಮಹರ್ಷಿಯ ಕಥೆಯ ವಿವರಣವು ಈ ಮೂವತ್ತಾರನೆಯ ಅಧ್ಯಾಯದಲ್ಲಿ ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಸಪ್ತತ್ರಿಂಶೋಽಧ್ಯಾಯಃ

॥ ಋಷಯ ಊಚುಃ ॥

ಕಥಂ ಜಾಲಂಧರೋ ದೈತ್ಯೋ ನಿಹತಃ ಶೂಲಪಾಣಿನಾ ।
ಸುದರ್ಶನೇನ ಚಕ್ರೇಣ ವಕ್ತುಮರ್ಹಸಿ ಸಾಂಪ್ರತಂ ॥ ೧ ॥

॥ ಸೂತ ಉವಾಚ ॥

ಆಸೀತ್ಕೃತಾಂತಸಂಕಾಶೋ ಜಾಲಂಧರ ಇತಿ ಸ್ಮೃತಃ ।
ಜಲಮಂಡಲಸಂಭೂತಸ್ತೇನ ದೇವಾ ವಿನಿರ್ಜಿತಾಃ ॥ ೨ ॥

ಲೋಕಪಾಲಾಶ್ಚ ಸಾಧ್ಯಾಶ್ಚ ವಸವಶ್ಚ ಮರುದ್ಗಣಾಃ ।
ವಿಶ್ವೇದೇವಾಸ್ತಥಾದಿತ್ಯಾ ರುದ್ರಾಶ್ಚೈವ ವಿನಿರ್ಜಿತಾಃ ॥ ೩ ॥

ಮೂವತ್ತೇಳನೆಯ ಅಧ್ಯಾಯ.

೧. ಪುನಃ ಶೌನಕಾದಿಗಳು ಸೂತಮಹರ್ಷಿಗಳನ್ನು ಕುರಿತು "ಸ್ವಾಮಿಯೇ, ಜಲಂಧರನೆಂಬ ರಾಕ್ಷಸನನ್ನು ಪರಮೇಶ್ವರನು ತನ್ನ ಸುದರ್ಶನವೆಂಬ ಚಕ್ರದಿಂದ ಹೇಗೆ ಕೊಂದನು, ಎಂಬುದನ್ನು ದಯವಿಟ್ಟು ತಿಳಿಸಬೇಕು" ಎಂದು ಕೇಳಿ ಕೊಳ್ಳಲು

೨ ಸೂತಮಹರ್ಷಿಗಳು ಶೌನಕಾದಿಗಳಿಗೆ ದಯೆಯಿಂದ ಜಲಂಧರನ ವೃತ್ತಾಂತ ವನ್ನು ತಿಳಿಸಲಾರಂಭಿಸಿದರು. "ಜಲಂಧರನು ಜಲಮಂಡಲದಿಂದ ಹುಟ್ಟಿದವನು. ಆತನು ಯಮನಂತೆ ಭಯಂಕರನಾದವನು. ತನ್ನ ಶಕ್ತಿಯಿಂದ ಜಲಂಧರನು ಸಮಸ್ತ ದೇವತೆಗಳನ್ನೂ ಗೆದ್ದಿದ್ದನು.

೩. ಜಲಂಧರನು ಸಮಸ್ತ ಲೋಕಪಾಲಕರನ್ನೂ, ಸಿದ್ಧಸಾಧ್ಯರನ್ನೂ ವಸು ಗಳನ್ನೂ, ಮರುದ್ಗಣಗಳನ್ನೂ, ವಿಶ್ವೇದೇವಾದಿಗಳನ್ನೂ, ದ್ವಾದಶಾದಿತ್ಯರನ್ನೂ, ಏಕಾ ದಶರುದ್ರರನ್ನೂ ಸೋಲಿಸಿದನು

ಬ್ರಹ್ಮಾಣಂ ಚ ಸುರಶ್ರೇಷ್ಠಂ ಸಮರೇ ಮುನಿಪುಂಗವಾಃ ।
ಜಗಾಮ ಜೇತುಂ ದೇವೇಶಂ ವಿಷ್ಣುಂ ದೈತ್ಯನಿಬರ್ಹಣಂ ॥ ೪ ॥

ತೇನ ಸಾರ್ಧಮಭೂದ್ಯುದ್ಧಂ ಜಾಲಂಧರಸುರೇಶಯೋಃ ।
ವಿನಿರ್ಜಿತ್ಯ ತತೋ ವಿಷ್ಣುಂ ದೈತ್ಯಾನ್ ಪ್ರತೀದಮಬ್ರವೀತ್ ॥ ೫ ॥

ದೇವಾ ವಿನಿರ್ಜಿತಾಸ್ಸರ್ವೇ ವರ್ಜಯಿತ್ವಾ ತ್ರಿಲೋಚನಂ ।
ತಮದ್ಯ ಜೇತುಮಿಚ್ಛಾಮಿ ಭಗವಂತಂ ಮಹೇಶ್ವರಂ ॥ ೬ ॥

ನಂದೀಶ್ವರೇಣ ಸಹಿತಂ ಸಾಂಬಂ ಚೈವ ರಣಾಂಗಣೇ ।
ಜಾಲಂಧರವಚಃ ಶ್ರುತ್ವಾ ದೈತೇಯಾಸ್ತೇ ದ್ವಿಜೋತ್ತಮಾಃ ॥ ೭ ॥

ಯಯುಯುರ್ದೇವಂ ತಮೀಶಾನಂ ಯೋದ್ಧುಮುದ್ಯುಕ್ತಮಾನಸಾಃ ।
ತತೋ ಜಾಲಂಧರೋ ದೈತ್ಯೋ ದೈತ್ಯೈಶ್ಚ ಸಹಿತೋ ಬಲೀ ॥ ೮ ॥

---

೪. ಆಮೇಲೆ ದೇವಶ್ರೇಷ್ಠನಾದ ಬ್ರಹ್ಮನನ್ನೂ, ಪುರಾಣಪುರುಷನಾಗಿ ದೈತ್ಯನಾಶಕನಾಗಿರುವ ಮಹಾವಿಷ್ಣುವನ್ನೂ ಜಯಿಸಲು ಪ್ರಯಾಣಮಾಡಿದನು.

೫. ಜಲಂಧರನು ಮೊದಲು ಇಂದ್ರ, ಬ್ರಹ್ಮ, ವಿಷ್ಣು-ಇವರನ್ನು ಯುದ್ಧದಲ್ಲಿ ಸೋಲಿಸಿದನು. ಆಮೇಲೆ ರಾಕ್ಷಸರನ್ನೆಲ್ಲಾ ಕರೆದು ಅವರೊಡನೆ ಹೀಗೆ ಹೇಳಿದನು.

೬. "ಎಲೈ ರಾಕ್ಷಸರೇ, ನಾನು ಇಲ್ಲಿನವರೆಗೆ ವಿಷ್ಣುವೇ ಮೊದಲಾದ ಸಮಸ್ತ ದೇವತೆಗಳನ್ನು ಗೆದ್ದಿರುವೆನು. ಶಂಕರನನ್ನು ಇನ್ನೂ ಜಯಿಸಿಲ್ಲ; ಆದ್ದರಿಂದ ಈಗಲೇ ಶಂಕರನೊಡನೆ ಯುದ್ಧಮಾಡಬೇಕೆಂದಿದ್ದೇನೆ.

೭. ಯುದ್ಧರಂಗದಲ್ಲಿ ನಂದೀಶ್ವರನನ್ನೂ, ಪಾರ್ವತೀ ಸಮೇತನಾದ ಪರಮೇಶ್ವರನನ್ನೂ ಸೋಲಿಸುವೆನು" ಎಂದು ವೀರಾವೇಶದಿಂದ ಹೇಳಿದ ಜಲಂಧರನ ಮಾತುಗಳನ್ನು ಕೇಳಿ ಪರಮೇಶ್ವರನೊಡನೆ ಯುದ್ಧಮಾಡಲು ರಾಕ್ಷಸರೆಲ್ಲರೂ ಏಕಮುಖದಿಂದ ಒಪ್ಪಿಕೊಂಡರು.

೮. ಒಡನೆಯೇ ಜಲಂಧರನು ಸಮಸ್ತ ದೈತ್ಯರಿಂದ ಕೂಡಿ ಸಮಸ್ತ ಬಲದೊಡನೆ ಪರಮೇಶ್ವರನ ಮೇಲೆ ಯುದ್ಧಮಾಡಲು ಪ್ರಯಾಣಮಾಡಿದನು.

ರಥೈರ್ನಾಗೈಶ್ಚ ಸಂನದ್ಧಃ ಪ್ರಯಯೌ ಶಂಕರಾಂತಿಕಂ ।
ದೃಷ್ಟ್ವಾ ಜಾಲಂಧರಂ ಶಂಭುರಂಜನಾದ್ರಿಚಯೋಪಮಂ ॥ ೯ ॥
ಪ್ರಹಸನ್ನಬ್ರವೀದ್ದೈತ್ಯಂ ಬ್ರಹ್ಮಣೋ ವರದರ್ಪಿತಂ ।
ಯುದ್ಧೇನಾಲಂ ದಿತೇಃ ಪುತ್ರ ಮದ್ಬಾಣೈರ್ನಿಶಿತೈರಿಹ ॥ ೧೦ ॥
ಕ್ಷಣಾದ್ವಿಚ್ಛಿನ್ನಸರ್ವಾಂಗೋ ಮೃತ್ಯೋರ್ಗ್ರಾಸಂ ಗಮಿಷ್ಯಸಿ ।
ಶ್ರುತ್ವಾ ಜಾಲಂಧರೋ ವಾಕ್ಯಂ ದೇವದೇವಸ್ಯ ಶೂಲಿನಃ ॥ ೧೧ ॥
ಕುಪಿತಃ ಪ್ರಾಹ ದೇವೇಶಂ ಭಗವಂತಂ ತ್ರಿಲೋಚನಂ ।
ಅನೇನ ವಾಕ್ಪ್ರಲಾಪೇನ ಕಿಂ ಮಹೇಶ ವೃಥಾ ತವ ॥ ೧೨ ॥
ಗದಯಾ ತಾಡಯಾಮಿ ತ್ವಾಮನಯಾ ತೀಕ್ಷ್ಣಧಾರಯಾ ।
ಮಾಂ ಯೋ ಜೇಷ್ಯತಿ ಲೋಕೇಷು ನ ತಂ ಪಶ್ಯಾಮಿ ಶಂಕರ ॥ ೧೩ ॥

---

೯. ಅನೇಕ ರಥಗಳಿಂದಲೂ, ಆನೆಗಳಿಂದಲೂ ಕೂಡಿ ಶಂಕರನನ್ನು ಎದುರಿಸಿದನು. ಆಗ ಕಾಡಿಗೆಯಪರ್ವತದಂತೆ ಕಪ್ಪು ಬಣ್ಣದ ಜಲಂಧರನು ಯುದ್ಧಕ್ಕೆ ಬಂದುದನ್ನು ಶಂಕರನು ನೋಡಿದನು.

೧೦. ಬ್ರಹ್ಮನ ವರಬಲದಿಂದ ಕೊಬ್ಬಿರುವ ಈ ಜಲಂಧರನನ್ನು ಕಂಡು ಮಹಾದೇವನು, "ಅಯ್ಯಾ ದೈತ್ಯನೇ, ನೀನು ನನ್ನೊಡನೆ ಯುದ್ಧಮಾಡಬೇಡ. ನನ್ನ ಕ್ರೂರವಾದ ಬಾಣಗಳು ನಿನ್ನನ್ನು ಕೊಂದು ಮೃತ್ಯುವಿಗೆ ಆಹಾರವನ್ನಾಗಿ ಮಾಡುವುವು."

೧೧–೧೨. ಎಂದು ಹೇಳಿದ ದೇವದೇವನಾದ ಶಂಕರನ ಮಾತುಗಳನ್ನು ಕೇಳಿ ಕೋಪಗೊಂಡು "ಎಲೈ ಮಹೇಶನೇ, ಈ ತಲೆಹರಟೆಯಿಂದ ಸಾಕು. ನಿನ್ನ ಮಾತೆಲ್ಲವೂ, ಈಗ ವ್ಯರ್ಥ.

೧೩. ಎಲೈ ಶಂಕರನೇ, ಇಗೋ ಈ ಕ್ರೂರವಾದ ಅಲುಗುಗಳುಳ್ಳ ಗದೆಯಿಂದ ಈಗಲೇ ನಿನ್ನನ್ನು ಹೊಡೆಯುವೆನು. ಯಾವನೂ ನನ್ನನ್ನು ಗೆಲ್ಲಲಾರನು. ನನ್ನನ್ನು ಜಯಿಸುವವನು ಮೂರು ಲೋಕದಲ್ಲಿಯೂ ದೊರೆಯಲಾರನು.

ತಸ್ಮಾದುತ್ಥಾಯ ಯುಧ್ಯಸ್ವ ಯದಿ ತೇಽಸ್ತಿ ಬಲಂ ಶಿವ ।
ಶ್ರುತ್ವಾಽಥ ದೈತ್ಯವಚನಂ ಪಾದಾಂಗುಷ್ಠೇನ ಶಂಕರಃ ॥ ೧೪ ॥
ಚಕಾರ ಲೀಲಯಾ ಚಕ್ರಮಂಬುಧೌ ದಿವ್ಯಮಾಯುಧಂ ।

ಯದಿವಂ ನಿರ್ಮಲಂ ಚಕ್ರಂ ಜಾಲಂಧರ ಮಯಾಂಬುದೌ ॥ ೧೫ ॥
ಬಲಂ ತೇ ಯದಿ ಚೋದ್ಧರ್ತುಂ ತಿಷ್ಠಂ ಯೋದ್ಧುಂ ಚ ನಾನ್ಯಥಾ ।
ಆಕರ್ಣ್ಯ ತಸ್ಯ ವಚನಂ ಕ್ರೋಧಸಂರಕ್ತಲೋಚನಃ ॥ ೧೬ ॥
ಶೂಲಿನಂ ಪ್ರಾಹ ವಿಪ್ರೇಂದ್ರಾ ಸ್ತ್ರೈಲೋಕ್ಯಂ ಪ್ರದಹನ್ನಿವ ।

॥ ಜಾಲಂಧರ ಉವಾಚ ॥

ರೇಖಾಮಾತ್ರಂ ಕಮುದ್ಧರ್ತುಂ ಕಿಮಿದಂ ಭಾಷಸೇ ಶಿವ ।
ಮೇರ್ವಾದಯೋಽಪಿ ತಿಷ್ಠಂತಿ ಕಿಂ ಮಯಾ ನ ವಿಚಾಲಿತಾಃ ॥ ೧೭ ॥

---

೧೪. ಆದ್ದರಿಂದ ನಿನಗೆ ನಿಜವಾಗಿಯೂ ಶಕ್ತಿಯಿದ್ದಲ್ಲಿ ನನ್ನೊಡನೆ ಯುದ್ಧಕ್ಕೆ ನಿಲ್ಲುವವನಾಗು" ಎಂದು ಆಡಿದ ಜುಲಂಧರನನ್ನು ನೋಡಿ, ಪರಮೇಶ್ವರನು ತನ್ನ ಕಾಲಿನ ಬೆರಳಿನಿಂದ ಸಮುದ್ರದಲ್ಲಿ ಒಂದು ಚಕ್ರವನ್ನು ಬರೆದನು. ಅದು ಸುಲಭ ವಾಗಿ ಒಂದು ಚಕ್ರಾಯುಧವಾಯಿತು.

೧೫. ಶಂಕರನು ಜಲಂಧರನನ್ನು ಕುರಿತು, ಅದುತನ್ನ ದಿವ್ಯಾಯುಧವೆಂದೂ, ಅದನ್ನು ಎತ್ತುವ ಶಕ್ತಿಯು ಅವನಲ್ಲಿದ್ದದ್ದೇ ಆದರೆ, ಒಡನೆಯೇ ಯುಧಕ್ಕೆ ಸಿದ್ಧ ವಾಗಬೇಕೆಂದು ಘರ್ಜಿಸಿದನು.

೧೬. ಆ ಮಾತುಗಳನ್ನು ಕೇಳಿ ರಾಕ್ಷಸನು ಕೋಪದಿಂದ ಕೆಂಪಾದ ಕಣ್ಣು ಳ್ಳವನಾಗಿ ಮೂರು ಲೋಕವನ್ನೂ ಸುಡುವನೋ, ಎಂಬಂತೆ ಕ್ರೋಧಾವಿಷ್ಟನಾಗಿ ಶೂಲಿಯನ್ನು ಕುರಿತು ಹೀಗೆ ಹೇಳಿದನು.

೧೭. " ಶಿವನೇ, ಈಗ ನೀನು ಬರೆದಿರುವುದು ರೇಖೆಯು. ಇದನ್ನು ಎತ್ತು ವುದು ಕಷ್ಟವೇ? ಮೇರುಪರ್ವತವೇ ಮೊದಲಾದ ಪರ್ವತಗಳನ್ನು ಅಲ್ಲಾಡಿಸಿದ ನನಗೆ ಇದು ಅಸಾಧ್ಯವೆಂದು ಹೇಗೆ ಹೇಳುವೆ.?

ಯಾ ತ್ವಯಾ ಲಿಖಿತಾ ರೇಖಾ ಚಕ್ರರೂಪಾ ಮಹೇಶ್ವರ ॥ ೧೮ ॥
ತಾಮುದ್ಧೃತ್ಯ ತತೋ ಹನ್ಮಿ ತ್ವಾಂ ನಂದಿಪ್ರಮುಖೈಃ ಸಹ ।

ಬಾಲತ್ವೇ ನಿರ್ಜಿತೋ ಬ್ರಹ್ಮಾ ತರಸೈವ ಪುರಾ ಮಯಾ ॥ ೧೯ ॥
ನಿಕ್ಷಿಪ್ತೋ ಭಗವಾನ್ವಿಷ್ಣುರ್ಲೀಲಯಾ ಶತಯೋಜನಂ ।
ಇಂದ್ರಾದ್ಯಾ ಲೋಕಪಾಲಾಶ್ಚ ಬದ್ಧಾಃ ಕಾರಾಗೃಹೇ ಸ್ಥಿತಾಃ ॥ ೨೦ ॥

ದಾಸೀಭೂತಾಃ ಸ್ತ್ರಿಯಸ್ತೇಷಾಂ ವರ್ತಂತೇ ಮದ್ಗೃಹೇ ಶಿವ ।
ದೋರ್ಭ್ಯಾಂ ವಿಯನ್ನದೀ ರುದ್ಧಾ ಕ್ರೀಡಾರ್ಥಂ ಹಿಮವದ್ಗಿರೌ ॥ ೨೧ ॥

ದಿಗ್ಗಜಾಶ್ಚ ವಿನಿಕ್ಷಿಪ್ತಾಃ ಸಿಂಧೌ ವೈ ರಾವಣಾದಯಃ ।
ವಡವಾಗ್ನೇರ್ಮುಖೇ ರುದ್ಧೇ ಚೈಕಾರ್ಣವ ಇವಾಭವತ್ ॥ ೨೨ ॥

---

೧೮. ನೀನು ಬರೆದಿರುವ ಈ ಚಕ್ರಾಕಾರದ ಗೆರೆಗಳನ್ನು ಮೊದಲು ಮೇಲಕ್ಕೆತ್ತಿ, ಅನಂತರ ನಂದೀಶ್ವರನೇ ಮೊದಲಾದ ನಿನ್ನ ನಾಯಕರುಗಳನ್ನೂ, ಆಮೇಲೆ ನಿನ್ನನ್ನೂ ಕೊಲ್ಲುವೆನು.

೧೯-೨೦. ನಾನು ಹಿಂದೆ ಹುಡುಗನಾಗಿದ್ದಾಗಲೇ ಬ್ರಹ್ಮನನ್ನು ಗೆದ್ದೆನು. ಈಗ ವಿಷ್ಣುವನ್ನು ನೂರು ಯೋಜನದ ಪರ್ಯಂತ ಓಡಿಸಿರುವೆನು. ಇಂದ್ರನೇ ಮೊದಲಾದ ಲೋಕಪಾಲಕರನ್ನು ಬಂಧನದಲ್ಲಿರಿಸಿರುವೆನು.

೨೧. ಆ ದೇವತಾ ಸ್ತ್ರೀಯರನ್ನೆಲ್ಲಾ ದಾಸಿಯರನ್ನಾಗಿ ಮಾಡಿಕೊಂಡು ನನ್ನ ಮನೆಯಲ್ಲಿಟ್ಟುಕೊಂಡಿರುವೆನು. ಆಕಾಶಗಂಗೆಯನ್ನು ನಾನು ವಿಹಾರಾರ್ಥವಾಗಿ ನನ್ನ ಎರಡು ತೋಳುಗಳಿಂದಲೇ ತಡೆಗಟ್ಟಿ, ಹಿಮಾಲಯದಲ್ಲಿ ನಿಲ್ಲಿಸಿರುವೆನು.

೨೨. ಐರಾವಣನೇ ಮೊದಲಾದ ಅಷ್ಟದಿಗ್ಗಜಗಳನ್ನೂ ಕಿತ್ತು ಸಮುದ್ರದಲ್ಲಿ ಹಾಕಿರುವೆನು. ಸಮುದ್ರದ ಮಧ್ಯದಲ್ಲಿರುವ ಬಡಬಾಗ್ನಿಯ ಮುಖವನ್ನು ನಾನೇನಾದರೂ ಮುಚ್ಚಿಬಿಟ್ಟರೆ ಸಮುದ್ರಗಳೆಲ್ಲವೂ ಮೇರೆದಪ್ಪಿ ಲೋಕವೆಲ್ಲಾ ಜಲಮಯವಾಗುವುದು.

ತಸ್ಮಾನ್ನ ಜಾನಾಸಿ ಕಥಂ ಶಂಭೋ ಮಮ ಪರಾಕ್ರಮಂ ।
ತ್ವಾಮಪಿ ಪ್ರಾಪಯಾಮ್ಯದ್ಯ ಜಿತ್ವಾ ಕಾರಾಗೃಹಂ ಪ್ರತಿ ॥ ೨೩ ॥

ತಸ್ಯ ತದ್ವಚನಂ ಶ್ರುತ್ವಾ ದಾನವಸ್ಯ ಮಹೇಶ್ವರಃ ।
ನೇತ್ರಾಗ್ನಿಲವಭಾಗೇನ ಚಮೂಂ ತಸ್ಯಾದಹತ್ಕ್ಷಣಾತ್ ॥ ೨೪ ॥

ಅಕ್ಷೌಹಿಣೀನಾಂ ಸಾಹಸ್ರಂ ಲೀಲಯೈವ ಮಹೇಶ್ವರಃ ।
ಕೃತ್ವಾ ತದ್ಭಸ್ಮಸಾದ್ವಿಪ್ರಾ ಜಾಲಂಧರಮಥಾಬ್ರವೀತ್ ॥ ೨೫ ॥

॥ ಈಶ್ವರ ಉವಾಚ ॥

ಸಮಯೋ ಯಃ ಕೃತಃ ಪೂರ್ವಂ ರೇಖಾಮುದ್ಧರಣಂ ಪ್ರತಿ ।
ಕುರು ದೈತ್ಯ ತಥಾ ಶೀಘ್ರಂ ತತೋ ಮಾಂ ಜೇತುಮರ್ಹಸಿ ॥ ೨೬

ಅಥ ಶಂಭೋರ್ವಚಃ ಶ್ರುತ್ವಾ ಮದಾಂಧೋ ದೈತ್ಯಪುಂಗವಃ ।
ದೋರ್ಭ್ಯಾಮಾಸ್ಫೋಟ್ಯ ವೇಗೇನ ರೇಖಾಮುದ್ಧರ್ತುಮುದ್ಯತಃ ॥ ೨೭ ॥

---

೨೩. ಎಲೈ ಶಂಭುವೇ, ನನ್ನ ಪರಾಕ್ರಮವನ್ನು ನೀನು ಸರಿಯಾಗಿ ತಿಳಿಯಿಲ್ಲ ಈಗ ನಿನ್ನನ್ನೂ ಸೋಲಿಸಿ, ಕಾರಾಗಾರಕ್ಕೆ ಸೇರಿಸುವೆನು. ''

೨೪. ಎಂದು ಹೇಳಿದ ಆ ರಾಕ್ಷಸನ ಮಾತುಗಳನ್ನು ಪರಮೇಶ್ವರನು ಕೇಳಿ, ತನ್ನ ಫಾಲನೇತ್ರಾಗ್ನಿಯ ಸಹಾಯದಿಂದ ಒಂದೇ ಕ್ಷಣದಲ್ಲಿ ಅವನ ಸೈನ್ಯವನ್ನೆಲ್ಲಾ ಧ್ವಂಸಮಾಡಿದನು.

೨೫. ಮಹೇಶ್ವರನು ಸಹಸ್ರ ಅಕ್ಷೌಹಿಣೀ ಸೈನ್ಯವನ್ನೆಲ್ಲಾ ಲೀಲಾಮಾತ್ರ ದಿಂದಲೇ ಬೂದಿಯನ್ನಾಗಿಮಾಡಿ ಜಲಂಧರನನ್ನು ಕುರಿತು ಹೀಗೆ ಹೇಳಿದನು.

೨೬. "ಎಲೈ ರಾಕ್ಷಸವೀರನೇ, ನೀನು ಮಾಡಿದ ಪ್ರತಿಜ್ಞೆಯಂತೆ ಈ ನನ್ನ ರೇಖಾಚಕ್ರವನ್ನು ಮೇಲಕ್ಕೆ ಎತ್ತು. ಆಮೇಲೆ ನನ್ನನ್ನು ಗೆಲ್ಲುವೆ."

೨೭. ಎಂದು ಹೇಳಿದ ಶಿವನ ಮಾತುಗಳನ್ನು ಕೇಳಿ ಮದಾಂಧನಾದ ದೈತ್ಯನು, ತನ್ನ ಎರಡು ತೋಳುಗಳಿಂದ ಬಲವಾಗಿ ಹಿಡಿದೆತ್ತಲು ಪ್ರಯತ್ನಿಸಿದನು.

ಸುದರ್ಶನಾಖ್ಯಂ ಯಚ್ಚಕ್ರಂ ಕೃಚ್ಛ್ರೇಣ ಮಹತಾ ದ್ವಿಜಾಃ ।
ಸ್ಕಂಧೇ ವೈ ಸ್ಥಾಪಯಾಮಾಸ ದ್ವಿಧಾಭೂತೇ ತತಃ ಕ್ಷಣಾತ್ ॥ ೨೮ ॥

ನಿಪಪಾತ ತತೋ ದೈತ್ಯೋ ಮೇಘಾಚಲ ಇವಾಪರಃ ।
ತಸ್ಯ ದೇಹಸ್ಯ ರಕ್ತೇನ ಸಂಪೂರಿತಮಭೂಜ್ಜಗತ್ ॥ ೨೯ ॥

ನಿಯೋಗಾದ್ದೇವದೇವಸ್ಯ ತನ್ಮಾಂಸಂ ತಸ್ಯ ಶೋಣಿತಂ ।
ರಕ್ತಕುಂಡಮಭೂತ್ತತ್ರ ನಿರಯೇ ಪಾಪಕರ್ಮಣಾಂ ॥ ೩೦ ॥

ದೃಷ್ಟ್ವಾ ಜಾಲಂಧರಂ ದೇವಾ ನಿಹತಂ ಶೂಲಪಾಣಿನಾ ।
ಮುಮುಚುಃ ಪುಷ್ಪವರ್ಷಾಣಿ ಜಯ ದೇವೇತಿ ಚಾಬ್ರುವನ್ ॥ ೩೧ ॥

ದೇವಾಃ ಸ್ವಸ್ಥಾನಮಾಪನ್ನಾಃ ಸಮುದ್ರಾಶ್ಚ ವಸುಂಧರಾ ।
ದಿಗ್ಗಜಾಃ ಪರ್ವತಾಃ ಸರ್ವೇ ಹತೇ ತಸ್ಮಿನ್ಮಹಾಸುರೇ ॥ ೩೨ ॥

---

೨೮. ಸುದರ್ಶನವೆಂಬ ಈ ಚಕ್ರವನ್ನು ಯಾವಾಗ ಕಷ್ಟದಿಂದ ಮೇಲಕ್ಕೆ ಎತ್ತಿ ಹೆಗಲ ಮೇಲಿಟ್ಟುಕೊಂಡನೋ, ಆಗಲೇ ಆ ಚಕ್ರವು ಈಶ್ವರಶಕ್ತಿಯಿಂದ ಕೂಡಿ ಆ ದೈತ್ಯನ ದೇಹವನ್ನು ಎರಡು ಪಾಲಾಗಿ ಕತ್ತರಿಸಿತು.

೨೯. ಅನಂತರ ಆ ರಾಕ್ಷಸನು ಕಪ್ಪುಮೇಘದ ಪರ್ವತದಂತೆ ಕೆಳಕ್ಕೆ ಬಿದ್ದನು. ಅವನ ದೇಹದಿಂದ ಹುಟ್ಟಿದ ರಕ್ತವು ಪ್ರವಾಹವಾಗಿ ಜಗತ್ತನ್ನೆಲ್ಲಾ ವ್ಯಾಪಿಸಿತು.

೩೦. ಪರಮೇಶ್ವರನ ಅಪ್ಪಣೆಯಂತೆ, ಆ ರಾಕ್ಷಸನ ಮಾಂಸವೂ, ರಕ್ತವೂ, ಒಂದು ಕೊಳದಂತಾಗಿ ನರಕದಲ್ಲಿ ನಿಂತಿತು. ಪಾಪಿಷ್ಠರ ಶಿಕ್ಷೆಗಾಗಿ ಈ ರಕ್ತಕುಂಡವು ಉಪಯೋಗಿಸಲ್ಪಡುತ್ತಿದೆ.

೩೧. ಜಲಂಧರನು ಪರಮೇಶ್ವರನಿಂದ ಹತನಾಗಲು ಸಮಸ್ತ ಋಷಿಗಳೂ, ದೇವತೆಗಳೂ, ಪುಷ್ಪವೃಷ್ಟಿಯನ್ನು ಸುರಿಸಿ ಜಯಜಯಧ್ವನಿಮಾಡಿದರು.

೩೨. ಸಮಸ್ತ ದೇವತೆಗಳೂ, ಸಮುದ್ರಗಳೂ, ಭೂಮಿಯ ಅಷ್ಟದಿಗ್ಗಜಗಳೂ ಹಾಗೆಯೇ ಶ್ರೇಷ್ಠವಾದ ಪರ್ವತಗಳೂ ಆ ರಾಕ್ಷಸನ ಮರಣಾನಂತರ, ತಮ್ಮ ತಮ್ಮ ಪ್ರದೇಶಗಳಿಗೆ ತೆರಳಿದರು.

ಜಾಲಂಧರವಧಂ ಯಸ್ತು ಪಠೇದ್ವಾ ಶೃಣುಯಾದಪಿ ।
ಶ್ರಾವಯೇದ್ವಾ ದ್ವಿಜಾನ್ ಭಕ್ತ್ಯಾ ಬ್ರಹ್ಮಲೋಕಂ ಸ ಗಚ್ಛತಿ ॥ ೩೩ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಜಾಲಂಧರವಧ ಕಥನಂ ನಾಮ ಸಪ್ತತ್ರಿಂಶೋಽಧ್ಯಾಯಃ.

---

೩೩. ಜಲಂಧರ ವಧೆಯನ್ನು ಯಾವನು ಭಕ್ತಿಯಿಂದ ಪಠಿಸುವನೋ, ಯಾವನು ಶ್ರದ್ಧೆಯಿಂದ ಕೇಳುವನೋ, ಯಾವನು ವಿಪ್ರರಿಗೆ ತಿಳಿಯ ಹೇಳುವನೊ, ಅಂತಹವನು ಸುಲಭವಾಗಿ ಬ್ರಹ್ಮಲೋಕವನ್ನೈದುವನೆಂಬುದರಲ್ಲಿ ಸಂದೇಹವಿಲ್ಲ.

ಇಲ್ಲಿಗೆ ಬ್ರಹ್ಮಪುರಾಣೋಪ ಪುರಾಣವಾದ ಸೌರದಲ್ಲಿ, ಸೂತಶೌನಕಸಂವಾದ ರೂಪವಾಗಿ ಜಲಂಧರ ರಾಕ್ಷಸನ ವಧೆಯ ವರ್ಣನೆಯೆಂಬ ಮೂವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯ ನಮಃ ॥

ಅಥ ಶ್ರೀ ಸೌರಪುರಾಣೇ ಅಷ್ಟತ್ರಿಂಶೋऽಧ್ಯಾಯಃ.

॥ ಸೂತ ಉವಾಚ ॥

ಚತುರ್ಷ್ವಪಿ ಚ ವೇದೇಷು ಪುರಾಣೇಷು ಚ ಸರ್ವಶಃ ।
ಶ್ರೀಮಹೇಶಾತ್ಪರೋ ದೇವೋ ನ ಸಮಾನೋಽಸ್ತಿ ಕಶ್ಚನ ॥ ೧ ॥

ಬ್ರಹ್ಮಾ ವಿಷ್ಣುರ್ಬಲಾರಾತಿಃ ಸರ್ವೇ ಯಸ್ಯ ವಶಂವದಾಃ ।
ಉತ್ಪತ್ತಿಸ್ಸರ್ವದೇವಾನಾಂ ಸ ಏವ ಧ್ಯೇಯ ಉಚ್ಯತೇ ॥ ೨ ॥

ನಾಸ್ತಿ ಶಂಭೋಃ ಪರೋ ಧರ್ಮೋ ನಾಸ್ತ್ಯರ್ಥಃ ಶಂಕರಾತ್ಪರಃ ।
ಶಿವಾದನ್ಯತ್ಸುಖಂ ನಾಸ್ತಿ ಮೋಕ್ಷೋ ನೈವ ಹರಾತ್ಪರಃ ॥ ೩ ॥

ಮೂವತ್ತೆಂಟನೆಯ ಅಧ್ಯಾಯವು.

೧. ಸೂತಮಹರ್ಷಿಗಳು ಶೌನಕಾದಿಗಳನ್ನು ಕುರಿತು, " ಋಷಿಗಳೇ, ನಾಲ್ಕು ವೇದಗಳಲ್ಲಿಯೂ, ಎಲ್ಲಾ ಪುರಾಣಗಳಲ್ಲಿಯೂ, ಅತ್ಯಂತ ಶ್ರೇಷ್ಠನೆಂದು ಪ್ರಸಿದ್ಧಿಗೊಂಡಿರುವ ದೇವರೆಂದರೆ ಪರಮೇಶ್ವರನೇ ಹೊರತು ಮತ್ತೆ ಬೇರೆ ಅವನಿಗೆ ಸಮನೆನಿಸಿಕೊಂಡಿರುವವರು ಯಾರೂ ಇಲ್ಲ.

೨. ಬ್ರಹ್ಮ, ವಿಷ್ಣು, ಇಂದ್ರ ಇವರೇ ಮೊದಲಾದ ದೇವಶ್ರೇಷ್ಠರೆಲ್ಲಾ ಪರಶಿವನ ಅಧೀನರು. ಇನ್ನುಳಿದ ದೇವತೆಗಳೆಲ್ಲರೂ ಪರಶಿವನಿಂದ ಜನಿಸಿದವರೇ ಆಗಿರುವರು.

೩. ಶಂಭುವಿಗಿಂತ ದೊಡ್ಡ ಧರ್ಮವಸ್ತುವಿಲ್ಲ. ಶಂಕರನಿಗಿಂತ ಬೇರೆ ಅರ್ಥವಿಲ್ಲ. ನಿಜವಾದ ಸುಖವೇ ಶಿವನು. ಮೋಕ್ಷವು ಶಿವನಿಗಿಂತ ಬೇರೆ ಅಲ್ಲ. ಹೀಗೆ ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥ ಚತುಷ್ಟಯವೂ ಪರಶಿವನೇ.

ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ ।
ತದಾ ಶಿವಮವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ ॥ ೪ ॥

ಸ್ರಷ್ಟೃತ್ವಂ ಬ್ರಹ್ಮಣೋ ಯೇನ ಧ್ಯೇಯತ್ವಂ ಯೇನ ಶಾರ್ಙ್ಗಿಣಃ ।
ವಿಷ್ಣುತ್ವಂ ಯೇನ ಶಕ್ರಸ್ಯ ತಸ್ಮಾದನ್ಯಃ ಪರೋ ನ ಹಿ ॥ ೫ ॥

॥ ಋಷಯ ಊಚುಃ ॥

ಕೇಚಿಲ್ಲೋಕಾ ಮಹೇಶಾನಂ ತ್ಯಕ್ತ್ವಾ ಕೇಶವಕಿಂಕರಾಃ ।
ತತ್ರ ಕಿಂ ಕಾರಣಂ ಸೂತ ವದ ಸಂಶಯನಾಶಕ ॥ ೬ ॥

ಅಂತಕಾಲೇ ಸ್ಮರಂತ್ಯೇವ ಪ್ರಾಯೇಣ ಗರುಡಧ್ವಜಂ ।
ವಿದ್ಯಮಾನೇ ಶಿವೇ ವಿಷ್ಣೋಃ ಪ್ರಭೌ ಶ್ರೀಪಾರ್ವತೀಪತೌ ॥ ೭ ॥

---

೪. ಚರ್ಮದಂತೆ ಸರ್ವತ್ರ ವ್ಯಾಪಿಸಿರುವುದು ಆಕಾಶ. ಅಂಥ ಆಕಾಶದಲ್ಲಿ ಅಡಗಿರುವ ಮನುಷ್ಯರು ಶಿವನನ್ನು ಸರಿಯಾಗಿ ಅರಿಯದೆ ದುಃಖಭಾಗಿಗಳಾಗುವರು.

೫. ಬ್ರಹ್ಮನು ಸೃಷ್ಟಿಕರ್ತನಾದುದೂ, ವಿಷ್ಣುವು ಜಗದ್ರಕ್ಷಕನಾದುದೂ, ಇಂದ್ರನು ಲೋಕವ್ಯಾಪಿಯಾದುದೂ ಪರಮೇಶ್ವರನಿಂದಲೇ. ಆದ್ದರಿಂದಲೇ ಶಂಕರನಿಗಿಂತ ದೊಡ್ಡ ದೇವರು ಬೇರೊಬ್ಬರಿಲ್ಲ.''

೬. ಹೀಗೆ ಹೇಳಿದ ಸೂತರ ಮಾತುಗಳನ್ನು ಕೇಳಿ ಶೌನಕಾದಿಗಳು “ ಎಲೈ ಮಹರ್ಷಿಯೇ, ಇಷ್ಟುಮಹಾಮಹಿಮನಾದ ಶಿವನಿದ್ದರೂ ಜನರಲ್ಲಿ ಅನೇಕರು ವಿಷ್ಣುಭಕ್ತರಾಗಿರುವರು. ಅದಕ್ಕೆ ಕಾರಣವೇನು ?

೭. ಪಾರ್ವತೀಪತಿಯಾದ ಮಹೇಶ್ವರನು ಪ್ರಭಾವಶಾಲಿಯಾಗಿದ್ದರೂ, ಜನರು ಮರಣಕಾಲದಲ್ಲಿ ಗರುಡಧ್ವಜನಾದ ಶ್ರೀಮಹಾವಿಷ್ಣುವನ್ನೇ ಸ್ಮರಿಸುವರಲ್ಲಾ, ಕಾರಣವೇನು ?'' ಎಂದು ಕೇಳಿಕೊಳ್ಳಲು,

॥ ಸೂತ ಉವಾಚ ॥

ಯದಾ ಯದಾ ಪ್ರಸನ್ನೋಽಭೂದ್ಭಕ್ತಿಭಾವೇನ ಧೂರ್ಜಟಿಃ ।
ವಿಷ್ಣುನಾಽಽರಾಧಿತೋ ಭಕ್ತ್ಯಾ ತದಾಽಸೌ ದತ್ತವಾನ್ ಸ್ವಯಂ ॥ ೮ ॥

ತ್ವತ್ತಃ ಪರಂ ಪ್ರಭುಂ ನೈವ ಪ್ರಾಯೇಣ ಜ್ಞಾಸ್ಯಸಿ ಸ್ಫುಟಂ ।
ವಿರಲಾಃ ಕೇಚಿದೇತದ್ವೈ ನಿಷ್ಠಾಂ ವೇತ್ಸ್ಯಂತಿ ತತ್ತ್ವತಃ ॥ ೯ ॥

ಹೇತುನಾ ತೇನ ವಿಪ್ರೇಂದ್ರಾಃ ಶಿವಂ ಜಾನಂತಿ ಕೇಚನ ।
ಪ್ರಾಯೇಣ ವಿಷ್ಣುನಾಮಾನಿ ಗೃಣಂತಿ ವರದಾನತಃ ॥ ೧೦ ॥

ವಿಷ್ಣೋಃ ಸ್ಮರಣಮಾತ್ರೇಣ ಸರ್ವಪಾಪಕ್ಷಯೋ ಭವೇತ್
ಶಂಭುಪ್ರಸಾದ ಏವೈಷ ನಾಸ್ತಿ ಕಾರ್ಯಾ ವಿಚಾರಣಾ ॥ ೧೧ ॥

---

೮. ಸೂತರು, ಅದಕ್ಕೆ ಉತ್ತರವನ್ನು ಹೇಳಲಾರಂಭಿಸಿದರು. "ಋಷಿ ವರ್ಯರೇ, ಹಿಂದೆ ಮಹಾವಿಷ್ಣುವು ಅನೇಕ ಸಾರಿ ಶಿವನನ್ನು ಕುರಿತು ತಪಸ್ಸುಮಾಡಿ, ಭಕ್ತಿಭಾವದಿಂದ ಶಂಕರನನ್ನು ಮೆಚ್ಚಿಸಿರುವನು. ಇದರಿಂದ ತೃಪ್ತನಾದ ಶಂಕರನು ವಿಷ್ಣುವಿಗೆ ಅನೇಕ ವರಗಳನ್ನನುಗ್ರಹಿಸಿರುವನು.

೯. ಶಿವನು ಒಮ್ಮೆ ವಿಷ್ಣುವಿಗೆ "ಎಲೈ ಶಂಕರನೇ ನಿನಗಿಂತಲೂ ಅಧಿಕನಾದ ಪ್ರಭುವು ಬೇರೊಬ್ಬನಿಲ್ಲ. ಈ ವಿಷಯವನ್ನು ಜನರು ತತ್ತ್ವವಿಚಾರವಿಮರ್ಶೆಯಿಂದ ತಿಳಿಯುವವರಾಗಲಿ" ಎಂದು ವರವನ್ನಿತ್ತಿರುವನು.

೧೧. ಎಲೈ ಬ್ರಾಹ್ಮಣಶ್ರೇಷ್ಠರೇ, ಆ ಕಾರಣದಿಂದಲೇ ವಿಷ್ಣುವಿನ ಹೆಸರು ಲೋಕಪ್ರಸಿದ್ಧವಾಗಿದೆ. ಈ ಶಿವನ ವರಬಲದಿಂದಲೇ ಆ ವಿಷ್ಣುವು ಇಂದು ಪ್ರಸಿದ್ಧ ನಾಗಿರುವನು. ಅದರಿಂದ ಅನೇಕರು ವಿಷ್ಣುನಾಮಗಳನ್ನು ಪಠಿಸುತ್ತಿರುವರು.

೧೧. ವಿಷ್ಣುವಿನ ಸ್ಮರಣೆಯಿಂದಲೇ ಸಮಸ್ತ ಪಾಪಗಳೂ ನಾಶವಾಗುವುವು. ಅದಕ್ಕೆ ಕಾರಣವೇನೆಂದರೆ ಶಂಭುವಿನ ಅನುಗ್ರಹವೇ. ಇದರಲ್ಲಿ ನೀವು ಸಂಶಯ ಪಡಬೇಡಿರಿ.

ಯಂ ಶಂಭುಂ ತತ್ತ್ವತೋ ವೇತ್ತಿ ಸ ತು ನಾರಾಯಣಃ ಸ್ವಯಂ ।
ಯಸ್ತು ನಾರಾಯಣಂ ವೇತ್ತಿ ಸ ಶಕ್ರೋ ವಿಬುಧೇಶ್ವರಃ ॥ ೧೨ ॥

ಯ ಇಂದ್ರಂ ವೇತ್ತಿ ದೇವೇಶಂ ಲೋಕಪಾಲೋ ಜಲಾಧಿಪಃ ।
ಏವಂ ಸರ್ವಾಲ್ಲೋಕಪಾಲಾನ್ ಜಾನಾತಿ ಸ ಇಹಾಮರಃ ॥ ೧೩ ॥

ದೇವಾನ್ ಜಾನಾತಿ ಯಸ್ತ್ವನ್ಯಾನ್ ಸ ಋಷಿರ್ವೇದವಿತ್ಸ್ವಯಂ ।
ಋಷೀನ್ಯೋ ವೇತ್ತಿ ಸಮ್ಯಕ್ತ್ವಾತ್ಸ ಏವ ಬ್ರಾಹ್ಮಣೋತ್ತಮಃ ॥ ೧೪ ॥

ಸರ್ವದೇವಮಯಂ ವಿಪ್ರಂ ಯೋ ಜಾನಾತಿ ಸ ವೇದವಿತ್ ।
ರಹಸ್ಯಂ ವೇತ್ತಿ ವೇದಸ್ಯ ಸ ಏವ ಹರವಲ್ಲಭಃ ॥ ೧೫ ॥

ಜನ್ಮಾದಿಕಾರಣಂ ಶಂಭುಂ ವಿಷ್ಣುಂ ಬ್ರಹ್ಮಾದಿಪೂರ್ವಜಂ ।
ನ ಜಾನಂತಿ ಮಹಾಮೂರ್ಖಾ ವಿಷ್ಣುಮಾಯಾವಿಮೋಹಿತಾಃ ॥ ೧೬ ॥

---

೧೨. ಯಾವನು ಶಂಭುವಿನ ಮಹಿಮೆಯನ್ನು ತತ್ತ್ವಪ್ರಮಾಣದಿಂದ ಸ್ಫುಟವಾಗಿ ಅರಿಯುವನೋ, ಅವನೇ ನಾರಾಯಣನೆನಿಸುವನು. ಯಾವನು ನಾರಾಯಣನನ್ನು ಸ್ಪಷ್ಟವಾಗಿ ತಿಳಿಯುವನೋ ಅವನು ದೇವರಾಜನಾದ ಇಂದ್ರನೆನಿಸುವನು.

೧೩. ಯಾರು ಇಂದ್ರನನ್ನು ಧ್ಯಾನಿಸುವರೋ, ಅವರು ಜಲಾಧಿಪರಾಗಿ ಲೋಕಪಾಲರೆನಿಸುವರು. ಯಾರಿಗೆ ಸಮಸ್ತ ಲೋಕಪಾಲಕರ ಅರಿವು ಉಂಟಾಗುವುದೋ ಅವರು ದೇವಸಾಮಾನ್ಯರಾಗುವರು.

೧೪. ಯಾಗದಲ್ಲಿ ಪೂಜ್ಯರಾದ ದೇವತಾಸ್ವರೂಪವನ್ನರಿತವರೇ ಋಷಿಗಳೆನಿಸುವರು. ಋಷಿಗಳ ಮಹತ್ತ್ವವನ್ನು ಚೆನ್ನಾಗಿ ತಿಳಿದವನು, ಹರಭಕ್ತನಾದ ಬ್ರಾಹ್ಮಣೋತ್ತಮನಾಗುವನು.

೧೫ ಸರ್ವದೇವತಾಸ್ವರೂಪನಾದ ಬ್ರಾಹ್ಮಣನನ್ನು ಯಾವನು ಭಕ್ತಿಯಿಂದ ಸೇವಿಸುವನೋ ಆತನು ವೇದಜ್ಞನೆನಿಸುವನು. ವೇದಾರ್ಥರಹಸ್ಯವನ್ನು ತಿಳಿದವರು ಶಿವನಿಗೆ ಪ್ರೀತಿಪಾತ್ರರೆನಿಸುವರು.

೧೬. ಪ್ರಪಂಚಸೃಷ್ಟಿಗೆ ಶಂಭುವೇ ಮೂಲಕಾರಣ. ಬ್ರಹ್ಮಾದಿಗಳ ಉತ್ಪತ್ತಿಗೆ ವಿಷ್ಣುವೇ ಮೂಲಭೂತನು. ಈ ವಿಷಯವನ್ನು ವಿಷ್ಣುಮಾಯೆಗೆ ಸಿಕ್ಕಿ ನರಳುವ ಜನರು ಎಂದಿಗೂ ಅರಿಯಲಾರರು. ಅಜ್ಞಾನೋತ್ಪತ್ತಿಗೆ ಮಾಯೆಯೇ ಮುಖ್ಯ ಕಾರಣ. ಇವಕ್ಕೆ ದೃಷ್ಟಾಂತವಾಗಿ ಒಂದು ಇತಿಹಾಸವುಂಟು.

ಆಸೀತ್ಪ್ರತರ್ದನೋ ನಾಮ ರಾಜಾ ಪರಮಧಾರ್ಮಿಕಃ ।
ಸಪ್ತದ್ವೀಪಪತಿಃ ಪೃಥ್ವೀಪ್ರಭುರೇಕಃ ಪ್ರತಾಪವಾನ್ ॥ ೧೭ ॥

ಶೂರಃ ಪುಣ್ಯಮತಿರ್ಭೋಗೀ ದಾತಾ ವೇದಾರ್ಥಪಾಲಕಃ ।
ರಕ್ಷಿತಾ ಸರ್ವಸೇತೂನಾಂ ಬ್ರಹ್ಮಜ್ಞೋ ಬ್ರಾಹ್ಮಣಪ್ರಿಯಃ ॥ ೧೮ ॥

ತಸ್ಯ ರಾಜ್ಯೇ ಸದಾ ದೇವಾ ಗೃಹ್ಣಂತಿ ಹವಿರುತ್ತಮಂ ।
ನ ಪಾಷಂಡೀ ನ ವಾ ಬೌದ್ಧಸ್ತಸ್ಯ ರಾಜ್ಯೇಽಭವಜ್ಜನಃ ॥ ೧೯ ॥

ಕದಾಚಿತ್ಸ ಪುರೀಂ ತ್ಯಕ್ತ್ವಾ ಕ್ರೀಡಾರ್ಥಂ ನಿರ್ಗತೋ ಬಹಿಃ ।
ತದಾ ದದರ್ಶ ಕ್ಷಪಣಂ ರಾಜಾ ವಿಸ್ಮಯಮಾಗತಃ ॥ ೨೦ ॥

ಪೃಷ್ಟಂ ಕಸ್ತ್ವಂ ಕುತೋ ಯಾತಃ ಕಿಂ ಕಾರ್ಯಂ ಚ ತವೇಪ್ಸಿತಂ ।
ಕುತ್ರ ಯಾಸ್ಯಸಿ ತತ್ಸರ್ವಂ ಕಿಂ ಜಾತೀಯೋ ಭವಾನ್ವದ ॥ ೨೧ ॥

---

೧೭. ಹಿಂದೆ ಪ್ರತರ್ದನನೆಂಬ ಒಬ್ಬ ರಾಜನಿದ್ದನು. ಆತನು ಧರ್ಮಿಷ್ಠ ನಾಗಿ, ಶೂರನಾಗಿದ್ದು, ತನ್ನ ಪರಾಕ್ರಮದಿಂದ ಸಪ್ತದ್ವೀಪಗಳಿಗೂ ಒಡೆಯ ನಾಗಿದ್ದನು.

೧೮. ಆ ರಾಜನು ಯಾವಾಗಲೂ ದಾತೃವಾಗಿ ವೇದಾರ್ಥವನ್ನನುಸರಿಸಿ ಪುಣ್ಯಕಾರ್ಯಗಳನ್ನು ಮಾಡುತ್ತಾ ಬ್ರಹ್ಮಜ್ಞಾನಿಯಾಗಿ ಬ್ರಾಹ್ಮಣಪ್ರಿಯನೆನಿಸಿಕೊಂಡಿದ್ದನು. ಅಲ್ಲದೆ ಸಮಸ್ತ ಧರ್ಮಕಾರ್ಯಗಳನ್ನೂ ರಕ್ಷಿಸಿಕೊಂಡು ಬರುತ್ತಿದ್ದನು.

೧೯. ಆ ಪ್ರತರ್ದನನು ಸಮಸ್ತ ದೇವತೆಗಳಿಗೂ ಆಗಾಗ ಯಜ್ಞಯಾಗಾದಿಗಳನ್ನು ಮಾಡುತ್ತಾ ಹವಿರ್ಭಾಗಗಳನ್ನು ಭಕ್ತಿಯಿಂದ ಕೊಡುತ್ತಿದ್ದನು. ಅವನ ರಾಜ್ಯದಲ್ಲಿ ವೇದದೂಷಕರಾದ ಪಾಷಂಡಿಗಳಾಗಲಿ, ಬೌದ್ಧರಾಗಲಿ ಯಾರೂ ಇರಲಿಲ್ಲ.

೨೦. ಒಂದು ಸಾರಿ ಆ ರಾಜನು ವಿಹಾರಕ್ಕಾಗಿ ಊರಿನಿಂದ ಹೊರಗೆ ಸುತ್ತಾಡುತ್ತಿದ್ದನು. ಅಲ್ಲಿ ಒಬ್ಬ ಜೈನ ಸಂನ್ಯಾಸಿಯು ಇದ್ದುದನ್ನು ನೋಡಿ ರಾಜನಿಗೆ ಅತ್ಯಾಶ್ಚರ್ಯವಾಯಿತು.

೨೧. ಒಡನೆಯೇ ಸಂನ್ಯಾಸಿಯನ್ನು ಕುರಿತು "ಅಯ್ಯಾ ನೀನು ಯಾರು? ಎಲ್ಲಿಂದ ಬಂದೆ? ಯಾವ ಜಾತಿಯವನು ನೀನು? ನಿನಗೆ ಬೇಕಾದದ್ದೇನು? ಮುಂದೆ ನೀನೆಲ್ಲಿಗೆ ಹೋಗುವೆ? ನೀನು ಇಲ್ಲಿ ಏಕೆ ಇದ್ದೀಯೆ? ಇವೆಲ್ಲವನ್ನೂ ಈಗಲೇ ಹೇಳು" ಎಂದು ಪ್ರಶ್ನಿಸಿದನು.

॥ ಕ್ಷಪಣಕ ಉವಾಚ ॥

ರಾಜನ್ವಣಿಗಹಂ ಶಾಂತೋ ಯತಿಃ ಶೀಲವ್ರತೇ ಸ್ಥಿತಃ ।
ಮದೀಯಾಂಚಲಸಂಲಗ್ನಾಃ ಸಂತ್ಯತ್ರ ವಣಿಜಃ ಪರೇ ॥ ೨೨ ॥

॥ ರಾಜೋವಾಚ ॥

ಕೋ ಧರ್ಮಃ ಕಿಂ ನು ತತ್ರ ತ್ವಂ ।
ಜ್ಞಾಯತೇ ಕೇನ ವಕ್ತಿ ಕಃ ॥
ಅಯಂ ಪಂಥಾಃ ಕಥಂ ಪ್ರಾಪ್ತಃ ।
ಕಸ್ಮಾನ್ನ ಪ್ರಕಟೋ ಭವಾನ್ ॥ ೨೩ ॥

॥ ಕ್ಷಪಣಕ ಉವಾಚ ॥

ಅಹಿಂಸಾ ಪರಮೋ ಧರ್ಮಸ್ತತ್ತ್ವಂ ಯತ್ಮನೋರ್ದಮಃ ।
ಬುಧ್ಯತೇ ಬೌದ್ಧಜೈನಾಭ್ಯಾಂ ವಕ್ತಾ ತಸ್ಯ ಜಿನೋ ಮತಃ ॥ ೨೪ ॥

---

೨೨. ಅದಕ್ಕೆ ಕ್ಷಪಣಕನು "ರಾಜನೇ, ನಾನು ಜಾತಿಯಲ್ಲಿ ವೈಶ್ಯನು. ಈಗ ಜೈನಸಂನ್ಯಾಸಿಯಾಗಿ ಶೀಲವ್ರತವನ್ನಾಚರಿಸುತ್ತಿರುವೆನು. ನನ್ನನ್ನು ಆಶ್ರಯಿಸಿ ಅನೇಕ ವೈಶ್ಯರು ನನ್ನಿಂದ ಉಪದೇಶವನ್ನು ಪಡೆಯುತ್ತಿರುವರು" ಎಂದು ಉತ್ತರ ಕೊಟ್ಟನು.

೨೩. ರಾಜನು ಅದನ್ನು ಕೇಳಿ "ಓ ಸಂನ್ಯಾಸಿಯೇ, ನಿನ್ನ ಮುಖ್ಯಧರ್ಮ ವೇನು? ಅದರಲ್ಲಿ ನಿನ್ನ ಅಭಿಪ್ರಾಯವೇನು? ಈ ಧರ್ಮವನ್ನು ನಿನಗೆ ಬೋಧಿಸಿ ದವನು ಯಾರು? ನೀನು ಹೇಗೆ ಇದನ್ನು ನಂಬಿದೆ? ಏತಕ್ಕಾಗಿ ನೀನು ಇಲ್ಲಿನವ ರೆಗೂ ಆ ಧರ್ಮವನ್ನು ಪ್ರಕಾಶಗೊಳಿಸಿಲ್ಲ? ಎಂದು ಪ್ರಶ್ನಿಸಿದನು. ಆದಕ್ಕೆ ಕ್ಷಪಣಕನು,

"ರಾಜನೇ, ನನ್ನ ಮುಖ್ಯ ಧರ್ಮವು ಅಹಿಂಸೆ. ಇದರ ತತ್ತ್ವವೇನೆಂದರೆ ಪರೋಪಕಾರದಿಂದ ನಮ್ಮ ಈ ನಶ್ವರವಾದ ಶರೀರವನ್ನು ಶುದ್ಧಿಗೊಳಿಸುವುದೇ. ಇದನ್ನು ಬುದ್ಧನ ಮತ್ತು ಜಿನನ ಶಿಷ್ಯರು ಚೆನ್ನಾಗಿ ಅರಿತಿರುವರು. ಅವರಿಗೆ ಸ್ಪಷ್ಟ ವಾಗಿ ಜಿನನೇ ಬೋಧಿಸಿರುವನು.

ವೇದವೇದಾಂಗವೇತ್ತಾರೋ ಯಾಜ್ಞಿಕಾ ವೈಷ್ಣವಾ ದ್ವಿಜಾಃ ।
ಮಾಹೇಶ್ವರಾ ಮಹಾಪೂಜ್ಯಾ ನ ವ್ಯಕ್ತೋಽಹಂ ಭಯಾನ್ನೃಪ ॥ ೨೫ ॥

॥ ಸೂತ ಉವಾಚ ॥

ತತೋ ರಾಜಾ ಪರಾಂ ಚಿಂತಾಂ ಪ್ರಾಪ್ತೋ ದುಃಖಿತಮಾನಸಃ ।
ಧಿಗ್ರಾಜ್ಯಂ ಮಮ ದುರ್ಬುದ್ಧೇ ರ್ವೇದಬಾಹ್ಯೋಽಸ್ತಿ ಮತ್ಪುರೇ ॥ ೨೬ ॥

ಏತಂ ಹನ್ಮಿ ಯದಾ ಪಾಪಂ ತದೇತನ್ಮಾನಿನೀ ಪ್ರಜಾ ।
ಕಥಯಿಷ್ಯತಿ ಶಾಂತಾತ್ಮಾ ಹತೋ ರಾಜ್ಞಾ ಕುಬುದ್ಧಿನಾ ॥ ೨೭ ॥

ಏತಸ್ಮಿನ್ನಿಹತೇ ಕಿಂ ಸ್ಯಾದ್ಭವಂತಿ ಬಹವಸ್ತಥಾ ।
ದಯಾಶಬ್ದಂ ಪುರಸ್ಕೃತ್ಯ ಹ್ಯಧರ್ಮೋ ವಿಚರಿಷ್ಯತಿ ॥ ೨೮ ॥

---

೨೫. ವೇದವೇದಾಂಗಗಳನ್ನು ತಿಳಿದು ಹಿಂಸಾಕಾರಿಯಾದ ಈ ಯಜ್ಞ ಯಾಗಾದಿಗಳನ್ನು ಮಾಡುವ, ಶೈವ ಮತ್ತು ವೈಷ್ಣವ ಬ್ರಾಹ್ಮಣರು ಖಂಡಿತವಾಗಿಯೂ ಪೂಜ್ಯರಲ್ಲ. ಇವರು ಹಿಂಸಾವಾದಿಗಳು. ಇವರ ಭಯದಿಂದಲೇ ನಾನು ಇಲ್ಲಿನವರೆಗೂ ನನ್ನ ಧರ್ಮವನ್ನು ಪ್ರಕಾಶಗೊಳಿಸಿಲ್ಲ ಎಂದು ಕ್ಷಪಣಕನು ರಾಜನಿಗೆ ಉತ್ತರ ವಿತ್ತನು.

೨೬. ಇದನ್ನು ಕೇಳಿದ ರಾಜನಿಗೆ ಬಹಳವಾಗಿ ದುಃಖವುಂಟಾಯಿತು. ತನ್ನ ರಾಜ್ಯದಲ್ಲಿ ಇಂತಹ ವೇದನಿಂದಕನು ಇರುವನಲ್ಲಾ, ಇಂತಹ ವೇದದೂಷಕನಿರುವ ರಾಜ್ಯವೇ ಶ್ರೇಷ್ಠವಾದುದಲ್ಲ.

೨೭ ಎಂದು ಯೋಚಿಸಿ ಒಡನೆಯೇ ಆ ಕ್ಷಪಣಕನನ್ನು ಕೊಲ್ಲಲು ಮನಸ್ಸು ಮಾಡಿದನು. ಆದರೆ ಜನರು ಶಾಂತಸ್ವಭಾವದ ಈ ಕ್ಷಪಣಕನನ್ನು ಕೊಂದರೆ ತನ್ನನ್ನು ನಿಂದಿಸಿಯಾರು ಎಂದು ಶಂಕಿಸಿ ಸುಮ್ಮನಾದನು.

೨೮. ಅಲ್ಲದೆ ಈತನನ್ನು ಕೊಲ್ಲುವುದರಿಂದ ಅನೇಕ ಕಾರ್ಯಗಳು ಅನುಕೂಲಿಸುವುವು. ಇಲ್ಲವಾದರೆ ದಯಾಶಬ್ದವನ್ನು ಮುಂದೆ ಮಾಡಿಕೊಂಡು ಅಧರ್ಮವು ಪ್ರಪಂಚವನ್ನೆಲ್ಲಾ ಆಕ್ರಮಿಸುವುದು.

ವೇದಬಾಹ್ಯಾಃ ಪ್ರಜಾ ರಾಜ್ಞಾ ಶಾಸಿತುಂ ನೈವ ಶಕ್ಯತೇ ।
ತದಾ ತತ್ಪಾಪಭಾಗೀ ಸ್ಯಾದಿತ್ಯಾಹ ಭಗವಾನ್ಮನುಃ ॥ ೨೯ ॥

॥ ಸೂತ ಉವಾಚ ॥

ತ್ಯಕ್ತ್ವಾ ರಾಜ್ಯಂ ತಪಸ್ತೇಪೇ ತತೋ ರಾಜಾ ಪ್ರತರ್ದನಃ ।
ಸಾವಿತ್ರೀಂ ಮನಸಾ ಧ್ಯಾತ್ವಾ ನಿತ್ಯಮೇಕಾಗ್ರಮಾನಸಃ ॥ ೩೦ ॥

ತತಃ ಕತಿಪಯಾಹೋಭಿರ್ಬ್ರಹ್ಮಾ ಪ್ರತ್ಯಕ್ಷತಾಂ ಗತಃ ।
ಮಹತಾ ತಪಸಾ ತುಷ್ಟ ಇದಂ ವಚನಮಬ್ರವೀತ್ ॥ ೩೧ ॥

॥ ಬ್ರಹ್ಮೋವಾಚ ॥

ಪುತ್ರ ಪ್ರಾಪ್ತೋಽಸ್ಮಿ ಸಂತೋಷಂ ವರಂ ವರಯ ಸುವ್ರತ ।
ಕಥಂ ತ್ವಂ ಖಿದ್ಯಸೇ ಚಿತ್ತೇ ರಾಜ್ಯಂ ತ್ಯಕ್ತ್ವಾ ಕುತಸ್ತ್ವಯಾ ॥ ೩೨ ॥

---

೨೯. ವೇದಬಾಹ್ಯರಾದ ಜನರನ್ನು ಆಳುವುದು ರಾಜನಿಗೆ ಅತ್ಯಂತ ಕಷ್ಟವಾಗುವುದು. ಅಲ್ಲದೆ ಅಂತಹ ವೇದನಿಂದನೆಯಿಂದ ಬರುವ ಪಾಪವನ್ನು ರಾಜನು ಹೊಂದಬೇಕಾಗುವುದೆಂದು ಮನುಧರ್ಮಶಾಸ್ತ್ರವು ಹೇಳುತ್ತಿದೆ. ಈ ರಾಜ್ಯದಲ್ಲಿರುವುದು ಪ್ರಶಸ್ತವಲ್ಲ.

೩೦. ಎಂದು, ಆ ಪ್ರತರ್ದನರಾಜನು ಯೋಚಿಸಿ, ರಾಜ್ಯವನ್ನು ಬಿಟ್ಟು, ತಪಸ್ವಿಗಾಗಿ ಅರಣ್ಯವನ್ನು ಪ್ರವೇಶಿಸಿದನು. ಅಲ್ಲಿ ಏಕಾಗ್ರಚಿತ್ತತೆಯಿಂದ ಸಾವಿತ್ರೀಮಂತ್ರವನ್ನು ಧ್ಯಾನಿಸುತ್ತಾ ಬ್ರಹ್ಮನನ್ನು ಕುರಿತು ತಪಸ್ಸುಮಾಡಿದನು.

೩೧. ಹಾಗೆ ಕೆಲವು ದಿನಗಳು ಕಳೆದ ಮೇಲೆ ಆ ರಾಜನ ತಪಸ್ಸಿಗೆ ಮೆಚ್ಚಿದ ಬ್ರಹ್ಮನು ಪ್ರತ್ಯಕ್ಷನಾಗಿ ಹೀಗೆ ಹೇಳಿದನು.

೩೨. "ಎಲೈ ಮಗುವೇ, ತಪಸ್ವಿಯೇ, ನಿನ್ನ ತಪಶ್ಚರ್ಯೆಯಿಂದ ನಾನು ತುಷ್ಟನಾಗಿರುವೆನು. ನೀನು ಏತಕ್ಕಾಗಿ ಹೀಗೆ ಮನಸ್ಸಿನಲ್ಲಿ ವ್ಯಥೆಪಡುತ್ತಿರುವೆ ? ರಾಜ್ಯವನ್ನು ಬಿಟ್ಟು ಏತಕ್ಕಾಗಿ ಇಲ್ಲಿಗೆ ಬಂದಿರುವೆ ? ನಿನಗೆ ಬೇಕಾದ ವರವನ್ನು ಕೇಳು" ಎಂದು ಬ್ರಹ್ಮನು ಪ್ರಶ್ನಿಸಲು, ರಾಜನು

॥ ರಾಜೋವಾಚ ॥

ವೇದಃ ಪ್ರಮಾಣಂ ವಕ್ತ್ಯೇವ ಜಾನಾತ್ಯೇವ ಚ ಯತ್ಪ್ರಜಾಃ ।
ಶಂಕಾಮಾತ್ರಂ ಭವೇನ್ನೈವ ವೇದಪ್ರಾಮಾಣ್ಯಗೋಚರಂ ॥ ೩೩ ॥

ಇತಿ ಯಾಚೇ ವರಂ ದೇವ ಕಿಮನ್ಯೇನ ವರೇಣ ಮೇ ।
ಯಾಚೇ ನಿಷ್ಕಂಟಕಂ ರಾಜ್ಯಂ ಸಪ್ತದ್ವೀಪಾವನೀಪತಿಃ ॥ ೩೪ ॥

॥ ಸೂತ ಉವಾಚ ॥

ಏವಮಸ್ತ್ವಿತಿ ಸಂಪ್ರೋಚ್ಯ ಬ್ರಹ್ಮಾಂತರ್ಧಾನಮಾಯಯೌ ।
ಪ್ರತರ್ದನೋಽಪಿ ರಾಜರ್ಷಿಃ ಸಂತುಷ್ಟಃ ಪೃಥಿವೀಪತಿಃ ॥ ೩೫ ॥

ತತಃ ಪ್ರಭೃತಿ ತದ್ರಾಜ್ಯೇ ಸರ್ವೋ ಧರ್ಮೋ ವ್ಯವಸ್ಥಿತಃ ।
ವೇದವೇದಾಂಗವೇತ್ತಾರೋ ಬ್ರಾಹ್ಮಣಾಃ ಶಂಸಿತವ್ರತಾಃ ॥ ೩೬ ॥

---

೩೩. "ಸ್ವಾಮಿಯೇ, ವೇದಗಳು ಪ್ರಮಾಣಗಳೆಂಬುದನ್ನು ನನ್ನ ದೇಶದ ಜನರು ತಿಳಿದಿದ್ದಾರೆ. ಅದರಲ್ಲಿ ಯಾರೂ ಸಂಶಯಪಡುತ್ತಿಲ್ಲ. ಆದರೆ ವೇದ ಪ್ರಾಮಾಣ್ಯವು ಯಾರಿಗೂ ಸುಲಭವಾಗಿ ಗೋಚರವಾಗಿಲ್ಲ. ಆದ್ದರಿಂದ ವೇದದಲ್ಲಿ ನಂಬಿಕೆಯು ಸರ್ವರಿಗೂ ಈಗ ಆಗಬೇಕು.

೩೪. ಎಂಬುದಾಗಿಯೇ ಈಗ ನಿನ್ನಲ್ಲಿ ವರವನ್ನು ಬೇಡುವೆನು. ಮತ್ತೆ ಬೇರೆ ಯಾವ ವರವೂ ನನಗೆ ಬೇಕಿಲ್ಲ. ಸಪ್ತದ್ವೀಪಗಳಿಗೆ ರಾಜನಾಗಿ ನಿಷ್ಕಂಟಕವಾದ ರಾಜ್ಯವನ್ನು ಅನುಭವಿಸುತ್ತಿರುವ ನನಗೆ ಬೇಕಾದ ವರವಾವುದು ?"

೩೫. ಎಂದು ರಾಜನು ಕೇಳಿಕೊಳ್ಳಲು ಬ್ರಹ್ಮನು ಹಾಗೆಯೇ ಆಗಲೆಂದು ವರವಿತ್ತು ಅಂತರ್ಧಾನನಾದನು. ಇತ್ತ ರಾಜನು ಬಹುವಾಗಿ ಸಂತೋಷಪಟ್ಟು, ತನ್ನ ರಾಜ್ಯಕ್ಕೆ ಹಿಂದಿರುಗಿದನು.

೩೬. ಅಲ್ಲಿಂದ ಮುಂದೆ ಆ ರಾಜನ ರಾಜ್ಯದಲ್ಲಿ ಬ್ರಹ್ಮನ ವರಬಲದಿಂದ ಸರ್ವರೂ ಧರ್ಮಿಷ್ಠರಾಗಿರುತ್ತಿದ್ದರು. ಬ್ರಾಹ್ಮಣರು ವೇದವೇದಾಂಗವನ್ನು ತಿಳಿದವರಾಗಿ ವ್ರತಾನುಷ್ಠಾನಗಳಲ್ಲಿ ನಿರತರಾಗಿದ್ದರು.

ಅಗ್ನಿಹೋತ್ರಾಣಿ ಯಜ್ಞಾಶ್ಚ ಯತಯೋ ಬ್ರಹ್ಮಚಾರಿಣಃ ।
ಶೈವಾ ನಾನಾವಿಧಾಃ ಪುಣ್ಯಾಃ ವೈಷ್ಣವಾಃ ಶುಭಲಕ್ಷಣಾಃ　　|| ೩೭ ||

ತಸ್ಯ ರಾಜ್ಯೇ ಮಹಾಪುಣ್ಯೇ ನ ಪಾಷಂಡೀ ನ ಹೈತುಕೀ ।
ವರ್ಣಾಶ್ರಮಾಚಾರವತಾಂ ಕ್ರಿಯಾಃ ಸರ್ವಾಸ್ತದಾಽಭವನ್　　|| ೩೮ ||

ಉತ್ಸವಾ ವಿಷ್ಣುಭಕ್ತಾನಾಂ ಶಿವಪೂಜಾ ಗೃಹೇ ಗೃಹೇ ।
ಸರ್ವೇ ದೇವಾನ್ನಮಸ್ಯಂತಿ ನ ಕಂಚಿದ್ದ್ವೇಷ್ಟಿ ಮಾನವಃ　　|| ೩೯ ||

ತರ್ಕವೇದಾಂತಮೀಮಾಂಸಾವ್ಯಾಖ್ಯಾನಾನಿ ಗೃಹೇ ಗೃಹೇ ।
ವೇದನಿರ್ಘೋಷವದ್ರಾಜ್ಯಂ ಯಜ್ಞಸ್ತಂಭಾಃ ಸ್ಥಲೇ ಸ್ಥಲೇ　　|| ೪೦ ||

ಅನೇಕಭೋಗಸಂಯುಕ್ತಾ ಹೃಷ್ಟಾಃ ಪುಷ್ಟಾಃ ಸ್ತ್ರಿಯಃ ಸತೀಃ ।
ರಕ್ಷಂತಿ ಪತಯಃ ಪುಣ್ಯಾ ಯಥಾ ವೃದ್ಧಪುರಸ್ಕೃತಾಃ　　|| ೪೧ ||

---

೩೭. ಅವನ ರಾಜ್ಯದಲ್ಲಿ ಅಗ್ನಿಹೋತ್ರಗಳೂ, ಯಜ್ಞಯಾಗಗಳೂ ಶ್ರೇರಳವಾಗಿ ನಡೆಯಲಾರಂಭಿಸಿದುವು, ಯತಿಗಳೂ, ಬ್ರಹ್ಮಚಾರಿಗಳೂ, ಶಿವವಿಷ್ಣು ಭಕ್ತರಾಗಿ, ಪುಣ್ಯಕಾರ್ಯಗಳಲ್ಲಿ ನಿರತರಾಗಿ ಶುಭಲಕ್ಷಣವುಳ್ಳವರಾಗಿದ್ದರು.

೩೮. ಪಾಷಂಡಿಯಾಗಲೀ, ಹೇತುವಾದಮಾಡುವ ನಾಸ್ತಿಕರಾಗಲಿ ಅವನ ಪುಣ್ಯತಮವಾದ ರಾಜ್ಯದಲ್ಲಿ ಕಂಡುಬರುತ್ತಿರಲಿಲ್ಲ. ವರ್ಣಾಶ್ರಮಗಳನ್ನು ಅನುಸರಿಸಿ ಧರ್ಮಮಾಡುವಂತಹವರ ಸಂಖ್ಯೆಯೇ ಮಿತಿಮೀರಿದ್ದಾಗಿತ್ತು.

೩೯. ವೈಷ್ಣವರು ಉತ್ಸವಾದಿಗಳಲ್ಲಿಯೂ, ಶೈವರು ಶಿವಾರ್ಚನೆಯಲ್ಲಿಯೂ, ನಿರತರಾಗಿರುತ್ತಿದ್ದರು. ಒಟ್ಟಿನಲ್ಲಿ ಸರ್ವರೂ ದೇವತಾರಾಧಕರಾಗಿರುತ್ತಿದ್ದರೇ ಹೊರತು ಯಾವ ದೇವರನ್ನೂ ಯಾರೂ ನಿಂದಿಸುತ್ತಿರಲಿಲ್ಲ.

೪೦. ಪ್ರತಿ ಮನೆಯಲ್ಲಿಯೂ, ತರ್ಕ, ವೇದಾಂತ, ಮೀಮಾಂಸಾ ಈ ಶಾಸ್ತ್ರ ಪ್ರವಚನಗಳು ನಡೆಯಲಾರಂಭಿಸಿದುವು. ಎಲ್ಲೆಲ್ಲಿಯೂ ವೇದಘೋಷ, । ಎಲ್ಲೆಲ್ಲಿಯೂ ಯಾಗಾರ್ಥವಾದ ಯೂಪಸ್ತಂಭಗಳು ವಿರಾಜಿಸಲಾರಂಭಿಸಿದುವು.

೪೧. ಅಲ್ಲಿನ ಸ್ತ್ರೀಪುರುಷರು ಅನೇಕವಾದ ಭೋಗಭಾಗ್ಯಗಳನ್ನನುಭವಿಸುತ್ತಾ ಹೃಷ್ಟಪುಷ್ಟರಾಗಿರುತ್ತಿದ್ದರು. ಗಂಡಂದಿರು ತಮ್ಮ ತಮ್ಮ ಧರ್ಮಪತ್ನಿಯರನ್ನೂ ವೃದ್ಧರಾದ ತಂದೆತಾಯಿಗಳನ್ನೂ ಸಂತೋಷದಿಂದ ರಕ್ಷಿಸುತ್ತಿದ್ದರು.

॥ ಸೂತ ಉವಾಚ ॥

ಏವಂ ಬಹುತಿಥೇ ಕಾಲೇ ಗತೇ ಯೇ ದೈತ್ಯದಾನವಾಃ ।
ಪಾಪಿಷ್ಠಾ ಹೀನಕರ್ಮಾಣೋ ಮ್ಲೇಚ್ಛಾಸ್ತೇಽಪಿ ದಿವಂ ಗತಾಃ ॥ ೪೨ ॥

ಯೇಷಾಂ ತು ಸಂತತಿಃ ಶುದ್ಧಂ ವೇದಮಾರ್ಗಂ ಹಿ ಮನ್ಯತೇ ।
ತೇ ಸರ್ವೇ ನರಕಾನ್ಮುಕ್ತ್ವಾ ಪ್ರಾಪ್ತಾ ಏವಾಮರಾವತೀಂ ॥ ೪೩ ॥

ಸರ್ವತ್ರ ತುಲಸೀವೃಂದಂ ಸರ್ವತ್ರ ಹರಿಪೂಜನಂ ।
ಬಿಲ್ವದಲೈಸ್ತು ಸರ್ವತ್ರ ಪೂಜ್ಯತೇ ಗಿರಿಜಾಪತಿಃ ॥ ೪೪ ॥

ಕಥಂ ತೇಷಾಂ ತು ಪಿತರೋ ನರಕೇ ನಿವಸಂತಿ ಹಿ ।
ತಸ್ಮಿನ್ ರಾಜ್ಯೇ ಸಮಾಗತ್ಯ ಕಿಂ ಕುರ್ಯುರ್ಯಮಕಿಂಕರಾಃ ॥ ೪೫ ॥

॥ ಸೂತ ಉವಾಚ ॥

ಶೃಣುಧ್ವಮೃಷಯಸ್ಸರ್ವೇ ಯದಾಸೀತ್ಪರಮಾದ್ಭುತಂ ।
ಸ್ವರ್ಗಗಾಮಿಷು ಸರ್ವೇಷು ವ್ಯಾಪಾರರಹಿತೇ ಯಮೇ ॥ ೪೬ ॥

---

೪೨. ಹೀಗೆ ಆ ರಾಜನು ಧರ್ಮದಿಂದ ರಾಜ್ಯವಾಳುತ್ತಿರಲು, ನಾಸ್ತಿಕರಾದ ದೈತ್ಯದಾನವರೂ, ಪಾಪಿಷ್ಠರೂ, ಕ್ರೂರಕರ್ಮಿಗಳೂ, ಆದ ಮ್ಲೇಚ್ಛಾದಿಗಳೂ ತಮ್ಮ ಪಾಪಕರ್ಮಗಳಿಂದ ನಾಶವಾಗುತ್ತಿದ್ದರು.

೪೩. ವೇದಮಾರ್ಗವನ್ನವಲಂಬಿಸಿ, ಶುದ್ಧರಾಗಿ ಪಿತೃಕ್ರಿಯಾದಿಗಳನ್ನು ನೆರವೇರಿಸಿದವರ ಪಿತೃಗಳು ನರಕವನ್ನು ಬಿಟ್ಟು ಸ್ವರ್ಗವನ್ನು ಸುಲಭವಾಗಿ ಸೇರಲಾರಂಭಿಸಿದರು.

೪೪. ಎಲ್ಲಾಕಡೆಯಲ್ಲಿಯೂ ತುಲಸೀಗಿಡಗಳು. ಎಲ್ಲೆಲ್ಲೂ ವಿಷ್ಣುವಿಗೆ ತುಲಸೀ ಅರ್ಚನೆಯೇ. ಬಿಲ್ವದಳಗಳಿಂದ ನಡೆಯುವ ಶಿವಾರ್ಚನೆಯ ವೈಭವವನ್ನಂತೂ ಹೇಳತೀರದು.

೪೫. ಹೀಗಿರುವಾಗ ಆ ದೇಶದ ಜನರ ಪಿತೃದೇವತೆಗಳು ನರಕದಲ್ಲಿ ವಾಸಮಾಡುವಂತೆಯೇ ಇರಲಿಲ್ಲ. ಹೆಚ್ಚೇನು? ಆ ರಾಜ್ಯಕ್ಕೆ ಯಮಕಿಂಕರರ ಪ್ರವೇಶವೇ ಇಲ್ಲದಂತಾಗಿ, ಯಮದೂತರಿಗೆ ಕೆಲಸವೇ ಇಲ್ಲವಾಯಿತು.

೪೬. ಎಲೈ ಶೌನಕಾದಿಗಳೇ, ಆ ಊರಿನಲ್ಲಿ ನಡೆದ ಆಶ್ಚರ್ಯವನ್ನು ಏನೆಂದು ಹೇಳಲಿ. ಆ ಊರಿನಲ್ಲಿ ಮೃತರಾದವರೆಲ್ಲರೂ ಸ್ವರ್ಗಕ್ಕೇ ಹೋಗುವರಾಗಲು, ನರಕದಲ್ಲಿ ಯಮನಿಗೆ ಕೆಲಸವಿಲ್ಲದೇ ಹೋಯಿತು.

ಪೂಜಿತಾಸ್ಸರ್ವಲೋಕೇಷು ಸರ್ವೇ ದೇವಾ ಬಭೂವಿರೇ ।
ತದಾಸೌ ಧರ್ಮರಾಟ್ ಗತ್ವಾ ಶಕ್ರಲೋಕಂ ಮಹಾಮನಾಃ ॥ ೪೭ ॥

ಉವಾಚ ಸರ್ವದೇವಾನಾಂ ಪುರತಃ ಪ್ರಾಂಜಲಿಃ ಸ್ಥಿತಃ ।

॥ ಯಮ ಉವಾಚ ॥

ಚತುರಶೀತಿಲಕ್ಷಾಣಾಂ ಜೀವಾನಾಂ ಯಾ ಸ್ಥಿತಿಃ ಸದಾ ॥ ೪೮ ॥

ತಾಂ ನಷ್ಟಾಮಧುನಾ ವೇದ್ಮಿ ಯದಿ ದೇವಃ ಪ್ರಮಾಣವಾನ್ ।
ಯಸ್ಯಾಂ ಕೀಟಾದಿಯೋನೌ ಯಃ ಸ್ಥಿತೋ ಜೀವೋऽತಿಪಾಪವಾನ್ ॥ ೪೯ ॥

ನರಕೇ ಸಂಯಮಿನ್ಯಾಂ ವಾ ತತ್ಪುತ್ರೇಣ ಸ ಉದ್ಧೃತಃ ।
ಶ್ರಾದ್ಧದೇವಾರ್ಚನಾದೀನಿ ಕರೋತಿ ಶ್ರುತಿನಿಶ್ಚಯಃ ॥ ೫೦ ॥

---

೪೭. ಸಮಸ್ತ ಲೋಕಗಳಲ್ಲೂ ಎಲ್ಲಾ ದೇವತೆಗಳಿಗೂ ಪುರಸ್ಕಾರ ಒದಗಿತು. ಯಮನನ್ನು ಮಾತ್ರ ಕೇಳುವವರೇ ಇಲ್ಲದಂತಾಯಿತು. ಆಗ ಯಮನು ಇಂದ್ರ ಲೋಕಕ್ಕೆ ಹೋಗಿ,

೪೮ ಸಮಸ್ತ ದೇವತೆಗಳ ಎದುರಿನಲ್ಲಿ ಕೈಜೋಡಿಸಿ ನಿಂತು ಹೀಗೆ ಹೇಳಿ ಕೊಂಡನು. "ಎಲೈ ದೇವತೆಗಳಿರಾ, ಭೂಲೋಕದಲ್ಲಿ ಆ ಪ್ರತರ್ದನನ ರಾಜ್ಯದಲ್ಲಿ ಎಂಭತ್ತುನಾಲ್ಕು ಲಕ್ಷ ಜೀವಿಗಳಿರುವರು.

೪೯-೫೦. ಅಷ್ಟು ಜನ ಜೀವಿಗಳ ಇಂದಿನ ಜೀವನ ಕ್ರಮವೇ ವ್ಯತ್ಯಾಸ ವಾಗಿದೆ. ದೇವತೆಗಳಿರಾ, ನಿಜವಾಗಿಯೂ ನಾನು ಹೇಳುತ್ತೇನೆ. ಆ ದೇಶದ ಯಾವ ನೊಬ್ಬನು ತಾನು ಪಾಪಮಾಡಿ ಕ್ರಿಮಿಕೀಟಗಳ ಉದರದಲ್ಲಿ ಜನ್ಮವೆತ್ತಿದ್ದರೂ, ಅಥವಾ ಅವನ ಪಾಪಕ್ಕೆ ತಕ್ಕಂತೆ ನರಕದಲ್ಲಿ ಅವನನ್ನು ಬಂಧಿಸಿದ್ದರೂ, ಅವನ ಮಗನು ಶ್ರಾದ್ಧ, ದೇವಾರ್ಚನ ಇವುಗಳನ್ನು ಮಾಡಿ ಅವನನ್ನು ನರಕದಿಂದ ಬಿಡಿಸಿ ಸ್ವರ್ಗಕ್ಕೆ ಕಳುಹಿಸುವನು. ವೇದದ ನಿಶ್ಚಯವೂ ಹಾಗೆಯೇ ಇದೆ." ಎಂದು ಯಮನು ಇಂದ್ರ ನೊಡನೆ ಹೇಳಿಕೊಳ್ಳಲು.

॥ ಇಂದ್ರ ಉವಾಚ ॥

ಅಸ್ಮಾಕಂ ಹೀನಜೀವಾನಾಂ ಕೋ ವಿಶೇಷೋ ಯದಾ ಶ್ರುತಿಃ ।
ಪ್ರಮಾಣಯತಿ ತತ್ತ್ವೇನ ವಯಂ ದೇವಾ ಯದಾಜ್ಞಯಾ ॥ ೫೧ ॥

ಪುರೋಹಿತ ತವ ಪ್ರಜ್ಞಾ ಶೋಭನಾ ಪ್ರತಿಭಾತಿ ಮೇ ।
ಪೂರ್ವಂ ಚಾರ್ವಾಕಬೌದ್ಧಾದಿಮಾರ್ಗಾಃ ಸಂದರ್ಶಿತಾಸ್ತ್ವಯಾ ॥ ೫೨ ॥

ತೇನ ಮಾರ್ಗೇಣ ವಿಭ್ರಾಂತಾ ವೇದಮಾರ್ಗಬಹಿಷ್ಕೃತಾಃ ।
ದೈತ್ಯಾಶ್ಚ ದಾನವಾಶ್ಚೈವ ತಥಾ ಕುರು ದ್ವಿಜೋತ್ತಮಾಃ ॥ ೫೩ ॥

॥ ಗುರುರುವಾಚ ॥

ನ ಚಾರ್ವಾಕೋ ನ ವೈ ಬೌದ್ಧೋ ನ ಜೈನೋ ಯವನೋಽಪಿ ವಾ ।
ಕಾಪಾಲಿಕಃ ಕೌಲಿಕೋ ವಾ ತಸ್ಮಿನ್ ರಾಜ್ಯೇ ವಿಶೇತ್ಕ್ವಚಿತ್ ॥ ೫೪ ॥

---

೫೧. ಆಗ ಇಂದ್ರನು ಯಮನನ್ನು ಕುರಿತು "ಯಮರಾಜನೇ ನಾವೆಲ್ಲರೂ ವೇದದ ಅಪ್ಪಣೆಯಂತೆ ನಡೆಯತಕ್ಕವರು. ವೇದಗಳೇ ಆ ಪ್ರಾಣಿವರ್ಗವನ್ನು ಉದ್ಧರಿಸುವುದಾದರೆ ನಾವು ಮಾಡತಕ್ಕದ್ದೇನು ?" ಎಂದು ಹೇಳಿ

೫೨. ತನ್ನ ಗುರುವಾದ ಬೃಹಸ್ಪತ್ಯಾಚಾರ್ಯನನ್ನು ಕುರಿತು "ಸ್ವಾಮಿಯೇ, ನೀನು ಬಹಳ ಮೇಧಾವಿಯು. ನಿನ್ನಿಂದ ನಾನು ಹಿಂದೆ ಚಾರ್ವಾಕ ಮತ್ತು ಬೌದ್ಧ ದರ್ಶನಗಳನ್ನೆಲ್ಲಾ ಕೇಳಿ ತಿಳಿದುಕೊಂಡಿರುವೆನು .

೫೩. ಚಾರ್ವಾಕ ಮತ್ತು ಬೌದ್ಧಾದಿಮತಗಳು ವೇದಗಳಿಗೆ ಅನುಗುಣವಾಗಿರದೆ, ಆ ಮತಾನುಯಾಯಿಗಳನ್ನೆಲ್ಲಾ ನರಕಭಾಗಿಗಳನ್ನಾಗಿಮಾಡುತ್ತವೆ. ಅಯ್ಯಾ ಗುರುವೇ, ಈಗಲೂ ಆ ಮತಾನುಸರಣೆಯಿಂದ ಜನರು ನರಕಿಗಳಾಗುವಂತೆ ಉಪಾಯವನ್ನು ಹೂಡು" ಎಂದು ಕೇಳಿಕೊಳ್ಳಲು ಅದಕ್ಕೆ ಬೃಹಸ್ಪತ್ಯಾಚಾರ್ಯರು,

೫೪. "ಲೋಕದಲ್ಲಿ ಚಾರ್ವಾಕ, ಬೌದ್ಧ, ಜೈನ, ಯವನ, ಕಾಪಾಲಿಕ, ಕಾಲಿಕ, ಈ ಮತಾನುಯಾಯಿಗಳೆಲ್ಲಾ ವೇದಬಹಿಷ್ಕೃತರೇ ಆಗಿರುವರು. ಇಂಥವರೊಬ್ಬರೂ ಆ ಪ್ರತರ್ದನನ ರಾಜ್ಯದಲ್ಲಿ ಸಂಚರಿಸುವುದೇ ಇಲ್ಲವಲ್ಲಾ !

ವೇದಃ ಪ್ರಮಾಣಮಿತ್ಯೇವ ಮನ್ಯಮಾನಾಃ ಪ್ರಜಾಃ ಶುಭಾಃ ।
ಕಥಂ ಸಾ ಚಾಲ್ಯತೇ ತಾತ ನ ಶಕ್ಯಂ ಹಿ ಶುಭಾಽಧುನಾ ॥ ೫೫ ॥

ವಿಧಿದತ್ತವರಸ್ಯಾಹಮುಚ್ಛೇತ್ತುಂ ಶಕ್ತಿಮಾನ್ ಕಥಂ ।

॥ ಇಂದ್ರಾದಯ ಊಚುಃ ॥

ದೈತ್ಯಾನಾಂ ದಾನವಾನಾಂ ಚ ದುರ್ದಶಾನಾಂ ಭವೋ ಯದಾ ॥ ೫೬ ॥
ತದಾ ಶುಕ್ರಃ ಸ್ವಯಂ ತೇಷಾಂ ಕೃಪಯಾ ಸೋದ್ಯಮೋ ಭವೇತ್ ।
ತಸ್ಮಾತ್ತ್ವಂ ವಿಪ್ರಶಾರ್ದೂಲ ಕಸ್ಮಾದಸ್ಮಾನುಪೇಕ್ಷಸೇ ॥ ೫೭ ॥

ಅಸಾಧ್ಯಂ ತವ ಕಿಂ ಮನ್ಯಾ ವಯಂ ತಚ್ಛರಣಂ ಗತಾಃ ।
ಅಸ್ಮಾಕಂ ದುರ್ಜನಾಃ ಸರ್ವೇ ವೇದಕರ್ಮರತಾಃ ಕೃತಾಃ ॥ ೫೮ ॥

---

೫೫. ಎಲೈ ದೇವೇಂದ್ರನೇ, ವೇದವನ್ನೇ ಪ್ರಮಾಣವೆಂದು ನಂಬಿರುವ ಪ್ರಜೆಗಳು ಯಾವಾಗಲೂ ಶುಭಫಲವನ್ನೇ ಹೊಂದುವರು. ಅವರು ಎಂದಿಗೂ ನರಕವನ್ನು ಹೊಂದಲಾರರು. ಅಂಥವರನ್ನು ನಾಸ್ತಿಕರನ್ನಾಗಿಮಾಡುವುದು ಹೇಗೆ ಸಾಧ್ಯವಾದೀತು ?

೫೬. ಅದೂ ಅಲ್ಲದೆ ಬ್ರಹ್ಮನು ಕೊಟ್ಟಿರುವ ವರವನ್ನು ತಪ್ಪಿಸಲು ನನಗೆ ಶಕ್ತಿಯೆಲ್ಲಿಂದ ಬರಬೇಕು? " ಎಂದು ಬೃಹಸ್ಪತಿಯು ನುಡಿಯಲು ಅದಕ್ಕೆ ಇಂದ್ರಾದಿಗಳು " ದೇವಗುರುವಾದ ಬೃಹಸ್ಪತಿಯೇ, ದೈತ್ಯರಿಗಾಗಲಿ, ರಾಕ್ಷಸರಿಗಾಗಲಿ ಯಾವುದಾದರೂ ವಿಪತ್ತುಗಳು ಪ್ರಾಪ್ತವಾದರೆ, ಆಗ ಶುಕ್ರಾಚಾರ್ಯನು ಅನೇಕಾನೇಕ ಪ್ರಯತ್ನಗಳಿಂದ ಅವರ ಕಷ್ಟಗಳನ್ನು ಪರಿಹರಿಸಲು ತೊಡಗುವನು.

೫೭. ಆ ದೈತ್ಯಗುರುವು ಅವನ ಶಿಷ್ಯರಲ್ಲಿ ಅಷ್ಟು ಅನುಗ್ರಹದಿಂದಿರುವಾಗ ಎಲೈ ಬ್ರಾಹ್ಮಣಶ್ರೇಷ್ಠನೇ! ನೀನುಮಾತ್ರ ನಮ್ಮನ್ನು ಉಪೇಕ್ಷಿಸುವುದು ನ್ಯಾಯವೇ?

೫೮. ಮಾನ್ಯಗುರುವೇ, ನಿನಗೆ ಅಸಾಧ್ಯವಾದ ಕಾರ್ಯವಾವುದು ? ನಾವು ಈಗ ನಿನ್ನ ಮೊರೆಹೊಕ್ಕಿರುವೆವು. ದುರ್ಜನರೆಲ್ಲರೂ ವೇದಕರ್ಮಗಳನ್ನು ನೆರವೇರಿಸುತ್ತಾ ನಮಗೆ ಸರಿಸಮನಾಗಿ ನಿಲ್ಲುವರು.

ತೇಷಾಂ ವ್ಯಾಮೋಹನಾಯ ತ್ವಂ ಕುರು ಯತ್ನಂ ಕೃಪಾನಿಧೇ ।
ದೇವಾನಾಂ ರಕ್ಷಸಾಂ ಚೈವ ದೈತ್ಯಾನಾಂ ಪಾಪಕರ್ಮಣಾಂ ॥ ೫೯ ॥

॥ ಸೂತ ಉವಾಚ ॥

ಏವಂ ಬ್ರುವತ್ಸು ದೇವೇಷು ಬೃಹಸ್ಪತಿರುದಾರಧೀಃ ।
ಉಪಾಯಂ ಚಿಂತಯಾಮಾಸ ಸೃಷ್ಟೇಃ ಸಂರಕ್ಷಣಾಯ ಚ ॥ ೬೦ ॥

॥ ಗುರುರುವಾಚ ॥

ಶೃಣ್ವಂತು ತ್ರಿದಶಾಃ ಸರ್ವೇ ಮಮೋಪಾಯಂ ವದಾಮ್ಯಹಂ ।
ದೇವಃ ಕಶ್ಚಿದ್ಯದಿ ಭವೇತ್ಕಪಟೀ ವೈಷ್ಣವಃ ಸ್ವಯಂ ॥ ೬೧ ॥

ಶಂಖಚಕ್ರಾಂಕಿತತನುಸ್ತುಲಸೀಕಾಷ್ಠಭೂಷಿತಃ ।
ಊರ್ಧ್ವಪುಂಡ್ರಂ ಚ ಬಿಭ್ರಾಣೋ ಹರಿನಾಮಾಕ್ಷರಂ ಜಪನ್ ॥ ೬೨ ॥

ದೇವತಾಮಾತ್ರನಿಂದೀ ಚ ಅಕೃತ್ವಾ ಮತಿಮೀಶ್ವರೇ ।
ಶಿವದ್ವೇಷ್ಟಾ ಮಹಾಪಾಪಪ್ರೇರಕಃ ಶಿವನಿಂದಕಃ ॥ ೬೩ ॥

---

೫೯. ಅಂಥವರನ್ನು ಮೋಹಗೊಳಿಸಿ ಅವರಿಗೆ ದೇವರಾಕ್ಷಸರಿಗೂ ಪಾಪಿಷ್ಠರಿಗೂ ಅತ್ಯಂತ ಪ್ರಿಯವಾಗಿ ಕಾಣುವ, ವೇದವಿರುದ್ಧವಾದ ಕರ್ಮಗಳನ್ನುಪದೇಶಿಸಿ ಅವರನ್ನು ಪಾಪಿಷ್ಠರನ್ನಾಗಿ ಮಾಡು" ಎಂದು ಪ್ರಾರ್ಥಿಸಿಕೊಳ್ಳಲು,

೬೦. ದೇವತೆಗಳ ಪ್ರಾರ್ಥನೆಯನ್ನು ಕೇಳಿದ ಬೃಹಸ್ಪತಿಯು, ಆಗ ಈ ಜಗತ್ತಿನ ಸಂರಕ್ಷಣೆಗಾಗಿ ಒಂದುಪಾಯವನ್ನು ಯೋಚಿಸಲಾರಂಭಿಸಿದನು.

೬೧. ಒಡನೆಯೇ ದೇವತೆಗಳನ್ನು ಕರೆದು "ಎಲೈ ತ್ರಿದಶರೇ, ಈಗ ನೀವು ನನ್ನ ಒಂದುಪಾಯವನ್ನು ಲಾಲಿಸಿರಿ. ನಿಮ್ಮಲ್ಲಿ ಒಬ್ಬನು ಭೂಲೋಕದಲ್ಲಿ ಕಪಟಿಯಾದ ವೈಷ್ಣವನಾಗಿ ಜನಿಸಲಿ.

೬೨. ಅವನು ಶಂಖ ಚಕ್ರಗಳ ಗುರುತಿನಿಂದ ದೇಹವನ್ನೆಲ್ಲಾ ಅಲಂಕರಿಸಿಕೊಳ್ಳಲಿ, ತುಲಸೀಮಣಿಗಳಿಂದ ಕೂಡಿ, ಊರ್ಧ್ವ ಪುಂಡ್ರಗಳನ್ನು ಧರಿಸಿ, ಯಾವಾಗಲೂ ಹರಿನಾಮಗಳನ್ನೇ ಜಪಿಸುತ್ತಿರಲಿ.

೬೩. ಆತನು ವಿಷ್ಣುವನ್ನು ಬಿಟ್ಟು ಉಳಿದ ಎಲ್ಲಾ ದೇವತೆಗಳನ್ನೂ ನಿಂದಿಸುತ್ತಿರಬೇಕು. ಅದರಲ್ಲಿ ಈಶ್ವರನನ್ನು ಬಹಳವಾಗಿ ದ್ವೇಷಿಸುತ್ತಾ ಪಾಪಕಾರ್ಯಗಳನ್ನು ಪ್ರಚಾರಮಾಡುತ್ತಾ ಶಿವನಿಂದಕನಾಗಿರಲಿ.

ದಂಭೇನ ಯದಿ ತದ್ರಾಜ್ಯೇ ಶಿವನಿಂದಾ ಕೃತಾ ಭವೇತ್ ।
ತದಾ ತತ್ಪೂರ್ವಜಾಃ ಸರ್ವೇ ನರಕಂ ಯಾಂತಿ ದಾರುಣಂ ॥ ೬೪ ॥

ತತೋ ದೇವೇಷು ಸರ್ವೇಷು ನ ಕಶ್ಚಿದವದತ್ತಥಾ ।
ಕಥಯಂತಿ ಸ್ಮ ಚಾನ್ಯೋನ್ಯಂ ನೈತತ್ಕರ್ಮಾಸ್ತಿ ಸುಂದರಂ ॥ ೬೫ ॥

ಕಶ್ಚಾಂಡಾಲಃ ಶಿವಂ ಬ್ರೂಯಾತ್ಸಾಧಾರಣ್ಯೇನ ವಿಷ್ಣುನಾ ।
ಯಸ್ಯ ಪ್ರಸಾದಾದ್ವೈಕುಂಠಃ ಪ್ರಾಪ್ತವಾನೀದೃಶಂ ಪದಂ ॥ ೬೬ ॥

॥ ಸೂತ ಉವಾಚ ॥

ತತಃ ಕಿನ್ನರಮಾಹೂಯ ಪ್ರೋವಾಚೇದಂ ಶಚೀಪತಿಃ ।
ಯಾಹಿ ಕಿಂನರ ಮಾಯಾವೀ ಭೂತ್ವಾ ತ್ವಂ ವೈಷ್ಣವೋ ಭುವಂ ॥ ೬೭ ॥

---

೬೪. ಹೀಗೆ ಆ ರಾಜ್ಯದಲ್ಲಿ ಆಡಂಬರದಿಂದ ಯಾವನಾದರೊಬ್ಬನು ಶಿವನಿಂದೆಯನ್ನು ಪ್ರಚಾರಮಾಡುತ್ತಾ ತಾನು ಆಚಾರ್ಯನೆನಿಸಿದರೆ, ಅಂಥವನ ಶಿಷ್ಯರಾಗಿ ಶಿವನಿಂದೆಯನ್ನು ಮಾಡತಕ್ಕವರ ಪೂರ್ವಿಕರೆಲ್ಲಾ ದಾರುಣವಾದ ನರಕಭಾಗಿಗಳಾಗುವರು," ಎಂದು ಬೃಹಸ್ಪತಿಯು ಹೇಳಲು,

೬೫. ಈ ಮಾತುಗಳನ್ನು ಕೇಳಿದ ದೇವತೆಗಳಲ್ಲಿ ಯಾರೊಬ್ಬನೂ ಇಂತಹ ಶಿವನಿಂದಾಪರವಾದ ಜನ್ಮತಾಳುವುದರಲ್ಲಿ ಮನಸ್ಸುಮಾಡಲಿಲ್ಲ. ಅಲ್ಲದೆ ಆ ಕಾರ್ಯವು ಯುಕ್ತವಾದುದೂ ಅಲ್ಲವೆಂದು ನಿರ್ಧರಿಸಿದರು.

೬೬. ಯಾರು ಸಾಧಾರಣದೇವನಾದ ವಿಷ್ಣುವನ್ನೇ ನಂಬಿ ದೇವಶ್ರೇಷ್ಠನಾದ ಈಶ್ವರನನ್ನು ನಿಂದಿಸಿ, ತಾನು ಚಂಡಾಲನೆನಿಸಿಕೊಳ್ಳುವನು ? ಮಹೇಶ್ವರನ ಪ್ರಸಾದದಿಂದಲೇ ಅಲ್ಲವೇ, ವಿಷ್ಣುವು ಇಂದು ವೈಕುಂಠಾಧಿಪತಿಯಾಗಿರುವುದು? ಎಂದು ದೇವತೆಗಳು ಪರಸ್ಪರವಾಗಿ ಮಾತನಾಡಿಕೊಂಡರು.

೬೭. ಇದನ್ನು ನೋಡಿದ ದೇವೇಂದ್ರನು, ಅಲ್ಲಿದ್ದ ಕಿನ್ನರರಲ್ಲಿ ಒಬ್ಬನನ್ನು ಕರೆದು ಹೀಗೆ ಅಪ್ಪಣೆಮಾಡಿದನು. "ಎಲೈ ಕಿನ್ನರನೇ, ನೀನು ಈಗಲೇ ಭೂಲೋಕಕ್ಕೆ ಹೋಗಿ ಮಾಯಾವಿಯಾದ ವೈಷ್ಣವನಾಗಿ ಜನಿಸು.

ತತ್ರ ಗತ್ವಾ ಜನಾನ್ ಸರ್ವಾನ್ ಬ್ರೂಹಿ ಕೋಽಸ್ತಿ ಶಿವೋ ಮಹಾನ್ ।
ಏಕ ಏವ ಮಹಾವಿಷ್ಣುರ್ನಾನ್ಯೋ ಧ್ಯೇಯಃ ಕಥಂಚನ ॥ ೬೮ ॥

ಪೂರ್ವಂ ಪ್ರಚ್ಛನ್ನರೂಪೇಣ ಸ್ಥಿತ್ವಾ ಮಾರ್ಗಂ ಪ್ರದರ್ಶಯ ।
ಶನೈಃ ಶನೈರ್ಜನಾ ಏವಂ ಭವಿಷ್ಯಂತಿ ಚ ಹೈತುಕಾಃ ॥ ೬೯ ॥

ವೇದಃಪ್ರಮಾಣಮಿತ್ಯೇವ ವದಿತವ್ಯಂ ತ್ವಯಾ ಸದಾ ।
ಪರಂ ತ್ವೇಕೋ ಮಹಾನ್ವಿಷ್ಣುಃ ಶಿವಸ್ತಸ್ಯ ಚ ಕಿಂಕರಃ ॥ ೭೦ ॥

॥ ಸೂತ ಉವಾಚ ॥

ಪ್ರೇರಿತೋಽಸೌ ಬಲಾತ್ತೇನ ಭೀತೋಽಗಚ್ಛಚ್ಛನೈಃ ಶನೈಃ ।
ದಾಂಭಿಕಂ ರೂಪಮಾಸ್ಥಾಯ ಯಥಾ ಸಾಧುಂ ವದೇಜ್ಜನಃ ॥ ೭೧ ॥

---

೬೮. ಮತ್ತು ನೀನು ಅಲ್ಲಿ -ದೊಡ್ಡ ವೈಷ್ಣವಾಚಾರ್ಯನೆನಿಸಿಕೊಂಡು, ವಿಷ್ಣು ಸರ್ವೋತ್ತಮತ್ವವನ್ನು ಹರಡುವವನಾಗು. ವಿಷ್ಣುವೇ ಸದಾಧ್ಯೇಯನೆಂಬುದನ್ನು ಸ್ಥಿರಪಡಿಸು.

೬೯. ಮೊದಲು ಮೊದಲು ಯಾರಿಗೂ ಅಷ್ಟು ಗೋಚರನಾಗದಂತೆ ಅಲ್ಲಲ್ಲಿ ನಿನ್ನ ಮಾಯಾ ವೈಷ್ಣವ ತತ್ತ್ವವನ್ನು ಪ್ರಚಾರಮಾಡುತ್ತಿರು. ಅನಂತರ ಜನರು ತಾವು ತಾವೇ ಮುಂದೆ ಬಂದು ನಿನ್ನ ತತ್ತ್ವವನ್ನೇ ಅಂಗೀಕರಿಸಿ ಹೇತುವಾದಿಗಳಾಗುವರು. (ಹೇತುವಾದಿಗಳೆಂದರೆ, ಸಮಸ್ತ ವೈದಿಕ ಕರ್ಮಗಳಿಗೂ ಕಾರಣವನ್ನು ಕೇಳುತ್ತಾ ಚರ್ಚಿಸುತ್ತಿರುವವರು).

೭೦. ಆದರೆ ನೀನು ವೇದಪ್ರಾಮಾಣ್ಯವನ್ನು ಮಾತ್ರ ಬಿಡಬೇಡ. ನಿನ್ನ ಮತವನ್ನು ವೈದಿಕಮತವೆಂದೇ ಹೇಳುತ್ತಿರು. ಆದರೆ ವಿಷ್ಣುವೇ ಲೋಕಪೂಜ್ಯನೆಂದೂ, ಶಿವನು ಆ ವಿಷ್ಣುವಿನ ಸೇವಕನೆಂದೂ ಜನರಿಗೆ ಬೋಧಿಸುತ್ತಿರು. "

೭೧. ಹೀಗೆಂದು ಆಜ್ಞಾಪಿಸಿದ ಇಂದ್ರನ ಆಜ್ಞೆಯಂತೆ ಆ ಕಿನ್ನರನು ಭಯಗ್ರಸ್ತನಾಗಿಯೇ, ಭೂಲೋಕಕ್ಕೆ ಬಂದು ಸಾಧುವಿನಂತೆ ದಾಂಭಿಕವೇಷವನ್ನು ಧರಿಸಿ ನಿಂತನು. ಜನರೆಲ್ಲರೂ ಇವನನ್ನು ನಿಜವಾದ ಸಾಧುವೆಂದೇ ತಿಳಿದರು.

ಸರ್ವವೈಷ್ಣವಚಿಹ್ನಾನಿ ಧೃತ್ವಾ ಭ್ರಾಮ್ಯತಿ ತತ್ಪುರೇ ।
ಶಿಷ್ಯಾನ್ ಕರೋತಿ ತಾನ್ ಪೂರ್ವಂ ವದೇನ್ಮಾನ್ಯೋ ನ ಶಂಕರಃ ॥ ೭೨॥

ಕ್ವಚಿದ್ವದತಿ ನ ಧ್ಯೇಯೋ ನ ಮುಖ್ಯ ಇತಿ ಚ ಕ್ವಚಿತ್ ।
ಕ್ವಚಿದುತ್ಕೃಷ್ಟಜೀವೋಽಯಂ ಕ್ವಚಿಚ್ಛ್ರೇವಿಷ್ಣುಕಿಂಕರಃ ॥ ೭೩ ॥

ಇತಿ ನಾನಾವಿಧಾ ಬುದ್ಧಿರ್ನರಾಣಾಂ ಭೇದಿತಾ ಯದಾ ।
ತದಾ ಶಿಷ್ಯೈಃ ಪರಿವೃತೋ ರಾಜಗೇಹಂ ವಿಶತ್ಯಪಿ ॥ ೭೪ ॥

ಚಾಲಿತೋ ರಾಜಲೋಕೋಽಪಿ ವಿರುದ್ಧಂ ನೈವ ದೃಶ್ಯತೇ ।
ವಿಷ್ಣುಭಕ್ತೋ ಮಹಾನ್ ಶಾಂತೋ ವೇದವೇದಾಂಗಪಾರವಾನ್ ॥ ೭೫ ॥

---

೭೨. ಹಿಂದೆ ಬೃಹಸ್ಪತಿಯು ಹೇಳಿದ್ದಂತೆ ವೈಷ್ಣವತತ್ತ್ವವನ್ನು ಉಪದೇಶಿಸುತ್ತಾ, ಅವರನ್ನೆಲ್ಲಾ ಶಿಷ್ಯರನ್ನಾಗಿ ಮಾಡಿಕೊಂಡನು. ಶಂಕರನಿಗೆ ಮಾತ್ರ ಎಂದೂ ಮಾನ್ಯತೆಯನ್ನು ಕೊಡಲೇ ಇಲ್ಲ.

೭೩. ಆದರೆ ಕೆಲವು ಕಡೆಗಳಲ್ಲಿ ಶಿವನು ಧ್ಯೇಯನಲ್ಲವೆಂದೂ, ವಿಷ್ಣುವಿನಷ್ಟು ಮುಖ್ಯನಲ್ಲವೆಂದೂ ವಾದಿಸಿದನು. ಮತ್ತೆ ಕೆಲವಡೆಯಲ್ಲಿ ಶಿವನು ಉತ್ತಮವರ್ಗದ ಜೀವಿಯೆಂದೂ ಆತನು ವಿಷ್ಣುವಿನ ಉತ್ತಮ ಭಕ್ತನೆಂದೂ ಉಪದೇಶಿಸಿದನು.

೭೪. ಹೀಗೆ ನಾನಾರೀತಿಯಲ್ಲಿ ಶಿವನನ್ನು ಹಿಯ್ಯಾಳಿಸಿ, ಜನರ ಮನಸ್ಸಿನಲ್ಲಿ ವಿಷ್ಣುಸರ್ವೋತ್ತಮತ್ವವನ್ನು ನೆಲೆಗೊಳಿಸಿದನು. ತಿಳಿಯದ ಅನೇಕ ಜನರು ಇವನಿಗೆ ಶಿಷ್ಯರಾದರು. ಇಷ್ಟು ಶಿಷ್ಯಸಂಪತ್ತಿನಿಂದ ಕೂಡಿ ಒಂದುಸಾರಿ ಅರಮನೆಗೆ ಹೋದನು.

೭೫. ಅಲ್ಲಿದ್ದ ರಾಜನೂ, ಅವನ ಅನುಬಂಧಿಗಳೂ ಸಹ ಈ ಕಿನ್ನರನ ಸಾಧುವೇಷಕ್ಕೆ ಮರುಳಾಗಿ ಅವನ ಉಪದೇಶವನ್ನು ಸತ್ಯವೆಂದೇ ಅರಿತರು. ರಾಜನೂ ಸಹ ಅವನ ಉಪದೇಶಕ್ಕೆ ಮನಸೋತನು. ವೇದವೇದಾಂಗಗಳಲ್ಲಿ ಭಕ್ತಿಯಿಟ್ಟು ಶಾಂತಸ್ವಭಾವದವನಾಗಿ ವೇಷಧಾರಿಯಾದ ಕಿನ್ನರನನ್ನು ಉಪಚರಿಸಿದನು.

ಉಪಾಯನಾನ್ಯನೇಕಾನಿ ಹಯಾಂಶ್ಚ ಸ್ಯಂದನಾನ್ಯಸು ।
ಲೋಕಾಃ ಸರ್ವೇ ದದತ್ಯೇವ ಗುಪ್ತಂ ಪಾಪಂ ನ ದೃಶ್ಯತೇ ॥ ೨೬ ॥

॥ ಸೂತ ಉವಾಚ ॥

ಏಕಸ್ಮಿನ್ ಸಮಯೇ ವಿಪ್ರಾ ಏಕಾದಶ್ಯಾಮುಪೋಷಿತಾಃ ।
ಜನಾಃ ಪ್ರಾತಶ್ಚಕ್ರಪಾಣಿಂ ನಮಸ್ಕರ್ತುಂ ಗತಾಃ ಶುಭಾಃ ॥ ೨೭ ॥

ತತ್ರೋಪವಿಷ್ಟಃ ಶಿಷ್ಯೈಃ ಸ್ವೈರ್ವೃತಃ ಸ್ವೀಯೇನ ತೇಜಸಾ ।
ನ ಕಂಚಿನ್ಮನ್ಯತೇ ವಿಪ್ರಂ ಯೋ ಭಸ್ಮಾಂಕಿತಫಾಲವಾನ್ ॥ ೨೮ ॥

ಏಕಸ್ಮಿನ್ನಂತರೇ ರಾಜಾ ಪ್ರಾಪ್ತವಾನ್ ಶ್ರೀಪ್ರತರ್ದನಃ ।
ವೃತೋ ಬಹುವಿಧೈರ್ವಿಪ್ರೈಃ ಕುಶಹಸ್ತೈಃ ಶುಚಿವ್ರತೈಃ ॥ ೨೯ ॥

---

೨೬. ಅನೇಕಜನ ಶಿಷ್ಯರು ಆ ಗುರುವಿಗೆ ನಾನಾವಿಧವಾದ ಕೈಗಾಣಿಕೆಗಳನ್ನೂ ಕುದುರೆಗಳಿಂದ ಕೂಡಿದ ರಥಗಳನ್ನೂ ಕೊಟ್ಟರು. ನಾನಾವಿಧವಾದ ಕಾಣಿಕೆಗಳನ್ನು ಅರ್ಪಿಸುತ್ತಾ ತಾವು ಶಿಷ್ಯಾಗ್ರಣಿಗಳಾದರು. ಆದರೆ ಒಳಗೆ ಅಡಗಿರುವ ದುರುದ್ದೇಶವನ್ನು ಮಾತ್ರ ಅವರು ಅರಿಯಲೇ ಇಲ್ಲ.

೨೭. ಹೀಗಿರುವಾಗ, ಒಂದುಸಾರಿ ಏಕಾದಶಿಯದಿನ ಎಲ್ಲಾ ಬ್ರಾಹ್ಮಣರೂ ಉಪವಾಸವ್ರತವನ್ನಾಚರಿಸಿ, ಮಾರನೆಯದಿವಸ ಪ್ರಾತಃಕಾಲ ಮಹಾವಿಷ್ಣು ದರ್ಶನಾರ್ಥವಾಗಿ ದೇವಾಲಯಕ್ಕೆ ಹೋದರು.

೨೮. ಅಲ್ಲಿ ವೇಷಧಾರಿಯಾದ ವೈಷ್ಣವನು ತೇಜಶ್ಶಾಲಿಯಾಗಿ ತನ್ನ ಶಿಷ್ಯರೊಡಗೂಡಿ, ವೇದವನ್ನು ಪಠಿಸುತ್ತಾ ಕುಳಿತಿದ್ದನು. ಆತನು ವಿಭೂತಿಯನ್ನು ಧರಿಸಿದ ಯಾವ ಬ್ರಾಹ್ಮಣನನ್ನೂ ಗೌರವಿಸದೆ, ತನ್ನ ಅಧ್ಯಯನ ಕರ್ಮದಲ್ಲಿ ಮಾತ್ರ ನಿರತನಾಗಿದ್ದನು.

೨೯. ಅಷ್ಟರಲ್ಲಿ ರಾಜನಾದ ಪ್ರತರ್ದನನೂ ಅಲ್ಲಿಗೆ ಬಂದನು. ಅಲ್ಲಿ ನಾನಾವಿಧವಾಗಿ ಬ್ರಾಹ್ಮಣರು ದರ್ಭಪಾಣಿಗಳಾಗಿ ಶುಚಿಯಾದ ಮನಸ್ಸಿನಿಂದ ರಾಜನನ್ನು ಸುತ್ತುಗಟ್ಟಿ ಕುಳಿತರು.

ತ್ರಿಪುಂಡ್ರಧಾರಿಣಃ ಕೇಚಿದೂರ್ಧ್ವಪುಂಡ್ರಧರಾಸ್ತಥಾ ।
ಪಠಂತಶ್ಶಿವಸೂಕ್ತಾನಿ ವಿಷ್ಣುಸೂಕ್ತಾನಿ ಚಾಪರೇ ॥ ೮೦

ಏತೈರ್ಬಹುವಿಧೈರ್ವಿಪ್ರೈರ್ವೃತೋ ರಾಜೋಪವಿಶ್ಯ ಸಃ ।
ಉವಾಚ ವಚನಂ ಯುಕ್ತಂ ಕೋಮಲಾಕ್ಷರಸಂಯುತಂ ॥ ೮೧ ॥

ಸ್ವಾಮಿನ್ನಾಗತವಾನ್ ಸಾಕ್ಷಾದ್ಭಗವಾನ್ ಹರಿಪಾರ್ಷದಃ ।
ವೇದಂ ಪಠಸಿ ವಿಷ್ಣೋಶ್ಚ ಭಕ್ತಸ್ತದ್ವೇಷಧಾರ್ಯಪಿ ॥ ೮೨ ॥

॥ ವೈಷ್ಣವಾಭಾಸ ಉವಾಚ ॥

ವೇದ ಏವ ಪರಂ ಶ್ರೇಯೋ ವೇದಾರ್ಥಾದಧಿಕಂ ನ ಹಿ ।
ಪ್ರಮಾಣಂ ವೇದ ಏವೈಕೋ ವಿಷ್ಣುಸಾಕ್ಶ್ರುತಿರೇವ ಚ ॥ ೮೩ ॥

---

೮೦. ಅಲ್ಲಿ ಕೆಲವು ಬ್ರಾಹ್ಮಣರು ಹಣೆಯಲ್ಲಿ ಮೂರು ವಿಭೂತಿ ಪಟ್ಟೆಗಳನ್ನೂ, ಮತ್ತೆ ಹಲವರು ಊರ್ಧ್ವಪುಂಡ್ರವಾದ ನಾಮುಗಳನ್ನೂ, ಇಟ್ಟುಕೊಂಡಿದ್ದರು. ಕೆಲವರು ವಿಷ್ಣುಸೂಕ್ತಗಳನ್ನೂ, ಶಿವಸೂಕ್ತಗಳನ್ನೂ ಪಠಿಸುತ್ತಿದ್ದರು.

೮೧. ಇದೆಲ್ಲವನ್ನೂ ಕೇಳಿದ ರಾಜನು ಬಹುಸಂತೋಷಪಟ್ಟು ಆ ಬ್ರಾಹ್ಮಣರನ್ನು ಕುರಿತು, ಮೃದುಮಧುರವಾಗಿ ಅನೇಕ ಮಾತುಗಳನ್ನಾಡಿ, ಅವರನ್ನು ಗೌರವಿಸಿದನು.

೮೨. ಅಲ್ಲಿದ್ದ ವೈಷ್ಣವ ವೇಷಧಾರಿಯಾದ ಕಿನ್ನರನನ್ನು ಕಂಡು "ಎಲೈ ಸ್ವಾಮಿಯೇ, ಸಾಕ್ಷಾನ್ನಾರಾಯಣನಂತೆ ನೀವು ಕಾಣುತ್ತಿರುವಿರಿ. ವಿಷ್ಣುಸೂಕ್ತವನ್ನೇ ವಿಶೇಷವಾಗಿ ಪಠಿಸುತ್ತಿರುವಿರಿ. ರುದ್ರಸೂಕ್ತವು ನಿಮ್ಮ ಬಾಯಿಂದ ಬರುತ್ತಲೇ ಇಲ್ಲ. ಇದಕ್ಕೆ ಕಾರಣವೇನು" ಎಂದು ಪ್ರಶ್ನಿಸಲು,

೮೩. ವೈಷ್ಣವನಂತೆ ತೋರುತ್ತಿದ್ದ ಆ ಕಿನ್ನರನು, ರಾಜನನ್ನು ಕುರಿತು, ಅಯ್ಯಾ ರಾಜನೇ! ಲೋಕದಲ್ಲಿ ವೇದವೇ ಶ್ರೇಷ್ಠವಾದದ್ದು. ವೇದಾರ್ಥಕ್ಕಿಂತಲೂ ಉತ್ತಮವಾದ ತತ್ತ್ವವು ಮತ್ತೊಂದಿಲ್ಲ. ಸರ್ವಕ್ಕೂ ಪ್ರಮಾಣವಾದದ್ದು ವೇದವೊಂದೇ. ಆ ವೇದವೇ ವಿಷ್ಣುವಿನ ಮಾತೆಂಬುದನ್ನು ತಿಳಿ.

ರಾಜನ್ ವೇದಾರ್ಥವಿಜ್ಞಾನೇ ಬಹವೋ ಮೋಹಿತಾ ಜನಾಃ ।
ಶಿವಪೂಜಾರತಾಸ್ಸಂತೋ ನಾನಾದೈವತಪೂಜಕಾಃ ॥ ೮೪ ॥

ಏಕೋ ವಿಷ್ಣುರ್ನ ದ್ವಿತೀಯೋ ಧ್ಯೇಯಃ ಕಿಂ ತ್ವಿತರೈಃ ಸುರೈಃ ।
ಕ್ರೂರಂ ಚ ಕ್ರೂರಕರ್ಮಾಣಂ ಶಂಕರಂ ಮನ್ಯತೇ ಕಥಂ ॥ ೮೫ ॥

ತ್ವದೀಯಂ ಬ್ರಾಹ್ಮಣಾ ಏತೇ ಊರ್ಧ್ವಪುಂಡ್ರಾಂಕಿತಾಃ ಶುಭಾಃ ।
ತಾನ್ ದೃಷ್ಟ್ವಾ ಪ್ರೀತಿರತ್ಯರ್ಥಂ ಜಾಯತೇ ನೃಪಸತ್ತಮ ॥ ೮೬ ॥

ಏತೇ ತ್ರಿಪುಂಡ್ರಭಾಲಾ ಯೇ ಕರರುದ್ರಾಕ್ಷಮಾಲಿನಃ ।
ಪಠಂತಃ ಶಿವಸೂಕ್ತಾನಿ ದೃಷ್ಟ್ವಾ ವಜ್ರಂ ಪತೇದ್ದಿವಃ । ॥ ೮೭ ॥

---

೮೪. ಓ ರಾಜನೇ! ಬಹಳ ಜನರು ವೇದಾರ್ಥದಲ್ಲಿ ಅಜ್ಞಾನವನ್ನು ಹೊಂದಿ ಶಿವಸರ್ವೋತ್ತಮತ್ವವನ್ನು ಒಪ್ಪಿಕೊಂಡಿದ್ದಾರೆ. ಅಲ್ಲದೆ ಶಿವನಂತೆಯೇ ನಾನಾ ದೇವತೆಗಳನ್ನೂ ಪೂಜಿಸುತ್ತಿರುವರು.

೮೫. ಅದು ತಪ್ಪು. ದೇವತೆಗಳಲ್ಲಿ ಶ್ರೇಷ್ಠನಾದವನು ವಿಷ್ಣುವೊಬ್ಬನೇ. ಅವನಿಗೆ ಸರಿಸಮನಾದವನು ಬೇರೊಬ್ಬನಿಲ್ಲ. ಸಾಮಾನ್ಯದೇವತೆಯಾಗಿ ಕ್ರೂರಸ್ವಭಾವದಿಂದ ಕ್ರೂರಕರ್ಮಗಳನ್ನೆಸಗುವಂತಹ ಶಂಕರನನ್ನು ವಿಷ್ಣುವಿಗೆ ಸಮನೆಂದು ಹೇಳುವುದು ಹೇಗೆ ?

೮೬. ಎಲೈ ರಾಜನೇ, ಈ ಬ್ರಾಹ್ಮಣವರ್ಗದಲ್ಲಿ ಊರ್ಧ್ವಪುಂಡ್ರವೆಂಬ ನಾಮಗಳನ್ನು ಧರಿಸಿರುವವರನ್ನು ಕಂಡರೆ ನನಗೆ ಬಹಳ ಸಂತೋಷವಾಗುತ್ತದೆ. ಅವರೆಲ್ಲರೂ ನಾನು ಹೇಳಿದ ತತ್ತ್ವವನ್ನು ಅನುಸರಿಸಿರುವರು. ನಿಶ್ಚಯವಾದ ಬ್ರಾಹ್ಮಣೋತ್ತಮರು ಅವರೇ.

೮೭. ಇಲ್ಲಿ ಹಣೆಯಲ್ಲಿ ಮೂರುಪಟ್ಟೆ ವಿಭೂತಿಯನ್ನಿಟ್ಟು, ಕೈಯ್ಯಲ್ಲಿ ರುದ್ರಾಕ್ಷಿಯ ಸರವನ್ನು ಹಿಡಿದು, ಶಿವಸೂಕ್ತಗಳನ್ನು ಪಠಿಸುತ್ತಿರುವ ಈ ಬ್ರಾಹ್ಮಣರನ್ನು ನೋಡಿದರೆ ವಜ್ರಾಯುಧವು ಅಂತರಿಕ್ಷದಿಂದ ಕೆಳಕ್ಕೆ ಬಿದ್ದು ಇವರನ್ನು ನಾಶಮಾಡೀತು. ಯಾವ ದೇವತೆಗಳೂ ಇವರನ್ನು ನೋಡಿ ತೃಪ್ತಿ ಹೊಂದಲಾರರು.

ದರ್ಭಸ್ಯೋಪಗ್ರಹಃ ಕೋಽಯಂ ಕಿಂ ವಾ ಭಸ್ಮಾಂಗಧಾರಣಂ ।
ರುದ್ರಾಕ್ಷಾ ಕಾ ಚ ಕೋ ರುದ್ರಃ ಕಾನಿ ಸೂಕ್ತಾನಿ ತಸ್ಯ ಚ ॥ ೮೮ ॥

ವಿಷ್ಣುರೇಕಃ ಪರೋ ಧ್ಯೇಯೋ ನಾನ್ಯೋ ದೇವಃ ಕದಾಚನ ।
ತದೀಯಾಯುಧಚಿಹ್ನಾನಿ ಪೂಜ್ಯೋ ವೈ ವೈಷ್ಣವಃ ಸದಾ ॥ ೮೯ ॥

॥ ರಾಜೋವಾಚ ॥

ಅನಾದಿನಾ ಪ್ರಮಾಣೇನ ವೇದೇನ ಪ್ರೋಚ್ಯತೇ ಶಿವಃ ।
ವಿಷ್ಣೋರಪ್ಯಧಿಕೋ ವಿಪ್ರ ಸಂಪೂಜ್ಯೋ ನ ಕಥಂ ಭವೇತ್ ॥ ೯೦ ॥

ಶಿವಾದಿಷು ಪುರಾಣೇಷು ಪ್ರೋಚ್ಯತೇ ಶಂಕರೋ ಮಹಾನ್ ।
ಸರ್ವಾಸು ಸ್ಮೃತಿಷು ಬ್ರಹ್ಮನ್ ಶಿವಾಚಾರೇಷು ಸರ್ವತಃ ॥ ೯೧ ॥

---

೮೮. ಇವರ ಕೈಯ್ಯಲ್ಲಿ ದರ್ಭೆಹಿಡಿದಿರುವುದೇನು ? ಮೈಯ್ಯಲ್ಲೆಲ್ಲಾ ವಿಭೂತಿಯು ಏಕೆ ? ಈ ರುದ್ರಾಕ್ಷಿಯೋ, ರುದ್ರನೋ, ಈ ರುದ್ರಸೂಕ್ತಗಳೋ, ಇವುಗಳನ್ನು ಏನೆಂದು ಹೇಳಲಿ. ಇವೆಲ್ಲ ವ್ಯರ್ಥಗಳಲ್ಲವೇ ?

೮೯ ರಾಜನೇ, ಲೋಕದಲ್ಲಿ ವಿಷ್ಣುವೇ ಉತ್ತಮನಾದವನು. ವಿಷ್ಣುವಿಗೆ ಸಮನಾದ ದೇವರು ಮತ್ತೊಬ್ಬನಿಲ್ಲ. ಅವನ ಆಯುಧಗಳ ಗುರುತುಗಳನ್ನು ಹೊಂದಿದವನೇ ನಿಜವಾದ ವೈಷ್ಣವನು. ಅವನೇ ಪೂಜ್ಯನು.

೯೦. ಹೀಗೆಂದು ಹೇಳಿದ ಆ ವೈಷ್ಣವಾಭಾಸನ ಮಾತುಗಳನ್ನು ಕೇಳಿ ರಾಜನು, "ಎಲೈ ಬ್ರಾಹ್ಮಣಶ್ರೇಷ್ಠನೇ ಅನಾದಿಯಾಗಿರುವ ವೇದವು ಶಿವನನ್ನು ವಿಷ್ಣುವಿಗಿಂತ ದೊಡ್ಡವನೆಂದು ಪ್ರತಿಪಾದಿಸುತ್ತಿರುವುದು. ಹಾಗಿರುವಾಗ ನೀನು ಹೀಗೆ ವಿರುದ್ಧವಾಗಿ ಹೇಳುವೆಯಲ್ಲಾ ! ಇದು ನ್ಯಾಯವೇ ?

೯೧. ಶಿವಪುರಾಣವೇ ಮೊದಲಾದ ಮಹಾಪುರಾಣಗಳೂ ಸಮಸ್ತ ಧರ್ಮಶಾಸ್ತ್ರಗಳೂ ಶಿವನನ್ನೇ ಮುಖ್ಯದೇವನೆಂದು ಸಾರುತ್ತಿವೆ. ಮತ್ತು ಶಿವಾರಾಧನೆಯನ್ನೇ ಮುಖ್ಯವಾಗಿ ಪ್ರಚಾರಮಾಡುತ್ತಿವೆ. ಆಚಾರಗಳಲ್ಲಿ ಶಿವಸಂಬಂಧವಾದ ಆಚಾರಗಳೇ ಶ್ರೇಷ್ಠವೆಂದು ಪ್ರಸಿದ್ಧವಾಗಿದೆ.

ನಾನಾಗಮೇಷು ಪುಣ್ಯೇಷು ಪ್ರೋಚ್ಯತೇ ಹ್ಯಜ ಈಶ್ವರಃ ।
ಕಠೋರಂ ವಾಕ್ಯಮೇತತ್ತೇ ಭಾತಿ ಚೇತಸಿ ಮೇಽಶನಿಃ ॥ ೯೨ ॥

॥ ವೈಷ್ಣವಾಭಾಸ ಉವಾಚ ॥

ನೈಕಾಗ್ರಮನಸಸ್ತೇ ತು ಯೇಽರ್ಚಯಂತೀಹ ಧೂರ್ಜಟಿಂ ।
ಶ್ಮಶಾನವಾಸೀ ದಿಗ್ವಾಸಾ ಬ್ರಹ್ಮಮಸ್ತಕಧೃಗ್ಭವಃ ॥ ೯೩ ॥

ಸರ್ಪಹಾರಃ ಕಥಂ ಸೇವ್ಯೋ ವಿಷಧಾರೀ ಜಟಾಧರಃ ।
ತಸ್ಮಾದ್ವಿಷ್ಣುಃ ಸದಾ ಸೇವ್ಯಃ ಸುಂದರಃ ಕಮಲಾಪತಿಃ ॥ ೯೪ ॥

॥ ರಾಜೋವಾಚ ॥

ನಾನಾರೂಪಾಣಿ ರುದ್ರಸ್ಯ ಕೇ ಜಾನಂತಿ ನರಾಧಮಾಃ ।
ತ್ವಂ ವೈಷ್ಣವ ಇವಾಭಾಸಿ ವೇದಾರ್ಥಂ ನೈವ ವೇತ್ಸಿ ರೇ ॥ ೯೫ ॥

---

೯೨. ಸಮಸ್ತ ಪುಣ್ಯಕರಗಳಾದ ಶೈವಾಗಮಾದಿಗಳು, ಶಿವನನ್ನು ಆದಿದೇವನೆಂದೂ ಮಹಾಮಹಿಮನೆಂದೂ ಹೊಗಳುತ್ತಿವೆ. ಹೀಗಿರುವಾಗ ನೀನು ಮಾತ್ರ ಶಿವನನ್ನು ಬಹುವಾಗಿ ನಿಂದಿಸುತ್ತಿರುವೆ. ಇದು ನನ್ನ ಕಿವಿಗೆ ವಜ್ರಾಯುಧದಂತೆ ಕಠೋರವಾಗಿ ಕೇಳುತ್ತಿದೆ." ಎಂದು ರಾಜನು ಪ್ರತ್ಯುತ್ತರಕೊಟ್ಟನು.

೯೩. ಇದನ್ನು ಕೇಳಿ, ವೈಷ್ಣವವೇಷಧಾರಿಯಾದ ಕಿನ್ನರನು "ಅಯ್ಯಾ ರಾಜನೇ, ಯಾರು ಈಶ್ವರನನ್ನು ಪೂಜಿಸಲು ಯತ್ನಿಸುವರೋ, ಅವರ ಮನಸ್ಸು ಸ್ಥಿರವಾದುದಲ್ಲ. ಏಕೆಂದರೆ ಈಶ್ವರನು ಶ್ಮಶಾನವಾಸಿಯು. ದಿಗಂಬರನು. ಬ್ರಹ್ಮನ ಶಿರಸ್ಸನ್ನು ಕತ್ತರಿಸಿದವನು. ಇಂತಹವನನ್ನು ಪೂಜಿಸುವವನು ಜಿತೇಂದ್ರಿಯನು ಹೇಗಾದಾನು ?

೯೪. ಸರ್ಪವನ್ನು ಧರಿಸಿ, ವಿಷವನ್ನು ಕುಡಿದವನನ್ನು ಸೇವಿಸುವುದು ಹೇಗೆ? ಅವನ ಮುಖ್ಯ ಆಸ್ತಿಯೆಂದರೆ ಜಟೆಯೊಂದೇ. ಆದ್ದರಿಂದ ಈ ಭಯಂಕರನಾದ ಶಿವನನ್ನು ಬಿಟ್ಟು ಸುಂದರನೂ, ಲಕ್ಷ್ಮೀಪತಿಯೂ, ಆದ ವಿಷ್ಣುವನ್ನು ಆರಾಧಿಸುವುದೇ ಒಳ್ಳೆಯದು"

೯೫. ಎಂದು ಹೇಳಿದ ವೈಷ್ಣವನ ಮಾತುಗಳನ್ನು ಕೇಳಿ ರಾಜನು "ಅಯ್ಯಾ ವೈಷ್ಣವನೇ, ಪರಮೇಶ್ವರನ ಲೀಲೆಗಳನ್ನು ಪಾಪಿಗಳು ಹೇಗೆ ತಿಳಿದಾರು? ನೀನು ಕೇವಲ ವಿಷ್ಣುಭಕ್ತನೇ ಹೊರತು ಸರಿಯಾಗಿ, ವೇದಾರ್ಥವನ್ನು ತಿಳಿದವನಲ್ಲ.

॥ ಸೂತ ಉವಾಚ ॥

ಚಿಂತಯಿತ್ವಾ ತತೋ ರಾಜಾ ವಿದುಷೋ ಬ್ರಾಹ್ಮಣೋತ್ತಮಾನ್ ।
ಆಹೂಯ ನಿರ್ಣಯಂ ಚಾಸ್ಯ ಕರಿಷ್ಯಾಮೀತಿ ತತ್ತ್ವತಃ ॥ ೯೬ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಶಿವಮಹಿಮಾದಿ ಕಥನಂ
ನಾಮಾಷ್ಟಾತ್ರಿಂಶೋಧ್ಯಾಯಃ

---

೯೬. ಎಂದು ಹೇಳಿ ವಿದ್ವಾಂಸರಾದ ಬಾಹ್ಮಣರನ್ನು ಕರೆಸಿ ಈ ವಿಷಯವನ್ನು ನಿರ್ಣಯ ಮಾಡಿಸುತ್ತೇನೆಂದು ಮನಸ್ಸಿನಲ್ಲಿ ಯೋಚಿಸುತ್ತಾ ಸುಮ್ಮನಾದನು.

ಇಲ್ಲಿಗೆ ಬ್ರಹ್ಮಪುರಾಣೋಪ ಪುರಾಣವಾದ ಸೌರಪುರಾಣದಲ್ಲಿ, ಸೂತ ಶೌನಕ
ಸಂವಾದ ರೂಪವಾಗಿ, ಶಿವಮಹಿಮೆಯನ್ನು ವಿವರಿಸುವಂತಹ
ಮೂವತ್ತೆಂಟನೆಯ ಅಧ್ಯಾಯ ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಏಕೋನಚತ್ವಾರಿಂಶೋಽಧ್ಯಾಯಃ

॥ ಸೂತ ಉವಾಚ ॥

ಗೃಹಂ ಗತ್ವಾ ಸ್ಥಿರೋ ಭೂತ್ವಾ ಯಾವದಾಹೂಯತೇ ದ್ವಿಜಾನ್ ।
ತಾವದೇವ ಕಲಿಃ ಪಾಪೋ ಬ್ರಾಹ್ಮಣೇಷು ವಿವೇಶ ಹ ॥ ೧ ॥

ಕಶ್ಚಿದ್ರಾಜಾನಮಾಶ್ರಿತ್ಯ ಬ್ರೂತೇ ತಾದೃಶಮೇವ ಹಿ ।
ಅನ್ಯೋನ್ಯಾಮರ್ಶಯೋಗೇನ ಖಂಡಯಂತಿ ಪರಸ್ಪರಂ ॥ ೨ ॥

ಮೂಕೀಭಾವಾಶ್ರಿತಾಃ ಕೇಚಿತ್ಕೇಚಿದ್ಯಾಥಾರ್ಥ್ಯವಾದಿನಃ ।
ಯೋ ಯಥಾ ವಕ್ತಿ ತತ್ತಾದೃಗಿತ್ಥಂ ಕೇಚಿದಥೋಚಿರೇ ॥ ೩ ॥

ಮೂವತ್ತೊಂಭತ್ತನೆಯ ಅಧ್ಯಾಯ.

೧. ಅನಂತರ ಸೂತರು ಶೌನಕಾದಿಗಳನ್ನು ಕುರಿತು, “ ಎಲೈ ಋಷಿಗಳಿರಾ, ಆ ಪ್ರತರ್ದನರಾಜನು ಮನೆಗೆ ಹೋಗಿ ಎಲ್ಲಾ ಬ್ರಾಹ್ಮಣರನ್ನೂ ಆ ವಿಷಯ ಚರ್ಚೆಗಾಗಿ ಬರಹೇಳಿದನು. ಅಷ್ಟರಲ್ಲಿಯೇ ಪರಮಪಾಪಿಯಾದ ಕಲಿಪುರುಷನು ಆ ಬ್ರಾಹ್ಮಣರಲ್ಲಿ ಅಂತರ್ಭಾವವನ್ನು ಹೊಂದಿದ್ದನು.

೨. ಬ್ರಾಹ್ಮಣರು ವಿಷಯ ಚರ್ಚೆಗಾಗಿ ಕುಳಿತಮೇಲೆ ಒಬ್ಬ ಬ್ರಾಹ್ಮಣನು ರಾಜನಲ್ಲಿಗೆ ಬಂದು, ರಾಜನಿಗೆ ವಿರುದ್ಧಾಭಿಪ್ರಾಯವನ್ನೇ ಸೂಚಿಸಿದನು. ಅದರಂತೆಯೇ ಚರ್ಚೆಯೂ ಸಹ ಪರಸ್ಪರವಾಗಿ ರಾಗದ್ವೇಷಾದಿಗಳಿಂದ ಕೂಡಿ ನಡೆಯಲಾರಂಭಿಸಿತು.

೩. ಆಗ ಕೆಲವರು ಮೌನವನ್ನು ತಾಳಿದರು. ಮತ್ತೆ ಕೆಲವರು ಇದ್ದದ್ದನ್ನು ಇದ್ದ ಹಾಗೇ ಹೇಳುತ್ತಿದ್ದರು. ಹಲವರು ಹೇಳಿದ್ದನ್ನೇ ಪುನಃ ಪುನಃ ಅನುವಾದ ಮಾಡುತ್ತಿದ್ದರು. ಹೀಗೆ ಕಲಿಪ್ರಭಾವದಿಂದ ಬ್ರಾಹ್ಮಣರ ಮಾತು ಭಿನ್ನಭಿನ್ನವಾಗಿತ್ತು.

ಇತಿ ಕೋಲಾಹಲೇ ವೃತ್ತೇ ರಾಜಚೇತಸಿ ನಿರ್ಣಯೇ ।
ಜಾತೇ ಲೋಕೇ ನಾಸ್ತಿಕತಾಂ ಬಹವಃ ಪ್ರತಿಪೇದಿರೇ ॥ ೪ ॥

ರಾಜಾ ವೇತ್ತಿ ಮಹಾಮೂರ್ಖಂ ನ ತು ಮಾಯಾವಿನಂ ದ್ವಿಜಂ ।
ಲೋಕೇ ತು ಭ್ರಾಂತಿಮಾಪನ್ನೇ ರಾಜಾ ಚಿಂತಾಪರೋಽಭವತ್ ॥ ೫ ॥

ಈಶ್ವರಂ ಹಂತಿ ದುಷ್ಟಾತ್ಮಾ ವಧ್ಯೋಽಯಂ ಮನು ಶಾಸ್ತ್ರತಃ ।
ಪರಂ ತು ಲೋಕೋ ಬ್ರಹ್ಮಘ್ನಂ ಮಿಥ್ಯಾ ಮಾಂ ತು ವದಿಷ್ಯತಿ ॥ ೬ ॥

॥ ಸೂತ ಉವಾಚ ॥

ಏತಸ್ಮಿನ್ ಸಮಯೇ ಪ್ರಾಪ್ತೇ ಲೋಕಪೂರ್ವಪಿತಾಮಹಾಃ ।
ಸ್ವರ್ಗಾದ್ಭ್ರಷ್ಟಾ ಹ್ಯನೇಕಾನಿ ನರಕಾಣಿ ಪ್ರಪೇದಿರೇ ॥ ೭ ॥

---

೪. ಹೀಗೆ ಕೋಲಾಹಲವಾದದ್ದನ್ನು ನೋಡಿ ರಾಜನು ಯಾವ ನಿರ್ಣಯಕ್ಕೂ ಮನಸ್ಸಿಡಲಿಲ್ಲ. ರಾಜನ ಸಂದೇಹವು ನಿವೃತ್ತಿಯಾಗಲಿಲ್ಲ. ಅಂತೂ ಒಟ್ಟಿನಲ್ಲಿ ಅಲ್ಲಿ ನೆರೆದ ಬ್ರಾಹ್ಮಣರಲ್ಲಿ ಬಹುಮಂದಿ ನಾಸ್ತಿಕವಾದವನ್ನೇ ಸ್ಥಿರಪಡಿಸಿದರು.

೫. ಇಷ್ಟಾದರೂ ರಾಜನು, ಆ ವೈಷ್ಣವಾಭಾಸನು ಮಾಯಾವಿಯೆಂಬುದನ್ನು ಅರಿಯಲಾರದೇ ಹೋದನು. ಅಷ್ಟಲ್ಲದೆ ಜನರೂ ಆತನ ಅಭಿಪ್ರಾಯವನ್ನೇ ಹಿಂಬಾಲಿಸುತ್ತಿರಲು, ರಾಜನಿಗೆ ಅವನ ವಿಷಯದಲ್ಲಿ ಅತ್ಯಾಶ್ಚರ್ಯವುಂಟಾಯಿತು.

೬. ಆದರೆ ರಾಜನು, ಆ ವೈಷ್ಣವಾಭಾಸನನ್ನು ದುಷ್ಟನೆಂದೂ, ಈಶ್ವರದೂಷಕನೆಂದೂ ತಿಳಿದು, ಅವನನ್ನು ಕೊಲ್ಲಿಸಲು ರಾಜಧರ್ಮವಿರುವುದೆಂದು ಯೋಚಿಸಿದನು. ಆದರೆ, ಜನರು ತನ್ನನ್ನು ಬ್ರಹ್ಮಘ್ನನೆನ್ನುವರು ಎಂದು ಹೆದರಿ ಸುಮ್ಮನಿದ್ದನು.

೭. ಸ್ವಲ್ಪ ಕಾಲದಲ್ಲಿ ಜನರೆಲ್ಲರೂ ಆ ವೈಷ್ಣವಾಭಾಸನ ಉಪದೇಶದಂತೆ ನಾಸ್ತಿಕರಾಗಲು ಅವರ ಪಿತೃಗಳೆಲ್ಲರೂ ಸ್ವರ್ಗದಿಂದ ನರಕಕ್ಕೆ ಇಳಿಯುತ್ತಾ ಬಂದರು.

ಯೇಷಾಂ ಪುತ್ರಾಶ್ಚ ಪೌತ್ರಾಶ್ಚ ಪ್ರತಿಪೌತ್ರಾಸ್ತಥಾಪರೇ ।
ಮಾತಾಮಹಾದಿವರ್ಗಾಶ್ಚ ಸಖಿಸಂಬಂಧಿಬಾಂಧವಾಃ ॥ ೮ ॥

ಶಿವಾವಗಣನೋದ್ಭೂತಪಾಕಾ ಯಮಲೋಕಗಾಃ ।
ಸುಕೃತಂ ಭಸ್ಮತಾಂ ಯಾತಂ ಮದ್ಯಾದ್ಗಂಗೋದಕಂ ಯಥಾ ॥ ೯ ॥

ಏತಸ್ಮಿನ್ನೇವ ಕಾಲೇ ತು ಕಮಲಾಹೃದಯಂಗಮಃ ।
ಸುಪ್ತ ಆಕ್ರಂದಮಕರೋಚ್ಛೋಣಿತೌಘಪರಿಪ್ಲುತಃ ॥ ೧೦ ॥

ಲಕ್ಷ್ಮೀರ್ದೃಷ್ಟ್ವಾಽಥ ತದ್ರೂಪಂ ವಿಹ್ವಲಂ ಭಯವಿಹ್ವಲಾ ।
ಪ್ರಾಪ್ತ್ಯಾಶ್ಚರ್ಯಂ ಮಹಾಘೋರಂ ರುರೋದ ಭೃಶದುಃಖಿತಾ ॥ ೧೧ ॥

॥ ಲಕ್ಷ್ಮೀರುವಾಚ ॥

ವೇದಾಂತವೇದ್ಯ ಪುರುಷೇಶ್ವರ ದೇವದೇವ ।
ತ್ರೈಲೋಕ್ಯನಾಥ ಕಿಮಿದಂ ತ್ವಯಿ ದೃಶ್ಯತೇಽದ್ಯ ।

೮-೯. ಜನರು ಶಿವನಿಂದಾಪರರಾದೊಡನೆಯೇ ಅವರ ತಂದೆತಾಯಿಗಳೂ, ಅಜ್ಜಮುತ್ತಜ್ಜಂದಿರೂ, ಮಾತಾಮಹಾದಿಗಳ ಗುಂಪೂ, ಸ್ನೇಹಿತರೂ, ಬಂಧುಗಳೂ ಸಹ ಯಮಲೋಕಕ್ಕೆ ಹೋಗುತ್ತಾ ಬಂದರು. ಅವರು ಮಾಡಿದ್ದ ಪುಣ್ಯವೆಲ್ಲವೂ ಈ ಶಿವನಿಂದಾರೂಪವಾದ ಪಾಪದಿಂದ, ಗಂಗೋದಕವು ಮದ್ಯಸಂಪರ್ಕದಿಂದ ಅಶುಚಿಯಾಗುವಂತೆ ಭಸ್ಮವಾಯಿತು. ಅಂತೂ ಶಿವನಿಂದೆಯು ಸರ್ವರನ್ನೂ ನರಕಭಾಗಿಗಳನ್ನಾಗಿಮಾಡಿತು.

೧೦. ಹೀಗಿರಲು ಶ್ರೀಮನ್ನಾರಾಯಣನು ಒಂದು ಸಾರಿ ಮಲಗಿದ್ದಾಗ ದೊಡ್ಡದಾಗಿ ಆಕಳಿಸಿದನು. ಆಗ ವಿಷ್ಣುವಿನ ಬಾಯಿಂದ ರಕ್ತಪ್ರವಾಹವು ಬರಲಾರಂಭಿಸಿತು.

೧೧. ಲಕ್ಷ್ಮೀದೇವಿಯು ಈ ಭಯಂಕರಾಕಾರವನ್ನು ನೋಡಿ ಭಯಚಕಿತಳಾಗಿ ಆಶ್ಚರ್ಯಪಟ್ಟು ಕೊನೆಗೆ ದುಃಖದಿಂದ ಅಳಲಾರಂಭಿಸಿದಳು.

೧೨. ಅನಂತರ ಮಹಾವಿಷ್ಣುವನ್ನು ದೇವಿಯು ಹೀಗೆ ಪ್ರಾರ್ಥಿಸತೊಡಗಿದಳು. '' ಎಲೈ ದೇವದೇವನೇ, ಉಪನಿಷತ್ಪ್ರತಿಪಾದ್ಯನೇ, ಪುರುಷಶ್ರೇಷ್ಠನಾದವನೇ,

ಆಕಾರಮಾತ್ರರಹಿತಃ ಪುರುಷಃ ಪುರಾಣ ।
ಸ್ತ್ವಯ್ಯೇವ ವಿಶ್ವಮಿಹ ರಜ್ಜುಭುಜಂಗಮಾತ್ರಂ ॥ ೧೨ ॥
ಶೈಲಾಃ ಪತಂತಿ ಜಲಧಿರ್ಮರುತಾಮುಪೈತಿ ।
ಸೂರ್ಯಾದಯೋ ಹತರುಚಃ ಪೃಥಿವೀ ಪರಾಣುಃ ।
ಭೂತಾನಿ ಚಾಚ್ಯುತ ವಿಭೋ ವಿಲಯಂ ಪ್ರಯಾಂತಿ ।
ತ್ವದ್ರೋಮಮಾತ್ರಮಪಿ ನೈವ ಚಲೇತ್ಕ್ಷಣಾರ್ಧಂ ॥ ೧೩ ॥

॥ ಶ್ರೀನಾರಾಯಣ ಉವಾಚ ॥

ಉಕ್ತಂ ತ್ವಯಾ ತದಪಿ ಲಕ್ಷ್ಮಿ ತಥೈವ ಕಿಂತು ।
ಮತ್ಸ್ವಾಮಿನೋಽವಗಣನಾ ನ ಹಿ ಶಕ್ಯತೇ ಮೇ ।
ಕೃತ್ವಾಪಿ ಪೂಜ್ಯತಮಮೂರ್ತಿಮಿಮಾಂ ಗಿರೀಶಂ ।
ನೋ ಮನ್ಯತೇ ತದಿಹ ವಜ್ರಸಮಂ ಮಮೈವ ॥ ೧೪ ॥

ಮೂರು ಲೋಕದ ಒಡೆಯನೇ, ನಿನ್ನಲ್ಲಿ ಕಾಣುವ ಈ ಘೋರರೂಪವೇನು? ನೀನು, ಆಕಾರ, ಗುಣ ಇವುಗಳನ್ನು ಬಿಟ್ಟಿರುವ ಆದಿಪುರುಷನಲ್ಲವೇ ? ನಿನ್ನಲ್ಲಿ ಕಂಡ ಬರುವ ಈ ಪ್ರಪಂಚವೆಲ್ಲವೂ ಹಗ್ಗದಲ್ಲಿ ಹಾವಿನ ಭ್ರಾಂತಿಯುಂಟಾಗುವಂತೆ ಭ್ರಾಂತಿ ದಾಯಕವಾದುದಲ್ಲವೆ ?

೧೩. ಎಲೈ ಮಹಾವಿಷ್ಣುವೇ, ಲೋಕದಲ್ಲಿ ಪರ್ವತಗಳು ಉರುಳಿಹೋಗುತ್ತವೆ . ಸಮುದ್ರಗಳು ಬತ್ತಿಹೋಗುತ್ತವೆ. ಸೂರ್ಯಾದಿಗ್ರಹಗಳು ಮಂಕಾಗುತ್ತವೆ. ಭೂಮಿಯು ಪರಮಾಣುವಾಗಿ ಸೂಕ್ಷ್ಮವಾಗಬಹುದು. ಹೀಗೆ ಪಂಚಭೂತಗಳಿಗೂ ನಾಶವು ತೋರುತ್ತದೆ. ಅಷ್ಟಾದರೂ ನಿನ್ನ ದೇಹದಲ್ಲಿ ಒಂದು ರೋಮವೂ ಸಹ ಅಲ್ಲಾಡಲಾರದು. ಶಾಶ್ವತಪುರುಷನಾದ ನಿನ್ನಲ್ಲಿ ಈಗ ಉಂಟಾಗಿರುವ ವಿಕಾರವೇನು ''

೧೪. ಎಂದು ಲಕ್ಷ್ಮೀದೇವಿಯು ನಾರಾಯಣನನ್ನು ಪ್ರಾರ್ಥಿಸಲಾಗಿ, ನಾರಾಯಣನು " ಎಲೈ ದೇವಿಯೇ, ನೀನು ಹೇಳಿದ್ದೆಲ್ಲವೂ ನಿಜ. ಆದರೆ ನನ್ನ ಸ್ವಾಮಿಯಾದ ಪರಮೇಶ್ವರನನ್ನು ಯಾರಾದರೂ ತಿರಸ್ಕರಿಸಿದರೆ ಅದು ನನಗೆ ಸರಿಹೋಗುವುದಿಲ್ಲ. ಲೋಕದಲ್ಲಿ ಮಹೇಶ್ವರನು ಅತ್ಯಂತ ಪೂಜ್ಯನೆಂದು ತಿಳಿದಿದ್ದರೂ ಜನರು ಪರಶಿವನನ್ನು ಹಿಯ್ಯಾಳಿಸುವರು. ಅದನ್ನು ಕೇಳಿದರೆ ನನಗೆ ವಜ್ರಾಯುಧದಿಂದ ಹೊಡೆದಷ್ಟು ನೋವಾಗುವುದು '' ಎಂದು ಅದರ ಪರಿಣಾಮವೇ ಈ ನನ್ನ ವಿಕಾರ ಎಂದು ಹೇಳಿದನು.

॥ ಲಕ್ಷ್ಮೀರುವಾಚ ॥

ಸರ್ವಾತ್ಮಾ ಸರ್ವಪಿತ್ಕರ್ತಾ ವಕ್ತಾ ಧರ್ತಾsವ್ಯಯಃ ಪ್ರಭುಃ ।
ತ್ವಂ ಸಾಕ್ಷೀ ಸರ್ವಲೋಕಾನಾಂ ತ್ವತ್ತಃ ಪರತರೋsಸ್ತಿ ಕಃ ॥ ೧೫ ॥

॥ ಶ್ರೀನಾರಾಯಣ ಉವಾಚ ॥

ಅಸ್ತಿ ಸರ್ವಂ ವರಾರೋಹೇ ಮಯಿ ತತ್ತಥ್ಯಮೇವ ಹಿ ।
ಶ್ರೀಮಹೇಶವರಾಲ್ಲಬ್ಧಂ ಮದೀಯಂ ನ ಹಿ ಕಿಂಚನ ॥ ೧೬ ॥

ಏಕಃ ಸೃಜತಿ ಭೂತಾನಿ ಮತ್ಸಮಾನಿ ಕಿಯಂತ್ಯಪಿ ।
ತತ್ತತ್ತ್ವಂ ವೇದ್ಮ್ಯಹಂ ದೇವಿ ಮದೀಯಾಃ ಕೇಚನಾಪರೇ ॥ ೧೭ ॥

---

೧೫. ಅದಕ್ಕೆ ಲಕ್ಷ್ಮಿಯು “ ಎಲೈ ಸರ್ವೇಶ್ವರನೇ, ನೀನು ಲೋಕವನ್ನೆಲ್ಲಾ ಸೃಷ್ಟಿಸತಕ್ಕವನು. ನಾಶರಹಿತನು. ಸರ್ವಜ್ಞನು. ಹಾಗೆಯೇ ಲೋಕದ ರಕ್ಷಣೆಗೂ ನೀನೇ ಪ್ರಭುವಾಗಿದ್ದೀಯೆ. ಸಮಸ್ತ ಕರ್ಮಗಳಿಗೂ ನೀನೇ ಸಾಕ್ಷಿಯಂತಿರುವೆ. ನಿನಗಿಂತ ದೊಡ್ಡದಾದ ವಸ್ತುವು ಜಗತ್ತಿನಲ್ಲಿ ಬೇರೊಂದಿಲ್ಲ. ನಿನಗೆ ನಾಶವೆಂಬುದೇ ಇಲ್ಲ” ಎಂದು ಪುನಃ ಪತಿಯನ್ನು ಸ್ತುತಿಸಿದಳು.

೧೬. ಇದನ್ನು ಕೇಳಿದ ನಾರಾಯಣನು ಲಕ್ಷ್ಮೀದೇವಿಗೆ ಹೀಗೆ ಬೋಧಿಸ ತೊಡಗಿದನು. “ ಎಲೈ ಉತ್ತಮಸ್ತ್ರೀಯೇ, ನೀನು ಹೇಳಿದಂತೆ ನನ್ನಲ್ಲಿ ಸಮಸ್ತ ಶಕ್ತಿಗಳೂ ಇವೆ. ಆದರೆ ಆ ಶಕ್ತಿಗಳೆಲ್ಲವೂ ಪರಮೇಶ್ವರನ ವರದಿಂದ ಬಂದವುಗಳೇ ಹೊರತು, ನನ್ನಲ್ಲಿ ಯಾವ ವಿಧವಾದ ನೈಸರ್ಗಿಕ ಮಹತ್ತ್ವವೂ ತೋರಿಬರುವುದಿಲ್ಲ.

೧೭. ಎಲೈ ದೇವಿಯೇ, ಪರಮೇಶ್ವರನೊಬ್ಬನೇ ನನ್ನಂತಹ ಅನೇಕ ವ್ಯಕ್ತಿಗಳನ್ನು ಸೃಷ್ಟಿಮಾಡುವವನು. ಸಮಸ್ತ ಪ್ರಪಂಚವನ್ನೂ ಸೃಷ್ಟಿಮಾಡುವ ಸಾಮರ್ಥ್ಯವು ಆ ಪರಶಿವನೊಬ್ಬನಲ್ಲಿಯೇ ಇರುವುದು. ಈ ತತ್ತ್ವವನ್ನು ನಾನು ಚೆನ್ನಾಗಿ ಅರಿತಿರುವೆನು. ಇನ್ನೂ ಅನೇಕ ದೇವತೆಗಳು ಇದನ್ನು ತಿಳಿದಿರುವರು.

ವೇದವೇದಾಂಗವೇತ್ತೄಣಾಂ ಸಹಸ್ರಾಣ್ಯಗ್ರಜನ್ಮನಾಂ ।
ಹನನಾನ್ಮುಚ್ಯತೇ ಜೀವೋ ನ ತು ಶ್ರೀಶಿವಹೇಳನಾತ್ ॥ ೧೮ ॥

ಗುರ್ವಂಗನಾಗಮನಕೃತ್ಸದಾ ಮದ್ಯನಿಷೇವಕಃ ।
ಬ್ರಾಹ್ಮಣಸ್ವರ್ಣಹಾರೀ ಚ ಕದಾಚಿನ್ಮುಚ್ಯತೇ ಜನಃ ॥ ೧೯ ॥

ಸ್ತ್ರೀಘ್ನೋ ನೃಪಘ್ನಶ್ಚ ತಥಾ ವಿಶ್ವಾಸಘಾತಕಃ ।
ಕೃತಘ್ನೋ ನಾಸ್ತಿಕೋ ಲುಬ್ಧಃ ಕದಾಚಿನ್ಮುಚ್ಯತೇ ಜನಃ ॥ ೨೦ ॥

ನ ತು ಶ್ರೀರುದ್ರಸಾಮಾನ್ಯದರ್ಶೀ ಮುಚ್ಯೇತ ಬಂಧನಾತ್ ।
ವಿರಂಚಿವಿಷ್ಣುಶಕ್ರೇಭ್ಯಃ ಸರ್ವೋತ್ಕೃಷ್ಟಂ ನ ಜಾಯತೇ ॥ ೨೧ ॥

---

೧೮. ಲಕ್ಷ್ಮಿಪ್ರಿಯೇ, ವೇದವೇದಾಂಗಗಳನ್ನು ತಿಳಿದಿರುವ ಸಹಸ್ರ ಜನ ಬ್ರಾಹ್ಮಣರನ್ನು ಕೊಂದು, ಮನುಷ್ಯನು ಆ ಪಾಪಗಳನ್ನು ಹೇಗೋ ನಿವಾರಿಸಿಕೊಳ್ಳಬಹುದು. ಶಿವನಿಂದನೆಯಿಂದುಂಟಾದ ದುಷ್ಕೃತವನ್ನು ಮಾತ್ರ ಎಂದಿಗೂ ಕಳೆದುಕೊಳ್ಳಲಾರನು.

೧೯. ಗುರುಪತ್ನೀಗಮನ, ಮದ್ಯಪಾನ, ಬ್ರಾಹ್ಮಣ ಸುವರ್ಣಾಪಹಾರ, ಇವೇ ಮೊದಲಾದ ಅಕೃತ್ಯಗಳಿಂದ ಬರುವ ಪಾಪವನ್ನು ಮನುಷ್ಯನು ಕಷ್ಟದಿಂದ ನಿವಾರಿಸಿಕೊಳ್ಳಬಹುದು.

೨೦. ಸ್ತ್ರೀಹತ್ಯ, ಗೋಹತ್ಯ, ರಾಜಹತ್ಯ, ವಿಶ್ವಾಸದ್ರೋಹ, ಉಪಕಾರದ ಮರೆವು, ನಾಸ್ತಿಕತನ, ಕಾರ್ಪಣ್ಯ ಈ ದುಷ್ಕೃತ್ಯಗಳ ದುರಿತದಿಂದ ಜೀವಿಯು ಹೇಗೋ ಪಾರಾಗುವನು.

೨೧. ಆದರೆ ಮಹೇಶ್ವರನನ್ನು ಸಾಮಾನ್ಯದೇವತೆಯೆಂದು ತಿಳಿದು ಅಲ್ಲಗಳೆಯುವವರು ಎಂದಿಗೂ ಮುಕ್ತಿಯನ್ನು ಸಂಪಾದಿಸಲಾರರು. ಯಾರು ಶಿವನನ್ನು ಬ್ರಹ್ಮ, ವಿಷ್ಣು, ಇಂದ್ರ ಇವರೆಲ್ಲರಿಗಿಂತ ದೊಡ್ಡವನನ್ನಾಗಿ ತಿಳಿಯುವರೋ, ಅಂತಹವರು ಪುನಃ ಭೂಲೋಕದಲ್ಲಿ ಜನ್ಮವೆತ್ತಲಾರರು.

ವಿಷ್ಣುನಾ ಯದಿ ವಾ ತುಲ್ಯಂ ಮುಚ್ಯಂತೇ ನೈವ ಜಂತವಃ ।
ಸ್ವಾಮೀ ಮದೀಯಃ ಶ್ರೀಕಂಠಸ್ತಸ್ಯ ದಾಸೋಽಸ್ಮಿ ಸರ್ವದಾ ॥ ೨೨ ॥

॥ ಲಕ್ಷ್ಮೀರುವಾಚ ॥

ಗಚ್ಛಾವಸ್ತತ್ರ ವೈಕುಂಠ ಯತ್ರ ಸ್ವಾಮ್ಯಸ್ತಿ ತೇ ವಿಭೋ ।
ಕೈಲಾಸಪರ್ವತೇ ರಮ್ಯೇ ಪ್ರಣಮಾಮಃ ಸದಾಶಿವಂ ॥ ೨೩ ॥

॥ ಸೂತ ಉವಾಚ ॥

ತತಸ್ತೌ ಗರುಡಾರೂಢೌ ಗತ್ವಾ ಕೈಲಾಸಪರ್ವತಂ ।
ನಾನಾವಿಧೈಃ ಸ್ತೋತ್ರಪದ್ಯೈಃ ಸಂತುಷ್ಟಂ ಚಕ್ರತುಃ ಕ್ಷಣಾತ್ ॥ ೨೪ ॥

ತತೋ ಬ್ರಹ್ಮಾದಯೋ ದೇವಾಃ ಸಿದ್ಧಾಸ್ತತ್ರಾಽಽಗತಾ ಗಿರೌ ।
ರುದ್ರಃ ಕೌತೂಹಲಪ್ರೇಪ್ಸುಃ ಸರ್ವೈಸ್ತೈಃ ಪರಿವಾರಿತಃ ॥ ೨೫ ॥

---

೨೨. ಪರಮೇಶ್ವರನೂ, ವಿಷ್ಣುವೂ ಸರಿಸಮಾನರೆಂದು ತಿಳಿಯುವುದೂ ಸಹ ಪಾಪಕರವಾದದ್ದೇ. ಅಂತಹವನು ಎಂದೂ ಮುಕ್ತನಾಗಲಾರನು. ಯಾವಾಗಲೂ ಎಲೈ ಲಕ್ಷ್ಮೀದೇವಿಯೇ, ನಾನು ಪರಮೇಶ್ವರನದಾಸನು. ನನಗೆ ಸ್ವಾಮಿಯು ಶ್ರೀಕಂಠನೊಬ್ಬನೇ " ಎಂದು ಲಕ್ಷ್ಮಿಗೆ ತಿಳಿಸಲಾಗಿ.

೨೩. ಲಕ್ಷ್ಮೀದೇವಿಯು " ಎಲೈ ಸ್ವಾಮಿಯೇ, ಈಗ ನಿನ್ನ ಸ್ವಾಮಿಯು ನೆಲಸಿರುವ ರಮ್ಯವಾದ ಕೈಲಾಸಪರ್ವತಕ್ಕೆ ಹೋಗಿ, ಅಲ್ಲಿ ಪರಶಿವನನ್ನು ದರ್ಶನಮಾಡಿ ನಮಸ್ಕರಿಸಿ ಬರೋಣ" ಎಂದು ಕೇಳಿಕೊಳ್ಳಲು

೨೪. ಹಾಗೆಯೇ ಆಗಲೆಂದು ಮಹಾವಿಷ್ಣುವು ಲಕ್ಷ್ಮಿಯೊಡನೆ ಗರುಡಾರೂಢನಾಗಿ ಕೈಲಾಸಕ್ಕೆ ಹೋಗಿ, ಅಲ್ಲಿ ವಿಧವಿಧವಾದ ಸ್ತುತಿಗಳಿಂದ ಪರಶಿವನನ್ನು ಸ್ತೋತ್ರ ಮಾಡಿದರು. ಇದರಿಂದ ಶಂಕರನು ಸಂತುಷ್ಟನಾದನು.

೨೫. ಆ ವೇಳೆಗೆ ಸರಿಯಾಗಿ ಬ್ರಹ್ಮನೇ ಮೊದಲಾದ ಸಮಸ್ತ ದೇವತೆಗಳೂ, ಸಿದ್ಧಸಾಧ್ಯರೂ ಆ ಕೈಲಾಸಕ್ಕೆ ಬಂದರು. ಇವರನ್ನೆಲ್ಲಾ ನೋಡಿ ಕುತೂಹಲದಿಂದ ಪರಮೇಶ್ವರನು ಒಡನೆಯೇ ಅವರೆಲ್ಲರಿಗೂ ಗೋಚರನಾದನು.

ಭವಾನೀಸಹಿತಸ್ತತ್ರ ಗತೋ ಯತ್ರ ಪ್ರತರ್ದನಃ ।
ಸರ್ವದೇವವಿಮಾನಾನಾಂ ಮಧ್ಯೇ ತಿಷ್ಠತಿ ಶಂಕರಃ ॥ ೨೬ ॥

॥ ಶ್ರೀಮಹೇಶ ಉವಾಚ ॥

ಕಥಯಂತು ಕಥಂ ಹ್ಯೇತೇ ಮಿಲಿತಾಃ ಸರ್ವನಿರ್ಜರಾಃ ।
ಕಿಂ ಕಾರ್ಯಂ ಕಿಮಪೂರ್ವಂ ವಾ ರಾಜಾ ಚಿಂತಾತುರಃ ಕಥಂ ॥ ೨೭ ॥

॥ ದೇವಾ ಊಚುಃ ॥

ಸ್ವಾಮಿನ್ ಪ್ರತರ್ದನೋ ರಾಜಾ ವಿಧಿಲಬ್ಧವರೋಽಭವತ್ ।
ವೇದಮಾರ್ಗಪ್ರವಕ್ತಾ ಚ ಸ್ವಯಂ ತಸ್ಯ ಪ್ರವರ್ತಕಃ ॥ ೨೮ ॥

ಸೃಷ್ಟಿರಕ್ಷಾರ್ಥಮಸ್ಮಾಭಿಃ ಕಪಟಂ ಕೃತಮೀಶ್ವರ ।
ಸರ್ವಧಾತುಶ್ಚ ಭವತೋ ಹೇಳನಂ ಕಾರಿತಂ ಸುರೈಃ ॥ ೨೯ ॥

---

೨೬. ಹಿಂದೆ ಪ್ರತರ್ದನನು ಎಲ್ಲಿ ನಿಂತು ತಪಸ್ಸುಮಾಡಿ ಬ್ರಹ್ಮನಿಂದ ವರ ಪಡೆದಿದ್ದನೋ, ಅಲ್ಲಿಗೆ ಈಶ್ವರನು ಬಂದು ನಿಂತನು. ಸಮಸ್ತ ದೇವತೆಗಳೂ ವಿಮಾನಗಳಲ್ಲಿ ಸುತ್ತಲೂ ಬಂದು ನಿಂತರು. ಅಲ್ಲಿಗೆ ಪ್ರತರ್ದನನೂ ಬಂದನು.

೨೭. ಇವರೆಲ್ಲರನ್ನೂ ನೋಡಿ ಮಹೇಶ್ವರನು ಎಲೈ ದೇವತೆಗಳೇ, ಇದೇನು? ನೀವೆಲ್ಲರೂ ಒಟ್ಟಾಗಿ ಇಲ್ಲಿಗೆ ಹೀಗೆ ಬರಲು ಕಾರಣವೇನು? ಈಗ ನನ್ನಿಂದ ಆಗ ಬೇಕಾಗಿರುವುದೇನು? ಈ ರಾಜನು ಇಷ್ಟು ಚಿಂತಾಕುಲನಾಗಿರಲು ಕಾರಣವೇನು?" ಎಂದು ಕೇಳಲು,

೨೮. ದೇವತೆಗಳು "ಎಲೈ ಸ್ವಾಮಿಯೇ, ಈ ಪ್ರತರ್ದನರಾಜನು ಬ್ರಹ್ಮನಿಂದ ವರವನ್ನು ಪಡೆದು, ವೇದಮಾರ್ಗದಲ್ಲಿ ನಡೆಯತಕ್ಕ ಶಕ್ತಿಯನ್ನು ಸಂಪಾದಿಸಿದನು. ಹಾಗೆಯೇ ವೈದಿಕಕರ್ಮಗಳಲ್ಲಿ ಆಸಕ್ತನಾಗಿ ಅದರಲ್ಲಿ ಪ್ರವರ್ತಕನೂ ಆದನು.

೨೯. ಹೀಗೆ ಈ ರಾಜನು ರಾಜ್ಯಭಾರಮಾಡುತ್ತಿದ್ದಾಗ, ಸೃಷ್ಟವಾದ ಜಗತ್ತಿನ ರಕ್ಷಣೆಗಾಗಿ ನಾವು ಒಂದು ತಂತ್ರವನ್ನು ಹೂಡಿದೆವು. ಸಮಸ್ತಲೋಕಸೃಷ್ಟಿಗೂ ಮೂಲಕಾರಣನಾದ ನಿನ್ನನ್ನು ಜನರು ನಿಂದಿಸುವಂತೆ ಮಾಡಿದೆವು.

ತತ್ಕ್ಷಮಸ್ವ ಮಹಾದೇವ ಕಿಂನರೋಽಯಂ ಪ್ರವರ್ತಿತಃ ।
ಕಲ್ಪಿತೋ ವೈಷ್ಣವೋಽಸ್ಮಾಭಿಸ್ತವ ನಿಂದಾಪರಾಯಣಃ ॥ ೩೦ ॥

॥ ಸೂತ ಉವಾಚ ॥

ಏತಸ್ಮಿನ್ನೇವ ಕಾಲೇ ತು ರಾಜಾ ವೃತ್ತಾಂತಮೇಯಿವಾನ್ ।
ತೀವ್ರಂ ಖಡ್ಗಂ ಸಮಾದಾಯ ಹತವಾನ್ ಕಿಂನರಂ ಕ್ರುಧಾ ॥ ೩೧ ॥

ತತ್ಪಕ್ಷಪಾತಿನೋ ಯೇ ಚ ತೇಷಾಂ ಶೀರ್ಷಾಣಿ ಕಂಧರಾತ್ ।
ಪೃಥಕ್ಕೃತಾನಿ ಪಶ್ವಾದ್ಯಾ ಹತಾ ಅಶ್ವಾ ಅನೇಕಶಃ ॥ ೩೨ ॥

ನ ತಂ ವಾರಯತೇ ಕಶ್ಚಿದ್ರಾಜಾನಂ ಪುಣ್ಯಚೇತಸಂ ।
ಮಹಾದೇವೇನ ಶಮಿತಃ ಕ್ರೋಧಸ್ತಸ್ಯ ಮಹಾತ್ಮನಃ ॥ ೩೩ ॥

---

೩೦. ಮಹಾದೇವನೇ, ಈ ನಮ್ಮ ಅಕೃತ್ಯವನ್ನು ಕ್ಷಮಿಸು. ಈ ಕಾರ್ಯಕ್ಕೆ ವೈಷ್ಣವವೇಷಧಾರಿಯಾಗಿ ನಮ್ಮ ಪ್ರೇರಣೆಯಂತೆ ಹೋಗಿದ್ದವನು ಈ ಕಿನ್ನರನೇ. ಈತನು ನಿನ್ನ ನಿಂದನೆಯನ್ನೇ ಮುಖ್ಯ ಧ್ಯೇಯವನ್ನಾಗಿಟ್ಟು ಭೂಮಿಯಲ್ಲಿ ಶಿವ ನಿಂದಾಪರವಾದ ವೈಷ್ಣವಮತವನ್ನು ಕಟ್ಟಿರುವನು.”

೩೧. ಹೀಗೆಂದು ದೇವತೆಗಳು ಈಶ್ವರನೊಡನೆ ಹೇಳಿದ್ದನ್ನು ಪ್ರತರ್ದನನು ಕೇಳಿ, ಒಡನೆಯೇ ತನ್ನ ಹರಿತವಾದ ಕತ್ತಿಯಿಂದ ಆ ಕಿನ್ನರನನ್ನು ಕತ್ತರಿಸಿದನು.

೩೨. ಇನ್ನೂ ಆ ಕಿನ್ನರನ ಅನುಯಾಯಿಗಳಾಗಿ, ಅವನ ಮತವನ್ನೇ ಅಂಗೀಕರಿಸಿಕೊಂಡಿದ್ದ ಇತರರ ತಲೆಗಳನ್ನೂ ಕತ್ತರಿಸಿದನು. ಮತ್ತು ಕಿನ್ನರನು ಗುರುವೆಂದು ಭಾವಿಸಿ, ಅವನಿಗೆ ಕೊಟ್ಟಿದ್ದ ಅಶ್ವಾದಿಗಳನ್ನೂ ಕುದುರೆಗಳನ್ನೂ ಕತ್ತರಿಸಿ ಹಾಕಿದನು.

೩೩. ಹೀಗೆ ಸ್ವೇಚ್ಛೆಯಾಗಿ ವರ್ತಿಸುತ್ತಿದ್ದ, ಕುಪಿತನಾದ ರಾಜನನ್ನು ಯಾರೂ ತಡೆಯಲಾಗಲಿಲ್ಲ. ಶಿವದೂಷಕರನ್ನು ಕೊಲ್ಲುವುದು ಪುಣ್ಯಕರವೆಂದೇ ಅವರ ನಂಬಿಕೆ. ಕೊನೆಗೆ ಮಹಾದೇವನೇ ಮುಂದೆ ಬಂದು, ಅವನ ಕೋಪವನ್ನು ಸಮಾಧಾನಪಡಿಸಿದನು.

ತತಃ ಕೋಲಾಹಲೇ ಶಾಂತೇ ನಂದೀ ಕೌತುಕಪೂರ್ವಕಂ ।
ಯುಯೋಜ ಹಯಶೀರ್ಷೇ ತಚ್ಛರೀರಾಣಿ ಪೃಥಕ್ಪೃಥಕ್ ॥ ೩೪ ॥

ಶೀರ್ಷಾಣಿ ಹಯಗಾತ್ರೈಶ್ಚ ಸಮ್ಯಕ್ಸಂಯೋಜ್ಯ ಬುದ್ಧಿಮಾನ್ ।
ಉವಾಚ ವಚನಂ ತಥ್ಯಂ ದೇವಸಂಸದಿ ಶುದ್ಧಗೀಃ ॥ ೩೫ ॥

ಯೇನ ವಕ್ತ್ರೇಣ ಗಿರಿಶೋ ಹೇಲಿತಸ್ತನ್ಮುಖಂ ಹಯಃ ।
ಮುದ್ರಾಧಾರಣಗರ್ವೇಣ ಹೇಲಿತಸ್ತತ್ತನುರ್ಹಯಃ ॥ ೩೬ ॥

॥ ಬ್ರಹ್ಮೋವಾಚ ॥

ಜಾತಂ ತದಧುನಾ ತಥ್ಯಂ ರಾಜರ್ಷೌ ರಾಜ್ಯಕರ್ತರಿ ।
ಭವಿಷ್ಯಂ ಕಥಯಿಷ್ಯಾಮಿ ತಚ್ಛೃಣುಧ್ವಂ ಸಮಾಹಿತಾಃ ॥ ೩೭ ॥

---

೩೪. ಆಗ ಕೋಲಾಹಲವು ಸ್ವಲ್ಪಮಟ್ಟಿಗೆ ಶಾಂತವಾಯಿತು. ನಂದೀಶ್ವರನು ಇದನ್ನು ನೋಡಿ, ಕುತೂಹಲದಿಂದ ಅಲ್ಲಿದ್ದ ಕಿನ್ನರರ ಮುಂಡಕ್ಕೆ ಕತ್ತರಿಸಿಬಿದ್ದಿದ್ದ ಕುದುರೆಯ ತಲೆಯನ್ನು ಜೋಡಿಸಿದನು.

೩೫. ಹಾಗೆಯೇ ಉಳಿದ ಕುದುರೆಯ ರುಂಡಗಳಿಗೆ ಮನುಷ್ಯರ ಮುಂಡಗಳನ್ನೂ, ಮನುಷ್ಯರ ರುಂಡಗಳಿಗೆ ಹಯಮುಂಡಗಳನ್ನೂ, ಬುದ್ಧಿವಂತಿಕೆಯಿಂದ ಜೋಡಿಸಿ, ತಥ್ಯವಾದಿಯಾದ ನಂದಿಯು ದೇವತೆಗಳ ಮುಂದೆ ಹೀಗೆ ಹೇಳಿದನು.

೩೬. ಯಾವ ಬಾಯಿಂದ ಈಶ್ವರನಿಗೆ ದೂಷಣೆಯು ಹುಟ್ಟಿತ್ತೋ ಅದೇ ಮುಖವು ಈಗ ಕುದುರೆಯ ಮುಂಡಕ್ಕೆ ಸೇರಿದೆ. ಯಾರ ದೇಹವು ಮುದ್ರಾಧಾರಣೆಯಿಂದ ಅಹಂಕಾರಪಟ್ಟಿತ್ತೋ, ಅದು ಈಗ ಕುದುರೆಯ ಮುಂಡವಾಗಿದೆ. ಎಂದು ನಂದಿಯು ನುಡಿಯಲು

೩೭. ಬ್ರಹ್ಮನು ಅದನ್ನು ಕೇಳಿ “ ಎಲೈ ದೇವತೆಗಳೇ, ಇಂಥ ರಾಜರ್ಷಿಯು ರಾಜ್ಯವಾಳುತ್ತಿರುವಾಗ ಇಂತಹ ಅನ್ಯಾಯಗಳು ನಡೆಯಲಾರವು. ಆದರೆ ಮುಂದೆ ಭೂಲೋಕದಲ್ಲಿ ನಡೆಯುವ ಕೆಲವು ಭವಿಷ್ಯದ್ವಿಚಾರಗಳನ್ನು ನಿಮಗೆ ತಿಳಿಸುವೆನು ಕೇಳಿರಿ.

ಘೋರೇ ಕಲಿಯುಗೇ ಪ್ರಾಪ್ತೇ ಮ್ಲೇಚ್ಛೈರ್ವ್ಯಾಪ್ತೇ ಭುವಸ್ತಲೇ ।
ಸರ್ವಾಚಾರಪರಿಭ್ರಷ್ಟಾ ಭವಿಷ್ಯಂತಿ ನರಾಧಮಾಃ ॥ ೩೮ ॥

ತದಾಂಧ್ರದೇಶಮಧ್ಯೇತು ದಾಕ್ಷಿಣಾತ್ಯೋ ಭವಿಷ್ಯತಿ ।
ಬ್ರಾಹ್ಮಣೋ ದುರ್ಭಗಃ ಕಶ್ಚಿದ್ವಿಧವಾಬ್ರಾಹ್ಮಣೀರತಃ ॥ ೩೯ ॥

ತಸ್ಯ ಪಾಪಿಷ್ಠವಿಪ್ರಸ್ಯ ವ್ಯಭಿಚಾರಾತ್ಸುತೋಽನಘಃ ।
ಭವಿಷ್ಯತಿ ಗುಣಾನ್ವೇಷೀ ದ್ವೇವಾದಧ್ಯಯನೋತ್ಸುಕಃ ॥ ೪೦ ॥

ಪದ್ಮಪಾದುಕಮಾಚಾರ್ಯಂ ವರಂ ವೇದಾಂತವಾದಿನಂ ।
ಅದ್ವೈತಾಗಮಬೋದ್ಧಾರಂ ಪ್ರಣಮ್ಯ ಪ್ರಾರ್ಥಯಿಷ್ಯತಿ ॥ ೪೧ ॥
ವಿಪ್ರೋಽಹಂ ಮಧುಶರ್ಮಾಽಸ್ಮಿ ಸ್ವಾಮಿನ್ಮಾಂ ಪಾಠಯ ಪ್ರಭೋ ।
ವೇದಾಂತಶಾಸ್ತ್ರಸರ್ವಂ ಚ ಮಹ್ಯಂ ಪಾಠಯ ಭೋ ಗುರೋ ॥ ೪೨ ॥

---

೩೮. ಮುಂದೆ ಬಹು ಪಾಪಭೂಯಿಷ್ಠವಾದ ಕಲಿಯುಗವು ಬರುವುದು. ಆಗ ಭೂಮಿಯಲ್ಲೆಲ್ಲಾ ಮ್ಲೇಚ್ಛರು ಹೆಚ್ಚುವರು. ಅವರ ಸಂಸರ್ಗದಿಂದ ಸಮಸ್ತ ಜನರೂ ಸಹ ಸಮಸ್ತ ವೈದಿಕಾಚಾರಗಳನ್ನು ಬಿಟ್ಟು ನೀಚಸ್ವಭಾವದವರಾಗುವರು.

೩೯. ಆಗಲೇ ಭರತಖಂಡದ ದಕ್ಷಿಣಭಾಗದಲ್ಲಿ, ಆಂಧ್ರದೇಶಕ್ಕೆ ಸೇರಿದಂತಿರುವ ದೇಶದಲ್ಲಿ ದುಷ್ಕುಲಪ್ರಸೂತನಾದ ಬ್ರಾಹ್ಮಣನೊಬ್ಬನು, ಬ್ರಾಹ್ಮಣ ವಿಧವೆಯೊಬ್ಬಳಲ್ಲಿ ಅನುರಕ್ತನಾಗಿ ವಾಸಿಸುತ್ತಿರುವನು.

೪೦. ಆ ಬ್ರಾಹ್ಮಣಸಂಸರ್ಗದಿಂದ ಆ ವಿಧವೆಯಲ್ಲಿ ಒಬ್ಬ ಪುತ್ರನು ಜನಿಸುವನು. ಆತನು ಗುಣಗ್ರಾಹಿಯಾಗಿ ಯಾವುದೋ ಸಂಸ್ಕಾರವಶದಿಂದ ಅಧ್ಯಯನ ಕರ್ಮದಲ್ಲಿ ಆಸಕ್ತಿಯುಳ್ಳವನಾಗುವನು.

೪೧. ಆತನು ಉತ್ತಮವೇದಾಂತಿಯಾಗಿ ಪದ್ಮಪಾದಾಚಾರ್ಯರೆಂದು ಪ್ರಸಿದ್ಧಿಗೊಂಡಿರುವ ಅದ್ವೈತತತ್ತ್ವನಿಷ್ಣಾತರನ್ನು ಕಂಡು, ಅವರಿಗೆ ಸಾಷ್ಟಾಂಗ ನಮಸ್ಕಾರವೆಸಗಿ ಹೀಗೆ ಪ್ರಾರ್ಥಿಸಿಕೊಳ್ಳುವನು.

೪೨. "ಎಲೈ ಗುರುವೇ ನಾನು ಮಧುವೆಂಬ ಹೆಸರುಳ್ಳ ಬ್ರಾಹ್ಮಣನು. ನನಗೆ ವೇದಾಂತಾಭ್ಯಾಸದಲ್ಲಿ ಬಹು ಆದರವಿದೆ. ಆದ್ದರಿಂದ ದಯವಿಟ್ಟು ವೇದಾಂತ ತತ್ತ್ವಗಳೆಲ್ಲವನ್ನೂ ನನಗೆ ಉಪದೇಶಿಸಬೇಕು." ಎಂದು ಕೇಳಿಕೊಳ್ಳುವನು.

ಆಚಾರ್ಯಃ ಕರುಣಾಮೂರ್ತಿರ್ವಿನಯೇನ ಪರಿಪ್ಲುತಂ ।
ಕರಿಷ್ಯತಿ ಚ ಶಿಷ್ಯಾಣಾಮಗ್ರಣ್ಯಂ ಪ್ರೇಮವತ್ಸಲಃ ॥ ೪೩ ॥

ತತೋ ದಿನೇ ದಿನೇ ಭಕ್ತಿಂ ಕರಿಷ್ಯತಿ ಯಥಾ ಯಥಾ ।
ಗುರುರ್ಭವತಿ ಸಂತುಷ್ಟಃ ಸರ್ವಾಂ ವಿದ್ಯಾಂ ಪ್ರಯಚ್ಛತಿ ॥ ೪೪ ॥

ಏಕದಾ ಗುರುಣಾ ದೃಷ್ಟಃ ಸ್ನಾನಸಂಧ್ಯಾದಿಕಾಃ ಕ್ರಿಯಾಃ ।
ಅಕೃತ್ವಾ ಭೋಜನಪ್ರೇಪ್ಸುರ್ಭವಿಷ್ಯತಿ ನಿರಾಹ್ನಿಕಃ ॥ ೪೫ ॥

ಪೃಷ್ಟೋಽಸೌ ಗುರುಣಾ ತಥ್ಯಂ ಗೋಲಕೋ ಹಿ ವದಿಷ್ಯತಿ ।
ಧರ್ಮಃ ಸಾಧಾರಣೋ ನಾಥ ಕೃತೋಽಯಂ ಕೇನ ಕುಪ್ಯಸಿ ॥ ೪೬ ॥

ತತೋ ವಕ್ಷ್ಯತ್ಯಥಾಚಾರ್ಯಃ ಕಸ್ತೇ ತಾತಃ ಪ್ರಸೂಶ್ಚ ಕಾ ।
ತತೋ ಮೇ ಬ್ರಾಹ್ಮಣಃ ಸ್ವಾಮಿನ್ ಬ್ರಾಹ್ಮಣೀ ಚ ಪ್ರಸೂರ್ಮಮ ॥ ೪೭ ॥

---

೪೩. ದಯಾಶಾಲಿಗಳಾದ ಪದ್ಮಪಾದುಕಾಚಾರ್ಯರು, ಅತಿ ವಿನಯದಿಂದ ಕೇಳಿಕೊಂಡ ಆ ಮಧುವನ್ನು ತನ್ನ ಶಿಷ್ಯನನ್ನಾಗಿ ಮಾಡಿಕೊಂಡು, ಅವನ ವಿಷಯದಲ್ಲಿ ಅತ್ಯಂತಾಭಿಮಾನವುಳ್ಳವರಾಗುವರು.

೪೪. ಮಧುವಾದರೋ ದಿನದಿನಕ್ಕೂ ಗುರುವಿನಲ್ಲಿ ಹೆಚ್ಚು ಭಕ್ತಿಯನ್ನಿಡುತ್ತಾ ಬರುವನು. ಅದರಿಂದ ಗುರುವು ಸಂತುಷ್ಟನಾಗಿ ಅವನಿಗೆ ಸಮಸ್ತ ತತ್ತ್ವವಿದ್ಯೆಯನ್ನೂ ಬೋಧಿಸುವನು.

೪೫. ಒಂದು ದಿವಸ ಆ ಮಧುವು ಸ್ನಾನಸಂಧ್ಯಾವಂದನಾದಿಗಳನ್ನು ಮಾಡದೆ ಭೋಜನಮಾಡಲು ತವಕಪಡುವನು. ಅವನ್ನು ಪದ್ಮಪಾದುಕರು ನೋಡುವರು.

೪೬. ಒಡನೆಯೇ ಶಿಷ್ಯನನ್ನು ಕುರಿತು ಹಾಗೆ ಮಾಡಲು ಕಾರಣವೇನೆಂದು ಪ್ರಶ್ನಿಸುವನು. ಆಗ ಮಧುವು " ಸ್ವಾಮಿಯೇ, ಇದು ಸಾಧಾರಣವಾಗಿ ಎಲ್ಲರ ಮನಸ್ಸಿಗೂ ಬರುವ ಆಶಾರೂಪವಾದ ಧರ್ಮವಲ್ಲವೇ ? ಅದನ್ನೇ ನಾನು ಈಗ ಆಚರಿಸಿರುವೆನು. ಇದಕ್ಕಾಗಿ ಕೋಪಿಸಿಕೊಳ್ಳುವುದು ಏಕೆ ? ಎಂದು ವಿಧವಾಪುತ್ರನಾದ ಮಧುವು ಕೇಳಿಕೊಳ್ಳುವನು.

೪೭. ಅನಂತರ ಗುರುವು ಶಿಷ್ಯನನ್ನು ಕುರಿತು " ನಿನ್ನ ತಂದೆತಾಯಿಗಳಾರು ? " ಎಂದು ಪ್ರಶ್ನಿಸಲು, ಶಿಷ್ಯನು ತನ್ನ ತಂದೆತಾಯಿಗಳು ಬ್ರಾಹ್ಮಣಜಾತಿಯವರೆಂದು ಹೇಳುವನು.

ವದ ಮಾತಾಮಹಃ ಕಸ್ತೇ ಯೇನ ಪ್ರಾಪ್ತಾ ಪ್ರಸೂಸ್ತವ ।
ಕೋ ವಿಧಿಃ ಕುತ್ರ ವಾ ದತ್ತಾ ತಥ್ಯಂ ಶೀಘ್ರಂ ವದಾನ್ಯಥಾ ॥ ೪೮ ॥

ಭಸ್ಮಸಾತ್ತ್ವಾಂ ಕರಿಷ್ಯಾಮಿ ಹೀನಂ ಬ್ರಾಹ್ಮಣವರ್ಚಸಾ ।
ಇತ್ಯೇವಂ ಕಥಿತೇ ಸರ್ವಂ ಕಥಯಿಷ್ಯತಿ ತತ್ತ್ವತಃ ॥ ೪೯ ॥

ಶಾಪಂ ದಾಸ್ಯತ್ಯಥಾಚಾರ್ಯಃ ಸಿದ್ಧಾಂತೋ ಮಾ ಸ್ಫುರತ್ವಯಂ ।
ಸಿದ್ಧಾಂತೇ ಜಡತಾ ತೇऽಸ್ತು ಪರಮದ್ವೈತದರ್ಶನೇ ॥ ೫೦ ॥

ಕಥಂ ತ್ವದೀಯಾ ಸೇವಾ ಮೇ ನಿಷ್ಫಲಾ ಸ್ಯಾದ್ವದ ಪ್ರಭೋ ।
ಇತ್ಯಾದಿ ಬಹುನಿರ್ವೇದಂ ಯದಾ ಶ್ಲೇಷ ಕರಿಷ್ಯತಿ ॥ ೫೧ ॥

---

೪೮. ಪುನಃ ಗುರುವು "ಅಯ್ಯಾ ಮಧುವೇ, ನಿನ್ನ ತಾಯಿಯ ತಂದೆ ಯಾರು? ನಿನ್ನ ತಾಯಿಯು ಯಾರನ್ನು ಯಾವ ವಿಧಿಯಿಂದ ವಿವಾಹವಾದಳು ? ನಿಜವಾಗಿ ಈ ವಿಷಯವನ್ನೆಲ್ಲಾ ನನಗೆ ತಿಳಿಸು.

೪೯. ಇಲ್ಲವಾದರೆ ನಿನ್ನನ್ನು ಈಗಲೇ ಸುಟ್ಟುಬೂದಿಮಾಡುವೆನು. ನಿನ್ನಲ್ಲಿ ಬ್ರಹ್ಮವರ್ಚಸ್ಸೇ ಕಾಣುವುದಿಲ್ಲ" ಎಂದು ನಿರ್ದಾಕ್ಷಿಣ್ಯವಾಗಿ ಗುರುವು ಆರ್ಭಟಿಸುವನು. ಆಗ ಶಿಷ್ಯನು ಭಯದಿಂದ ತನ್ನ ತಾಯಿಯ ನಿಜವಾದ ವಿಚಾರವನ್ನೆಲ್ಲಾ ತಿಳಿಸಿಬಿಡುವನು.

೫೦. ಆಗ ಪದ್ಮಪಾದಾಚಾರ್ಯರು ಕೋಪದಿಂದ "ನಿನಗೆ ಇನ್ನು ಮುಂದೆ ವೇದಾಂತದಲ್ಲಿ ಸಿದ್ಧಾಂತ ವಿಷಯಗಳು ಸ್ಫುರಿಸದೆ ಹೋಗಲಿ. ಅದ್ವೈತತತ್ತ್ವದ ಸಿದ್ಧಾಂತಜ್ಞಾನದಲ್ಲಿ ನಿನಗೆ ಅರಿವಿಲ್ಲದಿರಲಿ" ಎಂದು ಶಾಪಕೊಡುವರು.

೫೧. ಆ ಶಾಪದಿಂದ ಖಿನ್ನನಾಗಿ ಮಧುವು ಗುರುವನ್ನು ಕುರಿತು, ಸ್ವಾಮಿಯೇ ನಾನು ಇಲ್ಲಿನವರೆಗೂ ಪಟ್ಟ ಶ್ರಮವು ವ್ಯರ್ಥವಾಯಿತಲ್ಲಾ! ಅನುಗ್ರಹವಿಟ್ಟು ನನ್ನನ್ನು ರಕ್ಷಿಸಿ" ಎಂದು ಬಹಳವಾಗಿ ಮೊರೆಯಿಡುವನು.

ಪಶ್ಚಾದ್ಗದಿಷ್ಯತಿ ಸ್ವಾಮೀ ಪೂರ್ವಪಕ್ಷೋಽಸ್ತು ತೇ ದೃಢಃ ।
ಸಿದ್ಧಾಂತೇ ಸರ್ವಥೈವಾಂಧ್ಯಂ ಮಮ ವಾಕ್ಯಂ ನ ಚಾನ್ಯಥಾ　　॥ ೫೨ ॥

ಮಧುನಾ ತೇನ ಶಾಸ್ತ್ರಾಣಾಂ ಪೂರ್ವಪಕ್ಷೋ ವಿಲೋಕಿತಃ ।
ಭವಿಷ್ಯತಿ ಚ ವೇದಾಂತಮನ್ಯಥಾ ಕರ್ತುಮುದ್ಯತಃ　　॥ ೫೩ ॥

ಯಥಾ ಯಥಾ ಕಲೇರ್ದೇವಾಃ ಪ್ರಚರಃ ಸಂಭವಿಷ್ಯತಿ ।
ಯಥಾ ತಥಾಯಮುನ್ಮಾರ್ಗಃ ಶಿವದ್ವೇಷ್ಟುರ್ಭವಿಷ್ಯತಿ　　॥ ೫೪ ॥

ಪೂರ್ವಂ ತು ದ್ರಾವಿಡಾದ್ದೇಶಾತ್ಕರ್ಣಾಟಕತಿಲಂಗಯೋಃ ।
ಶನೈರ್ಗೋದಾವರೀ ತೀರೇ ಪ್ರಮೃತೋಽಯಂ ಭವಿಷ್ಯತಿ　　॥ ೫೫ ॥

---

೫೨. ಅನಂತರ ಗುರುವು ದಯಾದ್ರ್ರಹೃದಯನಾಗಿ ಶಿಷ್ಯನನ್ನು ಕುರಿತು, “ ಅಯ್ಯಾ ಮಧುವೇ, ನನ್ನ ಮಾತು ಎಂದಿಗೂ ವ್ಯರ್ಥವಾಗದು. ನೀನು ಪಟ್ಟಶ್ರಮವು ನೀನು ಮಾಡುವ ಪೂರ್ವಪಕ್ಷದಲ್ಲಿ ಮಾತ್ರ ಸಾರ್ಥಕವಾಗಲಿ. ಸಿದ್ಧಾಂತ ತತ್ತ್ವವು ಅಸಮಂಜಸವಾಗಲಿ” ಎಂದು ತಾನು ಕೊಟ್ಟಿದ ಶಾಪಕ್ಕೆ ಸಂಕೋಚವನ್ನು ಕಲ್ಪಿಸುವನು.

೫೩. ಅದರಂತೆ ಮಧುವು ತಾನು ಓದಿದ ಶಾಸ್ತ್ರವಿಷಯಗಳನ್ನೆಲ್ಲಾ ಪೂರ್ವ ಪಕ್ಷವನ್ನಾಗಿಮಾಡಿಕೊಂಡು ಸಿದ್ಧಾಂತವನ್ನು ಮರೆತು ತವಕಪಡುವನು. ಹಾಗೆಯೇ ವೇದಾಂತದ ತತ್ತ್ವವನ್ನು ಅನ್ಯಥಾ ಪ್ರತಿಪಾದಿಸಿ, ನಿಜವಾದ ಅರ್ಥವನ್ನು ತಿಳಿಸದೇ ವಿರುದ್ಧಾರ್ಥ ಕಲ್ಪನೆಗಾಗಿ ಪ್ರಯತ್ನಿಸುವನು.

೫೪. ಎಲೈ ದೇವತೆಗಳೇ, ಕಲಿಯುಗವು ಮುಂದೆ ಮುಂದೆ ಹೋಗುತ್ತಾ ಈ ಮಧುವಿನ ಮತಪ್ರಚಾರವು ಹೆಚ್ಚುತ್ತಾ ಹೋಗುವುದು. ಹಾಗೆಯೇ ಮಧುವು ಸ್ವೇಚ್ಛಾಚಾರಿಯಾಗಿ, ಶಿವದೂಷಕನಾಗಿ ವರ್ತಿಸುವನು.

೫೫. ಆ ಮಧುವಿನ ಮತಪ್ರಚಾರವು ದ್ರಾವಿಡದೇಶದಲ್ಲಿ ಪ್ರಾರಂಭವಾಗಿ, ಕರ್ಣಾಟಕ, ತೆಲಗು ದೇಶಗಳಲ್ಲಿ ಬಹುವಾಗಿ ವ್ಯಾಪಿಸುವುದು. ಕೊನೆಗೆ ಆ ಮಧುವು ಗೋದಾವರೀ ನದಿಯ ದಡದಲ್ಲಿ ನಿರ್ವಾಣಹೊಂದುವನು.

ಪೂರ್ಣೇ ಕಲಿಯುಗೇ ಪ್ರಾಪ್ತ ಆರ್ಯಾವರ್ತೇ ಚಲಿಷ್ಯತಿ ।
ಮಾಯಾವಾದಮಸಚ್ಛಾಸ್ತ್ರಂ ವದಿಷ್ಯಂತಿ ನರಾಧಮಾಃ ॥ ೫೬ ॥

ತೇಷಾಂ ದರ್ಶನಮಾತ್ರೇಣ ಸಚೈಲಂ ಸ್ನಾನಮಾಚರೇತ್ ।
ಭದ್ರಾತ್ವಂ ಚ ಯಥಾ ವಿಷ್ಟೇ ರಾಹೋಃ ಸ್ವರ್ಭಾನುತಾ ಯಥಾ ॥ ೫೭ ॥

ಹರಿತ್ವಂ ಚ ಯಥಾ ಭೇಕೇ ತಥೈತೇ ತತ್ತ್ವವಾದಿನಃ ।
ಯೋಗನಿಂದಾಪರಾ ನಿತ್ಯಮಗ್ನಿಹೋತ್ರಸ್ಯ ನಿಂದಕಾಃ ॥ ೫೮ ॥

ವೇದಾಂತಸಮಮಿತ್ಯಾಹುಃ ಪುರಾಣಾನಿ ಚ ಯೇ ನರಾಃ ।
ಕೇವಲಂ ವೇಷಮಾತ್ರೇಣ ನರಾ ನರಕಗಾಮಿನಃ ೫೯ ॥

---

೫೬. ಕಲಿಯುಗವು ಸಂಪೂರ್ಣವಾಗಿ ಪ್ರಬಲಿಸಿದ ಮೇಲೆ ಆರ್ಯಾವರ್ತದಲ್ಲಿಯೂ, ಈ ಮಧುವಿನ ಮತವು ಸ್ವಲ್ಪಮಟ್ಟಿಗೆ ಹರಡುವುದು. ಅಲ್ಲದೆ ಮಾಯಾವಾದವಾದ ಅದ್ವೈತತತ್ತ್ವವನ್ನು ಅಸಚ್ಛಾಸ್ತ್ರವೆಂದೂ, ವೇದವಿಹಿತವಾದದ್ದಲ್ಲವೆಂದೂ ಪಾಪಿಷ್ಠರಾದ ಮಧುಮತಾನುಯಾಯಿಗಳು ಘೋಷಿಸುವರು.

೫೭-೫೮. ಆ ಮಧುಪ್ರೋಕ್ತವಾದ ಶಾಸ್ತ್ರವನ್ನು ಅಧ್ಯಯನಮಾಡುವವರ ಮುಖದರ್ಶನವಾದರೆ ಯೋಗ್ಯರಾದವರು ಸಚೇಲಸ್ನಾನಮಾಡಬೇಕು. ಆ ಮತಾನುಯಾಯಿಗಳು, ನ್ಯಾಯವನ್ನು ಅನ್ಯಾಯವೆಂದೂ, ಅನ್ಯಾಯವನ್ನು ನ್ಯಾಯವೆಂದೂ ವಾದಿಸುವರು. ಹೇಗೆ ಅಶುಭಪ್ರದವಾದ ವಿಷ್ಟಿ ಎಂಬ ಯೋಗವನ್ನು ಮಂಗಳಾರ್ಥಸೂಚಕವಾದ ಭದ್ರಾ ಎಂಬ ಶಬ್ದದಿಂದ ಕರೆಯುವರೋ, ದುಷ್ಟನಾದ ರಾಹುವನ್ನು ಸ್ವರ್ಭಾನುವೆಂಬ ಪೂಜ್ಯಶಬ್ದದಿಂದ ವ್ಯವಹರಿಸುವರೋ, ಸಾಮಾನ್ಯ ಜಲಚರವಾದ ಕಪ್ಪೆಯನ್ನು ಹರಿ ಎಂಬ ಶಬ್ದದಿಂದ ಪ್ರಚಾರಮಾಡುವರೋ, ಹಾಗೆ ಅಗ್ನಿಹೋತ್ರನಿಂದಕವೂ, ಯೋಗತತ್ತ್ವದೂಷಕವೂ, ಆದ ಮಧ್ವಮತವನ್ನು ವೈದಿಕಮತವೆನ್ನುವರು.

೫೯. ಆ ಮಧುವಿನ ಶಿಷ್ಯರು ಪುರಾಣಗಳನ್ನು ಉಪನಿಷತ್ತುಗಳಿಗೆ ಸಮನಾಗಿ ತಿಳಿಯುವರು. ಕೇವಲ ವೇಷದಿಂದಲೇ ತಾವು ದೊಡ್ಡವರೆನಿಸಿಕೊಂಡು ಉನ್ಮಾರ್ಗಗಾಮಿಗಳಾಗಿ ಕೊನೆಗೆ ನರಕಭಾಗಿಗಳಾಗುವರು.

ಸಂಭಾಷಣೇ ಕೃತೇ ಯೇಷಾಂ ಪತೇಚ್ಚ ಬ್ರಹ್ಮವರ್ಚಸಃ ।
ವರಂ ಬೌದ್ಧಸ್ತಥಾ ಜೈನಃ ಕಾಪಾಲಿಕಮತೋಽಪಿ ವಾ　॥ ೬೦ ॥

ವ್ಯಕ್ತಂ ವದತಿ ವೇದಾನಾಮಪ್ರಾಮಾಣ್ಯಂ ತು ತೈಃ ಕಿಮು ।
ವೇದಪ್ರಾಮಾಣ್ಯವತ್ಕೃತ್ವಾಽಭಿಮಾನೀ ನ ಚ ವೈದಿಕಃ　॥ ೬೧ ॥

ಈಶ್ವರಂ ವಚನಾದ್ವಕ್ತಿ·ಪರಂ ಚಾನೀಶ್ವರಃ ಖಲಃ ।

॥ ಸೂತ ಉವಾಚ ॥

ಏವಂ ಜಾತೇ ತತಸ್ಸರ್ವೇ ಯಥಾಽಽಗತಮಿತೋಗತಾಃ　॥ ೬೨ ॥
ಪ್ರತರ್ದನೋಽಪಿ ರಾಜರ್ಷಿಃ ಕೃತ್ವಾ ರಾಜ್ಯಮಕಂಟಕಂ ।

ದೇಹಾಂತೇ ಮುಕ್ತಿಮಾಪನ್ನಃ ಪರಾಮದ್ವೈತಲಕ್ಷಣಾಂ ।
ತತಃ ಪರಂ ಭವಿಷ್ಯಂತಿ ತಸ್ಯ ಶಿಷ್ಯಾ ಅನೇಕಶಃ　॥ ೬೩ ॥

---

೬೦. ಅವರ ಜೊತೆಯಲ್ಲಿ ಸಂಭಾಷಣೆಮಾಡಿದ್ದೇ ಆದರೆ, ನಿಜವಾದ ಬ್ರಹ್ಮವರ್ಚಸ್ಸು ಮಲಿನವಾಗುವುದು. ವಿಚಾರಮಾಡಿದರೆ ಇವರಿಗಿಂತಲೂ, ಬೌದ್ಧರೂ ಜೈನರೂ, ಕಾಪಾಲಿಕರೂ ಕೆಲವು ವಿಷಯಗಳಲ್ಲಿ ಶ್ರೇಷ್ಠರೆನಿಸುವರು.

೬೧. ಈ ಬೌದ್ಧಾದಿಗಳು ವೇದಗಳಿಗೆ ಅಪ್ರಾಮಾಣ್ಯವನ್ನು ಸ್ಪಷ್ಟವಾಗಿ ಪ್ರತಿಪಾದಿಸಿ ಹೇಳುವರು. ಈ ಮಧುಶಿಷ್ಯರಾದರೋ ವೇದಗಳಿಗೆ ಪ್ರಾಮಾಣ್ಯವನ್ನು ಒಪ್ಪಿದರೂ, ಆಚರಣೆಯಲ್ಲಿ ಮಾತ್ರ ವೈದಿಕರೆನಿಸುವುದಿಲ್ಲ.

೬೨. ಈಶ್ವರನಿರುವನೆಂದು ಬಾಯಲ್ಲಿ ಹೇಳುವರು. ಈಶ್ವರನಿಲ್ಲದಿರುವಂತೆಯೇ ನಡೆಮ ದುಷ್ಟರೆನಿಸುವರು" ಎಂದು ಬ್ರಹ್ಮನು ದೇವತೆಗಳಿಗೆ ಮಧುಶಿಷ್ಯರ ದುರ್ನಡತೆಗಳನ್ನು ಭವಿಷ್ಯರೂಪದಲ್ಲಿ ನುಡಿಯಲಾಗಿ, ಅದನ್ನು ಕೇಳಿದ ದೇವತೆಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು. ಪ್ರತರ್ದನ ರಾಜನೂ ತನ್ನ ರಾಜ್ಯಕ್ಕೆ ಹಿಂದಿರುಗಿ ಬಂದು ರಾಜ್ಯವನ್ನು ಸುಖವಾಗಿ ಆಳಲಾರಂಭಿಸಿದನು.

೬೩. ಅನೇಕ ವರ್ಷಗಳು ಧರ್ಮದಿಂದ ರಾಜ್ಯವಾಳಿ ಪ್ರತರ್ದನರಾಜನು, ಅದ್ವೈತ ತತ್ತ್ವದಲ್ಲಿ ಪ್ರತಿಪಾದಿಸುವಂತಹ ಮೋಕ್ಷ ಪದವಿಯನ್ನು ಹೊಂದಿದನು. ಅವನ ಶಿಷ್ಯರೂ ಸಹ ಅದರಂತೆಯೇ ದೇಹಾಂತದಲ್ಲಿ ಮೋಕ್ಷವನ್ನೈದಿದರು.

ಸಂನ್ಯಾಸಿವೇಷಮಾತ್ರೇಣ ಕುರ್ವಾಣಾ ಜೀವಿಕಾಂ ನಿಜಾಂ ।
ರಾಜಸೇವಾಂ ಪ್ರಕುರ್ವಾಣಾಃ ಪ್ರಚ್ಛನ್ನಾಃ ಕೌಲಿಕಾ ಅಪಿ ॥ ೬೪ ॥

ಅಗಮ್ಯಾಗಮನೇ ಸಕ್ತಾ ಅಭಕ್ಷ್ಯಸ್ಯ ಚ ಭಕ್ಷಣೇ ।
ಅಪೇಯನಿರತಾಃ ಕೇಚಿನ್ನಾನಾಭೋಗಸಮಾಕುಲಾಃ ॥ ೬೫ ॥

ಯಾನಾರೂಢಾಃ ಸದಾ ರಾಜಸೇವಾಯಾಂ ತತ್ಪರಾ' ಅಪಿ ।
ಅದ್ವೈತನಿಂದಾನಿರತಾಃ ಪ್ರಚ್ಛನ್ನಗ್ರಂಥಗೌರವಾಃ ॥ ೬೬ ॥

ಅನ್ಯದರ್ಶನಸಿದ್ಧಾಂತಂ ನೈವ ಜಾನಂತಿ ತತ್ತ್ವತಃ ।
ತತ್ರ ದೋಷಸ್ಯ ಬುದ್ಧ್ಯಾ ವೈ ಪಠಿಷ್ಯಂತಿ ಕಲೌ ಯುಗೇ ॥ ೬೭ ॥

---

೬೪. ಬ್ರಹ್ಮನು ಹೇಳಿದ ರೀತಿಯಲ್ಲಿಯೇ ಆ ಮಧುಶಿಷ್ಯರು ಸಂನ್ಯಾಸಿವೇಷವನ್ನು ಧರಿಸಿದವರಾಗಿ, ತಮ್ಮ ಜೀವನವನ್ನು ಸುಖಮಯವನ್ನಾಗಿಮಾಡಿಕೊಂಡು, ರಾಜಸೇವಾಧುರೀಣರಾಗಿ ಮೋಸಗಾರರಂತೆ ಜೀವಿಸತೊಡಗಿದರು.

೬೫. ಸಂನ್ಯಾಸಿವೇಷದವರಾದರೋ, ನಾನಾಜಾತಿಯ ಸ್ತ್ರೀಸಂಭೋಗದಲ್ಲಿಯೂ, ಜಾತ್ಯಂತರದ ಮತ್ತು ನಿಷಿದ್ಧವಾದ ಭೋಜನಾದಿಗಳಲ್ಲಿಯೂ, ಮದ್ಯವೇ ಮೊದಲಾದ ಅಪೇಯಪಾನದಲ್ಲಿಯೂ ನಿರತರಾದರು. ಒಟ್ಟಿನಲ್ಲಿ ಅನೇಕ ಸಂನ್ಯಾಸಿಗಳು ಸುಖಾಭಿಲಾಷೆಯುಳ್ಳವರಾಗಿಯೇ ನಿಂತರು.

೬೬. ಮತ್ತೆ ಕೆಲವರು ರಾಜಸೇವಾನಿರತರಾಗಿದ್ದರೂ, ಸ್ವತಂತ್ರರಂತೆ ನಟಿಸುತ್ತಾ, ಯಾನಾರೂಢರಾಗಿ, ಶುದ್ಧವಾದ ಅದ್ವೈತ ತತ್ತ್ವವನ್ನು ದೂಷಿಸುತ್ತಾ ಪ್ರಶಸ್ತವಾದ ಗ್ರಂಥಗಳನ್ನೆಲ್ಲಾ ಬದಲಾಯಿಸುತ್ತಾ ಕುತರ್ಕಪ್ರತಿಪಾದ್ಯವಾದ ಗ್ರಂಥಗಳಲ್ಲಿ ಗೌರವವುಳ್ಳವರಾಗಿ ಜೀವಿಸುತ್ತಿದ್ದರು.

೬೭. ಬೇರೆ ದರ್ಶನಗಳ ತತ್ತ್ವವನ್ನು ಅವರು ಎಂದಿಗೂ ಮರ್ಯಾದಿಸುತ್ತಿರಲಿಲ್ಲ. ಇತರ ಗ್ರಂಥಗಳು ಎಷ್ಟೇ ಉತ್ತಮಗಳಾಗಿ ನಿರ್ದುಷ್ಟವಾಗಿದ್ದರೂ ಅವುಗಳನ್ನೆಲ್ಲಾ ದೋಷಬುದ್ಧಿಯಿಂದಲೇ ನೋಡುತ್ತಿದ್ದರು. ಕಲಿಯುಗ ಧರ್ಮವೂ ಅದಕ್ಕೆ ಸಹಾಯವಾಯಿತು.

ಅನ್ಯದೈವತನಾಮಾನಿ ಯದಿ ಹೇಯಾನಿ ತತ್ಕಥಂ ।
ವೇದಂ ಪಠಂತಿ ಪಾಪಿಷ್ಠಾಃ ಕಥಂ ತರ್ಕಂ ವದಂತಿ ಹಿ ॥ ೬೮ ॥

ಮೀಮಾಂಸಾಶಾಸ್ತ್ರಸದ್ಗ್ರಂಥಾನಾಲೋಕ್ಯ ಚ ಪುನಃಪುನಃ ।
ಪೂರ್ವಪಕ್ಷಂ ಚ ಸರ್ವೇಷಾಂ ಗ್ರಹೀಷ್ಯಂತಿ ಸಮತ್ಸರಾಃ ॥ ೬೯ ॥

ಸ್ವಕೀಯಂ ನ ವದಿಷ್ಯಂತಿ ಯತೋ ನಾಸ್ತಿ ಪ್ರಮಾಕರಂ ।
ಹಂಸಾನ್ ಪರಮಹಂಸಾಂಶ್ಚ ನಿಂದಿಷ್ಯಂತಿ ಚ ಜಾರಜಾಃ ॥ ೭೦ ॥

ಜಾತಮಾತ್ರಂ ನರಂ ಕಂಚಿನ್ಮುಂಡಯಿತ್ವಾ ಮಠಾಧಿಪಂ ।
ಕಾಷಾಯವಸ್ತ್ರಮಾತ್ರೇಣ ಕರಿಷ್ಯಂತಿ ನರಾಧಮಾಃ ॥ ೭೧ ॥

ಮಠಾಪತ್ಯಂ ಚ ಸೇವಾ ಚ ಧನಸಂಗ್ರಹ ಏವ ಚ ।
ದಾಸೀಗಮನಮೀರ್ಷ್ಯಾ ಚ ಪಂಚಧಾ ತತ್ತ್ವವಾದಿನಃ ॥ ೭೨ ॥

---

೬೮. ವಿಷ್ಣುವನ್ನು ಬಿಟ್ಟು ಬೇರೆ ದೇವರುಗಳ ಹೆಸರನ್ನೇ ದ್ವೇಷಮಾಡು ವಂತಹ ಆ ಪಾಪಿಷ್ಠರು ವೇದಗಳನ್ನು ಹೇಗೆ ಓದುತ್ತಾರೋ ನನಗೆ ತಿಳಿಯದು. ಇದರ ಮೇಲೆ ವಾದಗಳನ್ನು ಮಾಡಲು ಸಿದ್ಧರಾಗುತ್ತಾರೆ.

೬೯. ಮೀಮಾಂಸಾಶಾಸ್ತ್ರವನ್ನೋದಿ, ಅದರಲ್ಲಿ ಉಕ್ತನಾಗಿರುವ ಸಮಸ್ತ ವಿಷಯಗಳನ್ನರಿತರೂ ಸಹ ಅವುಗಳ ಮೇಲೆ ಪೂರ್ವ ಪಕ್ಷಗಳನ್ನು ಬಲಪಡಿಸಿ ತಮ್ಮ ಅಸೂಯೆಯನ್ನು ತೋರ್ಪಡಿಸುವರು.

೭೦. ತಮ್ಮ ದರ್ಶನ ಸಿದ್ಧಾಂತವನ್ನು ಮಾತ್ರ ಎಂದಿಗೂ ಪ್ರಕಾಶಪಡಿಸಲು ಅವಕಾಶಕೊಡುವುದಿಲ್ಲ. ಏಕೆಂದರೆ ಅದರಲ್ಲಿ ನಿಜವಾದ ತತ್ತ್ವವಿಲ್ಲವೆಂಬುದನ್ನು ಅವರು ಮೊದಲೇ ಅರಿತಿದ್ದಾರೆ. ವ್ಯಭಿಚಾರದಿಂದ ಜನಿಸಿದ ಆ ಮಧುಶಿಷ್ಯರು ಹಂಸರನ್ನೂ (ಸಂನ್ಯಾಸಿ ಶ್ರೇಷ್ಠರನ್ನು) ಪರಮಜ್ಞಾನಿಗಳನ್ನೂ ನಾನಾವಿಧವಾಗಿ ನಿಂದಿಸುತ್ತಾರೆ.

೭೧. ಏನೂ ತಿಳಿಯದ ಕೇವಲ ಮನುಷ್ಯಸ್ವರೂಪನಾದವನೊಬ್ಬನನ್ನು ಕರೆದು, ಅವನಿಗೆ ಮುಂಡನಾದಿಗಳನ್ನು ಮಾಡಿಸಿ, ಕಾಷಾಯ ವಸ್ತ್ರಾದಿಗಳನ್ನು ಧರಿಸಿ ತಮ್ಮ ಮಠಗಳಿಗೆ ಅಧಿಪತಿಯನ್ನಾಗಿಮಾಡಿಕೊಳ್ಳುತ್ತಾರೆ.

೭೨. ಈ ತತ್ತ್ವವಾದಿಗಳು, ಮಠಾಧಿಪತಿಗಳಾಗುವುದು, ರಾಜಸೇವೆಮಾಡು ವುದು, ಹಣವನ್ನು ಕೂಡಿಡುವುದು, ದಾಸೀ ಸಂಭೋಗಮಾಡುವುದು, ಅಸೂಯೆ ಪಡುವುದು, ಈ ಐದು ಕರ್ಮಗಳನ್ನು ಮಾತ್ರ ತಪ್ಪದೆ ಮಾಡುವರು.

ಸಂಸಾರಸ್ತತ್ತ್ವಮಿತ್ಯೇವ ಪರಂ ತೇ ತತ್ತ್ವವಾದಿನಃ ।
ಮಾಯಾವಿಲಸಿತಂ ವಿಶ್ವಮಿತಿ ಮಾಯೈಕವಾದಿನಃ ॥ ೭೩ ॥

ಶುದ್ಧಂ ತತ್ತ್ವಂ ನ ಜಾನಂತಿ ವಿಶ್ವಂ ತತ್ತ್ವಂ ವದಂತಿ ಚ ।
ಶಬ್ದಮಾತ್ರೇಣ ತೇ ಜಾತಾಃ ಕಲೌ ಹಾ ತತ್ತ್ವವಾದಿನಃ ॥ ೭೪ ॥

ಭವಿಷ್ಯತಿ ಯದಾ ವಿಪ್ರಾಃ ಪಾಪಾನಾಂ ಪ್ರಭವಃ ಕಲೌ ।
ತಥಾತಥಾ ಭವಿಷ್ಯಂತಿ ಹ್ಯುದೀಚ್ಯಾಂ ದಂಭವೈಷ್ಣವಾಃ ॥ ೭೫ ॥

ಶಿವಸಾಮಾನ್ಯವಕ್ತಾರಂ ಶಿವಸಾಮಾನ್ಯದರ್ಶಿನಂ ।
ದೃಷ್ಟ್ವಾ ಸ್ನಾಯಾತ್ಸಚೇಲಃ ಸನ್ ಶಿವಸಾಮಾನ್ಯಸಂಗಿನಂ ॥ ೭೬ ॥

ಮಧುದರ್ಶಿತಮಾರ್ಗೇಣ ಪಾಪಿಷ್ಠಾಃ ವೈಷ್ಣವಾಃ ಕಲೌ ।
ಭವಿಷ್ಯಂತಿ ತತೋ ಮ್ಲೇಚ್ಛಾಃ ಶೂದ್ರಾ ಯೂಥಬಹಿಷ್ಕೃತಾಃ ॥ ೭೭ ॥

---

೭೩. ಜಗತ್ತಿನಲ್ಲಿ ಸಂಸಾರವೇ ಸಾರವುಳ್ಳದ್ದು, ಅದು ಸ್ಥಿರವು. ವಿಶ್ವವು ಮಾಯಾಮಯವಾಗಿದ್ದರೂ ಅದೇ ಸತ್ಯವಾದದ್ದು, ಎಂದು ಅಜ್ಞಾನಿಗಳಾದ ಇವರು ತಮ್ಮ ದರ್ಶನದಲ್ಲಿ ಹೇಳುವರು.

೭೪. ಶುದ್ಧವಾದ ತತ್ತ್ವವು ಯಾವುದೆಂಬುದನ್ನು ಇವರು ಅರಿಯರು. ಪ್ರಪಂಚವನ್ನು ಸ್ಥಿರವೆಂದು ನಂಬುವರು. ಕೇವಲ ಶಬ್ದಮಾತ್ರದಿಂದ ತಮ್ಮ ತತ್ತ್ವಗಳನ್ನು ಹರಡುತ್ತಾ ಅನುಷ್ಠಾನ ಪರಾಂಙ್ಮುಖರಾಗಿ ಈ ತತ್ತ್ವವಾದಿಗಳು ಕಲಿಯುಗದಲ್ಲಿ ಮೆರೆಯುವರು. ಅಹಾ ! ಇವರೆಂತಹ ತತ್ತ್ವಜ್ಞಾನಿಗಳೋ !

೭೫. ಎಲೈ ಬ್ರಾಹ್ಮಣರೇ, ಹೀಗೆ ಕಲಿಯುಗದಲ್ಲಿ ಪಾಪಿಷ್ಠರ ಸಂತಾನವು ದಕ್ಷಿಣದಲ್ಲಿ ಬೆಳೆದಮೇಲೆ, ಉತ್ತರದಿಕ್ಕಿನಲ್ಲಿಯೂ ಸಹ ದಾಂಭಿಕರಾದ ವೈಷ್ಣವರು ಹೆಚ್ಚುವರು.

೭೬. ಶಿವನನ್ನು ಸಾಮಾನ್ಯದೇವತೆಂದು ಹೇಳುವ, ಶಿವನನ್ನು ವಿಷ್ಣುವಿಗಿಂತ ಕಮ್ಮಿಯಾಗಿ ಕಾಣುವ, ಶಿವನಿಂದಕರೊಡನೆ ಸ್ನೇಹಮಾಡುವ, ಯಾವ ಮನುಷ್ಯನನ್ನು ಕಂಡರೂ ಒಡನೆಯೇ ಸಚೇಲಸ್ನಾನಮಾಡಬೇಕು.

೭೭. ಹೀಗೆ ಮಧುವು ತೋರಿಸಿದ ಮಾರ್ಗದಿಂದ ಪಾಪಿಷ್ಠರಾದ ವೈಷ್ಣವರು ಕಲಿಯುಗದಲ್ಲಿ ಏಳಿಗೆಯನ್ನು ಪಡೆಯುವರು. ಹಾಗೆಯೇ ಮ್ಲೇಚ್ಛರೂ, ಶೂದ್ರರೂ, ಸಮಾಜವಿರುದ್ಧವಾಗಿ ನಡೆಯತಕ್ಕವರಾಗುವರು.

ತಸ್ಮಾಚ್ಛೃಣುಧ್ವಂ ವಿಪ್ರೇಂದ್ರಾ ಮಾಹಾತ್ಮ್ಯಂ ಪಾರ್ವತೀಪತೇಃ ।
ಭಕ್ತಿಂ ತಸ್ಯ ಸದಾ ಕರ್ತುಮುದ್ಯತಾ ಭವತ ಧ್ರುವಂ ॥ ೭೮ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಕಲಿಪ್ರವೇಶಾದಿ ಕಥನಂ ನಾಮ ಊನಚತ್ವಾರಿಂಶೋಽಧ್ಯಾಯಃ.

---

೭೮. ಆದ್ದರಿಂದ ಎಲೈ ಬ್ರಾಹ್ಮಣರೇ, ಆ ಮಹೇಶ್ವರನ ಮಹಿಮೆಯನ್ನು ನೀವು ಇಲ್ಲಿನವರೆಗೂ ಕೇಳಿರುವಿರಿ. ಇನ್ನು ಮುಂದೆ ಆ ಪರಶಿವನನ್ನು ಭಕ್ತಿಯಿಂದ ಆರಾಧಿಸಲು ಪ್ರಯತ್ನಮಾಡಿರಿ '' ಎಂದು ಸೂತಪುರಾಣಿಕರು ಶೌನಕಾದಿ ಮಹರ್ಷಿಗಳಿಗೆ ಹೇಳಿದರು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದರೂಪವಾಗಿ, ಕಲಿಪ್ರವೇಶವೇ ಮೊದಲಾದ ಸಮಸ್ತ ವಿಷಯಗಳನ್ನೂ ತಿಳಿಸುವ ಮೂವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಚತ್ವಾರಿಂಶೋಽಧ್ಯಾಯಃ

॥ ಋಷಯ ಊಚುಃ ॥

ಸೂತ ಭದ್ರಂ ಸಮಾಚಕ್ಷ್ವ ಸೇವಕೋ ಯಸ್ಯ ಮಾಧವಃ ।
ಶ್ರೀಮಹೇಶಸ್ಯ ವಿಷ್ಣೋಶ್ಚ ತುಲ್ಯತ್ವಂ ಬ್ರುವತೇ ಕಥಂ ॥ ೧ ॥

ಬ್ರುವಂತಿ ತುಲ್ಯತಾಂ ಕೇಚಿದ್ವೈಪರೀತ್ಯೇನ ಕೇಚನ ।
ಏಕತ್ವಂ ಕೇಚಿದೀಶೇನ ಕೇಶವಸ್ಯ ವದಂತಿ ಹಿ ॥ ೨ ॥

ಅತ್ರ ಸಿದ್ಧಾಂತಮರ್ಯಾದಾಂ ಬ್ರೂಹಿ ತತ್ತ್ವೇನ ಸೂತಜ ।
ಅಬಾಧಾ ಯೇನ ಚಾಸ್ಮಾಕಂ ಸಂಶಯೋ ವಿನಿವರ್ತತೇ ॥ ೩ ॥

ನಲವತ್ತನೆಯ ಅಧ್ಯಾಯವು.

೧. ಶೌನಕಾದಿಋಷಿಗಳು ಸೂತಮಹರ್ಷಿಯನ್ನು ಕುರಿತು "ಎಲೈ ಮಹಾತ್ಮನೇ, ಮಹಾವಿಷ್ಣುವು ಪರಮೇಶ್ವರನ ಸೇವಕನೆಂಬುದು ತಿಳಿದಹಾಗಾಯಿತು. ಹಾಗಾದರೆ ಮಹೇಶ್ವರನೂ, ವಿಷ್ಣುವೂ, ಸರಿಸಮಾನರೆಂದು ಕೆಲವರು ಹೇಳುವರು. ಅದು ಹೇಗೆ ?

೨. ಕೆಲವರು ವಿಷ್ಣು, ಶಿವರು ಒಂದೇ ಎನ್ನುವರು. ಮತ್ತೆ ಕೆಲವರು ಬೇರೆ ಬೇರೆಯೆನ್ನುವರು. ಹಲವರು ವಿಷ್ಣುವನ್ನು ಶಿವನಲ್ಲೂ, ಶಿವನನ್ನು ವಿಷ್ಣುವಿನಲ್ಲೂ ಅಂತರ್ಭಾವಗೊಳಿಸುವರು. ಇದು ನಿಜವೇ ?

೩. ಈ ವಿಷಯದಲ್ಲಿ ನಮಗೆ ಸಂದೇಹ ನಿವೃತ್ತಿಯಾಗುವಂತೆ ಅಬಾಧಿತವಾದ ಸಿದ್ಧಾಂತವನ್ನು ವಿವರಿಸಬೇಕೆಂದು ಪ್ರಾರ್ಥಿಸಿಕೊಳ್ಳಲು,

॥ ಸೂತ ಉವಾಚ ॥

ಶೃಣ್ವಂತು ಋಷಯಸ್ಸರ್ವೇ ಶ್ರುತಿಸಿದ್ಧಾಂತಮುತ್ತಮಂ ।
ಮಹೇಶಾನ್ನಪರಂ ತತ್ತ್ವಂ ಸರ್ವವೇದೇಷು ಗೀಯತೇ ॥ ೪ ॥

ವೈಕುಂಠಪ್ರಭೃತೀನಾಂ ತು ಮಹೇಶಕೃಪಯಾ ಪುನಃ ।
ಮಹೇಶಸ್ಯ ಚ ದಾಸೋಽಯಂ ವಿಷ್ಣುಸ್ತೇನಾನುಕಂಪಿತಃ ॥ ೫ ॥

ಶ್ರುತಿಸ್ಮೃತಿಪುರಾಣಾನಾಂ ಸಿದ್ಧಾಂತೋಽಯಂ ಯಥಾರ್ಥತಃ ।
ಇಂದ್ರೋಪೇಂದ್ರಾದಯಸ್ಸರ್ವೇ ಮಹೇಶಸ್ಯೈವ ಕಿಂಕರಾಃ ॥ ೬ ॥

ವೇದಾಂತವೇದ್ಯಮೀಶಾನಂ ಪಾರ್ವತೀರಮಣಂ ಪ್ರಭುಂ ।
ಯೋ ಜಾನಾತಿ ಸ ವೈಕುಂಠೋ ದುಃಖಹಾ ಸರ್ವದೇಹಿನಾಂ ॥ ೭ ॥

ವೈಕುಂಠಂ ಮನ್ಯತೇ ಸಮ್ಯಗೀಶಾನಂ ಸ ಪುರಂದರಃ ।
ಯ ಇಂದ್ರಂ ಮನ್ಯತೇ ಸರ್ವಸ್ವಾಮಿನಂ ಸ ಋಷಿರ್ಮತಃ ॥ ೮ ॥

---

೪. ಸೂತಮಹರ್ಷಿಗಳು ಋಷಿಗಳನ್ನು ಕುರಿತು "ಎಲೈ ಮಹರ್ಷಿಗಳೇ, ಮಹೇಶ್ವರನಿಗಿಂತ ಬೇರೆಯಾದ ಪರಾಪರವಸ್ತುವಿಲ್ಲವೆಂದು ಸಮಸ್ತ ವೇದಗಳೂ ಸಾರುತ್ತಿವೆ. ಆ ತತ್ತ್ವವನ್ನು ನಿಮಗೆ ಈಗ ತಿಳಿಯ ಹೇಳುವೆನು.

೫. ಮಹಾವಿಷ್ಣುವಿಗೆ ವೈಕುಂಠವೇ ಮೊದಲಾದ ಪುಣ್ಯವಸ್ತುಗಳು ದೊರಕಿರುವುದು, ಈಶ್ವರಾನುಗ್ರಹದಿಂದಲೇ. ಇದರಿಂದಲೇ ಶಿವಕೃಪಾಪಾತ್ರನಾದ ವಿಷ್ಣುವು ಮಹೇಶ್ವರನಿಗೆ ದಾಸನಾಗಿರುವನು.

೬. ಹಾಗೆಯೇ ಇಂದ್ರ, ಉಪೇಂದ್ರ ಮೊದಲಾದ ದೇವಶ್ರೇಷ್ಠರೆಲ್ಲ ಈಶ್ವರನ ಸೇವಕರೆಂಬುದಾಗಿ ವೇದಶಾಸ್ತ್ರಾದಿಗಳು ಯಥಾರ್ಥವಾಗಿ ಘೋಷಿಸುತ್ತಿವೆ

೭. ವೇದಾಂತಗಳಲ್ಲಿ ಪ್ರತಿಪಾದಿಸಲ್ಪಡುವನೂ, ಪಾರ್ವತೀಪತಿಯೂ ಆದ ಪರಮೇಶ್ವರನನ್ನು ಯಾರು ಸರಿಯಾದ ರೀತಿಯಲ್ಲಿ ಭಜಿಸುವರೋ, ಅವರು ಸರ್ವರಿಗೂ ದುಃಖನಿವಾರಕರಾಗಿ ಸಾಕ್ಷಾದ್ವಿಷ್ಣುಸ್ವರೂಪರೇ ಆಗುವರು.

೮. ವಿಷ್ಣುವನ್ನು ಯಾರು ಭಕ್ತಿಯಿಂದ ಸೇವಿಸುವರೋ, ಅವರು ಇಂದ್ರನ ಸರಿಸಮನಾಗುವರು. ಯಾರು ಇಂದ್ರನನ್ನು ಆರಾಧಿಸುವರೋ ಅವರು ಋಷಿಪದವಿಯನ್ನು ಹೊಂದುವರು.

ಸ್ವರ್ಗಲೋಕಂ ಸಮಾಪ್ನೋತಿ ಮುನ್ಯಾಜ್ಞಾಪ್ರತಿಪಾಲಕಃ ।
ಅದ್ವೈತಂ ಶಿವಮೀಶಾನಮಜ್ಞಾತ್ವಾ ನೈವ ಮುಚ್ಯತೇ ॥ ೯ ॥

ಘೋರೇ ಕಲಿಯುಗೇ ಪ್ರಾಪ್ತೇ ಶ್ರೀಶಂಕರಪರಾಙ್ಮುಖಾಃ ।
ಭವಿಷ್ಯಂತಿ ನರಾಸ್ತಥ್ಯಮಿತಿ ದ್ವೈಪಾಯನೋಽಬ್ರವೀತ್ ॥ ೧೦ ॥

ರುದ್ರಕ್ರೋಧಾಗ್ನಿನಿರ್ದಗ್ಧೇ ಮನ್ಮಥೇ ತಸ್ಯ ಭಾರ್ಯಯಾ ।
ರತ್ಯಾವಿಲಪಿತೇ ತಸ್ಯ ಸಖಾಯೋಽಸ್ಯತಿ ದುಃಖಿತಾಃ ॥ ೧೧ ॥

ವಸಂತಾದಯ ಆಗತ್ಯ ತಾಮೂಚುಃ ಕಿಂ ವಿಧೀಯತೇ ।
ಸರ್ವಲೋಕೇಶಿತುಃ ಶಂಭೋರ್ವರಾಕಾ ವೈರವಾರಣೇ ॥ ೧೨ ॥

॥ ರತಿರುವಾಚ ॥

ಮನ್ಯತೇ ಘಾತಕಃ ಸರ್ವೈರ್ಲೋಕೇಽಪೂಜ್ಯೋ ಭವೇದಯಂ ।
ತತ್ರ ವಿಘ್ನಾಃ ಪ್ರಕರ್ತವ್ಯೋ ಯೇನ ಕೇನಾಪಿ ಹೇತುನಾ ॥ ೧೩ ॥

---

೯. ಋಷಿಯ ಅಪ್ಪಣೆಯನ್ನು ಪ್ರತಿಪಾಲಿಸಿದವರು ಸ್ವರ್ಗಲೋಕವನ್ನು ಹೊಂದುವರು. ಅಂತೂ ನಿಜವಾದ ಮುಕ್ತಿಯು ದೊರಕಬೇಕಾದರೆ ಅದ್ವೈತತತ್ತ್ವ ಪ್ರತಿಪಾದ್ಯನಾದ ಶಿವನನ್ನೇ ಆರಾಧಿಸಬೇಕು.

೧೦. ಪಾಪಭೂಯಿಷ್ಠವಾದ ಕಲಿಯುಗದಲ್ಲಿ ಜನರು ನಿಜವಾಗಿಯೂ ಶಂಕರ ಧ್ಯಾನದಲ್ಲಿ ಉದಾಸೀನರಾಗಿ ಬಹುವಾದ ಕಷ್ಟಗಳಿಗೆ ಈಡಾಗುವರೆಂಬುದು ವೇದವ್ಯಾಸರ ಮತ.

೧೧. ಹಿಂದೆ ಈಶ್ವರನ ಕ್ರೋಧಾಗ್ನಿಯಿಂದ ಮನ್ಮಥನು ಮೃತನಾದ ಮೇಲೆ, ಅವನ ಪತ್ನಿಯಾದ ರತೀದೇವಿಯು ಗೋಳಾಡಲು ಆರಂಭಿಸಿದಳು. ಅದನ್ನು ಕೇಳಿ ಮನ್ಮಥನ ಸ್ನೇಹಿತರು ಬಹಳ ದುಃಖದಿಂದ ಅಲ್ಲಿಗೆ ಬಂದರು.

೧೨. ಆಗ ಬಂದಿದ್ದ ವಸಂತನೇ ಮೊದಲಾದವರು ರತೀದೇವಿಯನ್ನು ಕುರಿತು, ಸರ್ವಲೋಕೇಶ್ವರನಾದ ಪರಶಿವನ ಅನ್ರಹವನ್ನು ಕಳೆದುಕೊಳ್ಳಲು ಮುಂದೇನು ಮಾಡುವೆ ? ಎಂದು ಕೇಳಿದರು.

೧೩. ಆಗ ರತೀದೇವಿಯು "ಲೋಕೇಶ್ವರನನ್ನು ಎಲ್ಲರೂ ಘಾತಕನೆಂದು ತಿಳಿಯಬೇಕು. ಯಾರೂ ಇವನನ್ನು ಪೂಜಿಸಬಾರದು. ಅಥವಾ ಯಾರಾದರೂ ಪೂಜಿಸುವುದಾದರೆ ಅದಕ್ಕೆ ವಿಘ್ನಗಳನ್ನೊಡ್ಡಬೇಕು" ಎಂದಳು.

॥ ವಸಂತಾದಯ ಊಚುಃ ॥

ಚತುರ್ದಶಸು ವಿದ್ಯಾಸು ಗೀಯತೇ ಚಂದ್ರಶೇಖರಃ ।
ವೇದಾಂತಾ ಯಂ ಚ ಗಾಯಂತಿ ಮುನಯಃ ಶಂಸಿತವ್ರತಾಃ ॥ ೧೪ ॥

ಬ್ರಹ್ಮಾದ್ಯಾ ದೇವತಾಸ್ಸರ್ವಾ ಇಂದ್ರೋಪೇಂದ್ರಾಪರಯಸ್ತಥಾ ।
ನ್ಯೂನತಾಂ ತಸ್ಯ ಯೋ ಬ್ರೂತೇ ಕರ್ಮಚಾಂಡಾಲ ಉಚ್ಯತೇ ॥ ೧೬ ॥

ತೇನ ತುಲ್ಯೋ ಯದಾ ವಿಷ್ಣುರ್ಬ್ರಹ್ಮಾ ವಾ ಯದಿ ಗದ್ಯತೇ ।
ಷಷ್ಟಿರ್ವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ ॥ ೧೭ ॥

ತುಲ್ಯತಾ ಯದಿ ನೋ ಶಕ್ಯಾ ನ್ಯೂನತಾಯಾಸ್ತು ಕಾ ಕಥಾ ।
ಮಿತ್ರಸ್ಯಾನೃಣ್ಯಮಿಚ್ಛಾಮಃ ಸಂಕಟಂ ಪ್ರತಿಭಾತಿ ನಃ ॥ ೧೮ ॥

---

೧೪. ಆ ರತೀದೇವಿಯ ವಾಕ್ಯಗಳನ್ನು ಕೇಳಿ ವಸಂತಾದಿಗಳು ಹೇಳುವರು " ಮಹೇಶ್ವರನು ಚತುರ್ದಶವಿದ್ಯೆಗಳಿಗೂ ಆರಾಧ್ಯದೇವನಾಗಿರುವನು. ವೇದಾಂತಗಳಲ್ಲಿ - ಸಮಸ್ತ ಮುನಿಗಳೂ ನಾನಾವಿಧವಾದ ಮಾರ್ಗಗಳನ್ನು ತೋರಿಸುತ್ತಾ ಮಹೇಶ್ವರನನ್ನು ವಿಧವಿಧವಾಗಿ ಹೊಗಳುತ್ತಿರುವರು.

೧೬. ಬ್ರಹ್ಮನೇ ಮೊದಲಾದ ದೇವತೆಗಳಗೂ, ಇಂದ್ರ, ಉಪೇಂದ್ರರೇ ಮೊದಲಾದ ದೇವಶ್ರೇಷ್ಠರಿಗೂ ಈಶ್ವರನು ಕೀಳಾದವನು ಎಂದು ಯಾರು ಹೇಳುವರೋ ಅವರು ಕರ್ಮಚಂಡಾಲರೆನಿಸುವರು.

೧೭. ಅದೂ ಅಲ್ಲದೆ ಈಶ್ವರನು ಬ್ರಹ್ಮಾದಿಗಳಿಗಿಂತ ದೊಡ್ಡವನು. ಅಂಥ ಮಹೇಶ್ವರನು ಬ್ರಹ್ಮ, ವಿಷ್ಣುಗಳಿಗೆ ಸಮನೆಂದು ಹೇಳುವವರು, ಅರವತ್ತು ಸಾವಿರ ವರ್ಷ ಪರ್ಯಂತವಾಗಿ ನರಕದಲ್ಲಿ ಕ್ರಿಮಿಯಾಗಿ ನೆಲಸುವರು.

೧೮. ಎಲೈ ರತೀದೇವಿಯೇ, ಮಹೇಶ್ವರನು ಯಾವ ದೇವತೆಗಳಿಗೂ ಸರಿಸಮನಲ್ಲ. ಅಂದಮೇಲೆ ಸಮಸ್ತ ದೇವತೆಗಳಿಗಿಂತಲೂ ಶಂಕರನು ಕೀಳಾದವನು ಎಂದು ಹೇಗೆ ತಾನೆ ಹೇಳಲಾದೀತು. ಒಟ್ಟಿನಲ್ಲಿ ನಮ್ಮ ಸ್ನೇಹಿತನಾದ ಮನ್ಮಥನು ಈಗ ನಾಶವಾಗಿರುವನು. ಅವನ ಋಣವನ್ನು ತೀರಿಸುವುದು ಹೇಗೆ ? ಎಂದು ನಾವು ಈಗ ವ್ಯಥೆಪಡುತ್ತಿದ್ದೇವೆ. ಮತ್ತೆ ಏನೂ ನಮ್ಮಿಂದ ಸಾಧ್ಯವಾಗಲಾರದು.

॥ ಸೂತ ಉವಾಚ ॥

ವಿಚಾರ್ಯೈವಂ ತದಾ ಸರ್ವೇ ಮಹಾಮೋಹಪುರಸ್ಸರಾಃ ।
ತಪಸ್ತೇಪುರ್ಮಹಾರೌದ್ರಂ ಸರ್ವಲೋಕಭಯಂಕರಂ ॥ ೧೯ ॥

ಕದಾಚಿದ್ಭಗವಾನ್ ಬ್ರಹ್ಮಾ ಪ್ರಾದುರಾಸೀದ್ದಯಾನಿಧಿಃ ।
ಮೋಹೋ ದಂಭಸ್ತಥಾ ಕ್ರೋಧೋ ಲೋಭಸ್ತೇ ಸೇವಕಾಃ ಕಲೇಃ ॥೨೦॥

ಪಂಚಮೋ ಹೇತುವಾದಶ್ಚ ಮಧುನಾ ಸರ್ವ ಆಶ್ರಿತಾಃ ।
ತಾನುವಾಚ ತತೋ ಬ್ರಹ್ಮಾ ವೃಣೀಧ್ವಂ ಮನಸೇಪ್ಸಿತಂ ॥ ೨೧ ॥
ಯಥಾ ವಾಣೀ ಚ ಭವತಾಂ ತಥಾಹಂ ದಾತುಮುದ್ಯತಃ ।

॥ ಮೋಹಾದ್ಯಾ ಊಚುಃ ॥

ಅಸ್ಮಾಕಂ ಪರಮಂ ಮಿತ್ರಂ ಕಂದರ್ಪೋ ನಾಶಿತಃ ಪ್ರಭೋ ।
ಮಹಾದೇವೇನ ತೇನಾಮೀ ಆನೃಣ್ಯಂ ಕರ್ತುಮುದ್ಯತಾಃ ॥ ೨೨ ॥

---

೧೯. ಎಂದು ರತೀದೇವಿಗೆ ತಿಳಿವಳಿಕೆಯನ್ನು ಹೇಳಿ ಪುನಃ ಒಟ್ಟುಗೂಡಿ, ಮಹಾಮೋಹನೇ ಮೊದಲಾದ ಮನ್ಮಥನ ಸ್ನೇಹಿತರೆಲ್ಲರೂ ಬ್ರಹ್ಮನನ್ನು ಕುರಿತು ಭಯಂಕರವಾದ ತಪಸ್ಸನ್ನು ಮಾಡಲು ಆರಂಭಿಸಿದರು.

೨೦. ಕೆಲವು ಕಾಲದ ಮೇಲೆ ಈ ಕಲಿಸೇವಕರಾದ ಮೋಹ, ದಂಭ, ಕ್ರೋಧ, ಲೋಭ, ಇವರೇ ಮೊದಲಾದವರಿಗೆ ಬ್ರಹ್ಮನು ಪ್ರತ್ಯಕ್ಷನಾದನು.

೨೧. ಆಗ ಮೇಲೆ ಹೇಳಿದ ನಾಲ್ಕು ಜನರೂ, ಹೇತುವಾದನೆಂಬ ಐದನೆಯವನೂ, ವಸಂತನೊಡಗೂಡಿ, ಬ್ರಹ್ಮನನ್ನು ಬಹುವಾಗಿ ಪ್ರಾರ್ಥಿಸಿದರು. ಬ್ರಹ್ಮನು ಅವರನ್ನು ಕುರಿತು " ನಿಮ್ಮ ಕೋರಿಕೆಯೇನು ? ನನಗೆ ತಿಳಿಸಿ. ನಿಮ್ಮ ಮಾತನ್ನು ಖಂಡಿತವಾಗಿ ನೆರವೇರಿಸಿ ಕೊಡುವೆನು " ಎಂದು ವರವಿತ್ತನು.

೨೨. ಆಗ ಮೋಹಾದಿಗಳು " ಪರಬ್ರಹ್ಮನೇ! ನಮಗೆ ಮನ್ಮಥನು ಅತ್ಯಂತ ಸ್ನೇಹಿತನು. ಅವನನ್ನು ಈಶ್ವರನು ನಾಶಮಾಡಿರುವನು. ಅಂಥ ಈಶ್ವರನಿಗೆ ನಾವು ನಮ್ಮ ಸ್ನೇಹಿತನ ಮೇಲಿನ ವಿಶ್ವಾಸದಿಂದ ಪ್ರತಿಕ್ರಿಯೆಮಾಡಲು ತೊಡಗಿದ್ದೇವೆ.

ಭವಿಷ್ಯಾಮೋ ವಯಂ ತಾತ ರುದ್ರಪೂಜಾಭಿನಿಂದಕಾಃ ।
ಯಥಾ ನ ಲಭತೇ ಪೂಜಾಮಸ್ಮತ್ತಶ್ಚಂದ್ರಶೇಖರಃ ॥ ೨೩ ॥

॥ ಬ್ರಹ್ಮೋವಾಚ ॥

ಅಧುನಾ ನ ಭವೇದೇವಂ ಭವಿಷ್ಯತ್ಯಥ ತಚ್ಚಿರಂ ।
ಭವಿಷ್ಯಾಮ ಇತಿ ಪ್ರೋಕ್ತಂ ಭವತೋ ನಾನ್ಯಥಾ ಕ್ವಚಿತ್ ।
ಯೇ ಭವದ್ವಶಗಾ ಲೋಕಾ ಸ್ತೇಭ್ಯಃ ಪೂಜಾ ನ ಧೂರ್ಜಟೇಃ ।
ಪ್ರಾರ್ಥಿತೋಯಂ ವರೋ ದತ್ತೋ ಯಥೇಷ್ಟಂ ಕರ್ತುಮುದ್ಯಥ ॥ ೨೬ ॥

॥ ಸೂತ ಉವಾಚ ॥

ಇತ್ಯುಕ್ತ್ವಾ ತಾನಥೋ ಬ್ರಹ್ಮಾ ತತ್ರೈವಾಂತರಧೀಯತ ।
ಸರ್ವೇ ತೇ ಮಂತ್ರಯಾಂಚಕ್ರುಃ ಕಲಿನಾ ಸಹ ದುಃಖಿತಾಃ ॥ ೨೭ ॥

---

೨೩. ಇನ್ನು ಮುಂದೆ ನಾವು ಈಶ್ವರನ ಪೂಜೆಯನ್ನು ನಿಂದಿಸುವವರಾಗಬೇಕು. ನಮ್ಮಿಂದ ಶಿವನಿಗೆ ಎಂದೂ ಪೂಜೆ ದೊರೆಯಬಾರದು." ಹಾಗೆ ವರಕೊಡು.. ಎಂದು ಕೇಳಿಕೊಂಡರು.

೨೬. ಆಗ ಬ್ರಹ್ಮನು ಅವರೊಡನೆ "ಎಲೈ ಮಹಾಮೋಹಾದಿಗಳೇ! ನೀವು ಕೇಳಿಕೊಂಡಂತೆಯೇ ಆಗಲಿ. ಆದರೆ ಅದು ಈಗ ಆಗುವುದಿಲ್ಲ. ಮುಂದೆ ಶಿವಪೂಜಾ ನಿಂದಕರಾಗಬೇಕೆಂದು ನೀವು ಕೇಳಿರುವುದರಿಂದ, ಈಗಲೇ ಅದು ನಿಮಗೆ ಲಭಿಸುವುದು ಹೇಗೆ ಸಾಧ್ಯ? ನೀವು ಖಂಡಿತ ಮುಂದೆ ಹಾಗೆ ಆಗುವಿರಿ. ಅಷ್ಟೇ ಅಲ್ಲ. ನಿಮ್ಮಿಂದ ಆವರಿಸಲ್ಪಟ್ಟ ದೇಶದವರೆಲ್ಲರೂ ಸಹ ಮುಂದೆ ಹಾಗೆಯೇ ಶಿವಪೂಜಾ ನಿಂದಕರಾಗುವರು. ಹಾಗೆಂದು ನಿಮಗೆ ವರವನ್ನು ಕೊಟ್ಟಿರುವೆನು" ಎಂದು ಹೇಳುತ್ತಾ,

೨೭. ಬ್ರಹ್ಮನು ಅಲ್ಲಿಯೇ ಮಾಯವಾದನು. ಅನಂತರ ಅವರೆಲ್ಲರೂ ಕಲಿ ಪುರುಷನೊಡನೆ ಕಲೆತು ಮುಂದಿನ ಯೋಚನೆಗೆ ಆರಂಭಿಸಿದರು.

॥ ಕಲಿರುವಾಚ ॥

ಭವದ್ಭಿರಧುನಾ ನೋಕ್ತಂ ಭವಿಷ್ಯಾಮ ಇತೀರಿತಂ ।
ತತೋ ಮತ್ಸಮಯೇ ಪ್ರಾಪ್ತೇ ಸರ್ವಮೇವ ಭವಿಷ್ಯತಿ ॥ ೨೮ ॥

ಅಸ್ಮತ್ತ ಇತಿ ಯತ್ಪ್ರೋಕ್ತಂ ತೇನ ಚಾಸ್ಮದ್ವಶೇ ಸ್ಥಿತಾಃ ।
ನಿಂದಾಕರಾ ಭವಿಷ್ಯಂತಿ ನಾಸ್ಮಾನ್ಯೋ ಮನ್ಯತೇ ನ ಸಃ ॥ ೨೯ ॥

ಲೋಭಮೋಹಾದಿಸಂಯುಕ್ತಾಃ ಪ್ರಾಪ್ತೇ ಚ ಮಯಿ ದಾರುಣೇ ।
ಹೇತುವಾದಂ ಪುರಸ್ಕೃತ್ಯ ಶಿವಭಕ್ತಿಪರಾಙ್ಮುಖಾಃ ॥ ೩೦ ॥

॥ ಸೂತ ಉವಾಚ ॥

ತತಃ ಕಲಿಯುಗೇ ಪ್ರಾಪ್ತೇ ಸರ್ವಧರ್ಮವಿವರ್ಜಿತೇ ।
ಮ್ಲೇಚ್ಛೈರ್ಬ್ರಾಹ್ಮಣಧೇನೂನಾಂ ವಿಧ್ವಂಸನಕರೇ ಖರೇ ॥ ೩೧ ॥

---

೨೮. ಆಗ ಕಲಿಪುರುಷನು “ ಎಲೈ ಮೋಹಾದಿಗಳೇ, ನೀವು ಬ್ರಹ್ಮನಲ್ಲಿ ವರಕೇಳುವಾಗ ಮುಂದೆ ಹಾಗಾಗಬೇಕೆಂದಿರಿ. ಆದ್ದರಿಂದ ನಿಮಗೆ ಆ ವರಸಿದ್ಧಿಯು ನನ್ನ (ಕಲಿ) ಯುಗದಲ್ಲಿ ಲಭಿಸುವುದು.

೨೯. ನಮ್ಮಿಂದ ಶಿವಪೂಜೆಯು ನಡೆಯಬಾರದೆಂದು ನೀವು ಕೇಳಿರುವಾಗ, ನಿಮ್ಮಿಂದಲೂ ಮತ್ತು ನಿಮ್ಮಗಳಿಗೆ ಅಧೀನರಾದವರಿಂದಲೂ ಶಿವಪೂಜೆಯು ನಿಲ್ಲುವುದೇ ಹೊರತು, ನಿಮಗೆ ಅಧೀನರಾಗದೆ ಅಥವಾ ನಿಮ್ಮನ್ನು ಲಕ್ಷ್ಯಮಾಡದೇ ಇರುವವರಿಂದ ಶಿವಾರಾಧನೆಯು ನಡೆದೇ ನಡೆಯುವುದು.

೩೦ ನನ್ನ ಯುಗದಲ್ಲಿ ನೀವೆಲ್ಲರೂ, ಲೋಭ, ಮೋಹಾದಿಗಳೊಡನೆ ಕೂಡಿ ಹೇತುವಾದವನ್ನು ಮುಂದಿಟ್ಟುಕೊಂಡು, ಶಿವಭಕ್ತಿಯನ್ನು ಬಿಟ್ಟು ಶಿವನಿಂದಕರಾಗಿರಿ ” ಎಂದು ಕಲಿಯು ಹೇಳಿದನು.

೩೧. ಅನಂತರ ಸೂತಮಹರ್ಷಿಯು ಶೌನಕಾದಿಗಳನ್ನು ಕುರಿತು ಹೀಗೆ ಹೇಳಿದರು. “ ಎಲೈ ಋಷಿಗಳೇ, ಭಯಂಕರವಾದ ಕಲಿಯುಗದಲ್ಲಿ ಸಮಸ್ತ ಧರ್ಮಗಳೂ ನಾಶವಾಗುವುವು. ಮ್ಲೇಚ್ಛಾದಿ ಜನಗಳು ಹೆಚ್ಚಿ ಬ್ರಾಹ್ಮಣರ ಗೋಧನಗಳನ್ನು ಅಪಹರಿಸಿ ನಾಶಮಾಡುವರು.

ಆಸ್ವಾಧ್ಯಾಯವಷಟ್ಕಾರೇ ಜೈನಬೌದ್ಧಾದಿಸಂಕುಲೇ ।
ಬ್ರಾಹ್ಮಣೇ ಮ್ಲೇಚ್ಛಮಾರ್ಗಸ್ಥೇ ಶೂದ್ರೇ ಬ್ರಾಹ್ಮಣಘಾತಿನಿ ॥ ೩೨ ॥

ತದಾ ವಸಂತಃ ಕರ್ಣಾಟತಿಲಂಗಾದಿಕದೂಷಕಃ ।
ಮಧುನಾಮಾ ಚ ವಿಧವಾಕ್ಷೇತ್ರೇ ವಿಪ್ರಾದ್ಭವಿಷ್ಯತಿ ॥ ೩೩ ॥

ಗೋಲಕಃ ಸ ತು ಪಾಪಿಷ್ಠಃ ಪದ್ಮಪಾದುಕಮೀಶ್ವರಂ ।
ವೇದಾಂತವ್ಯಾಖ್ಯಾನರತಂ ಶಿಷ್ಯತ್ವೇನಾರ್ಚಯಿಷ್ಯತಿ ॥ ೩೪ ॥

ಶಾಸ್ತ್ರಂ ಪೂರ್ಣಂ ತತೋಽಧೀತ್ಯ ಸ್ಥಿತ ಆಹ್ನಿಕವರ್ಜಿತಃ ।
ಕಿಮಗ್ನಿಹೋತ್ರಂ ಕೋ ಯಾಗೋ ಹೇತುಮೇವಂ ಕರಿಷ್ಯತಿ ॥ ೩೫ ॥

---

೩೨. ವೇದಾಧ್ಯಯನಗಳೂ, ಯಜ್ಞಯಾಗಾದಿಗಳೂ ನಿಂತುಹೋಗುವುವು. ಜೈನರೂ, ಬೌದ್ಧರೂ ಬಹಳವಾಗಿ ಹೆಚ್ಚುವರು. ಬ್ರಾಹ್ಮಣರೆಲ್ಲರೂ ಮ್ಲೇಚ್ಛರ ಮಾರ್ಗವನ್ನು ಹಿಡಿಯುವರು. ಶೂದ್ರರೆಲ್ಲರೂ ಬ್ರಾಹ್ಮಣರನ್ನು ಹಿಂಸಿಸಲ ಹೊರಡುವರು.

೩೩. ಆಗ ವಸಂತನ್, ಕರ್ಣಾಟ, ತೆಲುಗು, ಮುಂತಾದ ದೇಶದವರಿಗೆ ದೂಷಕು ನಾಗಿ ಮಧುವೆಂಬ ಹೆಸರಿನಿಂದ ಯಾವನೋ ಒಬ್ಬ ಬ್ರಾಹ್ಮಣನ ಸಂಪರ್ಕದಲ್ಲಿದ್ದ ವಿಧವೆಯ ಉದರದಲ್ಲಿ ಜನಿಸುವನು.

೩೪. ಆ ವಿಧವಾಪುತ್ರನು, ಅತ್ಯಂತ ಪಾಪಿಯಾಗಿ ವೇದಾಂತಶಾಸ್ತ್ರನಿಷ್ಣಾತ ರಾದ ಪದ್ಮಪಾದುಕಾಚಾರ್ಯರನ್ನು ಗುರುಗಳನ್ನಾಗಿಮಾಡಿಕೊಂಡು, ಅವರಲ್ಲಿ ಶಿಷ್ಯವೃತ್ತಿ ಯನ್ನಾಚರಿಸುವನು.

೩೫. ಅವರಲ್ಲಿ ಸಂಪೂರ್ಣವಾಗಿ ಸಕಲ ಶಾಸ್ತ್ರಗಳನ್ನೂ ಅಭ್ಯಾಸಮಾಡುವನು. ಆದರೆ ಮಾತ್ರ ನಿತ್ಯ ಕರ್ಮಾನುಷ್ಠಾನಗಳು ಆತನಿಗೆ ರುಚಿಸದೇ ಹೋಗಿ, ಅಗ್ನಿ ಹೋತ್ರವೆಂದರೇನು ? ಯಾಗವು ಏತಕ್ಕೆ ? ಇವೇ ಮೊದಲಾದ ಕರ್ಮಗಳಿಗೆ ಕಾರಣ ವನ್ನು ಪ್ರಶ್ನಿಸುತ್ತಾ ಹೋಗುವನು.

ಗುರುರಾಕರ್ಣ್ಯ ತದ್ವಾಕ್ಯಂ ಬ್ರಾಹ್ಮಣೋ ನ ಭವೇದಯಂ ।
ಇತಿ ನಿಶ್ಚಿತ್ಯ ತಂ ದುಷ್ಟಂ ವಕ್ಷ್ಯತಿ ಶ್ರುತತದ್ವಚಾಃ ॥ ೩೬ ॥

॥ ಗುರುರುವಾಚ ॥

ಕೋ ವರ್ಣಸ್ತವ ಮೇ ಬ್ರೂಹಿ ಯಥಾರ್ಥಂ ವೇದದೂಷಕ ।
ಕರ್ಮಬ್ರಹ್ಮೋದ್ಭವದ್ವೇಷ್ಟಾ ನೋತ್ಪತ್ತಿರ್ಬ್ರಾಹ್ಮಣಾತ್ತವ ॥ ೩೭ ॥

॥ ಮಧುರುವಾಚ ॥

ಬ್ರಾಹ್ಮಣಾದಹಮುತ್ಪನ್ನೋ ಬ್ರಾಹ್ಮಣ್ಯಾಂ ಚ ನ ಸಂಶಯಃ ।
ಸತ್ಯಂ ವದಾಮಿ ನೋ ಮಿಥ್ಯಾ ಕಥಂ ಮಾಂ ಪಶ್ಯಸೇ ಗುರೋ ॥ ೩೮ ॥

॥ ಗುರುರುವಾಚ ॥

ತನ್ಮಾತಾ ಕೇನ ದತ್ತಾ ರೇ ಕಸ್ಯ ಪುತ್ರೀ ಕದಾ ಕಥಂ ।
ಕಸ್ಮೈ ದತ್ತಾ ಚ ವಿಧಿನಾ ಕೇನ ತದ್ಬ್ರೂಹಿ ಮಾ ಚಿರಂ ॥ ೩೯ ॥

---

೩೬. ಇವರ ಮಾತನ್ನು ಕೇಳಿ ಗುರುಗಳಾದ ಪದ್ಮಪಾದರು, "ಈತನು ಬ್ರಾಹ್ಮಣನಾಗಿರಲಾರನು. ನನ್ನನ್ನು ಮೋಸಗೊಳಿಸಿ ನನಗೆ ಶಿಷ್ಯನಾಗಿರುವನು" ಎಂದು ದೃಢವಾಗಿ ತಿಳಿದು ಅವನನ್ನು ಕುರಿತು ಕೆಲವು ಪ್ರಶ್ನೆಮಾಡುವರು.

೩೭. "ಎಲೈ ವೇದನಿಂದಕನೇ, ನೀನು ಯಾವ ಜಾತಿಯವನು? ಕರ್ಮಗಳನ್ನು ಮತ್ತು ವೇದಗಳನ್ನೂ ಹೀಗೆ ದೂಷಿಸುವ ನೀನು ಬ್ರಾಹ್ಮಣ ಜನ್ಮದಲ್ಲಿ ಹುಟ್ಟಿರಲಾರೆ. ನಿಜವಾಗಿ ನೀನು ಯಾರೆಂಬುದನ್ನು ತಿಳಿಸು" ಎಂದು ಗುರುವು ಕೇಳಲು

೩೮. ಅದಕ್ಕೆ ಮಧುವು "ಗುರುವೇ, ನಾನು ನಿಜವಾಗಿಯೂ ಯಾವನೋ ಒಬ್ಬ ಬ್ರಾಹ್ಮಣನ ಸಂಪರ್ಕವನ್ನು ಪಡೆದಿದ್ದ ಬ್ರಾಹ್ಮಣ ವಿಧವೆಯಲ್ಲಿ ಜನಿಸಿರುವೆನು. ಇದು ನಿಶ್ಚಯ. ಇದರಲ್ಲಿ ಸುಳ್ಳಿಲ್ಲ" ಎಂದು ಹೇಳಿದನು.

೩೯. ಪುನಃ ಪದ್ಮಪಾದರು "ಎಲೈ ಶಿಷ್ಯನೇ, ಆ ನಿಮ್ಮ ತಾಯಿಯು ಯಾರವ ಗಳು? ಅವಳನ್ನು ಯಾವಾಗ ಯಾರಿಗೆ ಕೊಟ್ಟು ಲಗ್ನಮಾಡಿದರು? ಲಗ್ನವಾದದ್ದು ಯಾವ ವಿಧಿಯಿಂದ? ಇದನ್ನೆಲ್ಲಾ ನನಗೆ ಬೇಗ ತಿಳಿಸು" ಎನ್ನಲು

॥ ಮಧುರುವಾಚ ॥

ವಿಧವಾ ಜನನೀ ನಾಥ ಬ್ರಾಹ್ಮಣೇನ ತಪಸ್ವಿನಾ ।
ಗರ್ಭಿಣೀ ಸಮಭೂತ್ತಸ್ಮಾದಯಂ ದೇಹಸ್ತತೋಽಭವತ್ ॥ ೪೦ ॥

॥ ಗುರುರುವಾಚ ॥

ಕಪಟೇನ ಯತಶ್ಶಾಸ್ತ್ರಂ ಮತ್ತೋಽಧೀತಂ ದುರಾತ್ಮನಾ ।
ತೇನ ಸಿದ್ಧಾಂತಮರ್ಯಾದಾ ಕದಾಚಿನ್ನ ಸ್ಫುರತ್ವಿಯಂ ॥ ೪೧ ॥

॥ ಮಧುರುವಾಚ ॥

ಭವಿಷ್ಯತಿ ಮಹಾಭಾಗ ವಚನಂ ತವ ನಾನ್ಯಥಾ ।
ಪೂರ್ವಪಕ್ಷೋ ಮಮ ಹೃದಿ ಪ್ರಾದುರ್ಭವತು ನಿಶ್ಚಲಃ ॥ ೪೨ ॥

॥ ಗುರುರುವಾಚ ॥

ಅಂಧತಾ ತವ ಸಿದ್ಧಾಂತೇ ಪೂರ್ವಪಕ್ಷೇ ಚ ಪಾಟವಂ ।
ಭವತ್ವೇವ ಪರಂ ತ್ವೇಕಂ ಪಾಪಾಃ ಶಿಷ್ಯಾ ಭವಂತು ತೇ ॥ ೪೩ ॥

---

೪೦. ಮಧುವು “ ಗುರುವೇ ನಮ್ಮ ತಾಯಿಯು ನಿಜವಾಗಿಯೂ ವಿಧವೆಯು. ಯಾವನೋ ಒಬ್ಬ ತಪಸ್ವಿಯಾದ ಬ್ರಾಹ್ಮಣನ ಸಂಪರ್ಕದಿಂದ ನಾನು ಜನಿಸಿದೆನು ” ಎಂದು ಹೇಳಿಕೊಳ್ಳಲು,

೪೧. ಗುರುವು ಕೋಪದಿಂದ “ ಎಲೈ ಶಿಷ್ಯನೇ, ನೀನು ಮೋಸಮಾಡಿ ಈ ವಿಷಯವನ್ನು ನನಗೆ ತಿಳಿಸದೆ ನನ್ನಿಂದ ಎಲ್ಲಾ ಶಾಸ್ತ್ರಗಳನ್ನು ಅಭ್ಯಾಸಮಾಡಿರುವೆ. ಆದ್ದರಿಂದ ನಿನಗೆ ನಮ್ಮ ಶಾಸ್ತ್ರಸಿದ್ಧಾಂತವು ಸ್ಫುರಿಸದೇ ಹೋಗಲಿ ” ಎಂದು ಶಪಿಸಿದನು.

೪೨. ಆಗ ಮಧುವು “ ಸ್ವಾಮಿಯೇ ನಿಮ್ಮ ಮಾತು ಸುಳ್ಳಾಗಲಾರದು. ಸಿದ್ಧಾಂತಜ್ಞಾನವು ನನಗೆ ಕಮ್ಮಿಯಾದರೂ ಪೂರ್ವಪಕ್ಷದ ಸ್ಮರಣೆಯಾದರೂ ನನಗೆ ಉಂಟಾಗುತ್ತಿರಲಿ ” ಎಂದು ಕೇಳಿಕೊಂಡನು.

೪೩. ಆಗ ಗುರುವು “ ಶಿಷ್ಯನೇ, ನಿನಗೆ ಸಿದ್ಧಾಂತನಿಶ್ಚಯದಲ್ಲಿ ಅಜ್ಞಾನವೂ, ಪೂರ್ವಪಕ್ಷಮಾಡುವುದರಲ್ಲಿ ಚಟುವಟಿಕೆಯೂ ಉಂಟಾಗಲಿ. ನಿನಗೆ ಒದಗುವ ಶಿಷ್ಯರೆಲ್ಲರೂ ಪಾಪಿಷ್ಠರಾಗಲಿ.

ಮೋಹಾತ್ಸಿದ್ಧಾಂತರಹಿತಾ ಲೋಭಾತ್ತೇ ನೃಪಸೇವಕಾಃ ।
ಕ್ರೋಧಾತ್ಕಠಿನವಕ್ತಾರೋ ದಂಭಾದ್ವೇಷೇಣ ಸುಂದರಾಃ ॥ ೪೪ ॥

ಹೇತುವಾದೇನ ಶಾಸ್ತ್ರಾಣಿ ಸರ್ವಾಣಿ ನ ವಿದಂತಿ ತೇ ।
ನಿರಯೇಷ್ವೇವ ಘೋರೇಷು ಗಮಿಷ್ಯಂತ್ಯಚಿರಾಚ್ಚಿರಂ ॥ ೪೫ ॥

॥ ಸೂತ ಉವಾಚ ॥

ಮಧುನಾಮಾ ತತಃ ಪ್ರಾಪ್ಯ ಶಾಪಂ ತಂ ದುಷ್ಟಬುದ್ಧಿಮಾನ್ ।
ಬಾದರಾಯಣಸೂತ್ರಾಣಾಂ ವ್ಯಾಖ್ಯಾನಂ ಸ ಕರಿಷ್ಯತಿ ॥ ೪೬ ॥

ಮಧ್ವಾಚಾರ್ಯಸ್ತತೋ ಭಾವಾದ್ದಾಕ್ಷಿಣಾತ್ಯೋ ಮಹಾನ್ ಕಲೌ ।
ತಚ್ಛಿಷ್ಯಾಃ ಪ್ರತಿಶಿಷ್ಯಾಶ್ಚ ನಾರ್ಯಾವರ್ತೇ ನ ಚೋತ್ಕಲೇ ॥ ೪೭ ॥

---

೪೪. ಅಲ್ಲದೆ ಆ ಶಿಷ್ಯರು ಅಜ್ಞಾನಿಗಳಾಗಿ ಸಿದ್ಧಾಂತವನ್ನು ತಿಳಿಯದೇ ಹೋಗಲಿ. ಆಸೆಯಿಂದ ರಾಜಸೇವಕರಾಗಲಿ. ಅವರಲ್ಲಿ ಅತಿಶಯವಾದ ಕ್ರೋಧವು ಹೆಚ್ಚಿ, ಎಲ್ಲರಲ್ಲಿಯೂ ಕಠಿನವಾಗಿ ಮಾತನಾಡುತ್ತಾ, ಅವರು ದ್ವೇಷವನ್ನು ಸಂಪಾದಿಸಿ ಕೊಳ್ಳಲಿ. ದಂಭದಿಂದ ವೇಷಗಳನ್ನು ಕಟ್ಟಿ ಸುಂದರರಾಗಿ ಕಾಣಲಿ.

೪೫. ಪ್ರತಿಶಾಸ್ತ್ರದ ಪಂಕ್ತಿಗೂ ಹೇತುವಾದಮಾಡುತ್ತಾ ಯಾವ ಸಿದ್ಧಾಂತ ವನ್ನೂ ಅವರು ನಂಬದೇ ಹೋಗಲಿ. ಅದರಿಂದ ಅವರು ಜಾಗ್ರತೆಯಾಗಿ ಘೋರ ವಾದ ನರಕದುಃಖವನ್ನು ಅನುಭವಿಸುವವರಾಗಲಿ." ಎಂದು ಗುರುವು ಮಧುವಿಗೆ ಶಾಪಕೊಟ್ಟನು.

೪೬. ಶಾಪಗ್ರಸ್ತನಾದ ಮಧುವು ಅಲ್ಲಿಂದ ಹೊರಟು ವ್ಯಾಸಮಹಾಮುನಿ ಗಳ ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನವನ್ನು ಬರೆಯುವನು.

೪೭. ಭರತಖಂಡದ ದಕ್ಷಿಣದೇಶದಲ್ಲಿ ಆತನೇ ಮಧ್ವಾಚಾರ್ಯನೆಂದು ಪ್ರಸಿದ್ಧಿ ಪಡೆಯುವನು. ಅವನ ಶಿಷ್ಯಪ್ರಶಿಷ್ಯರೂ ಕಲಿಯುಗದಲ್ಲಿ ಅಧಿಕರಾಗುವರು. ಆದರೆ ಅವರು ಪುಣ್ಯಭೂಮಿಯಾದ ಆರ್ಯಾವರ್ತದಲ್ಲಿಯೂ, ಉತ್ಕಲದೇಶದಲ್ಲಿಯೂ ವಾಸಮಾಡುವುದಿಲ್ಲ.

ನ ಗೌಡೇ ನ ಚ ಗಂಗಾಯಾಸ್ತಿರೇ ಗೋದಾವರೀತಟೇ ।
ನಾರ್ಬುದಾರಣ್ಯಮಧ್ಯೇ ಚ ತತ್ಪ್ರಚಾರೋ ಭವಿಷ್ಯತಿ　　　॥ ೪೮ ॥

ಯಥಾ ಯಥಾ ಕಲೇರ್ಘೋರಃ ಪ್ರಚಾರೋ ಹಿ ಭವಿಷ್ಯತಿ ।
ತಥಾ ತಥಾ ಮಹಾರಾಷ್ಟ್ರೇ ಹೈತುಕಾ ವಿರಲಾಃ ಕ್ವಚಿತ್　　　॥ ೪೯ ॥

ತತೋಽತಿದುಷ್ಟಸಮಯೇ ಮಹಾಮ್ಲೇಚ್ಛೈಸ್ತಿರಸ್ಕೃತೇ ।
ಪ್ರಚ್ಛನ್ನಃ ಕುತ್ರಚಿತ್ಪಾಪೀ ಪ್ರಚಾರಂ ಹಿ ವಿಧಾಸ್ಯತಿ　　　॥ ೫೦ ॥

ಪಂಚವರ್ಷಸ್ತು ಸಂನ್ಯಾಸೀ ಪಠಿತ್ವಾ ದುಷ್ಟಬುದ್ಧಿಮಾನ್ ।
ಶಿಷ್ಯೋಪಶಿಷ್ಯಸಂಯುಕ್ತೋ ಹೇತುವಾದಂ ಕರಿಷ್ಯತಿ　　　॥ ೫೧ ॥

ತತ್ತ್ವಂ ಸಂಸಾರ ಇತ್ಯೇವ ನ ಬಾಧ್ಯಃ ಸತ್ಯ ಏವ ಹಿ ।
ವದತ್ಯತಸ್ತತ್ತ್ವವಾದೀ ಮಿಥ್ಯಾವಾದೀ ಸ ಉಚ್ಯತೇ　　　॥ ೫೨ ॥

---

೪೮. ಗೌಡದೇಶದಲ್ಲಿ, ಗಂಗಾತೀರದಲ್ಲಿ, ಗೋದಾವರೀ ದಡದಲ್ಲಿ ಅರ್ಬುದಾರಣ್ಯಮಧ್ಯದಲ್ಲಿ ಆ ಮಧ್ವಾಚಾರ್ಯರ ಶಿಷ್ಯರು ಹೆಚ್ಚಾಗಿರುವುದಿಲ್ಲ.

೪೯. ಕಲಿಯುಗದಲ್ಲಿ ಪಾಪಕರ್ಮವು ಅತಿಯಾಗಿ ಹೆಚ್ಚಿದ ಹಾಗೆಲ್ಲಾ ಈ ಮಧ್ವಮತ ಪ್ರಚಾರವು ಹೆಚ್ಚುವುದು. ಹಾಗೆಯೇ ಹೇತುವಾದಿಗಳಾದ ಇವರು ಮಹಾರಾಷ್ಟ್ರದೇಶದಲ್ಲಿ ಅಲ್ಪ ಸ್ವಲ್ಪವಾಗಿ ನೆಲಸುವರು.

೫೦. ಕಲಿಯುಗದಲ್ಲಿ ಮಹಾಮ್ಲೇಚ್ಛರು ಅತಿಯಾಗಿ ಲೋಕವನ್ನೆಲ್ಲಾ ನಾಶ ಮಾಡುವ ಸಮಯದಲ್ಲಿ ಈ ಪಾಪಿಷ್ಠನು ಎಲ್ಲಿಯೋ ಒಂದು ಕಡೆ ತನ್ನ ಮತಪ್ರಚಾರಕ್ಕಾಗಿ ನಿಲ್ಲುವನು.

೫೧. ಐದನೇ ವರ್ಷದ ಬಾಲಕನಾಗಿಯೇ ಸಂನ್ಯಾಸಿಯಾಗಿ ಅನೇಕ ಶಾಸ್ತ್ರಗಳನ್ನು ಓದಿ ಶಿಷ್ಯರೊಡಗೂಡಿ ಕಾರಣವಾದದಿಂದ, ತಮ್ಮ ಸಿದ್ಧಾಂತವನ್ನು ಪ್ರಚಾರ ಪಡಿಸುವನು.

೫೨. ಸಂಸಾರವು ಸ್ಥಿರವೆಂದೂ, ಅದನ್ನು ದೋಷವೆಂದು ಬಿಡತಕ್ಕದ್ದಲ್ಲವೆಂದೂ ಆದರಿಂದಲೇ ಸತ್ಯವನ್ನು ಸಂಪಾದಿಸಬಹುದೆಂದೂ ಹೇಳುವನು. ಅಲ್ಲದೆ ಸಂಸಾರವನ್ನು ಮಿಥ್ಯೆಯೆಂದು ಹೇಳತಕ್ಕ, ಯಾಥಾರ್ಥ್ಯವನ್ನು ಬೋಧಿಸುವ, ತತ್ತ್ವವಾದಿಯನ್ನು ಮಿಥ್ಯಾವಾದಿಯೆಂದು ಹಾಸ್ಯಮಾಡುವನು.

ಮಿಥ್ಯಾಭೂತಃ ಪ್ರಪಂಚೋಽಯಂ ಮಯಾ ನಿರ್ಮಿತ ಇಷ್ಯತೇ ।
ಮಾಯಾವಾದಿನ ಇತ್ಯೇತೇ ವಸ್ತುತಸ್ತತ್ತ್ವವಾದಿನಃ ॥ ೫೩ ॥

ಸಚ್ಛಾಸ್ತ್ರಂ ಜೈಮಿನೀಯಂ ತು ಕರ್ಮಕಾಂಡಪ್ರವರ್ತಕಂ ।
ಗೌತಮೀಯಂ ತು ಸಚ್ಛಾಸ್ತ್ರಮೀಶ್ವರಪ್ರತಿಪಾದನಂ ॥ ೫೪ ॥

ಪುಂಪ್ರಕೃತ್ಯೋರ್ವಿವೇಕಸ್ಯ ಬೋಧಕಂ ಕಾಪಿಲಂ ಮತಂ ।
ತಥಾಽವೈಶೇಷಿಕಂ ಶಾಸ್ತ್ರಮೀಶ್ವರಪ್ರತಿಪಾದಕಂ ॥ ೫೫ ॥

ಪಾತಂಜಲಂ ಯೋಗಶಾಸ್ತ್ರಂ ಶೈವಂ ತಚ್ಛಾಸ್ತ್ರಮಿಷ್ಯತೇ ।
ವೇದಾಂತಶಾಸ್ತ್ರಮೂರ್ಧನ್ಯಮದ್ವೈತಂ ಯಚ್ಚ ಬೋಧಯೇತ್ ॥ ೫೬ ॥

---

೫೩. ಈ ಪ್ರಪಂಚವು ಸುಳ್ಳು. ಮಾಯಾವಿಶಿಷ್ಟನಾದ ಪರಬ್ರಹ್ಮವಸ್ತುವೇ ಈ ಜಗದ್ರೂಪದಿಂದ ಭಾಸಮಾನವಾಗುವುದು ಎಂದು ಹೇಳುವ ಅದ್ವೈತ ತತ್ತ್ವವನ್ನು ಮಿಥ್ಯಾವಾದಿಯೆಂದು ಅಲ್ಲಗಳೆಯುವನು. ಇದು ಈತನ ತತ್ತ್ವಮಾರ್ಗವು.

೫೪. ಜೈಮಿನಿಋಷಿಗಳು ಕರ್ಮಕಾಂಡವನ್ನು ಪ್ರಚಾರಗೊಳಿಸುವಂತಹ ಮೀಮಾಂಸಾಶಾಸ್ತ್ರವನ್ನು ನಿರ್ಮಿಸಿದರು. ಈಶ್ವರನನ್ನು ಯುಕ್ತಿಗಳಿಂದ ಸ್ಥಿರಪಡಿಸುವಂತಹ ತರ್ಕಶಾಸ್ತ್ರವನ್ನು ಗೌತಮರು ಪ್ರತಿಪಾದಿಸಿದರು.

೫೫. ಪುರುಷ, ಪ್ರಕೃತಿ ಇವುಗಳ ಸ್ವರೂಪ ನಿರ್ಣಯಾದಿಗಳನ್ನು ತಿಳಿಸುವ ಕಾಪಿಲಮತವೂ, ಹಾಗೆಯೇ ಈಶ್ವರನನ್ನು ಪ್ರತಿಪಾದಿಸುವಂತಹ ವೈಶೇಷಿಕಶಾಸ್ತ್ರವೂ ಲೋಕದಲ್ಲಿ ಪ್ರಸಿದ್ಧವಾಗಿವೆ. (ಪುರುಷಪ್ರಕೃತಿಗಳ ವಿವೇಕಜ್ಞಾನವೇ, ಮೋಕ್ಷಸಾಧನವೆಂದು ಕಾಪಿಲರು ಹೇಳುವರು.)

೫೬. ಪತಂಜಲಿಗಳು ಯೋಗಶಾಸ್ತ್ರವನ್ನು ಬರೆದರು. ಆ ಶಾಸ್ತ್ರದಲ್ಲಿ ಶಿವನ ಶ್ರೇಷ್ಠತೆಯೇ ಉಕ್ತವಾಗಿದೆ. ವೇದಾಂತಗಳಲ್ಲಿ ಅತ್ಯಂತ ಶ್ರೇಷ್ಠವೆನಿಸಿದ ಅದ್ವೈತ ತತ್ತ್ವವೂ ಲೋಕದಲ್ಲಿ ಬಹು ಪ್ರಸಿದ್ಧವಾಗಿದೆ.

ವೇದಾಸ್ಸರ್ವೇ ಷಡಂಗಾಸ್ತು ಪುರಾಣಾನೀತಿಹಾಸಕಃ ।
ಸ್ಮೃತಿಶ್ಚೋಪಪುರಾಣಾನಿ ತಥೋಪಸ್ಮೃತಯಃ ಶುಭಾಃ ॥ ೫೭ ॥

ಅನ್ಯೋನ್ಯಂ ಸರ್ವವಿದ್ಯಾನಾಂ ಪ್ರಾಮಾಣ್ಯಮಧಿಕಾರತಃ ।
ತಾತ್ಪರ್ಯಂ ಚ ಪುಮರ್ಥೇಷು ಸರ್ವಾಣ್ಯೇವಂ ಜಗುಃ ಕಿಲ ॥ ೫೮ ॥

ಕಿಂಚಿದ್ವಿರೋಧೇ ಸತ್ಯೇವ ನ ವಿರೋಧೋಽಸ್ತಿ ತತ್ತ್ವತಃ ।
ಮನ್ಯಂತೇ ಶ್ರೀಮಹೇಶಾನಂ ಸರ್ವಾಣ್ಯೇವ ಪರಾತ್ಪರಂ ॥ ೫೯ ॥

ಪಾಪಿಷ್ಠಾ ನೈವ ಮನ್ಯಂತೇ ವೇದಮಾರ್ಗಬಹಿಷ್ಕೃತಾಃ ।
ಆಚಾರ್ಯಂ ಮಧುನಾಮಾನಂ ವದಂತೋ ವಿಧವಾಸುತಂ ॥ ೬೦ ॥

ಪ್ರಚ್ಛನ್ನೋಽಸೌ ಮಹಾದುಷ್ಟಶ್ಚಾರ್ವಾಕೋ ಮಧುಸಂಜ್ಞಕಃ ।
ಭವಿಷ್ಯತಿ ಕಲೌ ವಿಪ್ರಾಃ ಶಿವನಿಂದಾಪ್ರವರ್ತಕಃ ॥ ೬೧ ॥

೫೭-೫೮. ಸಮಸ್ತ ವೇದಗಳೂ, ಆರು ಶಾಸ್ತ್ರಗಳೂ, ಇನ್ನೂ ಉಳಿದ ಉಪಪುರಾಣಗಳೂ ಸಹ ಅನ್ಯೋನ್ಯವಾಗಿ ವೇದಪ್ರಾಮಾಣ್ಯವನ್ನೂ, ಪುರುಷಾರ್ಥ ಸಂಪಾದನೆಯಲ್ಲಿ ತಾತ್ಪರ್ಯವನ್ನೂ ಸ್ಥಿರಪಡಿಸುತ್ತಿವೆ.

೫೯. ಮೇಲೆ ಹೇಳಿದ ವೇದಶಾಸ್ತ್ರಾದಿಗಳಲ್ಲಿ ಪರಸ್ಪರ ಮಾರ್ಗವು ಸ್ವಲ್ಪ ವ್ಯತ್ಯಾಸವಾಗಿ ಕಂಡುಬಂದರೂ, ತತ್ತ್ವಾರ್ಥಮಾರ್ಗವು ಒಂದೇ ಆಗಿರುತ್ತದೆ. ಆ ಎಲ್ಲ ಶಾಸ್ತ್ರಗಳೂ ಶ್ರೀ ಪರಮೇಶ್ವರನನ್ನೇ ಪರಾಪರವಸ್ತುವೆಂದು ಸಾರುತ್ತಿವೆ.

೬೦. ಹೀಗಿದ್ದರೂ ಸಹ ಕೆಲವರು ಪಾಪಿಗಳು, ಸಮಸ್ತ ತತ್ತ್ವಗಳನ್ನೂ ಬಿಟ್ಟು, ವಿಧವಾಪುತ್ರನಾದ ಮಧ್ವಾಚಾರ್ಯನನ್ನು ಗುರುವನ್ನಾಗಿ ಮಾಡಿಕೊಂಡು ವೇದಮಾರ್ಗ ಬಹಿಷ್ಕೃತರಾಗುವರು.

೬೧. ಈ ಮಧ್ವಾಚಾರ್ಯನು ಮಹಾದುಷ್ಟನು. ಚಾರ್ವಾಕನಂತೆ ಒಳಗೆ ನಾಸ್ತಿಕ್ಯವನ್ನೂ, ಮೇಲೆ ಆಸ್ತಿಕತನವನ್ನೂ, ತೋರ್ಪಡಿಸುತ್ತಾ ಪ್ರಚ್ಛನ್ನವೇಷಧಾರಿಯಾಗಿ ಕಲಿಯುಗದಲ್ಲಿ ಶಿವದೂಷಕನಾಗಿ ಪ್ರಸಿದ್ಧಿಪಡೆಯುವನು.

ಮೋಹಾತ್ಸಿದ್ಧಾಂತಬಾಹ್ಯತ್ವಂ ಕ್ರೋಧಾಚ್ಛಾಸ್ತ್ರನಿಷೇಧನಂ ।
ಲೋಭೇನ ನೃಪತೇಃ ಸೇವಾ ದಂಭಾದನ್ಯಪ್ರತಾರಣಂ ॥ ೬೨ ॥

ಗಣಿಕಾಮೈಥುನಂ ಕಾಮಾದ್ಧೇತುವಾದೇನ ವಾದಿತಾ ।
ಭವಿಷ್ಯತಿ ಕಲೌ ವಿಪ್ರಾಃ ಷೋಢೇಯಂ ತತ್ತ್ವವಾದಿತಾ । ॥ ೬೩ ॥

ಪಂಚವರ್ಷಂ ಯತಿಂ ಕೃತ್ವಾ ಕ್ರಮೇಣಾದಾಯ ಬಾಲಕಂ ।
ಮಠಾಪತ್ಯಂ ವಿಧಾಸ್ಯಂತಿ ದ್ರವ್ಯಲೋಭೇನ ನಾಸ್ತಿಕಾಃ ॥ ೬೪ ॥

ಪಾರಂಪರ್ಯಂ ಮಠಸ್ಯೈವ ರಕ್ಷಿಷ್ಯಂತ್ಯಭಿರಾಗಿಣಃ ।
ಭೋಗಾಸಕ್ತಾಶ್ಚ ಪಾಪಿಷ್ಠಾ ದಾಸೀಗಮನಕಾರಿಣಃ ॥ ೬೫ ॥

ನಾಮ್ನಾ ಸಂನ್ಯಾಸಿನಸ್ತೀರ್ಥೇ ಯಾನಾರೂಢಾಃ ಸಸೇವಕಾಃ ।
ನರವಾಹನಮಾರೂಢಾಃ ಶಿಖಾಸೂತ್ರಬಹಿಷ್ಕೃತಾಃ ॥ ೬೬ ॥

೬೨-೬೩. ಈ ಮಧ್ವಾಚಾರ್ಯನ ತತ್ತ್ವದಲ್ಲಿ ಆರು ಗುಣಗಳು ಆರು ವಿಧವಾಗಿ ಕಾರ್ಯಸಾಧಕವಾಗುತ್ತವೆ.. ಮೋಹ, (ಅಜ್ಞಾನ) ವೆಂಬುದು ಸಿದ್ಧಾಂತವನ್ನು ದೂರ ಮಾಡುತ್ತದೆ. ಕ್ರೋಧವು ಹೆಚ್ಚಿ ಬೇರೆ ಬೇರೆ ಶಾಸ್ತ್ರಗಳನ್ನು ನಿಷೇಧಿಸುತ್ತದೆ. ಲೋಭದಿಂದ ರಾಜಸೇವೆಯಲ್ಲಿ ಪ್ರವೃತ್ತಿಯುಂಟಾಗುವುದು. ದಂಭ(ಜಂಬ) ವೆಂಬುದು ಮತ್ತೊಬ್ಬರನ್ನು ಹಿಯ್ಯಾಳಿಸುವ ಬುದ್ಧಿಯನ್ನುಂಟುಮಾಡುವುದು. ಕಾಮವೆಂಬುದು ವೇಶ್ಯಾಮೈಥುನವನ್ನು, ಹೇತುವಾದವು ವಾದಮಾಡುವ ಶಕ್ತಿಯನ್ನು ಹೆಚ್ಚಿಸುತ್ತದೆ. ಹೀಗೆ ಆರು ಗುಣಗಳು ಮಧ್ವಾಚಾರ್ಯನ ತತ್ತ್ವವನ್ನು ಆರು ವಿಧವಾಗಿ ವಿವರಿಸುತ್ತವೆ.

೬೪. ಆ ಮಧ್ವಾಚಾರ್ಯಶಿಷ್ಯರು ಐದು ವರ್ಷದ ಒಬ್ಬ ಹುಡುಗನನ್ನು ಯತಿಯನ್ನಾಗಿಮಾಡಿ ಆ ಯತಿಗೆ ಒಂದು ಮಠವನ್ನು ಕಲ್ಪಿಸಿ, ದ್ರವ್ಯದ ಆಸೆಯಿಂದ ನಾಸ್ತಿಕರಾಗಿ ಆ ಮಠದ ನೆಪದಲ್ಲಿ ದ್ರವ್ಯಾರ್ಜನೆಮಾಡುವರು.

೬೫. ಆ ಮಠಕ್ಕೆ ಅದೇ ಸಂನ್ಯಾಸಿಯ ವಂಶೀಕರೇ ಸಂನ್ಯಾಸಿಗಳಾಗುವಂತೆ ಹಠಹಿಡಿಯುವರು. ಆ ಸಂನ್ಯಾಸಿಗಳಾದರೋ ಕೇವಲ ಸುಖಾಭಿಲಾಷೆಯುಳ್ಳವರಾಗಿ ದಾಸೀಜನರ ಸಂಭೋಗಗಳಿಂದ ಪಾಪಿಷ್ಠರಾಗಿ ಕಾಲಕಳೆಯುವರು.

೬೬. ಸಂನ್ಯಾಸಿಯೆಂಬ ವೇಷಧಾರಿಗಳಾಗಿ ಅನೇಕ ಜನ ಸೇವಕರನ್ನೊಳಗೊಂಡು ಯಾನಾರೂಢರಾಗಿ, ನರವಾಹನವನ್ನಪೇಕ್ಷಿಸುತ್ತಾ ಜುಟ್ಟುಜನಿವಾರಗಳನ್ನು ತೆಗೆದುಹಾಕಿ ಆಡಂಬರದಿಂದ ಜೀವಿಸುವರು.

ತತ್ಪಕ್ಷಪಾತಿನೋ ಮೂಢಾ ಗೃಹಸ್ಥಾಃ ಶಿವನಿಂದಕಾಃ ।
ಮಿಥ್ಯಾವೈಷ್ಣವಮಾನೇನ ಗ್ರಸ್ತಾ ನಿರಯಗಾಮಿನಃ ॥ ೬೭ ॥

ವೈಷ್ಣವಾ ವೇಷಮಾತ್ರೇಣ ತಂತುಮಾತ್ರೇಣ ವಾಡವಾಃ ।
ವಾದಿನಃ ಕ್ರೋಧಮಾತ್ರೇಣ ವಿದ್ವಾಂಸೋ ಹೇತುವಾದತಃ ॥ ೬೮ ॥

ಪಠಿಷ್ಯಂತಿ ಚ ಶಾಸ್ತ್ರಾಣಿ ಕೇಚಿದ್ದೂಷಣಸಿದ್ಧಯೇ ।
ಸ್ವಕೀಯಂ ಗೋಪಯಿಷ್ಯಂತಿ ಪರಕೀಯೇನ ಪಂಡಿತಾಃ ॥ ೬೯ ॥

॥ ಸೂತ ಉವಾಚ ॥

ಮಹಾಮೋಹಾದಯಃ ಸರ್ವೇ ರತಿಮಾಶ್ವಾಸ್ಯ ಭಾಮಿನೀಂ ।
ಪ್ರೋಚುಶ್ಚ ಶ್ಲಕ್ಷ್ಣಯಾ ವಾಚಾ ತದ್ದುಃಖವಿನಿವಾರಕಾಃ ॥ ೭೦ ॥

---

೬೭. ಆ ಮಧ್ವಾಚಾರ್ಯನ ಮತವನ್ನೇ ಅನುಸರಿಸಿ ಅನೇಕ ಗೃಹಸ್ಥರು ಶಿವ ನಿಂದಕರಾಗಿ ವೈಷ್ಣವರೆಂಬ ಅಭಿಮಾನದಿಂದ ಅನ್ಯಾಯವಾಗಿ ನರಕವನ್ನು ಪ್ರವೇ ಶಿಸುವರು.

೬೮. ವೇಷವನ್ನು ನೋಡಿದರೆ ಅವರು ವೈಷ್ಣವರಂತಿರುವರು. ಯಜ್ಞೋಪ ವೀತಾದಿ ಚಿಹ್ನೆಗಳಿಂದ ಅವರನ್ನು ಬ್ರಾಹ್ಮಣರೆನ್ನಬಹುದು. ಕೇವಲ ಕ್ರೋಧ ದಿಂದಲೇ ವಾದಿಗಳಾಗಿರುವರು. ಕಾರಣಗಳನ್ನು ಪ್ರತಿಯೊಂದು ಕರ್ಮಕ್ಕೂ ಕೇಳುವವ ರಾಗಿ, ತಾವು ವಿದ್ವಾಂಸರೆನಿಸಿಕೊಂಡಿರುವರು.

೬೯. ಅವರಲ್ಲಿ ಕೆಲವರು ಮತ್ತೊಂದು ಶಾಸ್ತ್ರವನ್ನು ದೂಷಿಸುವುದಕ್ಕಾಗಿಯೇ ತರ್ಕವ್ಯಾಕರಣಾದಿ ಶಾಸ್ತ್ರಗಳನ್ನು ಓದುವರು. ತಮ್ಮ ಸಿದ್ಧಾಂತದಲ್ಲಿರುವ ತತ್ತ್ವದ ತಪ್ಪನ್ನು ಮುಚ್ಚಿ ಮತ್ತೊಬ್ಬರ ದೋಷಗಳನ್ನೇ ಎತ್ತಿ ಉದ್ಘಾಟನೆಮಾಡುವರು. ಕೆಲವರು.

೭೦. ಎಲೈ ಋಷಿಗಳೇ, ಹೀಗೆ ಮಹಾಮೋಹಾದಿಗಳು ಕಲಿಯುಗದಲ್ಲಿ ಶಿವ ನಿಂದನೆಯನ್ನು ತಾವು ಮಾಡುತ್ತೇವೆಂದು ರತೀದೇವಿಗೆ ಭರವಸೆಯಿತ್ತು, ರತೀದೇವಿ ಯನ್ನು ಸಂತೈಸಿ, ಮೃದುಮಧುರವಾದ ಮಾತುಗಳಿಂದ ರತಿಯ ದುಃಖಗಳನ್ನು ನಿವಾರಣೆ ಮಾಡಿದರು.

॥ ಮೋಹಾದಯ ಊಚುಃ ॥

ರತೇ ಮಾ ಕುರು ಸಂತಾಪಮಹಂ ಮೋಹಃ ಕಲೇಃ ಸಖಾ ।
ಕ್ರೋಧಃ ಪತ್ಯುಃ ಪರೋ ಬಂಧುರ್ಲೋಭಮೋಹೌ ಚ ದೇವತೌ ॥ ೭೧ ॥

ಪ್ರಾಪ್ತೇ ಕಲಿಯುಗೇ ಪೂರ್ಣೇ ಮಹಾಲೋಭಾದಯೋ ವಯಂ ।
ವಸಂತಂ ಮಧುನಾಮಾನಮವತೀರ್ಣಂ ಚ ದಕ್ಷಿಣೇ ॥ ೭೨ ॥

ಮಮಾಶ್ರಿತ್ಯ ತರ್ಕೋ ಹೇತುವಾದಂ ಕುಟಿಲಬುದ್ಧಯಃ ।
ಕರಿಷ್ಯಾಮೋ ಯಥಾಶಕ್ಯಂ ಶಿವಪೂಜಾನಿವಾರಣಂ ॥ ೭೩ ॥

॥ ಸೂತ ಉವಾಚ ॥

ಇತಿ ತೇ ರತಿಮಾಶ್ವಾಸ್ಯ ಯಥಾಽಽಗತ ಮಿತೋ ಗತಾಃ ।
ಇತಿ ಸರ್ವಂ ಸಮಾಖ್ಯಾತಂ ಶಿವನಿಂದಕಕಾರಣಂ ॥ ೭೪ ॥

---

೭೧. ಅಲ್ಲದೆ ಮೋಹಾದಿಗಳು ರತಿಯೊಡನೆ " ಎಲೈ ರತೀದೇವಿಯೇ, ನೀನು ದುಃಖಿಸಬೇಡ, ನಾನೇ ಮೋಹನೆಂಬುವನು. ಕಲಿಪುರುಷನ ಸ್ನೇಹಿತನು. ನಿನ್ನ ಪತಿಗೆ ಆಪ್ತಬಂಧುವಾದ ಕ್ರೋಧವೇ ಈತನು. ಲೋಭ, ಮೋಹ, ಇವರಿಬ್ಬರೂ ನಿನ್ನ ಪತಿಯ ಅಣ್ಣತಮ್ಮಂದಿರು.

೭೨. ನಾವೆಲ್ಲಾ ಕಲಿಯುಗದ ಮಧ್ಯದಲ್ಲಿ ದಕ್ಷಿಣಕನ್ನಡದೇಶದಲ್ಲಿ ಅವತಾರ ಮಾಡುವ ಮಧುವೆಂಬ ಹೆಸರುಳ್ಳ ವಸಂತನಿಗೆ ಸಹಾಯಕರಾಗಿ ಜನಿಸುವೆವು.

೭೩. ಆಗ ಈ ಕಾಮಕ್ರೋಧಾದಿಗಳೆಲ್ಲವೂ ನನ್ನನ್ನು ಆಶ್ರಯಿಸಿ ಎಲ್ಲರೊಡನೆಯೂ ಹೇತುವಾದವನ್ನು ಮಾಡುತ್ತಾ ಶಿವಪೂಜಾಪ್ರತಿಬಂಧಕರಾಗಿ ವರ್ತಿಸುವರು.

೭೪. ಹೀಗೆ ಆ ಮಹಾಮೋಹಾದಿಗಳೆಲ್ಲರೂ ರತಿದೇವಿಯನ್ನು ಸಮಾಧಾನಗೊಳಿಸಿ ತಾವು ಬಂದ ದಾರಿಯನ್ನು ಹಿಡಿದು ಹೊರಟುಹೋದರು. ಎಲೈ ಋಷಿಗಳಿರಾ ಹೀಗೆ ಕಲಿಯುಗದಲ್ಲಿ ಶಿವನಿಂದನೆಗೆ ಕಾರಣವಾದ ಇತಿಹಾಸವನ್ನು ನಿಮಗೆ ಹೇಳಿರುವೆನು " ಎಂದು ಸೂತಪುರಾಣಿಕರು ಶೌನಕಾದಿಗಳಿಗೆ ಹೇಳಿದರು

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಮಹೇಶವಿಷ್ಣು ತುಲ್ಯತ್ವಕಾರಣಾದಿ ಕಥನಂ ನಾಮ ಚತ್ವಾರಿಂಶೋಽಧ್ಯಾಯಃ.

ಹೀಗೆ ಬ್ರಹ್ಮಪುರಾಣೋಪರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದ ರೂಪವಾಗಿ, ಮಹೇಶ್ವರ ಮತ್ತು ವಿಷ್ಣುವಿನ ಸಾಮ್ಯಕ್ಕೆ ಕಾರಣವಾದ ಕಥೆಯನ್ನು ತಿಳಿಸುವ ನಲ್ವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಏಕಚತ್ವಾರಿಂಶೋಽಧ್ಯಾಯಃ

॥ ಋಷಯ ಊಚುಃ ॥

ಸುದರ್ಶನಾಖ್ಯಂ ಯಚ್ಚಕ್ರಂ ಲಬ್ಧವಾನ್ ತತ್ಕಥಂ ಹರಿಃ ।
ಮಹಾದೇವಾದ್ಭಗವತಃ ಸೂತ ತದ್ವಕ್ತುಮರ್ಹಸಿ ॥ ೧ ॥

॥ ಸೂತ ಉವಾಚ ॥

ದೇವಾಸುರಾಣಾಮಭವತ್ಸಂಗ್ರಾಮೋಽದ್ಭುತದರ್ಶನಃ ।
ದೇವಾ ವಿನಿರ್ಜಿತಾ ದೈತ್ಯೈರ್ವಿಷ್ಣುಂ ಶರಣಮಾಗತಾಃ ॥ ೨ ॥

ಸ್ತುತ್ವಾ ತಂ ವಿವಿಧೈಃ ಸ್ತೋತ್ರೈಃ ಪ್ರಣಮ್ಯ ಪುರತಃ ಸ್ಥಿತಾಃ ।
ಭಯಭೀತಾಶ್ಚ ತೇ ಸರ್ವೇ ಕ್ಷತಾಂಗಾಃ ಕ್ಲೇಶಿತಾ ಭೃಶಂ ॥ ೩ ॥

ನಲವತ್ತೊಂದನೆಯ ಅಧ್ಯಾಯವು.

೧. ಪುನಃ ಶೌನಕಾದಿಗಳು ಸೂತಮಹರ್ಷಿಯನ್ನು ಕುರಿತು, " ಎಲೈ ಮಹರ್ಷಿಯೇ, ಮಹೇಶ್ವರನ ಅನುಗ್ರಹದಿಂದ ವಿಷ್ಣುವು ಸುದರ್ಶನವೆಂಬ ಚಕ್ರವನ್ನು ಹೊಂದಿದನು, ಎಂದು ಹೇಳುತ್ತಾರೆ. ಅದು ಹೇಗೆ? ದಯವಿಟ್ಟು ನಮಗೆ ಅದನ್ನು ತಿಳಿಸಬೇಕು " ಎಂದು ಕೇಳಿಕೊಳ್ಳಲು

೨. ಸೂತಮಹರ್ಷಿಯು, " ಋಷಿಗಳೇ ಹಿಂದೆ ದೇವಾಸುರರಿಗೆ ಅತ್ಯದ್ಭುತವಾದ ಯುದ್ಧವು ನಡೆಯಿತಷ್ಟೆ. ಕೊನೆಗೆ ದೈತ್ಯರು ದೇವತೆಗಳನ್ನು ಸೋಲಿಸಿದರು. ಆಗ ದೇವತೆಗಳೆಲ್ಲರೂ ವಿಷ್ಣುವನ್ನು ಮೊರೆಹೊಕ್ಕರು.

೩. ವಿಷ್ಣುವನ್ನು ವಿಧವಿಧವಾಗಿ ಹೊಗಳಿ ನಮಸ್ಕರಿಸಿ, ಭಯದಿಂದನಡುಗುತ್ತಾ ದೈತ್ಯರಿಂದ ಗಾಯಗೊಳಿಸಲ್ಪಟ್ಟ ದೇಹವುಳ್ಳವರಾಗಿ ವಿಷ್ಣುವಿನ ಮುಂದೆ ನಿಂತರು.

ತಾನ್ ದೃಷ್ಟ್ವಾ ಪ್ರಾಹ ಭಗವಾನ್ ದೇವದೇವೋ ಜನಾರ್ದನಃ ।
ಕಿಮರ್ಥಮಾಗತಾ ದೇವಾ ವಕ್ತುಮರ್ಹಥ ಸಾಂಪ್ರತಂ ॥ ೪ ॥

ವಚಃಶ್ರುತ್ವಾ ಹರೇರ್ದೇವಾಃ ಪ್ರಣಮ್ಯೋಚುಃ ಸುರೋತ್ತಮಾಃ ।
ನಿರ್ಜಿತಾ ದಾನವೈಃ ಸರ್ವೇ ಶರಣಂ ತ್ವಾಮಿಹಾಗತಾಃ ॥ ೫ ॥

ಗತಿಸ್ತ್ವಮೇವ ದೇವಾನಾಂ ತ್ರಾತಾ ತ್ವಂ ಪುರುಷೋತ್ತಮ ।
ಹಂತುಮರ್ಹಸಿ ತಾನ್ ಶೀಘ್ರಮುಪಧ್ಯಾನ್ವಾರಿಜೇಕ್ಷಣ ॥ ೬ ॥

ಜಾಲಂಧರವಧಾರ್ಥಾಯ ಯಚ್ಚಕ್ರಂ ಶೂಲಪಾಣಿನಃ ।
ಮಹಾದೇವಾದ್ವರಾಲ್ಲಬ್ಧಂ ಜಹಿ ತೇನ ಮಹಾಬಲಾನ್ ॥ ೭ ॥

ತೇಷಾಂ ತದ್ವಚನಂ ಶ್ರುತ್ವಾ ಭಗವಾನ್ವಾರಿಜೇಕ್ಷಣಃ ।
ಅಹಂ ದೇವಾಸ್ತಥಾ ನೂನಂ ಕರಿಷ್ಯಾಮೀತಿ ಸುವ್ರತಾಃ ॥ ೮ ॥

---

೪. ಇಂಥ ದೇವತೆಗಳನ್ನು ಮಹಾವಿಷ್ಣುವು ನೋಡಿ "ಎಲೈ ದೇವತೆಗಳಿರಾ, ನೀವು ಏತಕ್ಕಾಗಿ ಇಲ್ಲಿಗೆ ಹೀಗೆ ಬಂದಿರುವಿರಿ" ಎಂದು ಪ್ರಶ್ನಿಸಲು,

೫ ದೇವತೆಗಳೆಲ್ಲರೂ ವಿಷ್ಣುವಿನ ಮಾತನ್ನು ಕೇಳಿ "ಸ್ವಾಮಿಯೇ ನಾವೆಲ್ಲರೂ ದಾನವರಿಗೆ ಸೋತು ಈಗ ನಿಮ್ಮನ್ನು ಮೊರೆಹೊಕ್ಕಿದ್ದೇವೆ" ಎಂದು ನಮಸ್ಕರಿಸಿ ಹೇಳಿದರು.

೬. ಮತ್ತೆ ದೇವತೆಗಳು "ಪುರುಷಶ್ರೇಷ್ಠನೇ, ನೀನೇ ನಮಗೆಲ್ಲಾ ರಕ್ಷಕನು. ನಮ್ಮನ್ನೆಲ್ಲಾ ಸದೆಬಡಿದಿರುವ ದುಷ್ಟರಾಕ್ಷಸರನ್ನು ಕೊಲ್ಲಲು ನೀನಲ್ಲದೆ ಮತ್ತಾರು ಸಮರ್ಥರಿರುವರು ?

೭. ಹಿಂದೆ ಜಲಂಧರನ ನಾಶಕ್ಕಾಗಿ ಮಹೇಶ್ವರನು ಚಕ್ರವೊಂದನ್ನು ಸೃಷ್ಟಿಸಿರುವನು. ಅದನ್ನು ನೀನು ಶಿವಾನುಗ್ರಹದಿಂದ ಪಡೆದು ಅದರ ಸಹಾಯದಿಂದ ಆ ದುಷ್ಟ ರಾಕ್ಷಸರನ್ನು ನಾಶಮಾಡು" ಎಂದು ಕೇಳಿಕೊಳ್ಳಲು,

೮. ಆ ಮಾತುಗಳನ್ನು ಕೇಳಿ ಕಮಲಾಕ್ಷನಾದ ಮಹಾವಿಷ್ಣುವು ತಾನು ಹಾಗೆಯೇ ಮಾಡುವೆನೆಂದು ದೇವತೆಗಳಿಗೆ ಭರವಸೆಕೊಟ್ಟನು.

ಹಿಮವತ್ಪರ್ವತಂ ಗತ್ವಾ ಪೂಜಯಾಮಾಸ ಶಂಕರಂ ।
ಲಿಂಗಂ ತತ್ರ ಪ್ರತಿಷ್ಠಾಪ್ಯ ಸ್ನಾಪ್ಯ ಗಂಧೋದಕೈಃ ಶುಭೈಃ ॥ ೯ ॥

ತ್ವರಿತಾಖ್ಯೇನ ರುದ್ರೇಣ ಸಂಪೂಜ್ಯ ಚ ಮಹೇಶ್ವರಂ ।
ತತೋ ನಾಮ್ನಾಂ ಸಹಸ್ರೇಣ ತುಷ್ಟಾವ ಪರಮೇಶ್ವರಂ ॥ ೧೦ ॥

ಪ್ರತಿನಾಮ ಚ ಪದ್ಮಾನಿ ತೈರಿಷ್ಟ್ವಾ ವೃಷಭಧ್ವಜಂ ।
ಭವಾದ್ಯೈರ್ನಾಮಭಿ ರ್ಭಕ್ತ್ಯಾ ಸ್ತೋತುಂ ಸಮುಪಚಕ್ರಮೇ ॥ ೧೧ ॥

॥ ವಿಷ್ಣುರುವಾಚ ॥

॥ ಶಿವಸಹಸ್ರನಾಮ ಸ್ತೋತ್ರಂ ॥

ಭವಃ ಶಿವೋ ಹರೋ ರುದ್ರಃ ಪುಷ್ಕಲೋ ಮುದ್ಗಲೋಚನಃ ।
ಅಗ್ರಗಣ್ಯಃ ಸದಾಚಾರಃ ಸರ್ವಃ ಶಂಭುರ್ಮಹೇಶ್ವರಃ ॥ ೧೨ ॥

---

೯. ಅಲ್ಲಿಂದಹಿಮಾಲಯ ಪರ್ವತಕ್ಕೆ ಹೋಗಿ ಅಲ್ಲಿ ಶಿವಲಿಂಗವನ್ನು ಪ್ರತಿಷ್ಠೆ ಮಾಡಿ, ಆ ಲಿಂಗವನ್ನು ಗಂಧಪುಷ್ಪಾದಿಗಳಿಂದ ಅರ್ಚಿಸಿದನು.

೧೦. ತ್ವರಿತವೆಂಬ ರುದ್ರಮಂತ್ರಗಳಿಂದ ಮಹೇಶ್ವರನನ್ನು ಭಕ್ತಿಯಿಂದ ಪೂಜಿಸಿ, ಸಹಸ್ರನಾಮಗಳಿಂದ ಪರಮೇಶ್ವರನನ್ನು ಅರ್ಚಿಸಿ ತೃಪ್ತಿಪಡಿಸಿದನು.

೧೧. ಒಂದೊಂದು ನಾಮಕ್ಕೂ ಒಂದೊಂದು ಕಮಲವನ್ನು ಪರಮೇಶ್ವರನಿಗೆ ಅರ್ಪಿಸುತ್ತಾ ಬಂದನು. ಹಾಗೆ ಕಮಲಪುಷ್ಪಗಳಿಂದ ಮಹೇಶ್ವರನ ಹೆಸರುಗಳನ್ನು ಹೇಳುತ್ತಾ ಶಿವಲಿಂಗವನ್ನು ಆರಾಧಿಸಲು ಪ್ರಾರಂಭಿಸಿದನು.

೧೨–೧೩. " ಎಲೈ ಪರಮೇಶ್ವರನೇ, ನೀನು ಲೋಕಸೃಷ್ಟಿಯ ಪದ್ಧತಿಯನ್ನನುಸರಿಸಿ, ಉತ್ಪತ್ತಿಯನ್ನೂ ಪಡೆಯುವೆ. ಮಂಗಳಕರನಾಗಿಯೂ, ಭಕ್ತರದುರಿತಗಳನ್ನು ನಿವಾರಿಸುವವನಾಗಿಯೂ ಇರುವೆ. ಭಯಂಕರನಾಗಿರುವುದರಿಂದ ರುದ್ರನೆನಿಸಿರುವೆ. ಸರ್ವವ್ಯಾಪಿಯಾದ್ದರಿಂದ ಪುಷ್ಕಲನು. ಹೆಸರುಗಿಡದ ಎಲೆಯಂತೆ ಕಣ್ಣುಳ್ಳವನು. ದೇವಾಧಿದೇವನಾದವನು. ಸದ್ರೂಪವಾದ ಆಚಾರವುಳ್ಳವನು. ಸರ್ವವ್ಯಾಪಿಯು, ಸುಖದಾಯಕನು, ಲೋಕದೊಡೆಯನು, ಜನರಕ್ಷಕನು. ನಿರಾಕಾರನು, ಈಶಾನನೆಂಬ ದಿಕ್ಪ-

ಈಶ್ವರಃ ಸ್ಥಾಣುರೀಶಾನಃ ಸಹಸ್ರಾಕ್ಷಃ ಸಹಸ್ರಪಾತ್ ।
ವರೀಯಾನ್ ವರದೋ ವಂದ್ಯಃ ಶಂಕರಃ ಪರಮೇಶ್ವರಃ ॥ ೧೩ ॥

ಗಂಗಾಧರಃ ಶೂಲಧರಃ ಪರಾರ್ಥೈಕಪ್ರಯೋಜಕಃ ।
ಸರ್ವಜ್ಞಃ ಸರ್ವದೇವಾದಿರ್ಗಿರಿಧನ್ವಾ ಜಟಾಧರಃ ॥ ೧೪ ॥

ಚಂದ್ರಾಪೀಡಶ್ಚಂದ್ರಮೌಳಿರ್ವೇಧಾ ವಿಶ್ವಾಮರೇಶ್ವರಃ ।
ವೇದಾಂತಸಾರಸಂದೋಹಃ ಕಪಾಲೀ ನೀಲಲೋಹಿತಃ ॥ ೧೫ ॥

ಧ್ಯಾನಾಹಾರೋಽಪರಿಚ್ಛೇದ್ಯೋ ಗೌರೀಭರ್ತಾ ಗಣೇಶ್ವರಃ ।
ಅಷ್ಟಮೂರ್ತಿರ್ವಿಶ್ವಮೂರ್ತಿಸ್ತ್ರಿವರ್ಗಃ ಸ್ವರ್ಗಸಾಧನಃ ॥ ೧೬ ॥

ಜ್ಞಾನಗಮ್ಯೋ ದೃಢಪ್ರಜ್ಞೋ ದೇವದೇವಸ್ತ್ರಿಲೋಚನಃ ।
ವಾಮದೇವೋಮಹಾದೇವಃ ಪಟುಃಪರಿವೃಢೋದೃಢಃ ॥ ೧೭ ॥

-ತಿಯು, ಸಾವಿರ ಕಣ್ಣುಳ್ಳವನು ಸಾವಿರ ಕಾಲುಳ್ಳವನು, ಸರ್ವಶ್ರೇಷ್ಠನು, ವರದನು, ಪೂಜ್ಯನು, ಸುಖಕರನು, ಸಕಲಲೋಕಕ್ಕೂಒಡೆಯನು. ಪರಮೇಶ್ವರು.

೧೪–೧೫. ಗಂಗೆಯನ್ನು ಧರಿಸಿದವನೂ, ತ್ರಿಶೂಲಧಾರಿಯೂ, ಪರೋಪಕಾರ ನಿರತನೂ, ಸರ್ವಜ್ಞನೂ, ಸರ್ವದೇವಾದಿಯಾದವನೂ, ಗಿರಿಯನ್ನೇ ಧನುಸ್ಸನ್ನಾಗಿ ಮಾಡಿದವನೂ ಜಟಾಧಾರಿಯೂ ಆದವನು ಪರಮೇಶ್ವರನು. ಶಿವನ ತಲೆಯಲ್ಲಿ ಚಂದ್ರನು ಒಡವೆಯಾಗಿದ್ದಾನೆ. ಬ್ರಹ್ಮನಾಗಿಯೂ, ವಿಶ್ವಕ್ಕೂ, ದೇವತೆಗಳಿಗೂ ಒಡೆಯನಾಗಿ, ವೇದಾಂತದ ಸಾರಗಳನ್ನು ನಾನಾರೀತಿಯಲ್ಲಿ ತೋರ್ಪಡಿಸುವ ಕಪಾಲ ಧಾರಿಯಾಗಿ, ಈಶ್ವರನು ನೀಲ ಮತ್ತು ಕೆಂಪುಬಣ್ಣವುಳ್ಳವನಾಗಿರುವನು.

೧೬-೨೧. ಧ್ಯಾನದಿಂದ ತೃಪ್ತಿಪಡುವವನು, ದೇಶಕಾಲವಸ್ತುಗಳ ಅಳತೆಗೆ ಸಿ ದವನು, ಗೌರಿಯ ಪತಿಯು, ಗಣಗಳಿಗೆ ಪತಿಯು, ಎಂಟುವಿಧವಾದ ಮೂರ್ತಿಗಳುಳ್ಳ ವನು, ಪ್ರಪಂಚರೂಪಿಯು. ಧರ್ಮಾರ್ಥಕಾಮಗಳೆಂಬ ಮೂರು ವರ್ಗಗಳನ್ನೂ, ಕೊಡುವವನು. ಸ್ವರ್ಗಸುಖಕ್ಕೆ ಸಹಾಯಕನು, ಜ್ಞಾನಕ್ಕೆ ಸುಲಭನು, ಸ್ಥಿರಬುದ್ಧಿ ಉಳ್ಳವನು, ದೇವದೇವನು, ಮೂರು ಕಣ್ಣುಳ್ಳವನು, ವಾಮದೇವನು, ಮಹಾ ದೇವನು, ಪಟುಸ್ವಭಾವದವನು, ಶ್ರೇಷ್ಠನು, ಶಾಶ್ವತನಾದವನು.

ವಿಶ್ವರೂಪೋ ವಿರೂಪಾಕ್ಷೋ ವಾಗೀಶಃ ಶ್ರುತಿಮಂತಗಃ ।
ಸರ್ವಪ್ರಣವಸಂವಾದೀ ವೃಷಾಂಕೋ ವೃಷವಾಹನಃ ॥ ೧೮ ॥

ಈಶಃ ಪಿನಾಕೀ ಖಟ್ವಾಂಗೀ ಚಿತ್ರವೇಷಶ್ಚಿರಂತನಃ ।
ಮನೋಮಯೋ ಮಹಾಯೋಗೀ ಸ್ಥಿರೋ ಬ್ರಹ್ಮಾಂಡಧೂರ್ಜಟೀ॥೧೯॥

ಕಾಲಕಾಲಃ ಕೃತ್ತಿವಾಸಾಃ ಸುಭಗಃ ಪ್ರಣವಾತ್ಮಕಃ ।
ನಾಗಚೂಡಃ ಸುಚಕ್ಷುಷ್ಯೋ ದುರ್ವಾಸಾಃ ಪುರಶಾಸನಃ ॥ ೨೦ ॥

ದೃಗಾಯುಧಃ ಸ್ಕಂದಗುರುಃ ಪರಮೇಷ್ಠೀ ಪರಾಯಣಃ ।
ಅನಾದಿಮಧ್ಯನಿಧನೋ ಗಿರಿಶೋ ಗಿರಿಜಾಧವಃ ॥ ೨೧ ॥

ಕುಬೇರಬಂಧುಃ ಶ್ರೀಕಂಠೋ ಲೋಕವಂದ್ಯೋತ್ತಮೋ ಮೃದುಃ ।
ಸಾಮಾನ್ಯೋ ದೇವಕೋ ದಂಡೀ ನೀಲಕಂಠಃ ಪರಶ್ವಧೀಃ ॥ ೨೨ ॥

೧೮-೧೯. ಶಿವನು, ವಿಶ್ವರೂಪಿಯು. ಮೂರು ಕಣ್ಣುಗಳಿಂದ ವಿರೂಪನಾದವನು, ವಾಗ್ದೇವತೆಯು, ವೇದಾಂತಪ್ರತಿಪಾದ್ಯನು, ಪ್ರಣವೋಪಾಸಕರಿಗೆ ಸುಲಭನು ವೃಷಭಧ್ವಜನು, ವೃಷಭವಾಹನನು, ಈಶನು, ಪಿನಾಕಧಾರಿಯು, ಪ್ರಪಂಚಕ್ಕೆ ಆಶ್ರಯವಾದ ಆಕಾರವುಳ್ಳವನು, ನಾನಾವೇಷಗಳುಳ್ಳವನು, ಅನಾದಿಯಾದವನು, ಮನೋಮಯನು, ಮಹಾಯೋಗಿಯು, ಸ್ಥಿರನಾದವನು, ಬ್ರಹ್ಮಾಂಡಗಳಿಗೆ ಆಶ್ರಯಪಿತ್ತವನು. ಜಟಾಧಾರಿಯು.

೨೦-೨೧ ಯಮನಿಗೆ ಯಮನಂತಿರುವವನು, ಚರ್ಮಾಂಬರನು, ಐಶ್ವರ್ಯಶಾಲಿಯು, ಪ್ರಣವಸ್ವರೂಪಿಯು, ಸರ್ಪವನ್ನು ತಲೆಯಲ್ಲಿ ಧರಿಸಿರುವವನು ಸೂಕ್ಷ್ಮಜ್ಞಾನಿಯು, ದುಷ್ಟವಾದ ವ್ಯಾಘ್ರಚರ್ಮಧಾರಿಯು, ತ್ರಿಪುರನಾಶಕನು, ಅಗ್ನಿನೇತ್ರವೇ ಮುಖ್ಯಾಯುಧವಾಗಿ ಉಳ್ಳವನು, ಕುಮಾರಸ್ವಾಮಿಗೆ ಗುರುವಾದವನು, ಉತ್ತಮ ಸ್ಥಾನದಲ್ಲಿ ನಿಂತಿರುವವನು, ಸೃಷ್ಟಿಯಲ್ಲಿ ಆಸಕ್ತನಾದವನು, ಆದಿ, ಮಧ್ಯ, ಅಂತ್ಯ ಇವುಗಳಿಲ್ಲದವನು, ಪರ್ವತವಾಸಿಯು, ಪಾರ್ವತೀಪತಿಯು.

೨೨-೨೩. ಕುಬೇರನ ಸ್ನೇಹಿತನು, ವಿಷಕಂಠನು, ಲೋಕಪೂಜ್ಯರಲ್ಲಿ ಉತ್ತಮನು, ಮೃದುಸ್ವಭಾವದವನು, ಸಾಮಾನ್ಯಾಕಾರದಲ್ಲಿರುವವನು, ದೇವಶ್ರೇಷ್ಠನು, ಶಿಕ್ಷಕನು, ನೀಲಿಯಬಣ್ಣದ ಕತ್ತುಳ್ಳವನು, ಸೂಕ್ಷ್ಮಬುದ್ಧಿಯುಳ್ಳವನು, ವಿಶಾಲವಾದ

ವಿಶಾಲಾಕ್ಷೋ ಮಹಾವ್ಯಾಧಃ ಸುರೇಶಃ ಸೂರ್ಯತಾಪನಃ ।
ಧರ್ಮಧಾಮಾ ಕ್ಷಮಾಕ್ಷೇತ್ರಂ ಭಗವಾನ್ ಭಗನೇತ್ರಹಾ || ೨೩ ||

ಉಗ್ರಃ ಪಶುಪತಿಸ್ತಾರ್ಕ್ಷ್ಯಃ ಪ್ರಿಯಭಕ್ತಃ ಪ್ರಿಯಂವದಃ ।
ದಾತಾ ದಯಾಕರೋ ದಕ್ಷಃ ಕಪರ್ದೀ ಕಾಮಶಾಸನಃ || ೨೪ ||

ಸ್ಮಶಾನನಿಲಯಸ್ತಿಷ್ಯಃ ಸ್ಮಶಾನಸ್ಥೋ ಮಹೇಶ್ವರಃ ।
ಲೋಕಕರ್ತಾ ಭೂತಪತಿರ್ಮಹಾಕರ್ತಾ ಮಹೌಷಧಿಃ || ೨೫ ||

ಉತ್ತರೋ ಗೋಪತಿರ್ಗೋಪ್ತಾ ಜ್ಞಾನಗಮ್ಯಃ ಪುರಾತನಃ ।
ನೀತಿಃ ಸುನೀತಿಃ ಶುದ್ಧಾತ್ಮಾ ಸೋಮಃ ಸೋಮರತಃ ಸುಧೀಃ || ೨೬ ||

ಸೋಮಪೋಽಮೃತಪಃ ಸೌಮ್ಯೋ ಮಹಾನೀತಿರ್ಮಹಾಸ್ಮೃತಿಃ ।
ಅಜಾತಶತ್ರುರಾಲೋಕ್ಯಃ ಸಂಭಾವ್ಯೋ ಹವ್ಯವಾಹನಃ || ೨೭ ||

ಕಣ್ಣುಳ್ಳವನು, ದೊಡ್ಡ ವ್ಯಾಧನು, ದೇವೇಂದ್ರನು, ಸೂರ್ಯನಂತೆ ಉರಿಯುವವನು, ಧರ್ಮಾಶ್ರಯನು, ಕ್ಷಮಾಧಾರನು, ಷಡ್ಗುಣೈಶ್ವರ್ಯಸಂಪನ್ನನು, ಸಂಸಾರದ ಮೂಲ ಕಾರಣವನ್ನು ನಾಶಗೊಳಿಸುವವನು.

೨೪-೨೫. ಉಗ್ರರೂಪಿಯು, ಪಶುಗಳ ರಕ್ಷಕನು, ಗರುಡರೂಪದಲ್ಲಿರುವವನು, ಭಕ್ತನಿಗೆ ಪ್ರಿಯನಾದವನು, ಪ್ರಿಯವಾಗಿ ಮಾತನಾಡುವವನು, ದಾನಿಯು, ದಯಾಶಾಲಿಯು, ದಕ್ಷನು, ಜಟಾಜೂಟವುಳ್ಳವನು, ಕಾಮಧ್ವಂಸಕನು, ಸ್ಮಶಾನವಾಸಿಯು, ಗುರುರೂಪಿಯು, ಸ್ಮಶಾನವನ್ನೇ ಮನೆಯನ್ನಾಗಿ ಮಾಡಿಕೊಂಡಿರುವನು, ಮಹೇಶ್ವರನು, ಲೋಕಕರ್ತನು, ಭೂತಗಳಿಗೆ ಒಡೆಯನಾದವನು, ಲೋಕದ ಆದಿಕರ್ತೃವು, ಸಮಸ್ತರೋಗಗಳಿಗೂ ಓಷಧಿಯಂತಿರುವವನು.

೨೬-೨೭. ಉತ್ತರದಿಕ್ಕಿನಲ್ಲಿರುವವನು, ವೃಷಭರಕ್ಷಕನು, ಲೋಕರಕ್ಷಕನು, ಜ್ಞಾನಗೋಚರನು, ಆದಿಯಿಲ್ಲದವನು, ನೀತಿಪುರುಷನು, ಒಳ್ಳೆಯ ನೀತಿಯುಳ್ಳವನು, ಶುದ್ಧವಾದ ಆತ್ಮವುಳ್ಳವನು, ಉಮಾಸಹಿತನಾದವನು, ಚಂದ್ರನಲ್ಲಿಪ್ರೀತಿಯುಳ್ಳವನು, ಬುದ್ಧಿಶಾಲಿಯು, ಸೋಮರಸಪಾನಮಾಡಿದ ಯಜಮಾನರೂಪಿಯು, ಅಮೃತಗಳಿಗೆ ಒಡೆಯನು, ಸೌಮ್ಯಸ್ವಭಾವದವನು, ನೀತಿಬೋಧಕನು, ಅತಿಯಾದ ಸ್ಮರಣೆಯುಳ್ಳವನು, ಶತ್ರುವೇ ಇಲ್ಲದವನು, ಪ್ರಕಾಶಕನು, ಭಾವನಾಗಮ್ಯನು, ಹವ್ಯವನ್ನು ತೆಗೆದುಕೊಳ್ಳುವವನು.

ಲೋಕಕಾರೋ ವೇದಕಾರಃ ಸೂತ್ರಕಾರಃ ಸನಾತನಃ ।
ಮಹರ್ಷಿಃ ಕಪಿಲಾಚಾರ್ಯೋ ವಿಶ್ವದೀಪ್ತಿರ್ವಿಲೋಚನಃ ॥ ೨೮ ॥

ಪಿನಾಕಪಾಣಿರ್ಭೂದೇವಃ ಸ್ವಸ್ತಿಕೃತ್ಸ್ವಸ್ತಿದಃ ಸುಧಾ ।
ಧಾತ್ರೀಧಾಮಾ ಧಾಮಕರಃ ಸರ್ವಗಃ ಸರ್ವಗೋಚರಃ ॥ ೨೯ ॥

ಬ್ರಹ್ಮಸೃಗ್ವಿಶ್ವಸೃತ್ಸರ್ಗಃ ಕರ್ಣಿಕಾರಃ ಪ್ರಿಯಃ ಕವಿಃ ।
ಶಾಖೋ ವಿಶಾಖೋ ಗೋಶಾಖಃ ಶಿವೋ ಭಿಷಗನುತ್ತಮಃ ॥ ೩೦ ॥

ಗಂಗಾಪ್ಲವೋದಕೋ ಭವ್ಯಃ ಪುಷ್ಕಲಃ ಸ್ಥಪತಿಃ ಸ್ಥಿತಃ ।
ವಿಜಿತಾತ್ಮಾ ವಿಧೇಯಾತ್ಮಾ ಭೂತವಾಹನಸಾರಥಿಃ ॥ ೩೧ ॥

೨೮-೨೯. ಲೋಕವನ್ನು ಸೃಷ್ಟಿಸುವವನು, ವೇದಪ್ರತಿಪಾದ್ಯನು, ಪ್ರಪಂಚ ವೆಂಬ ಸೂತ್ರನಿರ್ಮಾಪಕನು, ಆದಿಪುರುಷನು, ಮಹರ್ಷಿಯು, ಕಪಿಲಋಷಿಗೆ ಪೂಜ್ಯನು, ಪ್ರಪಂಚದಂತೆ ಹೊಳೆಯುವವನು, ವಿಶೇಷ ಕಣ್ಣುಳ್ಳವನು, ಪಿನಾಕ ವನ್ನು ಧರಿಸಿದವನು, ಭೂಮಿಗೆ ದೇವನು, ಮಂಗಳಕರನು, ಅಮೃತರೂಪಿಯು, ಧಾತ್ರೀ (ನೆಲ್ಲೀಗಿಡ) ವೃಕ್ಷದಲ್ಲಿ ಆಶ್ರಯಪಡೆದವನು, ಅಥವಾ ಭೂಮಿಗೆ ಆಶ್ರಯ ವಿತ್ತವನು ತೇಜಸ್ಸುಳ್ಳ ಕಿರಣವುಳ್ಳವನು, ಸರ್ವವ್ಯಾಪಿಯು, ಸರ್ವವನ್ನೂ ನೋಡುವವನು.

೩೦-೩೧. ಬ್ರಹ್ಮನನ್ನು ಸೃಷ್ಟಿಸಿದವನು, ಪ್ರಪಂಚನಿರ್ಮಾಪಕನು, ಸೃಷ್ಟಿ ರೂಪನು, ಹೂವಿನಲ್ಲಿ ಮಕರಂದವಿರುವಂತೆ ಲೋಕದಲ್ಲಿ ವ್ಯಾಪಿಸತಕ್ಕವನು, ಪ್ರಿಯ ನಾದವನು, ಕವಿಯು, ಶಾಖಾರೂಪದಿಂದಲೂ, ವಿವಿಧಶಾಖೆಯ ರೂಪದಿಂದಲೂ, ಭೂಮಿಯ ಶಾಖೆಯಂತೆಯೂ, ಕಾಣುತ್ತಿರುವವನು. ಶಿವನು, ವೈದ್ಯನು, ಉತ್ತಮ ರಲ್ಲಿ ಉತ್ತಮನು, ಗಂಗಾನದಿಯಲ್ಲಿ ದೋಣಿಯಂತೆ ಭವಸಾಗರದಿಂದ ಜನರನ್ನು ದಾಟಿಸತಕ್ಕವನು, ಸುಂದರನು, ಪುಷ್ಕಲನು, ಲೋಕಸ್ಥಾಪಕನು, ಸ್ಥಿರನಾದವನು, ಜಿತೇಂದ್ರಿಯನು, ವಿಧೇಯನಾದವನು, ಸಮಸ್ತ ಭೂತಗಳನ್ನೇ ವಾಹನವನ್ನಾಗಿಯೂ ಸಾರಥಿಯನ್ನಾಗಿಯೂ, ಮಾಡಿಕೊಂಡಿರುವವನು.

ಸಗಣೋ ಗಣಕಾಯಶ್ಚ ಸುಕೀರ್ತಿಶ್ಛಿನ್ನಸಂಶಯಃ ।
ಕಾಮದೇವಃ ಕಾಮಪಾಲೋ ಭಸ್ಮೋದ್ಧೂಲಿತವಿಗ್ರಹಃ　　॥ ೩೨ ॥

ಭಸ್ಮಪ್ರಿಯೋ ಭಸ್ಮಶಾಯೀ ಕಾಮೀ ಕಾಂತಃ ಕೃತಾಗಮಃ ।
ಸಮಾವೃತ್ತೋ ನಿವೃತ್ತಾತ್ಮಾ ಧರ್ಮಪುಂಜಃ ಸದಾಶಿವಃ　　॥ ೩೩ ॥

ಅಕಲ್ಮಷಶ್ಚತುರ್ಬಾಹುಃ ಸರ್ವಾವಾಸೋ ದುರಾಸದಃ ।
ದುರ್ಲಭೋ ದುರ್ಗಮೋ ದುರ್ಗಃ ಸರ್ವಾಯುಧವಿಶಾರದಃ　　॥ ೩೪ ॥

ಅಧ್ಯಾತ್ಮಯೋಗನಿಲಯಃ ಸುತಂತುಸ್ತಂತುವರ್ಧನಃ ।
ಶುಭಾಂಗೋ ಯೋಗಸಾರಂಗೋ ಜಗದೀಶೋ ಜನಾರ್ದನಃ　　॥ ೩೫ ॥

ಭಸ್ಮಶುದ್ಧಿಕರೋ ಮೇರುಸ್ತೇಜಸ್ವೀ ಶುದ್ಧವಿಗ್ರಹಃ ।
ಹಿರಣ್ಯರೇತಾಸ್ತರಣಿರ್ಮರೀಚಿರ್ಮಹಿಮಾಲಯಃ　　॥ ೩೬ ॥

೩೨-೩೩. ಪ್ರಮಥಗಣಗಳಿಂದ ಕೂಡಿದವನು, ಗಣಗಳನ್ನೇ ತನ್ನ ದೇಹವನ್ನಾಗಿ ತಿಳಿದುಕೊಂಡಿರುವವನು, ಕೀರ್ತಿಶಾಲಿಯು, ಸಂಶಯವಿರಹಿತನು, ಕೇಳಿದ ವರಗಳನ್ನು ಕೊಡುವ ದೇವನು, ಕಾಮನನ್ನು ಕೊನೆಗೆ ರಕ್ಷಿಸಿದವನು, ಭಸ್ಮದಿಂದ ಲಿಪ್ತವಾದ ಶರೀರವುಳ್ಳವನು, ಭಸ್ಮದಲ್ಲಿ ಪ್ರೀತಿಯಿಟ್ಟಿರುವವನು, ಭಸ್ಮರಾಶಿಯಲ್ಲಿ ಮಲಗುವವನು, ಕಾಮವುಳ್ಳವನು, ಸುಂದರನು, ಆಗಮಶಾಸ್ತ್ರ ನಿರ್ಮಾಣಕನು, ಸರ್ವವ್ಯಾಪಿಯು, ಆತ್ಮಸ್ವರೂಪಿಯು, ಧರ್ಮರಾಶಿಯು, ಸರ್ವದಾ ಮಂಗಳಮಯನು.

೩೪-೩೫. ಕಲ್ಮಶರಹಿತನು, ನಾಲ್ಕು ತೋಳುಳ್ಳವನು, ಸರ್ವರಿಗೂ ಆಶ್ರಯನಾದವನು, ಮತ್ತೊಬ್ಬರಿಗೆ ಸುಲಭನಲ್ಲದವನು, ಪಾಪಿಗಳಿಗೆ ದುರ್ಲಭನು, ಶಿವನ ನೆಲೆಯು, ಪಾಪಿಗಳಿಗೆ ಸಿಕ್ಕದು. ಶಿವನ ಸಂಚಾರವೂ ಸುಲಭವಲ್ಲ. ಸಮಸ್ತಾಯುಧಗಳಲ್ಲಿ ನಿಪುಣನಾದವನು, ವೇದಾಂತತತ್ತ್ವಗಳಲ್ಲಿ ಅಶ್ರಯಹೊಂದದವನು, ಒಳ್ಳೆಯ ಸಂಬಂಧವನ್ನು ಹೆಚ್ಚಿಸುವವನು, ಮಂಗಳಾಂಗನು, ಯೋಗಗಳಲ್ಲಿ ಅತ್ಯುತ್ತಮನಾದವನು, ಜಗತ್ಪತಿಯು, ಲೋಕರಕ್ಷಕನು.

೩೬-೩೭. ಭಸ್ಮವನ್ನೇ ಶುದ್ಧಿಮಾಡುವವನು, ಮೇರುರೂಪಿಯು, ತೇಜಶ್ಶಾಲಿಯು, ಶುದ್ಧವಾದ ದೇಹವುಳ್ಳವನು, ಹಿರಣ್ಯವನ್ನೇ ರೇತಸ್ಸಾಗಿ ಉಳ್ಳವನು,

ಮಹಾರುದ್ರೋ ಮಹಾಗರ್ತಃ ಸಿದ್ಧವೃಂದಾರವಂದಿತಃ ।
ವ್ಯಾಘ್ರಚರ್ಮಧರೋ ವ್ಯಾಲೀ ಮಹಾಭೂತೋ ಮಹಾನಿಧಿಃ ॥ ೩೭ ॥

ಅಮೃತಾತ್ಮಾಮೃತವಪುಃ ಪಂಚಯಜ್ಞಃ ಪ್ರಭಂಜನಃ ।
ಪಂಚವಿಂಶತಿತತ್ತ್ವಸ್ಥಃ ಪಾರಿಜಾತಃ ಪರಾಪರಃ ॥ ೩೮ ॥

ಸುಲಭಃ ಸುವ್ರತಃ ಶೂರೋ ವಾಙ್ಮಯೈಕನಿಧಿರ್ನಿಧಿಃ ।
ವರ್ಣಾಶ್ರಮಗುರುರ್ವರ್ಣೀ ಶತ್ರುಜಿಚ್ಛತ್ರುತಾಪನಃ ॥ ೩೯ ॥

ಆಶ್ರಮಃ ಕ್ಷಪಣಃ ಕ್ಷಾಮೋ ಜ್ಞಾನವಾನಚಲಸ್ಥಲಃ ।
ಪ್ರಮಾಣಭೂತೋ ದುರ್ಜ್ಞೇಯಃ ಸುಪರ್ಣೋ ವಾಯುವಾಹನಃ ॥ ೪೦ ॥

ಧನುರ್ಧರೋ ಧನುರ್ವೇದೋ ಗುಣರಾಶಿರ್ಗುಣಾಕರಃ ।
ಅನಂತದೃಷ್ಟಿರಾನಂದೋ ದಂಡೋ ದಮಯಿತಾ ದಮಃ ॥ ೪೧ ॥

ರ್ಯನು, ಕಿರಣಾತ್ಮಕನು, ಮಹಿಮಾಶಾಲಿಯು, ಮಹಾಕೊಳದಂತಿರುವವವನು, ಸಿದ್ಧರಗುಂಪಿನಿಂದ ಪೂಜಿತನಾದವನು, ಹುಲಿಯಚರ್ಮವನ್ನು ಹೊದ್ದವನು, ಸರ್ಪ ಭೂಷಣನು, ಮಹಾಭೂತಗಳನ್ನೊಳಗೊಂಡಿರುವವನು, ನವನಿಧಿಗೆ ಆಶ್ರಯ ದಾತನು.

೩೮–೩೯. ಮರಣವಿಲ್ಲದ ಆತ್ಮವುಳ್ಳವನು. ಅಮೃತಮಯವಾದ ದೇಹಿಯು. ಪಂಚಯಜ್ಞಸ್ವರೂಪಿಯು. ವಾಯುಸ್ವರೂಪನು. ಇಪ್ಪತ್ತೈದು ತತ್ತ್ವಗಳಲ್ಲಿ ಆಡ ಗಿರುವವನು. ಪಾರಿಜಾತಾಂಶ -ವಿಶಿಷ್ಟನು. ಪರಾಪರರೂಪಿಯು. ಸುಲಭನು. ಒಳ್ಳೆಯ ವ್ರತವುಳ್ಳವನು. ಶೂರನು. ವಾಙ್ಮಯಸ್ವರೂಪನು. ಪ್ರಪಂಚಕ್ಕೆ ಐಶ್ವರ್ಯ ರೂಪದಲ್ಲಿರುವವವನು. ವರ್ಣಾಶ್ರಮಧರ್ಮಗಳಿಗೆ ಗುರುವಿನಂತಿರುವವನು. ಬ್ರಹ್ಮ ಚಾರಿಯು. ಶತ್ರುನಾಶಕನು. ಶತ್ರುಸಾಹಕನು.

೪೦-೪೧. ಆಶ್ರಮವುಳ್ಳವನು. ಪಾಪಕ್ಷೀಣಕನು. ಲೋಕಕ್ಷೀಣಕನು. ಜ್ಞಾನಿಯು. ಅಚಲನು. ಚಲನು. ಪ್ರಮಾಣಸ್ವರೂಪಿಯು. ಸುಲಭವಾಗಿ ತಿಳಿಯ ಲಾಗದವನು. ಒಳ್ಳೆಯ ಪಕ್ಷವುಳ್ಳವನು. ವಾಯುವಿನಲ್ಲಿ ಸಂಚರಿಸುವನು. ಧನು ರ್ಧಾರಿಯು. ಧನುರ್ವೇದವನ್ನರಿತವನು. ಗುಣರಾಶಿಯು. ಗುಣನಿಧಿಯು. ಅನಂತ ದೃಷ್ಟಿಯುಳ್ಳವನು. ಆನಂದರೂಪಿಯು. ದಂಡರೂಪನು. ಶಿಕ್ಷಕನು. ಜ್ಞಾನಿಯು.

ಅವಿವಾದ್ಯೋ ಮಹಾಕಾಯೋ ವಿಶ್ವಕರ್ಮಾ ವಿಶಾರದಃ ।
ವೀತರಾಗೋ ವಿನೀತಾತ್ಮಾ ತಪಸ್ವೀ ಭೂತವಾಹನಃ ॥ ೪೨ ॥

ಉನ್ಮತ್ತವೇಷಃ ಪ್ರಚ್ಛನ್ನೋ ಜಿತಕಾಮೋ ಜಿತಪ್ರಿಯಃ ।
ಕಲ್ಯಾಣಪ್ರಕೃತಿಃ ಕಲ್ಪಃ ಸರ್ವಲೋಕಪ್ರಜಾಪತಿಃ ॥ ೪೩ ॥

ತಪಸ್ವೀ ತಾರಕೋ ಧೀಮಾನ್ ಪ್ರಧಾನಪ್ರಭುರವ್ಯಯಃ ।
ಲೋಕಪಾಲೋಂತರ್ಹಿತಾತ್ಮಾ ಕಲ್ಪಾದಿಃ ಕಮಲೇಕ್ಷಣ: ॥ ೪೪ ॥

ವೇದಶಾಸ್ತ್ರಾರ್ಥತತ್ತ್ವಜ್ಞೋ ನಿಯಮೋ ನಿಯಮಾಶ್ರಯಃ ।
ರಾಹುಃ ಸೂರ್ಯಃ ಶನಿಃ ಕೇತುರ್ವಿರಾಮೋ ವಿದ್ರುಮಚ್ಛವಿಃ ॥ ೪೫ ॥

೪೨-೪೩ ವಿವಾದಕ್ಕೆ ಸಿಕ್ಕದವನು, ಮಹತ್ತಾದ ದೇಹವುಳ್ಳವನು, ಪ್ರಪಂಚವನ್ನೇ ಸೃಷ್ಟಿಸುವವನು,. ನಿಪುಣನಾದವನು, ರಾಗದ್ವೇಷಗಳಿಲ್ಲದವನು, ವಿಧೇಯವಾದ ಆತ್ಮನುಳ್ಳವನು, ತಪಸ್ವಿಯು, ಭೂತಗಳನ್ನು ವಾಹನವನ್ನಾಗಿ ಉಳ್ಳವನು, ಅಜ್ಞಾನಿಗಳಿಗೆ ಹುಚ್ಚನಂತಿರುವ ವೇಷವುಳ್ಳವನು. ಸರ್ವತ್ರ ಅಡಗಿರುವವನು, ಕಾಮವನ್ನು ಜಯಿಸಿದವನು, ಪ್ರಿಯವಸ್ತುಗಳನ್ನು ಗೆದ್ದವನು; ಮಂಗಳಕರವಾದ ಪ್ರಕೃತಿಯುಳ್ಳವನು, ಕಲ್ಪರೂಪಿಯು, ಸರ್ವಲೋಕದ ಪ್ರಜಾಸಂತತಿಗೆ ಅಧಿಪತಿಯಾದವನು.

೪೪. ತಪಸ್ವಿಯು, ಸಂಸಾರದುಃಖದಿಂದ ಉದ್ಧರಿಸುವವನು, ಪ್ರಜ್ಞಾಶಾಲಿಯು, ಪ್ರಧಾನಪ್ರಭುವು, ಅಥವಾ ಪ್ರಕೃತಿ, ಪುರುಷಭೇದದಿಂದ ತೋರುವವನು, ನಾಶರಹಿತನು, ಲೋಕಪಾಲಕನು, ಎಲ್ಲರಲ್ಲಿಯೂ ಅಡಗಿರುವವನು, ಕಲ್ಪಗಳಿಗೂ ಆದಿಭೂತನು, ಕಮಲದಂತೆ ಕಣ್ಣುಳ್ಳವನು,

೪೫. ವೇದಶಾಸ್ತ್ರಗಳ ಅರ್ಥದ ತತ್ತ್ವವನ್ನರಿತವನು, ವ್ರತಧಾರಿಯು, ನಿಯಮಗಳಿಗೆ ಆಶ್ರಯನು, ರಾಹು, ಸೂರ್ಯ, ಶನಿ, ಕೇತು, ಈ ಗ್ರಹಗಳು ಶಿವನ ಅಂಶದವುಗಳು. ವಿಶೇಷವಾಗಿ ಆನಂದರೂಪಿಯು, ಹವಳದಂತೆ ಕಾಂತಿಯುಳ್ಳವನು.

ಭಕ್ತಿಗಮ್ಯಃ ಪರಂ ಬ್ರಹ್ಮ ಮೃಗಬಾಣಾರ್ಪಣೋಽನಘಃ ।
ಅದ್ರಿದ್ರೋಣಿಕೃತಸ್ಥಾನಃ ಪವನಾತ್ಮಾ ಜಗತ್ಪತಿಃ ॥ ೪೬ ॥

ಸರ್ವಕರ್ಮಾಚಲಸ್ತ್ವಷ್ಟಾ ಮಂಗಲ್ಯೋ ಮಂಗಲಪ್ರದಃ ।
ಮಹಾತಪಾ ದೀರ್ಘತಪಾಃ ಸ್ಥವಿಷ್ಠಃ ಸ್ಥವಿರೋ ಧ್ರುವಃ ॥ ೪೭ ॥

ಅಹಃ ಸಂವತ್ಸರೋ ವ್ಯಾಲಃ ಪ್ರಮಾಣಂ ಪರಮಂ ತಪಃ ।
ಸಂವತ್ಸರಕರೋ ಮಂತ್ರಃ ಪ್ರತ್ಯಯಃ ಸರ್ವದರ್ಶನಃ ॥ ೪೮ ॥

ಅಜಃ ಸರ್ವೇಶ್ವರಸ್ಸಿದ್ಧೋ ಮಹಾರೇತಾ ಮಹಾಬಲಃ ।
ಯೋಗೀ ಯೋಗೋ ಮಹಾದೇವಃ ಸಿದ್ಧಸ್ಸರ್ವಾದಿರಚ್ಯುತಃ ॥ ೪೯ ॥

---

೪೬. ಭಕ್ತಿಗೆ ಸಿಕ್ಕತಕ್ಕವನು, ಪರಬ್ರಹ್ಮರೂಪಿಯು, ಮೃಗದ ಆಕಾರದ ರಾಕ್ಷಸನನ್ನು ಬಾಣದಿಂದ ಕೊಂದವನು, ಪಾಪರಹಿತನು, ಪರ್ವತಶಿಖರದಲ್ಲಿ ನೆಲಸಿರುವವನು, ವಾಯುರೂಪಿಯು, ಜಗದೊಡೆಯನು.

೪೭. ಸಮಸ್ತ ಕರ್ಮಗಳಿಗೂ ಸ್ಥಿರವಾಗಿ ದೊರಕುವವನು, ಪ್ರಪಂಚ ನಿರ್ಮಾಣಕನು, ಮಂಗಲಪ್ರದನು, ಹೆಚ್ಚು ತಪಸ್ವಿಯು, ದೀರ್ಘಕಾಲ ತಪಸ್ಸುಮಾಡುವವನು, ಸ್ಥಿರನಾದವನು, ಪ್ರಪಂಚಕ್ಕೆ ಆದಿಭೂತನಾದ್ದರಿಂದ ವೃದ್ಧರೂಪಿಯು, ಧ್ರುವನಂತಿರುವವನು.

೪೮. ಹಗಲು, ಸಂವತ್ಸರ, ಈ ರೂಪದವನು, ಹಾವಿನಂತಿರುವವನು, ಪ್ರಮಾಣರೂಪಿಯು, ಶ್ರೇಷ್ಠವಾದ ತಪಸ್ಸುಳ್ಳವನು, ಸಂವತ್ಸರಗಳನ್ನು ನಿರ್ಮಿಸುವವನು, ಮಂತ್ರಸ್ವರೂಪನು, ನಂಬಿಕೆಯುಳ್ಳವನು, ಸಮಸ್ತ ಶಾಸ್ತ್ರರೂಪಿಯಾದವನು

೪೯. ಉತ್ಪತ್ತಿರಹಿತನು, ಸರ್ವೇಶ್ವರನು, ಸಿದ್ಧರೂಪಿಯು, ಮಹಾವೀರ್ಯವುಳ್ಳವನು, ಮಹಾಬಲಿಷ್ಠನು, ಯೋಗವನ್ನರಿತವನು, ಯೋಗರೂಪಿಯು, ಮಹಾದೇವನು, ಸಿದ್ಧನು, ಸರ್ವಕ್ಕೂ ಆದಿಯಾದವನು, ನಾಶರಹಿತನು.

ವಸುರ್ವಸುಮನಾಃ ಸತ್ಯಃ ಸರ್ವಪಾಪಹರೋ ಹರಃ ।
ಅಮೃತಶ್ಶಾಶ್ವತಃ ಶಾಂತೋ ಬಾಣಹಸ್ತಃ ಪ್ರತಾಪವಾನ್ ॥ ೫೦ ॥

ಕಮಂಡಲುಧರೋ ಧನ್ವೀ ವೇದಾಂಗೋ ವೇದವಿನ್ಮುನಿಃ ।
ಭ್ರಾಜಿಷ್ಣುರ್ಭೋಜನಂ ಭೋಕ್ತಾ ಲೋಕನೇತಾ ದುರಾಧರಃ ॥ ೫೧ ॥

ಅತೀಂದ್ರಿಯೋ ಮಹಾಮಾಯಃ ಸರ್ವಾವಾಸಶ್ಚತುಷ್ಪಥಃ ।
ಕಾಲಯೋಗೀ ಮಹಾನಾದೋ ಮಹೋತ್ಸಾಹೋ ಮಹಾಬಲಃ ॥ ೫೨ ॥

ಮಹಾಬುದ್ಧಿರ್ಮಹಾವೀರ್ಯೋ ಭೂತಚಾರೀ ಪುರಂದರಃ ।
ನಿಶಾಚರಃ ಪ್ರೇತಚಾರೀ ಮಹಾಶಕ್ತಿರ್ಮಹಾದ್ಯುತಿಃ ॥ ೫೩ ॥

ಅನಿರ್ದೇಶ್ಯವಪುಃ ಶ್ರೀಮಾನ್ ಸರ್ವಾಕರ್ಷಕರೋ ಮತಃ ।
ಬಹುಶ್ರುತೋ ಬಹುಮಾಯೋ ನಿಯತಾತ್ಮಾಭವೋದ್ಭವಃ ॥ ೫೪ ॥

---

೫೦. ವಸು (ದ್ರವ್ಯ) ರೂಪಿಯು, ನಿಧಿಯಲ್ಲಿ ಮನಸ್ಸಿಟ್ಟಿರುವವನು, ಸತ್ಯರೂಪಿಯು, ಸರ್ವಪಾಪನಾಶಕನು, ದುಃಖನಾಶಕನು, ಮರಣರಹಿತನು, ಶಾಶ್ವತನು, ಶಾಂತರೂಪಿಯು, ಬಾಣವನ್ನು ಕೈಯ್ಯಲ್ಲಿ ಹಿಡಿದಿರುವವನು, ಪ್ರತಾಪಶಾಲಿಯು.

೫೧. ಕಮಂಡಲುಧಾರಿಯು, ಧನುರ್ಧಾರಿಯು, ವೇದಾಂಗಗಳುಳ್ಳವನು, ವೇದವನ್ನು ತಿಳಿದವನು, ತೇಜಶ್ಶಾಲಿಯು, ಭೋಜನಸ್ವರೂಪನು, ಭೋಕ್ತೃರೂಪಿಯು, ಲೋಕದಲ್ಲಿ ಮುಖಂಡನು, ಧರಿಸಲು ಅಶಕ್ಯನಾದವನು.

೫೨. ಇಂದ್ರಿಯಗಳಿಗೆ ದೂರನಾದವನು, ಮಾಯಾಸ್ವರೂಪಿಯು, ದಿಗಂಬರನು, ಸಮಸ್ತ ಮೋಕ್ಷದ್ವಾರಗಳಿಗೂ ನೆಲೆಯಾದವನು, ಕಾಲವನ್ನು ಗಣಿಸತಕ್ಕವನು, ಮಹಾನಾದವುಳ್ಳವನು, ಹೆಚ್ಚು ಉತ್ಸಾಹಿಯು, ಹೆಚ್ಚು ಬಲಿಷ್ಠನು.

೫೩. ಹೆಚ್ಚು ಬುದ್ಧಿಶಾಲಿಯು, ವೀರ್ಯವಂತನು, ಭೂತಗಳನ್ನು ನಡೆಸತಕ್ಕವನು, ತ್ರಿಪುರನಾಶಕನು, ರಾತ್ರಿ ಸಂಚಾರಿಯು, ಪ್ರೇತಗಳನ್ನು ನಡೆಸುವವನು, ಮಹಾಶಕ್ತಿ ಮತ್ತು ಕಾಂತಿಯುಳ್ಳವನು.

೫೪. ಊಹಿಸಲಾಗದ ದೇಹವುಳ್ಳವನು, ಶ್ರೀಮಂತನು, ಸರ್ವವನ್ನೂ ತನ್ನ ಕಡೆಗೆ ಎಳೆದುಕೊಳ್ಳುವವನು, ಹೆಚ್ಚು ವಿದ್ಯಾವಂತನು, ಮಾಯಾವಿಯು, ಸ್ಥಿರವಾದ ಆತ್ಮವುಳ್ಳವನು, ಧೈರ್ಯದಿಂದ ಜನಿಸಿದವನು.

ಓಜಸ್ತೇಜೋದ್ಯುತಿಧರೋ ನರ್ತಕಃ ಸರ್ವನಾಯಕಃ ।
ನಿತ್ಯಘಂಟಾಪ್ರಿಯೋ ನಿತ್ಯಪ್ರಕಾಶಾತ್ಮಾ ಪ್ರತಾಪನಃ ॥ ೫೫ ॥

ಋದ್ಧಃ ಸ್ಪಷ್ಟಾಕ್ಷರೋ ಮಂತ್ರಃ ಸಂಗ್ರಾಮಃ ಶಾರದಪ್ಲವಃ ।
ಯುಗಾದಿಕೃದ್ಯುಗಾವರ್ತೋ ಗಂಭೀರೋ ವೃಷವಾಹನಃ ॥ ೫೬ ॥

ಇಷ್ಟೋ ವಿಶಿಷ್ಟಃ ಶಿಷ್ಟೇಷ್ಟಃ ಶರಭಃ ಸರಭೋ ಧನುಃ ।
ಅಪಾಂನಿಧಿರಧಿಷ್ಠಾನಂ ವಿಜಯೋ ಜಯಕಾಲವಿತ್ ॥ ೫೭ ॥

ಪ್ರತಿಷ್ಠಿತಃ ಪ್ರಮಾಣಜ್ಞೋ ಹಿರಣ್ಯಕವಚೋ ಹರಿಃ ।
ವಿಮೋಚನಂ ಸುರಗಣೋ ವಿದ್ಯೇಶೋ ವಿಬುಧಾಶ್ರಯಃ ॥ ೫೮ ॥

---

೫೫. ಓಜಸ್ಸು, ತೇಜಸ್ಸು ಕಾಂತಿ ಇವುಗಳನ್ನು ಪಡೆದಿರುವವನು, ತಾಂಡವ ನಾಟ್ಯದಲ್ಲಿ ನರ್ತಕನು, ಲೋಕನಾಯಕನು, ಘಂಟಾನಾದದಲ್ಲಿ ಪ್ರೀತಿಯುಳ್ಳವನು, ನಿತ್ಯಪ್ರಕಾಶನು, ನಿತ್ಯಪ್ರತಾಪಿಯು.

೫೬. ಅಭಿವೃದ್ಧಿಯುಳ್ಳವನು, ಸ್ಪಷ್ಟವಾದ ಅಕ್ಷರಪ್ರತಿಪಾದ್ಯನು, ಮಂತ್ರ ರೂಪಿಯು, ಯುದ್ಧದೇವತೆಯು, ಶರತ್ಕಾಲದಲ್ಲಿ ಅಭಿಲಾಷೆಯುಳ್ಳವನು, ಯುಗಾಂತರಗಳಿಗೂ ಆದಿಯಾದವನು, ಯುಗಗಳನ್ನು ಪರಿವರ್ತಿಸತಕ್ಕವನು, ಗಂಭೀರನು, ಎತ್ತಿನ ಮೇಲೆ ಕುಳಿತಿರುವವನು.

೫೭. ಲೋಕಕ್ಕೆ ಇಷ್ಟನಾದವನು, ಅತಿಶಯವಾಗಿ ಶಿಷ್ಟನಾದವನು, ಶಿಷ್ಟರಿಗೆ ಇಷ್ಟನಾದವನು, ಶರಭಾವತಾರಮಾಡಿದವನು, ವೇಗವುಳ್ಳವನು, ಧನೂರೂಪಿಯು, ಸಮುದ್ರಸ್ವರೂಪನು, ಜಯಶಾಲಿಯು, ಜಯಕಾಲವನ್ನು ತಿಳಿದವನು.

೫೮. ಲೋಕಪ್ರತಿಷ್ಠೆಯುಳ್ಳವನು, ಪ್ರಮಾಣವನ್ನರಿತವನು, ಸುವರ್ಣ ಕವಚಧಾರಿಯು, ಹರಿಯು, ಮೋಕ್ಷದಾಯಕನು, ದೇವಗಣವುಳ್ಳವನು, ವಿದ್ಯಾಧಿಪತಿಯು, ದೇವತೆಗಳಿಗೆ ಆಶ್ರಯದಾತನು.

ಬಾಲರೂಪೋ ಬಲೋನ್ಮಾಥೀ ವಿಕರ್ತಾ ಗಹನೋ ಗುಹಃ ।
ಕರಣಂ ಕಾರಣಂ ಕರ್ತಾ ಸರ್ವಬಂಧಪ್ರಮೋಚನಃ ॥ ೫೯ ॥

ವ್ಯವಸಾಯೋ ವ್ಯವಸ್ಥಾನಃ ಸ್ಥಾನದೋ ಜಗದಾದಿಜಃ ।
ದುಂದುಭೋ ಲಲಿತೋ ವಿಶ್ವೋ ಭವಾತ್ಮಾಽತ್ಮನಿ ಸಂಸ್ಥಿತಃ ॥ ೬೦ ॥

ರಾಜರಾಜಪ್ರಿಯೋ ರಾಮೋ ರಾಜಚೂಡಾಮಣಿಃ ಪ್ರಭುಃ ।
ವೀರೇಶ್ವರೋ ವೀರಭದ್ರೋ ವೀರಾಸನವಿಧಿರ್ವಿರಾಟ್ ॥ ೬೧ ॥

ವೀರಚೂಡಾಮಣಿರ್ವರ್ತೋ ತೀವ್ರಾನಂದೋ ನದೀಧರಃ ।
ಆತ್ಮಾಧಾರಸ್ತ್ರಿಶೂಲಾಂಕಃ ಶಿಪಿವಿಷ್ಟಃ ಶಿವಾಶ್ರಯಃ ॥ ೬೨ ॥

---

೫೯. ಬಾಲಕನಂತಿರುವವನು, ಬಲಿಷ್ಠರಲ್ಲಿ ಬಲಿಷ್ಠನು, ಲೋಕಕರ್ತೃವು ಗಂಭೀರರೂಪಿಯು, ಗುಹಾರೂಪಿಯು, ಸಾಧಕನು, ಕಾರಣನು, ಕರ್ತೃವು, ಸರ್ವ ಬಂಧನಾಶಕನು.

೬೦. ವಿಶೇಷವಾದ ಕೆಲಸವುಳ್ಳವನು, ಆಶ್ರಯಸ್ಥಾನನು, ಸ್ಥಾನವನ್ನು ಕೊಡುವವನು, ಲೋಕಕ್ಕೆ ಆದಿಪುರುಷನು, ದುಂದುಭನೆಂಬ ರಾಕ್ಷಸನಾಶಕನು, ಲಲಿತ ಸ್ವರೂಪಿಯು, ವಿಶ್ವರೂಪಿಯು, ಭವಸ್ವರೂಪನು, ಪ್ರತಿಯೊಂದಾತ್ಮದಲ್ಲೂ ನಿಂತಿರುವವನು.

೬೧. ಕುಬೇರನಿಗೆ ಮಿತ್ರನಾದವನು. ಯೋಗಿಗಳ ಮನಸ್ಸನ್ನು ಆನಂದಗೊಳಿಸುವವನು, ರಾಜಶ್ರೇಷ್ಠನು, ಪ್ರಭುರೂಪಿಯು, ವೀರರಲ್ಲಿ ವೀರನು, ವೀರಭದ್ರಾಕಾರಪಡೆದವನು, ವೀರಾಸನದಲ್ಲಿ ಬ್ರಹ್ಮನಂತೆ ಸೃಷ್ಟಿಕರ್ತನಾಗುವವನು, ಪ್ರಪಂಚವನ್ನೇ ಅಡಗಿಸಿಕೊಂಡಿರುವವನು.

೬೨. ವೀರರಲ್ಲಿ ಚೂಡಾಮಣಿಯಂತಿರುವವನು, ನಡೆವಳಿಕೆಯುಳ್ಳವನು, ತೀವ್ರವಾದ ಸಂತೋಷವುಳ್ಳವನು, ಗಂಗಾನದಿಯನ್ನು ಧರಿಸಿರುವವನು, ಆತ್ಮನಿಗೆ ಆಧಾರನಾಗಿರುವವನು, ತ್ರಿಶೂಲವೇ ಮುಖ್ಯಗುರುತಾಗಿ ಉಳ್ಳವನು, ಲೋಕದಲ್ಲಿ ಸೂಕ್ಷ್ಮರೂಪದಿಂದ ಚರಿಸುವವನು, ಪಾರ್ವತಿಗೆ ಆಶ್ರಯವಿತ್ತಿರುವವನು.

ವಾಲಖಿಲ್ಯೋ ಮಹಾಚಾರಸ್ತಿಗ್ಮಾಂಶುರ್ವಾರಿಧಿಃ ಖಗಃ ।
ಅಭಿರಾಮಃ ಸುಶರಣ್ಯಃ ಸುಬ್ರಹ್ಮಣ್ಯಃ ಸುಧಾಪತಿಃ ॥ ೬೩ ॥

ಮಧುಮಾನ್ ಕೌಶಿಕೋ ಗೋಮಾನ್ನಿರಾಮಃ ಸರ್ವಸಾಧನಃ ।
ಲಲಾಟಾಕ್ಷೋ ವಿಶ್ವದೇಹಃ ಸಾರಃ ಸಂಸಾರಚಕ್ರಭೃತ್ ॥ ೬೪ ॥

ಅಮೋಘದಂಡೋ ಮಧ್ಯಸ್ಥೋ ಹಿರಣ್ಯೋ ಬ್ರಹ್ಮವರ್ಚಸೀ ।
ಪರಬ್ರಹ್ಮಪದೋ ಹಂಸಃ ಶಬರೋ ವ್ಯಾಘ್ರಕೋಽನಲಃ ॥ ೬೫ ॥

ರುಚಿರ್ವರರುಚಿರ್ವಂದ್ಯೋ ವಾಚಸ್ಪತಿರಹರ್ಪತಿಃ ।
ರವಿರ್ವಿಶೋಚನಃ ಸ್ಕಂದಃ ಶಾಸ್ತಾ ವೈವಸ್ವತೋಽರ್ಜುನಃ ॥ ೬೬ ॥

---

೬೩. ವಾಲಖಿಲ್ಯನೆಂಬ ಋಷಿಸ್ವರೂಪನು, ಹೆಚ್ಚಾದ ಆಚಾರವುಳ್ಳವನು, ತೀಕ್ಷ್ಣಕಿರಣವುಳ್ಳವನು, ಸಮುದ್ರರೂಪಿಯು, ಸೂರ್ಯಾಂಶಕನು, ಸುಂದರನು, ರಕ್ಷಕನು, ಸುಬ್ರಹ್ಮಣ್ಯಸ್ವರೂಪನು, ಅಮೃತಕ್ಕೆ ಒಡೆಯನು.

೬೪. ವಸಂತಾಶ್ರಯನು, ಕೌಶಿಕನೆಂಬ ಋಷಿರೂಪನು, ನಿಧಿವಂತನು, ಪ್ರಳಯಕಾರಕನು, ಸರ್ವಕ್ಕೂ ಸಾಧನನು, ಹಣೆಗಣ್ಣನು, ವಿಶ್ವವನ್ನೇ ದೇಹವನ್ನಾಗಿ ಮಾಡಿಕೊಂಡಿರುವವನು, ಸಾರರೂಪಿಯು, ಸಂಸಾರವೆಂಬ ಚಕ್ರವನ್ನು ಧರಿಸಿರುವವನು.

೬೫. ವ್ಯರ್ಥವಿಲ್ಲದಂತಹ ಶಿಕ್ಷೆಯನ್ನು ವಿಧಿಸುವವನು, ಮಧ್ಯಲೋಕವಾದ ಭೂಮಿಯಲ್ಲಿ ನೆಲಸುವವನು, ಹಿರಣ್ಯರೂಪಿಯು, ಬ್ರಹ್ಮವರ್ಚಸ್ವಿಯು, ಪರಬ್ರಹ್ಮಸ್ಥಾನನಾದವನು, ಪರಮಹಂಸನು, ಬೇಡರ ವೇಷಧಾರಿಯು, ಹುಲಿಯವೇಷವನ್ನು ಧರಿಸಿದ್ದವನು, ಅಗ್ನಿರೂಪಿಯು.

೬೬. ಪ್ರಕಾಶರೂಪಿಯು, ವರಗಳಿಂದ ತೃಪ್ತಿಪಡಿಸುವವನು, ವಂದ್ಯನು, ವಾಚಸ್ಪತಿಯು, ಹಗಲಿಗೆ ಒಡೆಯನು, ಸೂರ್ಯನು, ವಿರೋಚನನು, ಸ್ಕಂದನು, ಲೋಕಶಿಕ್ಷಕನು, ಯಮನು, ಶುಭ್ರಸ್ವಭಾವದವನು.

ಮುಕ್ತಿರುನ್ನತಕೀರ್ತಿಶ್ಚ ಶಾಂತರಾಮಃ ಪುರಂಜಯಃ ।
ಕೈಲಾಸಪತಿಃ ಕಾಮಾರಿಃ ಸವಿತಾ ರವಿಲೋಚನಃ　　॥ ೬೭ ॥

ವಿದ್ವತ್ತಮೋ ವೀತಭಯೋ ವಿಶ್ವಕರ್ಮಾಽನಿವಾರಿತಃ ।
ನಿತ್ಯೋ ನಿಯತಕಲ್ಯಾಣಃ ಪುಣ್ಯಶ್ರವಣಕೀರ್ತನಃ　　॥ ೬೮ ॥

ದೂರಶ್ರವಾ ವಿಶ್ವಸಹೋ ಧ್ಯೇಯೋ ದುಃಸ್ವಪ್ನನಾಶನಃ ।
ಉತ್ತಾರಕೋ ದುಷ್ಕೃತಿಹಾ ದುರ್ಧರ್ಷೋ ದುಃಸಹೋಽಭಯಃ　　॥ ೬೯ ॥

ಅನಾದಿರ್ಭೂರ್ಭುವೋ ಲಕ್ಷ್ಮೀಃ ಕಿರೀಟೀ ತ್ರಿದಶಾಧಿಪಃ ।
ವಿಶ್ವಗೋಪ್ತಾ ವಿಶ್ವಹರ್ತಾ ಸುವೀರೋ ರುಚಿರಾಂಗದೀ　　॥ ೭೦ ॥

ಜನನೋ ಜನಜನ್ಮಾದಿಃ ಪ್ರೀತಿಮಾನ್ನೀತಿಮಾನಥ ।
ವಸಿಷ್ಠಃ ಕಶ್ಯಪೋ ಭಾನು ರ್ಭೀಮೋ ಭೀಮಪರಾಕ್ರಮಃ　　॥ ೭೧ ॥

---

೬೭. ಮುಕ್ತಿದಾಯಕನು, ಸ್ಥಿರವಾದ ಕೀರ್ತಿಶಾಲಿಯು, ಶಾಂತಾತ್ಮನು, ತ್ರಿಪುರಾರಿಯು, ಕೈಲಾಸಕ್ಕೆ ಒಡೆಯನು, ಮನ್ಮಥನಾಶಕನು, ಸೂರ್ಯನು, ಸೂರ್ಯನನ್ನೇ ಕಣ್ಣನ್ನಾಗಿ ಉಳ್ಳವನು.

೬೮. ವಿದ್ವದಗ್ರಗಣ್ಯನು, ಭಯರಹಿತನು, ಲೋಕಸ್ರಷ್ಟೃವು, ನಿವಾರಣೆಯಿಲ್ಲದವನು, ನಿತ್ಯನು, ನಿಯತವಾಗಿ ಮಂಗಳಪ್ರದಾಯಕನು, ಪುಣ್ಯಕರವಾದ ಕೀರ್ತಿಯುಳ್ಳವನು.

೬೯. ದೂರದೃಷ್ಟಿಯುಳ್ಳವನು, ವಿಶ್ವವನ್ನು ಹೊತ್ತಿರುವವನು, ಧ್ಯಾನಗೋಚರನು, ದುಃಸ್ವಪ್ನನಾಶಕನು, ಪಾಪನಿವಾರಕನು, ಪಾಪಪ್ರಣಾಶಕನು, ಯಾರಿಗೂ ಜಗ್ಗದವನು, ಸಹಿಸಲು ಯಾರಿಗೂ ಅಳವಲ್ಲದವನು. ಭಯರಹಿತನು.

೭೦. ಆದಿರಹಿತನು, ಭೂರ್ಭುವರ್ಲೋಕಗಳ ಸಂಪತ್ತುಳ್ಳವನು, ಕಿರೀಟಧಾರಿಯು· ದೇವೇಂದ್ರನು. ಪ್ರಪಂಚರಕ್ಷಕನು. ಪ್ರಪಂಚನಾಶಕನು. ಮಹಾವೀರನು. ರುಚಿರವಾದ ತೋಳ್‌ಬಳೆಯುಳ್ಳವನು.

೭೧. ಜನ್ಮವುಳ್ಳವನು. ಜನರಿಗೆ ಜನ್ಮವನ್ನಿತ್ತವನು. ಪ್ರೀತಿವಂತನು· ನೀತಿವಂತನು. ವಸಿಷ್ಠನು. ಕಶ್ಯಪನು. ಭಾನುವು. ಭೀಮನು. ಭಯಂಕರವಾದ ಪರಾಕ್ರಮವುಳ್ಳವನು.

ಪ್ರಣವಃ ಸತ್ಪಥಾಚಾರೋ ಮಹಾಕಾಯೋ ಮಹಾಧನುಃ ।
ಜನ್ಮಾಧಿಪೋ ಮಹಾದೇವಃ ಸಕಲಾಗಮಪಾರಗಃ ॥ ೬೨ ॥

ತತ್ತ್ವಂ ತತ್ತ್ವವಿದೇಕಾತ್ಮಾ ವಿಭೂತಿರ್ಭೂತಿಭೂಷಣಃ ।
ಋಷಿರ್ಬ್ರಾಹ್ಮಣವದ್ವಿಷ್ಣುರ್ಜನ್ಮಮೃತ್ಯುಜರಾತಿಗಃ ॥ ೬೩ ॥

ಯಜ್ಞೋ ಯಜ್ಞಪತಿರ್ಯಜ್ವಾ ಯಜ್ಞಾಂತೋಽವೋಘವಿಕ್ರಮಃ ।
ಮಹೇಂದ್ರೋ ದುರ್ಭರಸ್ಸೇನೀ ಯಜ್ಞಾಂಗೋ ಯಜ್ಞವಾಹನಃ ॥ ೬೪ ॥

ಪಂಚಬ್ರಹ್ಮಸಮುತ್ಪತ್ತಿರ್ವಿಶ್ವೇಶೋ ವಿಮಲೋದಯಃ ।
ಆತ್ಮಯೋನಿರನಾದ್ಯಂತಃ ಷಡ್ವಿಂಶೋ ಲೋಕಭೃತ್ಕವಿಃ ॥ ೬೫ ॥

---

೬೨. ಪ್ರಣವರೂಪಿಯು. ಸನ್ಮಾರ್ಗಗಾಮಿಯು. ಮಹಾಶರೀರಿಯು. ಧನುರ್ಧಾರಿಯು. ಜನ್ಮಗಳಿಗೆ ಅಧಿಪನು. ಮಹಾದೇವನು. ಸಮಸ್ತ ಆಗಮಗಳ ಕೊನೆಯನ್ನು ಕಂಡಿರುವವನು.

೬೩. ತತ್ತ್ವರೂಪಿಯು. ತತ್ತ್ವವನ್ನು ತಿಳಿದವನು. ಏಕಾತ್ಮರೂಪಿಯು. ಐಶ್ವರ್ಯಶಾಲಿಯು. ಐಶ್ವರ್ಯದಿಂದ ಅಲಂಕೃತನು. ಋಷಿರೂಪಿಯು. ಬ್ರಾಹ್ಮಣರಿಗೆ ಆಶ್ರಯದಾತನು. ವ್ಯಾಪಕನಾದವನು. ಜನ್ಮ, ಮೃತ್ಯು, ಮುಪ್ಪು ಇವುಗಳನ್ನು ಮೀರಿದವನು.

೬೪. ಯಾಗಸ್ವರೂಪಿಯು. ಯಜ್ಞಗಳಿಗೆ ಒಡೆಯನು. ಯಾಗಮಾಡುವವನು. ಯಜ್ಞದ ಅಂತಿಮವಾದ ಅವಭೃತಸ್ವರೂಪನು. ಅತಿಯಾದ ಶೌರ್ಯವುಳ್ಳವನು. ಮಹೇಂದ್ರನು. ಯಾರಿಂದಲೂ ಧರಿಸಲಾಗದವನು. ಶ್ರೇಷ್ಠವಾದ ಸೈನ್ಯವುಳ್ಳವನು. ಯಾಗಕ್ಕೆ ಅಂಗಭೂತನು. ಯಾಗದಲ್ಲಿ ನಡೆಯುವವನು.

೬೫. ಪಂಚ ತತ್ತ್ವಗಳಿಗೆ ಉತ್ಪತ್ತಿಸ್ಥಾನನು. ವಿಶ್ವರೂಪಿಯು. ಪವಿತ್ರವಾದ ಉತ್ಪತ್ತಿಯುಳ್ಳವನು. ಆತ್ಮಸೃಷ್ಟಿಗೆ ಕಾರಣನು. ಆದ್ಯಂತರಹಿತನು. ಇಪ್ಪತ್ತಾರು ತತ್ತ್ವಗಳಿಗೆ ಆಶ್ರಯಕೊಟ್ಟವನು. ಲೋಕರಕ್ಷಕನು. ಕವಿಸ್ವರೂಪಿಯು.

ಗಾಯತ್ರೀವಲ್ಲಭಃ ಪ್ರಾಂಶುರ್ವಿಶ್ವಾವಾಸಃ ಸದಾಶಿವಃ ।
ಶಿಶುರ್ಗಿರಿರತಃ ಸಮ್ರಾಟ್ ಸುಷೇಣಃ ಸುರಶತ್ರುಹಾ　　॥ ೭೬ ॥

ಅಮೇಯೋರಿಷ್ಟಮಥನೋ ಮುಕುಂದೋ ವಿಗತಜ್ವರಃ ।
ಸ್ವಯಂಜ್ಯೋತಿರನುಜ್ಯೋತಿರಚಲಃ ಪರಮೇಶ್ವರಃ　　॥ ೭೭ ॥

ಪಿಂಗಲಃ ಕಪಿಲಶ್ಮಶ್ರುಃ ಶಾಸ್ತ್ರನೇತ್ರಸ್ತ್ರಯೀತನುಃ ।
ಜ್ಞಾನಸ್ಕಂಧೋ ಮಹಾಜ್ಞಾನೀ ವೀರೋತ್ಪತ್ತಿರುಪಪ್ಲವೀ　　॥ ೭೮ ॥

ಭಗೋ ವಿವಸ್ವಾನಾದಿತ್ಯೋ ಯೋಗಾಚಾರೋ ದಿವಸ್ಪತಿಃ ।
ಉದಾರಕೀರ್ತಿರುದ್ಯೋಗೀ ಸದ್ಯೋಗೀ ಸದಸನ್ಮಯಃ　　॥ ೭೯ ॥

---

೭೬. ಗಾಯತ್ರೀ ಮಂತ್ರಾಭಿಮಾನಿಯು, ಎತ್ತರವಾದ ಆಕಾರವುಳ್ಳವನು, ವಿಶ್ವದಲ್ಲಿ ವಾಸಿಸುವನು, ಸದಾಮಂಗಳಕರನು, ಶಿಶುರೂಪಿಯು, ಬೆಟ್ಟದಲ್ಲಿ ವಾಸಿಸುವನು, ಚಕ್ರವರ್ತಿಯು, ಸುಷೇಣನು, ದೇವತೆಗಳ ಶತ್ರುಗಳನ್ನು ಧ್ವಂಸಮಾಡುವವನು.

೭೭. ಅಳತೆಗೆ ಸಿಕ್ಕದ ದೇಹವುಳ್ಳವನು, ಅರಿಷ್ಟಗಳನ್ನು ನಾಶಮಾಡುವವನು, ಮುಕ್ತಿದಾಯಕನು, ಜ್ವರವಿರಹಿತನು, ಸ್ವಯಂಪ್ರಕಾಶಕನು, ಅನುಸೃತವಾದ ಜ್ಯೋತಿಯುಳ್ಳವನು, ಸ್ಥಿರನಾದವನು, ಪರಮೇಶ್ವರನು.

೭೮. ಪಿಂಗಲವರ್ಣದವನು, ಕಪ್ಪುಮೀಸೆಯುಳ್ಳವನು, ಶಾಸ್ತ್ರಗಳನ್ನೇ ಕಣ್ಣುಗಳನ್ನಾಗಿ ಉಳ್ಳವನು, ವೇದಗಳೇ ದೇಹವಾಗಿ ಉಳ್ಳವನು. ಜ್ಞಾನವನ್ನು ಶಾಖೆಯಾಗಿ ಉಳ್ಳವನು, ಹೆಚ್ಚು ಜ್ಞಾನಿಯು, ವೀರರಿಗೆ ಉತ್ಪತ್ತಿಸ್ಥಾನನು, ಪ್ರಪಂಚವನ್ನು ನಾಶಗೊಳಿಸುವ ಶಕ್ತಿಯುಳ್ಳವನು.

೭೯. ಪ್ರಪಂಚಸೃಷ್ಟಿಕರ್ತನು, ತೇಜಸ್ವಿಯು, ಆದಿತ್ಯನು, ಯೋಗಗಳನ್ನು ಆಚಾರವನ್ನಾಗಿಟ್ಟಿರುವವನು, ಸ್ವರ್ಗಾಧಿಪತಿಯು, ಉದಾರವಾದ ಕೀರ್ತಿಯುಳ್ಳವನು, ಉದ್ಯೋಗಿಯು, ಸದಾಚಾರಿಯು, ಸತ್ತು ಅಸತ್ತು ಇವೆರಡನ್ನೂ ಒಳಗೊಂಡಿರುವವನು.

ನಕ್ಷತ್ರಮಾಲೀ ನಾಕೇಶಃ ಸ್ವಾಧಿಷ್ಠಾನಷಡಾಶ್ರಯಃ ।
ಪವಿತ್ರಪಾದಃ ಪಾಪಾರಿರ್ಮಣಿಪೂರೋ ನಭೋಗತಿಃ ॥ ೮೦ ॥

ಹೃತ್ಪುಂಡರೀಕಮಾಸೀನಃ ಶುಕ್ರಾಂಶಾನೋ ವೃಷಾಕಪಿಃ ।
ತುಷ್ಟೋ ಗೃಹಪತಿಃ ಕೃಷ್ಣಃ ಸಮರ್ಥೋಽನರ್ಥಶಾಸನಃ ॥ ೮೧ ॥

ಅಧರ್ಮಶತ್ರುರಕ್ಷಯ್ಯಃ ಪುರುಹೂತಃ ಪುರುಷ್ಟುತಃ ।
ಬೃಹದ್ಭುಜೋ ಬ್ರಹ್ಮಗರ್ಭೋ ಧರ್ಮಧೇನುರ್ಧನಾಗಮಃ ॥ ೮೨ ॥

ಜಗದ್ಧಿತೈಷೀ ಸುಗತಃ ಕುಮಾರಃ ಕುಶಲಾಗಮಃ ।
ಹಿರಣ್ಯಗರ್ಭೋ ಜ್ಯೋತಿಷ್ಮಾನುಪೇಂದ್ರಸ್ತಿಮಿರಾಪಹಃ ॥ ೮೩ ॥

ಅರೋಗಸ್ತಪನಾಧ್ಯಕ್ಷೋ ವಿಶ್ವಾಮಿತ್ರೋ ದ್ವಿಜೇಶ್ವರಃ ।
ಬ್ರಹ್ಮಜ್ಯೋತಿಃ ಸುಬುದ್ಧಾತ್ಮಾ ಬೃಹಜ್ಜ್ಯೋತಿರನುತ್ತಮಃ ॥ ೮೪ ॥

---

೮೦. ನಕ್ಷತ್ರಗಳನ್ನು ಮಾಲೆಯನ್ನಾಗಿ ಉಳ್ಳವನು, ಸ್ವರ್ಗಾಧಿಪತಿಯು, ಷಡಧಿಷ್ಠಾನಗಳಲ್ಲಿ ನೆಲಸಿರುವವನು, ಪವಿತ್ರವಾದ ಪಾದಗಳುಳ್ಳವನು, ಪಾಪನಾಶಕನು, ರತ್ನಗಳಿಂದ ತುಂಬಿದವನು, ಆಕಾಶಗಮನವುಳ್ಳವನು.

೮೧. ಹೃದಯ ಕಮಲದಲ್ಲಿ ನೆಲಸುವವನು, ಶುಕ್ರನ ಉತ್ಪತ್ತಿಗೆ ಕಾರಣನು, ಜ್ಞಾನದಾಯಕನು, ಸದಾತೃಪ್ತನು, ಗೃಹರಾಜನು, ಕೃಷ್ಣದೇಹಿಯು, ಸಮರ್ಥನು, ಅನರ್ಥಗಳನ್ನು ನಿವಾರಿಸುವವನು.

೮೨. ಅಧರ್ಮನಾಶಕನು, ಕ್ಷಯರಹಿತನು, ಇಂದ್ರನು ಯಾಗದಲ್ಲಿ ಮುಂದಾಳಾದವನು. ಬಲಿಷ್ಠವಾದ ಭುಜವುಳ್ಳವನು, ಬ್ರಹ್ಮನನ್ನು ಹೊಟ್ಟೆಯಲ್ಲಿಟ್ಟುಕೊಂಡವನು. ಧರ್ಮವೆಂಬ ಹಸುವುಳ್ಳವನು, ಧನಗಳನ್ನು ಸುಲಭವಾಗಿ ತರುವವನು.

೮೩. ಜಗತ್ತಿಗೆ ಹಿತವನ್ನು ಕೋರುವವನು, ಬುದ್ಧರೂಪಿಯು, ಕುಮಾರನು, ಕುಶಲವಾದ ವಿದ್ಯೆಯುಳ್ಳವನು, ಹಿರಣ್ಯಗರ್ಭನು, ಜ್ಯೋತಿಸ್ಸುಳ್ಳವನು, ಉಪೇಂದ್ರನು, ಅಜ್ಞಾನನಿವಾರಕನು.

೮೪. ರೋಗವಿರಹಿತನು, ಸೂರ್ಯನಿಗೂ ಒಡೆಯನು, ಪ್ರಪಂಚಕ್ಕೆ ಹಿತನಾದಂಥ ವಿಶ್ವಾಮಿತ್ರಸದೃಶನು, ಬ್ರಾಹ್ಮಣಶ್ರೇಷ್ಠನು ಬ್ರಹ್ಮವರ್ಚಸ್ಸುಳ್ಳವನು, ವಿಶೇಷವಾದ ಬುದ್ಧಿಯುಳ್ಳವನು, ಹೆಚ್ಚು ಜ್ಯೋತೀರೂಪನು, ಅತ್ಯುತ್ತಮನಾದವನು.

ಮಾತಾಮಹೋ ಮಾತರಿಶ್ವಾ ಮನಸ್ವೀ ನಾಗಹಾರಧೃತ್ ।
ಪುಲಸ್ತ್ಯಃ ಪುಲಹೋಽಗಸ್ತ್ಯೋ ಜಾತೂಕರ್ಣ್ಯಃ ಪರಾಶರಃ　　॥ ೮೫ ॥

ನಿರಾವರಣವಿಜ್ಞಾನೋ ವಿರಂಚೋ ವಿಷ್ಟರಶ್ರವಾಃ ।
ಆತ್ಮಭೂರನಿರುದ್ಧೋಽತ್ರಿರ್ಜ್ಞಾನಮೂರ್ತಿರ್ಮಹಾಯಶಾಃ　　॥ ೮೬ ॥

ಲೋಕಚೂಡಾಮಣಿರ್ವೀರಶ್ಚಂದ್ರಃ ಸತ್ಯಪರಾಕ್ರಮಃ ।
ವ್ಯಾಲಕಲ್ಪೋ ಮಹಾಕಲ್ಪಃ ಕಲ್ಪವೃಕ್ಷಃ ಕಲಾನಿಧಿಃ　　॥ ೮೭ ॥

ಅಲಂಕರಿಷ್ಣುರಚಲೋ ರೋಚಿಷ್ಣುರ್ವಿಕ್ರಮೋತ್ತಮಃ ।
ಆಶುಃ ಸಪ್ತಪತಿರ್ವೇಗೀ ಪ್ಲವನಃ ಶಿಖಿಸಾರಥಿಃ　　॥ ೮೮ ॥

ಅಸಂತುಷ್ಟೋಽತಿಥಿಃ ಶುಕ್ರಃ ಪ್ರಮಾಥೀ ಪಾಪಶಾಸನಃ ।
ವಸುಶ್ರವಾಃ ಕವ್ಯವಾಹಃ ಪ್ರತಪ್ತೋ ವಿಶ್ವಭೋಜನಃ　　॥ ೮೯ ॥

---

೮೫. ಲೋಕಕ್ಕೆ ತಾತನಂತಿರುವವನು, ವಾಯುರೂಪಿಯು, ಶೂರನು, ನಾಗಾಭರಣಧಾರಿಯು, ಪುಲಸ್ತ್ಯ, ಪುಲಹ, ಅಗಸ್ತ್ಯ, ಜಾತೂಕರ್ಣ್ಯ, ಪರಾಶರ, ಈ ಹೆಸರಿನ ಮಹರ್ಷಿಗಳ ಸ್ವರೂಪನು.

೮೬. ಆವರಣಮಾಯಾರಹಿತನಾದವನು, ಜ್ಞಾನಿಯು, ಬ್ರಹ್ಮನು, ವಿಷ್ಣುವು, ತನ್ನಲ್ಲಿಯೇ ತಾನು ಹುಟ್ಟಿದವನು, ತಡೆಯಿಲ್ಲದವನು, ಅತ್ರಿಮಹರ್ಷಿಯು, ಜ್ಞಾನಮೂರ್ತಿಯು, ಹೆಚ್ಚು ಯಶಸ್ವಿಯು.

೮೭. ಲೋಕದಲ್ಲಿ ಚೂಡಾಮಣಿಯಂತಿರುವವನು, ವೀರನು, ಚಂದ್ರನು, ಸತ್ಯದಿಂದ ಕೂಡಿದ ಪರಾಕ್ರಮವುಳ್ಳವನು, ಹಾವನ್ನೇ ಅಲಂಕಾರವಸ್ತುವನ್ನಾಗಿ ಮಾಡಿಕೊಂಡಿರುವನು, ಮಹಾಕಲ್ಪದಂತಿರುವವನು, ಕಲ್ಪವೃಕ್ಷದಂತಿರುವವನು, ಕಲೆಗಳಿಗೆ ಆಶ್ರಯನು.

೮೮. ಅಲಂಕಾರಮಾಡಿಕೊಳ್ಳುವವನು, ಸ್ಥಿರನಾದವನು ಕಾಂತಿಯುಳ್ಳವನು ವಿಕ್ರಮಿಗಳಿಗೆಲ್ಲಾ ಶ್ರೇಷ್ಠನಾದವನು ವೇಗಿಯು, ಏಳು ಲೋಕಗಳಿಗೆ ಒಡೆಯನು, ಎಲ್ಲ ಕಡೆಗೂ ಹಾರುವವನು, ಅಗ್ನಿಯನ್ನೇ ಸಾರಥಿಯನ್ನಾಗಿ ಉಳ್ಳವನು.

೮೯. ಸಂತುಷ್ಟಿಯಿಲ್ಲದವನು, ಅತಿಥಿಯು, ಶುಕ್ರನು, ಶತ್ರುನಾಶಕನು ಪಾಪಿಗಳನ್ನು ಶಿಕ್ಷಿಸುವವನು, ನಿಧಿಯನ್ನೇ ಕಿವಿಯನ್ನಾಗಿ ಉಳ್ಳವನು ಹವಿಸ್ಸನ್ನು ಹೊರುವವನು ಹೆಚ್ಚು ಸುಡುವವನು, ಪ್ರಪಂಚವನ್ನೇ ಆಹಾರವನ್ನಾಗಿ ಉಳ್ಳವನು.

ಜಯೋ ಜರಾರಿಶಮನೋ ಲೋಹಿತಾಶ್ವಸ್ತನೂನಪಾತ್ ।
ಪೃಷದಶ್ವೋ ನಭೋಯೋನಿಃ ಸುಪ್ರತೀಕಸ್ತಮಿಸ್ರಹಾ ॥ ೯೦ ॥

ನಿದಾಘಸ್ತಪನೋ ಮೇಘಃ ಪಕ್ಷಃ ಪರಪುರಂಜಯಃ ।
ಸುಖೀ ನೀಲಃ ಸುನಿಷ್ಪನ್ನಃ ಸುರಭಿಃ ಶಿಶಿರಾತ್ಮಕಃ ॥ ೯೧ ॥

ವಸಂತೋ ಮಾಧವೋ ಗ್ರೀಷ್ಮೋ ನಭಸ್ಯೋ ಬೀಜವಾಹನಃ ।
ಮನೋ ಬುದ್ಧಿರಹಂಕಾರಃ ಕ್ಷೇತ್ರಜ್ಞಃ ಕ್ಷೇತ್ರಪಾಲಕಃ ॥ ೯೨ ॥

ಜಮದಗ್ನಿರ್ಜಲನಿಧಿರ್ವಿಪಾಕೋ ವಿಶ್ವಕಾರಕಃ ।
ಅಧರೋಽನುತ್ತರೋ ಜ್ಞೇಯೋ ಜ್ಯೇಷ್ಠೋ ನಿಶ್ಶ್ರೇಯಸಾಲಯಃ ॥೯೩॥

---

೯೦. ಜಯಶೀಲನು ಮೃತ್ಯುನಾಶಕನು, ಕೆಂಪುಬಣ್ಣದ ಕುದುರೆಯುಳ್ಳವನು ವಾಯುರೂಪಿಯು. ಆಕಾಶವನ್ನೇ ಉತ್ಪತ್ತಿಸ್ಥಾನವನ್ನಾಗಿ ಉಳ್ಳವನು. ಸುಪ್ರತೀಕವೆಂಬ ಆನೆಯಲ್ಲಿ ಅಭಿಮಾನಿಯು, ಅಜ್ಞಾನವೆಂಬ ಕತ್ತಲೆಗೆ ನಾಶಕನು.

೯೧. ಬೇಸಿಗೆಯಕಾಲದ ರೂಪಿಯು, ಉಗ್ರನು, ಮೇಘಸ್ವರೂಪನು, ರೆಕ್ಕೆಯುಳ್ಳವನು, ಶತ್ರು ರಾಜರನ್ನು ಧ್ವಂಸಮಾಡುವವನು, ಸುಖಸ್ವರೂಪನು, ನೀಲರೂಪಿಯು ಉತ್ಪತ್ತಿಯುಳ್ಳವನು, ಧೇನು ಸ್ವರೂಪನು, ಶಿಶಿರಋತುವಿನಂತಿರುವವನು.

೯೨. ವಸಂತ, ಮಾಧವ, ಗ್ರೀಷ್ಮ, ಎಂಬ ಋತುಶಬ್ದವಾಚ್ಯನು. ಭಾದ್ರಪದ ಮಾಸಾಭಿಮಾನಿಯು, ಬೀಜಗಳಲ್ಲಿ ನೆಲಸಿರುವವನು, ಮನಸ್ಸು, ಬುದ್ಧಿ, ಅಹಂಕಾರ, ಈಶಬ್ದವಾಚ್ಯನಾದವನು, ಕ್ಷೇತ್ರವನ್ನು(ಲೋಕ) ತಿಳಿದವನು, ಕ್ಷೇತ್ರವನ್ನು ರಕ್ಷಿಸುವವನು.

೯೩. ಜಮದಗ್ನಿಋಷಿ ಸ್ವರೂಪನು, ಸಮುದ್ರ ರೂಪಿಯು, ವಿಶೇಷವಾಗಿ ಜಗತ್ತನ್ನು ಬೇಯಿಸುವವನು, ಲೋಕ ಸೃಷ್ಟಿಕರ್ತನು, ಉತ್ತರ ದಿಕ್ಕಿನಲ್ಲಿ ಮಾತ್ರ ನೆಲೆಸಿರುವವನು, ಲೋಕಕ್ಕೆ ದೊಡ್ಡವನು, ಮೋಕ್ಷಕ್ಕೆ ಆಶ್ರಯವಿತ್ತಿರುವವನು.

ಶೈಲೋ ನಾಮ ತರುರ್ದಾಹೋ ದಾನವಾರಿರರಿಂದಮಃ ।
ಚಾಮುಂಡೀಜನಕಶ್ಚಾರುರ್ನಿಶ್ಶಲ್ಯೋ ಲೋಕಶಲ್ಯಹೃತ್ ॥ ೯೪ ॥

ಚತುರ್ವೇದಶ್ಚತುರ್ಭಾವಶ್ಚತುರಶ್ಚತ್ವರಪ್ರಿಯಃ ।
ಆಮ್ನಾಯೋಽಥ ಸಮಾಮ್ನಾಯಸ್ತೀರ್ಥದೇವಃ ಶಿವಾಲಯಃ ॥ ೯೫ ॥

ವಜ್ರರೂಪೋ ಮಹಾದೇವಃ ಸರ್ವರೂಪಶ್ಚರಾಚರಃ ।
ನ್ಯಾಯನಿರ್ವಾಹಕೋ ನ್ಯಾಯೋ ನ್ಯಾಯಗಮ್ಯೋ ನಿರಂಜನಃ ॥ ೯೬ ॥

ಸಹಸ್ರಮೂರ್ಧಾ ದೇವೇಂದ್ರಃ ಸರ್ವಶಾಸ್ತ್ರಪ್ರಭಂಜನಃ ।
ಮುಂಡೋ ವಿರೂಪೋ ವಿಕೃತೋ ದಂಡೀ ದಾಂತೋ ಗುಣೋತ್ತರಃ ॥

ಪಿಂಗಲಾಕ್ಷೋಽಥ ಹರ್ಯಶ್ವೋ ನೀಲಗ್ರೀವೋ ನಿರಾಮಯಃ ।
ಸಹಸ್ರಬಾಹುಃ ಸರ್ವೇಶಃ ಶರಣ್ಯಃ ಸರ್ವಲೋಕಧೃತ್ ॥ ೯೮ ॥

---

೯೪. ಶೈಲರೂಪಿಯು, ವೃಕ್ಷರೂಪಿಯು, ಅಗ್ನಿಶಕ್ತಿಯುಳ್ಳವನು, ರಾಕ್ಷಸಾರಿಯು, ಶತ್ರುನಾಶಕನು, ಚಾಮುಂಡಿಗೆ ಶಕ್ತಿಕೊಟ್ಟವನು, ಕಂಟಕವಿಲ್ಲದವನು, ಲೋಕದ ಕಂಟಕವನ್ನು ಸಂಹರಿಸುವವನು.

೯೫. ನಾಲ್ಕು ವೇದಗಳನ್ನುಳ್ಳವನು, ನಾಲ್ಕು ಭಾವವನ್ನರಿತವನು, ಕಾಲಸಂಧಿಗೆ ಪ್ರಿಯನಾದವನು, ವೇದರಾಶಿಯು, ಸಮಾಮ್ನಾಯ ರೂಪಿಯು, ತೀರ್ಥದಲ್ಲಿ ದೇವರಂತಿರುವವನು, ಮಂಗಳಕ್ಕೆ ಆಶ್ರಯನು.

೯೬. ವಜ್ರಾಯುಧರೂಪನು, ಮಹಾದೇವನು, ಸರ್ವರೂಪಿಯು, ಚರಾಚರವಸ್ತುರೂಪಿಯು, ನ್ಯಾಯವನ್ನು ನಿರ್ವಹಿಸುವವನು, ನ್ಯಾಯರೂಪಿಯು, ನ್ಯಾಯದಿಂದ ತಿಳಿಯಬಹುದಾದವನು, ಪಾಪರಹಿತನಾದವನು.

೯೭. ಸಹಸ್ರಶಿರಸ್ಸುಳ್ಳವನು. ದೇವೇಂದ್ರನು, ಸರ್ವಶಾಸ್ತ್ರಪ್ರತಿಪಾದ್ಯನು. ಸಂನ್ಯಾಸಿರೂಪಿನವನು. ವಿಕಾರರೂಪಿಯು, ಕುರೂಪಿಯು, ಶಿಕ್ಷಕನು, ಶಿಕ್ಷೆಯನ್ನು ವಿಧಿಸುವವನು, ಗುಣಶಾಲಿಯು.

೯೮. ಪಿಂಗಳವಾದ ಕಣ್ಣುಳ್ಳವನು, ಹಸುರು ಬಣ್ಣದ ಕುದುರೆಗಳುಳ್ಳವನು. ಕಪ್ಪಾದ ಕತ್ತುಳ್ಳವನು, ರೋಗಶೂನ್ಯನಾದವನು, ಸಹಸ್ರ ತೋಳುಗಳುಳ್ಳವನು, ಸರ್ವರಿಗೂ ಒಡೆಯನು, ರಕ್ಷಕನು, ಸಮಸ್ತ ಲೋಕಗಳಿಗೂ ಆಶ್ರಯದಾತನು.

ಪದ್ಮಾಸನಃ ಪರಂಜ್ಯೋತಿಃ ಪರಾವರಃ ಪರಂಫಲಂ ।
ಪದ್ಮಗರ್ಭೋ ಮಹಾಗರ್ಭೋ ವಿಶ್ವಗರ್ಭೋ ವಿಲಕ್ಷಣಃ ॥ ೯೯ ॥

ಯಜ್ಞಭುಗ್ವರದೋ ದೇವೋ ವರೇಶಶ್ಚ ಮಹಾಸ್ವನಃ ।
ದೇವಾಸುರಗುರುರ್ದೇವಃ ಶಂಕರೋ ಲೋಕಸಂಭವಃ ॥ ೧೦೦ ॥

ಸರ್ವವೇದಮಯೋಽಚಿಂತ್ಯೋ ದೇವತಾಸತ್ಯಸಂಭವಃ ।
ದೇವಾಧಿದೇವೋ ದೇವರ್ಷಿರ್ದೇವಾಸುರವರಪ್ರದಃ ॥ ೧೦೦ ॥

ದೇವಾಸುರೇಶ್ವರೋ ದಿವ್ಯೋ ದೇವಾಸುರಮಹೇಶ್ವರಃ ।
ದೇವಾಸುರಾಣಾಂ ವರದೋ ದೇವಾಸುರನಮಸ್ಕೃತಃ ॥ ೧೦೨ ॥

ದೇವಾಸುರಮಹಾಮಾತ್ರೋ ದೇವಾಸುರಮಹಾಶ್ರಯಃ ।
ಸರ್ವದೇವಮಯೋಽಚಿಂತ್ಯೋ ದೇವಾನಾಮಾತ್ಮಸಂಭವಃ ॥ ೧೦೩ ॥

---

೯೯. ಪದ್ಮಗಳನ್ನೇ ಆಸನವನ್ನಾಗಿ ಉಳ್ಳವನು, ಉತ್ತಮವಾದ ಜ್ಯೋತೀರೂಪನು, ಅತಿಶ್ರೇಷ್ಠನು, ಪರಮ ಫಲಕೊಡುವವನು, ಪದ್ಮವನ್ನು ಹೊಟ್ಟೆಯಲ್ಲಿಟ್ಟುಕೊಂಡಿರುವವನು, ದೊಡ್ಡ ಉದರವುಳ್ಳವನು, ವಿಶ್ವವನ್ನೇ ಗರ್ಭದಲ್ಲಿಟ್ಟಿರುವವನು, ಲಕ್ಷಣರಹಿತನಾದವನು.

೧೦೦. ಯಜ್ಞಭೋಜಿಯು, ವರದನು, ದೇವನು, ವರಗಳಿಗೆ ಈಶನು, ಹೆಚ್ಚಾದ ಧ್ವನಿಯುಳ್ಳವನು, ದೇವರಾಕ್ಷಸರಿಗೆ ಗುರುವಿನಂತಿರುವವನು, ದೇವನು, ಶಂಕರನು, ಲೋಕಗಳನ್ನು ನಿರ್ಮಿಸಿದವನು.

೧೦೧. ಸರ್ವವೇದಮಯನು, ಚಿಂತೆಗೆ ಸಿಲುಕದವನು, ದೇವತೆಗಳ ಸತ್ಯದಿಂದ ಹುಟ್ಟಿದವನು, ದೇವತೆಗಳಿಗೆ ದೇವತೆಯು, ದೇವಋಷಿಯು, ದೇವತೆಗಳಿಗೂ ರಾಕ್ಷಸರಿಗೂ ವರಕೊಟ್ಟವನು.

೧೦೨. ದೇವಾಸುರರಿಗೆ ಶ್ರೇಷ್ಠನಾದವನು, ಸ್ವರ್ಗದಲ್ಲಿ ಜನಿಸಿದವನು, ದೇವಾಸುರರಿಗೆ ಸ್ವಾಮಿಯು, ದೇವಾಸುರರಿಗೆ ವರಪ್ರದನು, ದೇವಾಸುರರಿಂದ ಪೂಜ್ಯನು.

೧೦೩. ದೇವಾಸುರರಿಗೆ ಮೂಲಸ್ಥಾನನು, ದೇವರಾಕ್ಷಸರಿಗೆ ಆಶ್ರಯದಾತನು, ಸರ್ವದೇವತಾಸ್ವರೂಪಿಯು, ಚಿಂತೆಗೆ ಸಿಲುಕದವನು, ದೇವತೆಗಳಿಗೆ ಜನ್ಮಭೂಮಿಯಂತಿರುವವನು.

ಈಡ್ಯೋಽನೀಶಃ ಸುರವ್ಯಾಪ್ತೋ ದೇವಸಿಂಹೋ ದಿವಾಕರಃ ।
ವಿಬುಧಾಗ್ರವರಃ ಶ್ರೇಷ್ಠಃ ಸರ್ವದೇವೋತ್ತಮೋತ್ತಮಃ ॥ ೧೦೪ ॥

ಶಿವಧ್ಯಾನರತಃ ಶ್ರೀಮಾನ್ ಶಿಖೀ ಶ್ರೀಪರ್ವತಪ್ರಿಯಃ ।
ವಜ್ರಹಸ್ತಃ ಪ್ರತಿಷ್ಟಂಭೀ ವಿಶ್ವಜ್ಞಾನೀ ನಿಶಾಕರಃ ॥ ೧೦೫ ॥

ಬ್ರಹ್ಮಚಾರೀ ಲೋಕಚಾರೀ ಧರ್ಮಚಾರೀ ಧನಾಧಿಪಃ ।
ನಂದೀ ನಂದೀಶ್ವರೋ ನಗ್ನೋ ನಗ್ನವ್ರತಧರಃ ಶುಚಿಃ ॥ ೧೦೬ ॥

ಲಿಂಗಾಧ್ಯಕ್ಷಃ ಸುರಾಧ್ಯಕ್ಷೋ ಧರ್ಮಾಧ್ಯಕ್ಷೋ ಯುಗಾವಹಃ ।
ಸ್ವವಶಃ ಸ್ವರ್ಗತಃ ಸ್ವರ್ಗಃ ಸರ್ಗಃ ಸ್ವರಮಯಃ ಸ್ವನಃ ॥ ೧೦೭ ॥

---

೧೦೪. ಇಷ್ಟಾರ್ಥವನ್ನು ಕೊಡುವವನು, ತನಗೆ ಮತ್ತೊಬ್ಬ ಸ್ವಾಮಿಯಿಲ್ಲದವನು, ಸುರಲೋಕದಲ್ಲಿ ವ್ಯಾಪಿಸಿರುವವನು, ದೇವತೆಗಳಿಗೆ ಸಿಂಹನಂತಿರುವವನು, ಕಾಲನಿಯಾಮಕನು, ದೇವತೆಗಳಲ್ಲಿ ಶ್ರೇಷ್ಠನಾದವನು, ಸರ್ವ ದೇವತೆಗಳಲ್ಲಿ ಅತ್ಯಂತ ಶ್ರೇಷ್ಠನಾದವನು.

೧೦೫. ಭಕ್ತರಿಗೆ ಕಲ್ಯಾಣವನ್ನುಂಟುಮಾಡುವುದರಲ್ಲಿ ಆಸಕ್ತನು, ಸಂಪದ್ಯುಕ್ತನು, ಶಿಖೆಯುಳ್ಳವನು, (ಶ್ರೀ ಪರ್ವತ) ಶ್ರೀಶೈಲದಲ್ಲಿ ಆಸಕ್ತಿಯುಳ್ಳವನು, ವಜ್ರದಷ್ಟು ಕಠಿನವಾದ ಕೈಯ್ಯುಳ್ಳವನು, ದುಷ್ಟರಿಗೆ ವಿಘ್ನಪ್ರದಾಯಕನು, ಪ್ರಪಂಚವನ್ನೇ ಅರಿಯುವವನು, ರಾತ್ರಿಯನ್ನು ಬೆಳಗಿಸುವವನು.

೧೦೬ ಬ್ರಹ್ಮಮಾರ್ಗದಲ್ಲಿ ನಡೆಯುವವನು, ಲೋಕವಲ್ಲೆಲ್ಲಾ ಸಂಚರಿಸುವವನು, ಧರ್ಮದಲ್ಲಿ ನಡೆಯುವವನು, ಧನಕ್ಕೆ ಅಧಿಪತಿಯಾದವನು, ಜನರನ್ನು ಆನಂದಗೊಳಿಸುವವನು, ನಂದೀಶ್ವರನು, ದಿಗಂಬರನು, ದಿಗಂಬರವ್ರತಧಾರಿಯು, ಶುಚಿಸ್ವಭಾವದವನು.

೧೦೭. ಸಮಸ್ತ ಶಿವಲಿಂಗಗಳಿಗೆ ಒಡೆಯನು, ದೇವಪೂಜ್ಯನು, ಧರ್ಮಾಧಿಪತಿಯು, ಯುಗಗಳನ್ನು ನಡೆಸುವವನು, ಆತ್ಮಾಧೀನನು, ಸ್ವರ್ಗಕ್ಕೆ ಹೋಗುವವನು, ಸುಖಸ್ವರೂಪಿಯು, ಸೃಷ್ಟಿರೂಪಿಯು, ಸ್ವರಮೂರ್ತಿಯು, ಶಬ್ದಾತ್ಮಕನು.

ಬೀಜಾಧ್ಯಕ್ಷೋ ಬೀಜಕರ್ತಾ ಧರ್ಮಕೃದ್ಧರ್ಮವರ್ಧನಃ ।
ದಂಭೋಽದಂಭೋ ಮಹಾದಂಭಃ ಸರ್ವಭೂತಮಹೇಶ್ವರಃ ॥ ೧೦೮ ॥

ಶ್ಮಶಾನನಿಲಯಸ್ತಿಷ್ಯಃ ಸೇತುರಪ್ರತಿಮಾಕೃತಿಃ ।
ಲೋಕೋತ್ತರಃ ಸ್ಫುಟಾಲೋಕಸ್ತ್ರ್ಯಂಬಕೋ ಭಕ್ತವತ್ಸಲಃ ॥ ೧೦೯ ॥

ಅಂಧಕಾರಿರ್ಮಖದ್ವೇಷೀ ವಿಷ್ಣುಕಂಧರಪಾವನಃ ।
ವೀತದೋಷೋಽಕ್ಷಯಗುಣೋಽಂತಕಾರಿಃ ಪೂಷದಂತಭಿತ್ ॥ ೧೧೦ ॥

ಧೂರ್ಜಟಿಃ ಖಂಡಪರಶುಃ ಸಕಲೋ ನಿಷ್ಕಲೋಽನಘಃ ।
ಆಕಾರಃ ಸಕಲಾಧಾರಃ ಪಾಂಡುರಾಗೋ ಮೃಗೋ ನಟಃ ॥ ೧೧೧ ॥

---

೧೦೮. ಸೃಷ್ಟಿ ಬೀಜಗಳಿಗೆ ಒಡೆಯನಾದವನು, ಬೀಜಗಳನ್ನು ಸೃಷ್ಟಿಸುವವನು, ಧರ್ಮಾಧಿಕಾರಿಯು, ಧರ್ಮವನ್ನು ಬೆಳೆಸುವವನು, ದಂಭವನ್ನು ತೋರಿಸುವವನು, ತಾತ್ತ್ವಿಕವಾಗಿ ದಂಭವಿಲ್ಲದವನು, ಮಹಾದಂಭದಿಂದ ಶತ್ರುನಾಶಕನು ಸಮಸ್ತ ಭೂತಗಳಿಗೂ ಮಹೇಶ್ವರನು.

೧೦೯. ಸ್ಮಶಾನದಲ್ಲಿ ನೆಲಸಿರುವವನು, ಗುರುವು, ಸಂಸಾರಕ್ಕೆ ಸೇತುವಿನಂತಿರುವವನು, ಹೋಲಿಕೆಯಿಲ್ಲದ ಆಕಾರವುಳ್ಳವನು, ಲೋಕೋತ್ತರಕೀರ್ತಿಯುಳ್ಳವನು, ಸ್ಫುಟವಾದ ಕಾಂತಿಯುಳ್ಳವನು, ಮೂರು ಕಣ್ಣುಗಳುಳ್ಳವನು, ಭಕ್ತರಲ್ಲಿ ವಾತ್ಸಲ್ಯವುಳ್ಳವನು.

೧೧೦. ಅಂಧಕಾಸುರನಾಶಕನು, ದಕ್ಷಬ್ರಹ್ಮನ ಯಾಗದ್ವೇಷಿಯು, ವಿಷ್ಣುವಿನ ಶಿರಸ್ಸನ್ನು ಪವಿತ್ರಗೊಳಿಸಿದವನು, ತ್ರಿದೋಷವಿರಹಿತನು, ಅಕ್ಷಯವಾದ ಗುಣಗಳುಳ್ಳವನು, ಯಮನಿಗೂ ಯಮನು, ಸೂರ್ಯನ ಹಲ್ಲುಗಳನ್ನು ಮುರಿದವನು.

೧೧೧. ಗಂಗಾನದಿಯಿಂದ ಕೂಡಿದ ಜಟಾಜೂಟವುಳ್ಳವನು, ಖಂಡವಾದ ಪರಶುವೆಂಬ ಆಯುಧವುಳ್ಳವನು, ಕಲಾವಿಶಿಷ್ಟನು, ಕಲ್ಮಶವಿರಹಿತನು, ಶುಭ್ರವಾದ ವಸ್ತುವಿನಲ್ಲಿ ಅಭಿಲಾಷೆಯುಳ್ಳವನು, ಮೃಗರೂಪಿಯು, ನಾಟ್ಯಪ್ರವರ್ತಕನು.

ಪೂರ್ಣಃ ಪೂರಯಿತಾ ಪುಣ್ಯಃ ಸುಕುಮಾರಃ ಸುಲೋಚನಃ ।
ಸಾಮಗೇಯಃ ಪ್ರಿಯಃ ಕ್ರೂರಃ ಪುಣ್ಯಕೀರ್ತಿರನಾಮಯಃ ॥ ೧೧೨ ॥

ಮನೋಜವಸ್ತೀರ್ಥಕರೋ ಜಟಿಲೋ ಜೀವಿತೇಶ್ವರಃ ।
ಜೀವಿತಾಂತಕರೋಽನಂತೋ ವಸುರೇತಾ ವಸುಪ್ರದಃ ॥ ೧೧೩ ॥

ಸದ್ಗತಿಃ ಸತ್ಕೃತಿಃ ಶಾಂತಃ ಕಾಲಕಂಠಃ ಕಲಾಧರಃ ।
ಮಾನೀ ಮಂತುರ್ಮಹಾಕಾಲಃ ಸದ್ಗತಿಃ ಸತ್ಪರಾಯಣಃ ॥ ೧೧೪ ॥

ಚಂದ್ರಸಂಜೀವನಃ ಶಾಸ್ತಾ ಲೋಕರೂಢೋ ಮಹಾಧಿಪಃ ।
ಲೋಕಬಂಧುರ್ಲೋಕನಾಥಃ ಕೃತಜ್ಞಃ ಕೃತಭೂಷಣಃ ॥ ೧೧೫ ॥

---

೧೧೨. ಪೂರ್ಣರೂಪಿಯು, ಪ್ರಪಂಚಪೂರಕನು, ಪುಣ್ಯರೂಪಿಯು, ಕೋಮಲಾಂಗನು, ಶುಭ್ರವಾದ ಕಣ್ಣುಗಳುಳ್ಳವನು, ಸಾಮಗಾನಲೋಲನು, ಪ್ರಿಯಃನಾದವನು, ಕ್ರೂರನು, ಪುಣ್ಯಕರವಾದ ಕೀರ್ತಿಯುಳ್ಳವನು, ವ್ಯಾಧಿವಿವರ್ಜಿತನು.

೧೧೩. ಮನೋವೇಗವುಳ್ಳವನು, ತೀರ್ಥಗಳನ್ನು ನಿರ್ಮಿಸುವವನು, ಸಂನ್ಯಾಸಿಯು, ಮಾನವಜೀವನಕ್ಕೆ ಒಡೆಯನು, ಪ್ರಾಣನಾಶಕನು, ಅಂತವಿಲ್ಲದವನು, ಸಿಧಿಯನ್ನೇ ಅಥವಾ ಅಗ್ನಿಯನ್ನೇ ರೇತಸ್ಸನ್ನಾಗಿ ಉಳ್ಳವನು, ನಿಧಿಯನ್ನು ಕೊಡುವವನು.

೧೧೪. ಒಳ್ಳೆಯ ಗತಿಯುಳ್ಳವನು, ಒಳ್ಳೆಯ ನಡತೆಯುಳ್ಳವನು, ಶಾಂತನು, ಕಪ್ಪಾದ ಕತ್ತುಳ್ಳವನು, ಚಂದ್ರಕಲೆಗಳನ್ನು ಧರಿಸಿದವನು, ಮಾನವುಳ್ಳವನು, ಸರ್ವಜ್ಞನು, ಮಹಾಯಮನಂತಿರುವವನು, ಸದ್ಗತಿಪ್ರದಾಯಕನು, ಸಚ್ಚರಿತೆಯುಳ್ಳವನು.

೧೧೫. ಚಂದ್ರನನ್ನು ಬದುಕಿಸಿದವನು, ಲೋಕಶಿಕ್ಷಕನು, ಲೋಕದಲ್ಲಿ ಪ್ರಸಿದ್ಧನು, ಅಲಂಕಾರಮಾಡಿಸಿಕೊಂಡವನು, ಲೋಕಕ್ಕೆ ನೆಂಟನು, ಲೋಕಕ್ಕೆ ಒಡೆಯನು, ಕೃತಜ್ಞನು, ಸರ್ವರಿಗೂ ರಕ್ಷಕನು.

ಅನಪಾಯೋಽಕ್ಷರಃ ಕ್ಷಾಂತಃ ಸರ್ವಶಸ್ತ್ರಭೃತಾಂ ವರಃ ।
ತೇಜೋಮಯೋ ದ್ಯುತಿಧರೋ ಲೋಕಮಾಯೋಗ್ರಣೀರಣುಃ ॥ ೧೧೬ ॥

ಸುವಿಸ್ಮಿತಃ ಪ್ರಸನ್ನಾತ್ಮಾ ದುರ್ಜಯೋ ದುರತಿಕ್ರಮಃ ।
ಜ್ಯೋತಿರ್ಮಯೋ ನಿರಾಕಾರೋ ಜಗನ್ನಾಥೋ ಜಲೇಶ್ವರಃ ॥ ೧೧೭ ॥

ತುಂಬೀ ವೀಣಾ ಮಹಾಶೋಕೋ ವಿಶೋಕಃ ಶೋಕನಾಶನಃ ।
ತ್ರಿಲೋಕೇಶಸ್ತ್ರಿಲೋಕಾತ್ಮಾ ಸಿದ್ಧಿಃ ಶುದ್ಧಿರಧೋಕ್ಷಜಃ ॥ ೧೧೮॥

ಅವ್ಯಕ್ತಲಕ್ಷಣೋ ವ್ಯಕ್ತೋ ವ್ಯಕ್ತಾವ್ಯಕ್ತೋ ವಿಶಾಂಪತಿಃ ।
ವರಶೀಲೋ ವರಗುಣೋ ಗತೋ ಗವ್ಯಯನೋ ಮಯಃ ॥ ೧೧೯ ॥

---

೧೧೬. ಅಪಾಯರಹಿತನು, ನಾಶರಹಿತನು, ಶಾಂತಿಯುಳ್ಳವನು, ಸರ್ವ ಶಸ್ತ್ರಾಸ್ತ್ರಗಳನ್ನು ಧರಿಸಿದವನು, ತೇಜೋಮಯನು, ಕಾಂತಿಯಿಂದ ಶೋಭಿಸುವವನು, ಲೋಕಮಾಯೆಯುಳ್ಳವನು, ಮುಖಂಡನು, ಅಣುರೂಪಿಯು.

೧೧೭. ಆಶ್ಚರ್ಯಚಕಿತನು, ಪ್ರಸನ್ನವಾದ ಆತ್ಮವುಳ್ಳವನು, ಜಯಿಸಲಸಾಧ್ಯನು, ಯಾರಿಗೂ ಮೀರಲು ಸಾಧ್ಯನಲ್ಲದವನು, ಜ್ಯೋತೀರೂಪನು, ಆಕಾರರಹಿತನು, ಲೋಕದ ಒಡೆಯನು, ಜಲಾಧಿಪತಿಯು.

೧೧೮. ತುಂಬುರುಗಳಿಂದ ಸ್ತುತಿಸಲ್ಪಡುವವನು, ತುಂಬ್ರವೆಂಬ ವೀಣಾರೂಪಿಯು, ಹೆಚ್ಚು ಶೋಕವುಳ್ಳವನು, ಶೋಕನಾಶಕನು, ಮೂರು ಲೋಕಗಳಿಗೂ, ಒಡೆಯನು, ಮೂರು ಲೋಕಗಳನ್ನೂ ಹೃದಯದಲ್ಲಿಟ್ಟುಕೊಂಡಿರುವವನು, ಸಿದ್ಧರೂಪಿಯು, ಶುದ್ಧನಾದವನು, ಇಂದ್ರಿಯಜನ್ಯ ಜ್ಞಾನವನ್ನು ತಿರಸ್ಕರಿಸಿದವನು.

೧೧೯. ವ್ಯಕ್ತವಾದ ಗುರುತುಗಳಿಲ್ಲದವನು, ವ್ಯಕ್ತರೂಪಿಯು, ವ್ಯಕ್ತವಾಗಿಯೂ ಅವ್ಯಕ್ತವಾಗಿಯೂ ಕಂಡುಬರುವವನು, ಕಾಂತಿಗೆ ಒಡೆಯನಾದವನು, ವರ ಕೊಡುವ ಸ್ವಭಾವವುಳ್ಳವನು, ಶ್ರೇಷ್ಠವಾದ ಗುಣಗಳುಳ್ಳವನು, ಗಮನರೂಪಿಯು ವೃಷಭವಾಹನನು, ಸರ್ವವ್ಯಾಪಿಯು.

ಬ್ರಹ್ಮಾ ವಿಷ್ಣುಃ ಪ್ರಜಾಪಾಲೋ ಹಂಸೋ ಹಂಸಗತಿರ್ಮತಃ ।
ವೇಧಾ ವಿಧಾತಾ ಸ್ರಷ್ಟಾ ಚ ಕರ್ತಾ ಹರ್ತಾ ಚತುರ್ಮುಖಃ ॥ ೧೨೦ ॥

ಕೈಲಾಸಶಿಖರಾವಾಸೀ ಸರ್ವಾವಾಸೀ ಸದಾಗತಿಃ ।
ಹಿರಣ್ಯಗರ್ಭೋ ಗಗನಃ ಪುರುಷಃ ಪೂರ್ವಜಃ ಪಿತಾ ॥ ೧೨೧ ॥

ಭೂತಾಲಯೋ ಭೂತಪತಿರ್ಭೂತೇಶೋ ಭುವನೇಶ್ವರಃ ।
ಸಂಯಮೋ ಯೋಗವಿದ್ಭ್ರಷ್ಟೋ ಬ್ರಹ್ಮಣ್ಯೋ ಬ್ರಾಹ್ಮಣಪ್ರಿಯಃ ॥

ದೇವಪ್ರಿಯೋ ದೇವನಾಥೋ ದೈವಜ್ಞೋ ದೇವಚಿಂತಕಃ ।
ವಿಷಮಾಕ್ಷೋ ವಿಶಾಲಾಕ್ಷೋ ವೃಷದೋ ವೃಷವರ್ಧನಃ ॥ ೧೨೩ ॥

---

೧೨೦. ಬಹಳ ಬೇಗ ವೃದ್ಧಿಹೊಂದುವವನು, ಸರ್ವವ್ಯಾಪಿಯು, ಪ್ರಜಾರಕ್ಷಕನು, ಹಂಸರೂಪಿಯು, ಹಂಸಗಮನನು, ಜಗತ್ತನ್ನು ಸೃಷ್ಟಿಸುವವನು, ವಿವಿಧರೀತಿಯಲ್ಲಿ ಸೃಷ್ಟಿಕರ್ತನು, ಚರಾಚರವಸ್ತುಗಳ ಸೃಷ್ಟಿಬೀಜನು, ಕರ್ತೃವೂ, ಹರ್ತೃವೂ ಆಗಿ ನಾಲ್ಕು ಮುಖಗಳುಳ್ಳ ಬ್ರಹ್ಮನಂತಿರುವವನು.

೧೨೧. ಕೈಲಾಸಶಿಖರದಲ್ಲಿ ವಾಸಿಸುವವನು, ಸರ್ವತ್ರ ವ್ಯಾಪಿಯು, ಸದಾ ಸಂಚರಿಸುವವನು, ಹಿರಣ್ಯವನ್ನು ಗರ್ಭದಲ್ಲಿ ಧರಿಸಿರುವವನು, ಗಗನರೂಪಿಯು, ಪುರುಷಾಕಾರನು, ಎಲ್ಲಕ್ಕೂ ಆದಿಯಲ್ಲಿ ಹುಟ್ಟಿದವನು, ಪಿತೃರೂಪಿಯು.

೧೨೨. ಪಂಚಭೂತಗಳಿಗೆ ನಿವಾಸಸ್ಥಾನನು, ಸಕಲ ಭೂತಗಳಿಗೂ ಒಡೆಯನು, ಐಶ್ವರ್ಯವನ್ನು ಕೊಡುವವನು, ಲೋಕಕ್ಕೇ ಸ್ವಾಮಿಯು, ಜಿತೇಂದ್ರಿಯನು, ಯೋಗವನ್ನರಿತವನು, ಸಂಸಾರದಿಂದ ಜಾರಿರುವನು, ಬ್ರಹ್ಮಜ್ಞಾನಿಯು, ಬ್ರಾಹ್ಮಣರಿಗೆ ಪ್ರಿಯನಾದವನು.

೧೨೩. ದೇವತೆಗಳಿಗೆ ಪ್ರಿಯನಾದವನು, ದೇವತೆಗಳಿಗೆ ಒಡೆಯನು, ಅದೃಷ್ಟವನ್ನರಿತವನು, ದೇವಚಿಂತಕನು, ಮೂರು ಕಣ್ಣುಳ್ಳವನು, ವಿಶಾಲವಾದ ಕಣ್ಣುಳ್ಳವನು, ಇಂದ್ರಿಯ ಶಕ್ತಿಯನ್ನು ಕೊಡುವವನು, ವೃಷಭರಕ್ಷಕನು.

ನಿರ್ಮಮೋ ನಿರಹಂಕಾರೋ ನಿರ್ಮೋಹೋ ನಿರುಪಪ್ಲವಃ ।
ದರ್ಪಹಾ ದರ್ಪಣೋ ದೃಪ್ತಃ ಸರ್ವರ್ತುಪರಿವರ್ತಕಃ ॥ ೧೨೪ ॥

ಸಪ್ತಜಿಹ್ವಃ ಸಹಸ್ರಾರ್ಚಿಃ ಸ್ನಿಗ್ಧಃ ಪ್ರಕೃತಿದಕ್ಷಿಣಃ ।
ಭೂತಭವ್ಯಭವನ್ನಾಥಃ ಪ್ರಭವೋ ಭ್ರಾಂತಿನಾಶನಃ ॥ ೧೨೫ ॥

ಅರ್ಥೋಽನರ್ಥೋ ಮಹಾಕೋಶಃ ಪರಕಾರ್ಯೈಕಪಂಡಿತಃ ।
ನಿಷ್ಕಂಟಕಃ ಕೃತಾನಂದೋ ನಿರ್ವ್ಯಾಜೋ ವ್ಯಾಜದರ್ಶನಃ ॥ ೧೨೬ ॥

ಸತ್ವವಾನ್ ಸಾತ್ವಿಕಃ ಸತ್ಯಃ ಕೀರ್ತಿಸ್ತಂಭಃ ಕೃತಾಗಮಃ ।
ಅಕಾರ್ಪಿತೋ ಗುಣಗ್ರಾಹೀ ನೈಕಾತ್ಮಾ ಲೋಕಕರ್ಮಕೃತ್ ॥ ೧೨೭ ॥

---

೧೨೪. ಅಹಂಕಾರವಿವರ್ಜಿತನು, ಮಮಕಾರವಿಲ್ಲದವನು, ಅಜ್ಞಾನಿಗಳಿಗೆ ಸಿಕ್ಕದವನು, ತೊಂದರೆಯಿಲ್ಲದವನು, ಅಹಂಕಾರ-ನಾಶಕನು, ಕನ್ನಡಿಯಂತಿರುವವನು, ಅಹಂಕಾರಿಯು, ಸಮಸ್ತ ಋತುಗಳನ್ನೂ ಬದಲಾಯಿಸುವವನು.

೧೨೫. ಏಳು ನಾಲಿಗೆಗಳುಳ್ಳ ಅಗ್ನಿಸ್ವರೂಪನು, ಸಹಸ್ರ ಕಿರಣವುಳ್ಳವನು, ಸ್ನೇಹವಿಶಿಷ್ಟನು, ದಾಕ್ಷಿಣ್ಯಸ್ವಭಾವದವನು, ಹಿಂದಿದ್ದ ಮತ್ತು ಮುಂದಿರುವ ಮತ್ತು ಈಗಿರುವ ಪ್ರಾಣಿಗಳಿಗೆ ಒಡೆಯನು, ತಾನೂ ಉತ್ಪತ್ತಿಯುಳ್ಳವನು. ಭ್ರಾಂತಿನಾಶಕನು.

೧೨೬. ಅರ್ಥವುಳ್ಳವನು, ಅರ್ಥವಿಹೀನನು, ಹೆಚ್ಚಾದ ನಿಧಿಯುಳ್ಳವನು, ಪರಕಾರ್ಯದಲ್ಲಿ ದಕ್ಷನಾದವನು, ಕಂಟಕವಿಲ್ಲದವನು, ಆನಂದರೂಪಿಯು, ನೆಪವನ್ನು ತೋರಿಸುವವನು, ತಾತ್ತ್ವಿಕವಾಗಿ ನೆಪವಿಲ್ಲದವನು.

೧೨೭. ಸತ್ವವುಳ್ಳವನು, ಸತ್ವಗುಣಪ್ರಧಾನನು, ಸತ್ಯರೂಪಿಯು, ಕೀರ್ತಿಸ್ತಂಭದವನು, ವಿದ್ಯಾವಂತನು. ಅಜ್ಞರಿಗೆ ದುಃಖವನ್ನು ಕೊಡುವವನು, ಗುಣಗಳನ್ನು ಗ್ರಹಿಸುವವನು, ಏಕರೂಪಿಯಲ್ಲದವನು, ಲೋಕದ ಸಕಲ ಕರ್ಮಗಳನ್ನು ಮಾಡುವವನು.

ಶ್ರೀವಲ್ಲಭಃ ಶಿವಾರಂಭಃ ಶಾಂತಭದ್ರಃ ಸಮಂಜಸಃ ।
ಭೂಶಯೋ ಭೂತಿಕೃದ್ಭೂತಿರ್ವಿಭೂತಿರ್ಭೂತಿವಾಹನಃ ॥ ೧೨೮

ಅಕಾಯೋ ಭೂತಕಾಯಸ್ಥಃ ಕಾಲಜ್ಞಾನೋ ಮಹಾಪಟುಃ ।
ಸತ್ಯವ್ರತೋ ಮಹಾತ್ಯಾಗ ಇಚ್ಛಾಶಾಂತಿಪರಾಯಣಃ ॥ ೧೨೯ ॥

ಪರಾರ್ಥವೃತ್ತಿರ್ವರದೋ ವಿವಿಕ್ತಃ ಶ್ರುತಿಸಾಗರಃ ।
ಅನಿರ್ವಿಣ್ಣೋ ಗುಣಗ್ರಾಹೀ ನಿಷ್ಕಲಂಕಃ ಕಲಂಕಹಾ ॥ ೧೩೦ ॥

ಸ್ವಭಾವಭದ್ರೋ ಮಧ್ಯಸ್ಥಃ ಶತ್ರುಘ್ನಃ ಶತ್ರುನಾಶನಃ ।
ಶಿಖಂಡೀ ಕವಚೀ ಶೂಲೀ ಜಟೀ ಮುಂಡೀ ಚ ಕುಂಡಲೀ ॥ ೧೩೧ ॥

---

೧೨೮. ಸಂಪತ್ತಿಗೆ ಒಡೆಯನು, ಮಂಗಳಕರವಾದ ಉದ್ಯೋಗವನ್ನು ಆರಂಭಿಸುವವನು, ಶಾಂತನೂ, ಮಂಗಳನೂ ಆದವನು, ಸಮಂಜಸವಾದ ನಡತೆಯುಳ್ಳವನು, ನೆಲದ ಮೇಲೆ ಮಲಗುವವನು, ಐಶ್ವರ್ಯವನ್ನು ಕೊಡುವವನು, ಐಶ್ವರ್ಯರೂಪಿಯು, ವಿಶೇಷವಾದ ಐಶ್ವರ್ಯದಾಯಕನು, ಐಶ್ವರ್ಯವನ್ನೇ ಮುಖ್ಯಗುರುತನ್ನಾಗಿ ಮಾಡಿಕೊಂಡಿರುವವನು.

೧೨೯. ವಸ್ತುತಃ ದೇಹವಿಲ್ಲದವನು, ಪಂಚಭೂತಮಯವಾದ ದೇಹಗಳನ್ನುಳ್ಳವನು, ಕಾಲಜ್ಞಾನಿಯು, ಹೆಚ್ಚು ಪಟುವಾದವನು, ಸತ್ಯವ್ರತವುಳ್ಳವನು, ಮಹಾತ್ಯಾಗಮಾಡಿರುವವನು, ಇಚ್ಛಾ, ಶಾಂತಿ ಇವುಗಳಲ್ಲಿ ಆಸಕ್ತನಾಗಿರುವವನು.

೧೩೦. ಪರೋಪಕಾರಕ್ಕಾಗಿಯೇ ವರಗಳನ್ನು ಕೊಡುವವನು, ವಿವಿಕ್ತನಾಗಿರುವವನು, ವೇದನಿಧಿಯು, ದುಃಖವಿಲ್ಲದವನು, ಗುಣಗ್ರಾಹಿಯು, ಕಲ್ಮಶವಿರಹಿತನು, ಕಲಂಕವನ್ನು ಧ್ವಂಸಮಾಡುವವನು.

೧೩೧. ಸ್ವಭಾವವಾಗಿ ಮಂಗಳರೂಪಿಯು, ಹೃದಯಮಧ್ಯದಲ್ಲಿ ನೆಲಸುವವನು, ಶತ್ರುನಾಶಕನು, ಶತ್ರುಧ್ವಂಸಕನು, ಶಿಖಂಡವೆಂಬ ಆಯುಧವುಳ್ಳವನು, ಕವಚವುಳ್ಳವನು, ತ್ರಿಶೂಲವುಳ್ಳವನು, ಜಟೆಯುಳ್ಳವನು, ಪ್ರಶಸ್ತವಾದ ದೇಹವುಳ್ಳವನು, ಕುಂಡಲಧಾರಿಯು.

ಮೇಖಲೀ ಕಂಚುಕೀ ಖಡ್ಗೀ ಮಾಲೀ ಸಂಸಾರಸಾರಥಿಃ ।
ಅಮೃತ್ಯುಃ ಸರ್ವಜಿತ್ಸಿಂಹಸ್ತೇಜೋರಾಶಿರ್ಮಹಾಮಣಿಃ ॥ ೧೩೨ ॥

ಅಸಂಖ್ಯೇಯೋಽಪ್ರಮೇಯಾತ್ಮಾ ವೀರ್ಯವಾನ್ ಕಾರ್ಯಕೋವಿದಃ ।
ವೇದ್ಯೋ ವೈದ್ಯೋ ವಿಯದ್ಗೋಪ್ತಾ ಸಪ್ತಾವರಮುನೀಶ್ವರಃ ॥ ೧೩೩ ॥

ಅನುತ್ತಮೋ ದುರಾಧರ್ಷೋ ಮಧುರಃ ಪ್ರಿಯದರ್ಶನಃ ।
ಸುರೇಶಃ ಶರಣಂ ಶರ್ಮ ಸರ್ವಃ ಶಬ್ದವತಾಂ ಗತಿಃ ॥ ೧೩೪ ॥

ಕಾಲಃ ಪಕ್ಷಃ ಕರಂಕಾರಿಃ ಕಂಕಣೀಕೃತವಾಸುಕಿಃ ।
ಮಹೇಷ್ವಾಸೋ ಮಹೀಭರ್ತಾ ನಿಷ್ಕಲಂಕೋ ವಿಶೃಂಖಲಃ ॥ ೧೩೫ ॥

---

೧೩೨. ಸೊಂಟದ ಪಟ್ಟೆಯುಳ್ಳವನು, ಕವಚವುಳ್ಳವನು, ಖಡ್ಗ, ಮಾಲಾ ಇವುಗಳನ್ನು ಧರಿಸಿದವನು, ಸಂಸಾರವನ್ನು ಸಾರಥಿಯಂತೆ ನಡೆಸುವವನು, ಮರಣ ವಿಲ್ಲದವನು, ಸರ್ವರನ್ನೂ ಜಯಿಸಿರುವವನು, ಸಿಂಹದಂತಿರುವವನು, ತೇಜೋ ರಾಶಿಯು, ಮಹಾರತ್ನದಂತಿರುವವನು.

೧೩೩. ಸಂಖ್ಯಾತೀತನು, ಅಳತೆಗೆ ಸಿಲುಕದವನು, ವೀರ್ಯಶಾಲಿಯು, ಕಾರ್ಯ ದಲ್ಲಿ ನಿಪುಣನು, ವೇದಪ್ರತಿಪಾದ್ಯನು, ವೈದ್ಯನು, ಅಂತರಿಕ್ಷರಕ್ಷಕನು, ಸಪ್ತರ್ಷಿಗಳಿಗೂ ಶ್ರೇಷ್ಠನಾದವನು.

೧೩೪. ಎಲ್ಲರಿಗಿಂತ ಉತ್ತಮನಾದವನು, ಸುಲಭವಾಗಿ ಬಗ್ಗದವನು, ಮಧುರ ಸ್ವಭಾವದವನು, ಪ್ರಿಯವಾದ ನೋಟವುಳ್ಳವನು, ದೇವೇಂದ್ರನು, ರಕ್ಷಕನು, ಸುಖ ರೂಪಿಯು, ಸಮಸ್ತ ಶಬ್ದಗಳಿಗೆಲ್ಲಾ ಮೂಲಭೂತನು.

೧೩೫. ಕಾಲರೂಪಿಯು, ರಕ್ಷಣವುಳ್ಳವನು, ಕರ್ಮಭ್ರಷ್ಟರನ್ನು ದ್ವೇಷಿಸು ವವನು, ಆದಿಶೇಷನನ್ನೇ ಕೈಬಳೆಯನ್ನಾಗಿಮಾಡಿಕೊಂಡಿರುವವನು, ಹೆಚ್ಚಾದ ಶಕ್ತಿ ಯುಳ್ಳವನು, ಭೂಮಿಗೆ ಒಡೆಯನು, ಕಲಂಕರಹಿತನು, ಅಡ್ಡಿಗಳಿಲ್ಲದವನು.

ದ್ಯುಮಣಿಸ್ತರಣಿರ್ಧನ್ಯಃ ಸಿದ್ಧಿದಃ ಸಿದ್ಧಿಸಾಧನಃ ।
ವಿವೃತಃ ಸಂವೃತಶ್ಶಿಲ್ಪೀ ವ್ಯೂಢೋರಸ್ಕೋ ಮಹಾಭುಜಃ ॥ ೧೩೬ ॥

ಏಕಜ್ಯೋತಿರ್ನಿರಾತಂಕೋ ನರನಾರಾಯಣಪ್ರಿಯಃ ।
ನಿರ್ಲೇಪೋ ನಿಷ್ಪ್ರಪಂಚಾತ್ಮಾ ನಿರ್ವ್ಯಗ್ರೋ ವ್ಯಗ್ರನಾಶನಃ ॥ ೧೩೭ ॥

ಸ್ತವ್ಯಃ ಸ್ತವಪ್ರಿಯಃ ಸ್ತೋತಾ ವ್ಯೋಮಮೂರ್ತಿರನಾಕುಲಃ ।
ನಿರವದ್ಯಪದೋಪಾಯೋ ವಿದ್ಯಾರಾಶಿರಕೃತ್ರಿಮಃ ॥ ೧೩೮ ॥

ಪ್ರಶಾಂತಬುದ್ಧಿರಕ್ಷುದ್ರಃ ಕ್ಷುದ್ರಹಾ ನಿತ್ಯಸುಂದರಃ ।
ಧ್ಯೇಯೋಗ್ರಧುರ್ಯೋ ಧಾತ್ರೀಶಃ ಸಾಕಲ್ಯಃ ಶರ್ವರೀಪತಿಃ ॥ ೧೩೯ ॥

---

೧೩೬. ಸೂರ್ಯನಂತಿರುವವನು, ಸಂಸಾರಸಾಗರಕ್ಕೆ ಹಡಗಿನಂತಿರುವವನು, ಧನ್ಯನು, ಸಿದ್ಧಿಯನ್ನು ಕೊಡುವವನು, ಸಿದ್ಧಿಯನ್ನು ಸಾಧಿಸುವವನು, ವ್ಯಾಪಕನು, ಅಡಗಿರುವವನು, ಪ್ರಪಂಚಶಿಲ್ಪಿಯು, ವಿಶಾಲವಾದ ಎದೆಯುಳ್ಳವನು, ಬಲಿಷ್ಠವಾದ ಭುಜವುಳ್ಳವನು.

೧೩೭. ಏಕವಾದ ಜ್ಯೋತೀರೂಪನು, ಆತಂಕವಿಲ್ಲದವನು, ನರನಾರಾಯಣರಿಗೆ ಬೇಕಾದವನು, ಪಾಪರಹಿತನು, ಪ್ರಪಂಚವಿರಹಿತನು, ಆತುರವಿಲ್ಲದವನು, ಆತುರರನ್ನು ನಾಶಮಾಡುವವನು.

೧೩೮. ಸ್ತೋತ್ರಾರ್ಹನು, ಸ್ತೋತ್ರಪ್ರಿಯನು, ಸ್ತುತಿಮಾಡುವವನು, ಆಕಾಶರೂಪಿಯು, ವ್ಯಾಕುಲರಹಿತನು, ವ್ಯರ್ಥವಾಗದ ಆಶ್ರಯವುಳ್ಳವನು, ವಿದ್ಯಾನಿಧಿಯು ಕೃತ್ರಿಮವಿಲ್ಲದವನು.

೧೩೯. ಶಾಂತಬುದ್ಧಿಯುಳ್ಳವನು, ಸಣ್ಣಸ್ವಭಾವವಿಲ್ಲದವನು, ಕ್ಷುದ್ರರನ್ನು ನಾಶಮಾಡುವವನು, ನಿತ್ಯಸುಂದರನು, ಧ್ಯಾನಯೋಗ್ಯನು, ಅಗ್ರಗಣ್ಯನು, ಭೂಮಿಗೆ ಒಡೆಯನು, ಕಲಾವಿಶಿಷ್ಟನು, ರಾತ್ರಿಗೆ ಒಡೆಯನು.

ಪರಮಾರ್ಥಗುರುರ್ವ್ಯಾಪೀ ಶುಚಿರಾಶ್ರಿತವತ್ಸಲಃ ।
ರಸೋ ರಸಜ್ಞಃ ಸಾರಜ್ಞಃ ಸರ್ವತತ್ತ್ವಾವಲಂಬನಃ ॥ ೧೪೦ ॥

ಏವಂ ನಾಮ್ನಾಂ ಸಹಸ್ರೇಣ ತುಷ್ಟಾವ ಗಿರಿಜಾಪತಿಂ ।
ಸಂಪೂಜ್ಯ ಪರಯಾ ಭಕ್ತ್ಯಾ ಪುಂಡರೀಕೈರ್ದ್ವಿಜೋತ್ತಮಾಃ ॥ ೧೪೧ ॥

ಜಿಜ್ಞಾಸಾರ್ಥಂ ಹರೇರ್ಭಕ್ತ್ಯಾ ಕಮಲೇಷು ಶಿವಃ ಸ್ವಯಂ ।
ತತ್ರೈಕಂ ಗೋಪಯಾಮಾಸ ಕಮಲಂ ಮುನಿಪುಂಗವಾಃ ॥ ೧೪೨ ॥

ಹೃತೇ ಪುಷ್ಪೇ ತದಾ ವಿಷ್ಣುಶ್ಚಿಂತಯನ್ ಕಿಮಿದಂ ತ್ವಿತಿ ।
ಜ್ಞಾತ್ವಾತ್ಮನೋಽಕ್ಷಿಮುದ್ಧೃತ್ಯ ಪೂಜಯಾಮಾಸ ಶಂಕರಂ ॥ ೧೪೩ ॥

ಅಥ ಜ್ಞಾತ್ವಾ ಮಹಾದೇವೋ ಹರೇರ್ಭಕ್ತಿಂ ಸುನಿಶ್ಚಲಾಂ ।
ಪ್ರಾದುರ್ಭೂತೋ ಮಹಾದೇವೋ ಮಂಡಲಾತ್ಸಿಗ್ಮದೀಧಿತೇಃ ॥ ೧೪೪ ॥

---

೧೪೦. ಪರಮಾರ್ಥಪ್ರಕಾಶಪಡಿಸುವ ಗುರುವು, ವ್ಯಾಪಕನು, ಶುಚಿರೂಪಿಯು, ಆಶ್ರಿತವತ್ಸಲನು, ರಸರೂಪಿಯು, ರಸವನ್ನರಿತವನು, ಸಾರವನ್ನು ತಿಳಿದವನು, ಸರ್ವ ತತ್ತ್ವಗಳಲ್ಲಿಯೂ ನೆಲಸಿರುಪವನು.

೧೪೧. ಹೀಗೆ ಸಹಸ್ರ ನಾಮಗಳಿಂದ ವಿಷ್ಣುವು ಪರಮೇಶ್ವರನನ್ನು ಅರ್ಚಿಸಿ, ಅನನ್ಯಭಕ್ತಿಯಿಂದ ಸಹಸ್ರಕಮಲಗಳನ್ನು ಶಿವಸನ್ನಿಧಿಗೆ ಅರ್ಪಿಸಿ, ಶಂಕರನನ್ನು ಮೆಚ್ಚಿಸಿದನು.

೧೪೨. ಆಗ ಮಹೇಶ್ವರನು ವಿಷ್ಣುವಿನ ಭಕ್ತಿಪರೀಕ್ಷಾರ್ಥವಾಗಿ, ತನ್ನ ಅರ್ಚನೆಗಾಗಿ ಇಟ್ಟಿದ್ದ ಕಮಲಗಳಲ್ಲಿ ಒಂದು ಹೂವನ್ನು ಮುಚ್ಚಿಟ್ಟನು.

೧೪೩. ಪೂಜಾಕಾಲದಲ್ಲಿ ಒಂದು ಹೂವು ಇಲ್ಲದಿರುವುದನ್ನು ವಿಷ್ಣುವು ನೋಡಿ, ಆಶ್ಚರ್ಯಪಟ್ಟು ಕಮಲದಂತಿದ್ದ ತನ್ನ ಒಂದು ಕಣ್ಣನ್ನೇ ಕಿತ್ತು ಶಂಕರನಿಗೆ ಅರ್ಪಿಸಿದನು.

೧೪೪. ಇಂತಹ ವಿಷ್ಣುವಿನ ದೃಢಭಕ್ತಿಯನ್ನು ಕಂಡ ಈಶ್ವರನು, ಸಂತುಷ್ಟನಾಗಿ ಸೂರ್ಯಮಂಡಲದಿಂದ ಹುಟ್ಟಿ ಬಂದು ಪ್ರತ್ಯಕ್ಷನಾಗಿ ನಿಂತನು.

ಸೂರ್ಯಕೋಟಿಪ್ರತೀಕಾಶಸ್ತ್ರಿನೇತ್ರಶ್ಚಂದ್ರಶೇಖರಃ ।
ಶೂಲಟಂಕಗದಾಚಕ್ರಕುಂತಪಾಶಧರೋ ವಿಭುಃ ॥ ೧೪೫ ॥

ವರದಾಭಯಹಸ್ತಶ್ಚ ಸರ್ವಾಭರಣಭೂಷಿತಃ ।
ತಂ ದೃಷ್ಟ್ವಾ ದೇವದೇವೇಶಂ ಭಗವಾನ್ ಕಮಲೇಕ್ಷಣಃ ॥ ೧೪೬ ॥

ಪುನರ್ನನಾಮ ಚರಣೌ ದಂಡವಚ್ಛಾಲಪಾಣಿನಃ ।
ದೃಷ್ಟ್ವಾ ಶಂಭುಂ ತದಾ ದೇವಾ ದುದ್ರುವುರ್ಭಯವಿಹ್ವಲಾಃ ॥ ೧೪೭ ॥

ಚಚಾಲ ಬ್ರಹ್ಮಭುವನಂ ಚಕಂಪೇ ಚ ವಸುಂಧರಾ ।
ಅಧಶ್ಚೋರ್ಧ್ವಂ ತತಃ ಪ್ರೇಶೇ ದದಾಹ ಶತಯೋಜನಂ ॥ ೧೪೮ ॥

ಶಂಭೋರ್ಭಗವತಸ್ತೇಜಸ್ತದ್ದೃಷ್ಟ್ವಾ ಪ್ರಹಸನ್ ಶಿವಃ
ಅಬ್ರವೀಚ್ಛಾರ್ಙ್ಗಿಣಂ ವಿಪ್ರಾಃ ಕೃತಾಂಜಲಿಪುಟಂ ಸ್ಥಿತಂ ॥ ೧೪೯ ॥

---

೧೪೫. ಶಿವನ ದೇಹವಾದರೋ ಕೋಟಿ ಸೂರ್ಯರಂತೆ ಹೊಳೆಯುತ್ತಿತ್ತು. ಮುಖದಲ್ಲಿ ಮೂರು ಕಣ್ಣುಗಳು ಪ್ರಕಾಶಿಸುತ್ತಿದ್ದುವು. ತಲೆಯಲ್ಲಿ ಚಂದ್ರನು ಶೋಭಿಸುತ್ತಿದ್ದನು. ತ್ರಿಶೂಲ, ಟಂಕ, ಗದೆ, ಚಕ್ರ, ಕುಂತ, ಪಾಶ ಇವು ಶೋಭಿಸುತ್ತಿದ್ದುವು. ಇವೇ ಮೊದಲಾದ ಆಯುಧಗಳು ಕೈಗಳಲ್ಲಿ ಕಂಗೊಳಿಸುತ್ತಿದ್ದುವು.

೧೪೬. ವರದ ಮತ್ತು ಅಭಯಹಸ್ತಗಳಿಂದ ಕೂಡಿದ್ದನು. ಪರಮೇಶ್ವರನ ಸರ್ವಾಂಗವೂ ಅಲಂಕೃತವಾಗಿತ್ತು. ಇಂತಹ ಸುಂದರನಾದ ಮಹೇಶ್ವರನನ್ನು ಭಗವಂತನಾದ ಶ್ರೀಮನ್ನಾರಾಯಣನು ಕಂಡನು.

೧೪೭. ಒಡನೆಯೇ ಮಹೇಶ್ವರನ ಪಾದಗಳಿಗೆ ಸಾಷ್ಟಾಂಗ ನಮಸ್ಕಾರಮಾಡಿದನು. ಹೀಗೆ ಸೂರ್ಯಮಂಡಲದಿಂದ ತೇಜೋರಾಶಿಯಾಗಿ ಬಂದ ಮಹೇಶ್ವರನನ್ನು ನೋಡಿ ದೇವತೆಗಳೆಲ್ಲರೂ ಭಯದಿಂದ ಓಡಲಾರಂಭಿಸಿದರು.

೧೪೮. ಬ್ರಹ್ಮಾಂಡವೆಲ್ಲವೂ ಅಲುಗಿತು. ಭೂಮಿಯು ನಡುಗಿತು. ಊರ್ಧ್ವಾಧೋ ಭಾಗಗಳಲ್ಲಿ ಸುಮಾರು ನೂರು ಯೋಜನದಗಲ ಭೂಮಿಯು ಮಹೇಶ್ವರನ ತೇಜಸ್ಸಿನಿಂದ ಸುಟ್ಟುಹೋಯಿತು.

೧೪೯. ಭಗವಂತನಾದ ಶಂಭುವಿನ ತೇಜಸ್ಸನ್ನು ನೋಡಿ, ವಿಷ್ಣುವು ನಗುತ್ತಾ ಸಂತೋಷದಿಂದ ಕೈಜೋಡಿಸಿ ನಿಂತಿರಲು, ಅವನನ್ನು ಕಂಡು ಮಹೇಶ್ವರನು ನಗುತ್ತಾ ಹೀಗೆ ಹೇಳಿದನು.

ದೇವಕಾರ್ಯಮಿದಂ ಜ್ಞಾತಮಿದಾನೀಂ ಮಧುಸೂದನ ।
ದಿವ್ಯಂ ದದಾಮಿ ತೇ ಚಕ್ರಮದ್ಭುತಂ ತತ್ಸುದರ್ಶನಂ ॥ ೧೫೦ ॥

ಹಿತಾರ್ಥಂ ಸರ್ವದೇವಾನಾಂ ನಿರ್ಮಿತಂ ಯನ್ಮಯಾ ಪುರಾ ।
ಗೃಹೀತ್ವಾ ತದ್ಗುಣೈರ್ದೈತ್ಯಾನ್ ಜಹಿ ವಿಷ್ಣೋ ಮಮಾಜ್ಞಯಾ ॥ ೧೫೧ ॥

ಏವಮುಕ್ತ್ವಾ ದದೌ ಚಕ್ರಂ ಸೂರ್ಯಾಯುತಸಮಪ್ರಭಂ ।
ಲೋಕೇಷು ಪುಂಡರೀಕಾಕ್ಷ ಇತಿ ಖ್ಯಾತಿಂ ಗತೋ ಹರಿಃ ॥ ೧೫೨ ॥

ಪುನಸ್ತಮಬ್ರವೀಚ್ಛಂಭುರ್ನಾರಾಯಣಮನಾಮಯಂ ।
ವರಾನನ್ಯಾನ್ ಸುರಶ್ರೇಷ್ಠ ವರಯಸ್ವ ಯಥೇಪ್ಸಿತಾನ್ ॥ ೧೫೩ ॥

ಏವಂ ಶಂಭೋರ್ನಿಗದಿತಂ ಶ್ರುತ್ವಾ ದೇವೋ ಜನಾರ್ದನಃ ।
ಅಬ್ರವೀತ್ಖಂಡಪರಶುಂ ಪ್ರಾಂಜಲಿಃ ಪ್ರಣಯಾನ್ವಿತಃ ॥ ೧೫೪ ॥

---

೧೫೦. "ಎಲೈ ವಿಷ್ಣುವೇ, ಈಗ ಒದಗಿರುವ ದೇವರಕ್ಷಣಾಕಾರ್ಯವನ್ನು ನಾನು ಅರಿತಿರುವೆನು. ಅದಕ್ಕೆ ಅನುಕೂಲವಾಗುವಂತೆ ಮಹಾದ್ಭುತವಾದ ಈ ಸುದರ್ಶನವೆಂಬ ಚಕ್ರವನ್ನು ನಿನಗೆ ಅನುಗ್ರಹಿಸುವೆನು.

೧೫೧. ಎಲೈ ವಿಷ್ಣುವೇ, ಸಮಸ್ತ ದೇವತೆಗಳ ಹಿತಾರ್ಥಕ್ಕಾಗಿ ಸೃಷ್ಟಿಮಾಡಲ್ಪಟ್ಟಿರುವ ಈ ಸುದರ್ಶನ ಚಕ್ರವನ್ನು ನಿನಗೆ ಈಗ ನಾನು ದಯಪಾಲಿಸಿರುವೆನು. ಇಗೋ, ಈಗ ಇದನ್ನು ಸ್ವೀಕರಿಸಿ ಸಮಸ್ತ ರಾಕ್ಷಸರನ್ನೂ ಧ್ವಂಸಮಾಡು."

೧೫೨. ಹೀಗೆ ಹೇಳಿ ಮಹೇಶ್ವರನು ಹತ್ತುಸಾವಿರ ಸೂರ್ಯರಂತೆ ಹೊಳೆಯುತ್ತಿದ್ದ ದೊಡ್ಡ ಸುದರ್ಶನ ಚಕ್ರವನ್ನು ವಿಷ್ಣುವಿಗೆ ಕೊಟ್ಟನು. ಅದನ್ನು ಹೊಂದಿ ವಿಷ್ಣುವು ಪುಂಡರೀಕಾಕ್ಷನೆಂಬ ಹೆಸರನ್ನು ಪಡೆದನು.

೧೫೩. ಪುನಃ ಮಹೇಶ್ವರನು ವಿಷ್ಣುವನ್ನು ಕುರಿತು "ಸುರಶ್ರೇಷ್ಠನೇ, ಮತ್ತೇನಾದರೂ ಇಷ್ಟವಿದ್ದಲ್ಲಿ ಅದನ್ನು ಕೇಳಿಕೊ" ಎನ್ನಲು

೧೫೪. ಶಂಕರನ ಅನುಗ್ರಹವಾಣಿಯನ್ನು ಜನಾರ್ದನನು ಕೇಳಿ, ಅಂಜಲಿಬದ್ಧನಾಗಿ ವಿಶ್ವಾಸದೊಡನೆ ಶಂಭುವಿನೊಡನೆ ಹೀಗೆ ಹೇಳಿಕೊಂಡನು.

॥ ಶ್ರೀವಿಷ್ಣುರುವಾಚ ॥

ಭಗವನ್ ದೇವದೇವೇಶ ಪರಮಾತ್ಮನ್ ಶಿವಾವ್ಯಯ ।
ನಿಶ್ಚಲಾ ತ್ವಯಿ ಮೇ ಭಕ್ತಿರ್ಭವತ್ವಿತಿ ವರೋ ಮಮ ॥ ೧೫೫ ॥

॥ ಈಶ್ವರ ಉವಾಚ ॥

ಭಕ್ತಿರ್ಮಯಿ ದೃಢಾ ವಿಷ್ಣೋ ಭವಿಷ್ಯತಿ ತವಾನಘ ।
ಅಜೇಯಸ್ತ್ರಿಷುಲೋಕೇಷು ಮತ್ಪ್ರಸಾದಾದ್ಭವಿಷ್ಯತಿ ॥ ೧೫೬ ॥

॥ ಸೂತ ಉವಾಚ ॥

ಏವಂ ದತ್ವಾ ವರಂ ಶಂಭುರ್ವಿಷ್ಣವೇ ಪ್ರಭವಿಷ್ಣವೇ ।
ಅಂತರ್ಹಿತೋ ದ್ವಿಜಶ್ರೇಷ್ಠಾ ಇತಿ ದೇವೋಽಬ್ರವೀದ್ರವಿಃ ॥ ೧೫೭ ॥
ನಾಮ್ನಾಂ ಸಹಸ್ರಂ ಯದ್ದಿವ್ಯಂ ವಿಷ್ಣುನಾ ಸಮುದೀರಿತಂ ।
ಯಃ ಪಠೇಚ್ಛೃಣುಯಾದ್ವಾಪಿ ಸರ್ವಪಾಪೈಃ ಪ್ರಮುಚ್ಯತೇ ॥ ೧೫೮ ॥

---

೧೫೫. " ದೇವದೇವನಾದ ಸ್ವಾಮಿಯೇ, ಪರಮಾತ್ಮನೇ, ನಾಶರಹಿತನಾದ ಪರಶಿವನೇ, ಯಾವಾಗಲೂ ನನಗೆ ನಿನ್ನಲ್ಲಿ ಅಸದೃಶವಾದ ಭಕ್ತಿಯು ಸ್ಥಿರವಾಗಿರುವಂತೆ ವರವನ್ನು ನೀಡು " ಎಂದು ಕೇಳಿಕೊಳ್ಳಲು

೧೫೬. ಈಶ್ವರನು " ಓ ವಿಷ್ಣುವೇ, ನಿನ್ನ ಇಷ್ಟದಂತೆ ಯಾವಾಗಲೂ ನಿನ್ನಲ್ಲಿ ನನ್ನ ವಿಷಯಕವಾದ ಭಕ್ತಿಯು ಸ್ಥಿರವಾಗಿರಲಿ. ನನ್ನ ಅನುಗ್ರಹದಿಂದ ನೀನು ಮೂರು ಲೋಕದಲ್ಲಿಯೂ ಶೂರನೆನಿಸಿಕೊಂಡು ಬಾಳು " ಎಂದು ವರವಿತ್ತನು.

೧೫೭. ಹೀಗೆ ಶಂಭುವು ಮಹಾಮಹಿಮನಾದ ವಿಷ್ಣುವಿಗೆ ವರವನ್ನು ಕೊಟ್ಟು ತತ್ಕ್ಷಣವೇ ಅಂತರ್ಧಾನನಾದನೆಂದು ಸೂರ್ಯದೇವನು ಮನುವಿಗೆ ಹೇಳಿದನು ಎಂದು ಶೌನಕಾದಿಗಳಿಗೆ ಸೂತಮಹರ್ಷಿಗಳು ಹೇಳಿದರು.

೧೫೮. ಶ್ರೀವಿಷ್ಣುಪ್ರೋಕ್ತವಾದ ಶಿವಸಹಸ್ರನಾಮ ಸ್ತೋತ್ರವನ್ನು ಯಾರು ಭಕ್ತಿಯಿಂದ ಪಠಿಸುವರೋ ಯಾರು ಭಕ್ತಿಯಿಂದ ಶ್ರವಣಮಾಡುವರೋ ಅವರು ಸಮಸ್ತ ಪಾಪಗಳಿಂದಲೂ ಬಿಡುಗಡೆ ಹೊಂದುವರು.

ಅಶ್ವಮೇಧಸಹಸ್ರಸ್ಯ ಫಲಂ ಪ್ರಾಪ್ನೋತಿ ನಿಶ್ಚಿತಂ ।
ಪಠತಃ ಸರ್ವಭಾವೇನ ವಿದ್ಯಾ ವಾ ಮಹತೀಭವೇತ್ ॥ ೧೫೯ ॥

ಜಾಯತೇ ಮಹದೈಶ್ವರ್ಯಂ ಶಿವಸ್ಯ ದಯಿತೋ ಭವೇತ್ ।
ದುಸ್ತರೇ ಜಲಸಂಘಾತೇ ಯಜ್ಜಲಂ ಸ್ಥಲತಾಂ ವ್ರಜೇತ್ ॥ ೧೬೦ ॥

ಹಾರಾಯಂತೇ ಮಹಾಸರ್ಪಾಃ ಸಿಂಹಃ ಕ್ರೀಡಾಮೃಗಾಯತೇ ।
ತಸ್ಮಾನ್ನಾಮ್ನಾಂ ಸಹಸ್ರೇಣ ಸ್ತೋತವ್ಯೋ ಭಗವಾನ್‌ಶಿವಃ ।
ಪ್ರಯಚ್ಛಂತ್ಯಖಿಲಾನ್ ಕಾಮಾನ್ ದೇಹಾಂತೇ ಚ ಪರಾಂಗತಿಂ ॥೧೬೧॥

---

೧೫೯. ಭಕ್ತಿಯಿಂದ ಈ ಸಹಸ್ರನಾಮಸ್ತೋತ್ರವನ್ನು ಪಠಿಸುವವರಿಗೆ ಒಂದು ಸಹಸ್ರ ಅಶ್ವಮೇಧಯಾಗದ ಫಲವು ಲಭಿಸುವುದು. ಅಲ್ಲದೆ ಅವರು ಸಂಪೂರ್ಣ ಜ್ಞಾನಿಗಳೂ ಆಗುವರು.

೧೬೦. ಇಂತಹ ಸಹಸ್ರನಾಮ ಸ್ತೋತ್ರವನ್ನು ಪಠನಮಾಡುವವರು ಪರಮೇಶ್ವರನಿಗೆ ಅತ್ಯಂತ ಭಕ್ತರಾಗುವರು. ಅಂತಹವರು ಅಗಾಧವಾದ ಜಲಾಶಯದಲ್ಲಿ ಮುಳುಗಿದರೂ ಶಿವಾನುಗ್ರಹದಿಂದ ಆ ಜಲಾಶಯವೆಲ್ಲಾ ಸ್ಥಲದಂತೆ ಆಗಿ ಅವರಿಗೆ ಸುಗಮವಾದ ದಾರಿ ಸಿಕ್ಕುವುದು.

೧೬೧. ಶಿವಸಹಸ್ರನಾಮವನ್ನು ಪಠಿಸಿ ಶಿವಾನುಗ್ರಹವನ್ನು ಸಂಪಾದಿಸಿದವರಿಗೆ ಭಯಂಕರವಾದ ದೊಡ್ಡ ದೊಡ್ಡ ಸರ್ಪಗಳು ಮುಕ್ತಾಹಾರದಂತೆ ಅಲಂಕೃತ ವಸ್ತುವಾಗುವುವು. ದುಷ್ಟ ಪ್ರಾಣಿಯಾದ ಸಿಂಹವು ಆಟದ ಮೃಗದಂತಾಗುವುದು. ಆದ್ದರಿಂದ ಯಾವಾಗಲೂ ಭಕ್ತರಾದವರು ವಿಷ್ಣುಪ್ರೋಕ್ತವಾದ ಶಿವ ಸಹಸ್ರನಾಮ ಸ್ತೋತ್ರದಿಂದಲೇ ಶಂಭುವನ್ನು ಭಕ್ತಿಯಿಂದ ಅರ್ಚಿಸಬೇಕು. ಇಂತಹ ಭಕ್ತರಿಗೆ ಭಗವಂತನೂ ದಯಾಮಯನೂ ಆದ ಶ್ರೀ ಮಹೇಶ್ವರನು ಸಮಸ್ತವಾದ ಐಹಿಕಭೋಗ ಭಾಗ್ಯಾದಿಗಳನ್ನು ಅನುಗ್ರಹಿಸಿ, ಅವರ ದೇಹತ್ಯಾಗಾನಂತರದಲ್ಲಿ ಅವರಿಗೆ ಶಾಶ್ವತವಾದ ಮತ್ತು ಸದಾನಂದಮಯವಾದ ಮುಕ್ತಿಯನ್ನು ದಯಪಾಲಿಸುವನೆಂಬುದರಲ್ಲಿ ಸಂಶಯವಿಲ್ಲವೆಂದು ಶ್ರೀ ಸೂತಪುರಾಣೀಕರು ಶೌನಕರೇ ಮೊದಲಾದ ಮಹರ್ಷಿಗಳಿಗೆ ಹೇಳಿದರು.

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ವಿಷ್ಣುಚಕ್ರಪ್ರಾಪ್ತಿ ಕಥನಂ ನಾಮೈಕ ಚತ್ವಾರಿಂಶೋಽಧ್ಯಾಯಃ.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದದಲ್ಲಿ ವಿಷ್ಣುಚಕ್ರಪ್ರಾಪ್ತಿಯ ವಿಷಯವನ್ನು ತಿಳಿಸುವಂತಹ ನಲವತ್ತೊಂದನೆಯ ಅಧ್ಯಾಯವು ಮುಗಿದುದು.

ಅಥ ಶ್ರೀ ಶಿವಸಹಸ್ರನಾಮಾವಳಿಃ

ಓಂ ಭವಾಯ ನಮಃ
ಓಂ ಶಿವಾಯ ನಮಃ
ಓಂ ಹರಾಯ ನಮಃ
ಓಂ ರುದ್ರಾಯ ನಮಃ
ಓಂ ಪುಷ್ಕಲಾಯ ನಮಃ
ಓಂ ಮುದ್ಗಲಾಯನಮಃ
ಓಂ ಬಲಾಯ ನಮಃ
ಓಂ ಅಗ್ರಗಣ್ಯಾಯನಮಃ
ಓಂ ಸದಾಚಾರಾಯನಮಃ
ಓಂ ಸರ್ವಾಯನಮಃ ೧೦
ಓಂ ಶಮ್ಭವೇ ನಮಃ
ಓಂ ಮಹೇಶ್ವರಾಯ ನಮಃ
ಓಂ ಈಶ್ವರಾಯ ನಮಃ
ಓಂ ಸ್ಥಾಣವೇ ನಮಃ
ಓಂ ಈಶಾನಾಯ ನಮಃ
ಓಂ ಸಹಸ್ರಾಕ್ಷಾಯ ನಮಃ
ಓಂ ಸಹಸ್ರಪದೇ ನಮಃ
ಓಂ ವರೀಯಸೇ ನಮಃ
ಓಂ ವರದಾಯ ನಮಃ
ಓಂ ವಂದ್ಯಾಯ ನಮಃ ೨೦
ಓಂ ಶಂಕರಾಯ ನಮಃ
ಓಂ ಪರಮೇಶ್ವರಾಯ ನಮಃ
ಓಂ ಗಙ್ಗಾಧರಾಯ ನಮಃ
ಓಂ ಶೂಲಧರಾಯ ನಮಃ
ಓಂ ಪರಾರ್ಥೈಕಪ್ರಯೋಜನಾಯ ನಮಃ
ಓಂ ಸರ್ವಜ್ಞಾಯ ನಮಃ
ಓಂ ಸರ್ವದೇವಾದಯೇ ನಮಃ
ಓಂ ಗಿರಿಧನ್ವನೇ ನಮಃ
ಓಂ ಜಟಾಧರಾಯ ನಮಃ
ಓಂ ಚಂದ್ರಾಪೀಡಾಯ ನಮಃ ೩೦
ಓಂ ಚನ್ದ್ರಮೌಳಯೇ ನಮಃ
ಓಂ ವಿದುಷೇ ನಮಃ
ಓಂ ವಿಶ್ವಾಮರೇಶ್ವರಾಯ ನಮಃ
ಓಂ ವೇದಾನ್ತಸಾರಸನ್ದೋಹಾಯ ನಮಃ
ಓಂ ಕಪಾಲಿನೇ ನಮಃ
ಓಂ ನೀಲಲೋಹಿತಾಯ ನಮಃ
ಓಂ ಧ್ಯಾನಾಧಾರಾಯ ನಮಃ
ಓಂ ಅಪರಿಚ್ಛೇದ್ಯಾಯ ನಮಃ
ಓಂ ಗೌರೀಭರ್ತ್ರೇ ನಮಃ
ಓಂ ಗಣೇಶ್ವರಾಯ ನಮಃ ೪೦

ಓಂ ಅಷ್ಟಮೂರ್ತಯೇ ನಮಃ
ಓಂ ವಿಶ್ವಮೂರ್ತಯೇ ನಮಃ
ಓಂ ತ್ರಿವರ್ಗಸ್ವರ್ಗಸಾಧನಾಯ ನಮಃ
ಓಂ ಜ್ಞಾನಗಮ್ಯಾಯ ನಮಃ
ಓಂ ದೃಢಪ್ರಜ್ಞಾಯ ನಮಃ
ಓಂ ದೇವದೇವಾಯ ನಮಃ
ಓಂ ತ್ರಿಲೋಚನಾಯ ನಮಃ
ಓಂ ವಾಮದೇವಾಯ ನಮಃ
ಓಂ ಮಹಾದೇವಾಯ ನಮಃ
ಓಂ ಪಟವೇ ನಮಃ ೫೦
ಓಂ ಪರಿವೃಢಾಯ ನಮಃ
ಓಂ ಅಧಿಪಾಯ ನಮಃ
ಓಂ ವಿಶ್ವರೂಪಾಯ ನಮಃ
ಓಂ ವಿರೂಪಾಕ್ಷಾಯ ನಮಃ
ಓಂ ವಾಗೀಶಾಯ ನಮಃ
ಓಂ ಶ್ರುತಿಮತ್ತರಾಯ ನಮಃ
ಓಂ ಸರ್ವಪ್ರಮಾಣಸಂವಾದಿನೇ ನಮಃ
ಓಂ ವೃಷಾಂಕಾಯ ನಮಃ
ಓಂ ವೃಷವಾಹನಾಯ ನಮಃ
ಓಂ ಈಶಾಯ ನಮಃ ೬೦
ಓಂ ಪಿನಾಕಿನೇ ನಮಃ
ಓಂ ಖಟ್ವಾಂಗಿನೇ ನಮಃ
ಓಂ ಚಿತ್ರವೇಷಾಯ ನಮಃ
ಓಂ ಚಿರನ್ತನಾಯ ನಮಃ
ಓಂ ಮನೋಮಯಾಯ ನಮಃ

ಓಂ ಮಹಾಯೋಗಿನೇ ನಮಃ
ಓಂ ಸ್ಥಿರಾಯ ನಮಃ
ಓಂ ಬ್ರಹ್ಮಾಂಗಭುವೇ ನಮಃ
ಓಂ ಜಟಿನೇ ನಮಃ
ಓಂ ಕಾಲಕಾಲಯ ನಮಃ ೭೦
ಓಂ ಕೃತ್ತಿವಾಸಸೇ ನಮಃ
ಓಂ ಸುಭಗಾಯ ನಮಃ
ಓಂ ಪ್ರಣವಾತ್ಮಕಾಯ ನಮಃ
ಓಂ ನಾಗಚೂಡಾಯ ನಮಃ
ಓಂ ಸುಚಕ್ಷುಷ್ಯಾಯ ನಮಃ
ಓಂ ದುರ್ವಾಸಸೇ ನಮಃ
ಓಂ ಪುರಶಾಸನಾಯ ನಮಃ
ಓಂ ದೃಗಾಯುಧಾಯ ನಮಃ
ಓಂ ಸ್ಕನ್ದಗುರವೇ ನಮಃ
ಓಂ ಪರಮೇಷ್ಠಿನೇ ನಮಃ
ಓಂ ಪರಾಯಣಾಯ ನಮಃ ೮೦
ಓಂ ಅನಾದಿಮಧ್ಯನಿಧನಾಯ ನಮಃ
ಓಂ ಗಿರೀಶಾಯ ನಮಃ
ಓಂ ಗಿರಿಬಾನ್ಧನಾಯ ನಮಃ
ಓಂ ಕುಬೇರಬನ್ಧವೇ ನಮಃ
ಓಂ ಶ್ರೀಕಣ್ಠಾಯ ನಮಃ
ಓಂ ಲೋಕವರ್ಣೋತ್ತಮಾಯ ನಮಃ
ಓಂ ಮೃದವೇ ನಮಃ
ಓಂ ಸಾಮಾನ್ಯದೇವಾಯ ನಮಃ
ಓಂ ಕೋದಣ್ಡಿನೇ ನಮಃ ೯೦

ಓಂ ನೀಲಕಣ್ಠಾಯ ನಮಃ
ಓಂ ಪರಶ್ವಧಿನೇ ನಮಃ
ಓಂ ವಿಶಾಲಾಕ್ಷಾಯ ನಮಃ
ಓಂ ಮೃಗವ್ಯಾಧಾಯ ನಮಃ
ಓಂ ಸುರೇಶಾಯ ನಮಃ
ಓಂ ಸೂರ್ಯತಾಪನಾಯ ನಮಃ
ಓಂ ಧರ್ಮಧಾಮ್ನೇ ನಮಃ
ಓಂ ಕ್ಷಮಾಕ್ಷೇತ್ರಾಯ ನಮಃ
ಓಂ ಭಗವತೇ ನಮಃ
ಓಂ ಭಗನೇತ್ರಹೃತೇ ನಮಃ ೧೦೦
ಓಂ ಉಗ್ರಾಯ ನಮಃ
ಓಂ ಪಶುಪತಯೇ ನಮಃ
ಓಂ ತಾರ್ಕ್ಷ್ಯಾಯ ನಮಃ
ಓಂ ಪ್ರಿಯಭಕ್ತಾಯ ನಮಃ
ಓಂ ಪ್ರಿಯಂವದಾಯ ನಮಃ
ಓಂ ದಾನ್ತಾಯ ನಮಃ
ಓಂ ದಯಾಕರಾಯ ನಮಃ
ಓಂ ದಕ್ಷಾಯ ನಮಃ
ಓಂ ಕಪರ್ದಿನೇ ನಮಃ
ಓಂ ಕಾಮಶಾಸನಾಯ ನಮಃ ೧೧೦
ಓಂ ಶ್ಮಶಾನನಿಲಯಾಯ ನಮಃ
ಓಂ ತ್ರ್ಯಕ್ಷಾಯ ನಮಃ
ಓಂ ಶ್ಮಶಾನಸ್ಥಾಯ ಮಹೇಶ್ವರಾಯ ನಮಃ
ಓಂ ಲೋಕಕರ್ತ್ರೇ ನಮಃ

ಓಂ ಭೂತಪತಯೇ ನಮಃ
ಓಂ ಮಹಾಕರ್ಮಣೇ ನಮಃ
ಓಂ ಮಹೌಷಧಯೇ ನಮಃ
ಓಂ ಉತ್ತರಸ್ಮೈ ಗೋಪತಯೇ ನಮಃ
ಓಂ ಗೋಪ್ತ್ರೇನಮಃ
ಓಂ ಜ್ಞಾನಗಮ್ಯಾಯ ಪುರಾತನಾಯ ನಮಃ ೧೨೦
ಓಂ ನೀತಯೇ ನಮಃ
ಓಂ ಸುನೀತಯೇ ನಮಃ
ಓಂ ಶುದ್ಧಾತ್ಮನೇ ನಮಃ
ಓಂ ಸೋಮಾಯ ನಮಃ
ಓಂ ಸೋಮರತಾಯ ನಮಃ
ಓಂ ಸುಖಿನೇ ನಮಃ
ಓಂ ಸೋಮಪಾಯ ನಮಃ
ಓಂ ಅಮೃತಪಾಯ ನಮಃ
ಓಂ ಸೌಮ್ಯಾಯ ನಮಃ
ಓಂ ಮಹಾನೀತಯೇ ನಮಃ ೧೩೦
ಓಂ ಮಹಾಮತಯೇ ನಮಃ
ಓಂ ಅಜಾತಶತ್ರವೇ ನಮಃ
ಓಂ ಆಲೋಕಾಯ ನಮಃ
ಓಂ ಸುಭಾವ್ಯಾಯ ನಮಃ
ಓಂ ಹವ್ಯವಾಹನಾಯ ನಮಃ
ಓಂ ಲೋಕಕಾರಾಯ ನಮಃ
ಓಂ ವೇದಕಾರಾಯ ನಮಃ
ಓಂ ಸೂತ್ರಕಾರಾಯ ನಮಃ

ಓಂ ಸನಾತನಾಯ ನಮಃ
ಓಂ ಮಹರ್ಷಯೇ ಕಪಿಲಾಚಾರ್ಯಾಯ ನಮಃ ೪೦
ಓಂ ವಿಶ್ವದೀಪ್ತಯೇ ನಮಃ
ಓಂ ವಿರೋಚನಾಯ ನಮಃ
ಓಂ ಪಿನಾಕಪಾಣಯೇ ನಮಃ
ಓಂ ಭೂದೇವಾಯ ನಮಃ
ಓಂ ಸ್ವಸ್ತಿದಾಯ ನಮಃ
ಓಂ ಸ್ವಸ್ತಿಕೃತೇ ನಮಃ
ಓಂ ಸುಧಾಯೈ ನಮಃ
ಓಂ ಧಾತ್ರೀಧಾಮಕರಾಯ ನಮಃ
ಓಂ ಸರ್ವಸ್ಮೈ ನಮಃ
ಓಂ ಸರ್ವದಾಯ ನಮಃ ೫೦
ಓಂ ಸರ್ವಗೋಚರಾಯ ನಮಃ
ಓಂ ಬ್ರಹ್ಮಸೃಜೇ ನಮಃ
ಓಂ ವಿಶ್ವಸೃಜೇ ನಮಃ
ಓಂ ಸರ್ಗಾಯ ನಮಃ
ಓಂ ಕರ್ಣಿಕಾರಪ್ರಿಯಾಯ ನಮಃ
ಓಂ ಕವಯೇ ನಮಃ
ಓಂ ಶಾಖಾಯ ನಮಃ
ಓಂ ವಿಶಾಖಾಯ ನಮಃ
ಓಂ ಗೋಶಾಖಾಯ ನಮಃ
ಓಂ ಶಿವಾಯ ನಮಃ ೬೦
ಓಂ ಭಿಷಜೇಽನುತ್ತಮಾಯ ನಮಃ
ಓಂ ಗಂಗಾಪ್ರಬೋಧಕಾಯ ನಮಃ

ಓಂ ಭವ್ಯಾಯ ನಮಃ
ಓಂ ಪುಷ್ಕರಾಯ ನಮಃ
ಓಂ ಸ್ಥಪತಯೇ ನಮಃ
ಓಂ ವಿಜಿತಾತ್ಮನೇ ನಮಃ
ಓಂ ವಿಧೇಯಾತ್ಮನೇ ನಮಃ
ಓಂ ಭೂತವಾಹನಸಾರಥಯೇ ನಮಃ
ಓಂ ಸಗಣಾಯ ನಮಃ
ಓಂ ಗಣಕಾಯಾಯ ನಮಃ ೭೦
ಓಂ ಸುಕೀರ್ತಯೇ ನಮಃ
ಓಂ ಛಿನ್ನಸಂಶಯಾಯ ನಮಃ
ಓಂ ಕಾಮದೇವಾಯ ನಮಃ
ಓಂ ಕಾಮಪಾಲಾಯ ನಮಃ
ಓಂ ಭಸ್ಮೋದ್ಧೂಳಿತವಿಗ್ರಹಾಯ ನಮಃ
ಓಂ ಭಸ್ಮಪ್ರಿಯಾಯ ನಮಃ
ಓಂ ಭಸ್ಮಶಾಯಿನೇ ನಮಃ
ಓಂ ಕಾಮಿನೇ ನಮಃ
ಓಂ ಕಾನ್ತಾಯ ನಮಃ
ಓಂ ಕೃತಾಗಮಾಯ ನಮಃ ೮೦
ಓಂ ಸಮಾವರ್ತಾಯ ನಮಃ
ಓಂ ನಿವೃತ್ತಾತ್ಮನೇ ನಮಃ
ಓಂ ಧರ್ಮಪುಂಜಾಯ ನಮಃ
ಓಂ ಸದಾಶಿವಾಯ ನಮಃ
ಓಂ ಅಕಲ್ಮಷಾಯ ನಮಃ
ಓಂ ಚತುರ್ಬಾಹವೇ ನಮಃ
ಓಂ ಸರ್ವಾವಾಸಾಯ ನಮಃ

ಓಂ ದುರಾಸದಾಯ ದುರ್ಲಭಾಯ ನಮಃ
ಓಂ ದುರ್ಗಮಾಯ ದುರ್ಗಾಯ ನಮಃ
ಓಂ ಸರ್ವಾಯುಧವಿಶಾರದಾಯ ನಮಃ ೯೦
ಓಂ ಅಧ್ಯಾತ್ಮಯೋಗನಿಲಯಾಯ ನಮಃ
ಓಂ ಸುತನ್ತವೇ ನಮಃ
ಓಂ ತಂತುವರ್ಧನಾಯ ನಮಃ
ಓಂ ಶುಭಾಂಗಾಯ ನಮಃ
ಓಂ ಯೋಗಸಾರಂಗಾಯ ನಮಃ
ಓಂ ಜಗದೀಶಾಯ ನಮಃ
ಓಂ ಜನಾರ್ದನಾಯ ನಮಃ
ಓಂ ಭಸ್ಮಶುದ್ಧಿಕರಾಯ ನಮಃ
ಓಂ ಮೇರವೇ ನಮಃ
ಓಂ ಓಜಸ್ವಿನೇ ನಮಃ ೨೦೦
ಓಂ ಶುದ್ಧವಿಗ್ರಹಾಯ ನಮಃ
ಓಂ ಹಿರಣ್ಯರೇತಸೇ ನಮಃ
ಓಂ ತರಣಯೇ ನಮಃ
ಓಂ ಮರೀಚಯೇ ನಮಃ
ಓಂ ಮಹಿಮಾಲಯಾಯ ನಮಃ
ಓಂ ಮಹಾಹ್ರದಾಯ ನಮಃ
ಓಂ ಮಹಾಗರ್ತಾಯ ನಮಃ
ಓಂ ಸಿದ್ಧಬೃಂದಾದಿವನ್ದಿತಾಯ ನಮಃ
ಓಂ ವ್ಯಾಘ್ರಚರ್ಮಧರಾಯ ನಮಃ
ಓಂ ವ್ಯಾಳಿನೇ ನಮಃ ೨೧೦
ಓಂ ಮಹಾಭೂತಾಯ ನಮಃ
ಓಂ ಮಹಾನಿಧಯೇ ನಮಃ

ಓಂ ಅಮೃತಾಂಶಾಯ ನಮಃ
ಓಂ ಅಮೃತವಪುಷೇ ನಮಃ
ಓಂ ಪಂಚಯಜ್ಞ ಪ್ರಭಂಜನಾಯ ನಮಃ
ಓಂ ಪಂಚವಿಂಶತಿತತ್ತ್ವಸ್ಥಾಯ ನಮಃ
ಓಂ ಪಾರಿಜಾತಾಯ ನಮಃ
ಓಂ ಪರಾವರಾಯ ನಮಃ
ಓಂ ಸುಲಭಾಯ ನಮಃ
ಓಂ ಸುವ್ರತಾಯ ನಮಃ ೨೩೦
ಓಂ ಶೂರಾಯ ನಮಃ
ಓಂ ವಾಙ್ಮಯೈಕನಿಧಯೇ ನಮಃ
ಓಂ ನಿಧಯೇ ನಮಃ
ಓಂ ವರ್ಣಾಶ್ರಮಗುರವೇ ನಮಃ
ಓಂ ವರ್ಣಿನೇ ನಮಃ
ಓಂ ಶತ್ರುಜಿತೇ ನಮಃ
ಓಂ ಶತ್ರುತಾಪನಾಯ ನಮಃ
ಓಂ ಆತ್ಮದಾಯ ನಮಃ
ಓಂ ಕ್ಷಪಣಾಯ ನಮಃ
ಓಂ ಕ್ಷಾಮಾಯ ನಮಃ ೨೪೦
ಓಂ ಜ್ಞಾನವತೇ ನಮಃ
ಓಂ ಅಚಲಾಯ ನಮಃ
ಓಂ ಚಲಾಯ ನಮಃ
ಓಂ ಪ್ರಮಾಣಭೂತಾಯ ನಮಃ
ಓಂ ದುರ್ಜ್ಞೇಯಾಯ ನಮಃ
ಓಂ ಸುಪರ್ಣಾಯ ನಮಃ
ಓಂ ವಾಯುವಾಹನಾಯ ನಮಃ

ಓಂ ಧನುರ್ಧರಾಯ ನಮಃ
ಓಂ ಧನುರ್ವೇದಾಯ ನಮಃ
ಓಂ ಗುಣರಾಶಯೇ ನಮಃ ೨೪೦
ಓಂ ಗುಣಾಕಾರಾಯ ನಮಃ
ಓಂ ಅನನ್ತದೃಷ್ಟಯೇ ನಮಃ
ಓಂ ಆನನ್ದಾಯ ನಮಃ
ಓಂ ದಣ್ಡಾಯ ನಮಃ
ಓಂ ದಮಯಿತ್ರೇ ನಮಃ
ಓಂ ದಮಾಯ ನಮಃ
ಓಂ ಅಭಿವಾದ್ಯಾಯ ನಮಃ
ಓಂ ಮಹಾಕಾಯಾಯ ನಮಃ
ಓಂ ವಿಶ್ವಕರ್ಮಿಣೇ ನಮಃ
ಓಂ ವಿಶಾರದಾಯ ನಮಃ ೨೫೦
ಓಂ ವೀತರಾಗಾಯ ನಮಃ
ಓಂ ವಿನೀತಾತ್ಮನೇ ನಮಃ
ಓಂ ತಪಸ್ವಿನೇ ನಮಃ
ಓಂ ಭೂತಭಾವನಾಯ ನಮಃ
ಓಂ ಉನ್ಮತ್ತವೇಷಾಯ ನಮಃ
ಓಂ ಪ್ರಚ್ಛನ್ನಾಯ ನಮಃ
ಓಂ ಜಿತಕಾಮಾಯ ನಮಃ
ಓಂ ಜನಪ್ರಿಯಾಯ ನಮಃ
ಓಂ ಕಲ್ಯಾಣಪ್ರಕೃತಯೇಕಲ್ಯಾಯ ನಮಃ
ಓಂ ಸರ್ವಲೋಕಪ್ರಜಾಪತಯೇನಮಃ೨೬೦
ಓಂ ತರಸ್ವಿನೇ ನಮಃ

ಓಂ ತಾರಕಾಯ ನಮಃ
ಓಂ ಧೀಮತೇ ನಮಃ
ಓಂ ಪ್ರಧಾನಪ್ರಭವೇ ನಮಃ
ಓಂ ಅವ್ಯಯಾಯ ನಮಃ
ಓಂ ಲೋಕಪಾಲಾಯ ನಮಃ
ಓಂ ಅನ್ತರ್ಹಿತಾತ್ಮನೇ ನಮಃ
ಓಂ ಕಲ್ಪಾದಯೇ ನಮಃ
ಓಂ ಕಮಲೇಕ್ಷಣಾಯ ನಮಃ
ಓಂ ವೇದಶಾಸ್ತ್ರಾರ್ಥತತ್ತ್ವಜ್ಞಾಯ ನಮಃ ೨೭೦
ಓಂ ನಿಯಮಾಯ ನಮಃ
ಓಂ ನಿಯಮಾಶ್ರಯಾಯ ನಮಃ
ಓಂ ರಾಹವೇ ನಮಃ
ಓಂ ಸೂರ್ಯಾಯ ನಮಃ
ಓಂ ಶನಯೇ ನಮಃ
ಓಂ ಕೇತವೇ ನಮಃ
ಓಂ ವಿರಾಮಾಯ ನಮಃ
ಓಂ ವಿದ್ರುಮಚ್ಛವಯೇ ನಮಃ
ಓಂ ಭಕ್ತಿಗಮ್ಯಾಯ ನಮಃ
ಓಂ ಪರಬ್ರಹ್ಮಣೇ ನಮಃ ೨೮೦
ಓಂ ಮೃಗಬಾಣಾರ್ಪಣಾಯ ನಮಃ
ಓಂ ಅನಘಾಯ ನಮಃ
ಓಂ ಅದ್ರಯೇ ನಮಃ
ಓಂ ಅದ್ರ್ಯಾಲಯಾಯ ನಮಃ
ಓಂ ಸ್ವಾನ್ತಾಯ ನಮಃ

ಓಂ ಪವನಾಯ ನಮಃ
ಓಂ ಜಗತಾಂಪತಏ ನಮಃ
ಓಂ ಸರ್ವಕರ್ಮಾಚಲಾಯ ನಮಃ
ಓಂ ತ್ವಷ್ಟ್ರೇ ನಮಃ
ಓಂ ಮಾಂಗಲ್ಯಾಯಮಂಗಳಪ್ರದಾಯ ನಮಃ ೨೯೦
ಓಂ ಮಹಾತಪಸೇ ನಮಃ
ಓಂ ದೀರ್ಘತಪಸೇ ನಮಃ
ಓಂ ಸ್ಥವಿಷ್ಠಾಯ ನಮಃ
ಓಂ ಸ್ಥವಿರಾಯ ಧ್ರುವಾಯ ನಮಃ
ಓಂ ಅಹ್ನೇ ನಮಃ
ಓಂ ಸಂವತ್ಸರಾಯ ನಮಃ
ಓಂ ವ್ಯಾಡಾಯ ನಮಃ
ಓಂ ಪ್ರಮಾಣಾಯ ನಮಃ
ಓಂ ಪರಮಾಯ ತಪಸೇ ನಮಃ
ಓಂ ಸಂವತ್ಸರಕರಾಯ ನಮಃ ೩೦೦
ಓಂ ಮನ್ತ್ರಾಯ ನಮಃ
ಓಂ ಪ್ರತ್ಯಯಾಯಸರ್ವದರ್ಶನಾಯ ನಮಃ
ಓಂ ಅಜಾಯ ನಮಃ
ಓಂ ಸರ್ವೇಶ್ವರಾಯ ಸಿದ್ಧಾಯ ನಮಃ
ಓಂ ಮಹಾತೇಜಸೇ ನಮಃ
ಓಂ ಮಹಾಬಲಾಯ ನಮಃ
ಓಂ ಯೋಗಿನೇ ಯೋಗ್ಯಾಯ ನಮಃ
ಓಂ ಮಹಾದೇವಾಯ ನಮಃ
ಓಂ ಸಿದ್ಧಯೇ ನಮಃ

ಓಂ ವಾಯ್ವಾದಯೇ ನಮಃ ೩೧೦
ಓಂ ಅಗ್ನಿದಾಯ ನಮಃ
ಓಂ ವಸವೇ ನಮಃ
ಓಂ ವಸುಮನಸೇ ನಮಃ
ಓಂ ಸತ್ಯಾಯ ನಮಃ
ಓಂ ಸರ್ವಪಾಪಹರಾಯ ನಮಃ
ಓಂ ಹರಾಯ ನಮಃ
ಓಂ ಅಮೃತಾಯ ನಮಃ
ಓಂ ಶಾಶ್ವತಾಯ ಶಾನ್ತಾಯ ನಮಃ
ಓಂ ಬಾಣಹಸ್ತಾಯ ಪ್ರತಾಪವತೇ ನಮಃ
ಓಂ ಕಮಣ್ಡಲುಧರಾಯ ನಮಃ ೩೨೦
ಓಂ ಧನ್ವಿನೇ ನಮಃ
ಓಂ ವೇದಾಙ್ಗಾಯ ನಮಃ
ಓಂ ವೇದವಿನ್ಮುನಯೇಭ್ರಾಜಿಷ್ಣವೇ ನಮಃ
ಓಂ ಭೋಜನಾಯ ನಮಃ
ಓಂ ಭೋಕ್ತ್ರೇ ನಮಃ
ಓಂ ಲೋಕನೇತ್ರೇ ನಮಃ
ಓಂ ಧುರಂಧರಾಯ ನಮಃ
ಓಂ ಅತೀನ್ದ್ರಿಯಾಯ ನಮಃ
ಓಂ ಮಹಾಮಾಯಾಯ ನಮಃ
ಓಂ ಸರ್ವಾವಾಸಾಯ ನಮಃ ೩೩೦
ಓಂ ಚತುಷ್ಪಥಾಯ ನಮಃ
ಓಂ ಕಾಲಯೋಗಿನೇ ನಮಃ
ಓಂ ಮಹಾನಾದಾಯ ನಮಃ
ಓಂ ಮಹೋತ್ಸಾಹಾಯ ನಮಃ

ಓಂ ಮಹಾಬಲಾಯ ನಮಃ
ಓಂ ಮಹಾಬುದ್ಧಯೇ ನಮಃ
ಓಂ ಮಹಾವೀರ್ಯಾಯ ನಮಃ
ಓಂ ಭೂತಚಾರಿಣೇ ನಮಃ
ಓಂ ಪುರನ್ದರಾಯ ನಮಃ
ಓಂ ನಿಶಾಚರಾಯ ನಮಃ ೩೪೦
ಓಂ ಪ್ರೇತಚಾರಿಣೇ ನಮಃ
ಓಂ ಮಹಾಶಕ್ತಯೇ ನಮಃ
ಓಂ ಮಹಾದ್ಯುತಯೇ ನಮಃ
ಓಂ ಅನಿರ್ದೇಶ್ಯವಪುಷೇ ಶ್ರೀಮತೇ ನಮಃ
ಓಂ ಸರ್ವಹಾರಿಣೇ ನಮಃ
ಓಂ ಅಮಿತಾಯ ನಮಃ
ಓಂ ಗತಯೇ ನಮಃ
ಓಂ ಬಹುಶ್ರುತಾಯ ನಮಃ
ಓಂ ಬಹುಮಯಾಯ ನಮಃ
ಓಂ ನಿಯತಾತ್ಮನೇ ನಮಃ ೩೫೦
ಓಂ ನಿಜೋದ್ಭವಾಯ ನಮಃ
ಓಂ ಓಜಸ್ತೇಜೋದ್ಯುತಿಧರಾಯ ನಮಃ
ಓಂ ನರ್ತಕಾಯ ಸರ್ವಲಾಸಕಾಯ ನಮಃ
ಓಂ ನೀತಯೇ ನಮಃ
ಓಂ ಘಣ್ಟಾಪ್ರಿಯಾಯ ನಮಃ
ಓಂ ನಿತ್ಯಪ್ರಕಾಶಾತ್ಮನೇ ನಮಃ
ಓಂ ಪ್ರತಾಪನಾಯ ನಮಃ
ಓಂ ಖುದ್ಧಾಯ ನಮಃ
ಓಂ ಸ್ಪಷ್ಟಾಕ್ಷರಾಯ ನಮಃ
ಓಂ ಮನ್ತ್ರಾಯ ನಮಃ ೩೬೦
ಓಂ ಸಂಗ್ರಾಮಾಯ ನಮಃ
ಓಂ ಶಾರದಪ್ಲವಾಯ ನಮಃ
ಓಂ ಯುಗಾದಿಕೃತೇ ನಮಃ
ಓಂ ಯುಗಾವರ್ತಾಯ ನಮಃ
ಓಂ ಗಂಭೀರಾಯ ನಮಃ
ಓಂ ವೃಷವಾಹನಾಯ ನಮಃ
ಓಂ ಇಷ್ಟಾಯ ನಮಃ
ಓಂ ವಿಶಿಷ್ಟಾಯ ನಮಃ
ಓಂ ಶಿಷ್ಟೇಷ್ಟಾಯ ನಮಃ
ಓಂ ಶಲಭಾಯ ನಮಃ ೩೭೦
ಓಂ ಶರಭಾಯ ನಮಃ
ಓಂ ಧನುಷೇ ನಮಃ
ಓಂ ಅಪಾಂನಿಧಯೇ ನಮಃ
ಓಂ ಅಧಿಷ್ಠಾನಾಯ ನಮಃ
ಓಂ ವಿಜಯಾಯ ನಮಃ
ಓಂ ಜಯಕಾಲವಿದೇ ನಮಃ
ಓಂ ಪ್ರತಿಷ್ಠಿತಾಯ ನಮಃ
ಓಂ ಪ್ರಮಾಣಜ್ಞಾಯ ನಮಃ
ಓಂ ಹಿರಣ್ಯಕವಚಾಯ ನಮಃ
ಓಂ ಹರಯೇ ನಮಃ ೩೮೦
ಓಂ ವಿಮೋಚನಾಯ ನಮಃ
ಓಂ ಸುರಗಣಾಯ ನಮಃ
ಓಂ ವಿದ್ಯೇಶಾಯ ನಮಃ
ಓಂ ವಿಬುಧಾಶ್ರಯಾಯ ನಮಃ

ಓಂ ಬಾಲರೂಪಾಯ ನಮಃ
ಓಂ ಬಲೋನ್ಮಾಥಿನೇ ನಮಃ
ಓಂ ವಿಕರ್ತ್ರೇ ನಮಃ
ಓಂ ಗಹನಾಯ ನಮಃ
ಓಂ ಗುಹಾಯ ನಮಃ
ಓಂ ಕರಣಾಯ ನಮಃ ೩೯೦
ಓಂ ಕಾರಣಾಯ ನಮಃ
ಓಂ ಕರ್ತ್ರೇ ನಮಃ
ಓಂ ಸರ್ವಬನ್ಧವಿಮೋಚನಾಯ ನಮಃ
ಓಂ ವ್ಯವಸಾಯಾಯ ನಮಃ
ಓಂ ವ್ಯವಸ್ಥಾನಾಯ ನಮಃ
ಓಂ ಸ್ಥಾನದಾಯ ನಮಃ
ಓಂ ಜಗದಾದಿಜಾಯ ನಮಃ
ಓಂ ದುನ್ದುಭಯೇ ನಮಃ
ಓಂ ಲಲಿತಾಯ ನಮಃ
ಓಂ ಭರ್ಗಾಯ ನಮಃ ೪೦೦
ಓಂ ಭವಾತ್ಮನೇ ನಮಃ
ಓಂ ಆತ್ಮನಿಸಂಸ್ಥಿತಾಯ ನಮಃ
ಓಂ ವಿಶ್ವೇಶ್ವರಾಯ ನಮಃ
ಓಂ ವೀರಭದ್ರಾಯ ನಮಃ
ಓಂ ವೀರಾಸನವಿಧಯೇ ವಿರಾಜೇ ನಮಃ
ಓಂ ವೀರಚೂಡಾಮಣಯೇ ನಮಃ
ಓಂ ವೇತ್ರೇ ನಮಃ
ಓಂ ತೀವ್ರಾನನ್ದಾಯ ನದೀಧರಾಯ ನಮಃ

ಓಂ ಸಂಜ್ಞಾಧರಾಯ ನಮಃ
ಓಂ ತ್ರಿಶೂಲಾಂಕಾಯ ನಮಃ ೪೧೦
ಓಂ ಶಿಪಿವಿಷ್ಟಾಯ ನಮಃ
ಓಂ ಶಿವಾಶ್ರಯಾಯ ನಮಃ
ಓಂ ವಾಲಖಿಲ್ಯಾಯ ನಮಃ
ಓಂ ಮಹಾಚಾರಾಯ ನಮಃ
ಓಂ ತೀಗ್ಮಾಂಶವೇ ನಮಃ
ಓಂ ಜಲಧಯೇ ನಮಃ
ಓಂ ಖಗಾಯ ನಮಃ
ಓಂ ಅಭಿರಾಮಾಯ ನಮಃ
ಓಂ ಸುಶರಣಾಯ ನಮಃ
ಓಂ ಸುಬ್ರಹ್ಮಣ್ಯಾಯ ನಮಃ ೪೨೦
ಓಂ ಸುಧಾಪತಯೇ ನಮಃ
ಓಂ ಮಘುವತೇ ನಮಃ
ಓಂ ಕೌಶಿಕಾಯ ನಮಃ
ಓಂ ಗೋಮತೇ ನಮಃ
ಓಂ ವಿರಾಮಾಯ ನಮಃ
ಓಂ ಸರ್ವಸಾಧನಾಯ ನಮಃ
ಓಂ ಲಲಾಟಾಕ್ಷಾಯ ನಮಃ
ಓಂ ವಿಶ್ವದೇಹಾಯ ನಮಃ
ಓಂ ಸಾರಾಯ ನಮಃ
ಓಂ ಸಂಸಾರಚಕ್ರಧೃತೇ ನಮಃ ೪೩೦
ಓಂ ಅಮೋಘದಣ್ಡಾಯ ನಮಃ
ಓಂ ಮಧ್ಯಸ್ಥಾಯ ನಮಃ
ಓಂ ಹಿರಣ್ಯಾಯ ನಮಃ

ಓಂ ಬ್ರಹ್ಮವರ್ಚಸಾಯ ನಮಃ
ಓಂ ಪರಮಾರ್ಥಾಯ ನಮಃ
ಓಂ ಪರಪದಾಯ ನಮಃ
ಓಂ ಶಬರಾಯ ನಮಃ
ಓಂ ವ್ಯಾಘ್ರಕೋಪನಾಯ ನಮಃ
ಓಂ ರುಚಯೇ ನಮಃ
ಓಂ ವರರುಚಯೇ ನಮಃ ೪೪೦
ಓಂ ವನ್ದ್ಯಾಯ ವಾಚಸ್ಪತಯೇ ನಮಃ
ಓಂ ಅಹಃಪತಯೇ ನಮಃ
ಓಂ ರವಯೇ ನಮಃ
ಓಂ ವಿರೋಚನಾಯ ಸ್ಕನ್ದಾಯ ನಮಃ
ಓಂ ಶಾಸ್ತ್ರೇ ನಮಃ
ಓಂ ವೈವಸ್ವತಾಯ ನಮಃ
ಓಂ ಅರ್ಜನಾಯ ನಮಃ
ಓಂ ಯುಕ್ತಯೇ ನಮಃ
ಓಂ ಉನ್ನತಕೀರ್ತಯೇ ನಮಃ
ಓಂ ಶಾನ್ತರಾಗಾಯ ನಮಃ ೪೫೦
ಓಂ ಪುರಂಜಯಾಯ ನಮಃ
ಓಂ ಕೈಲಾಸವಾಸಿನೇ ನಮಃ
ಓಂ ಕಾಮಾರಯೇ ನಮಃ
ಓಂ ಸವಿತ್ರೇ ನಮಃ
ಓಂ ರವಿಲೋಚನಾಯ ನಮಃ
ಓಂ ವಿದ್ವತ್ತಮಾಯ ನಮಃ
ಓಂ ವೀತಭಯಾಯ ವಿಶ್ವಕರ್ಮಣೇ ನಮಃ
ಓಂ ಅನಿವಾರಿತಾಯ ನಮಃ

ಓಂ ನಿತ್ಯಾಯ ನಿಯತಕಲ್ಯಾಣಾಯ ನಮಃ
ಓಂ ಪುಣ್ಯಶ್ರವಣಕೀರ್ತನಾಯ ನಮಃ
೪೬೦
ಓಂ ದುರಾಸಹಾಯ ನಮಃ
ಓಂ ವಿಶ್ವಸಹಾಯ ನಮಃ
ಓಂ ಧ್ಯೇಯಾಯ ನಮಃ
ಓಂ ದುಸ್ಸ್ವಪ್ನನಾಶನಾಯ ನಮಃ
ಓಂ ಉತ್ತಾರಕಾಯ ನಮಃ
ಓಂ ದುಷ್ಕೃತಿಘ್ನೇ ನಮಃ
ಓಂ ದುರ್ಧರ್ಷಾಯ ನಮಃ
ಓಂ ದುಸ್ಸಹಾಯ ನಮಃ
ಓಂ ಅಭಯಾಯ ನಮಃ
ಓಂ ಅನಾದಯೇ ನಮಃ ೪೭೦
ಓಂ ಭೂರ್ಭುವೋಲಕ್ಷ್ಮ್ಯೈ ನಮಃ
ಓಂ ಕಿರೀಟಿನೇ ನಮಃ
ಓಂ ತ್ರಿದಶಾಧಿಪಾಯ ನಮಃ
ಓಂ ವಿಶ್ವಗೋಪ್ತ್ರೇ ನಮಃ
ಓಂ ವಿಶ್ವಭರ್ತ್ರೇ ನಮಃ
ಓಂ ಸುವೀರಾಯ ನಮಃ
ಓಂ ರುಚಿರಾಂಗದಾಯ ನಮಃ
ಓಂ ಜನನಾಯ ನಮಃ
ಓಂ ಜನಜನ್ಮಾದಯೇ ನಮಃ
ಓಂ ಪ್ರೀತಿಮತೇ ನಮಃ ೪೮೦
ಓಂ ನೀತಿಮತೇ ನಮಃ
ಓಂ ರಥಾಯ ನಮಃ

ಓಂ ವಸಿಷ್ಠಾಯ ನಮಃ
ಓಂ ಕಾಶ್ಯಪಾಯ ನಮಃ
ಓಂ ಭಾನವೇ ನಮಃ
ಓಂ ಭೀಮಾಯ ನಮಃ
ಓಂ ಭೀಮಪರಾಕ್ರಮಾಯ ನಮಃ
ಓಂ ಪ್ರಣವಾಯ ನಮಃ
ಓಂ ಸತ್ಪಥಾಚಾರಾಯ ನಮಃ
ಓಂ ಮಹಾಕಾಯಾಯ ಮಹಾಧನುಷೇ ನಮಃ ೪೯೦
ಓಂ ಜನ್ಮಾಧಿಪಾಯ ಮಹಾದೇವಾಯ ನಮಃ
ಓಂ ಸಕಲಾಗಮಪಾರಗಾಯ ನಮಃ
ಓಂ ತತ್ತ್ವಾಯ ನಮಃ
ಓಂ ತತ್ತ್ವವಿದೇ ನಮಃ
ಓಂ ಏಕಾತ್ಮನೇ ನಮಃ
ಓಂ ವಿಭೂತಯೇ ನಮಃ
ಓಂ ಭೂತಿಭೂಷಣಾಯ ನಮಃ
ಓಂ ಋಷಯೇ ನಮಃ
ಓಂ ಬ್ರಾಹ್ಮಣವರ್ಧಿಷ್ಣವೇ ನಮಃ
ಓಂ ಜನ್ಮಮೃತ್ಯುಜರಾತಿಗಾಯ ನಮಃ ೫೦೦
ಓಂ ಯಜ್ಞಾಯ ನಮಃ
ಓಂ ಯಜ್ಞಪತಯೇ ನಮಃ
ಓಂ ಯಜ್ವನೇ ನಮಃ
ಓಂ ಯಜ್ಞಾಂಗಾಯ ನಮಃ
ಓಂ ಅಮೋಘವಿಕ್ರಮಾಯ ನಮಃ
ಓಂ ಮಹೇನ್ದ್ರಾಯ ನಮಃ
ಓಂ ದುರ್ಭರಾಯ ನಮಃ
ಓಂ ಸೇನಿನೇ ನಮಃ
ಓಂ ಯಜ್ಞಾನ್ತಾಯ ನಮಃ
ಓಂ ಯಜ್ಞವಾಹನಾಯ ನಮಃ ೫೧೦
ಓಂ ಪಞ್ಚಬ್ರಹ್ಮಸಮುತ್ಪತ್ತಯೇ ನಮಃ
ಓಂ ವಿಶ್ವದಾಯ ನಮಃ
ಓಂ ವಿಮಲೋದಯಾಯ ನಮಃ
ಓಂ ಆತ್ಮಯೋನಯೇ ನಮಃ
ಓಂ ಅನಾದ್ಯನ್ತಾಯ ನಮಃ
ಓಂ ಷಟ್ತ್ರಿಂಶಾಯ ನಮಃ
ಓಂ ಸಪ್ತಲೋಕಭೃತೇ ನಮಃ
ಓಂ ಗಾಯತ್ರೀವಲ್ಲಭಾಯ ನಮಃ
ಓಂ ಪ್ರಾಂಶವೇ ನಮಃ
ಓಂ ವಿಶ್ವಾವಾಸಾಯ ನಮಃ ೫೨೦
ಓಂ ಪ್ರಭಾಕರಾಯ ನಮಃ
ಓಂ ಶಿಶವೇ ನಮಃ
ಓಂ ಗುರುತರಾಯ ನಮಃ
ಓಂ ಸಮ್ರಾಜೇ ನಮಃ
ಓಂ ಸುಷೇಣಾಯ ಸುರಶತ್ರುಘ್ನೇ ನಮಃ
ಓಂ ಅಮೇಯಾಯ ನಮಃ
ಓಂ ಅರಿಷ್ಟಮಥನಾಯ ನಮಃ
ಓಂ ಮುಕುನ್ದಾಯ ನಮಃ
ಓಂ ವಿಗತಜ್ವರಾಯ ನಮಃ

ಓಂ ಸ್ವಯಂಜ್ಯೋತಿಷೇ ನಮಃ ೫೩೦
ಓಂ ಅನುಜ್ಯೋತಿಷೇ ನಮಃ
ಓಂ ಆತ್ಮಜ್ಯೋತಿಷೇ ನಮಃ
ಓಂ ಅಚಙ್ಚಲಾಯ ನಮಃ
ಓಂ ಪಿಙ್ಗಳಾಯ ನಮಃ
ಓಂ ಕಪಿಲಶ್ಮಶ್ರವೇ ನಮಃ
ಓಂ ಶಾಸ್ತ್ರನೇತ್ರಾಯ ನಮಃ
ಓಂ ತ್ರಯೀಕನವೇ ನಮಃ
ಓಂ ಜ್ಞಾನಸ್ಕನ್ಧಾಯ ನಮಃ
ಓಂ ಮಹಾಜ್ಞಾನಿನೇ ನಮಃ
ಓಂ ವೀರೋತ್ಪತ್ತಯೇ ನಮಃ ೫೪೦
ಓಂ ಉಪಪ್ಲವಾಯ ನಮಃ
ಓಂ ಭಗಾಯ ನಮಃ
ಓಂ ವಿವಸ್ವತೇ ನಮಃ
ಓಂ ಆದಿತ್ಯಾಯ ನಮಃ
ಓಂ ಯೋಗಚಾರಾಯ ನಮಃ
ಓಂ ದಿವಸ್ಪತಯೇ ನಮಃ
ಓಂ ಉದಾರಕೀರ್ತಯೇ ನಮಃ
ಓಂ ಉದ್ಯೋಗಿನೇ ನಮಃ
ಓಂ ಸದ್ಯೋಗಿನೇ ನಮಃ
ಓಂ ಸದಸನ್ಮಯಾಯ ನಮಃ ೫೫೦
ಓಂ ನಕ್ಷತ್ರಮಾಲಿನೇ ನಮಃ
ಓಂ ನಾಕೇಶಾಯ ನಮಃ
ಓಂ ಸ್ವಾಧಿಷ್ಠಾನಾಯ ನಮಃ
ಓಂ ಷಡಾಶ್ರಯಾಯ ನಮಃ

ಓಂ ಪವಿತ್ರಪಾಣಯೇ ನಮಃ
ಓಂ ಪಾಪಾರಯೇ ನಮಃ
ಓಂ ಮಣಿಪೂರಾಯ ನಮಃ
ಓಂ ನಭೋಗತಯೇ ನಮಃ
ಓಂ ಹೃತ್ಪುಣ್ಡರೀಕನಿಲಯಾಯ ನಮಃ
ಓಂ ಶುಕ್ರಾಯ ನಮಃ ೫೬೦
ಓಂ ಶ್ಯೇನಾಯ ನಮಃ
ಓಂ ವೃಷಾಕಪಯೇ ನಮಃ
ಓಂ ತುಷ್ಟಾಯ ನಮಃ
ಓಂ ಗ್ರಹಪತಯೇ ನಮಃ
ಓಂ ಕೃಷ್ಣಾಯ ನಮಃ
ಓಂ ಸಮಾಯಾಯ ನಮಃ
ಓಂ ಅನರ್ಥನಾಶನಾಯ ನಮಃ
ಓಂ ಅಧರ್ಮಶತ್ರವೇ ನಮಃ
ಓಂ ಅಕ್ಷಯ್ಯಾಯ ನಮಃ
ಓಂ ಪುರುಹೂತಾಯ ನಮಃ ೫೭೦
ಓಂ ಪುರುಷ್ಟುತಾಯ ನಮಃ
ಓಂ ಬ್ರಹ್ಮಗರ್ಭಾಯ ನಮಃ
ಓಂ ಬೃಹದ್ಗರ್ಭಾಯ ನಮಃ
ಓಂ ಧರ್ಮಹೇತವೇಧನಾಗಮಾಯ ನಮಃ
ಓಂಜಗದ್ಧಿತೈಷಿಣೇ ನಮಃ
ಓಂ ಸುಗತಾಯ ನಮಃ
ಓಂ ಕುಮಾರಾಯ ನಮಃ
ಓಂ ಕುಶಲಾಗಮಾಯ ನಮಃ
ಓಂ ಹಿರಣ್ಯವರ್ಣಾಯ ನಮಃ

ಓಂ ಜ್ಯೋತಿಷ್ಕೃತೇ ನಮಃ ೫೮೦
ಓಂ ಉಪೇನ್ದ್ರಾಯ ನಮಃ
ಓಂ ತಿಮಿರಾಪಹಾಯ ನಮಃ
ಓಂ ಅರೋಗಾಯ ನಮಃ
ಓಂ ತಪನಾಧ್ಯಕ್ಷಾಯ ನಮಃ
ಓಂ ವಿಶ್ವಾಮಿತ್ರಾಯ ದ್ವಿಜೇಶ್ವರಾಯ ನಮಃ
ಓಂ ಬ್ರಹ್ಮಜ್ಯೋತಿಷೇ ಸುವರ್ಧಾಮ್ನೇ ನಮಃ
ಓಂ ಬೃಹಜ್ಜ್ಯೋತಿಷೇ ನಮಃ
ಓಂ ಅನುತ್ತಮಾಯ ಮಾತಾಮಹಾಯ ನಮಃ
ಓಂ ಮಾತರಿಶ್ವನೇ ನಮಃ
ಓಂ ಮನಸ್ವಿನೇನಾಗಹಾರಧೃಶೇ ನಮಃ
(ನಾಗಹಾರಾಯಪಿನಾಕಧೃಷೇ) ೫೯೦
ಓಂ ಪುಲಸ್ತ್ಯಾಯ ನಮಃ
ಓಂ ಪುಲಹಾಯ ನಮಃ
ಓಂ ಅಗಸ್ತ್ಯಾಯ ನಮಃ
ಓಂ ಜಾತುಕರ್ಣಾಯ ನಮಃ
ಓಂ ಪರಾಶರಾಯ ನಮಃ
ಓಂ ನಿರಾವರಣವಿಜ್ಞಾನಾಯ ನಮಃ
ಓಂ ವಿರಿಂಚಾಯ ನಮಃ
ಓಂ ವಿಷ್ಟರಶ್ರವಸೇ ನಮಃ
ಓಂ ಆತ್ಮಭುವೇ ನಮಃ
ಜಂ ಅನಿರುದ್ಧಾಯ ನಮಃ ೬೦೦

ಓಂ ಅತ್ರಯೇ ನಮಃ
ಓಂ ಜ್ಞಾನಮೂರ್ತಯೇ ನಮಃ
ಓಂ ಮಹಾಯಶಸೇ ನಮಃ
ಓಂ ವೀರಚೂಡಾಮಣಯೇ ನಮಃ
ಓಂ ವೀರಾಯ ನಮಃ
ಓಂ ಚಣ್ಡಾಯ ಸತ್ಯಪರಾಕ್ರಮಾಯ ನಮಃ
ಓಂ ವ್ಯಾಡಕಲ್ಪಾಯ ನಮಃ
ಓಂ ಮಹಾಕಲ್ಪಾಯ ನಮಃ
ಓಂ ಕಲ್ಪವೃಕ್ಷಾಯ ನಮಃ
ಓಂ ಕಲಾಧರಾಯ ನಮಃ ೬೧೦
ಓಂ ಅಲಙ್ಕರಿಷ್ಣವೇ ನಮಃ
ಓಂ ಅಚಲಾಯ ನಮಃ
ಓಂ ರೋಚಿಷ್ಣವೇ ನಮಃ
ಓಂ ವಿಕ್ರಮೋತ್ತಮಾಯ ನಮಃ
ಓಂ ಆಶವೇ ನಮಃ
ಓಂ ಸಪ್ತಪತಯೇ ನಮಃ
ಓಂ ವೇಗಿನೇ ಪವನಾಯ ನಮಃ
ಓಂ ಶಿಖಿಸಾರಥಯೇ ನಮಃ
ಓಂ ಅಸಂಮೃಷ್ಟಾಯ ನಮಃ
ಓಂ ಅತಿಥಯೇ ನಮಃ ೬೨೦
ಓಂ ಶುಕ್ರಾಯ ನಮಃ
ಓಂ ಪ್ರಮಾಥಿನೇ ನಮಃ
ಓಂ ಪಾದಪಾಶನಾಯ ನಮಃ
ಓಂ ವಸುಶ್ರವಸೇ ನಮಃ
ಓಂ ಕವ್ಯವಾಹಾಯ ನಮಃ

ಓಂ ಪ್ರತಪ್ತ್ರೇ ನಮಃ
ಓಂ ವಿಶ್ವಭೋಜನಾಯ ನಮಃ
ಓಂ ಜಯಾಯ ನಮಃ
ಓಂ ಜಯಾರಯೇ ನಮಃ
ಓಂ ಶಮನಾಯ ನಮಃ ೬೩೦
ಓಂ ರೋಹಿತಾಶ್ವಾಯ ನಮಃ
ಓಂ ತನೂನಪಾತೇ ನಮಃ
ಓಂ ಪೃಷದಶ್ವಾಯ ನಮಃ
ಓಂ ನಭೋಯೋನಯೇ ನಮಃ
ಓಂ ಸುಪ್ರತೀಕಾಯ ನಮಃ
ಓಂ ತಮಿಸ್ರಘ್ನೇ ನಮಃ
ಓಂ ನಿದಾಘಾಯ ತಪನಾಯ ನಮಃ
ಓಂ ಮೇಘಾಯ ನಮಃ
ಓಂ ಪದ್ಮಾಯ ನಮಃ
ಓಂ ಪರಪುರಂಜಯಾಯ ನಮಃ ೬೪೦
ಓಂ ಸುಖಾನಿಲಾಯ ನಮಃ
ಓಂ ಸುನಿಷ್ಪನ್ನಾಯ ನಮಃ
ಓಂ ಸುರಭಯೇ ನಮಃ
ಓಂ ಶಿಶಿರಾತ್ಮಕಾಯ ನಮಃ
ಓಂ ವಸನ್ತಾಯ ಮಾಧವಾಯ ನಮಃ
ಓಂ ಗ್ರೀಷ್ಮಾಯ ನಮಃ
ಓಂ ನಭಸ್ಯಾಯ ನಮಃ
ಓಂ ದ್ವಿಜವಾಹನಾಯ ನಮಃ
ಓಂ ಮನಸೇ ನಮಃ
ಓಂ ಬುದ್ಧಯೇ ನಮಃ ೬೫೦

ಓಂ ಅಹಂಕಾರಾಯ ನಮಃ
ಓಂ ಕ್ಷೇತ್ರಜ್ಞಾಯ ನಮಃ
ಓಂ ಕ್ಷೇತ್ರಪಾಲಕಾಯ ನಮಃ
ಓಂ ಜಮದಗ್ನಯೇ ನಮಃ
ಓಂ ಜಲಸಿಧಯೇ ನಮಃ
ಓಂ ವಿಪಾಕಾಯ ನಮಃ
ಓಂ ವಿಶ್ವಕಾರಕಾಯ ನಮಃ
ಓಂ ಅಧರಸ್ಮೈ ನಮಃ (ಅಧರಾಯ)
ಓಂ ಅನುತ್ತರಾಯ ಜ್ಞೇಯಾಯ ನಮಃ
ಓಂ ಜ್ಯೇಷ್ಠಾಯ ನಮಃ ೬೬೦
ಓಂ ನಿಶ್ಶ್ರೇಯಸಾಲಯಾಯ ನಮಃ
ಓಂ ಶೈಲಾಯ ನಗಾಯ ನಮಃ
ಓಂ ತರವೇ ನಮಃ
ಓಂ ದಾಹಾಯ ನಮಃ
ಓಂ ದಾನವಾರಯೇ ನಮಃ
ಓಂ ಅರಿಂದಮಾಯ ಚಾಮುಣ್ಡೀಜನಕಾಯ ನಮಃ
ಓಂ ಚಾರವೇ ನಮಃ
ಓಂ ವಿಶಲ್ಯಾಯ ನಮಃ
ಓಂ ಲೋಕಶಲ್ಯಕೃತೇ ನಮಃ
ಓಂ ಚತುರ್ವೇದಾಯ ನಮಃ ೬೭೦
ಓಂ ಚತುರ್ಬಾಹವೇ ಚತುರಾಯ ನಮಃ
ಓಂ ಚತ್ವರಪ್ರಿಯಾಯ ನಮಃ
ಓಂ ಆತ್ಮಯೋಗಸಮಾಮ್ನಾಯಾಯ ನಮಃ

ಓಂ ತೀರ್ಥದೇವಾಯ ಶಿವಾಲಯಾಯ ನಮಃ
ಓಂ ವಜ್ರರೂಪಾಯ ನಮಃ
ಓಂ ಮಹಾರೂಪಾಯ ನಮಃ
ಓಂ ಸರ್ವರೂಪಾಯ ನಮಃ
ಓಂ ಚರಾಚರಾಯ ನಮಃ
ಓಂ ನ್ಯಾಯನಿರ್ವಾಹಕಾಯ ನಮಃ
ಓಂ ನ್ಯಾಯಾಯ ನಮಃ ೬೮೦
ಓಂ ನ್ಯಾಯಗಮ್ಯಾಯ ನಿರಞ್ಜನಾಯ [ನಮಃ
ಓಂ ಸಹಸ್ರಮೂರ್ಧ್ನೇ ನಮಃ
ಓಂ ದೇವೇನ್ದ್ರಾಯ ನಮಃ
ಓಂ ಸರ್ವಶತ್ರುಪ್ರಭಂಜನಾಯ ನಮಃ
ಓಂ ಮುಣ್ಡಾಯ ನಮಃ
ಓಂ ವಿರೂಪಾಯ ನಮಃ
ಓಂ ವಿಕೃತಾಯ ನಮಃ
ಓಂ ದಣ್ಡಿನೇ ನವಃ
ಓಂ ದಾನ್ತಾಯ ಗಣೋತ್ತರಾಯ ನಮಃ
ಓಂ ಧನಾಧ್ಯಕ್ಷಾಯ ನಮಃ ೬೯೦
ಓಂ ಪಿಙ್ಗಳಾಕ್ಷಾಯ ನಮಃ
ಓಂ ನೀಲಗ್ರೀವಾಯ ನಮಃ
ಓಂ ನಿರಾಮಯಾಯ ನಮಃ
ಓಂ ಸಹಸ್ರಬಾಹವೇ ನಮಃ
ಓಂ ಸರ್ವೇಷಾಂಶರಣ್ಯಾಯ ನಮಃ
ಓಂ ಸರ್ವಲೋಕಹೃತೇ ನಮಃ
ಓಂ ಪದ್ಮಾಸನಾಯ ನಮಃ
ಓಂ ಪರಸ್ಮೈಜ್ಯೋತಿಷೇ ನಮಃ
ಓಂ ಪರಾವರಪರಸ್ಮೈ ನಮಃ
ಓಂ ಫಲಾಯ ನಮಃ ೭೦೦
ಓಂ ಪದ್ಮಗರ್ಭಾಯ ನಮಃ
ಓಂ ಮಹಾಗರ್ಭಾಯ ನಮಃ
ಓಂ ವಿಶ್ವಗರ್ಭಾಯ ನಮಃ
ಓಂ ವಿಚಕ್ಷಣಾಯ ನಮಃ
ಓಂ ಪರಾವರಜ್ಞಾಯ ನಮಃ
ಓಂ ವರದಾಯ ನಮಃ
ಓಂ ಪರೇಶಾನಾಯ ನಮಃ
ಓಂ ಮಹಾಯಶಸೇ ನಮಃ
ಓಂ ದೇವಾಸುರಗುರವೇ ದೇವಾಯ ನಮಃ
ಓಂ ದೇವಾಸುರನಮಸ್ಕೃತಾಯ ನಮಃ
ಓಂ ದೇವಾಸುರಮಹಾಮಾತ್ರಾಯ ನಮಃ
ಓಂ ದೇವಾಸುರಮಹಾಶ್ರಯಾಯ ನಮಃ
ಓಂ ದೇವಾದಿದೇವಾಯ ನಮಃ
ಓಂ ದೇವರ್ಷಯೇ ನಮಃ
ಓಂ ದೇವಾಸುರವರಪ್ರದಾಯ ನಮಃ
ಓಂ ದೇವಾಸುರೇಶ್ವರಾಯ ನಮಃ
ಓಂ ದಿವ್ಯಾಯ ನಮಃ
ಓಂ ದೇವಾಸುರಮಹೇಶ್ವರಾಯ ನಮಃ
ಓಂ ಸರ್ವದೇವಮಯಾಯ ನಮಃ
ಓಂ ಅಚಿನ್ತ್ಯಾಯ ನಮಃ ೭೨೦
ಓಂ ದೇವತಾತ್ಮನೇ ನಮಃ
ಓಂ ಆತ್ಮಸಮ್ಭವಾಯ ನಮಃ

ಓಂ ಈಶಾಯಾನೀಶಾಯ ನಮಃ
ಓಂ ಸುರವ್ಯಾಘ್ರಾಯ ನಮಃ
ಓಂ ದೇವಸಿಂಹಾಯ ನಮಃ
ಓಂ ದೇವಾಕರಾಯ ನಮಃ
ಓಂ ವಿಬುಧಾಗ್ರಚರಾಯ ನಮಃ
ಓಂ ಶ್ರೇಷ್ಠಾಯ ನಮಃ
ಓಂ ಸರ್ವದೇವೋತ್ತಮೋತ್ತಮಾಯ ನಮಃ
ಓಂ ಶಿವಧ್ಯಾನರತಾಯ ಶ್ರೀಮತೆ ನಮಃ
ಓಂ ಶಿಖಣ್ಡಿನೇ ನಮಃ ೭೩೧
ಓಂ ಪಾರ್ವತೀಪ್ರಿಯಾಯ ನಮಃ
ಓಂ ವಜ್ರಹಸ್ತಾಯ ನಮಃ
ಓಂ ಸುವಿಷ್ಟಮ್ಭಿನೇ ನಮಃ
ಓಂ ನರಸಿಂಹನಿಪಾತನಾಯ ನಮಃ
ಓಂ ಬ್ರಹ್ಮಚಾರಿಣೇ ನಮಃ
ಓಂ ಲೋಕಚಾರಿಣೇ ನಮಃ
ಓಂ ಧರ್ಮಚಾರಿಣೇ ನಮಃ
ಓಂ ಧನಾಧಿಪಾಯ ನಮಃ
ಓಂ ನನ್ದಿನೇ ನಮಃ ೭೪೦
ಓಂ ನನ್ದೀಶ್ವರಾಯ ನಮಃ
ಓಂ ನಗ್ನಾಯ ನಮಃ
ಓಂ ಅನಗ್ನವ್ರತಧರಾಯ ಶುಚಯೇ (ನಮಃ
ಓಂ ಲಿಂಗಾಧ್ಯಕ್ಷಾಯ ನಮಃ
ಓಂ ಸುರಾಧ್ಯಕ್ಷಾಯ ನಮಃ
ಓಂ ಯುಗಾಧ್ಯಕ್ಷಾಯ ನಮಃ

ಓಂ ಯುಗಾವಹಾಯ ನಮಃ
ಓಂ ಸ್ವವಶಾಯ ನಮಃ
ಓಂ ಸ್ವರ್ಗತಾಯ ನಮಃ
ಓಂ ಸ್ವರ್ಗಾಯ ನಮಃ ೭೫೦
ಓಂ ಸ್ವರಾಯ ನಮಃ
ಓಂ ಸ್ವರಮಯಸ್ವನಾಯ ನಮಃ
ಓಂ ಬೀಜಾಧ್ಯಕ್ಷಾಯ ನಮಃ
ಓಂ ಬೀಜಕರ್ತ್ರೇ ನಮಃ
ಓಂ ಧರ್ಮಕೃತೇ ನಮಃ
ಓಂ ಧರ್ಮವರ್ಧನಾಯ ನಮಃ
ಓಂ ದಮ್ಭಾಯ ನಮಃ
ಓಂ ಅದಮ್ಭಾಯ ನಮಃ
ಓಂ ಮಹಾದಮ್ಭಾಯ ನಮಃ
ಓಂ ಸರ್ವಭೂತಮಹೇಶ್ವರಾಯ ನಮಃ
ಓಂ ಶ್ಮಶಾನನಿಲಯಾಯ ನಮಃ
ಓಂ ತಿಷ್ಯಾಯ ನಮಃ
ಓಂ ಸೇತವೇ ನಮಃ
ಓಂ ಅಪ್ರತಿಮಾಕೃತಯೇ ನಮಃ
ಓಂ ಲೋಕಾನ್ತರಸ್ಫುಟಾಲೋಕಾಯ (ನಮಃ
ಓಂ ತ್ರ್ಯಮ್ಬಕಾಯ ನಮಃ
ಓಂ ಭಕ್ತವತ್ಸಲಾಯ ನಮಃ
ಓಂ ಅನ್ಧಕಾರಯೇ ನಮಃ
ಓಂ ಮಖದ್ವೇಷಿಣೇ ನಮಃ
ಓಂ ವಿಷ್ಣುಕನ್ಧರಪಾತನಾಯ ನಮಃ ೭೭೦

ಓಂ ವೀತದೋಷಾಯಾಕ್ಷಯಗುಣಾಯ (ನಮಃ
ಓಂ ದಕ್ಷಾರಯೇ ನಮಃ
ಓಂ ಪೂಷದನ್ತಹೃತೇ ನಮಃ
ಓಂ ಧೂರ್ಜಟಯೇ ನಮಃ
ಓಂ ಖಣ್ಡಪರಶವೇ ನಮಃ
ಓಂ ಸಕಲಾಯ ನಮಃ
ಓಂ ನಿಷ್ಕಲಾಯ ನಮಃ
ಓಂ ಘನಾಯಾಕಾರಾಯ ನಮಃ
ಓಂ ಸಕಲಾಧಾರಾಯ ನಮಃ
ಓಂ ಪಾಣ್ಡುರಾಗಾಯ ನಮಃ
ಓಂ ವೃಡಾಯ ನಮಃ ೭೮೦
ಓಂ ನಟಾಯ ನಮಃ
ಓಂ ಪೂರ್ಣಾಯ ಪೂರಯಿತ್ರೇ ನಮಃ
ಓಂ ಪುಣ್ಯಾಯ ನಮಃ
ಓಂ ಸುಕುಮಾರಾಯ ಸುಲೋಚನಾಯ ನಮಃ
ಓಂ ಸಾಮಗಾನಪ್ರಿಯಾಯ ನಮಃ
ಓಂ ಕ್ರೂರಾಯ ನಮಃ
ಓಂ ಸತ್ಯಕೀರ್ತಯೇ ನಮಃ
ಓಂ ಅನಾಮಯಾಯ ನಮಃ
ಓಂ ಮನೋಜವಾಯ ನಮಃ ೭೯೦
ಓಂ ತೀರ್ಥಕರಾಯ ನಮಃ
ಓಂ ಜಟಿಲಾಯ ನಮಃ
ಓಂ ಜೀವಿತೇಶ್ವರಾಯ ನಮಃ
ಓಂ ಜೀವಿತಾನ್ತಕರಾಯ ನಮಃ

ಓಂ ಅನನ್ತಾಯ ನಮಃ
ಓಂ ವಸುರೇತಸೇ ನಮಃ
ಓಂ ವಸುಪ್ರದಾಯ ನಮಃ
ಓಂ ಸದ್ಗತಯೇ ನಮಃ
ಓಂ ಸತ್ಕೃತಯೇ ನಮಃ
ಓಂ ಶಾನ್ತಾಯ ನಮಃ ೮೦೦
ಓಂ ಕಾಲಕಣ್ಠಾಯ ನಮಃ
ಓಂ ಕಲಾಧರಾಯ ನಮಃ
ಓಂ ಮಾನಿನೇ ನಮಃ
ಓಂ ಮನವೇ ನಮಃ
ಓಂ ಮಹಾಕಾಲಾಯ ನಮಃ
ಓಂ ಸದ್ಭೂತಯೇ ನಮಃ
ಓಂ ಸತ್ಪರಾಯಣಾಯ ನಮಃ
ಓಂ ಚಂದ್ರಸಂಜೀವನಾಯ ನಮಃ
ಓಂ ಶಾಸ್ತ್ರೇಲೋಕಗೂಢಾಯ ನಮಃ
ಓಂ ಅಮರಾಧಿಪಾಯ ನಮಃ ೮೧೦
ಓಂ ಲೋಕಬನ್ಧವೇ ನಮಃ
ಓಂ ಲೋಕನಾಥಾಯ ನಮಃ
ಓಂ ಕೃತಜ್ಞಾಯ ಕೀರ್ತಿಭೂಷಣಾಯ ನಮಃ
ಓಂ ಅನಪಾಯಾಯ ನಮಃ
ಓಂ ಅಕ್ಷರಾಯ ನಮಃ
ಓಂ ಕ್ಷಾಂತಾಯ ನಮಃ
ಓಂ ಸರ್ವಶಸ್ತ್ರಭೃತಾಂವರಾಯ ನಮಃ
ಓಂ ತೇಜೋಮಯಾಯ ನಮಃ

ಓಂ ದ್ಯುತಿಧರಾಯ ನಮಃ
ಓಂ ಲೋಕನಾಥಾಯ ನಮಃ ೮೨೦
ಓಂ ಅಗ್ರಣ್ಯೇ ನಮಃ
ಓಂ ಅಣವೇ ನಮಃ
ಓಂ ಶುಚಿಸ್ಮಿತಾಯ ನಮಃ
ಓಂ ಪ್ರಸನ್ನಾತ್ಮನೇ ನಮಃ
ಓಂ ದುರ್ಜಯಾಯ ದುರತಿಕ್ರಮಾಯ ನಮಃ
ಓಂ ಜ್ಯೋತಿರ್ಮಯಾಯ ನಮಃ
ಓಂ ಜಗನ್ನಾಥಾಯ ನಮಃ
ಓಂ ನಿರಾಕಾರಾಯ ನಮಃ
ಓಂ ಜಲೇಶ್ವರಾಯ ನಮಃ
ಓಂ ತುಂಬ್ರುವೀಣಾಯೈ ನಮಃ ೮೩೦
ಓಂ ಮಹಾಕೋಶಾಯ ನಮಃ
ಓಂ ವಿಶೋಕಾಯ ಶೋಕನಾಶನಾಯ ನಮಃ
ಓಂ ತ್ರಿಲೋಕೇಶಾಯ ನಮಃ
ಓಂ ತ್ರಿಲೋಕಾತ್ಮನೇ ನಮಃ
ಓಂ ಶುದ್ಧಾಯ ನಮಃ
ಓಂ ಶುದ್ಧಯೇ ನಮಃ
ಓಂ ಅಧೋಕ್ಷಜಾಯ ನಮಃ
ಓಂ ಅವ್ಯಕ್ತಲಕ್ಷಣಾಯ ನಮಃ
ಓಂ ವ್ಯಕ್ತಾಯ ನಮಃ
ಓಂ ವ್ಯಕ್ತಾವ್ಯಕ್ತಾಯ ನಮಃ ೮೪೦
ಓಂ ವಿಶಾಂಪತಯೇ ನಮಃ

ಓಂ ವರಶೀಲಾಯ ವರಗುಣಾಯ ನಮಃ
ಓಂ ನಭಸೇ ನಮಃ
ಓಂ ಗೋಅಯನಾಯ ನಮಃ
ಓಂ ಮಯಾಯ ನಮಃ
ಓಂ ಬ್ರಹ್ಮವಿಷ್ಣುಪ್ರಜಾಪಾಲಾಯ ನಮಃ
ಓಂ ಹಂಸಾಯ ನಮಃ
ಓಂ ಹಂಸಗತಯೇ ನಮಃ
ಓಂ ಮತಾಯ ನಮಃ
ಓಂ ವೇಧಸೇ ನಮಃ ೮೫೦
ಓಂ ವಿಧಾತ್ರೇ ನಮಃ
ಓಂ ಧಾತ್ರೇ ನಮಃ
ಓಂ ಸ್ರಷ್ಟ್ರೇ ನಮಃ
ಓಂ ಹರ್ತ್ರೇ ನಮಃ
ಓಂ ಚತುರ್ಮುಖಾಯ ನಮಃ
ಓಂ ಕೈಲಾಸಶಿಖರಾವಾಸಿನೇ ನಮಃ
ಓಂ ಸರ್ವಾವಾಸಿನೇ ಸದಾಗತಯೇ ನಮಃ
ಓಂ ಹಿರಣ್ಯಗರ್ಭಾಯ ನಮಃ
ಓಂ ಗಮನಾಯ ನಮಃ
ಓಂ ಪುರುಷಾಯ ನಮಃ ೮೬೦
ಓಂ ಪೂರ್ವಜಾಯ ಪಿತ್ರೇ ನಮಃ
ಓಂ ಭೂತಾಲಯಾಯ ನಮಃ
ಓಂ ಭೂತಪತಯೇ ನಮಃ
ಓಂ ಭೂತದಾಯ ನಮಃ
ಓಂ ಭುವನೇಶ್ವರಾಯ ನಮಃ
ಓಂ ಸಂಯೋಗಿನೇ ನಮಃ

ಓಂ ಯೋಗವಿತ್ಸ್ರಷ್ಟ್ರೇ ನಮಃ
ಓಂ ಬ್ರಹ್ಮಣ್ಯಾಯ ನಮಃ
ಓಂ ಬ್ರಾಹ್ಮಣಪ್ರಿಯಾಯ ನಮಃ
ಓಂ ದೇವಪ್ರಿಯಾಯ ದೇವನಾಥಾಯ
ಓಂ ದೈವಜ್ಞಾಯ ನಮಃ [ನಮಃ ೮೭೦
ಓಂ ದೈವಚಿನ್ತಕಾಯ ನಮಃ
ಓಂ ವಿಷಮಾಕ್ಷಾಯ ನಮಃ
ಓಂ ವಿಲೋಮಾಕ್ಷಾಯ ನಮಃ
ಓಂ ವಿಷಾದಾಯ ನಮಃ
ಓಂ ವೃಷವರ್ಧನಾಯ ನಮಃ
ಓಂ ನಿರ್ಮಮಾಯ ನಮಃ
ಓಂ ನಿರಹಙ್ಕಾರಾಯ ನಮಃ
ಓಂ ನಿರ್ಮೋಹಾಯ ನಿರುಪದ್ರವಾಯ
(ನಮಃ
ಓಂ ದರ್ಪಘ್ನೇ ನಮಃ ೮೮೦
ಓಂ ದರ್ಪದಾಯ ನಮಃ
ಓಂ ದೃಪ್ತಾಯ ನಮಃ
ಓಂ ಸರ್ವರ್ತುಪರಿವರ್ತಕಾಯ ನಮಃ
ಓಂ ಸಪ್ತಜಿಹ್ವಾಯ ನಮಃ
ಓಂ ಸಹಸ್ರಾರ್ಚಿಷೇ ನಮಃ
ಓಂ ಸ್ನಿಗ್ಧಪ್ರಕೃತಿದಕ್ಷಿಣಾಯ ನಮಃ
ಓಂ ಭೂತಭವ್ಯಭವನ್ನಾಥಾಯ ನಮಃ
ಓಂ ಪ್ರಭವಾಯ ನಮಃ
ಓಂ ಭ್ರಾನ್ತಿನಾಶನಾಯ ನಮಃ
ಓಂ ಅರ್ಥಾಯ ನಮಃ ೮೯೦

ಓಂ ಅನರ್ಥಾಯ ನಮಃ
ಓಂ ಮಹಾಕಾಶಾಯ ನಮಃ
ಓಂ ಪರಕಾರ್ಯೈಕಪಣ್ಡಿತಾಯ ನಮಃ
ಓಂ ನಿಷ್ಕಣ್ಟಕಾಯ ಕೃತಾನನ್ದಾಯ ನಮಃ
ಓಂ ನಿರ್ವ್ಯಾಜಾಯ ವ್ಯಾಜಮರ್ದನಾಯ
ನಮಃ
ಓಂ ಸತ್ವವತೇ ನಮಃ
ಓಂ ಸಾತ್ತ್ವಿಕಾಯ ನಮಃ
ಓಂ ಸತ್ಯಾಯ ಕೀರ್ತಿಸ್ತಮ್ಭಾಯ ನಮಃ
ಓಂ ಕೃತಾಗಮಾಯ ನಮಃ
ಓಂ ಅಕಮ್ಪಿತಾಯ ಗುಣಗ್ರಾಹಿಣೇ
ನಮಃ ೯೦೦
ಓಂ ನೈಕಾತ್ಮನೇ ನಮಃ
ಓಂ ನೈಕಕರ್ಮಕೃತೇ ನಮಃ
ಓಂ ಶ್ರೀವಲ್ಲಭಾಯ ನಮಃ
ಓಂ ಶಿವಾರಮ್ಭಾಯ ನಮಃ
ಓಂ ಶಾನ್ತಭದ್ರಾಯ ನಮಃ
ಓಂ ಸಮಂಜಸಾಯ ನಮಃ
ಓಂ ಭೂಶಯಾಯ ನಮಃ
ಓಂ ಭೂತಕೃತೇ ನಮಃ
ಓಂ ಭೂತಿಭೂಷಣಾಯ ನಮಃ
ಓಂ ಭೂತವಾಹನಾಯ ನಮಃ ೯೧೦
ಓಂ ಅಕಾಯಾಯ ಭಕ್ತಕಾಯಸ್ಥಾಯ
ನಮಃ
ಓಂ ಕಾಲಜ್ಞಾನಿನೇ ನಮಃ

ಓಂ ಮಹಾವಟವೇ ನಮಃ
ಓಂ ಸತ್ಯವ್ರತಾಯ ನಮಃ
ಓಂ ಮಹಾತ್ಯಾಗಿನೇ ನಮಃ
ಓಂ ಇಚ್ಛಾಶಕ್ತಯೇ ನಮಃ
ಓಂ ಪರಾಯಣಾಯ ನಮಃ
ಓಂ ಪರಾರ್ಥವೃತ್ತಯೇ ವರದಾಯನಮಃ
ಓಂ ವಿವಿಕ್ತಾಯ ನಮಃ
ಓಂ ಶ್ರುತಿಸಾಗರಾಯ ನಮಃ ೯೨೦
ಓಂ ಅನಿರ್ವಿಣ್ಣಾಯ ನಮಃ
ಓಂ ಗುಣಗ್ರಾಹಿಣೇ ನಮಃ
ಓಂ ನಿಷ್ಕಳಙ್ಕಾಯಕಳಙ್ಕಘ್ನೇ ನಮಃ
ಓಂ ಸ್ವಭಾವಭದ್ರಾಯ ನಮಃ
ಓಂ ಮಧ್ಯಸ್ಥಾಯ ನಮಃ
ಓಂ ಶತ್ರುಘ್ನಾಯಶತ್ರುತಾಪನಾಯ
ಓಂ ಶಿಖಣ್ಡಿನೇ ನಮಃ [ನಮಃ
ಓಂ ಕವಚಿನೇ ನಮಃ
ಓಂ ಶೂಲಿನೇ ನಮಃ
ಓಂ ಜಟಿನೇ ನಮಃ ೯೩೦
ಓಂ ಮುಣ್ಡಿನೇ ನಮಃ
ಓಂ ಕುಂಡಲಿನೇ ನಮಃ
ಓಂ ಮೇಖಲಿನೇ ನಮಃ
ಓಂ ಕಟಕಿನೇ ನಮಃ
ಓಂ ಖಡ್ಗಿನೇ ನಮಃ
ಓಂ ಮಾಲಿನೇ ನಮಃ
ಓಂ ಸಂಸಾರಸಾರಥಯೇ ನಮಃ

ಓಂ ಅಮೃತ್ಯವೇ ನಮಃ
ಓಂ ಸರ್ವಜಿತ್ಸಿಂಹಾಯ ನಮಃ
ಓಂ ತೇಜೋರಾಶಯೇ ಮಹಾಮಣಯೇ
(ನಮಃ ೯೪೦
ಓಂ ಅಸಂಖ್ಯೇಯಾಯ ನಮಃ
ಓಂ ಅಪ್ರಮೇಯಾತ್ಮನೇ ನಮಃ
ಓಂ ವೀರ್ಯವತೇ ನಮಃ
ಓಂ ಕಾರ್ಯಕೋವಿದಾಯ ನಮಃ
ಓಂ ವೇದ್ಯಾಯ ವೈದ್ಯಾಯ ನಮಃ
ಓಂ ವಿಯದ್ಗೋಪ್ತ್ರೇ ನಮಃ
ಓಂ ಸಪ್ತಾವರಮುನೀಶ್ವರಾಯ ನಮಃ
ಓಂ ಅನುತ್ತಮಾಯ ದುರಾಧರ್ಷಾಯ
(ನಮಃ
ಓಂ ಮಧುರಾಯ ಪ್ರಿಯದರ್ಶನಾಯ
ನಮಃ
ಓಂ ಸುರೇಶಾಯ ನಮಃ ೯೫೦
ಓಂ ಶರಣಾಯ ನಮಃ
ಓಂ ಶರ್ಮಣೇ ನಮಃ
ಓಂ ಸರ್ವದೇವಾಯ ನಮಃ
ಓಂ ಸತಾಂಗತಯೇ ನಮಃ
ಓಂ ಕಾಲಪಕ್ಷಾಯ ನಮಃ
ಓಂ ಕಲಂಕಾರಯೇ ನಮಃ
ಓಂ ಕಙ್ಕಣೀಕೃತವಾಸುಕಯೇ ನಮಃ
ಓಂ ಮಹೇಷ್ವಾಸಾಯ ಮಹೀಭರ್ತ್ರೇ
ಓಂ ನಿಷ್ಕಳಙ್ಕಾಯ ನಮಃ [ನಮಃ

ಓಂ ವಿಶ್ವಜ್ಞುಲಾಯ ನಮಃ ೯೭೦
ಓಂ ದ್ಯುಮಣಯೇ ನಮಃ
ಓಂ ತರಣಯೇ ನಮಃ
ಓಂ ಧನ್ಯಾಯ ನಮಃ
ಓಂ ಸಿದ್ಧಿದಾಯ ನಮಃ
ಓಂ ಸಿದ್ಧಿಸಾಧನಾಯ ನಮಃ
ಓಂ ವಿವೃತಾಯ ನಮಃ
ಓಂ ಸಂವೃತಾಯ ನಮಃ
ಓಂ ಶಿಲ್ಪಿನೇ ನಮಃ
ಓಂ ವ್ಯೂಢೋರಸ್ಕಾಯ ನಮಃ
ಓಂ ಮಹಾಭುಜಾಯ ನಮಃ ೯೭೦
ಓಂ ಏಕಜ್ಯೋತಿಷೇ ನಮಃ
ಓಂ ನಿರಾತಂಕಾಯ ನಮಃ
ಓಂ ನರನಾರಾಯಣಪ್ರಿಯಾಯನಮಃ
ಓಂ ನಿರ್ಲೇಪಾಯ ನಿಷ್ಪ್ರಪಂಚಾತ್ಮನೇ [ನಮಃ
ಓಂ ನಿರ್ವ್ಯಗ್ರಾಯ ನಮಃ
ಓಂ ವ್ಯಗ್ರನಾಶನಾಯ ನಮಃ
ಓಂ ಸ್ತವ್ಯಾಯ ನಮಃ
ಓಂ ಸ್ತವಪ್ರಿಯಾಯ ನಮಃ
ಓಂ ಸ್ತೋತ್ರೇ ನಮಃ
ಓಂ ವ್ಯಾಪ್ತಮೂರ್ತಯೇ ನಮಃ ೯೮೦
ಓಂ ಅನಾಕುಲಾಯ ನಮಃ
ಓಂ ನಿರವದ್ಯಪದೋಪಾಯಾಯ ನಮಃ
ಓಂ ವಿದ್ಯಾರಾಶಯೇ ನಮಃ
ಓಂ ಅಕೃತ್ರಿಮಾಯ ನಮಃ
ಓಂ ಪ್ರಶಾನ್ತದೃಷ್ಟಯೇ ನಮಃ
ಓಂ ಅಕ್ಷುದ್ರಾಯಕ್ಷುದ್ರಘ್ನೇ ನಮಃ
ಓಂ ನಿತ್ಯಸುನ್ದರಾಯ ನಮಃ
ಓಂ ಧುರ್ಯಾಯ ನಮಃ
ಓಂ ಅಗ್ರಧುರ್ಯಾಯ ನಮಃ
ಓಂ ಧಾತ್ರೀಶಾಯ ನಮಃ ೯೯೦
ಓಂ ಶಾಕಲಾಯ ನಮಃ
ಓಂ ಶರ್ವರೀಪತಯೇ ನಮಃ
ಓಂ ಪರಮಾರ್ಥಗುರವೇ ನಮಃ
ಓಂ ವ್ಯಾಪ್ತಾಯ ನಮಃ
ಓಂ ಶುಚಯೇ ನಮಃ
ಓಂ ಆಶ್ರಿತವತ್ಸಲಾಯ ನಮಃ
ಓಂ ರಸಾಯ ನಮಃ
ಓಂ ರಸಜ್ಞಾಯ ನಮಃ
ಓಂ ಸಾರಜ್ಞಾಯ ನಮಃ
ಓಂ ಸರ್ವಸತ್ತ್ವಾವಲಮ್ಬನಾಯ ನಮಃ ೧೦೦೦

ಇತಿ ಶ್ರೀಶಿವಸಹಸ್ರನಾಮಾವಳಿಸ್ಸಂಪೂರ್ಣಾ

ಸೂಚನೆ:- ಈ ಸೌರಪುರಾಣದ ಮೂಲಪ್ರತಿಯಲ್ಲಿ ನಾಮಾವಳಿಗಳು ಇಲ್ಲದಿದ್ದರೂ, ಪೂಜೆಗೆ ಅನುಕೂಲಿಸುವಂತೆ ಚತುರ್ಥ್ಯಂತವಾದ ನಾಮಾವಳಿಗಳನ್ನು ಇಲ್ಲಿ ಕೊಡಲಾಗಿದೆ. ಪ್ರಾಯಶಃ ಈ ಶಿವಸಹಸ್ರ ನಾಮಾವಳಿಯೇ ಈಗ ಪ್ರಚಾರದಲ್ಲಿದೆ.

॥ ಶ್ರೀ ॥

ಶ್ರೀ ಶಿವಾಯನಮಃ

ಅಥ ಶ್ರೀ ಸೌರರಾಪುಣೇ ದ್ವಿಚತ್ವಾರಿಂಶೋ ಧ್ಯಾಯಃ

॥ ಋಷಯ ಊಚುಃ ॥

ಶ್ರುತಂ ಶಂಭೋರ್ಯಥಾ ಚಕ್ರಂ ಪ್ರಾಪ್ತವಾನ್ ಪುರುಷೋತ್ತಮಃ ।
ಇದಾನೀಂ ಶ್ರೋತುಮಿಚ್ಛಾಮಃ ಶಿವಪೂಜಾವಿಧಿಂ ಶುಭಂ ॥ ೧ ॥

॥ ಸೂತ ಉವಾಚ ॥

ಶಿವಪೂಜಾವಿಧಿಂ ವಕ್ಷ್ಯೇ ಸಂಕ್ಷೇಪೇಣ ದ್ವಿಜೋತ್ತಮಾಃ ।
ವಕ್ತುಂ ವರ್ಷಶತೇನಾಪಿ ನ ಶಕ್ಯಂ ವಿಸ್ತರೇಣ ತು ॥ ೨ ॥

ನಲವತ್ತೆರಡನೆಯ ಅಧ್ಯಾಯ.

೧. ಶೌನಕಾದಿಗಳು ಪುನಃ ಸೂತರನ್ನು ಕುರಿತು “ ಸ್ವಾಮಿಯೇ, ವಿಷ್ಣುವು ಶಂಕರನಿಂದ ಚಕ್ರವನ್ನು ಸಂಪಾದಿಸಿಕೊಂಡ ಬಗೆಯನ್ನು ನಾವು ನಿಮ್ಮಿಂದ ತಿಳಿದೆವು. ಶಿವನನ್ನು ಅರ್ಚಿಸುವ ನಿಜವಾದ ಕ್ರಮವು ಹೇಗೆ? ಎಂಬುದು ಈಗ ನಮಗೆ ನಿಮ್ಮಿಂದ ತಿಳಿಯುವ ಅಂಶವಾಗಿದೆ. ದಯವಿಟ್ಟು ಉಪದೇಶಿಸಬೇಕು ” ಎನ್ನಲು

೨. ಸೂತರು ಅವರ ಇಷ್ಟದಂತೆ ಶಿವಪೂಜಾವಿಧಿಯನ್ನು ಹೇಳಲಾರಂಭಿಸಿದರು. “ ಋಷಿಗಳೇ, ಶಿವಪೂಜಾವಿಧಿಯನ್ನು ವಿಸ್ತಾರವಾಗಿ ಹೇಳತೊಡಗಿದರೆ ನೂರಾರು ವರ್ಷಗಳು ಬೇಕಾಗುವುವು. ಅದಕ್ಕೆ ಅದನ್ನು ನಿಮಗೆ ಸಂಕ್ಷೇಪವಾಗಿ ತಿಳಿಸುವೆನು ”

ಪುರಾ ಮೇರುಗಿರೇಃ ಶೃಂಗೇ ಸಿದ್ಧಗಂಧರ್ವಸೇವಿತೇ ।
ಉಕ್ತಂ ಸನತ್ಕುಮಾರಾಯ ನಂದಿನಾ ಕುಲನಂದಿನಾ ॥ ೩ ॥

ನಂದೀಶ್ವರಂ ಸುಖಾಸೀನಂ ಸರ್ವಜ್ಞಂ ಮರುತಾಂ ಪತಿಂ ।
ಉಪಸಂಗಮ್ಯ ವಿಧಿವತ್ ದಂಡವತ್ಪ್ರಣಿಪತ್ಯ ಚ ॥ ೪ ॥

ಸನತ್ಕುಮಾರಃ ಪಪ್ರಚ್ಛ ಶಿವಪೂಜಾವಿಧಿಕ್ರಮಂ ।
ಸರ್ವೇಷಾಂ ವರದಂ ಶಾಂತಂ ಗಣಕೋಟಿಭಿರಾವೃತಂ ॥ ೫ ॥

॥ ಸನತ್ಕುಮಾರ ಉವಾಚ ॥

ನಮಸ್ತುಭ್ಯಂ ಗಣೇಶಾಯ ಮಾರ್ತಂಡಾಯುತವರ್ಚಸೇ ।
ಶಿವಾರ್ಚನವಿಧಿಂ ಬ್ರೂಹಿ ಮಮ ತ್ರಿದಶಪೂಜಿತ ॥ ೬ ॥

---

೩. ಈ ಶಿವಪೂಜಾವಿಧಾನವನ್ನು ಹಿಂದೆ ನಂದೀಶ್ವರನು, ಸನತ್ಕುಮಾರ ಮಹರ್ಷಿಗೆ ಮೇರುಪರ್ವತದ ಒಂದು ಶಿಖರದಲ್ಲಿ, ಸಿದ್ಧಗಂಧರ್ವರು ಸ್ಥಿರವಾಗಿ ನೆಲಸಿರುವ ಪವಿತ್ರವಾದ ಸ್ಥಳದಲ್ಲಿ ವಿವರಿಸಿದನು.

೫-೬. ಒಂದು ಸಾರಿ ಸನತ್ಕುಮಾರ ಋಷಿಯು, ಮೇರುಪರ್ವತವನ್ನು ಸೇರಿ, ಅಲ್ಲಿ ಸುಖವಾಗಿ, ಸಮಸ್ತ ಶಿವಗಣಗಳಿಂದ ಆವೃತನಾಗಿ ಕುಳಿತಿರುವ ನಂದೀಶ್ವರನನ್ನು ನೋಡಿದನು. ಆ ನಂದಿಯಾದರೋ ಸಮಸ್ತರಿಗೂ ವರವನ್ನು ನೀಡುತ್ತಾ ಶಾಂತನಾಗಿ ಕುಳಿತಿದ್ದನು. ಅಂತಹ ಮಹಾನುಭಾವನನ್ನು ಕಂಡು ಸನತ್ಕುಮಾರ ಋಷಿಯು ಶಿವಪೂಜಾಕ್ರಮವನ್ನು ತನಗೆ ತಿಳಿಸಬೇಕೆಂದು ಬೇಡಿಕೊಂಡನು.

೬. "ನಂದೀಶ್ವರನೇ, ನೀನು ಸಹಸ್ರ ಸೂರ್ಯರಂತೆ ತೇಜಸ್ಸಿನಿಂದ ಉರಿಯುತ್ತಿರುವೆ. ಸಮಸ್ತ ಗಣಗಳಿಗೂ ನೀನು ಒಡೆಯನಾಗಿರುವೆ. ನನಗೆ ಅತ್ಯಂತ ಇಷ್ಟವಾಗಿರುವ ಶಿವಾರ್ಚನಾವಿಧಿಯನ್ನು ದಯವಿಟ್ಟು ಅನುಗ್ರಹಿಸಬೇಕು" ಎಂದು ಸನತ್ಕುಮಾರಮಹರ್ಷಿಯು ಕೇಳಿಕೊಳ್ಳಲು,

|| ನಂದಿಕೇಶ್ವರ ಉವಾಚ ||

ಶಿವಪೂಜಾವಿಧಿಂ ವಕ್ಷ್ಯೇ ಶೃಣು ಬ್ರಹ್ಮಸುತಾದ್ಯ ಮೇ ।
ಸರ್ವಾತ್ಮಕೇ ಮಹಾದೇವೇ ಭಕ್ತೋಽಸಿ ತ್ವಂ ಯತೋ ಮುನೇ ||೭||

ತತ್ರಾದೌ ವಿಧಿನಾ ಸ್ನಾತ್ವಾ ಸಮಾಚಮ್ಯ ಯಥಾವಿಧಿ ।
ಪೂಜಾಸ್ಥಾನಮನುಪ್ರಾಪ್ಯ ಉಪವಿಶ್ಯಾಥ ಬುದ್ಧಿಮಾನ್ ||೮||

ಪ್ರಾಣಾಯಾಮತ್ರಯಂ ಕೃತ್ವಾ ಧ್ಯಾಯೇದ್ದೇವಂ ಸದಾಶಿವಂ ।
ಶರೀರಶೋಷಣಂ ಕೃತ್ವಾ ದಹನಂ ಪ್ಲಾವನಂ ತತಃ ||೯||

ಶೈವೀಂ ತನುಂ ಸಮಾಸ್ಥಾಯ ನ್ಯಾಸಕರ್ಮ ಸಮಾಚರೇತ್ ।
ಯೋಽಯಂ ಸೂತ್ರಾತ್ಮಕೋ ಮಂತ್ರಃ ಸರ್ವವೇದಾತ್ಮಕಃ ಪರಃ ||೧೦||

---

೭. ನಂದೀಶ್ವರನು "ಓ ಸನತ್ಕುಮಾರ ಋಷಿಯೇ, ಬ್ರಹ್ಮಮಾನಸಪುತ್ರನೇ, ನಿನ್ನ ಇಷ್ಟದಂತೆ ಶಿವಪೂಜಾಮಹಿಮೆಯನ್ನು ನಾನು ಈಗ ವಿವರಿಸುವೆನು. ಅಲ್ಲದೆ ನೀನು ಸರ್ವಾತ್ಮಕನಾದ ಪರಮೇಶ್ವರನಿಗೆ ಅತ್ಯಂತ ಭಕ್ತನಾಗಿರುವೆಯಲ್ಲವೇ ? ಆದ ರಿಂದಲೇ ಹೇಳುವೆನು ಕೇಳು.

೮. ಶಿವಾರ್ಚನೆ ಮಾಡುವವನು ಮೊದಲು ವಿಧಿವತ್ತಾಗಿ ಸ್ನಾನಮಾಡಿ, ಶುದ್ಧಾಚಮನಾದಿಗಳನ್ನು ನೆರವೇರಿಸಿಕೊಂಡು, ಪೂಜಾಸ್ಥಾನವನ್ನು ಹೊಕ್ಕು ಸ್ಥಿರ ಮನಸ್ಸಿನಿಂದ ಕುಳಿತುಕೊಳ್ಳಬೇಕು.

೯. ಅಲ್ಲಿ ಮೂರು ಸಾರಿ ಪ್ರಾಣಾಯಾಮಮಾಡಿ ಸದಾಶಿವರೂಪಿಯಾದ ಮಹೇಶ್ವರನನ್ನು ಧ್ಯಾನಿಸಬೇಕು. ಮಂತ್ರಪುರಸ್ಸರವಾಗಿ ಶರೀರವನ್ನು ಶೋಷಿಸಿ, ಅಗ್ನಿ, ವಾಯು ದೇವತಾರೂಪವಾದ ಪ್ರಾಣವಾಯುವನ್ನು ಧಾರಣಮಾಡಬೇಕು.

೧೦. ತನ್ನ ದೇಹವನ್ನು ಶಿವಸ್ಥಾನವನ್ನಾಗಿ ಭಾವಿಸಿ, ಸೂತ್ರಾತ್ಮಕವೂ, ಸರ್ವ ವೇದಾತ್ಮಕವೂ ಆದ ಉತ್ತಮವಾದ ಮಂತ್ರದಿಂದ ಅಂಗನ್ಯಾಸ ಕರನ್ಯಾಸಾದಿ ಗಳನ್ನು ಮಾಡಬೇಕು.

ತಸ್ಯ ವರ್ಣಾಶ್ಚ ವಿಧಿವನ್ನ್ಯಸೇತ್ಪ್ರಣವಪೂರ್ವಕಾನ್ ।
ಬ್ರಹ್ಮಾಣಿ ತತೋ ವಿನ್ಯಸ್ಯ ತತಶ್ಚಂದನವಾರಿಣಾ ॥ ೧೧ ॥

ಪೂಜಾಸ್ಥಾನಂ ಸುಸಂಪ್ರೋಕ್ಷ್ಯ ದ್ರವ್ಯಾಣಿ ಚ ಮುನೀಶ್ವರ ।
ಕ್ಷಾಳನಂ ಪ್ರೋಕ್ಷಣಂ ಚೈವ ಪ್ರಣವೇನ ವಿಧೀಯತೇ ॥ ೧೨ ॥

ಸ್ಥಾಪಯೇತ್ಪ್ರೋಕ್ಷಣೀಪಾತ್ರಂ ಪಾದ್ಯಪಾತ್ರಂ ತಥೈವ ಚ ।
ತಥಾಹ್ಯಾಚಮನೀಯಂ ಚ ಹ್ಯವಗುಂಠ್ಯ ಯಥಾವಿಧಿ ॥ ೧೩ ॥

ಆಚ್ಛಾದ್ಯ ದರ್ಭೈರ್ಮೂರ್ತಿಮಾಂಸ್ತೇನೈವಾಭ್ಯುಕ್ಷ್ಯ ವಾರಿಣಾ ।
ಜಲಂ ತೇಷು ವಿನಿಕ್ಷಿಪ್ಯ ದ್ರವ್ಯಾಣಿ ಚ ತತಃ ಕ್ಷಿಪೇತ್ ॥ ೧೪ ॥

ಉಶೀರಂ ಚಂದನಂ ಚೈವ ಪಾದ್ಯೇತು ಪರಿಕಲ್ಪಯೇತ್ ।
ಚೂರ್ಣಯಿತ್ವಾ ಸಕಂಕೋಲಂ ಕರ್ಪೂರಂ ಜಾತಿಕಾಫಲಂ ॥ ೧೫ ॥

೧೧–೧೨. ಆ ಮಂತ್ರವರ್ಣಗಳಿಂದಲೇ ಪ್ರಣವಪೂರ್ವಕವಾಗಿ ನ್ಯಾಸಾದಿಗಳನ್ನು ಮಾಡಿ, ಬ್ರಹ್ಮಮಾರ್ಗದಲ್ಲಿ ದೇವರನ್ನು ಧ್ಯಾನಿಸಿ, ಅನಂತರ ಗಂಗೋದಕದಿಂದ ಪೂಜಾಸ್ಥಾನವನ್ನೂ, ಪೂಜಾದ್ರವ್ಯಗಳನ್ನೂ. ಪ್ರೋಕ್ಷಿಸಬೇಕು. ಆ ವಿಧವಾದ ಪ್ರೋಕ್ಷಣೆಗೂ, ಪದಾರ್ಥಗಳ ಶುದ್ಧಿಗೂ ಪ್ರಣವಮಂತ್ರವೇ ಬೇಕಾದದ್ದು.

೧೩. ಪೂಜೆಗೆ ಅತ್ಯವಶ್ಯಕಗಳಾದ ಪ್ರೋಕ್ಷಣಪಾತ್ರೆ, ಪಾದ್ಯಪಾತ್ರೆ ಆಚಮನ ಪಾತ್ರಗಳನ್ನು ಕ್ರಮವಾಗಿ ಮುಚ್ಚಳದಿಂದ ಮುಚ್ಚಿಡಬೇಕು.

೧೪. ಆ ಪಾತ್ರೆಗಳನ್ನು ದರ್ಭೆಗಳಿಂದ ಮುಚ್ಚಿ ಅದೇ ದರ್ಭೆಗಳಿಂದಲೇ ಜಲಪ್ರೋಕ್ಷಣೆಮಾಡಿ, ಅನಂತರ ಆ ಪಾತ್ರೆಗಳಿಗೆ ನೀರನ್ನೂ, ಪದಾರ್ಥಗಳನ್ನೂ ಹಾಕಬೇಕು.

೧೫. ಅದರಲ್ಲಿ ಪಾದ್ಯಪಾತ್ರೆಗೆ ಲಾವಂಚವನ್ನೂ, ಶ್ರೀಗಂಧವನ್ನೂ ಹಾಕಬೇಕು. ತಕ್ಕೋಲದ ಬೇರನ್ನು ಅರೆದು ಕರ್ಪೂರ, ಜಾಜಿಕಾಯಿ, ಇವುಗಳನ್ನು ಸೇರಿಸಿ ಆಚಮನಪಾತ್ರೆಗೆ ಹಾಕಬೇಕು.

ಕ್ಷಿಪೇದಾಚಮನೀಯೇ ತು ಪ್ರಣವೇನ ಯಥಾಕ್ರಮಂ ।
ಸರ್ವತ್ರ ಚಂದನಂ ದದ್ಯಾದರ್ಘ್ಯಪಾತ್ರೇಽಧುನಾ ಶೃಣು ॥ ೧೬ ॥

ವ್ರೀಹೀನ್ಯವಾಂಶ್ಚ ಪುಷ್ಪಾಣಿ ಕುಶಾಗ್ರಾಣಿ ತಥೈವ ಚ ।
ಸಿದ್ಧಾರ್ಥಾನಕ್ಷತಾಂಶ್ಚೈವ ಸಾಜ್ಯಂ ಚ ಭಸಿತಂ ತಥಾ ॥ ೧೭ ॥

ಕುಶಪುಷ್ಪಯವವ್ರೀಹಿಬಹುಮೂಲತಮಾಲಕಾನ್ ।
ಪ್ರಕ್ಷಿಪೇತ್ಪ್ರೋಕ್ಷಣೀಪಾತ್ರೇ ಪ್ರಣವೇನ ಸುಧೀಸ್ತತಃ ॥ ೧೮ ॥

ಸೂತ್ರೇಣ ಭವಗಾಯತ್ರ್ಯಾ ಗಾಯತ್ರ್ಯಾ ಚ ದ್ವಿಜೋತ್ತಮಃ ।
ಪ್ರೋಕ್ಷಣೀಪಾತ್ರಮಾದಾಯ ಸಂಪ್ರೋಕ್ಷ್ಯ ದ್ವಾರಪಾಲಕೌ ॥ ೧೯ ॥

ಪಾರ್ಶ್ವತೋ ಮಾಂ ಚತುರ್ಬಾಹುಂ ಸೂರ್ಯಾಯುತಸಮಪ್ರಭಂ ।
ವಾನರಾಖ್ಯಂ ತ್ರಿನಯನಂ ಪುಷ್ಪಮಾಲಾಸುಶೋಭಿತಂ ॥ ೨೦ ॥

---

೧೬. ಇವುಗಳನ್ನು ಪಾತ್ರೆಗಳಿಗೆ ಹಾಕುವಾಗ ಪ್ರಣವಮಂತ್ರವನ್ನು ಜಪಿಸುತ್ತಿರಬೇಕು. ಎಲ್ಲಾ ಪಾತ್ರೆಗಳಿಗೂ ಶ್ರೀಗಂಧವನ್ನು ಹಾಕಬೇಕು. ಈಗ ಅರ್ಘ್ಯಪಾತ್ರೆಯ ವಿಷಯವನ್ನು ಹೇಳುವೆನು.

೧೭. ಅರ್ಘ್ಯಪಾತ್ರೆಗೆ, ಬತ್ತ ಯವ (ಅಕ್ಕಿ), ಹೂವು, ದರ್ಭೆಯ ಚೂರು, ಸಿದ್ಧಮಾಡಿದ್ದ ಮಂತ್ರಾಕ್ಷತೆ, ತುಪ್ಪಮಿಶ್ರಿತವಾದ ವಿಭೂತಿ ಇವುಗಳನ್ನು ಹಾಕಬೇಕು.

೧೮. ದರ್ಭೆ, ಹೂವು, ಯವ, ಬತ್ತ, ಬಹುಮೂಲ, ಹೊಂಗೇಎಲೆ, ಇವುಗಳನ್ನು ಪ್ರಣವಮಂತ್ರದಿಂದ ಪ್ರೋಕ್ಷಣೀಪಾತ್ರೆಯಲ್ಲಿ ಹಾಕಬೇಕು.

೧೯. ಈ ಪಾತ್ರೆಗಳಿಗೆ ಬ್ರಾಹ್ಮಣನಾದವನು ರುದ್ರಗಾಯತ್ರೀ ಮತ್ತು ಗಾಯತ್ರೀ ಈ ಮಂತ್ರಗಳಿಂದ ದಾರವನ್ನು ಕಟ್ಟಬೇಕು. ಪ್ರೋಕ್ಷಣೀ ಪಾತ್ರೆಯಿಂದ ನೀರನ್ನು ತೆಗೆದು ಮೊದಲು ದ್ವಾರಪಾಲಕರನ್ನು ಪ್ರೋಕ್ಷಿಸಬೇಕು.

೨೦. ಅನಂತರ ಒಂದು ಪಕ್ಕದಲ್ಲಿ ದಶಸಹಸ್ರ ಸೂರ್ಯರಂತೆ ಹೊಳೆಯುತ್ತಿರುವ ನಾಲ್ಕು ತೋಳುಗಳಿಂದಲೂ, ಮೂರು ಕಣ್ಣುಗಳಿಂದಲೂ ಕೂಡಿ, ಸರ್ವಾಭರಣಗಳಿಂದ, ಪುಷ್ಪಮಾಲೆಗಳಿಂದ ಅಲಂಕೃತವಾಗಿರುವ ವಾನರವೆಂಬ ಹೆಸರುಳ್ಳ ನನ್ನನ್ನು (ನಂದೀಶ್ವರನನ್ನು) ಪೂಜಿಸಬೇಕು.

ಸರ್ವಾಭರಣಶೋಭಾಢ್ಯಂ ನಂದೀಶಂ ಸಂಪ್ರಪೂಜಯೇತ್ ।
ದಕ್ಷಿಣೇ ತು ಮಹಾಕಾಲಂ ಘೋರರೂಪಂ ಭಯಾವಹಂ ॥ ೨೧ ॥

ದಂಷ್ಟ್ರಾಕರಾಳವದನಂ ಕಾಲಾಗ್ನಿಚಯಸಂನಿಭಂ ।
ಪಶ್ಚಾದಂತರ್ಗೃಹಂ ಶಂಭೋಃ ಪ್ರವಿಶ್ಯ ಸುಸಮಾಹಿತಃ ॥ ೨೨ ॥

ಪಂಚ ಪುಷ್ಪಾಂಜಲಿಂ ದದ್ಯಾದ್ಬ್ರಹ್ಮಭಿಃ ಪಂಚಭಿರ್ಮುನೇ ।
ಗಂಧೈಃ ಪುಷ್ಪೈರ್ಮಹಾದೇವಂ ಭಕ್ತ್ಯಾ ಸಂಪೂಜಯೇದ್ಬುಧಃ ॥ ೨೩ ॥

ಸ್ಕಂದಂ ವಿನಾಯಕಂ ಚೈವ ಲಿಂಗಶುದ್ಧಿಮಥಾರಭೇತ್ ।
ಸೂಕ್ತೈರ್ಮಂತ್ರೈಶ್ಚ ವಿಧಿವನ್ನಮೋಂತೈಃ ಪ್ರಣವಾದಿಕೈಃ ॥ ೨೪ ॥

ಆಸನಂ ಕಲ್ಪಯೇತ್ಪಶ್ಚಾದೈಶ್ವರ್ಯದಲಪಂಕಜೇ ।
ಅಣಿಮಾಪೂರ್ವಪತ್ರಂ ಸ್ಯಾತ್ಸರ್ವಜ್ಞತ್ವಮಥೇಶ್ವರಂ ॥ ೨೫ ॥

೨೧–೨೨. ಬಲಭಾಗದಲ್ಲಿ ಅತ್ಯಂತ ಭಯಂಕರವಾಗಿ ಘೋರಾಕಾರದಿಂದ ಕೂಡಿ, ಕೋರೆದಾಡೆಗಳಿಂದ ತುಂಬಿದ ಮುಖವುಳ್ಳ ಪ್ರಲಯಕಾಲಾಗ್ನಿಯಂತೆ ಉರಿಯುತ್ತಿರುವ ಮಹಾಕಾಲನನ್ನು ಅರ್ಚಿಸಬೇಕು. ಅನಂತರ ಗರ್ಭಗೃಹವನ್ನು ಪ್ರವೇಶಿಸಿ,ಅಲ್ಲಿ ಚಿತ್ತಶುದ್ಧಿಯಿಂದ ಕೂಡಿ,

೨೩. ಐದು ಮಂತ್ರಗಳಿಂದ ಐದು ಬೊಗಸೆ ಹೂವುಗಳನ್ನು ಪರಮೇಶ್ವರನಿಗೆ ಅರ್ಪಿಸಬೇಕು. ಅನಂತರ ಗಂಧ, ಹೂವು, ಇವೇ ಮೊದಲಾದುವುಗಳಿಂದ ಮಹಾದೇವನನ್ನು ಭಕ್ತಿಯಿಂದರ್ಚಿಸಬೇಕು.

೨೪. ಅನಂತರ ಪ್ರಣವವೇ ಮೊದಲಾದ ನಮಶ್ಶಬ್ದಾಂತವಾದ ಮಂತ್ರಗಳಿಂದಲೂ, ವಿವಿಧವಾದ ಸೂಕ್ತಗಳಿಂದಲೂ, ಮಂತ್ರಗಳಿಂದಲೂ, ಸ್ಕಂದನನ್ನೂ, ವಿನಾಯಕನನ್ನೂ, ಲಿಂಗವನ್ನೂ ಅಭಿಷೇಚಿಸಬೇಕು.

೨೫. ಅನಂತರ ಅಷ್ಟದಳ ಸಹಿತವಾದ ಪದ್ಮವನ್ನು ಪರಮೇಶ್ವರನ ಆಸನಕ್ಕಾಗಿ ಸಿದ್ಧಪಡಿಸಬೇಕು. ಅದರಲ್ಲಿ ಪೂರ್ವಭಾಗದ ದಳದಲ್ಲಿ ಅಣಿಮಾ ಎಂಬ ಸಿದ್ಧಿಯನ್ನೂ, ಸರ್ವಜ್ಞನಾಮದ ಈಶ್ವರನನ್ನೂ ಆವಾಹನೆಮಾಡಬೇಕು.

ಕರ್ಣಿಕಾಯಾಂ ನ್ಯಸೇದ್ವಿಪ್ರ ವಹ್ನೇರ್ವೈಮಂಡಲಂ ತತಃ ।
ಸೌರಂ ಸೌಮ್ಯಂ ಚ ವಿನ್ಯಸ್ಯ ಧರ್ಮಾದೀನ್ವೈ ವಿದಿಕ್ಷು ಚ ॥ ೨೬ ॥

ಅಧರ್ಮಾದೀಂಸ್ತತೋ ದಿಕ್ಷು ಸೋಮಸ್ಯಾಂತೇ ಗುಣತ್ರಯಂ ।
ತತ್ತ್ವತ್ರಯಮಥೋ ವಿದ್ವಾನ್ ತತಃ ಶಂಭುಂ ಪ್ರಪೂಜಯೇತ್ ॥ ೨೭ ॥

ಸ್ನಾಪಯೇದ್ವಿಧಿನಾ ದೇವಂ ಗಂಧಯುಕ್ತೇನ ವಾರಿಣಾ ।
ಪಂಚಾಮೃತಂ ತತೋ ಮಂತ್ರೈಃ ಸಾಧಿತಂ ವಿಧಿಪೂರ್ವಕಂ ॥ ೨೮ ॥

ಸ್ನಾಪಯೇತ್ಪ್ರಣವೇನೈವ ತತ್ರಾದೌ ಪಯಸಾ ಮುನೇ ।
ಆಜ್ಯೇನ ಮಧುನಾ ದಧ್ನಾ ತಥಾ ಚೇಕ್ಷುರಸೇನ ಚ ॥ ೨೯ ॥

ಜಲಸ್ಯ ಶುದ್ಧಿಂ ವಿಧಿವನ್ಮಂತ್ರೈಃ ಕುರ್ಯಾದನೇಕಶಃ ।
ಸಂಛಾದ್ಯ ಸಿತವಸ್ತ್ರೇಣ ಸ್ನಾಪಯೇದಿಂದುಶೇಖರಂ ॥ ೩೦ ॥

---

೨೬. ಆಗ್ನೇಯಭಾಗದ ದಳದಲ್ಲಿ, ಸೂರ್ಯನನ್ನೂ, ಸೌಮ್ಯನನ್ನೂ ಸ್ಥಾಪಿಸಬೇಕು. ಹಾಗೆಯೇ ಎಲ್ಲಾ ವಿದಿಕ್ಕುಗಳಲ್ಲಿಯೂ ಧರ್ಮನೇ ಮೊದಲಾದವರನ್ನು ಪೂಜಿಸಬೇಕು.

೨೭. ಎಲ್ಲಾ ಪ್ರಧಾನದಿಕ್ಕುಗಳಲ್ಲಿ ಅಧರ್ಮವೇ ಮೊದಲಾದುವುಗಳನ್ನೂ ಆರಾಧಿಸಿ, ಪರಮೇಶ್ವರನ ಹತ್ತಿರ ಮೂರು ಗುಣಗಳನ್ನೂ, ಮೂರು ತತ್ತ್ವಗಳನ್ನೂ ಪೂಜಿಸಿ, ಅನಂತರ ಪರಮೇಶ್ವರನ ಆರಾಧನೆಗೆ ಪ್ರಾರಂಭಮಾಡಬೇಕು.

೨೮. ವಿಧಿವತ್ತಾಗಿ ಗಂಧಮಿಶ್ರಿತವಾದ ನೀರಿನಿಂದಲೂ, ಪಂಚಾಮೃತಗಳಿಂದಲೂ ಮಂತ್ರಪೂರ್ವಕವಾಗಿ ಸ್ವಾಮಿಗೆ ಸ್ನಾನಮಾಡಿಸಬೇಕು.

೨೯. ಪ್ರಣವಮಂತ್ರದಿಂದಲೇ ಶಂಭುವನ್ನು, ಹಾಲು, ತುಪ್ಪ, ಜೇನುತುಪ್ಪ, ಮೊಸರು, ಕಬ್ಬಿನರಸ, ಮೊದಲಾದುವುಗಳಿಂದ ಸ್ನಾನಮಾಡಿಸಬೇಕು.

೩೦. ಮಂತ್ರಪೂರ್ವಕವಾಗಿ ಮೊದಲು ಜಲಶುದ್ಧಿಯನ್ನು ಮಾಡಿಕೊಂಡು, ಅನಂತರ ಬಿಳಿಯ ವಸ್ತ್ರದಿಂದ ಪರಮೇಶ್ವರನನ್ನು ಆಚ್ಛಾದಿಸಿ, ಮಂತ್ರಪೂರ್ವಕವಾಗಿ ಅಭಿಷೇಕಮಾಡಬೇಕು.

ಕುಶಾಪಾಮಾರ್ಗಕರ್ಪೂರಜಾತೀಚಂಪಕಪುಷ್ಪಕೈಃ ।
ಕರವೀರೈಃಸಿತೈಶ್ಚೈವ ಮಲ್ಲಿಕಾಕಮಲೋತ್ಪಲೈಃ ॥ ೩೧ ॥

ಆಪೂರ್ಯ ಪುಷ್ಪೈಃ ಸುಶುಭ್ರೈಶ್ಚಂದನಾದ್ಯೈಶ್ಚ ತಜ್ಜಲಂ ।
ಸದ್ಯೋಜಾತಾದಿಕಾಂ ಸ್ತತ್ರ ವಿನ್ಯಸೇದ್ಬ್ರಹ್ಮಣಃ ಸುತ ॥ ೩೨ ॥

ಸುವರ್ಣಕಲಶೇನಾಥ ತಥಾ ವೈ ರಾಜತೇನ ಚ ।
ಶಂಖೇನ ಮೃನ್ಮಯೇನಾಥ ಶೋಭಿತೇನ ಶುಭೇನ ಚ ॥ ೩೩ ॥

ಸಕೂರ್ಚೇನ ಸಪುಷ್ಪೇಣ ಸ್ನಾಪಯೇನ್ಮಂತ್ರಪೂರ್ವಕಂ ।
ಪವಮಾನೇನ ರುದ್ರೇಣ ತಥಾ ವಾಮೀಯಕೇನ ಚ ॥ ೩೪ ॥

ತ್ವರಿತಾಖ್ಯೇನ ರುದ್ರೇಣ ನೀಲರುದ್ರೇಣ ವಾ ಪುನಃ ।
ಅಥರ್ವಶಿರಸಾ ವಾಪಿ ರುದ್ರೇಣ ಚ ತಥೈವ ಚ ॥ ೩೫ ॥

೩೧-೩೨. ಎಲೈ ಸನತ್ಕುಮಾರ ಋಷಿಯೇ, ಪರಮೇಶ್ವರನಿಗೆ ಅಭಿಷೇಕ ಮಾಡುವ ನೀರಿನಲ್ಲಿ ದರ್ಭೆ, ಉತ್ತರಣೆ, ಕರ್ಪೂರ, ಜಾಜೀ, ಸಂಪಿಗೆ, ಕಣಿಗಲು, ಬಿಳೀಹೂವು, ಮಲ್ಲಿಗೆ, ಕಮಲ, ಉತ್ಪಲ, ಇವೇ ಮೊದಲಾದ ಹೂವುಗಳನ್ನು ಹಾಕಿಡಬೇಕು. ಅನಂತರ ಅದಕ್ಕೆ ಗಂಧವೇ ಮೊದಲಾದ ಸುಗಂಧ ದ್ರವ್ಯಗಳನ್ನು ಹಾಕಿ, ಅನಂತರ ಅದರಿಂದ ಅಭಿಷೇಕಮಾಡಬೇಕು.

೩೩. ಚಿನ್ನದ ಅಥವಾ ಬೆಳ್ಳಿಯ ಪಾತ್ರೆಯಿಂದಾಗಲಿ, ಅಥವಾ ಶಂಖದಿಂದಾಗಲಿ, ಮಣ್ಣಿನ ಪಾತ್ರೆಯಿಂದಾಗಲಿ, ಶುದ್ಧವಾಗಿದ್ದರೆ ಅವುಗಳಲ್ಲಿ ಶುದ್ಧೋದಕವನ್ನು ತುಂಬಿ ಅಭಿಷೇಕಮಾಡಬಹುದು.

೩೪. ಅಭಿಷೇಕಮಾಡುವಾಗ ಕೂರ್ಚ ಮತ್ತು ಪುಷ್ಪವನ್ನು ಸೇರಿಸಿಕೊಂಡು ಪವಮಾನ ಸೂಕ್ತವನ್ನಾಗಲಿ, ಶ್ರೀ ರುದ್ರವನ್ನಾಗಲಿ, ವಾಮನಸೂಕ್ತವನ್ನಾಗಲಿ ಪಠನೆ ಮಾಡುತ್ತಾ ಅಭಿಷೇಕಮಾಡಬೇಕು.

೩೫. ಅಭಿಷೇಕಕಾಲದಲ್ಲಿ ತ್ವರಿತಸಂಜ್ಞಕವಾದ ರುದ್ರಮಂತ್ರವನ್ನಾಗಲಿ, ನೀಲರುದ್ರವನ್ನಾಗಲಿ, ಅಥರ್ವಶಿರಸ್ಸನ್ನಾಗಲಿ ಪಾರಾಯಣಮಾಡಬೇಕು.

ರಥಂತರೇಣ ಪುಣ್ಯೇನ ಶ್ರೀಸೂಕ್ತೇನಾಥವಾ ಮುನೇ ।
ಪೌರುಷೇಣ ಚ ಸೂಕ್ತೇನ ಜ್ಯೇಷ್ಠಸಾಮ್ನಾ ಚ ವಿಷ್ಣುನಾ ॥ ೩೬ ॥

ಪಂಚಭಿರ್ಬ್ರಹ್ಮಭಿರ್ವಾಥ ಸೂಕ್ತೇನ ಪ್ರಣವೇನ ವಾ ।
ಸ್ನಾಪಯೇದ್ದೇವದೇವೇಶಂ ಸರ್ವಯಜ್ಞಫಲಾಪ್ತಯೇ ॥ ೩೭ ॥

ವಸ್ತ್ರಂ ಯಜ್ಞೋಪವೀತೇ ಚ ತಥಾ ಹ್ಯಾಚಮನೀಯಕಂ ।
ಮುಕುಟಂ ಚ ಶುಭಂ ಭದ್ರಂ ತಥಾ ವೈ ಭೂಷಣಾನಿ ಚ ॥ ೩೮ ॥

ಮುಖವಾಸಂ ಚ ನೈವೇದ್ಯಂ ಸರ್ವಂ ವೈ ಪ್ರಣವೇನ ಚ ।
ತತಃ ಸ್ಫಟಿಕಸಂಕಾಶಂ ದೇವಂ ನಿಷ್ಕಲಮಕ್ಷರಂ ॥ ೩೯ ॥

ಕಾರಣಂ ಸರ್ವಲೋಕಾನಾಂ ಸರ್ವಲೋಕಮಯಂ ಪರಂ ।
ಬ್ರಹ್ಮಣಾ ವಿಷ್ಣುರುದ್ರಾದ್ಯೈರಪಿ ದೇವೈರಗೋಚರಂ ॥ ೪೦ ॥

---

೩೬. ಪುಣ್ಯಕರವಾದ ರಥಂತರ ಸಾಮವನ್ನೂ, ಶ್ರೀಸೂಕ್ತವನ್ನೂ, ಪುರುಷ ಸೂಕ್ತವನ್ನೂ, ಜ್ಯೇಷ್ಠಸಂಜ್ಞಕಸಾಮವನ್ನಾಗಲಿ, ವಿಷ್ಣು ಸೂಕ್ತವನ್ನಾಗಲಿ ಹೇಳ ಬಹುದು.

೩೭. ಪಂಚ ಬ್ರಹ್ಮಾನುವಾಕಗಳಿಂದಲೂ, ಪ್ರಣವಮಂತ್ರಗಳಿಂದಲೂ ದೇವ ದೇವನಾದ ಮಹೇಶ್ವರನನ್ನು ಅಭಿಷೇಕಮಾಡಬೇಕು. ಇದರಿಂದ ಮನುಷ್ಯನು ಸಮಸ್ತ ಯಾಗಗಳ ಫಲವನ್ನು ಸುಲಭವಾಗಿ ಪಡೆಯಬಹುದು.

೩೮. ಅಭಿಷೇಕಾನಂತರ ವಸ್ತ್ರ, ಯಜ್ಞೋಪವೀತ ಇವುಗಳನ್ನು ಧರಿಸ ಬೇಕು. ಯಜ್ಞೋಪವೀತಧಾರಣಾಂಗವಾಗಿ ಆಚಮನವನ್ನೂ, ಅನಂತರ ಕಿರೀಟ ವನ್ನೂ, ಶುಭಕರವಾದ ಅನೇಕಾನೇಕ ಒಡವೆಗಳನ್ನೂ ಅರ್ಪಿಸಬೇಕು.

೩೯. ಆಮೇಲೆ ಮುಖವಾಸ, ನೈವೇದ್ಯ ಇವುಗಳನ್ನು ಕೇವಲ ಪ್ರಣವ ಮಂತ್ರಗಳಿಂದಲೇ ಸಮರ್ಪಿಸಬೇಕು. ಅನಂತರ ಸ್ವಾಮಿಯನ್ನು ಹೀಗೆ ಧ್ಯಾನ ಮಾಡಬೇಕು. ಸ್ವಾಮಿಯು ಶುದ್ಧಸ್ಫಟಿಕದಂತೆ ಹೊಳೆಯುತಕ್ಕವನು, ಕಲಾಪರಿ ಪೂರ್ಣನು, ನಾಶರಹಿತನು.

೪೦. ಸಮಸ್ತ ಲೋಕಸೃಷ್ಟಿಗೂ ಕಾರಣನಾದವನು, ಸರ್ವಲೋಕಮಯ ನಾದವನು, ಬ್ರಹ್ಮ, ವಿಷ್ಣು, ರುದ್ರ, ಇವರೇ ಮೊದಲಾದ ದೇವತೆಗಳಿಗೂ ಅಗೋಚರ ನಾದವನು.

ವೇದವಿದ್ಭಿರ್ವೇದಾಂತ್ಯೈರಗೋಚರಮಿತಿ ಶ್ರುತಂ |
ಆದಿಮಧ್ಯಾಂತರಹಿತಂ ಭೇಷಜಂ ಭವರೋಗಿಣಾಂ ॥ ೪೧ ॥

ಶಿವಲಿಂಗಮಿತಿ ಖ್ಯಾತಂ ಶಿವಲಿಂಗೇ ವ್ಯವಸ್ಥಿತಂ |
ಪ್ರಣವೇನೈವ ಮಂತ್ರೇಣ ಪೂಜಯೇಲ್ಲಿಂಗಮೂರ್ಧನಿ ॥ ೪೨ ॥

ಸ್ತೋತ್ರೈಃ ಸ್ತುತ್ವಾ ಮಹಾದೇವಂ ಪ್ರಣಿಪತ್ಯ ಪ್ರದಕ್ಷಿಣಂ |
ಪುನರರ್ಘ್ಯಂ ಚ ವೈ ದತ್ವಾ ಪುಷ್ಪಾಣಿ ಚ ವಿಕೀರ್ಯ ವೈ ॥ ೪೩ ॥

ಪಾದಯೋರ್ದೇವದೇವಸ್ಯ ಪ್ರಣಿಪತ್ಯ ವಿಸರ್ಜಯೇತ್ |
ಏವಂ ಸಂಕ್ಷಿಪ್ಯ ಕಥಿತಂ ಬ್ರಹ್ಮಸೂನೋ ಶಿವಾರ್ಚನಂ ॥ ೪೪ ॥
ಸರ್ವವೇದೇಷು ಯದ್ಗುಹ್ಯಂ ಯಥಾ ಶಂಭೋರ್ಮಯಾ ಶ್ರುತಂ ॥ ೪೫ ॥

---

೪೧. ವೇದಜ್ಞರಿಗೂ, ಉಪನಿಷತ್ತುಗಳಿಗೂ ಅಗೋಚರನಾದ ಮತ್ತು ಆದಿ ಮಧ್ಯ, ಅಂತ್ಯ ಇವುಗಳಿಲ್ಲದ ಸಂಸಾರವೆಂಬ ಉಗ್ರವಾದ ರೋಗಕ್ಕೆ ಔಷಧ ರೂಪನಾಗಿರುವವನು, ಎಂದು ಶಂಕರನನ್ನು ಧ್ಯಾನಿಸಬೇಕು.

೪೨. ಶಿವಲಿಂಗವೆಂದು ಪ್ರಸಿದ್ಧನಾಗಿರುವ ಪರಶಿವನು ಯಾವಾಗಲೂ ಶಿವಲಿಂಗದಲ್ಲಿಯೇ ನೆಲಸಿರುವನು. ಅಂತಹ ಶಿವನನ್ನು ಪ್ರಣವಮಂತ್ರಗಳಿಂದಲೇ ಆರಾಧಿಸಬೇಕು.

೪೩. ನಾನಾವಿಧಗಳಾದ ಸ್ತುತಿವಚನಗಳಿಂದ ಮಹಾದೇವನನ್ನು ಸ್ತುತಿಸಿ, ಅನಂತರ ಪ್ರದಕ್ಷಿಣ ನಮಸ್ಕಾರಾದಿಗಳಿಂದ ಎರಗಿ, ಆಮೇಲೆ ಅರ್ಘ್ಯಪ್ರದಾನವನ್ನೂ ಪುಷ್ಪಾಂಜಲಿಯನ್ನೂ ಅರ್ಪಿಸಬೇಕು.

೪೪. ಅನಂತರ ದೇವದೇವನಾದ ಪರಮೇಶ್ವರನ ಪಾದಗಳಿಗೆ ನಮಸ್ಕರಿಸಿ ಆಮೇಲೆ ವಿಸರ್ಜನೆಮಾಡಬೇಕು. ಎಲೈ ಸನತ್ಕುಮಾರನೇ, ಸಮಸ್ತ ವೇದಗಳಲ್ಲಿಯೂ ಗೂಢವಾಗಿ ಹೇಳಲ್ಪಟ್ಟಿರುವ ಈ ಶಿವಾರ್ಚನಾಪದ್ಧತಿಯನ್ನು ನಿನಗೆ ಸಂಕ್ಷೇಪವಾಗಿ ವಿವರಿಸಿರುವೆನು.

॥ ಸೂತ ಉವಾಚ ॥

ಸನತ್ಕುಮಾರೋ ಭಗವಾನ್ ಶ್ರುತವಾನ್ ಯಚ್ಛಿವಾರ್ಚನಂ ।
ನಂದೀಶ್ವರಾದ್ಭಗವತಸ್ತನ್ಮಯಾ ಕಥಿತಂ ದ್ವಿಜಾಃ ॥ ೪೭ ॥

ಯಃ ಪಠೇತ್ಪ್ರಯತೋ ಭಕ್ತ್ಯಾ ಶಿವಾರ್ಚನವಿಧಿಕ್ರಮಂ ।
ಸರ್ವಪಾಪವಿನಿರ್ಮುಕ್ತೋ ಬ್ರಹ್ಮಲೋಕೇಮಹೀಯತೇ ॥ ೪೮ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಶಿವಪೂಜಾವಿಧಿ ಕಥನಂ ನಾಮ
ದ್ವಿಚತ್ವಾರಿಂಶೋಽಧ್ಯಾಯಃ.

---

೪೭. ಎಂದು ನಂದೀಶ್ವರನು ಸನತ್ಕುಮಾರ ಋಷಿಗೆ ಹೇಳಿದ ಶಿವಾರ್ಚನಾ ಕ್ರಮವನ್ನೇ, ಎಲೈ ಬ್ರಾಹ್ಮಣಶ್ರೇಷ್ಠರೇ, ಈಗ ಅದನ್ನೇ ನಿಮಗೆ ತಿಳಿಸಿರುವೆನು.

೪೮. ಯಾರು ಈ ಶಿವಾರ್ಚನಾಪದ್ಧತಿಯನ್ನು ಭಕ್ತಿಯಿಂದ ಪಠಿಸುವರೋ, ಅವರು ಸಮಸ್ತ ಪಾಪಮುಕ್ತರಾಗಿ ಕೊನೆಗೆ ಬ್ರಹ್ಮಲೋಕವನ್ನು ಹೊಂದುವರೆಂದು ಶ್ರೀ ಸೂತಮಹರ್ಷಿಗಳು ಶೌನಕಾದಿಗಳಿಗೆ ವಿವರಿಸಿ ಹೇಳಿದರು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ
ಸಂವಾದರೂಪವಾಗಿ ಶಿವಪೂಜಾವಿಧಿ ನಿರೂಪಣವೆಂಬ
ನಲವತ್ತೆರಡನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ತ್ರಿಚತ್ವಾರಿಂಶೋಽಧ್ಯಾಯಃ

॥ ಸೂತ ಉವಾಚ ॥

ಅನ್ಯದ್ವ್ರತಂ ಪಾಪಹರಂ ಧರ್ಮಕಾಮಾರ್ಥಮೋಕ್ಷದಂ ।
ಉಮಾಮಹೇಶ್ವರಂ ನಾಮ ವ್ರತಂ ತ್ರೈಲೋಕ್ಯವಿಶ್ರುತಂ ॥ ೧ ॥

ಪೌರ್ಣಮಾಸ್ಯಾಮಮಾವಾಸ್ಯಾಂ ಚತುರ್ದಶ್ಯಷ್ಟಮೀ ತಥಾ ।
ಕಾರ್ಯಮೇತಾಸು ತಿಥಿಷು ನಕ್ತಮೇತದ್ದ್ವಿಜೋತ್ತಮಾಃ ॥ ೨ ॥

ಬ್ರಹ್ಮಚಾರೀ ಹವಿಷ್ಯಾಶೀ ಸತ್ಯವಾದೀ ಸುಸಂಯಮೀ ।
ವರ್ಷಾಂತೇ ಪ್ರತಿಮಾ ಕಾರ್ಯಾ ಹೇಮ್ನಾ ವಾ ರಜತೇನ ಚ ॥ ೩ ॥

ನಲವತ್ತುಮೂರನೆಯ ಅಧ್ಯಾಯ.

೧. ಮತ್ತೆ ಶೌನಕಾದಿಗಳನ್ನು ಕುರಿತು, ಸೂತಮಹರ್ಷಿಗಳು "ಋಷಿಗಳೇ, ಉಮಾಮಹೇಶ್ವರವ್ರತವೆಂಬ ಒಂದು ಉತ್ತಮವಾದ ವ್ರತವಿರುವುದು. ಅದು ಜನರಿಗೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನೂ ಕೊಡುವುದು.

೨. ಈ ವ್ರತವನ್ನು ಪೂರ್ಣಿಮಾ, ಅಮಾವಾಸ್ಯೆ, ಚತುರ್ದಶೀ, ಅಷ್ಟಮಿ, ಮುಂತಾದ ತಿಥಿಗಳಲ್ಲಿ ಮಾಡಬೇಕು. ಆ ದಿವಸಗಳ ರಾತ್ರಿಯೇ, ಈ ಪೂಜೆಗೆ ಯೋಗ್ಯವಾದ ಕಾಲವು.

೩. ಈ ವ್ರತವನ್ನಾಚರಿಸುವವನು, ಆ ದಿನ ಬ್ರಹ್ಮಚಾರಿಯಾಗಿಯೂ ಹವಿಸ್ಸನ್ನು ಮಾತ್ರ ತಿನ್ನುವವನಾಗಿಯೂ, ಸತ್ಯವಾದಿಯಾಗಿಯೂ, ಜಿತೇಂದ್ರಿಯನಾಗಿಯೂ ಇರಬೇಕು. ಹೀಗೆ ವರ್ಷದವರೆಗೂ ವ್ರತಮಾಡಿ ವರ್ಷಾಂತ್ಯದಲ್ಲಿ ಚಿನ್ನದಿಂದಾಗಲಿ, ಬೆಳ್ಳಿಯಿಂದಾಗಲಿ ಪ್ರತಿಮೆಯನ್ನು ಮಾಡಿಸಬೇಕು.

ಪಂಚಾಮೃತೈಸ್ತು ಸಂಸ್ನಾಪ್ಯ ಪೂಜಯೇದ್ವಿಧಿವದ್ದ್ವಿಜಾಃ ।
ವಸ್ತ್ರೈಃ ಪುಷ್ಪೈರಲಂಕೃತ್ಯ ಭಕ್ಷ್ಯೈರ್ನಾನಾವಿಧೈಃ ಶುಭೈಃ ॥ ೪ ॥

ದೃಢೈರ್ವಿತಾನೈಶ್ಚಮರೈರ್ಯಥಾ ಶೋಭಾಂ ಪ್ರಕಲ್ಪಯೇತ್ ।
ಆಚಾರ್ಯಂ ಪೂಜಯೇದ್ಭಕ್ತ್ಯಾ ವಸ್ತ್ರಾಲಂಕಾರಭೂಷಣೈಃ ॥ ೫ ॥

ಭಕ್ತ್ಯಾ ಚ ದಕ್ಷಿಣಾಂ ದದ್ಯಾತ್ ಶಿವಭಕ್ತಾಂಶ್ಚ ಭೋಜಯೇತ್ ।
ಶೈವಮೇಕಂ ತು ಸಂಭೋಜ್ಯ ಶತಭೋಜ್ಯಫಲಂ ಲಭೇತ್ ॥ ೬ ॥
ಸತ್ಯಂ ಸತ್ಯಂ ಪುನಸ್ಸತ್ಯಂ ದೇವಸ್ಯ ವಚನಂ ಯಥಾ ।
ಪ್ರತಿಮಾಂ ಪೂಜಿತಾಂ ಪಶ್ಚಾತ್ತಾಮ್ರಪಾತ್ರೇ ಸುನಿರ್ಮಲೇ ॥ ೭ ॥
ನಿಧಾಯ ಸಿತವಸ್ತ್ರೇಣ ಸಂಛಾದ್ಯ ಶಿರಸಾ ನಮೇತ್ ।

ಶಂಖತೂರ್ಯಾದಿ ನಿರ್ಘೋಷೈಃ ಶಿವಸ್ಯಾಽಽಯತನಂ ಮಹತ್ ।
ಪುನರ್ವೇದ್ಯಾಂ ಸುಸಂಸ್ಥಾಪ್ಯ ವ್ರತಂ ಶಂಭೋರ್ನಿವೇದಯೇತ್ ॥ ೮ ॥

---

೪. ಆ ಪ್ರತಿಮೆಯನ್ನು ಪಂಚಾಮೃತಗಳಿಂದಲೂ, ವಸ್ತ್ರಪುಷ್ಪಾದಿಗಳಿಂದಲೂ ಅರ್ಚಿಸಿ, ನಾನಾವಿಧವಾದ ಭಕ್ಷ್ಯಭೋಜ್ಯಗಳನ್ನು ನಿವೇದಿಸಬೇಕು.

೫. ಪೂಜಾಮಂಟಪವನ್ನು ಧ್ವಜಪತಾಕೆಗಳಿಂದಲೂ, ಮೇಲ್ಕಟ್ಟುಗಳಿಂದಲೂ, ಚಾಮರಾದಿಗಳಿಂದಲೂ ಅಲಂಕರಿಸಬೇಕು. ವ್ರತಾಚರಣೆಗೆ ಮುಂಚೆ ಒಬ್ಬ ಆಚಾರ್ಯನನ್ನು ಅರ್ಚಿಸಿ, ಆ ಆಚಾರ್ಯನನ್ನು ವಸ್ತ್ರಾಲಂಕಾರ ಭೂಷಣಗಳಿಂದ ಅರ್ಚನೆ ಮಾಡಬೇಕು.

೬. ಶಿವಾರಾಧಕರಿಗೆ ಯಥಾಶಕ್ತಿಯಾಗಿ ದಕ್ಷಿಣಾದಿಗಳನ್ನು ಕೊಟ್ಟು, ಅವರನ್ನು ಭೋಜನ ಮಾಡಿಸಬೇಕು. ಒಬ್ಬ ಶಿವಭಕ್ತನಿಗೆ ಭೋಜನ ಮಾಡಿಸಿದರೆ, ನೂರು ಬ್ರಾಹ್ಮಣ ಸಮಾರಾಧನೆಯ ಫಲವು ದೊರಕುವುದು. ಇದು ನಿಶ್ಚಯವಾದ ಮಾತು. ಭಗವಂತನೂ ಹೀಗೆ ಅಪ್ಪಣೆ ಕೊಟ್ಟಿರುವನು.

೭. ಭಕ್ತಿಯಿಂದ ಅರ್ಚಿತವಾದ ಪ್ರತಿಮೆಯನ್ನು ತಾಮ್ರದ ಕಲಶದಲ್ಲಿಟ್ಟು, ಬಿಳಿಯ ವಸ್ತ್ರವನ್ನು ಹೊದಿಸಿ, ಆ ಪ್ರತಿಮೆಗೆ ನಮಸ್ಕಾರಾದಿಗಳನ್ನು ಮಾಡಬೇಕು.

೮. ಅನಂತರ ಆ ವಿಗ್ರಹವನ್ನು ತೆಗೆದುಕೊಂಡು, ಶಂಖ, ತುತ್ತೂರಿಯೇ, ಮೊದಲಾದ ಮಂಗಳವಾದ್ಯಗಳಿಂದ ಶಿವಾಲಯವನ್ನು ಪ್ರವೇಶಿಸಬೇಕು. ಅಲ್ಲಿ ಆ ವಿಗ್ರಹವನ್ನು ಒಂದು ವೇದಿಕೆಯ ಮೇಲಿರಿಸಿ, ಆ ವ್ರತವನ್ನೆಲ್ಲಾ ಆ ಪ್ರತಿಮೆಯೊಂದಿಗೆ ಶ್ರೀ ಮಹೇಶ್ವರನಿಗೆ ಸಮರ್ಪಿಸಬೇಕು.

ಶಿವಂ ಪ್ರದಕ್ಷಿಣೀಕೃತ್ಯ ಪಶ್ಚಾದ್ದೇವಂ ಕ್ಷಮಾಪಯೇತ್ ।
ಶ್ರದ್ಧಯಾ ಯಃ ಕರೋತೀದಂ ವ್ರತಂ ತ್ರಿದಶಪೂಜಿತಂ ॥
ಸೂರ್ಯಾಯುತಪ್ರತೀಕಾಶಂ ವಿಮಾನಂ ಸಾರ್ವಕಾಮಿಕಂ ॥ ೧೦ ॥

ಆರುಹ್ಯ ಸ್ತ್ರೀಸಹಸ್ರೈಶ್ಚ ಗಣೈರ್ನಾನಾವಿಧೈರ್ವೃತಃ ।
ಯಾತಿ ಮಾಹೇಶ್ವರಂ ಸ್ಥಾನಂ ಯತ್ರ ಗತ್ವಾ ನ ಶೋಚತಿ ॥ ೧೧ ॥

ತತ್ರ ಮಾಹೇಶ್ವರಾನ್ ಭೋಗಾನ್ ಭುಕ್ತ್ವಾ ಕಲ್ಪಶತತ್ರಯಂ ।
ತದಂತೇ ವೈಷ್ಣವಾನ್ ಭೋಗಾನ್ ಭುಂಕ್ತೇ ವಿಷ್ಣೋಃ ಸಮೀಪತಃ ॥೧೨॥

ಪಶ್ಚಾದ್ಭೋಗಸಮಾಯುಕ್ತೋ ಬ್ರಹ್ಮಲೋಕೇ ಮಹೀಯತೇ ।
ಬ್ರಹ್ಮಲೋಕಾತ್ಪರಿಭ್ರಷ್ಟಃ ಪ್ರಾಜಾಪತ್ಯಾನ್ ಸಮಶ್ನುತೇ ॥ ೧೩ ॥

---

೧೦. ಅಲ್ಲಿ ಪುನಃ ಶಿವಲಿಂಗವನ್ನು ಪ್ರದಕ್ಷಿಣಾದಿಗಳಿಂದ ಅರ್ಚಿಸಿ, ವ್ರತ ಲೋಪದ ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕು. ಯಾರು ಬೇಕಾದರೂ ಈ ವ್ರತ ವನ್ನು ಶ್ರದ್ಧೆಯಿಂದ ಮಾಡಬಹುದು ಈ ವ್ರತವು ದೇವತೆಗಳಿಂದಲೂ ಆಚರಿಸಲ್ಪ ಟ್ಟಿದೆ.

೧೧. ಯಾರು ಈ ವ್ರತವನ್ನು ಭಕ್ತಿಯಿಂದಾಚರಿಸುವರೋ, ಅವರು ತಮ್ಮ ದೇಹತ್ಯಾಗಾನಂತರದಲ್ಲಿ ದಶ ಸಹಸ್ರ ಸೂರ್ಯ ಕಿರಣಗಳಂತೆ ಪ್ರಕಾಶಿಸುವ ದಿವ್ಯವಿಮಾನ ವನ್ನೇರಿ, ನಾನಾ ವಿಧವಾದ ಅಪ್ಸರ ಸ್ತ್ರೀಯರಿಂದ ಪರಿವೃತರಾಗಿ, ಆನಂದಮಯವಾದ ಶಿವಸಾನ್ನಿಧ್ಯವನ್ನು ಹೊಂದುವರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

೧೨. ಹಾಗೆ, ಶಿವಲೋಕದಲ್ಲಿ ಮುನ್ನೂರು ಕಲ್ಪಪರ್ಯಂತ ನಾನಾ ಸುಖ ಗಳನ್ನನುಭವಿಸಿ ಕೊನೆಗೆ ವಿಷ್ಣುಲೋಕದ ಶಾಶ್ವತವಾದ ಸೌಖ್ಯಗಳನ್ನು ವಿಷ್ಣುವಿನ ಸಮೀಪದಲ್ಲಿದ್ದೇ ಅನುಭವಿಸುವರು.

೧೩. ಆ ವೈಷ್ಣವ ಸುಖಾನುಭವಾನಂತರದಲ್ಲಿ ಬ್ರಹ್ಮಲೋಕವನ್ನು ಹೊಂದಿ ಅಲ್ಲಿ ಬ್ರಹ್ಮಾನಂದವನ್ನು ಅನುಭವಿಸಿ, ಅಲ್ಲಿಂದ ಮುಂದೆ ಪ್ರಾಜಾಪತ್ಯ ಲೋಕವನ್ನು ಹೊಂದುವರು.

ತಸ್ಮಾಲ್ಲೋಕಾಚ್ಚ್ಯುತಃ ಪಶ್ಚಾತ್ಸರ್ವಲೋಕನಮಸ್ಕೃತಃ ।
ಸೋಮಲೋಕಂ ಸಮಾಸಾದ್ಯ ಭುಕ್ತ್ವಾ ಭೋಗಾನ್ಯಥೇಪ್ಸಿತಾನ್ ॥ ೧೪ ॥

ಸೋಮಾದ್ದೇವೇಂದ್ರಗಂಧರ್ವಯಕ್ಷಲೋಕಮನುತ್ತಮಂ ।
ಭುಕ್ತ್ವಾ ತತ್ರ ಮಹಾಭೋಗಾನ್ ತದಂತೇ ಮೇರುಮೂರ್ಧನಿ ॥ ೧೫ ॥

ತದಂತೇ ಲೋಕಪಾಲಾನಾಂ ಲೋಕಾನಾಸಾದ್ಯ ಮೋದತೇ ।
ತತಃ ಕರ್ಮಾವಶೇಷೇಣ ಪೃಥಿವ್ಯಾಮೇಕರಾಡ್ಭವೇತ್ ॥ ೧೬ ॥

ಉಮಾಮಹೇಶ್ವರಂ ನಾಮ ವ್ರತಂ ಸರ್ವಸುಖಪ್ರದಂ ।
ಶಂಕರೇಣ ಪುರಾ ಗೀತಂ ಪಾರ್ವತ್ಯಾಃ ಷಣ್ಮುಖಸ್ಯ ಚ ॥ ೧೭ ॥

ಅಗಸ್ತ್ಯಃ ಷಣ್ಮುಖಾಲ್ಲಬ್ಧ್ವಾ ಪ್ರಾಪ್ತವಾನ್ಮೇ ಗುರುಸ್ತತಃ ।
ದ್ವೈಪಾಯನಾನ್ಮುನಿವರಾನ್ ಪ್ರಾಪ್ತವಾನಹಮುತ್ತಮಂ ॥ ೧೮ ॥

---

೧೪. ಪ್ರಾಜಾಪತ್ಯಲೋಕದ ಸುಖಾನುಭವಾನಂತರದಲ್ಲಿ ಸೋಮಲೋಕವನ್ನು ಹೊಂದುವನು. ಅಲ್ಲಿ ಸರ್ವರಿಂದಲೂ ವಂದಿತನಾಗಿ ಸಕಲ ಇಷ್ಟಾರ್ಥಗಳನ್ನು ಪಡೆದು ಸುಖಿಯಾಗಿರುವರು.

೧೫. ಸೋಮಲೋಕದಿಂದ ಮುಂದೆ, ದೇವೇಂದ್ರ, ಗಂಧರ್ವ, ಯಕ್ಷ ಇವರೇ ಮೊದಲಾದ ದೇವಶ್ರೇಷ್ಠರ ಲೋಕಗಳನ್ನು ಹೊಂದಿ, ಅಲ್ಲಿನ ಭೋಗಗಳನ್ನು ಅನುಭವಿಸಿ, ಕೊನೆಗೆ ಮೇರು ಪರ್ವತದ ಅಗ್ರಭಾಗದಲ್ಲಿ ವಾಸಿಸುವರು.

೧೬. ಅಲ್ಲಿಂದ ಮುಂದೆ ಅಷ್ಟದಿಕ್ಪಾಲಕರ ಲೋಕಗಳನ್ನೆಲ್ಲಾ ಸೇರಿ, ಅಲ್ಲಿ ಸಮಸ್ತ ಭೋಗ ಭಾಗ್ಯಗಳನ್ನು ಅನುಭವಿಸಿ, ತಮ್ಮ ಕರ್ಮಶೇಷದಿಂದ ಭೂಮಿಯಲ್ಲಿ ಚಕ್ರವರ್ತಿಯಾಗಿ ಜನಿಸುವರು.

೧೭. ಇಂಥ ಶ್ರೇಷ್ಠವಾದ ಮತ್ತು ಸಮಸ್ತ ಸುಖಪ್ರದವಾದ ಉಮಾಮಹೇಶ್ವರ ವ್ರತ ವಿಧಾನವನ್ನು, ಹಿಂದೆ ಸಾಕ್ಷಾತ್ಪರಮೇಶ್ವರನೇ ಪಾರ್ವತಿಗೂ, ತನ್ನ ಮಗನಾದ ಷಣ್ಮುಖನಿಗೂ ತಿಳಿಸಿರುವನು.

೧೮. ಎಲೈ, ಶೌನಕಾದಿಗಳೇ, ಅಗಸ್ತ್ಯಋಷಿಗೆ ಈ ವ್ರತನಿಧಾನವನ್ನು ಮೊದಲು ಷಣ್ಮುಖನು ಹೇಳಿದನು. ಅಗಸ್ತ್ಯರಿಂದ ವ್ಯಾಸಮಹರ್ಷಿಗಳೂ, ವ್ಯಾಸಮಹರ್ಷಿಗಳಿಂದ ನಾನೂ ತಿಳಿದಿರುವೆನು. ಅದನ್ನು ನಿಮಗೆ ಈಗ ತಿಳಿಯ ಹೇಳುವೆನು.

ಅನ್ಯಚ್ಛೂಲವ್ರತಂ ನಾಮ ಶೃಣುಧ್ವಂ ಮುನಿಪುಂಗವಾಃ ।
ಅಮಾವಾಸ್ಯಾಂ ನಿರಾಹಾರೋ ಭವೇದಬ್ದಂ ಸುಸಂಯಮೀ ॥ ೧೯ ॥

ಶೂಲಂ ಪಿಷ್ಟಮಯಂ ಕೃತ್ವಾ ವರ್ಷಾಂತೇ ವಿನಿವೇದಯೇತ್ ।
ಶಿವಾಯ ರಾಜತಂ ಪದ್ಮಂ ಸುವರ್ಣಂ ಕೃತಕರ್ಣಿಕಂ ॥ ೨೦ ॥

ಭಕ್ತ್ಯಾ ತು ವಿನ್ಯಸೇನ್ಮೂರ್ಧ್ನಿ ಸರ್ವಮನ್ಯಚ್ಚ ಪೂರ್ವವತ್ ।
ಬ್ರಹ್ಮಹತ್ಯಾದಿಭಿಃ ಪಾಪೈರ್ಮುಕ್ತೋ ಯಾತಿ ಪರಾಂ ಗತಿಂ ॥ ೨೧ ॥

ಲೋಕಾನ್ ಪೂರ್ವೋದಿತಾನ್ ಪ್ರಾಪ್ಯ ತದಂತೇ ಪೃಥಿವೀಪತಿಃ ।
ಪೂರ್ಣಮಾಸ್ಯಾಮಮಾವಾಸ್ಯಾಮಬ್ದಮೇಕಂ ದೃಢವ್ರತಃ ॥ ೨೨ ॥

ವರ್ಷಾಂತೇ ಸರ್ವಗಂಧಾಢ್ಯಾಂ ಪ್ರತಿಮಾಂ ವಿನಿವೇದಯೇತ್ ।
ಪೂರ್ವವತ್ಫಲಮಾಪ್ನೋತಿ ವ್ರತೇನಾನೇನ ವೈ ದ್ವಿಜಾಃ ॥ ೨೩ ॥

---

೧೯. ಎಲೈ ಋಷಿವರ್ಯರೇ, ನಿಮಗೆ ಮತ್ತೊಂದು ಶೂಲವ್ರತವೆಂಬುದನ್ನು ಈಗ ತಿಳಿಸುವೆನು. ಆ ವ್ರತಮಾಡುವವರು ಅಮಾವಾಸ್ಯೆಯ ದಿನ ಆಹಾರವಿಲ್ಲದೆ ಉಪವಾಸವಿದ್ದು ಒಂದು ವರ್ಷಪರ್ಯಂತ ಈ ವ್ರತವನ್ನು ಆಚರಿಸಬೇಕು.

೨೦. ಆ ದಿವಸ, ಹಿಟ್ಟಿನಿಂದ ಒಂದು ತ್ರಿಶೂಲವನ್ನು ಮಾಡಿ, ಅದನ್ನು ವರ್ಷಪರ್ಯಂತ ರಕ್ಷಿಸಿ ಪೂಜಿಸಬೇಕು. ಈ ವ್ರತಾಂಗವಾಗಿ ಪರಮೇಶ್ವರನಿಗೆ ಬೆಳ್ಳಿಯಿಂದ ಒಂದು ಕಮಲವನ್ನೂ ಅದರಲ್ಲಿ ಚಿನ್ನದಿಂದ ಕೇಸರಗಳನ್ನೂ ಮಾಡಿಸಬೇಕು.

೨೧. ಆ ಕಮಲವನ್ನು ಆ ತ್ರಿಶೂಲದ ಅಗ್ರಭಾಗದಲ್ಲಿಟ್ಟು, ಉಮಾಮಹೇಶ್ವರ ವ್ರತ ವಿಧಾನದಂತೆಯೇ ಅರ್ಚನೆ ಮಾಡಬೇಕು. ಈ ವ್ರತಾಚರಣೆಯಿಂದ ಸಮಸ್ತ ಪಾಪಗಳನ್ನು ಕಳೆದುಕೊಂಡು ಉತ್ತಮವಾದ ಲೋಕಗಳನ್ನು ಹೊಂದಬಹುದು.

೨೨ ಅಲ್ಲದೆ, ಹಿಂದೆ ಹೇಳಿದ ಸಮಸ್ತ ಲೋಕಗಳನ್ನು ಹೊಂದಿ ಆಯಾ ಸುಖಗಳನ್ನನುಭವಿಸಿ, ಪೂರ್ಣಿಮಾ, ಮತ್ತು ಅಮಾವಾಸ್ಯಾದಿಗಳಲ್ಲಿ ವರ್ಷ ಪರ್ಯಂತ ಈ ವ್ರತವನ್ನಾಚರಿಸಬೇಕು.

೨೩. ಹೀಗೆ ಒಂದು ವರ್ಷ ಕಳೆದ ಮೇಲೆ, ಗಂಧದಿಂದ ಆ ಶೂಲ ಪ್ರತಿಮೆಯನ್ನು ಅರ್ಚಿಸಿ, ಅದನ್ನು ದಾನಮಾಡಬೇಕು. ಈ ವ್ರತದಿಂದಲೂ ಉಮಾಮಹೇಶ್ವರ ವ್ರತದ ಫಲವನ್ನು ಪಡೆಯಬಹುದು

ಅಷ್ಟಮ್ಯಾಂ ಚ ಚತುರ್ದಶ್ಯಾಮುಪವಾಸೀ ಜಿತೇಂದ್ರಿಯಃ ।
ಸರ್ವಭೋಗಸಮಾಯುಕ್ತಃ ಶಿವಲೋಕೇ ಮಹೀಯತೇ ॥ ೨೪ ॥

ಕ್ಷಮಾ ಸತ್ಯಂ ದಯಾ ದಾನಂ ಶೌಚಮಿಂದ್ರಿಯನಿಗ್ರಹಃ ।
ಶಿವಪೂಜಾಗ್ನಿಹವನಂ ಸಂತೋಷೋಽಸ್ತೇಯತಾ ತಥಾ ॥ ೨೫ ॥
ಸರ್ವವ್ರತೇಷ್ವಯಂ ಧರ್ಮಃ ಸಾಮಾನ್ಯೋ ದಶಧಾ ಸ್ಮೃತಃ ॥ ೨೬ ॥

ಅನ್ಯದ್ವ್ರತಂ ಪಾಪಹರಂ ಶೃಣುಧ್ವಂ ಮುನಿಪುಂಗವಾಃ ।
ಷಣ್ಮುಖಸ್ಯ ಪುರಾ ಪ್ರೋಕ್ತಂ ದೇವದೇವೇನ ಶಂಭುನಾ ॥ ೨೭ ॥

ಕೈಲಾಸಶಿಖರಾಸೀನಂ ದೇವದೇವಂ ಜಗದ್ಗುರುಂ ।
ಪ್ರಣಮ್ಯ ವಿಧಿವದ್ಭಕ್ತ್ಯಾ ಪಪ್ರಚ್ಛ ಗಿರಿಜಾಸುತಃ ॥ ೨೮ ॥

---

೨೪. ಪ್ರತಿ ಅಷ್ಟಮೀ ತಿಥಿಯಲ್ಲೂ, ಚತುರ್ದಶೀ ತಿಥಿಯಲ್ಲಿಯೂ ಜಿತೇಂದ್ರಿಯನಾಗಿ ನಿರಾಹಾರ ವ್ರತದಿಂದ ಯಾರು ಶಿವಾರಾಧನೆಯನ್ನು ಮಾಡುವರೋ ಅವರು ಸಮಸ್ತೈಶ್ವರ್ಯ ಸಂಪನ್ನರಾಗಿ ಶಿವಲೋಕದಲ್ಲಿ ನೆಲಸುವರು.

೨೫–೨೬. ಯಾವ ವ್ರತಮಾಡಬೇಕಾದರೂ ಮೊದಲು ಈ ದಶಧರ್ಮಗಳನ್ನು ಕಾಪಾಡಿಕೊಂಡಿರಬೇಕು. ತಾಳ್ಮೆ, ಸತ್ಯ, ದಯಾ, ದಾನ, ಶುಚಿತ್ವ, ಇಂದ್ರಿಯನಿಗ್ರಹ, ಶಿವಾರ್ಚನೆ, ಅಗ್ನಿಪೂಜಾ, ಸಂತೋಷ, ಕಳ್ಳತನವಿಲ್ಲದಿರುವಿಕೆ, ಈದಶಧರ್ಮಗಳು ಸರ್ವವ್ರತಗಳಲ್ಲಿಯೂ ಮುಖ್ಯವಾದವುಗಳು.

೨೭. ಎಲೈ ಋಷೀಶ್ವರರೇ, ಸರ್ವಪಾಪಹರವಾದ ಮತ್ತೊಂದು ವ್ರತವಿಧಾನವನ್ನು ನಿಮಗೆ ತಿಳಿಸುವೆನು. ಈ ವ್ರತವಿಧಾನವು ಹಿಂದೆ ಸಾಕ್ಷಾನ್ಮಹೇಶ್ವರನಿಂದಲೇ ಷಣ್ಮುಖಸ್ವಾಮಿಗೆ ಉಪದೇಶಿಸಲ್ಪಟ್ಟಿತು.

೨೮. ಹಿಂದೆ ಒಂದು ಸಾರೀ ಪಾರ್ವತೀ ಪುತ್ರನಾದ ಷಣ್ಮುಖಸ್ವಾಮಿಯು, ಕೈಲಾಸಪರ್ವತದಲ್ಲಿ ಸುಖವಾಗಿ ಕುಳಿತಿದ್ದ, ಜಗದ್ರಕ್ಷಕನಾದ ಮಹೇಶ್ವರನಿಗೆ ವಂದಿಸಿ, ಹೀಗೆ ಪ್ರಶ್ನೆ ಮಾಡಿದನು.

॥ ಸ್ಕಂದ ಉವಾಚ ॥

ಕೇನ ವ್ರತೇನ ಭಗವಾನ್ ಸೌಭಾಗ್ಯಮತುಲಂ ಭವೇತ್ ।
ಪುತ್ರಪೌತ್ರಧನೈಶ್ವರ್ಯಂ ಮನುಜಃ ಸುಖಮೇಧತೇ ॥ ೨೯ ॥

ತನ್ಮೇ ವದ ಮಹಾದೇವ ವ್ರತಾನಾಮುತ್ತಮಂ ವ್ರತಂ ।
ಯೇನ ಚೀರ್ಣೇನ ದೇವೇಶ ನರೋ ರಾಜ್ಯಂ ಚ ವಿಂದತಿ ॥ ೩೦ ॥

ರಾಜ್ಞೀವ ಜಾಯತೇ ನಾರೀ ಅಪಿ ದಾಸಕುಲೋದ್ಭವಾ ।
ರಾಜಪುತ್ರೋ ಜಯೇಚ್ಛತ್ರೂನ್ ಗರುಡಃ ಪನ್ನಗಾನಿವ ॥ ೩೧ ॥

ಬ್ರಾಹ್ಮಣೋ ಬ್ರಹ್ಮವರ್ಚಸ್ಯಂ ಪ್ರಾಪ್ಯ ಸರ್ವಾಧಿಕೋ ಭವೇತ್ ।
ವರ್ಣಾಶ್ರಮವಿಹೀನೋಽಪಿ ಸೋಽಪಿ ಸಿದ್ಧಿಂ ಚ ವಿಂದತಿ ॥ ೩೨ ॥

---

೨೯. "ಸ್ವಾಮಿಯೇ, ಯಾವ ವ್ರತವನ್ನು ಆಚರಿಸಿದರೆ ಮನುಷ್ಯನು ಪುತ್ರ ಪೌತ್ರಾದಿ ಬಂಧುವರ್ಗಗಳಿಂದೊಡಗೂಡಿ, ಐಶ್ವರ್ಯಸಂಪನ್ನನಾಗಿ ಸುಖಪಡೆಯುವನು ?

೩೦. ಯಾವ ವ್ರತಾಚರಣೆಯಿಂದ ಸಾಮಾನ್ಯ ಮನುಷ್ಯನು ರಾಜನಾಗ ಬಹುದು? ಅಂಥ ಅತ್ಯುತ್ತಮವಾದ ವ್ರತವನ್ನು ನನಗೆ ತಿಳಿಸುವೆಯಾ?

೩೧. ಸೇವಕಿಯಾಗಿ ಹುಟ್ಟಿದ ಹೆಂಗಸು ಯಾವ ವ್ರತವನ್ನು ಮಾಡಿದರೆ ಮಹಾರಾಣಿಯಂತಹ ಪದವಿಯನ್ನು ಪಡೆಯಬಹುದು ? ರಾಜಪುತ್ರನು, ಗರುಡನು ಹಾವುಗಳನ್ನು ಕೊಲ್ಲುವಂತೆ, ಯಾವ ವ್ರತಾನುಷ್ಠಾನ ಮಹಿಮೆಯಿಂದ ಶತ್ರುಗಳನ್ನು ಧ್ವಂಸಮಾಡಿಯಾನು ?

೩೨. ಬ್ರಾಹ್ಮಣನು ತನ್ನ ವರ್ಣಾಶ್ರಮ ಧರ್ಮ ಪರಿತ್ಯಾಗ ಮಾಡಿದ್ದರೂ, ಉತ್ತಮವಾದ ಬ್ರಹ್ಮವರ್ಚಸ್ಸಿನಿಂದ ಕೂಡಿ, ಎಲ್ಲರಿಗಿಂತಲೂ ಅಧಿಕನಾಗಿರಬೇಕಾದರೆ ಆತನು ಯಾವ ವ್ರತವನ್ನು ಆಚರಿಸಬೇಕು''? ಎಂದು ಸ್ಕಂದನು ಕೇಳಿಕೊಳ್ಳಲು, ಅದಕ್ಕೆ ಮಹೇಶ್ವರನು ಹೀಗೆ ಹೇಳಲಾರಂಭಿಸಿದನು.

॥ ಈಶ್ವರ ಉವಾಚ ॥

ಶೃಣು ವತ್ಸ ಪ್ರವಕ್ಷ್ಯಾಮಿ ವ್ರತಾನಾಮುತ್ತಮಂ ವ್ರತಂ ।
ಅಸ್ತಿ ದೂರ್ವಾಗಣಪತೇರ್ವ್ರತಂ ತ್ರೈಲೋಕ್ಯವಿಶ್ರುತಂ ॥ ೩೩ ॥

ಭಗವತ್ಯಾ ಪುರಾ ಚೀರ್ಣಂ ಪಾರ್ವತ್ಯಾ ಪದ್ಮಯಾ ಸಹ ।
ಸರಸ್ವತ್ಯಾ ಮಹೇಂದ್ರೇಣ ವಿಷ್ಣುನಾ ಧನದೇನ ಚ ॥ ೩೪ ॥

ಅನ್ಯೈಶ್ಚ ದೇವೈರ್ಮುನಿಭಿಃ ಗಂಧರ್ವೈಃ ಕಿಂನರೈಸ್ತಥಾ ।
ಚೀರ್ಣಮೇತದ್ವ್ರತಂ ಸರ್ವೈಃ ಪುರಾ ಕಲ್ಪೇ ಷಡಾನನ ॥ ೩೫ ॥

ಚತುರ್ಥೀ ಯಾ ಭವೇಚ್ಛುಕ್ಲಾ ನಭೋಮಾಸಸ್ಯ ಪುಣ್ಯದಾ ।
ತಸ್ಯಾಂ ವ್ರತಮಿದಂ ಕುರ್ಯಾತ್ ಕಾರ್ತಿಕ್ಯಾಂ ವಾ ಷಡಾನನ ॥ ೩೬ ॥

ಗಜಾನನಂ ಚತುರ್ಬಾಹುಮೇಕದಂತಂ ವಿಪಾಟಿತಂ ।
ವಿಧಾಯ ಹೇಮ್ನಾ ವಿಘ್ನೇಶಂ ಹೇಮಪೀಠಾಸನಸ್ಥಿತಂ ॥ ೩೭ ॥

---

೩೩. "ಮಗುವೇ, ಸ್ಕಂದನೇ, ಕೇಳು. ನೀನು ಕೇಳಿದಂತಹ ಫಲಗಳನ್ನು ಕೊಡುವ ವ್ರತವೊಂದುಂಟು. ಅದೇ ದೂರ್ವಾಗಣಪತಿ ವ್ರತವು. ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಗಿ ಅತ್ಯುತ್ತಮವೆನಿಸಿಕೊಂಡಿರುವ ವ್ರತವೆಂದರೆ ಅದೇ.

೩೪. ಹಿಂದೆ ಇದೇ ವ್ರತವನ್ನು ಪಾರ್ವತಿ, ಲಕ್ಷ್ಮೀ, ಸರಸ್ವತಿ ಇಂದ್ರ, ವಿಷ್ಣು, ಕುಬೇರ ಮುಂತಾದವರು ಭಕ್ತಿಯಿಂದ ಮಾಡಿ ಫಲವನ್ನು ಹೊಂದಿದ್ದಾರೆ.

೩೫. ಅದೂ ಅಲ್ಲದೆ ಹಿಂದಿನ ಕಲ್ಪದಲ್ಲಿ ಸಮಸ್ತರಾದ ದೇವತೆಗಳೂ, ಋಷಿಗಳೂ, ಕಿನ್ನರರೂ ಮೊದಲಾದವರೆಲ್ಲರೂ ಈ ದೂರ್ವಾಗಣಪತಿಯ ವ್ರತವನ್ನಾಚರಿಸಿರುವರು.

೩೬. ಶ್ರಾವಣಮಾಸದ ಅಥವಾ ಕಾರ್ತಿಕಮಾಸದ ಶುದ್ಧ ಚತುರ್ಥಿಯ ದಿನ ಈ ವ್ರತವನ್ನು ಮಾಡಬೇಕು.

೩೭. ಆ ದಿವಸ, ನಾಲ್ಕು ಕೈಗಳಿಂದಲೂ, ಒಂದು ದಂತದಿಂದಲೂ, ಕೂಡಿರುವ ಆನೆ ಮುಖದ ಗಣಪತಿಯ ವಿಗ್ರಹವನ್ನು ಚಿನ್ನದ ಪೀಠದ ಮೇಲೆ ಸ್ಥಾಪಿಸಿ ಪೂಜಿಸಬೇಕು.

ತಥಾ ಹೇಮಮಯೀಂ ದೂರ್ವಾಂ ತದಾಧಾರೇ ವ್ಯವಸ್ಥಿತಾಂ ।
ಸಂಸ್ಥಾಪ್ಯ ವಿಘ್ನಹರ್ತಾರಂ ಕಲಶೇ ತಾಮ್ರಭಾಜನೇ ॥ ೩೮ ॥

ವೇಷ್ಟಿತಂ ರಕ್ತವಸ್ತ್ರೇಣ ಸರ್ವತೋ ಭದ್ರಮಂಡಲೇ ।
ಪೂಜಯೇದ್ರಕ್ತಕುಸುಮೈಃ ಪತ್ರಿಕಾಭಿಶ್ಚ ಪಂಚಭಿಃ ॥ ೩೯ ॥

ಬಿಲ್ವಪತ್ರಮಪಾಮಾರ್ಗಂ ಶಮೀ ದೂರ್ವಾ ಹರಿಪ್ರಿಯಾ ।
ಅನ್ಯೈಃ ಸುಗಂಧಿಕುಸುಮೈಃ ಪತ್ರಿಕಾಭಿಃ ಸುಗಂಧಿಭಿಃ ॥ ೪೦ ॥

ಫಲೈಶ್ಚನೋದಕೈಃ ಪಶ್ಚಾದುಪಹಾರಂ ಪ್ರಕಲ್ಪಯೇತ್ ।
ಯಥಾವದುಪಚಾರೈಸ್ತು ಪೂಜಯಾಮಿ ಜಗತ್ಪತೇ ॥ ೪೧ ॥

---

೩೮. ಹಾಗೆಯೇ ಒಂದು ತಾಮ್ರಮಯವಾದ ಕಲಶದಲ್ಲಿ ಚಿನ್ನದಿಂದ ಒಂದು ಹುಲ್ಲುಗರಿಕೆಯನ್ನು ಮಾಡಿಸಿ, ಅದನ್ನು ಆ ಕಲಶದಲ್ಲಿಡಬೇಕು. ಅದರ ಮೇಲೆ ವಿಘ್ನೇಶ್ವರಮೂರ್ತಿಯನ್ನು ಇರಿಸಿ ಆರಾಧಿಸಬೇಕು.

೩೯. ಆ ಕಲಶವನ್ನು ಸರ್ವತೋ ಭದ್ರಮಂಡಲದ ಮೇಲಿರಿಸಿ, ಅದಕ್ಕೆ ಕೆಂಪು ವಸ್ತ್ರವನ್ನು ಹೊದಿಸಬೇಕು. ಆ ಕಲಶವನ್ನು, ಕೆಂಪು ಹೂವುಗಳಿಂದಲೂ ಪಂಚ, ಪತ್ರೆಗಳಿಂದಲೂ ಪೂಜಿಸಬೇಕು

೪೦. ಬಿಲ್ವಪತ್ರೆ, ಉತ್ತರಣೇ, ಬನ್ನಿ, ದೂರ್ವಾ, ತುಲಸಿ ಇವೇ ಐದು ತರಹ ಪತ್ರೆಗಳು. ಈ ಪತ್ರೆಗಳಿಂದ ಅರ್ಚಿಸಬೇಕು. ಅಲ್ಲದೆ ಸುವಾಸನೆಯುಳ ಇತರ ಹೂವುಗಳನ್ನೂ, ಪತ್ರೆಗಳನ್ನೂ ಗಣಪತಿಗೆ ಪೂಜಿಸಬಹುದು.

೪೧. ನಾನಾ ವಿಧವಾದ ಹಣ್ಣುಗಳನ್ನೂ, ಕಡಬು ಮೊದಲಾದ ಭಕ್ಷ್ಯಗಳನ್ನೂ, ದೇವರಿಗೆ ನಿವೇದನ ಮಾಡಬೇಕು. ಇನ್ನೂ ನಾನಾ ವಿಧವಾದ ಉಪಚಾರಗಳಿಂದ ಸ್ವಾಮಿಯನ್ನು ಪೂಜಿಸುತ್ತೇನೆಂದು ಸಂಕಲ್ಪ ಮಾಡಬೇಕು.

ಇತ್ಯುಕ್ತ್ವಾ ಶ್ರದ್ಧಯಾ ನೂನಂ ಪೂಜಯೇದ್ಗಿರಿಜಾಸುತಂ ।
ಏಹ್ಯೇಹಿ ದೇವ ಹೇರಂಬ ವಿಘ್ನರಾಜ ಗಜಾನನ ॥ ೪೨ ॥
ಉಪವಿಶ್ಯಾಸನಂ ದೇವ ಸರ್ವಕಾಮಪ್ರದೋ ಭವ ॥ ೪೨ ॥
(ಇತ್ಯಾವಾಹನ ಮಂತ್ರಃ)

ಉಮಾಸುತ ನಮಸ್ತುಭ್ಯಂ ವಿಶ್ವವ್ಯಾಪಿನ್ ಸನಾತನ ।
ವಿಘ್ನೌಘಂ ಛಿಂದಿ ಸಕಲಂ ಅರ್ಘ್ಯಂ ಪಾದ್ಯಂ ದದಾಮಿ ತೇ ॥ ೪೩ ॥
(ಇತ್ಯರ್ಘ್ಯಪಾದ್ಯಮಂತ್ರಃ)

ಗಣೇಶ್ವರಾಯ ದೇವಾಯ ಉಮಾಪುತ್ರಾಯ ವೇಧಸೇ ।
ಪೂಜಾಮುಥಪ್ರಯಚ್ಛಾಮಿ ಗೃಹಾಣ ಭಗವನ್ನಮಃ ॥ ೪೪ ॥
(ಇತಿ ಗಂಧಮಂತ್ರಃ)

---

೪೨. ಶ್ರದ್ಧೆಯಿಂದ ಸ್ವಾಮಿಯನ್ನು ಹೀಗೆ ಧ್ಯಾನಿಸಿ ಆವಾಹನೆಮಾಡಬೇಕು. "ಎಲೈ ವಿಘ್ನರಾಜನೇ, ಆನೆಯ ಮೊಗದಂತೆ ಮೊಗವುಳ್ಳವನೇ, ಈ ಕಲಶದಲ್ಲಿರುವ ಪ್ರತಿಮೆಯಲ್ಲಿ ಬಂದು ನೆಲಸು. ಈ ಪ್ರತಿಮೆಯಲ್ಲಿ ನೀನು ಯಾವಾಗಲೂ ನೆಲಸಿದ್ದು ನಮ್ಮ ಸಕಲೇಷ್ಟಾರ್ಥಗಳನ್ನು ದಯಪಾಲಿಸು." ಎಂಬುದೇ ಆವಾಹನಮಂತ್ರದ ಅರ್ಥವು.

೪೩. "ಎಲೈ ಪಾರ್ವತೀ ನಂದನನೇ, ವಿಶ್ವವ್ಯಾಪಕನೇ, ಆದಿಪುರುಷನೇ, ನಿನಗೆ ವಂದನೆಯು. ನಮ್ಮ ಸಕಲ ವಿಘ್ನಗಳನ್ನು ನಾಶಮಾಡು. ಪೂಜ್ಯವಾದ ಅರ್ಘ್ಯವನ್ನೂ, ಪಾದ್ಯವನ್ನೂ ನಿನಗೆ ಅರ್ಪಿಸುವೆನು." ಎಂಬುದೇ ಅರ್ಘ್ಯ, ಪಾದ್ಯ ಇವುಗಳ ದಾನಮಂತ್ರದ ಅರ್ಥ.

೪೪. "ಗಣಗಳಿಗೆ ಒಡೆಯನೂ, ಉಮಾ ಪುತ್ರನೂ, ಸೃಷ್ಟಿಕರ್ತನೂ, ಆದ ನಿನಗೆ ಸಕಲ ಪೂಜಾದ್ರವ್ಯಗಳನ್ನು ಅರ್ಪಿಸುವೆನು. ಅವೆಲ್ಲವನ್ನೂ ಸ್ವೀಕರಿಸು" ಎಂಬರ್ಥದ ಮಂತ್ರದಿಂದ ಗಂಧವನ್ನು ಲೇಪಿಸಬೇಕು.

ವಿನಾಯಕಾಯ ಶೂರಾಯ ವರದಾಯ ಗಜಾನನ ।
ಉಮಾಸುತಾಯ ದೇವಾಯ ಕುಮಾರಗುರವೇ ನಮಃ ॥ ೪೫ ॥
ಲಂಬೋದರಾಯ ವೀರಾಯ ಸರ್ವವಿಘ್ನೌಘಹಾರಿಣೇ ॥ ೪೬ ॥

(ಇತಿ ಪುಷ್ಪಮಂತ್ರಃ)

ಉಮಾಮಂಗಳಸಂಭೂತ ದಾನವಾನಾಂ ವಧಾಯ ವೈ ।
ಅನುಗ್ರಹಾಯ ಲೋಕಾನಾಂ ಸ ದೇವಃ ಪಾತು ವಿಶ್ವಭುಕ್ ॥ ೪೭ ॥

(ಇತಿ ಧೂಪಮಂತ್ರಃ)

ಪರಂ ಜ್ಯೋತಿಃ ಪ್ರಕಾಶಾಯ ಸರ್ವಸಿದ್ಧಿಪ್ರದಾಯ ಚ ।
ತುಭ್ಯಂ ದೀಪಂ ಪ್ರದಾಸ್ಯಾಮಿ ಮಹಾದೇವಾತ್ಮನೇ ನಮಃ ॥ ೪೮ ॥

(ಇತಿ ದೀಪಮಂತ್ರಃ)

೪೫-೪೬. "ವಿನಾಯಕನೂ, ಶೂರನೂ, ವರದನೂ, ಆದ ಗಣಪತಿಯೇ ನಿನಗೆ ವಂದನೆಯು. ಪಾರ್ವತೀ ಪುತ್ರನಾಗಿ ದೇವದೇವನಾಗಿ ಕುಮಾರಸ್ವಾಮಿಯ ಗುರುವಾದ ಗಣಪತಿಯೇ, ನಿನಗೆರಗುವೆನು. ಸಮಸ್ತ ವಿಘ್ನನಾಶಕನಾದ, ವೀರಾದಿ ವೀರನಾದ ಲಂಬೋದರನೇ ನಿನಗೆ ನಮಸ್ಕಾರವು" ಎಂದು ಹೇಳುತ್ತಾ ಪುಷ್ಪಗಳನ್ನು ಸಮರ್ಪಿಸಬೇಕು.

೪೭. "ಗೌರೀ ಪುತ್ರನೇ, ರಾಕ್ಷಸನಾಶಕ್ಕಾಗಿ ನೀನು ಉಮಾಸುತನಾಗಿ ಜನಿಸಿರುವೆ. ಲೋಕಾನುಗ್ರಹಕಾರಕನಾದ ಮತ್ತು ಲೋಕರಕ್ಷಕನಾದ ನೀನು ನನ್ನನ್ನು ರಕ್ಷಿಸು" ಎಂದು ಹೇಳುತ್ತಾ ಧೂಪವನ್ನು ಸಮರ್ಪಿಸಬೇಕು.

೪೮. "ಜ್ಯೋತೀರೂಪದಿಂದಿದ್ದು, ಸಮಸ್ತ ಸಿದ್ಧಿಗಳನ್ನು ಒದಗಿಸತಕ್ಕಂತಹ ಮಹಾದೇವಸ್ವರೂಪಿಯಾದ ನಿನಗೆ ದೀಪವನ್ನೂ ಸಮರ್ಪಿಸುವೆನು" ಎಂಬುದೇ ದೀಪ ಮಂತ್ರದ ಅರ್ಥವು.

ಗಣಾನಾಂ ತ್ವಾ ಗಣಪತಿಂ ಹವಾಮಹೇ ।
ಕವಿಂ ಕವೀನಾ ಮುಪಮಶ್ರವಸ್ತಮಂ ।
ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ ।
ಆ ನಃ ಶೃಣ್ವನ್ನೂತಿಭಿಃ ಸೀದ ಸಾದನಂ ॥ ೪೯ ॥
(ಇತ್ಯುಪಹಾರಮಂತ್ರಃ)

ಗಣೇಶ್ವರ ಗಣಾಧ್ಯಕ್ಷ ಗೌರೀಪುತ್ರ ಗಜಾನನ ।
ವ್ರತಂ ಸಂಪೂರ್ಣತಾಂ ಯಾತು ತ್ವತ್ಪ್ರಸಾದಾದಿಭಾನನ ॥ ೫೦ ॥
(ಇತಿ ಪ್ರಾರ್ಥನಾಮಂತ್ರಃ)

ಏವಂ ಸಂಪೂಜ್ಯ ವಿಘ್ನೇಶಂ ಯಥಾ ವಿಭವವಿಸ್ತರೈಃ ।
ಸೋಪಸ್ಕರಂ ಗಣಾಧ್ಯಕ್ಷಂ ಆಚಾರ್ಯಾಯ ನಿವೇದಯೇತ್ ॥ ೫೧ ॥

---

೪೯. ಎಲೈ ಸಕಲ ಪ್ರಮಥಗಣಗಳಿಗೂ, ಒಡೆಯನಾದ ವಿಘ್ನೇಶ್ವರನೇ, ವಾಗ್ದೇವತೆಯರಿಗೂ, ತದುಪಾಸಕರಿಗೂ, ಅಧಿಪತಿಯಾಗಿರುವ ಗಣಪತಿಯೇ, ನಿನ್ನನ್ನು ನಾವು ಭಕ್ತಿಯಿಂದ ಪೂಜಿಸುವೆವು. ಚರಾಚರಾತ್ಮಕವಾದ ಈ ಸೃಷ್ಟಿ ಕಾರ್ಯಕ್ಕೂ, ಸೃಷ್ಟವಾದ ಜಗತ್ತಿಗೂ, ಬ್ರಹ್ಮರೂಪಿಯಾಗಿ ನೀನು ಜ್ಯೇಷ್ಠನಾದ ರಾಜನಂತಿರುವೆ. ಭಕ್ತರಾದ ನಮ್ಮೆಲ್ಲರ ಕಷ್ಟಪರಂಪರೆಗಳನ್ನು ನೀನು ಆಲಿಸುತ್ತಾ, ನಮ್ಮನ್ನುದ್ಧರಿಸುವ ಶಕ್ತಿ ನಿನಗೆ ಇರುವುದರಿಂದ ನಾವೆಲ್ಲರೂ ನಿನ್ನನ್ನೇ ಸರ್ವದಾ ಸೇವಿಸುತ್ತಿರುವೆವು.

೫೦. "ಗಣಪತಿಯೇ ಗಣನಾಯಕನೇ, ಗೌರೀಪುತ್ರನೇ, ಗಜಮುಖನೇ, ಈಗ ನಾನು ಮಾಡಿದ ವ್ರತವು ನಿನ್ನ ಅನುಗ್ರಹದಿಂದ ಸಂಪೂರ್ಣವಾಗಿ, ನಿನ್ನ ಪ್ರೀತಿಗೆ ಕಾರಣವಾಗಲಿ" ಎಂಬುದಾಗಿ ಗಣಪತಿಯನ್ನು ಪ್ರಾರ್ಥಿಸಬೇಕು.

೫೧. ಹೀಗೆ ಮಹಾಗಣಪತಿಯನ್ನು ವಿಧಿವತ್ತಾಗಿ ಶ್ರದ್ಧೆಯಿಂದ ಪೂಜಿಸಿ, ಕೊನೆಯಲ್ಲಿ ಸಕಲ ಸಂಭಾರಗಳಿಂದ ಕೂಡಿದ ಆ ಗಣಪತಿಯ ವಿಗ್ರಹವನ್ನು, ಆಚಾರ್ಯನಿಗೆ ದಾನಮಾಡಬೇಕು.

ಗೃಹಾಣ ಭಗವನ್ ಬ್ರಹ್ಮನ್ ಗಣರಾಜಂ ಸದಕ್ಷಿಣಂ ।
ವ್ರತಂ ತ್ವದ್ವಚನಾದದ್ಯ ಸಂಪೂರ್ಣಂ ಯಾತು ಸುವ್ರತ ॥ ೫೨ ॥
(ಇತಿ ದಾನಮಂತ್ರಃ)

ಏವಂ ಯಃ ಪಂಚವರ್ಷಾಣಿ ಕೃತ್ವೋದ್ಯಾಪನಮಾಚರೇತ್ ।
ಈಪ್ಸಿತಾಲ್ಲಭತೇ ಕಾಮಾನ್ ದೇಹಾಂತೇ ಶಾಂಕರಂ ಪದಂ ॥ ೫೩ ॥

ಅಥವಾ ಶುಕ್ಲಪಕ್ಷಸ್ಯ ಚತುರ್ಥೀಂ ಸಂಯತೇಂದ್ರಿಯಃ ।
ಕುರ್ಯಾದ್ವರ್ಷತ್ರಯಂ ತ್ವೇವಂ ಸರ್ವಸಿದ್ಧಿಮವಾಪ್ನುಯಾತ್ ॥ ೫೪ ॥

ಉದ್ಯಾಪನಂ ವಿನಾ ಯಸ್ತು ಕರೋತಿ ವ್ರತಮುತ್ತಮಂ ।
ತೇನ ಶುಕ್ಲತಿಲೈಃ ಕಾರ್ಯಂ ಪ್ರಾತಸ್ಸ್ನಾನಂ ಷಡಾನನ ॥ ೫೫ ॥

ಹೇಮ್ನಾ ವಾ ರಜತೇನಾಪಿ ಕೃತ್ವಾ ಗಣಪತಿಂ ಬುಧಃ ।
ಪಂಚಗವ್ಯೈಶ್ಚ ಸುಸ್ನಾಪ್ಯ ದೂರ್ವಾಭಿಃ ಸಂಪ್ರಪೂಜಯೇತ್ ॥ ೫೬ ॥

---

೫೨. "ಬ್ರಹ್ಮರೂಪಿಯಾದ ಆಚಾರ್ಯನೇ, ದಕ್ಷಿಣಾಸಹಿತವಾದ ಈ ಗಣಪತಿಯ ವಿಗ್ರಹವನ್ನು ಈಗ ನಿನಗೆ ಸಮರ್ಪಿಸುವೆನು. ಸ್ವೀಕರಿಸಬೇಕು. ನಿನ್ನ ಮಾತಿನಿಂದ ಈ ವ್ರತವು ಈಗ ಸಂಪೂರ್ಣತೆಯನ್ನು ಪಡೆಯಲಿ" ಎಂದು ಪ್ರಾರ್ಥಿಸಿ ದಾನಮಾಡಬೇಕು.

೫೩. ಹೀಗೆ ಯಾವನು ಈ ದೂರ್ವಾಗಣಪತಿಯ ವ್ರತವನ್ನು ಐದು ವರ್ಷಗಳ ಕಾಲ ಮಾಡಿ ಕೊನೆಗೆ ಉದ್ಯಾಪನೆಮಾಡುವನೋ, ಅವನು ತನ್ನ ಇಷ್ಟಾರ್ಥಗಳನ್ನೆಲ್ಲಾ ಪಡೆದು ಕೊನೆಗೆ ಶಿವಸಾನ್ನಿಧ್ಯವನ್ನು ಹೊಂದುವನು.

೫೪. ಅಥವಾ ಪ್ರತಿಶುಕ್ಲ ಚತುರ್ಥೀಯಲ್ಲೂ, ಈ ವ್ರತವನ್ನು ಮಾಡುತ್ತಾ ಮೂರು ವರ್ಷಗಳು ಜಿತೇಂದ್ರಿಯನಾಗಿ ವ್ರತಾಚರಣೆಯಿಂದಿದ್ದರೆ, ಆತನು ಸಕಲ ಸಿದ್ಧಿಗಳನ್ನೂ ಪಡೆಯುವನು.

೫೫. ಉದ್ಯಾಪನೆಮಾಡದೇ ಈ ವ್ರತವನ್ನು ಮಾಡುವುದಾದರೆ, ಆದಿನ ಬಿಳೀ ಎಳ್ಳಿನಿಂದ ತೈಲವನ್ನು ತೆಗೆಸಿ ಅದರಿಂದ ಸ್ನಾನಮಾಡಬೇಕು.

೫೬. ಅನಂತರ ಚಿನ್ನದಿಂದಲೋ, ಬೆಳ್ಳಿಯಿಂದಲೋ ಗಣಪತಿಯ ವಿಗ್ರಹವನ್ನು ಮಾಡಿಸಿ, ಅದನ್ನು ಪಂಚಗವ್ಯಾದಿಗಳಿಂದ ಶುದ್ಧಿಮಾಡಿ, ದೂರ್ವಾರಾಶಿಯಿಂದ ವಿಧಿವತ್ತಾಗಿ ಅರ್ಚಿಸಬೇಕು.

ಮಂತ್ರೈಶ್ಚ ದಶಭಿರ್ಭಕ್ತ್ಯಾ ದೂರ್ವಾಯುಕ್ತೈಃ ಶಿಖಿಧ್ವಜ ।
ಇತ್ಯೇವಂ ಕಥಿತಂ ವತ್ಸ ಸರ್ವಸಿದ್ಧಿಪ್ರದಂ ಶುಭಂ ॥
ವ್ರತಂ ದೂರ್ವಾಗಣಪತೇಃ ಕಿಮನ್ಯಚ್ಛ್ರೋತುಮರ್ಹಸಿ ॥ ೫೭ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಉಮಾಮಹೇಶ್ವರ ದೂರ್ವಾಗಣಪತಿ ವ್ರತಕಥನಂ
ನಾಮ ತ್ರಿಚತ್ವಾರಿಂಶೋಽಧ್ಯಾಯಃ.

---

೫೭. ಈ ಗಣಪತಿಯ ಹತ್ತು ಮಂತ್ರಗಳಿಂದ ದೂರ್ವಾರ್ಚನೆಮಾಡಿ, ಅದನ್ನು ಭಕ್ತಿಯಿಂದ ದಾನಮಾಡಬೇಕು. ಹೀಗೆ ದೂರ್ವಾಗಣಪತಿಯ ವ್ರತವಿಧಾನವನ್ನೂ ಮಹಿಮೆಯನ್ನೂ ವಿಸ್ತಾರವಾಗಿ ಹೇಳಿರುವೆನು. ಮತ್ತೇನನ್ನು ಅಪೇಕ್ಷಿಸುವೆ ? ಎಂದು ಪರಶಿವನು ಸ್ಕಂದನನ್ನು ಕೇಳಿದನು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ
ಸಂವಾದರೂಪವಾಗಿ, ಉಮಾಮಹೇಶ್ವರವ್ರತ, ದೂರ್ವಾಗಣಪತಿವ್ರತ,
ಇವುಗಳನ್ನು ತಿಳಿಸುವ ನಲವತ್ತುಮೂರನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಚತುಶ್ಚತ್ವಾರಿಂಶೋಽಧ್ಯಾಯಃ

॥ ಋಷಯ ಊಚುಃ ॥

ಮೃದಾದಿರತ್ನಪರ್ಯಂತೈಃ ದ್ರವ್ಯೈಃ ಕೃತ್ವಾ ಶಿವಾಲಯಂ ।
ಯತ್ಫಲಂ ಲಭತೇ ಮರ್ತ್ಯ ಸ್ತನ್ನೋ ವಕ್ತುಮಿಹಾರ್ಹಸಿ ॥ ೧ ॥

॥ ಸೂತ ಉವಾಚ ॥

ಶೃಣುಧ್ವಮೃಷಯಃ ಸರ್ವೇ ಪ್ರಭಾವಂ ಪರಮೇಷ್ಠಿನಃ ।
ಶಿವಾಲಯಸ್ಯ ಕರಣಾತ್ ಫಲಮಾನಂತ್ಯಮುಚ್ಯತೇ ॥ ೨ ॥

ಅಪಿ ಲೋಷ್ಠಮಯಂ ವಾಪಿ ಯಃ ಕರೋತಿ ಶಿವಾಲಯಂ ।
ಸರ್ವಯತ್ನೇನ ವಿಪ್ರೇಂದ್ರಾ ಧರ್ಮಕಾಮಾರ್ಥಮುಕ್ತಯೇ ॥ ೩ ॥

ನಲವತ್ತುನಾಲ್ಕನೆಯ ಅಧ್ಯಾಯ.

೧. ಮತ್ತೆ ಶೌನಕಾದಿಗಳು ಸೂತಪುರಾಣಿಕರನ್ನು ಕುರಿತು, ಕೇಳಿದ್ದೇನೆಂದರೆ "ಸ್ವಾಮಿಯೇ, ಒಬ್ಬನು ಶಿವದೇವಸ್ಥಾನವನ್ನು ನಿರ್ಮಿಸಲು ಮಣ್ಣು ಮೊದಲು ಗೊಂಡು ರತ್ನಪರ್ಯಂತವಾಗಿ ಸಮಸ್ತ ದ್ರವ್ಯಗಳನ್ನು ದಾನಮಾಡಿದರೆ ಅವನಿಗೆ ಬರುವ ಉತ್ತಮ ಫಲವಾವುದು ? ಅದನ್ನು ಕೇಳಲು ನಾವು ಇಷ್ಟವುಳ್ಳವರಾಗಿದ್ದೇವೆ'' ಎನ್ನಲು ಅದಕ್ಕೆ ಸೂತಮಹರ್ಷಿಗಳು,

೨. "ಎಲೈ ಋಷಿಗಳೇ, ಕೇಳಿರಿ. ಒಂದು ಶಿವಾಲಯ ನಿರ್ಮಾಣದಿಂದ ಬರತಕ್ಕ ಪುಣ್ಯಫಲವನ್ನು ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ.

೩. ಕೇವಲ ಮಣ್ಣಿನಿಂದಲೇ ಆಗಲಿ, ಯಾವನು ಒಂದು ಶಿವದೇವಾಲಯ ವನ್ನು ನಿರ್ಮಿಸುವನೋ, ಆತನು ಧರ್ಮ, ಕಾಮ, ಅರ್ಥ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಪಡೆಯುವನು.

ಕೈಲಾಸಾಖ್ಯಂ ಚ ಯಃ ಕುರ್ಯಾತ್ಪ್ರಾಸಾದಂ ಪರಮೇಷ್ಠಿನಃ ।
ಮೇರ್ವಾಖ್ಯಂ ಮಂದರಾಖ್ಯಂ ವಾ ತುಹಿನಾದ್ರಿಮಥಾಪಿ ವಾ ॥ ೪ ॥

ನಿಷಧಾದ್ರಿಂ ಚ ನೀಲಾದ್ರಿಂ ಮಹೇಂದ್ರಾಖ್ಯಂ ದ್ವಿಜೋತ್ತಮಾಃ ।
ಸ ತತ್ಪರ್ವತಸಂಕಾಶೈರ್ವಿಮಾನೈಃ ಸಾರ್ವಕಾಮಿಕೈಃ ॥ ೫ ॥

ಗತ್ವಾ ಶಿವಪದಂ ದಿವ್ಯಂ ಶಿವವನ್ಮೋದತೇ ಚಿರಂ ।
ಮಹಾಪ್ರಲಯಪರ್ಯಂತಂ ಭುಕ್ತ್ವಾ ಭೋಗಾನ್ಯಥೇಪ್ಸಿತಾನ್ ॥ ೬ ॥

ತದಂತೇ ವಿಷಯಾಂಸ್ತ್ಯಕ್ತ್ವಾ ಶಿವಸಾಯುಜ್ಯಮಾಪ್ನುಯಾತ್ ।
ಪತಿತಂ ಖಂಡಿತಂ ವಾಪಿ ಜೀರ್ಣಂ ವಾ ಸ್ಫುಟಿತಂ ತಥಾ ॥ ೭ ॥

ಕಾರಯೇತ್ಪೂರ್ವವದ್ಯಸ್ತು ಸುಧಾದ್ಯೈಃ ಸುಮನೋಹರೈಃ ।
ಪ್ರಾಕಾರಂ ಮಂಡಪಂ ವಾಪಿ ಪ್ರಾಸಾದಂ ಗೋಪುರಂ ತಥಾ ॥ ೮ ॥
ಕರ್ತುರಭ್ಯಧಿಕಂ ಪುಣ್ಯಂ ಲಭತೇ ನಾತ್ರ ಸಂಶಯಃ ।

---

೫. ಶಿವದೇವಾಲಯವನ್ನು ಸ್ಥಾಪಿಸಿ ಅದಕ್ಕೆ ಯಾರು ಕೈಲಾಸ, ಬ್ರಹ್ಮಸ್ಥಾನ ಮೇರು, ಮಂದರ, ಹಿಮಾಲಯ, ನಿಷಧ, ನೀಲ, ಮಹೇಂದ್ರ ಮುಂತಾದ ಹೆಸರುಗಳನ್ನಿಡುವರೋ, ಅವರಿಗೆ ಸಮಸ್ತ ಇಷ್ಟಾರ್ಥಗಳೂ ಸಿದ್ಧಿಸುವುವು.

೬. ಅಲ್ಲದೆ ಯಾವ ಪರ್ವತದ ಹೆಸರನ್ನು ಶಿವಾಲಯಕ್ಕೆ ಇಡುವರೋ, ಆ ಪರ್ವತದಂತೆ ಅತ್ಯಂತ ಪ್ರಕಾಶಮಾನವಾಗಿ ಹೊಳೆಯುವ ವಿಮಾನಗಳಲ್ಲಿ ಕುಳಿತು ಶಿವಲೋಕವನ್ನು ಸೇರುವರು. ಅಲ್ಲಿ ಮಹಾಪ್ರಳಯ ಪರ್ಯಂತವಾಗಿ ಸಮಸ್ತ ಭೋಗಗಳನ್ನು ಅನುಭವಿಸುವರು.

೭–೮. ಕೊನೆಗೆ ವಿಷಯಸುಖಗಳಲ್ಲಿ ಜಿಹಾಸೆಹೊಂದಿ ಶಿವಸಾಯುಜ್ಯವನ್ನು ಪಡೆಯುವರು. ಅದೂ ಅಲ್ಲದೆ ಯಾರು ಬಿದ್ದುಹೋಗಿರುವ, ಒಡೆದು ಹೋಗಿರುವ ಶಿವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ, ಸುಣ್ಣವೇ ಮೊದಲಾದವುಗಳಿಂದ ಆ ಕಟ್ಟಡವನ್ನು ಸ್ಥಿರಗೊಳಿಸುವರೋ, ಅಥವಾ ದೇವಾಲಯಕ್ಕೆ ಗೋಡೆ, ಮಂಟಪ ಇವೇ ಮೊದ್ಧಲಾದವುಗಳನ್ನು ಕಟ್ಟಿಸಿ ವೃದ್ಧಿಗೊಳಿಸುವರೋ, ಅವರಿಗೆ ಲಭಿಸುವ ಪುಣ್ಯವನ್ನು ಇಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ.

ವೃತ್ತ್ಯರ್ಥಂ ವಾ ಪ್ರಕುರ್ವೀತ ನರಃ ಕರ್ಮ ಶಿವಾಲಯೇ ।
ಯಃ ಪ್ರಯಾತಿ ನ ಸಂದೇಹಃ ಸ್ವರ್ಗಲೋಕೇ ಸಬಾಂಧವಾಃ ॥ ೯ ॥

ಯಶ್ಚಾತ್ಮಭೋಗಸಿದ್ಧ್ಯರ್ಥಮಪಿ ರುದ್ರಾಲಯೇ ಸಕೃತ್ ॥ ೧೦ ॥
ಕರ್ಮ ಕುರ್ಯಾದ್ಯದಿ ಸುಖಂ ಲಬ್ಧ್ವಾ ಸೋಽಪಿ ಪ್ರಮೋದತೇ ॥

ಯದ್ಯಶಕ್ತೋ ಭವೇನ್ಮರ್ತ್ಯಃ ಪ್ರಾಸಾದಂ ಕರ್ತುಮೀಶ್ವರೇ ॥ ೧೧ ॥
ಸಂಮಾರ್ಜನಾದಿಭಿರ್ವಾಪಿ ಸರ್ವಾನ್ಕಾಮಾನವಾಪ್ನುಯಾತ್ ।

ಸಂಮಾರ್ಜನಂ ತು ಯಃ ಕುರ್ಯಾನ್ಮಾರ್ಜನ್ಯಾ ಮೃದುಸೂಕ್ಷ್ಮಯಾ ।
ಚಾಂದ್ರಾಯಣಸಹಸ್ರಸ್ಯ ಫಲಂ ಮಾಸೇನ ಲಭ್ಯತೇ ॥ ೧೨ ॥

ಶಿವಸ್ಯ ಪುರತೋ ವಹ್ನಿಂ ಸಂಸ್ಥಾಪ್ಯಾಭ್ಯರ್ಚ್ಯ ಶಂಕರಂ ।
ಜುಹುಯಾದಾತ್ಮನೋ ದೇಹಂ ಯಃ ಸ ಯಾತಿ ಶಿವಂ ಪದಂ ॥ ೧೩ ॥

---

೯. ಯಾರು ತನ್ನ ಜೀವಿಕೆಗಾದರೂ ಶಿವಾಲಯದಲ್ಲಿದ್ದು ಪಾರಮಾರ್ಥಿಕ ಬುದ್ಧಿಯಿಂದ ದೇವಾಲಯದ ಏಳಿಗೆಯನ್ನು ಗಮನಿಸುವರೋ, ಅವರು ಬಂಧು ಸಮೇತರಾಗಿ ಸ್ವರ್ಗಕ್ಕೆ ಹೋಗುವರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

೧೦. ತನ್ನ ಸುಖಕ್ಕಾಗಿಯಾದರೂ ರುದ್ರಾಲಯದಲ್ಲಿ ಸ್ವಲ್ಪ ಕಾರ್ಯ ಕಲಾಪಗಳನ್ನು ನಡೆಸಿದರೆ, ಆತನು ಸುಖಿಯಾಗಿ ಅಂತ್ಯದಲ್ಲಿ ಮೋಕ್ಷವನ್ನು ಪಡೆಯುವನು.

೧೧. ದೊಡ್ಡದಾದ ಶಿವಾಲಯವನ್ನು ಕಟ್ಟಿಸಲು ಅಸಮರ್ಥನಾದ ಮನುಷ್ಯನು ಯಾರಾದರೂ ಕಟ್ಟಿಸಿರುವ ಒಂದು ದೇವಾಲಯದಲ್ಲಿ ಕಸವನ್ನು ಗುಡಿಸುವುದು, ಸಾರಿಸುವುದು, ಇವೇ ಮೊದಲಾದ ಕಾರ್ಯಗಳನ್ನು ಮಾಡಬೇಕು. ಇದರಿಂದಲೂ ಸಕಲೇಷ್ಟಾರ್ಥಗಳನ್ನು ಪಡೆಯಬಹುದು.

೧೨. ಯಾರು ಶಿವಾಲಯವನ್ನು ಮೃದುವಾದ ಕಸಪರಿಕೆಯಿಂದ ಗುಡಿಸಿ ಒಂದು ತಿಂಗಳು ಶುದ್ಧಿಮಾಡುವರೋ, ಅವರು ಸಹಸ್ರ ಚಾಂದ್ರಾಯಣ ವ್ರತಗಳ ಫಲವನ್ನು ಸುಲಭವಾಗಿ ಪಡೆಯುವರು.

೧೩. ಈಶ್ವರನ ಮುಂಭಾಗದಲ್ಲಿ ಅಗ್ನಿಯನ್ನು ಪ್ರತಿಷ್ಠೆಮಾಡಿ, ಶಿವನನ್ನು ಅರ್ಚಿಸಿ, ತನ್ನ ದೇಹವನ್ನು ಆ ಅಗ್ನಿಯಲ್ಲಿ ಅರ್ಪಿಸಬೇಕು. ಹೀಗೆ ದೇಹತ್ಯಾಗ ಮಾಡಿದವನು, ಪರಶಿವನ ಲೋಕವನ್ನು ಪಡೆಯುವನು.

ಶಿವಕ್ಷೇತ್ರೇ ನಿರಾಹಾರೋ ಭೂತ್ವಾ ಪ್ರಾಣಾನ್ ಪರಿತ್ಯಜೇತ್ ॥ ೧೪ ॥
ಶಿವಸಾಯುಜ್ಯಮಾಪ್ನೋತಿ ಪ್ರಸಾದಾತ್ಪರಮೇಷ್ಠಿನಃ ।

ಅಥಾತ್ಮಚರಣೌ ಛಿತ್ವಾ ಶಿವಕ್ಷೇತ್ರೇ ವಸೇನ್ನರಃ ।
ದೇಹಾಂತೇ ಶಿವಸಾಯುಜ್ಯಂ ಲಭತೇ ನಾತ್ರ ಸಂಶಯಃ ॥ ೧೫ ॥

ಫಲಂ ಯದಶ್ವಮೇಧಸ್ಯ ತದೇವ ಕ್ಷೇತ್ರದರ್ಶನಾತ್ । ॥ ೧೬ ॥
ಶತಾಧಿಕಂ ಪ್ರವೇಶಾಚ್ಚ ದ್ವಿಗುಣಂ ಲಿಂಗದರ್ಶನಾತ್ ॥
ತಸ್ಮಾಚ್ಛತಗುಣಾ ಪೂಜಾ ಜಲಸ್ನಾನಂ ತತೋಽಧಿಕಂ ॥ ೧೭ ॥

ಜಲಸ್ನಾನಾಚ್ಚ ವಿಪ್ರೇಂದ್ರಾಃ ಕ್ಷೀರಸ್ನಾನಂ ಶತಾಧಿಕಂ ।
ದಧ್ನಾ ಸಹಸ್ರಮಾಖ್ಯಾತಂ ಮಧುನಾ ತಚ್ಛತಾಧಿಕಂ ॥ ೧೮ ॥

---

೧೪. ಶಿವನ ಸನ್ನಿಧಿಯಲ್ಲಿ ಉಪವಾಸದಿಂದ ಯಾರು ಪರಮೇಶ್ವರನನ್ನೇ ಭಜಿಸುತ್ತಾ ಪ್ರಾಣಬಿಡುವರೋ, ಅವರು ಪರಬ್ರಹ್ಮನ ವರಪ್ರಸಾದದಿಂದ ಶಿವಸಾಯುಜ್ಯವನ್ನು ಪಡೆಯುವರು.

೧೫. ಶಿವನ ದೇವಾಲಯದಲ್ಲಿ ತನ್ನ ಕಾಲುಗಳನ್ನು ಕತ್ತರಿಸಿಕೊಂಡು, ಕುಂಟನಂತೆ ಯಾವಾಗಲೂ ದೇವಾಲಯದಲ್ಲಿಯೇ ಕಾಲವನ್ನು ಕಳೆದು ದೇಹವನ್ನು ಬಿಟ್ಟವನು ನಿಜವಾಗಿಯೂ ಶಿವನಲ್ಲಿ ಐಕ್ಯವಾಗುವನು.

೧೬-೧೭. ಯಾರೇ ಆಗಲಿ ಶಿವಕ್ಷೇತ್ರವನ್ನು ದರ್ಶನಮಾಡಿದರೆ ಸಾಕು. ಅವರಿಗೆ ಅಶ್ವಮೇಧಯಾಗದ ಫಲವು ದೊರಕುವುದು. ಅಲ್ಲಿಗೆ ಪ್ರವೇಶಮಾಡುವುದರಿಂದ ಅದರ ನೂರರಷ್ಟು ಫಲವೂ, ಅಲ್ಲಿ ಮಾಡುವ ಶಿವಲಿಂಗದ ದರ್ಶನದಿಂದ ಅದರ ಎರಡರಷ್ಟು ಪುಣ್ಯವೂ, ಶಿವಲಿಂಗಕ್ಕೆ ಜಲಸ್ನಾನಮಾಡಿಸುವುದರಿಂದ ನೂರರಷ್ಟು ಪುಣ್ಯವನ್ನೂ ಸಂಪಾದಿಸಬಹುದು.

೧೮. ಕ್ಷೀರಾಭಿಷೇಕಮಾಡುವುದರಿಂದ, ಜಲಾಭಿಷೇಕದ ನೂರರಷ್ಟು ಸುಕೃತವು ಲಭಿಸುವುದು. ಹಾಗೆಯೇ ದಧಿಸ್ನಾನವೂ, ಜೇನುತುಪ್ಪದ ಅಭಿಷೇಕವೂ ಹೆಚ್ಚು ಹೆಚ್ಚಾಗಿ ಪುಣ್ಯಕರವಾದದ್ದು.

ಅನಂತಂ ಸರ್ಪಿಷಾ ಸ್ನಾನಂ ವಾಸಸಾ ತಚ್ಛತಾಧಿಕಂ ।
ತಸ್ಮಾತ್ಕೋಟಿಯುಗಂ ಪುಣ್ಯಂ ಪಂಚತ್ವಂ ಶಂಕರಾಲಯೇ ॥ ೧೯ ॥

ತಸ್ಮಾಚ್ಛತಗುಣಂ ಪುಣ್ಯಂ ನಿಯಮೈರ್ಯಸ್ತ್ಯಜೇತ್ತನುಂ ।
ಪ್ರದಕ್ಷಿಣಾತ್ರಯಂ ಕುರ್ಯಾದ್ಯಃ ಪ್ರಸಾದಂ ಸಮಂತತಃ ॥ ೨೦ ॥

ಸವ್ಯಾಪಸವ್ಯವ್ಯಾಜೇನ ಮೃದು ಗತ್ವಾ ಶುಚಿರ್ನರಃ ।
ಪದೇಪದೇಽಶ್ವಮೇಧಸ್ಯ ಯಜ್ಞಸ್ಯ ಫಲಮಾಪ್ನುಯಾತ್ ॥ ೨೧ ॥

ದುರ್ಲಭಾ ಖಲು ಯಾ ಮುಕ್ತಿರನಾಯಾಸೇನ ದೇಹಿನಾಂ ।
ಜಾಯತೇ ಕರ್ಮಣಾ ಯೇನ ಶೃಣುಧ್ವಂ ತದ್ದ್ವಿಜೋತ್ತಮಾಃ ॥ ೨೨ ॥

ಗೋಚರ್ಮಮಾತ್ರಂ ಸಂಲಿಪ್ಯ ಮಂಡಲಂ ಗೋಮಯೇನ ಚ ।
ಚತುರಸ್ರಂ ವಿಧಾನೇನ ಚಾದ್ಭಿರಭ್ಯುಕ್ಷ್ಯ ಮಂತ್ರವಿತ್ ॥ ೨೩ ॥

---

೧೯. ತುಪ್ಪದ ಅಭಿಷೇಕವು ಅನಂತಾನಂತಪುಣ್ಯವನ್ನೂ, ಈಶ್ವರನಿಗೆ ವಸ್ತ್ರದ ದಾನವು ಅದಕ್ಕಿಂತಲೂ ಹೆಚ್ಚಿನ ಪುಣ್ಯರಾಶಿಯನ್ನೂ ಕೊಡುವುದು. ಆದರೆ ಆ ಶಿವಾಲಯದಲ್ಲಿ ತನ್ನ ಪ್ರಾಣವನ್ನು ಶಿವಧ್ಯಾನದಿಂದ ಬಿಡುವುದಂತೂ, ಅಸಂಖ್ಯಾತವಾದ ಪುಣ್ಯರಾಶಿಯನ್ನೊದಗಿಸುವುದೆಂಬುದು ಸಂದೇಹವಿಲ್ಲದ ಮಾತು.

೨೦-೨೧. ಯಾರು ನಿಯಮವ್ರತಾದಿಗಳಿಂದ ತಮ್ಮ ದೇಹವನ್ನು ಶಿವಾಲಯದಲ್ಲಿ ಅರ್ಪಿಸುವರೋ, ಅವರು ಅನಂತಾನಂತ ಪುಣ್ಯಭಾಗಿಗಳಾಗುವರು. ಶಿವಾಲಯದ ಸುತ್ತಲೂ ಬಲಭಾಗದಿಂದ ಎಡಭಾಗಕ್ಕೆ ಹೋಗುವ ನೆಪದಿಂದಲಾದರೂ ಮೂರು ಬಾರಿ ಪ್ರದಕ್ಷಿಣೆಮಾಡಿದರೆ, ಆ ಒಂದೊಂದು ಹೆಜ್ಜೆಗೂ ಒಂದೊಂದು ಅಶ್ವಮೇಧಯಾಗ ಫಲವನ್ನು ಸುಲಭವಾಗಿ ಪಡೆಯಬಹುದು.

೨೨. ಎಲೈ ಶೌನಕಾದಿ ಋಷಿಗಳೇ, ಮನುಷ್ಯರಿಗೆ ಸುಲಭವಾಗಿ ಶಾಶ್ವತದ ಮುಕ್ತಿಯು ದೊರಕಬೇಕಾದರೆ ಒಂದು ಕರ್ಮವನ್ನು ಹೇಳುತ್ತೇನೆ ಕೇಳಿರಿ.

೨೩. ಗೋಚರ್ಮದಷ್ಟು ಅಗಲವಾದ ಭೂಮಿಯನ್ನು ಗೋಮಯದಿಂದ ಚತುರಸ್ರಾಕಾರವಾಗಿ ಸಾರಿಸಬೇಕು.

ಅಲಂಕೃತ್ಯ ವಿತಾನಾದ್ಯೈಃ ಛತ್ರೈರ್ವಾಪಿ ಮನೋಹರೈಃ ।
ಬುದ್ಬುದೈರರ್ಧಚಂದ್ರೈಶ್ಚ ಸ್ವರ್ಣೈರಶ್ವತ್ಥಪತ್ರಕೈಃ ॥ ೨೪ ॥

ಸಿತೈರ್ವಿಕಸಿತೈಃ ಪದ್ಮೈ ರಕ್ತೈರ್ನೀಲೋತ್ಪಲೈಸ್ತಥಾ ।
ವಿಮಾನೇನ ವಿಚಿತ್ರೇಣ ಮುಕ್ತಾದಾಮ್ನಾ ದ್ವಿಜೋತ್ತಮಾಃ ॥ ೨೫ ॥

ಸಿತಮೃತ್ಪಾತ್ರಕೈಶ್ಚೈವ ಸುಶ್ಲಕ್ಷ್ಣೈಃ ಪೂರ್ಣಕುಂಭಕೈಃ ।
ಫಲಪಲ್ಲವಮಾಲಾಭಿರ್ವೈಜಯಂತೀಭಿರಂಶುಕೈಃ ॥ ೨೬ ॥

ಪಂಚಾಶದ್ದೀಪಮಾಲಾಭಿರ್ಧೂಪೈಶ್ಚ ವಿವಿಧೈಸ್ತಥಾ ।
ಪಂಚಾಶದ್ದಲಸಂಯುಕ್ತಂ ಲಿಖಿತ್ವಾ ಪದ್ಮಮುತ್ತಮಂ ॥ ೨೭ ॥

ತದ್ವದ್ವರ್ಣೈಸ್ತಥಾ ಚೂರ್ಣೈಃ ಶ್ವೇತಚೂರ್ಣೈರಥಾಪಿ ವಾ ।
ಏಕಹಸ್ತಪ್ರಮಾಣೇನ ಕೃತ್ವಾ ಪದ್ಮಂ ವಿಧಾನತಃ ॥ ೨೮ ॥

---

೨೫. ಮೇಲ್ಕಟ್ಟು, ಛತ್ರಿ, ಚಿನ್ನದ ಹರಳುಗಳು, ಅರ್ಧ ಚಂದ್ರಾಕಾರದ ಒಡವೆಗಳು, ಅರಳೀಮರದ ಎಲೆ, ಇವೇ ಮೊದಲಾದ ವಸ್ತುಗಳಿಂದ ಆ ಪ್ರದೇಶವನ್ನು ಅಲಂಕರಿಸಬೇಕು.

೨೫. ಅರಳಿರುವ ಕಮಲಗಳಿಂದಲೂ, ರಕ್ತೋತ್ಪಲ ಇವೇ ಮೊದಲಾದ ಪುಷ್ಪ ವಿಶೇಷಗಳಿಂದಲೂ, ಚಿತ್ರವಿಚಿತ್ರವಾದ ಮುತ್ತಿನ ಸರಗಳಿಂದಲೂ, ವಿಮಾನಗಳಿಂದಲೂ ಭೂಮಿಯನ್ನು ಶೃಂಗರಿಸಬೇಕು

೨೬. ಬಿಳೀಮಣ್ಣಿನ ಪಾತ್ರೆಗಳಿಂದಲೂ, ನಯವಾದ ಪೂರ್ಣ ಕಲಶಗಳಿಂದಲೂ, ಹಣ್ಣು, ಚಿಗುರು, ಮಾಲೆ, ವೈಜಯಂತೀ ಸರ, ಬಟ್ಟೆಗಳ ಬಾವುಟ ಇವೇ ಮೊದಲಾದುವುಗಳಿಂದ ಆ ಜಾಗವನ್ನು ಶೋಭಾಯಮಾನವನ್ನಾಗಿ ಮಾಡಬೇಕು.

೨೭. ಅಲ್ಲಿ ಐವತ್ತು ದೀಪಗಳನ್ನು ಹೊತ್ತಿಸಬೇಕು. ನಾನಾವಿಧವಾದ ಸುಗಂಧದ್ರವ್ಯಗಳನ್ನು ಎರಚಿರಬೇಕು. ಮಧ್ಯಭಾಗದಲ್ಲಿ ಐವತ್ತು ದಳಗಳಿರುವ ಒಳ್ಳೆಯ ಪದ್ಮದ ಆಕಾರವನ್ನು ಬರೆಯಬೇಕು.

೨೮. ಕಮಲದ ಬಣ್ಣದ ಮತ್ತು ಬಿಳುಪಾದ ಹಿಟ್ಟುಗಳಿಂದ ಆ ರೇಖೆಗಳನ್ನೂ ಮತ್ತು ಕೇಸರವನ್ನೂ ಬಿಡಿಸಿ, ಒಂದು ಮೊಳದಷ್ಟು ಅಗಲದಲ್ಲಿ ಕಮಲವನ್ನು ಬರೆದಿಡಬೇಕು.

ಕರ್ಣಿಕಾಯಾಂ ನ್ಯಸೇದ್ದೇವಂ ದೇವ್ಯಾ ದೇವೇಶ್ವರಂ ಭವಂ ।
ಪರ್ಣಾನಿ ವಿನ್ಯಸೇದ್ವರ್ಣೈ ರುದ್ರೈಃ ಪ್ರಾಗಾದ್ಯನುಕ್ರಮಾತ್ ॥ ೨೯ ॥

ಪ್ರಣವಾದಿನಮೋಂತಾನಿ ಸರ್ವವರ್ಣಾನಿ ಸುವ್ರತಾಃ ।
ಸಂಪೂಜ್ಯೈವಂ ಸುರಶ್ರೇಷ್ಠಂ ಗಂಧಪುಷ್ಪಾದಿಭಿಃ ಕ್ರಮಾತ್ ॥ ೩೦ ॥

ಬ್ರಾಹ್ಮಣಾನ್ ಭೋಜಯೇತ್ತತ್ರ ಪಂಚಾಶದ್ವಿಧಿಪೂರ್ವಕಂ ।
ಅಕ್ಷಮಾಲೋಪವೀತಂ ಚ ಕುಂಡಲೇ ಚ ಕಮಂಡಲುಂ ॥ ೩೧ ॥

ಆಸನಂ ಚ ತಥಾ ದಂಡಮುಷ್ಣೀಷಂ ವಸ್ತ್ರಮೇವ ಚ ।
ದತ್ವಾ ತೇಷಾಂ ದ್ವಿಜೇಂದ್ರಾಣಾಂ ದೇವದೇವಾಯ ಶಂಭವೇ ॥ ೩೨ ॥

ಮಹಾಚರುಂ ನಿವೇದ್ಯೈವಂ ಕೃಷ್ಣಂ ಗೋಮಿಥುನಂ ತಥಾ ।
ಅಂತೇ ಚ ದೇವದೇವಾಯ ದತ್ವಾ ತದ್ವರ್ಣಮಂಡಲಂ ॥ ೩೩ ॥

೨೯-೩೦. ಆ ಹೂವಿನ ಮಧ್ಯಭಾಗದಲ್ಲಿ ಪಾರ್ವತೀಪರಮೇಶ್ವರ ವಿಗ್ರಹ ವನ್ನಿಡಬೇಕು. ಅದರ ಸುತ್ತಲೂ ಓಂಕಾರಾದಿಯಾಗಿ, ಶಿವಾಯನಮಃ ಎಂದು ಬರೆದು ಅದನ್ನು ಗಂಧಪುಷ್ಪಾಕ್ಷತಾದಿಗಳಿಂದ ಅರ್ಚಿಸಿ, ಅನಂತರ ಶಂಭುವನ್ನಾರಾಧಿಸು ಬೇಕು.

೩೧-೩೨. ಐವತ್ತು ಜನ ಬ್ರಾಹ್ಮಣರಿಗೆ ಸಮಾರಾಧನೆಯನ್ನು ಮಾಡಿಸ ಬೇಕು. ಅನಂತರ ಅವರಿಗೆ ಜಪಸರ, ಯಜ್ಞೋಪವೀತ, ಕರ್ಣಕುಂಡಲ, ಕಮಂಡಲು, ಆಸನ, ದಂಡ, ಶಿರೋವಸ್ತ್ರ, ಹೊದಿಯುವ ವಸ್ತ್ರ, ಇವೇ ಮೊದಲಾದ ವಸ್ತುಗಳನ್ನು ದಾನಮಾಡಬೇಕು.

೩೩. ಪರಮೇಶ್ವರನಿಗೆ ಮಹಾಚರುವನ್ನು ನಿವೇದಿಸಿ, ಕಪ್ಪಾದ ಎರಡು ಗೋವುಗಳನ್ನು ದಾನಮಾಡಿ ಕೊನೆಯಲ್ಲಿ ದೇವದೇವನಾದ ಪರಶಿವನಿಗೆ ಆ ವರ್ಣ ಮಂಡಲವನ್ನು ಸಮರ್ಪಿಸಬೇಕು.

ಯೋಗೋಪಯೋಗಿದ್ರವ್ಯಾಣಿ ಶಿವಾಯ ವಿನಿವರ್ತಯೇತ್ ।
ಓಂಕಾರಾದ್ಯಂ ಜಪೇದ್ಧೀಮಾನ್ ಪ್ರತಿವರ್ಣಮನುಕ್ರಮಾತ್ ॥ ೩೪ ॥

ಏವಮಾಲಿಖ್ಯ ಯೋ ಭಕ್ತ್ಯಾ ವರ್ಣಮಂಡಲಮುತ್ತಮಂ ।
ಯತ್ಫಲಂ ಲಭತೇ ಮರ್ತ್ಯಸ್ತದ್ವದಾಮಿ ಸಮಾಸತಃ ॥ ೩೫ ॥

ಸಾಂಗಾನ್ ವೇದಾನ್ ಯಥಾನ್ಯಾಯಮಧೀತ್ಯ ವಿಧಿಪೂರ್ವಕಾನ್ ।
ಇಷ್ಟ್ವಾ ಯಜ್ಞೈರ್ಯಥಾನ್ಯಾಯಂ ಜ್ಯೋತಿಷ್ಟೋಮಾದಿಭಿಃ ಕ್ರಮಾತ್ ॥

ತತೋ ವಿಶ್ವಜಿತಾ ಚೇಷ್ಟ್ವಾ ಪುತ್ರಾನುತ್ಪಾದ್ಯ ಮಾದೃಶಾನ್ ।
ವಾನಪ್ರಸ್ಥಾಶ್ರಮಂ ಗತ್ವಾ ಸದಾರಃ ಸಾಗ್ನಿರೇವ ಚ ॥ ೩೭ ॥

ಚಾಂದ್ರಾಯಣಾದಿಕಾನ್ ಕೃತ್ವಾ ಸರ್ವಾನ್ ಸಂನ್ಯಸ್ಯ ವೈ ದ್ವಿಜಾಃ ।
ಬ್ರಹ್ಮವಿದ್ಯಾಮಧೀತ್ಯೈವ ಜ್ಞಾನಮಾಸಾದ್ಯ ಯತ್ನತಃ ॥ ೩೮ ॥

ಜ್ಞಾನೇನ ಜ್ಞೇಯಮಾಲೋಕ್ಯ ಯೋಗಿವತ್ಫಲಮಾಪ್ನುಯಾತ್ ।
ಯತ್ಫಲಂ ಲಭತೇ ಸರ್ವಂ ವರ್ಣಮಂಡಲದರ್ಶನಾತ್ ॥ ೩೯ ॥

---

೩೪. ಯೋಗಾಭ್ಯಾಸಕ್ಕೆ ಉಪಯುಕ್ತವಾಗುವಂತಹ ಸರ್ವ ಸಾಮಗ್ರಿಗಳನ್ನು ಶಿವನಿಗೂ ಶಿವಸ್ವರೂಪಿಗಳಿಗೂ ಅರ್ಪಿಸಿ, ಓಂಕಾರಾದಿಯಾದ ಶಿವಮಂತ್ರವನ್ನು ಒಂದಕ್ಷರವೂ ಬಿಡದಂತೆ ಜಪಿಸಬೇಕು.

೩೫ ಹೀಗೆ ವರ್ಣಮಂಡಲವನ್ನು ಬರೆದು ಭಕ್ತಿಯಿಂದ ಅರ್ಚಿಸಿ, ಜಪಿಸಿದವರಿಗೆ ಬರುವ ಫಲವನ್ನು ಸಂಕ್ಷೇಪವಾಗಿ ಹೇಳುವೆನು, ಕೇಳಿರಿ.

೩೬. ಷಡಂಗ ಸಹಿತವಾದ ವೇದಗಳನ್ನೋದಿ ಶಾಸ್ತ್ರವತ್ತಾಗಿ ಜ್ಯೋತಿಷ್ಟೋಮವೇ ಮೊದಲಾದ ಯಾಗಗಳಿಂದ ಪರಬ್ರಹ್ಮನನ್ನು ತೃಪ್ತಿಗೊಳಿಸಿ,

೩೭-೩೯. ಅನಂತರ ವಿಶ್ವಜಿದ್ಯಾಗದಿಂದ ತಪಸ್ವಿಗಳಾದ ನಮ್ಮಂತಹ ಪುತ್ರರನ್ನು ಪಡೆದು, ವಾನಪ್ರಸ್ಥಾಶ್ರಮವನ್ನು ಹೊಂದಿ, ಪತ್ನೀ ಸಹಿತನಾಗಿ, ಔಪಾಸನ ಚಾಂದ್ರಾಯಣವ್ರತ ಇವೇ ಮೊದಲಾದುವುಗಳನ್ನು ಆಚರಿಸಿ, ಬ್ರಹ್ಮವಿದ್ಯಾಭ್ಯಾಸದಿಂದ ಜ್ಞಾನಿಯಾಗಿ, ಆ ಜ್ಞಾನದಿಂದ ಜ್ಞೇಯವಾದ ಬ್ರಹ್ಮವಸ್ತುವನ್ನು ಕಾಣುವವನು ಎಷ್ಟು ಸುಖಿಯಾಗುವನೋ, ಅಷ್ಟೇ ಸುಖವನ್ನು, ಈ ವರ್ಣಮಂಡಲ ದರ್ಶನದಿಂದ ಪಡೆಯಬಹುದು. ಮೇಲೆ ಹೇಳಿದ ಕರ್ಮಗಳಿಂದ ಬರುವ ಸುಕೃತಗಳನ್ನೇ ಈ ವರ್ಣಮಂಡಲಾರ್ಚನೆಯಿಂದಲೇ ಹೊಂದಬಹುದು.

ಯೇನ ಕೇನಾಪಿ ವಾಲಿಖ್ಯ ಪ್ರಲಿಪ್ಯಾಯತನಾಶ್ರಮಂ ।
ಉತ್ತರೇ ದಕ್ಷಿಣೇ ವಾಪಿ ಪೃಷ್ಠತೋ ವಾ ದ್ವಿಜೋತ್ತಮಾಃ ॥ ೪೦ ॥

ಚತುಷ್ಕೋಣೇಪಿ ವಾ ಚೂರ್ಣೈರಲಂಕೃತ್ಯ ಸಮಂತತಃ ॥
ವಿಕೀರ್ಯ ಗಂಧಕುಸುಮೈ ರ್ಧೂಪೈರ್ದೀಪೈಶ್ಚತುರ್ವಿಧೈಃ ॥ ೪೧ ॥
ಪ್ರಾರ್ಥಯೇದ್ದೇವಮೀಶಾನಂ ಶಿವಲೋಕಂ ಸ ಗಚ್ಛತಿ ॥ ೪೨ ॥

ತತ್ರ ಭುಕ್ತ್ವಾ ಮಹಾನ್ ಭೋಗಾನ್ ಕಲ್ಪಕೋಟಿಶತಂ ನರಃ ।
ಸ್ವದೇಹಗಂಧೈಶ್ಚ ಶುಭ್ರೈಃ ಪೂರಯನ್ ಶಿವಮಂದಿರಂ ॥ ೪೩ ॥

ಕ್ರಮಾದ್ಗಾಂಧರ್ವಮಾಸಾದ್ಯ ಗಂಧರ್ವೈಶ್ಚ ಸುಪೂಜಿತಃ ।
ಕ್ರಮಾದಾಗತ್ಯ ಲೋಕೇಽಸ್ಮಿನ್ ರಾಜಾ ಭವತಿ ವೀರ್ಯವಾನ್ ॥ ೪೪ ॥

ಆಪಃ ಪೂತಾ ಭವಂತ್ಯೇತಾ ವಸ್ತ್ರಪೂತಾಃ ಸಮುದ್ಭವಾಃ ।
ಅಫೇನಾ ಮುನಿಶಾರ್ದೂಲಾ ನಾದೇಯಾಶ್ಚ ವಿಶೇಷತಃ ॥ ೪೫ ॥

---

೪೦ ಅಥವಾ, ಒಂದು ಪವಿತ್ರವಾದ ಸ್ಥಳವನ್ನು ಸಾರಿಸಿ, ಹೇಗೋ ಯಾವುದರಿಂದಲೋ, ಆ ಶಿವಬೀಜಾಕ್ಷರಗಳನ್ನು ಉತ್ತರದಲ್ಲಾಗಲಿ, ಹಿಂಭಾಗದಲ್ಲಾಗಲಿ, ಚೌಕವಾಗಿ ಬರೆದು ನಾನಾವಿಧವಾದ ಹಿಟ್ಟುಗಳಿಂದ ಅಲಂಕರಿಸಬೇಕು.

೪೧-೪೨, ಅದರ ಮೇಲೆ ಗಂಧ, ಹೂವು, ಧೂಪ, ದೀಪ ಇವೇ ಮೊದಲಾದ ಉಪಚಾರಗಳಿಂದ ಅರ್ಚಿತನಾದ ಪರಮೇಶ್ವರವನ್ನು ಸ್ಥಾಪಿಸಿ, ಧ್ಯಾನಿಸಿದ್ದೇ ಆದರೆ ಆತನು ಸಾಕ್ಷಾತ್ ಶಿವಲೋಕವನ್ನು ಹೊಂದುವನು.

೪೩. ಅಲ್ಲಿ ಆ ಪೂಜಾಫಲದಿಂದ ಆತನು ಕಲ್ಪಕೋಟಿ ಪರ್ಯಂತವಾಗಿ ನಾನಾ ಸುಖಗಳನ್ನನುಭವಿಸಿ, ತನ್ನದೇ ಆದ ದೇಹವನ್ನು ಬಿಡದೆ ಸಂತೋಷದಿಂದ ಶಿವಾರ್ಚನೆ ಮಾಡುತ್ತಿರುವನು.

೪೪. ಅಲ್ಲಿಂದ ಗಂಧರ್ವಲೋಕವನ್ನು ಸೇರಿ, ಅಲ್ಲಿಯೂ ಪೂಜಿತನಾಗಿ ಪುನಃ ಭೂಲೋಕವನ್ನು ಹೊಂದಿ ಶೂರನಾದ ರಾಜನಾಗಿ ಜನಿಸುವನು.

೪೫. ಭೂಮಿಯಲ್ಲಿ ಉದ್ಭವಿಸಿದ, ಮತ್ತು ವಸ್ತ್ರದಿಂದ ಸೋಸಿದ, ನೊರೆಯಿಲ್ಲದ ನೀರು ಯಾವಾಗಲೂ ಪರಿಶುದ್ಧದಾದದ್ದು. ಆದ್ದರಿಂದ ಎಲೈ ಋಷಿಗಳೇ, ಶುದ್ಧವಾದ ನೀರು ಯಾವಾಗಲೂ ಪವಿತ್ರವೆನಿಸುವುದು.

ತಸ್ಮಾದದ್ಭಿಃ ಸರ್ವಕಾರ್ಯಾಣಿ ವೈದಿಕಾನಿ ದ್ವಿಜೋತ್ತಮಾಃ ।
ಅದ್ಭಿಃ ಕಾರ್ಯಾಣಿ ಸತತಂ ಪೂತಾಭಿಸ್ಸರ್ವಸಿದ್ಧಯೇ ॥ ೪೬ ॥

ಅಹಿಂಸಾ ತು ಪರೋ ಧರ್ಮಃ ಸರ್ವೇಷಾಂ ಪ್ರಾಣಿನಾಂ ಯತಃ ।
ತಸ್ಮಾತ್ಸರ್ವಪ್ರಯತ್ನೇನ ವಸ್ತ್ರಪೂತೇನ ಕಾರಯೇತ್ ॥ ೪೭ ॥

ಯದ್ದಾನಮಭಯಂ ಪುಣ್ಯಂ ಸರ್ವದಾನೋತ್ತಮೋತ್ತಮಂ ।
ತಸ್ಮಾತ್ಪರಿಹರ್ತವ್ಯಾ ಹಿಂಸಾ ಸರ್ವತ್ರ ಸರ್ವದಾ ॥ ೪೮ ॥

ಮನಸಾ ಕರ್ಮಣಾ ವಾಚಾ ಸರ್ವಭೂತಹಿತೇ ರತಾಃ ।
ಯದಾ ದರ್ಶಿತಪಂಥಾನಃ ಶಿವಲೋಕಂ ವ್ರಜಂತಿ ತೇ ॥ ೪೯ ॥

ತ್ರೈಲೋಕ್ಯಮಖಿಲಂ ಹತ್ವಾ ಯತ್ಪಾಪಂ ಜಾಯತೇ ನೃಣಾಂ ।
ಶಿವಾಲಯೇ ನಿಹತ್ಯೈಕಮಪಿ ತತ್ಪಾಪಮಾಪ್ನುಯಾತ್ ॥ ೫೦ ॥

---

೪೬. ನೀರಿನಿಂದಲೇ ಸಮಸ್ತವಾದ ವೈದಿಕಕರ್ಮಗಳನ್ನು ನಡೆಸಬೇಕು. ಪವಿತ್ರವಾದ ನೀರು ಕರ್ಮಗಳ ಸರ್ವಸಿದ್ಧಿಯನ್ನು ಕೊಡತಕ್ಕದ್ದು.

೪೭. ಅಹಿಂಸೆಯೆಂಬುದು ಉತ್ತಮವಾದ ಧರ್ಮ. ಆದ್ದರಿಂದ ಪ್ರತಿಯೊಬ್ಬರೂ ನೀರನ್ನು ವಸ್ತ್ರದಿಂದ ಶೋಧಿಸಿ ಉಪಯೋಗಿಸಬೇಕು. ಶೋಧಿಸುವಾಗ ನೀರಿನಲ್ಲಿರುವ ಪ್ರಾಣಿಗಳು ರಕ್ಷಿತವಾಗುವುವು.

೪೮. ಭಯಗ್ರಸ್ತರಿಗೆ ಅಭಯವನ್ನೀಯುವುದು, ಉತ್ತಮವಾದ ಮಹಾದಾನವೆನಿಸುವುದು. ಆದ್ದರಿಂದ ಪ್ರಾಣಿಗಳಿಗೆ ಭಯವನ್ನುಂಟುಮಾಡಿ ಆ ಮೂಲಕ ಅವುಗಳನ್ನು ಹಿಂಸಿಸುವುದನ್ನು ಸಂಪೂರ್ಣವಾಗಿ ಬಿಡಬೇಕು.

೪೯. ಯಾರು ಮನಃಪೂರ್ವಕವಾಗಿ ಮಾತಿನಿಂದಲೂ, ಕಾರ್ಯದಿಂದಲೂ, ಸಮಸ್ತ ಪ್ರಾಣಿಗಳಿಗೂ ಹಿತವಾಗಿ ವರ್ತಿಸುವರೊ, ಅವರು ದೇವದೂತರೊಂದಿಗೆ ಕೈಲಾಸವನ್ನು ಹೊಂದುವರು.

೫೦. ಶಿವದೇವಾಲಯದಲ್ಲಿ ಒಬ್ಬನನ್ನು ಕೊಂದರೆ, ಮೂರು ಲೋಕದ ಪ್ರಾಣಿಗಳನ್ನೆಲ್ಲಾ ವಧಿಸಿದರೆ, ಎಂಥ ಮಹಾಪಾಪವೊದಗುವದೋ ಅಂತಹ ಪಾಪವು ಅವನಿಗೆ ಸಂಭವಿಸುವುದು.

ಶಿವಾರ್ಥಂ ಸರ್ವದಾ ಕಾರ್ಯಾ ಪುಷ್ಪಹಿಂಸಾ ದ್ವಿಜೋತ್ತಮೈಃ ।
ಯಜ್ಞಾರ್ಥಂ ಪಶುಹಿಂಸಾ ಚ ರಾಜ್ಞಾ ದುಷ್ಟಸ್ಯ ಶಾಸನಂ ॥ ೫೧ ॥

ನ ಹಂತವ್ಯಾಃ ಸ್ತ್ರಿಯಃ ಸರ್ವಾ ಅತ್ರೇಶ್ಚ ಕುಲಸಂಭವಾಃ ।
ಬ್ರಹ್ಮಹತ್ಯಾಸಮಂ ಪಾಪಮಾತ್ರೇಯ್ಯಾ ವಧತೋ ಭವೇತ್ ॥ ೫೨ ॥

ಸ್ತ್ರಿಯಸ್ಸರ್ವಾ ನ ಹಂತವ್ಯಾ ಸರ್ವೈಶ್ಚೈವ ದ್ವಿಜಾತಿಭಿಃ ।
ಸರ್ವಧರ್ಮೇಷು ವಿಪ್ರೇಂದ್ರಾಃ ಪಾಪಕರ್ಮರತಾ ಅಪಿ ॥ ೫೩ ॥

ತಸ್ಮಾದಹಿಂಸಾದಿಯುತಃ ಶಾಂತಃ ಶಿವಜನಪ್ರಿಯಃ ।
ಭಕ್ತಿಂ ಶಿವೇ ಸಮಾಸ್ಥಾಯ ತಸ್ಮಿನ್ ಜನ್ಮನಿ ಮುಚ್ಯತೇ ॥ ೫೪ ॥

ವಿಶ್ವೇಶ್ವರೇ ವಿರೂಪಾಕ್ಷೇ ವಿಶ್ವವ್ಯಾಪಿನಿ ವಿಶ್ವಗೇ ।
ಸರ್ವಮನ್ಯತ್ಪರಿತ್ಯಜ್ಯ ಭಕ್ತಿಃ ಕಾರ್ಯಾ ಮನೀಷಿಭಿಃ ॥ ೫೫ ॥

---

೫೧. ಶಿವಪೂಜೆಗಾಗಿ ಪುಷ್ಪಗಳನ್ನು ಕೊಯ್ಯಬಹುದು. ಅದು ಪಾಪಕಾರ್ಯವಲ್ಲ. ಯಜ್ಞದಲ್ಲಿ ಮಾಡುವ ಪಶುಹಿಂಸೆಯೂ, ರಾಜನು ಅಪರಾಧಕ್ಕಾಗಿ ಕೊಡುವ ಶಿಕ್ಷೆಯೂ, ಹಿಂಸಾಕೃತ್ಯಗಳೆನಿಸುವದಿಲ್ಲ.

೫೨. ಸ್ತ್ರೀಯರನ್ನು ಯಾವಾಗಲೂ ಕೊಲ್ಲಬಾರದು. ಏಕೆಂದರೆ ಅವರು ಅತ್ರಿಋಷಿಗಳ ವಂಶದವರು. ಅವರನ್ನು ಕೊಲ್ಲುವುದರಿಂದ ಬ್ರಹ್ಮಹತ್ಯೆಗೆ ಸಮನಾದ ಪಾಪವು ಸಂಭವಿಸುವುದು.

೫೩ ಯಾವ ಜಾತಿಯ ಸ್ತ್ರೀಯರನ್ನೂ ವಧೆಮಾಡಕೂಡದು. ಧರ್ಮಭ್ರಷ್ಟರಾಗಿ ಪಾಪಕರ್ಮರತರಾಗಿದ್ದರೂ ಹೆಂಗಸರು ವಧ್ಯರಾಗುವುದಿಲ್ಲ.

೫೪. ಆದ್ದರಿಂದ ಪ್ರತಿಯೊಬ್ಬರೂ ಅಹಿಂಸೆಯಲ್ಲಿ ಮನಸ್ಸಿಟ್ಟು, ಹರಭಕ್ತರನ್ನು ಸೇವಿಸುತ್ತಾ, ಶಿವಧ್ಯಾನ ತತ್ಪರರಾಗಿದ್ದರೆ, ಅವರಿಗೆ ಅದೇ ಜನ್ಮದಲ್ಲಿ ಮುಕ್ತಿಯು ದೊರಕುವುದು.

೫೫. ವಿವೇಕಿಗಳಾದವರು, ಲೋಕರಕ್ಷಕನೂ, ವಿರೂಪಾಕ್ಷನೂ, ಪ್ರಪಂಚವ್ಯಾಪಿಯೂ, ವಿಶ್ವವನ್ನು ಅಡಗಿಸಿಕೊಂಡಿರುವವನೂ, ಆದ ಪರಶಿವನೊಬ್ಬನಲ್ಲಿಯೇ ಭಕ್ತಿಯಿಟ್ಟು ಧ್ಯಾನಿಸುತ್ತಿರಬೇಕು.

ಪುತ್ರವಿತ್ತಾದಿಷು ಯಥಾ ಸಕ್ತಂ ಚಿತ್ತಂ ಸದಾ ನೃಣಾಂ ।
ತಥಾ ಸಕೃದ್ವಿರೂಪಾಕ್ಷೇ ದೂರಂ ಕಿಂ ಶಾಂಕರಂ ಪದಂ ॥ ೫೬ ॥

ಭಜಂತೇ ಯೇ ಯಥಾ ಶಂಭುಂ ಫಲಂ ತೇಷಾಂ ತಥಾವಿಧಂ ।
ಪ್ರಯಚ್ಛತಿ ಮಹಾದೇವೋ ಭಕ್ತಿರ್ನೈವಾಸ್ತಿ ನಿಷ್ಫಲಾ ॥ ೫೭ ॥

ಉಚ್ಛಿಷ್ಟಃ ಪೂಜಯೇದೀಶಂ ಮೋಹಾಂಧೋ ಯದ್ವಿಜಾಧಮಃ ।
ಪಿಶಾಚಲೋಕೇ ವಿಪುಲಾನ್ ಭೋಗಾನ್ ಭುಂಕ್ತೇ ಸ ಮಾನವಃ ॥ ೫೮ ॥

ಸಂಕ್ರುದ್ಧೋ ರಾಕ್ಷಸಸ್ಥಾನಮಭಕ್ಷೇ ಯಾಕ್ಷಮಾಪ್ನುಯಾತ್ ।
ಗಾನಶೀಲೋ ಹಿ ಗಾಂಧರ್ವಂ ನೃತ್ಯಶೀಲಸ್ತಥೈವ ಚ ॥ ೫೯ ॥

---

೫೬. ಮನುಷ್ಯರು ತಮ್ಮ ಮಕ್ಕಳು ಮರಿಗಳಲ್ಲಿ, ಹಣಕಾಸುಗಳಲ್ಲಿ, ಹೇಗೆ ಆಸಕ್ತರಾಗುವರೋ, ಹಾಗೆಯೇ ಶಂಕರನ ಧ್ಯಾನದಲ್ಲಿಯೂ ಸ್ವಲ್ಪಮಟ್ಟಿಗಾದರೂ ಆಸಕ್ತಿಯಿಡಬೇಕು. ಇದರಿಂದ ಅವರಿಗೆ ಶಿವಸಾಯುಜ್ಯವು ಸುಲಭವಾಗಿ ದೊರಕುವುದು.

೫೭. ಭಗವಂತನಾದ ಶಂಕರನನ್ನು ಯಾರು ಯಾವರೀತಿಯಿಂದ ಸೇವಿಸುವರೋ, ಆ ಸೇವೆಗೆ ಸದೃಶವಾದ ಫಲವನ್ನು ಮಹಾದೇವನು ಅವರಿಗೆ ಕೊಟ್ಟೇಕೊಡುವನು. ಶಿವಭಕ್ತಿಯು ಯಾವಾಗಲೂ ನಿಷ್ಫಲವಾಗುವುದಿಲ್ಲ.

೫೮. ಯಾವ ಬ್ರಾಹ್ಮಣಾಧಮನು ಎಂಜಲು ಮೈಲಿಗೆಯಿಲ್ಲವೆ ಶಿವಾರಾಧನೆ ಮಾಡುವನೋ, ಆತನು ಪಿಶಾಚಲೋಕವನ್ನು ಸೇರಿ, ಅಲ್ಲಿ ಆ ಪೂಜಾಫಲವಾದ ಸುಖಗಳನ್ನು ಪಡೆಯುವನು.

೫೯. ಕೋಪದಿಂದ ಪೂಜಿಸಿದವನು ರಾಕ್ಷಸಲೋಕವನ್ನೂ, ಪ್ರಸಾದ ಭಕ್ಷಣೆ ಮಾಡದವನು ಯಕ್ಷಲೋಕವನ್ನೂ, ಗಾನ ಮತ್ತು ನೃತ್ಯಾದಿಗಳಿಂದ ಪರಶಿವನನ್ನು ತೃಪ್ತಿಪಡಿಸಿದವನು ಗಾಂಧರ್ವಲೋಕವನ್ನೂ ಸೇರುವರು.

ಖ್ಯಾತಿಶೀಲಸ್ತುಷ್ಟೈವೇಂದ್ರಮಬ್ಭಕ್ಷಶ್ಚಾಂದ್ರಮಾಪ್ನುಯಾತ್ ।
ಗಾಯತ್ರ್ಯಾ ಪೂಜಯೋದೀಶಮಬ್ದಮೇಕಂ ನಿರಂತರಂ ॥ ೬೦ ॥

ಪ್ರಾಜಾಪತ್ಯಮಥಾಸಾದ್ಯ ಸೃಷ್ಟಿಕರ್ತಾ ಸ್ವಯಂ ಭವೇತ್ ।
ಬ್ರಾಹ್ಮಂ ಚ ಪ್ರಣವೇನೈವ ತೇನೈವಾಪ್ನೋತಿ ವೈಷ್ಣವಂ ॥ ೬೧ ॥

ಶ್ರದ್ಧಯಾ ಸಕೃದೇವಾಪಿ ಸಮಭ್ಯರ್ಚ್ಯ ಮಹೇಶ್ವರಂ ।
ರುದ್ರಲೋಕಮನುಪ್ರಾಪ್ಯ ರುದ್ರೈಃ ಸಾರ್ಧಂ ಪ್ರಮೋದತೇ ॥ ೬೨ ॥

ಯ ಇಮಂ ಪಠತೇಧ್ಯಾಯಂ ಶ್ರದ್ಧಯಾ ಶಿವಸನ್ನಿಧೌ ।
ಸರ್ವಪಾಪವಿನಿರ್ಮುಕ್ತೋ ಬ್ರಹ್ಮಲೋಕೇ ಮಹೀಯತೇ ॥ ೬೩ ॥

---

೬೦. ಕೀರ್ತಿಗಾಗಿ ಶಿವನನ್ನು ಪೂಜಿಸಿದವನು ಇಂದ್ರಲೋಕವನ್ನೂ, ಜಲ ಭಕ್ಷಣೆಯಿಂದ ಶಿವನನ್ನು ತೃಪ್ತಿಪಡಿಸಿದವನು ಚಂದ್ರಲೋಕವನ್ನೂ ಹೊಂದುವರು. ಇದಲ್ಲದೆ ಯಾರು ಗಾಯತ್ರೀಮಂತ್ರದ ಪುರಶ್ಚರಣೆಯಿಂದ ಒಂದು ವರ್ಷಕಾಲ ಅವಿಚ್ಛಿನ್ನವಾಗಿ ಶಿವಾರ್ಚನೆ ಮಾಡುವರೋ ಅವರು,

೬೧. ಬ್ರಹ್ಮಲೋಕವನ್ನು ಸೇರಿ ತಾವೂ ಸಹ ಸೃಷ್ಟಿಕರ್ತರಾಗುವರು. ಪ್ರಣವ ಮಂತ್ರದಿಂದ ಪರಶಿವನನ್ನು ಆರಾಧಿಸುವವರು, ಬ್ರಹ್ಮ ಮತ್ತು ವೈಷ್ಣವಲೋಕಗಳನ್ನು ಸುಲಭವಾಗಿ ಪಡೆಯುವರು.

೬೨. ಹೆಚ್ಚು ಶ್ರದ್ಧೆಯಿಂದ ಮಹೇಶ್ವರನನ್ನು ಯಾರು ಒಂದು ಸಾರಿ ಪೂಜಿಸುವರೋ, ಅವರು ರುದ್ರಲೋಕವನ್ನು ಹೊಂದಿ ಅಲ್ಲಿರುವ ಏಕಾದಶರುದ್ರರೊಂದಿಗೆ ಅಂತರ್ಭಾವಪಡೆಯುವರು.

೬೩. ಯಾರು ಈ ಅಧ್ಯಾಯವನ್ನು ಶಿವಸನ್ನಿಧಿಯಲ್ಲಿ ಶ್ರದ್ಧೆಯಿಂದ ಪಠಿಸುವರೋ, ಅವರು ಸಮಸ್ತ ಪಾಪಗಳನ್ನೂ ಕಳೆದುಕೊಂಡು ಬ್ರಹ್ಮಲೋಕವನ್ನು ಸೇರುವರು.

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಶಿವಾಲಯಕರಣಾದಿಫಲ ಕಥನಂ ನಾಮ ಚತುಶ್ಚತ್ವಾರಿಂಶೋಽಧ್ಯಾಯಃ.

ಹೀಗೆ ಬ್ರಹ್ಮಪುರಾಣೋಪ ಪುರಾಣವಾದ ಸೌರದಲ್ಲಿ ಸೂತ ಶೌನಕ ಸಂವಾದ ರೂಪವಾಗಿ, ಶಿವಾಲಯ ನಿರ್ಮಾಣವೇ ಮೊದಲಾದ ಸತ್ಕರ್ಮಗಳನ್ನು, ಅವುಗಳ ಫಲವನ್ನು ತಿಳಿಸುವ ನಲವತ್ತು ನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಪಂಚಚತ್ವಾರಿಂಶೋಽಧ್ಯಾಯಃ

॥ ಋಷಯ ಊಚುಃ ॥

ಭೂಯೋಽಪಿ ಶ್ರೋತುಮಿಚ್ಛಾಮೋ ಮಾಹಾತ್ಮ್ಯಂ ಪರಮೇಷ್ಠಿನಃ ।
ಕಥಂ ಸರ್ವಾತ್ಮಕೋ ರುದ್ರಃ ಕಥಂ ಪಾಶುಪತಂ ವ್ರತಂ ॥ ೧ ॥

ಬ್ರೂಹಿ ಸೂತ ಮಹಾಭಾಗ ಸರ್ವಮೇತದಸಂಶಯಂ ।
ಕಥಂ ನೋ ಜಾಯತೇ ಪ್ರೀತಿಃ ಶ್ರೋತುಂ ಶಿವಕಥಾಮೃತಂ ॥ ೨ ॥

ನಲವತ್ತೈದನೆಯ ಅಧ್ಯಾಯವು.

೧. ಶೌನಕಾದಿಗಳು ಪುನಃ ಸೂತಪುರಾಣೀಕರನ್ನು ಕುರಿತು, " ಓ ಮಹರ್ಷಿಯೇ,ಇನ್ನೂ ನಾವು ಪರಬ್ರಹ್ಮನ ಮಹಿಮೆಯನ್ನೂ, ಸರ್ವಾತ್ಮಕನಾದ ಪರಶಿವನ ಶಕ್ತಿಯನ್ನೂ, ಪಶುಪತಿಯ ವ್ರತದ ವಿಧಿಯನ್ನೂ ಕೇಳಲಿಚ್ಛೆಯುಳ್ಳವರಾಗಿದ್ದೇವೆ.

೨. ಎಲೈ ಸೂತಮುನಿಯೇ, ಮಹಾಮಹಿಮನೇ, ಪರಶಿವನ ಕಥೆಯೆಂಬ ಅಮೃತವನ್ನು ಕೇಳಲು ನಮಗೆ ಹೆಚ್ಚಿನ ಆಸಕ್ತಿಯಿದೆ. ಆದ್ದರಿಂದಲೇ ರುದ್ರನು ಮಹಾಮಹಿಮನೆಂಬುದರಲ್ಲಿ ಸಂಶಯವಿಲ್ಲ. ದಯವಿಟ್ಟು ನಾವು ಕೇಳಿಕೊಂಡ ವಿಷಯಗಳನ್ನು ವಿವರಿಸಬೇಕು " ಎಂದು ಪ್ರಾರ್ಥಿಸಲು

॥ ಸೂತ ಉವಾಚ ॥

ಪುರಾ ಬ್ರಹ್ಮಾದಯೋ ದೇವಾ ದ್ರಷ್ಟುಕಾಮಾ ಮಹೇಶ್ವರಂ ।
ಮಂದರಂ ಪ್ರಯಯುಃ ಸರ್ವೇ ಶಂಭೋಃ ಪ್ರಿಯತರಂ ಗಿರಿಂ ॥ ೩ ॥

ಸ್ತುತ್ವಾ ಪ್ರಾಂಜಲಯೋ ದೇವಾ ಹರಸ್ಯ ಪುರತಃ ಸ್ಥಿತಾಃ ।
ತಾನ್ ದೃಷ್ಟ್ವಾಽಥ ಮಹಾದೇವೋ ಲೀಲಯಾ ಪರಮೇಶ್ವರಃ ॥ ೪ ॥

ತೇಷಾಮಪಹೃತಂ ಜ್ಞಾನಂ ಬ್ರಹ್ಮಾದೀನಾಂ ದಿವೌಕಸಾಂ ।
ದೇವಾ ಹ್ಯಪೃಚ್ಛನ್‌ಸ್ತಂ ದೇವಮಾತ್ಮಾನಂ ಪುರತಃ ಸ್ಥಿತಾಂ ॥ ೫ ॥

ಆಸಂಸ್ತೇ ಸಕೃದಜ್ಞಾನಾತ್ತಮಾಹುಃ ಕೋ ಭವಾನಿತಿ ।
ಅಬ್ರವೀದ್ಭಗವಾನೀಶೋ ಹ್ಯಹಮೇವ ಪುರಾತನಃ ॥ ೬ ॥

---

೩. ಸೂತರು ಶೌನಕಾದಿಗಳಿಗೆ ಹೀಗೆ ಹೇಳಲಾರಂಭಿಸಿದರು. “ ಎಲೈ ಶೌನಕಾದಿಗಳೇ, ಹಿಂದೆ ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ ಪರಮೇಶ್ವರನನ್ನು ನೋಡಲು ಇಚ್ಛೆಯುಳ್ಳವರಾಗಿ ಒಂದು ಸಾರಿ ಈಶ್ವರನಿಗೆ ಅತ್ಯಂತ ಪ್ರಿಯವಾಗಿದ್ದ ಮಂದರಪರ್ವತವನ್ನು ಕುರಿತು ಪ್ರಯಾಣಮಾಡಿದರು.

೪. ಅಲ್ಲಿ ಕೈಜೋಡಿಸಿಕೊಂಡು ನಿಂತು, ಶಂಕರನನ್ನು ಬಹುವಾಗಿ ಸ್ತುತಿಸಿದರು. ಮಹಾದೇವನು ಸಂತುಷ್ಟನಾಗಿ ಅವರೆಲ್ಲರಿಗೂ ಗೋಚರನಾದನು.

೫. ಅಷ್ಟರಲ್ಲಿ ಬ್ರಹ್ಮಾದಿದೇವತೆಗಳೆಲ್ಲರಿಗೂ ಅಜ್ಞಾನವು ಹೆಚ್ಚಿ, ನಿಜವಾದ ಬ್ರಹ್ಮಜ್ಞಾನವು ಮಾಯವಾಗಿತ್ತು. ಆದರಿಂದಲೇ ದೇವತೆಗಳೆಲ್ಲರೂ ತಮ್ಮ ಎದುರಿನಲ್ಲಿದ್ದ ಪರಮೇಶ್ವರನನ್ನು ಕುರಿತು,

೬. ‘ ಎಲೈ ದೇವದೇವನೇ ನೀನು ಯಾರು ? ’ ಎಂದು ಅವಿವೇಕದಿಂದ ಪ್ರಶ್ನೆಮಾಡಲು, ಶಂಕರನು “ ಎಲೈ ಬ್ರಹ್ಮಾದಿಗಳೇ ನಾನೇ ಈಶ್ವರನು. ಎಲ್ಲರಿಗೂ ಆದಿಭೂತನು.

ಅಹಂ ಪ್ರಥಮಮೇವಾಸಂ ವರ್ತಾಮಿ ಚ ಸುರೋತ್ತಮಾಃ ।
ಭವಿಷ್ಯಾಮಿ ಚ ಲೋಕೇಽಸ್ಮಿನ್ ಮತ್ತೋ ನಾನ್ಯೋಽಸ್ತಿ ಕಶ್ಚನ ॥ ೭ ॥

ವ್ಯತಿರಿಕ್ತಂ ಚ ಮತ್ತೋಽಸ್ತಿ ನಾನ್ಯತ್ಕಿಂಚಿತ್ಸುರೋತ್ತಮಾಃ ।
ನಿತ್ಯಾನಿತ್ಯೋಽಹಮೇವಾಸ್ಮಿ ಬ್ರಹ್ಮಾಹಂ ಬ್ರಹ್ಮಣಸ್ಪತಿಃ ॥ ೮ ॥

ದಿಶಶ್ಚ ವಿದಿಶಶ್ಚೈವ ಪ್ರಕೃತಿಶ್ಚ ಪುಮಾನಹಂ ।
ತ್ರಿಷ್ಟುಪ್ ಜಗತ್ಯನುಷ್ಟುಪ್ಚ ಪಂಕ್ತಿಶ್ಛಂದಸ್ತ್ರಯೀಮಯಃ ॥ ೯ ॥

ಸತ್ಯೋಽಹಂ ಸರ್ವತಃ ಶಾಂತಸ್ತ್ರೇತಾಗ್ನಿರ್ಗೌರಹಂ ಗುರುಃ ।
ಗೌರ್ಯಹಂ ಚ ಹರಶ್ಚಾಹಂ ದ್ಯೌರಹಂ ಜಗತಾಂ ಪ್ರಭುಃ ॥ ೧೦ ॥

ಶ್ರೇಷ್ಠೋಽಹಂ ಸರ್ವತತ್ತ್ವಾನಾಂ ವರಿಷ್ಠೋಽಹಮಪಾಂ ಪತಿಃ ।
ಆಪೋಽಹಂ ಭಗವಾನೀಶಸ್ತೇಜೋಽಹಂ ವೇದಿರಪ್ಯಹಂ ॥ ೧೧ ॥

---

೭. ಎಲ್ಲಕ್ಕೂ ಮೊದಲಿದ್ದವನು ನಾನೇ. ಎಲ್ಲರಿಗೂ ಪ್ರತಿನಿಧಿಯಾಗಿರುವವನು ನಾನೇ. ಮುಂದೆ ಲೋಕದಲ್ಲಿ ನಿಲ್ಲುವವನೂ ನಾನೊಬ್ಬನೇ. ನನಗಿಂತ ಬೇರೆಯಾದವನು ಮತ್ತೊಬ್ಬನಿಲ್ಲ.

೮. ಲೋಕದ ಸಕಲ ವಸ್ತುಗಳಲ್ಲಿಯೂ ನಾನಿರುವೆನು. ನಾನಿಲ್ಲದಿರುವ ವಸ್ತುವು ಬೇರೊಂದಿಲ್ಲ. ನಿತ್ಯವಸ್ತುವೂ ಅನಿತ್ಯವಸ್ತುವೂ ನಾನೇ. ನಾನೇ ಪರಬ್ರಹ್ಮನು. ಬ್ರಹ್ಮನಿಗೆ ಒಡೆಯನಾದವನೂ ನಾನೇ.

೯. ದಿಕ್ಕುಗಳೂ, ವಿದಿಕ್ಕುಗಳೂ ನಾನೇ. ಪ್ರಕೃತಿ, ಪುರುಷರೆಂಬ ಸಾಂಖ್ಯ ತತ್ತ್ವಪ್ರತಿಪಾದ್ಯನೂ ನಾನೊಬ್ಬನೇ. ತ್ರಿಷ್ಟುಪ್, ಜಗತೀ, ಅನುಷ್ಟುಪ್, ಪಂಕ್ತಿ ಎಂಬ ಹೆಸರಿನ ಛಂದಸ್ಸುಗಳೂ ನಾನೇ. ಮೂರು ವೇದಗಳ ಸ್ವರೂಪನೂ ನಾನೇ.

೧೦. ಸತ್ಯ, ಶಾಂತಿ, ಅಗ್ನಿತ್ರಯಗಳು, ಸ್ವರ್ಗ, ಗುರು, ಈ ವಸ್ತು ಸಮೂಹವೆಲ್ಲಾ ನಾನೇ. ಗೌರೀ, ಶಿವ, ಆಕಾಶ, ಈ ಶಬ್ದವಾಚ್ಯನೂ, ಲೋಕಕ್ಕೆ ಒಡೆಯನಾದವನೂ ನಾನೇ.

೧೧. ನಾನೇ ಶ್ರೇಷ್ಠನು, ಸಕಲ ತತ್ತ್ವಗಳಲ್ಲಿ ಮುಖ್ಯನಾದವನು ನಾನು ನಾನೇ ಸಮುದ್ರನು. ನೀರೂ ನಾನೇ. ಭಗವಂತನಾದ ಶಿವನೂ, ತೇಜೋರೂಪಿಯೂ, ಅಗ್ನಿಸ್ವರೂಪನೂ, ವೇದಿಕೆಯೂ ಕೂಡ ನಾನೇ ಆಗಿರುವೆನು.

ಋಗ್ವೇದೋಽಹಂ ಯಜುರ್ವೇದಃ ಸಾಮವೇದೋಽಹಮಾತ್ಮಭೂಃ ।
ಅಥರ್ವಣೋಽಥ ಮಂತ್ರೋಽಹಂ ತಥಾ ಚಾಂಗಿರಸಾಂ ವರಃ ॥ ೧೨ ॥

ಇತಿಹಾಸಪುರಾಣಾನಿ ಕಲ್ಪೋಽಹಂ ಕಲ್ಪನಾ ಹ್ಯಹಂ ।
ಅಕ್ಷರಂ ಚ ಕ್ಷರಂ ಚಾಹಂ ಕ್ಷಾಂತಿಃ ಶಾಂತಿರಹಂ ಖಗಃ ॥ ೧೩ ॥

ಗುಹ್ಯೋಽಹಂ ಸರ್ವವೇದೇಷು ಆರಣ್ಯೋಽಹಮಜೋಽಪ್ಯಹಂ ।
ಪುಷ್ಕರಂ ಚ ಪವಿತ್ರಂ ಚ ಮಧ್ಯಂ ಚಾಹಂ ತತಃ ಪರಂ ॥ ೧೪ ॥

ಬಹಿಶ್ಚಾಹಂ ತಥಾ ಚಾಂತಃ ಪುರಸ್ತಾದಹಮವ್ಯಯಃ ।
ಜ್ಯೋತಿಶ್ಚಾಹಂ ತಮಶ್ಚಾಹಂ ಬ್ರಹ್ಮವಿಷ್ಣುಮಹೇಶ್ವರಾಃ ॥ ೧೫ ॥

ಬುದ್ಧಿಶ್ಚಾಹಮಹಂಕಾರಸ್ತನ್ಮಾತ್ರಾಣೀಂದ್ರಿಯಾಣಿ ಚ ।
ಏವಂ ಸರ್ವಂ ಚ ಮಾಮೇವ ಯೋ ವೇದ ಸ ಸುರೋತ್ತಮಃ ॥ ೧೬ ॥

---

೧೨. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಎಂಬ ನಾಲ್ಕು ವೇದಗಳೂ, ಬ್ರಹ್ಮರೂಪಿಯೂ ಆಂಗೀರಸವೆಂಬ ಶ್ರೇಷ್ಠಮುನಿಯೂ ನಾನೇ ಆಗಿದ್ದೇನೆ.

೧೩. ಇತಿಹಾಸಗಳೂ, ಪುರಾಣಗಳೂ, ಕಲ್ಪಶಾಸ್ತ್ರವೂ, ಕಲ್ಪನಾಚಾತುರ್ಯ ವಿಶಿಷ್ಟನೂ ನಾನೇ. ನಾಶರಹಿತನೂ, ನಾಶಕ್ಕೆ ಸಿಕ್ಕುವವನೂ, ಕ್ಷಮೆಯೂ, ಶಾಂತಿಯೂ, ಗಗನಚಾರಿಯೂ, ನಾನೇ ಆಗಿದ್ದೇನೆ.

೧೪. ಸಮಸ್ತವೇದಗಳ ಅಂತಸ್ಸಾರವೂ, ಆರಣ್ಯಕೋಪನಿಷತ್ತೂ, ಉತ್ಪತ್ತಿ ರಹಿತನೂ, ಪುಷ್ಕರಕ್ಷೇತ್ರವೂ, ಪವಿತ್ರವಸ್ತುವೂ, ಮಧ್ಯಲೋಕವೂ, ಅಲ್ಲಿಂದ ಮುಂದಿನ ಲೋಕಗಳೂ ಸಹ ನಾನೇ.

೧೫. ಬಹಿಃಪ್ರದೇಶವೂ, ಅಂತರ್ಭಾಗವೂ, ಮುಂಭಾಗವೂ ಇವೆಲ್ಲಾ ನನ್ನಿಂದ ಆವೃತವಾದವುಗಳೇ. ನಾಶರಹಿತವಾದ ತೇಜಸ್ಸೂ, ಅದಕ್ಕೆ ವಿರುದ್ಧವಾದ ತಮಸ್ಸೂ, ಬ್ರಹ್ಮವಿಷ್ಣುಮಹೇಶ್ವರರೂ, ನನ್ನ ವಿಕಾರಗಳೇ.

೧೬. ಬುದ್ಧಿ, ಅಹಂಕಾರ, ಇಂದ್ರಿಯಗಳ ಸಮೂಹ ಇವೇ ಮೊದಲಾದ ಸಕಲ ಪದಾರ್ಥಗಳೂ ನಾನೇ ಆಗಿರುವೆನು. ಇದೇ ನಿಜವಾದ ತತ್ತ್ವ. ಇದನ್ನು ಯಾವನು ತಿಳಿಯುವನೋ ಅವನೇ ಸುರಶ್ರೇಷ್ಠನು.

ಸ ಏವ ಸರ್ವವಿತ್ಸರ್ವಃ ಸರ್ವಾತ್ಮಾ ಸರ್ವದರ್ಶನಃ ।
ಗಾಂ ಗೋಭಿರ್ಬ್ರಾಹ್ಮಣಾನ್ಸರ್ವಾನ್ ಬ್ರಾಹ್ಮಣ್ಯೇನ ಹವೀಂಷಿ ಚ ॥ ೧೭ ॥

ಹವಿಷಾ ಯಸ್ತಥಾ ಸತ್ಯಂ ಸತ್ಯೇನ ಚ ಸುರೋತ್ತಮಾಃ ।
ಧರ್ಮಂ ಧರ್ಮೇಣ ಚ ತಥಾ ತರ್ಪಯಾಮಿ ಸ್ವತೇಜಸಾ ॥ ೧೮ ॥

ಇತ್ಯಾದಿ ಭಗವಾನುಕ್ತ್ವಾ ತತ್ರೈವಾಂತರಧೀಯತ ।
ನಾಪಶ್ಯಂಸ್ತೇ ತತೋ ದೇವಂ ರುದ್ರಂ ಪರಮಕಾರಣಂ ॥ ೧೯ ॥

ತಂ ದೇವಾಃ ಪರಮಾತ್ಮಾನಂ ರುದ್ರಂ ಧ್ಯಾಯಂತಿ ಶಂಕರಂ ।
ಸನಾರಾಯಣಕಾ ದೇವಾಃ ಸೇಂದ್ರಾಶ್ಚ ಮುನಯಸ್ತಥಾ ॥ ೨೦ ॥
ತತೋರ್ಧ್ವಬಾಹವೋ ದೇವಾ ಹ್ಯಸ್ತುವನ್ ಶಂಕರಂ ತದಾ ।

॥ ದೇವಾ ಊಚುಃ ॥

ಯ ಏಷ ಭಗವಾನ್ ರುದ್ರೋ ಬ್ರಹ್ಮಾ ವಿಷ್ಣುರ್ಮಹೇಶ್ವರಃ ।
ಸ್ಕಂದಶ್ಚಾಗ್ನಿಸ್ತಥಾ ಚಂದ್ರೋ ಭುವನಾನಿ ಚತುರ್ದಶ ॥ ೨೧ ॥

೧೭–೧೮. ಅವನೇ ಸರ್ವಜ್ಞನು. ಸರ್ವದರ್ಶಕನೂ, ಸರ್ವತ್ರವ್ಯಾಪಿಯೂ ಅವನೇ ಆಗುವನು. ಗೋವುಗಳಾಗಿ ಗೋವುಗಳನ್ನು ತೃಪ್ತಿಪಡಿಸುವೆನು. ಬ್ರಾಹ್ಮಣ ಧರ್ಮದಿಂದ ಬ್ರಾಹ್ಮಣರನ್ನು ಕಾಪಾಡುವೆನು. ಹವಿಸ್ಸುಗಳಿಗೆ ಹವಿಸ್ಸಿನಂತಿರುವೆನು. ಸತ್ಯವನ್ನು ಸತ್ಯಮಾರ್ಗದಿಂದಲೂ, ಧರ್ಮವನ್ನು ಧರ್ಮರೂಪದಿಂದಲೂ ಸಂತೋಷ ಗೊಳಿಸುವೆನು. ಅವೆಲ್ಲವೂ ನನ್ನ ತೇಜಸ್ಸೇ ಹೊರತು ಮತ್ತೆ ಬೇರೆಯಲ್ಲ" ಎಂದನು.

೧೯. ಹೀಗೆ ಪರಮೇಶ್ವರನು ಬ್ರಹ್ಮಾದಿಗಳಿಗೆ ಉಪದೇಶಿಸಿ, ತಾನು ಕಣ್ಮರೆ ಯಾದನು. ಅನಂತರ ದೇವತೆಗಳು ಆದಿಕಾರಣನಾದ ರುದ್ರರೂಪಿಯಾದ ಮಹೇಶ್ವರ ನನ್ನು ಕಾಣಲೇ ಇಲ್ಲ.

೨೦. ಬಳಿಕ ವಿಷ್ಣು, ಬ್ರಹ್ಮ ಇವರೇ ಮೊದಲಾದ ದೇವತೆಗಳೆಲ್ಲರೂ, ಋಷಿ ಗಳೊಡನೆ, ಪರಮಾತ್ಮರೂಪಿಯಾದ ಶಂಕರನನ್ನು ಕೈ ಮೇಲಕ್ಕೆತ್ತಿಕೊಂಡು ವಿಧವಿಧ ವಾಗಿ ಸ್ತುತಿಸಲಾರಂಭಿಸಿದರು.

೨೧. " ಈ ಮಹೇಶ್ವರನು ಸಾಕ್ಷಾತ್ತ್ರಿಮೂರ್ತಿಸ್ವರೂಪನು. ಸ್ಕಂದ, ಅಗ್ನಿ, ಚಂದ್ರ, ಚತುರ್ದಶ ಲೋಕಗಳೂ ಇವೆಲ್ಲವೂ ಮಹೇಶ್ವರ ರೂಪಿಗಳೇ.

ಭೂತಾನಿ ಚ ತಥಾ ಸೂರ್ಯಃ ಸೋಮಾದ್ಯಷ್ಟೌ ಗ್ರಹಾಸ್ತಥಾ । ॥ ೨೨ ॥
ಪ್ರಾಣಃ ಕಾಲೋ ಯಮೋ ಮೃತ್ಯುರಮೃತಂ ಪರಮೇಶ್ವರಃ ।
ಭೂತಂ ಭವ್ಯಂ ಭವಿಷ್ಯಂ ಚ ವರ್ತಮಾನಂ ಮಹೇಶ್ವರಃ ॥ ೨೩ ॥

ವಿಶ್ವಂ ಕೃತ್ಸ್ನಂ ಜಗತ್ಸರ್ವಂ ಸತ್ಯಂ ತಸ್ಮೈ ನಮೋ ನಮಃ ।
ಓಮಾದೌ ಚ ತಥಾ ಮಧ್ಯೇ ಭೂರ್ಭುವಃಸ್ವಸ್ತಥೈವ ಚ ॥ ೨೪ ॥

ಅಂತೇ ತತ್ತ್ವಂ ವಿಶ್ವರೂಪೋ ಶೀರ್ಷಂ ಚ ಜಗತಃ ಸದಾ ।
ಬ್ರಹ್ಮೈಕಸ್ತ್ವಂ ದ್ವಿತ್ರಿಧೋರ್ಧ್ವಮಧಸ್ತತ್ತ್ವಂ ಸುರೇಶ್ವರಃ ॥ ೨೫ ॥

ಶಾಂತಿಶ್ಚ ತ್ವಂ ತಥಾ ಪುಷ್ಟಿಸ್ತುಷ್ಟಿಶ್ಚಾಪ್ಯಹುತಂ ಹುತಂ ।
ವಿಶ್ವಂ ಚೈವ ತಥಾಽವಿಶ್ವಂ ದತ್ತಂ ಚಾದತ್ತಮೀಶ್ವರಃ ॥ ೨೬ ॥

೨೨–೨೩. ಪಂಚಭೂತಗಳೂ, ಸೂರ್ಯದೇವನೂ, ಮಿಕ್ಕ ಎಂಟು ಗ್ರಹಗಳೂ, ಪ್ರಾಣ, ಯಮ, ಕಾಲ, ಮೃತ್ಯು, ಅಮೃತ, ಪರಶಿವ, ಭೂತ, ವರ್ತಮಾನ, ಭವಿಷ್ಯವೆಂಬ ಕಾಲತ್ರಯಗಳೂ, ಈ ಪರಮೇಶ್ವರನ ಅಂಶಗಳೇ.

೨೪. ಪರಮೇಶ್ವರನೇ ಅಖಂಡ ಜಗತ್ತು. ಪರಮೇಶ್ವರನೇ ಸತ್ಯಸ್ವರೂಪಿ. ಅಂತಹ ಪರಶಿವನಿಗೆ ನಮಸ್ಕಾರ. ಪರಶಿವನೇ! ಸರ್ವ ಮಂತ್ರಗಳಿಗೂ ಆದಿಭೂತವಾದ ಓಂಕಾರವೆನಿಸಿ, ಭೂರ್ಭುವೋಲೋಕಗಳೂ, ಸ್ವರ್ಗಲೋಕವೂ ನೀನೇ ಆಗಿದ್ದೀಯೆ.

೨೫. ಲೋಕಪ್ರಳಯಕಾಲದಲ್ಲಿ ನೀನೇ ವಿಶ್ವರೂಪನಾಗುವೆ. ಲೋಕಕ್ಕೆ ಶಿರೋಪ್ರಾಯನಾಗಿರುವೆ. ನೀನೇ ಬ್ರಹ್ಮನು. ಏಕರೂಪನಾಗಿದ್ದರೂ, ಎರಡು ಮೂರು ರೂಪಗಳಿಂದ ತೋರಿಬರುತ್ತಿರುವೆ. ಊರ್ಧ್ವಾಧೋ ಭಾಗಗಳೂ. ಸಕಲ ತತ್ತ್ವಗಳೂ ನೀನೇ ಆಗಿದ್ದೀಯೆ.

೨೬. ನೀನೇ ಶಾಂತಿಯು. ಪುಷ್ಟಿ, ತುಷ್ಟಿ, ಹುತನಾಗದವನು. ಹುತವಾಗುವ ಹವಿಸ್ಸು, ಪ್ರಪಂಚ, ಪ್ರಪಂಚವ್ಯತಿರಿಕ್ತವಾಗಿರುವ ವಸ್ತುಗಳು, ದಾನಮಾಡುವ ಮತ್ತು ದಾನಮಾಡಲಾಗದಿರುವ ಪದಾರ್ಥಗಳೆಲ್ಲವೂ ನೀನೇ ಅಲ್ಲವೇ?

ಋತಂ ವಾಪ್ಯಥವಾ ದೇವ ಪರಮಪ್ಯಪರಂ ಧ್ರುವಂ ।
ಪರಾಯಣಂ ಸತಾಂ ಚೈವ ಅಸತಾಮಪಿ ಶಂಕರ ॥ ೨೭ ॥

ಅಪಾಮ ಸೋಮಮಮೃತಾ ಅಭೂಮಾ ।
ಗನ್ಮ ಜ್ಯೋತಿರವಿದಾಮ ದೇವಾನ್ ।
ಕಿಂ ನೂನಮಸ್ಮಾನ್ ಕೃಣವದರಾತಿಃ ।
ಕಿಮು ಧೂರ್ತಿರಮೃತ ಮರ್ತ್ಯಸ್ಯ ॥ ೨೮ ॥

ಏತಜ್ಜಗದ್ವೇದಿತವ್ಯ ಮಕ್ಷರಂ ಸೂಕ್ಷ್ಮಮವ್ಯಯಂ ।
ಪ್ರಾಜಾಪತ್ಯಂ ಪವಿತ್ರಂ ವಾ ಸೌಮ್ಯಮಗ್ರಾಹ್ಯಮಗ್ರಿಯಂ ॥ ೨೯ ॥

ಆಗ್ನೇಯೇನಾಪಿ ಚಾಗ್ನೇಯಂ ವಾಯವ್ಯೇನ ಸಮೀರಣಂ ।
ಸೌಮ್ಯೇನ ಸೌಮ್ಯಂ ಗ್ರಸತೇ ತೇಜಸಾ ಸ್ವೇನ ಲೀಲಯಾ ॥ ೩೦ ॥

---

೨೭. ಎಲೈ ಸ್ವಾಮಿಯೇ, ಸತ್ಯ, ಸಂಶಯ; ಪರ, ಅಪರ; ಸತ್ಪರಾಯಣ, ಅಸತ್ಪರಾಯಣ; ಹೀಗೆ ಪರಸ್ಪರ ನಿರುದ್ಧ ವಸ್ತುಗಳೂ ನೀನೇ ಆಗಿರುವೆ.

೨೮. ಆದ್ದರಿಂದ ಪರಶಿವನೇ, ಸೋಮ ರಸವನ್ನು (ಶಿವಧ್ಯಾನವನ್ನು) ಪಾನ ಮಾಡುತ್ತೇವೆ. ಇದರಿಂದ ಮರಣವರ್ಜಿತರಾಗುತ್ತೇವೆ. ಅಲ್ಲದೆ ಶಿವತೇಜಸ್ಸನ್ನು ಪಡೆದು ಸಮಸ್ತ ದೇವತೆಗಳ ತತ್ತ್ವವನ್ನರಿಯುತ್ತೇವೆ. ಮನುಷ್ಯರಲ್ಲಿರುವ ಅಜ್ಞಾನವನ್ನು ನಾವೂ ಪಡೆಸೆವಾದರೆ, ನಿಜವಾಗಿಯೂ ನಾವೂ ಸಹ ಶಿವದ್ವೇಷಿಗಳೆಂದೇ ಖ್ಯಾತಿಪಡೆಯುವೆವು. ಆದ್ದರಿಂದ ಮನುಷ್ಯರ ಧರ್ಮವನ್ನು ದೂರಮಾಡಿ ನಿನ್ನ ಭಕ್ತಿಪರಾಯಣರಾಗುವೆವು.

೨೯. ಈ ಪ್ರಪಂಚವು ಶಿವಮಯವಾದದ್ದು. ಆದ್ದರಿಂದಲೇ ಈ ಜಗತ್ತಿಗೆ ನಾಶವಿಲ್ಲ. ಸೂಕ್ಷ್ಮವಾಗಿ ಶಿವನಲ್ಲಿ ಲೀನವಾಗಿದ್ದು, ಬ್ರಹ್ಮನ ಪವಿತ್ರವಾದ ಸೃಷ್ಟಿಯಿಂದ ಉದ್ಭವಿಸಿ, ಯಾರಿಗೂ ಸಿಕ್ಕದಂತೆ ಶ್ರೇಷ್ಠತಮನಾಗಿ ನಿಂತಿದೆ.

೩೦. ಓ, ಶಂಕರನೆ! ಅಗ್ನಿ ಶಕ್ತಿಯಿಂದ ಅಗ್ನಿಯನ್ನೂ, ವಾಯುರೂಪದಿಂದ ವಾಯುವನ್ನೂ, ಸೌಮ್ಯಸ್ವಭಾವದಿಂದ ಸೌಮ್ಯವಸ್ತುಗಳನ್ನೂ, ತನ್ನ ತೇಜಸ್ಸಿನಿಂದ ತೇಜಸ್ಸನ್ನೂ, ಆಕರ್ಷಿಸಿ ಜಗತ್ತನ್ನು ತನ್ನಲ್ಲಿ ಲೀನಮಾಡಿಕೊಳ್ಳುವೆ.

ತಸ್ಮೈ ನಮೋಽಪಸಂಹರ್ತ್ರೇ ಮಹಾಗ್ರಾಸಾಯ ಶೂಲಿನೇ ।
ಹೃದಿಸ್ಥಾ ದೇವತಾಃ ಸರ್ವಾ ಹೃದಿ ಪ್ರಾಣಾಃ ಪ್ರತಿಷ್ಠಿತಾಃ　　॥ ೩೧ ॥

ಹೃದಿ ತ್ವಮಸಿ ಯೋನಿಸ್ತ್ವಂ ತಿಸ್ರೋ ಮಾತ್ರಾಃ ಪರಸ್ತು ಸಃ ।
ಶಿರಶ್ಚೋತ್ತರತಸ್ತಸ್ಯ ಪಾದೋ ದಕ್ಷಿಣತಸ್ತಥಾ　　॥ ೩೨ ॥

ಸ ಯೋ ಜೀವೋತ್ತರಃ ಸಾಕ್ಷಾತ್ಸ ಓಂಕಾರಃ ಸನಾತನಃ ।
ಓಂಕಾರೋ ಯಃ ಸ ವೈ ದೇವಃ ಪ್ರಣವೋ ವ್ಯಾಪ್ಯ ತಿಷ್ಠತಿ　　॥ ೩೩ ॥

ಅನಂತತಾರಃ ಸೂಕ್ಷ್ಮಶ್ಚ ಶುಕ್ಲಂ ವೈದ್ಯುತಮೇವ ಚ ।
ಪರಬ್ರಹ್ಮ ಸ ಈಶಾನಃ ಏಕೋ ರುದ್ರಃ ಸ ಏವ ಚ　　॥ ೩೪ ॥

---

೩೧. ಹಾಗೆ ಜಗತ್ತನ್ನೇ ತನ್ನಲ್ಲಿ ಅಡಗಿಸುವ, ಸಮಯಬಂದಾಗ ಜಗತ್ತನ್ನೇ ನುಂಗುವಂತಹ, ತ್ರಿಶೂಲಧಾರಿಯಾದ ಪರಮೇಶ್ವರನಿಗೆ ನಮಸ್ಕಾರವು. ನಿನ್ನ ಹೃದಯದಲ್ಲಿ ಸಮಸ್ತ ದೇವತೆಗಳೂ ಎಲ್ಲಾ ಪ್ರಾಣಗಳೂ ಅಂತರ್ಗತವಾಗಿವೆಯಲ್ಲವೆ!

೩೨. ಎಲೈ ಶಿವನೇ, ನೀನು ಹೃದಯದಲ್ಲಿದ್ದೀಯೆ. ಆದರೂ ಸಕಲಲೋಕದ ಉತ್ಪತ್ತಿಗೆ ಯೋನಿಭೂತವಾಗಿಯೂ ಕಾಣುವೆ. ನಿನ್ನ ಅಂಶಗಳೇ ಬ್ರಹ್ಮ, ವಿಷ್ಣು, ರುದ್ರರೆಂಬ ತ್ರಿಮೂರ್ತಿಗಳು. ಇವರೆಲ್ಲರಿಗೂ ದೊಡ್ಡವನಾಗಿರುವವನು ನೀನೇ ನಿನ್ನ ಕಲೆಯು ಉತ್ತರ ದಿಕ್ಕಿನ ತುದಿಯಲ್ಲಿಯೂ, ಪಾದವು ದಕ್ಷಿಣ ದಿಕ್ಕಿನ ಅಂಚಿನಲ್ಲಿಯೂ ಕಾಣುತ್ತದೆ.

೩೩. ಜೀವಿಗಳ ಉದ್ಧಾರಕವಾದ ಮಂತ್ರವೆಂದರೆ ಓಂಕಾರವು. ಅದೇ ಪ್ರಣವವು. ಅದೇ ಆದಿಮಂತ್ರವು. ಅದೇ ನಿಜವಾದ ದೇವರು. ಅದನ್ನನುಸರಿಸಿಯೇ ಪರಶಿವನು ಜಗತ್ತಿನಲ್ಲಿ ವ್ಯಾಪಕನಾಗಿ ನಿಂತಿರುವನು.

೩೪. ಅನಂತವಾದ ಜಗದ್ವ್ಯಾಪ್ಯನು, ಆದರೆ ಸೂಕ್ಷ್ಮರೂಪಿಯು. ಹಾಗೆಯೇ ಶ್ವೇತವರ್ಣ ಶೋಭಿತನು, ಮಿಂಚಿನಂತೆ ಹೊಳೆಯುವನು. ಇಂತಹ ಸರ್ವಗುಣ ವಿಶಿಷ್ಟನಾದವನೇ ಈಶ್ವರನು. ಅವನು ಒಬ್ಬನೇ ರುದ್ರಶಬ್ದವಾಚ್ಯನು.

ಭವಾನ್ಮಹೇಶ್ವರಃ ಸಾಕ್ಷಾನ್ಮಹಾದೇವೋ ನ ಸಂಶಯಃ ।
ಊರ್ಧ್ವ ಗಮುನ್ನಮಯತ್ಯೇವಂ ಸ ಓಂಕಾರಃ ಪ್ರಕೀರ್ತಿತಃ ॥ ೩೫ ॥

ಪ್ರಾಣಾನ್ನಯತಿ ಯತ್ತಸ್ಮಾತ್ಪ್ರಣವಃ ಪರಿಭಾಷಿತಃ ।
ಸರ್ವಂ ವ್ಯಾಪ್ನೋತಿ ಯತ್ತಸ್ಮಾತ್ಸರ್ವವ್ಯಾಪೀ ಸನಾತನಃ ॥ ೩೬ ॥

ಬ್ರಹ್ಮಾ ಹರಿಶ್ಚ ಭಗವಾನಾದ್ಯಂತಂ ನೋಪಲಬ್ಧವಾನ್ ।
ಯಥಾನ್ಯೇ ಚ ತತೋಽನಂತೋ ರುದ್ರಃ ಪರಮಕಾರಣಂ ॥ ೩೭ ॥

ಯತ್ತಾರಯತಿ ಸಂಸಾರಾತ್ತಾರ ಇತ್ಯಭಿಧೀಯತೇ ।
ಸೂಕ್ಷ್ಮೋ ಭೂತ್ವಾ ಶರೀರಾಣಿ ಸರ್ವದಾ ಹ್ಯಧಿತಿಷ್ಠತಿ ॥ ೩೮ ॥

ತಸ್ಮಾತ್ಸೂಕ್ಷ್ಮಃ ಸದಾ ಖ್ಯಾತೋ ಭಗವಾನ್ನೀಲಲೋಹಿತಃ ।
ನೀಲಶ್ಚ ಲೋಹಿತಶ್ಚೈವ ಪ್ರಧಾನಪುರುಷಾನ್ವಯಾತ್ ॥ ೩೯ ॥

---

೩೫. ಓ ಪರಶಿವನೇ, ನೀನು ಮಹೇಶ್ವರನು, ಮಹಾದೇವನು, ಇದರಲ್ಲಿ ಸಂಶಯವಿಲ್ಲ, ಎಂದು ಪ್ರಣವಮಂತ್ರನಾದ ಓಂಕಾರವು ಲೋಕಕ್ಕೇ ಸಾರುತ್ತಿದೆ. ಅದನ್ನೇ ನಾವು ಪ್ರಣವವೆನ್ನುತ್ತಿದ್ದೇವೆ.

೩೬. ಆ ಪ್ರಣವವು ಮನುಷ್ಯರ ಪ್ರಾಣಗಳನ್ನು ಪರಮಾತ್ಮ ಸನ್ನಿಧಿಗೆ ಎಳೆಯುತ್ತದೆ. ಆದ್ದರಿಂದಲೇ ಅದಕ್ಕೆ ಪ್ರಣವವೆಂಬ ಹೆಸರು ಬಂದಿದೆ. ಆ ಪ್ರಣವವು ಸಮಸ್ತವನ್ನೂ ವ್ಯಾಪಿಸಿ ನಿಂತಿರುವುದರಿಂದ, ಅದನ್ನು ಸರ್ವವ್ಯಾಪೀ, ಸನಾತನನೆ ಎಂದೂ ಕರೆಯುತ್ತಿರುವರು.

೩೭. ಬ್ರಹ್ಮ ಮತ್ತು ವಿಷ್ಣು ಇವರಿಬ್ಬರೂ ಪರಶಿವನ ಆದ್ಯಂತವನ್ನು ಅರಿಯಲಾರರು. ಆದ್ದರಿಂದ ಅವರು ಎಲ್ಲರಂತೆಯೇ ಸಾಮಾನ್ಯರೆನಿಸಿಕೊಂಡರು. ರುದ್ರನಾದರೋ ಅನಂತನಾಗಿ ಸಮಸ್ತಕ್ಕೂ ಮೂಲಕಾರಣನೆನಿಸಿಕೊಂಡಿರುವನು.

೩೮. ಸಂಸಾರವೆಂಬ ಸಮುದ್ರದಿಂದ ದಾಟಿಸುವವನಿಗೆ ತಾರನೆಂದು ಹೆಸರು. ಆ ಹೆಸರು ಶಿವನಿಗೆ ಮಾತ್ರ ಸಲ್ಲುತ್ತಿದೆ. ಅಂತಹ ಶಿವನು ಸೂಕ್ಷ್ಮಭಾವದಿಂದ ಸಮಸ್ತರ ದೇಹದಲ್ಲಿಯೂ ನೆಲಸಿರುವನು.

೩೯. ಆದ್ದರಿಂದಲೇ ಮಹೇಶ್ವರನಿಗೆ ಸೂಕ್ಷ್ಮನೆಂಬ ಹೆಸರಿದೆ. ನೀಲವರ್ಣವು ಕತ್ತಿನಲ್ಲಿಯೂ ಕೆಂಪು ಬಣ್ಣವು ಸರ್ವಾಂಗದಲ್ಲಿಯೂ ಕಂಡುಬರುವುದರಿಂದ ನೀಲಲೋಹಿತನೆಂಬ ಮತ್ತೊಂದು ಹೆಸರೂ ರೂಢಿಯಲ್ಲಿದೆ. ಇದು ಪ್ರಕೃತಿ, ಪುರುಷರ ವಿಭಾಗವನ್ನು ತೋರಿಸುತ್ತಿದೆ.

ಸ್ಕಂದತೇಽಸ್ಯ ಯತಃ ಶುಕ್ರಂ ತತಃ ಶುಕ್ರಮಯೀತಿ ಚ ।
ವಿದ್ಯೋತಯತಿ ಯತ್ತಸ್ಮಾದ್ವೈದ್ಯುತಂ ಪರಿಗೀಯತೇ ॥ ೪೦ ॥

ಬೃಹತ್ವಾದ್ಬ್ರಹ್ಮಣಾದ್ಬ್ರಹ್ಮ ಬೃಂಹತೇ ಚ ಪರಾಪರಂ ।
ತಸ್ಮಾದ್ಬೃಹತಿ ಯತ್ತಸ್ಮಾತ್ಪರಂ ಬ್ರಹ್ಮೇತಿ ಕೀರ್ತಿತಂ ॥ ೪೧ ॥

ಅದ್ವಿತೀಯೋಥ ಭಗವಾನ್ ತುರೀಯಃ ಶಿವ ಈಶತೇ ।
ಈಶಾನಮಸ್ಯ ಜಗತಃ ಸ್ವರ್ದೃಶಂ ಬಭ್ರುಮೀಶ್ವರಂ ॥ ೪೨ ॥

ಈಶಾನಮಿಂದ್ರ ತಸ್ಥುಷಃ ಸರ್ವೇಷಾಮಪಿ ಸರ್ವದಾ ।
ಈಶಾನಃ ಸರ್ವವಿದ್ಯಾನಾಂ ಯತ್ತದೀಶಾನಮುಚ್ಯತೇ ॥ ೪೩ ॥

---

೪೦. ಲೋಕಕ್ಕೆ ಪರಶಿವನು ಆದಿಪುರುಷನಾದ್ದರಿಂದ, ಅವನ ವೀರ್ಯವು ಜಾರಿ ಅದೇ ಪ್ರಪಂಚದ ಆಕಾರವನ್ನು ಪಡೆದಿದೆ. ಆದರಿಂದ ಮಹೇಶ್ವರನಿಗೆ ಶುಕ್ರಮಯಿಯೆಂಬ ಹೆಸರಿದೆ. ಆ ಮಹೇಶ್ವರನ ತೇಜಸ್ಸಿನಿಂದ ಪ್ರಪಂಚವೇ ಹೊಳೆಯುತ್ತಿದೆ. ಆದ್ದರಿಂದ ಮಹೇಶ್ವರನನ್ನು ವೈದ್ಯುತನೆನ್ನುವರು.

೪೧. ಬೃಂಹತಿ ಎಂದರೆ ಅಭಿವೃದ್ಧಿಹೊಂದುವನು ಎಂದರ್ಥ. ಸಮಸ್ತ ಲೋಕಸ್ವರೂಪದಿಂದ ವೃದ್ಧಿಹೊಂದುವವನಿಗೆ ಬ್ರಹ್ಮನೆಂದು ಹೆಸರು. ಲೋಕದಿಂದ ಈಶ್ವರನೂ, ಈಶ್ವರನಿಂದ ಲೋಕವೂ ಪರಸ್ಪರವಾಗಿ ವೃದ್ಧಿಹೊಂದುವುದರಿಂದ ಮಹೇಶ್ವರನಿಗೆ ಪರಬ್ರಹ್ಮನೆಂಬ ಹೆಸರು ರೂಢಿಯಲ್ಲಿದೆ.

೪೨. ಸಮಸ್ತ ದೇವತೆಗಳಿಗೂ ಮೊದಲನೆಯವನೆನಿಸಿದ ಶಿವನಿಗೆ ತುರೀಯ, ಶಿವ ಎಂಬ ಹೆಸರೂ ರೂಢಿಯಲ್ಲಿದೆ. (ತುರೀಯ = ಸಂಗವಿವರ್ಜಿತ) ಈ ಲೋಕಕ್ಕೆ ಮತ್ತು ಸ್ವರ್ಗಲೋಕಕ್ಕೆ ನಿಯಾಮಕನಾಗಿರುವುದರಿಂದ, ಎಲ್ಲೈ ಪರಶಿವನೇ, ನಿನ್ನನ್ನು ಈಶಾನ, ಬಭ್ರು, ಈಶ್ವರ ಎಂಬ ಹೆಸರಿನಿಂದ ಕರೆಯುವರು.

೪೩. ಇಂದ್ರನ ಸಕಲ ಸ್ಥಿರಸಂಪತ್ತಿಗೂ, ಉಳಿದ ಸಮಸ್ತ ಲೋಕಕ್ಕೂ, ಈಶ್ವರನೇ ನಿಯಾಮಕನು. ಸರ್ವ ವಿದ್ಯೆಗಳಿಗೂ ಇವನೇ ಒಡೆಯನಾದುದರಿಂದ ಪರಮೇಶ್ವರನಿಗೆ ಈಶಾನನೆಂಬ ಹೆಸರು ಅನ್ವರ್ಥವಾಗಿ ನಿಂತಿದೆ.

ಯದೀಕ್ಷತೇ ಚ ಭಗವಾನ್ ನಿರೀಕ್ಷಯತಿ ಚಾನ್ಯಥಾ ।
ಆತ್ಮಜ್ಞಾನಂ ಮಹಾದೇವೋ ಯೋಗೋ ಗಮಯತಿ ಸ್ವಯಂ ॥ ೪೪ ॥

ಭಗವಾಂಸ್ತ್ಪೋಚ್ಯತೇ ತೇನ ದೇವದೇವೋ ಮಹೇಶ್ವರಃ ।
ಸರ್ವಾಲ್ಲೋಕಾನ್ಕ್ರಮೇಣೈವ ಯೋ ಗೃಹ್ಣಾತಿ ಮಹೇಶ್ವರಃ ।
ವಿಸೃಜತ್ಯೇಷ ದೇವೇಶೋ ವಾಸಯತ್ಯಪಿ ಲೀಲಯಾ ॥ ೪೫ ॥

ಏಷ ಹಿ ದೇವಃ ಪ್ರದಿಶೋ ನು ಸರ್ವಾಃ ।
ಪೂರ್ವೋ ಹಿ ಜಾತಃ ಸ ಉ ಗರ್ಭೋ ಅಂತಃ ।
ಸ ಏವ ಜಾತಃ ಸ ಜನಿಷ್ಯಮಾಣಃ ।
ಪ್ರತ್ಯಂಜನಾಸ್ತಿಷ್ಠತಿ ಸರ್ವತೋಮುಖಃ ॥ ೪೬ ॥

ಉಪಾಸಿತವ್ಯಂ ಯತ್ನೇನ ತದೇತತ್ಸದ್ಭಿರಗ್ರಿಯಂ ।
ಯತೋ ವಾಚೋ ನಿವರ್ತಂತ ಅಪ್ರಾಪ್ಯ ಮನಸಾ ಸಹ ॥ ೪೭ ॥

---

೪೪. ಭಗವಂತನ ದೃಷ್ಟಿಗೆ ಯಾವ ವಸ್ತುವು ಯಾವ ಸ್ವಭಾವದಿಂದ ತೋರಿ ಬರುವುದೋ, ಅದೇ ವಸ್ತುವು ಭಿನ್ನರೀತಿಯಿಂದ ಮತ್ತೊಬ್ಬರಿಗೆ ಗೋಚರವಾಗುವುದು. ಆದ್ದರಿಂದಲೇ ಆತ್ಮಜ್ಞಾನವೆಂಬುದೇ ಮಹಾದೇವನು. ಅದೇ ಸತ್ಯವಾದದ್ದು, ಅದನ್ನು ಸಾಧಿಸುವುದೇ ಯೋಗಶಾಸ್ತ್ರವು.

೪೫. ಸಮಸ್ತ ಲೋಕಗಳನ್ನೂ ತನ್ನ ಇಚ್ಛೆಯಂತೆ ತನ್ನಲ್ಲಿ ಅಡಗಿಸಿಕೊಳ್ಳುವನು, ಬೇಕಾದಾಗ ಹೊರಗೆಡಹುವನು. ಈ ಗುಣಗಳಿರುವುದರಿಂದಲೇ ಮಹೇಶ್ವರನನ್ನು ಭಗವಂತನೆನ್ನುವರು.

೪೬. ಈ ಮಹೇಶ್ವರನೇ ದೇವದೇವನು. ಸಮಸ್ತ ದಿಕ್ಕುವಿದಿಕ್ಕುಗಳೂ ಇವನೇ. ಮೊದಲು ಹುಟ್ಟಿದವನೇ ಈತನು. ಎಲ್ಲರ ಹೃದಯದೊಳಗೆ ಅಡಗಿರುವವನೂ ಈತನೇ. ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿ ಸಂಜನಿಸುವವನೇ ಈ ಪರಮಾತ್ಮನು. ಈ ಪರಮಾತ್ಮನು ಒಬ್ಬನೇ ಆದರೂ ಸರ್ವತೋಮುಖನಾಗಿ ಎಲ್ಲರ ಎದುರಿಗೂ ನಿಲ್ಲುವನು

೪೭. ಆದ್ದರಿಂದ ಸತ್ಪುರುಷರಾದವರು ಪರಮಪುರುಷನಾದ ಮಹೇಶ್ವರನನ್ನು ಪೂಜಿಸಬೇಕು. ಏಕೆಂದರೆ, ಸಮಸ್ತ ಮಾತುಗಳೂ, ಮನಇಂದ್ರಿಯ ಸಂಬಂಧವಿಲ್ಲದೆ ಪರಮೇಶ್ವರನಿಂದಲೇ ಉದ್ಭವಿಸುತ್ತವೆ.

ತದಗ್ರಹಣಮೇವೇಹ ಯದ್ವಾಗ್ವದತಿ ಯತ್ನತಃ ।
ಅಪರಂ ಚ ಪರಂ ಚೇತಿ ಪಾರಾಯಣಮಿತಿ ಸ್ವಯಂ ॥ ೪೮ ॥

ವದಂತಿ ವಾಚಃ ಸರ್ವಜ್ಞಂ ಶಂಕರಂ ನೀಲಲೋಹಿತಂ ।
ಏಷ ಸರ್ವೋ ನಮಸ್ತಸ್ಮೈ ಪುರುಷಃ ಪಿಂಗಳಃ ಶಿವಃ ॥ ೪೯ ॥

ಸ ಏಕಃ ಸ ಮಹಾರುದ್ರೋ ವಿಶ್ವಂ ಭೂತಂ ಭವಿಷ್ಯತಿ ।
ಭುವನಂ ಬಹುಧಾ ಜಾತಂ ಜಾಯಮಾನಮಿತಸ್ತತಃ ॥ ೫೦ ॥

ಹಿರಣ್ಯಬಾಹುರ್ಭಗವಾನ್ ಹಿರಣ್ಯಮಪಿ ಚೇಶ್ವರಃ ।
ಅಂಬಿಕಾಪತಿರೀಶಾನೋ ಹೇಮರೇತಾ ವೃಷಧ್ವಜಃ ॥ ೫೧ ॥

ಉಮಾಪತಿರ್ವಿರೂಪಾಕ್ಷೋ ವಿಶ್ವಭುಗ್ವಿಶ್ವವಾಹನಃ ।
ಬ್ರಹ್ಮಾಣಂ ವಿದಧೇ ಯೋಽಸೌ ಪುತ್ರಮಗ್ನೇಃ ಸನಾತನಂ ॥ ೫೨ ॥

---

೪೮. ಮಾತುಗಳು ಸಾಮಾನ್ಯವಾಗಿ ಯಾವನನ್ನು ಗ್ರಹಣಕ್ಕೆ ಅಸಾಧ್ಯನೆಂದು ಹೇಳುತ್ತವೆಯೋ, ಅದೇ ಪರಾಪರವಸ್ತುವನ್ನು ಪರ, ಅಪರ ಎಂಬ ಎರಡು ಭೇದದಿಂದ ತಿಳಿಯಬೇಕು.

೪೯. ಅನೇಕ ವಾಕ್ಯಗಳು ಈ ಪರಮಾತ್ಮನನ್ನು ಶಂಕರ, ನೀಲಲೋಚನ, ಎಂಬ ಹೆಸರಿನಿಂದ ಹೊಗಳುತ್ತವೆ. ಆದರೆ ಆ ಎಲ್ಲಾ ಹೆಸರುಗಳೂ, ಪುರುಷನೂ, ಪಿಂಗಳನೂ, ಶಿವನೂ ಎಂಬ ಹೆಸರಿನಿಂದ ಕೂಡಿರುವ ಪರಮಾತ್ಮನಿಗೆ ಅನ್ವಯವಾಗುತ್ತವೆ. ಇಂತಹ ಪರಮೇಶ್ವರನಿಗೆ ನಮಸ್ಕಾರವು.

೫೦. ಪರಮೇಶ್ವರನು ಒಬ್ಬನೇ. ಅವನೇ ಮಹಾರುದ್ರನೆನಿಸಿಕೊಳ್ಳತಕ್ಕವನು. ಹಿಂದಿನ ಜಗತ್ತೂ, ಮುಂದಾಗುವ ಜಗತ್ತೂ, ನಾನಾವಿಧವಾಗಿ ಹುಟ್ಟುವ ಜೀವರಾಶಿಗಳೂ ಇವೆಲ್ಲವೂ ಪರಮೇಶ್ವರನ ನಾನಾರೂಪಗಳೇ ಹೊರತು ಬೇರೆಯಲ್ಲ.

೫೧. ಪರಮೇಶ್ವರನು ಹಿರಣ್ಯಬಾಹುವು. ಹಿರಣ್ಯರೂಪಿಯು. ಪಾರ್ವತೀಪತಿಯು. ಈಶ್ವರನು. ಸುವರ್ಣವನ್ನೇ ವೀರ್ಯವನ್ನಾಗಿ ಉಳ್ಳವನು. ವೃಷಭಧ್ವಜನು.

೫೨. ಉಮಾಪತಿಯೆನಿಸಿ, ವಿರೂಪಾಕ್ಷನಾಗಿ, ವಿಶ್ವಭಕ್ಷಕನಾಗಿ, ವಿಶ್ವವಾಹನನಾಗಿದ್ದು, ಲೋಕಸೃಷ್ಟಿಗಾಗಿ ಬ್ರಹ್ಮನನ್ನು ಮಗನಂತೆ ಮೊದಲು ಸೃಷ್ಟಿಸಿ, ಅನಂತರ ಅಗ್ನಿಯನ್ನೂ, ಆ ಮೂಲಕ ತೇಜಸ್ಸನ್ನೂ ಹೊರಗೆಡವಿದನು.

ಪ್ರಹಿಣೋತಿ ಸ್ಮ ತಸ್ಮೈ ಚ ಜ್ಞಾನಮಾತ್ಮಪ್ರಕಾಶಕಂ ।
ತಮೇಕಂ ಪುರುಷಂ ರುದ್ರಂ ಪುರುಹೂತಂ ಪುರುಷ್ಟುತಂ ॥ ೫೩ ॥

ವಾಲಾಗ್ರಮಾತ್ರಂ ಹೃದಯಸ್ಯ ಮಧ್ಯೇ ।
ವಿಶ್ವದೇವಂ ವಹ್ನಿರೂಪಂ ವರೇಣ್ಯಂ ।
ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾ ।
ಸ್ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಂ ॥ ೫೪ ॥

ಮಹತೋಽಪಿ ಮಹೀಯಾನ್ ಸ ಅಣೋರಪ್ಯಣುರವ್ಯಯಃ ।
ಗುಹಾಯಾಂ ನಿಹಿತಶ್ಚಾತ್ಮಾ ಜಂತೋರಸ್ಯ ಮಹೇಶ್ವರಃ ॥ ೫೫ ॥

ವಿಶ್ವಂ ಭೂತಂ ಚ ವಿಶ್ವಸ್ಯ ಕಮಲಾ ಸ್ಯಾದ್ಧೃದಿ ಸ್ವಯಂ ।
ಗಹ್ವರಂ ಗಗನಾಂತಸ್ಥಂ ವಿಶ್ವಾಂತಶ್ಚೋರ್ಧ್ವತಃ ಸ್ಥಿತಂ ॥ ೫೬ ॥

---

೫೩. ಆ ಬ್ರಹ್ಮನ ಸಹಾಯಕ್ಕಾಗಿ ಪರಮೇಶ್ವರನು ದಿವ್ಯಜ್ಞಾನವನ್ನೂ, ಸ್ವಯಂಪ್ರಕಾಶಕತ್ವವನ್ನೂ ಅನುಗ್ರಹಿಸಿದನು. ಅಲ್ಲದೆ ಆ ಸ್ರಷ್ಟೃವಾದ ಬ್ರಹ್ಮನಿಗೆ ಪುರುಷತ್ವವನ್ನೂ, ಯಜ್ಞಾಧಿದೇವತ್ವವನ್ನೂ, ಇಂದ್ರನೇ ಮೊದಲಾದವರ ದೇವ ಸೃಷ್ಟಿಯ ಕಾರ್ಯವನ್ನೂ ಅನುಗ್ರಹಿಸಿದನು.

೫೪. ಪರಮೇಶ್ವರನು ಅತಿಸೂಕ್ಷ್ಮರೂಪದಲ್ಲಿ ಎಲ್ಲರ ಹೃದಯದಲ್ಲಿಯೂ ಅಡಗಿರುವನು. ಅವನೇ ವಿಶ್ವೇದೇವರೂಪಿಯು. ಅಗ್ನಿಯಂತೆ ಸಕಲವನ್ನೂ ಪರಿಶುದ್ಧಗೊಳಿಸತಕ್ಕವನು. ಸರ್ವಶ್ರೇಷ್ಠನು. ಇಂತಹ ಪರಮಾತ್ಮನು ಸರ್ವದಾ ಹೃದಯದಲ್ಲಿರುವನೆಂದು ಯಾರು ತಿಳಿದಿರುವರೋ, ಅವರಿಗೇ ನಿಜವಾದ ಶಾಂತಿಯು ಲಭಿಸುವುದು. ಇತರರಿಗೆ ದೊರಕಲಾರದು.

೫೫. ಮಹೇಶ್ವರನು ಮಹದ್ವಸ್ತುಗಳೆಲ್ಲಕ್ಕೂ ಮಹತ್ತಾಗಿರುವನು. ಅಣು ಪದಾರ್ಥಗಳೆಲ್ಲಕ್ಕಿಂತಲೂ ಅಣುವಾಗಿ ಕಾಣುವನು. ಈ ಪ್ರಾಣಿಗಳ ದೇಹವೆಂಬ ಗುಹೆಯಲ್ಲಿ ಆತ್ಮಸ್ವರೂಪದಿಂದ ಅಡಗಿ, ತನ್ನ ಪ್ರಭಾವವನ್ನು ಬೀರುತ್ತಿರುವನು.

೫೬. ಪ್ರಪಂಚವು ಭೂತದ್ರವ್ಯ. ಅಂದರೆ ಪಂಚಭೂತಗಳಿಂದ ನಿರ್ಮಿತವಾದದ್ದು. ಆ ವಿಶ್ವಕ್ಕೆ ಹೃದಯಾಕಾಶದಂತೆ, ಕಮಲರೂಪದಲ್ಲಿರುವುದು ವಿಭುವಾದ ಗಗನವು. ಆ ವಿಭುವಾದ ಗಗನವು ಹೇಗೆ ಸರ್ವವ್ಯಾಪಿಯೋ, ಹಾಗೆಯೇ ಪರಮೇಶ್ವರನು ವಿಶ್ವದ ಒಳಗೂ ಹೊರಗೂ ವ್ಯಾಪಕನಾಗಿ ನೆಲಸಿರುವನು.

ತತ್ರಾಪಿ ಶುಭ್ರಂ ಗಗನವೋಂಕಾರಂ ಪರಮೇಶ್ವರಂ ।
ವಾಲಾಗ್ರಮಾತ್ರಂ ಮಧ್ಯಸ್ಥಂ ಋತಂ ಪರಮಕಾರಣಂ ॥ ೫೭ ॥

ಸತ್ಯಂ ಬ್ರಹ್ಮ ಮಹಾದೇವಂ ಪುರುಷಂ ಕೃಷ್ಣಪಿಂಗಳಂ ।
ಊರ್ಧ್ವರೇತಸಮೀಶಾನಂ ವಿರೂಪಾಕ್ಷಮಜಂ ಧ್ರುವಂ ॥ ೫೮ ॥

ಅಧಿತಿಷ್ಠತಿ ಯೋ ಯೋನಿಂ ಯೋನಿಶ್ಚೈವ ಸ ಈಶ್ವರಃ ।
ದೇಹೇ ಪಂಚವಿಧಾತ್ಮಾನಂ ತಮೀಶಾನಂ ಪುರಾತನಂ ॥ ೫೯ ॥

ಪ್ರಾಣೇಷ್ಯಂತರ್ಮನಸೋ ಲಿಂಗಮಾಹು ।
ಯರ್ಸ್ಮಿನ್ ಕ್ರೋಧೋ ಯಾ ಚ ತೃಷ್ಣಾ ಕ್ಷಮಾ ಚ ।
ತೃಷ್ಣಾಂ ಛಿತ್ವಾ ಹೇತುಜಾತಸ್ಯ ಮೂಲಂ ।
ಭಜಸ್ವ ದೇವಂ ವರಮೇವ ಕೇವಲಂ ॥ ೬೦ ॥

---

೫೭. ಆದರಲ್ಲಿಯೂ ಹೃದಯಾಕಾಶದಲ್ಲಿ ಓಂಕಾರರೂಪಿಯಾಗಿ ಶುಭ್ರವಾಗಿ ಹೊಳೆಯುತ್ತಿರುವವನೇ ಮಹೇಶ್ವರನು. ಆತನು ಅತ್ಯಂತ ಸೂಕ್ಷ್ಮರೂಪಿಯಾಗಿ ಹೃದಯ ಮಧ್ಯದಲ್ಲಿ ಜಗತ್ತಿಗೆ ಮೂಲಕಾರಣನಾಗಿ ನೆಲಸಿರುವನು.

೫೮. ಆ ಮಹೇಶ್ವರನೇ ಬ್ರಹ್ಮರೂಪಿಯು. ಆತನೇ ಆದಿಪುರುಷನು. ಕಪ್ಪು ಮತ್ತು ಪಿಂಗಳ ವರ್ಣಗಳಿಂದ ಕೂಡಿದವನು. ಊರ್ಧ್ವರೇತಸ್ಸುಳ್ಳವನು. ತ್ರಿನಯನನು. ನಾಶವಿಲ್ಲದೆ ಯಾವಾಗಲೂ ಸ್ಥಿರನಾಗಿರುವ ದೇವದೇವನು.

೫೯. ಆ ದೇವದೇವನು ಯಾವ ಯೋನಿಯಲ್ಲಿ ಆಶ್ರಯಪಡೆಯುವನೋ, ಅದೇ ಯೋನಿಯೂ ಸಹ ಈಶ್ವರಾಭೇದವನ್ನು ಪಡೆಯುವದು. ಐದು ವಿಧವಾದ ಆತ್ಮಾಭೇದವಾದ ವಸ್ತುಗಳಿಂದ ಕೂಡಿದ ಈ ದೇಹದಲ್ಲಿ ಪುರಾತನವಾದ ಈಶಾನರೂಪದಿಂದ ಪರಶಿವನನ್ನು ಅನುಸಂಧಾನ ಮಾಡಬೇಕು.

೬೦. ಪ್ರಾಣಾಂತರ್ಗತವಾಗಿರುವ ಮನಸ್ಸಿನಲ್ಲಿ, ಕೋಪ, ಆಸೆ, ತಾಳ್ಮೆ ಮುಂತಾದ ಗುಣರಾಶಿಗಳು ಉದ್ಭವಿಸುತ್ತವೆಯೆಂದು ಹೇಳುವರು. ಆದರೆ ಆ ಮನಸ್ಸಿನಲ್ಲಿ ಆಸೆಯೇ ಮೊದಲಾದ ಬಂಧಜನಕಗಳಾದ ಗುಣಗಳನ್ನು ದೂರಮಾಡಿ ಪರಾತ್ಪರಸ್ವರೂಪನಾದ ಶಿವನನ್ನು ಧ್ಯಾನಮಾಡುವುದು ಒಳ್ಳೆಯದು.

ಪರಾತ್ಪರತರಂ ಚಾಹುಃ ಪರಾತ್ಪರತರಂ ಧ್ರುವಂ ।
ಬ್ರಹ್ಮಣೋ ಜನಕಂ ವಿಷ್ಣೋರ್ವಹ್ನೇರ್ವಾಯೋಃ ಸದಾಶಿವಂ ॥ ೬೧ ॥

ಧ್ಯಾತ್ವಾಗ್ನಿನಾ ಚ ಸಮುಗ್ನಿಂ ವಿಶೇದ್ವಾಚಃ ಪೃಥಕ್ಪೃಥಕ್ ।
ಪಂಚ ಭೂತಾನಿ ಸಂಯಮ್ಯ ಮಾತ್ರಾಗುಣವಿಧಿಕ್ರಮಾತ್ ॥ ೬೨ ॥

ಮಾತ್ರಾಃ ಪಂಚ ಚತಸ್ರಶ್ಚ ತ್ರಿಮಾತ್ರಾ ದ್ವಿಸ್ತತಃ ಪರಂ ।
ಏಕಮಾತ್ರ ಮಮಾತ್ರಂ ಹಿ ದ್ವಾದಶಾಂತೇಷ್ವವಸ್ಥಿತಂ ॥ ೬೩ ॥

ಸ್ಥಿತ್ವಾಂ ಸ್ಥಾಸ್ಯಾಮ್ಯತೋ ಭೂತ್ವಾ ವ್ರತಂ ಪಾಶುಪತಂ ಚರೇತ್ ।
ಏತದ್ವ್ರತಂ ಪಾಶುಪತಂ ಚರಿಷ್ಯಾಮಃ ಸಮಾಸತಃ ॥ ೬೪ ॥

---

೬೧. ಮಹೇಶ್ವರನನ್ನು ಪರಾಪರಸ್ವರೂಪಿಯೆಂದು ಹೇಳುವರು. ನಿಜವಾಗಿಯೂ ಪರಶಿವನು ಪರಾಪರವಸ್ತುವೇ. ಏಕೆಂದರೆ ವಿಷ್ಣು, ಅಗ್ನಿ, ವಾಯು, ಇವರೆಲ್ಲರಿಗೂ ಉತ್ಪತ್ತಿಸ್ಥಾನದಂತಿರುವವನು ಈತನೇ ಅಲ್ಲವೇ.

೬೨. ಈತನನ್ನು ಉಪಾಸನೆ ಮಾಡಬೇಕಾದರೆ, ಒಂದಗ್ನಿಯಿಂದ ಮತ್ತೊಂದಗ್ನಿಯನ್ನು ಸೇರಿಸುವಂತೆ ಪ್ರತ್ಯೇಕವಾಗಿ, ಪಂಚಕೋಶಗಳಲ್ಲಿ ಅಡಗಿರುವ ಪ್ರಾಣವಾಯುವನ್ನು ಅದಕ್ಕೆ ನಿಯಮಿತವಾಗಿರುವ, ಮಾತ್ರಾಕಾಲ ಪರಿಮಾಣಗಳಿಂದ, ಅಲ್ಲಲ್ಲಿ ನಿಲ್ಲಿಸಿ, ಕೊನೆಗೆ ಬ್ರಹ್ಮರಂಧ್ರದಲ್ಲಿ ಶಿವನನ್ನು ಧ್ಯಾನಿಸಬೇಕು.

೬೩. ಒಂದೊಂದು ಕೋಶದಲ್ಲಿ ಕ್ರಮವಾಗಿ ಒಂದೊಂದು ಮಾತ್ರಾಕಾಲವನ್ನು ಕಮ್ಮಿಮಾಡುತ್ತಾ, ಐದು, ನಾಲ್ಕು, ಮೂರು, ಎರಡು, ಒಂದು, ಈ ರೀತಿ ಪ್ರಾಣವಾಯುವನ್ನು ಅಲ್ಲಲ್ಲಿ ನಿಲ್ಲಿಸಬೇಕು. ಬ್ರಹ್ಮರಂಧ್ರದಲ್ಲಿ ನಿಲ್ಲುವ ವಾಯುವಿಗಾದರೋ ಮಾತ್ರಾಕಾಲದ ನಿಯಮವಿರುವುದಿಲ್ಲ. (ಅದೇ ಸಮಾಧಿ)

೬೪. ಈ ರೀತಿ ಪ್ರಾಣಾಯಾಮವಿಧಿಯನ್ನು ಅನುಸರಿಸಿ, ಪಾಶುಪತವ್ರತವನ್ನು ಆಚರಿಸಬೇಕು. ಇದರ ವಿಧಿಯನ್ನು ಸಂಕ್ಷೇಪವಾಗಿ ಮುಂದೆ ವಿವರಿಸಲಾಗುವುದು.

ಅಗ್ನಿಮಾಧಾಯ ವಿಧಿವದೃಗ್ಯಜುಃ ಸಾಮಸಂಭವೈಃ ।
ಉಪೋಷಿತಃ ಶುಚಿಃ ಸ್ನಾತಃ ಶುಕ್ಲಾಂಬರಧರಃಸ್ವಯಂ ॥ ೬೫ ॥

ಶುಕ್ಲಯಜ್ಞೋಪವೀತೀ ಚ ಶುಕ್ಲಮಾಲ್ಯಾನುಲೇಪನಃ ।
ಜುಹುಯಾದ್ವಿರಜಾ ವಿದ್ವಾನ್ ವಿರಜಾಃ ಸ ಭವಿಷ್ಯತಿ ॥ ೬೬ ॥

ವಾಯವಃ ಪಂಚ ಶುಧ್ಯರ್ಥಂ ವಾಙ್ಮನಶ್ಚರಣಾದಯಃ ।
ಶ್ರೋತ್ರೇ ಜಿಹ್ವಾ ತಥಾ ಘ್ರಾಣಂ ಮನೋ ಬುದ್ಧಿಸ್ತಥೈವ ಚ ॥ ೬೭ ॥

ಶಿರಃ ಪಾಣಿಸ್ತಥಾ ಪಾರ್ಶ್ವಂ ಪೃಷ್ಠೋದರಮನಂತರಂ ।
ಜಂಘೇ ಶಿಶ್ನಮುಪಸ್ಥಂ ಚ ಪಾಯುಂ ಮೇಢ್ರಂ ತಥೈವ ಚ ॥ ೬೮ ॥

ತ್ವಕ್ಚ ಮಾಂಸಂ ಚ ರುಧಿರಂ ಮೇದೋಸ್ಥೀನಿ ತಥೈವ ಚ ।
ಶಬ್ದಂ ಸ್ಪರ್ಶಂ ಚ ರೂಪಂ ಚ ರಸೋ ಗಂಧಸ್ತಥೈವ ಚ ॥ ೬೯ ॥

---

೬೫. ಋಗ್ಯಜುಸ್ಸಾಮವೆಂಬ ಮೂರು ವೇದಗಳಿಂದಲೂ ಅಗ್ನಿಯನ್ನು ಪ್ರತಿಷ್ಠೆ ಮಾಡಿ ತಾನು ಉಪವಾಸವಿದ್ದು :ಶುಕ್ಲಾಂಬರಧಾರಿಯಾಗಿ, ಈ ಪಾಶುಪತವ್ರತಕ್ಕೆ ಸಂಕಲ್ಪ ಮಾಡಬೇಕು.

೬೬. ಶುದ್ಧವಾದ ಯಜ್ಞೋಪವೀತವನ್ನು ಧರಿಸಿಕೊಂಡು, ಪುಷ್ಪ, ಗಂಧ ಇವುಗಳಿಂದ ಅಲಂಕೃತನಾಗಿ ರಜೋಗುಣವನ್ನು ದೂರಮಾಡಿ, ಸಾತ್ವಿಕ ವೃತ್ತಿಯಿಂದ ಅಗ್ನಿಯಲ್ಲಿ ಹೋಮ ಮಾಡಬೇಕು. ಇದರಿಂದ ಅವನು ರಜೋಗುಣರಹಿತನಾಗುವನು.

೬೭-೭೦. ಈ ಪಾಶುಪತ ವ್ರತಾಂಗವಾಗಿ ಹೋಮಮಾಡಿ ಕೇಳಿಕೊಳ್ಳುವ ಫಲವೇನೆಂದರೆ, ತನ್ನ ಸರ್ವಾವಯವಗಳೂ ಶುದ್ಧವಾಗಲಿ, ಎಂದೇ. " ಎಲೈ ಅಗ್ನಿಯೇ ನನ್ನ ಪಂಚಪ್ರಾಣಗಳೂ, ವಾಕ್, ಮನಸ್ಸು, ಕಾಲು, ಕಿವಿ, ನಾಲಿಗೆ, ಮೂಗು, ಬುದ್ಧಿ, ಶಿರಸ್ಸು, ಪಾಣಿ, ಪಾರ್ಶ್ವ, ಬೆನ್ನು, ಹೊಟ್ಟೆ, ಸೊಂಟ, ಗುಹ್ಯ, ಗುದ, ಅಂಡ, ಚರ್ಮ, ಮಾಂಸ, ರಕ್ತ, ಮೇದಸ್ಸು, ಮೂಳೆಗಳು, ಹಾಗೆಯೇ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೂ, ನನ್ನ ದೇಹದಲ್ಲಿ ಅಡಗಿರುವ ಪೃಥಿವ್ಯಾದಿ

ಭೂತಾನಿ ಚೈವ ಶುದ್ಧ್ಯಂತಾಂ ಮದ್ದೇಹೇ ಕ್ಷ್ಮಾದಯ ಸ್ತಥಾ ।
ಅಂತಃ ಪ್ರಾಣಮನೋಜ್ಞಾನಂ ಶುದ್ಧ್ಯತಾಂ ಮೇ ಶಿವೇಚ್ಛಯಾ ॥ ೭೦ ॥

ಹುತ್ವಾ ಯೇನ ಸಮಿದ್ಭಿಶ್ಚ ವರುಣಾಯ ಯಥಾಕ್ರಮಂ ।
ಉಪಸಂಹೃತ್ಯ ರುದ್ರಾಗ್ನಿಂ ಗೃಹೀತ್ವಾ ಭಸ್ಮ ಯತ್ನತಃ ॥ ೭೧ ॥

ಅಗ್ನಿರಿತ್ಯಾದಿನಾ ಧೀಮಾನ್ ವಿಮೃಜ್ಯಾಂಗಾನಿ ಸಂಸ್ಪೃಶೇತ್ ।
ಏತತ್ಪಾಶುಪತಂ ದಿವ್ಯಂ ವ್ರತಂ ಪಾಶವಿಮೋಚನಂ ॥ ೭೨ ॥

ಬ್ರಾಹ್ಮಣಾನಾಂ ಸತಾಂ ಪ್ರೋಕ್ತಂ ಕ್ಷತ್ರಿಯಾಣಾಂ ತಥೈವ ಚ ।
ವೈಶ್ಯಾನಾಮಪಿ ಯೋಗ್ಯಾನಾಂ ಯತೀನಾಂ ಚ ವಿಶೇಷತಃ ॥ ೭೩ ॥

ವಾನಪ್ರಸ್ಥಾಶ್ರಮಸ್ಥಾನಾಂ ಗೃಹಸ್ಥಾನಾಂ ಸತಾಮಪಿ ।
ವಿಮುಕ್ತಿರ್ವಿಧಿನಾನೇನ ದೃಷ್ಟಾ ವೈ ಬ್ರಹ್ಮಚಾರಿಣಾಂ ॥ ೭೪ ॥

ಪಂಚಭೂತಗಳೂ, ಶಿವಾಜ್ಞೆಯಿಂದ ಪರಿಶುದ್ಧಗಳಾಗಲಿ. ಪ್ರಾಣ, ಮನಸ್ಸು, ಜ್ಞಾನ ಇವು ಶುದ್ಧವಾಗಿ ನನಗೆ ಸುಖವನ್ನು ಕೊಡಲಿ" ಎಂದು ಅಗ್ನಿಯನ್ನು ಪ್ರಾರ್ಥಿಸಬೇಕು.

೭೧. ಸಮಿತ್ತುಗಳಿಂದ ವರುಣದೇವತೆಯ ತೃಪ್ತಿಗಾಗಿ ಹೋಮಮಾಡಬೇಕು. ಹೋಮಾನಂತರ ಅಗ್ನಿಯನ್ನು ಉಪಸ್ಥಾನಾದಿಗಳಿಂದ ವಿಸರ್ಜಿಸಿ, ಭಸ್ಮವನ್ನು ಸ್ವೀಕರಿಸಬೇಕು.

೭೨. ಆ ಭಸ್ಮವನ್ನು ಅಗ್ನಿದೇವತಾಕವಾದ ಮಂತ್ರಗಳಿಂದ ಶರೀರಕ್ಕೆಲ್ಲಾ ಲೇಪನಮಾಡಿಕೊಳ್ಳಬೇಕು. ಇಂಥ ಒಂದು ಕರ್ಮಕ್ಕೆ ಪಾಶುಪತವ್ರತವೆಂದು ಹೆಸರು. ಇದು ಸಮಸ್ತರ ಭವಬಂಧನಗಳನ್ನೂ ನಿವಾರಿಸತಕ್ಕದ್ದು.

೭೩. ಈ ವ್ರತವು ಸಾತ್ವಿಕರಾದ ಬ್ರಾಹ್ಮಣರಿಗೂ, ಕ್ಷತ್ರಿಯರಿಗೂ, ವೈಶ್ಯರಿಗೂ ಶ್ರೇಷ್ಠವಾದದ್ದೆಂದು ಹೇಳಲ್ಪಟ್ಟಿದೆ. ಸಂನ್ಯಾಸಿಗಳಿಗಂತೂ ಅತಿ ಮುಖ್ಯವಾದದ್ದು.

೭೪. ವಾನಪ್ರಸ್ಥಾಶ್ರಮ, ಗೃಹಸ್ಥಾಶ್ರಮ, ಬ್ರಹ್ಮಚರ್ಯಾಶ್ರಮಗಳೆಂಬ ಮೂರು ಆಶ್ರಮದವರೂ, ಈ ವ್ರತವನ್ನಾಚರಿಸಿ ಮುಕ್ತಿಯನ್ನು ಪಡೆಯಬಹುದು.

ಅಗ್ನಿರಿತ್ಯಾದಿನಾ ಸಮ್ಯಗ್ಗೃಹೀತ್ವಾ ಹ್ಯಗ್ನಿಹೋತ್ರಕಂ ।
ಸೋಽಪಿ ಪಾಶುಪತೋ ವಿಪ್ರೋ ವಿನ್ಯಜ್ಯಾಂಗಾನಿ ಸಂಸ್ಪೃಶೇತ್ ॥ ೨೫ ॥

ಭಸ್ಮಚ್ಛನ್ನೋ ದ್ವಿಜೋ ವಿದ್ವಾನ್ಮಹಾಪಾತಕಸಂಭವೈಃ ।
ಪಾಪೈರ್ವಿಮುಚ್ಯತೇ ಸತ್ಯಂ ಲಿಪ್ಯತೇ ಚ ನ ಸಂಶಯಃ ॥ ೨೬ ॥

ವೀರ್ಯಮಗ್ನೇರ್ಯತೋ ಭಸ್ಮ ವೀರ್ಯವಾನ್ ಭಸ್ಮಸಂಯುತಃ ।
ಭಸ್ಮಸ್ನಾನರತೋ ವಿಪ್ರೋ ಭಸ್ಮಶಾಯೀ ಜಿತೇಂದ್ರಿಯಃ ॥ ೨೭ ॥

ಸರ್ವಪಾಪವಿನಿರ್ಮುಕ್ತಃ ಶಿವಸಾಯುಜ್ಯಮಾಪ್ನುಯಾತ್ ।
ಇತ್ಯುಕ್ತ್ವಾ ಭಗವಾನ್ ಬ್ರಹ್ಮಾ ಸ್ತುತ್ವಾ ದೇವಂ ಸಮಪ್ರಭುಃ ॥ ೨೮ ॥

ಭಸ್ಮಚ್ಛನ್ನಃ ಸ್ವಯಂ ಕೃತ್ಸ್ನಂ ವಿರರಾಮಾಂಬುಜಾಸನಃ ।
ಅಥ ತೇಷಾಂ ಪ್ರಸಾದಾರ್ಥಂ ಪಶೂನಾಂ ಪತಿರೀಶ್ವರಃ ॥ ೨೯ ॥

---

೨೫. ಈರೀತಿ ವ್ರತವನ್ನಾಚರಿಸಿ, ಆ ಹೋಮಭಸ್ಮವನ್ನು ಅಗ್ನಿದೇವತಾತ್ಮಕವಾದ ಮಂತ್ರಗಳಿಂದ, ಯಾವನು ತನ್ನ ದೇಹಕ್ಕೆ ಲೇಪಿಸಿಕೊಳ್ಳುವನೋ, ಅವನು ಸಾಕ್ಷಾತ್ಪಶುಪತಿಗೆ ಪರಮಭಕ್ತನೆನಿಸಿಕೊಳ್ಳುವನು.

೨೬. ಆ ಹುತವಾದ ಭಸ್ಮದಿಂದ ಬಳಿಯಲ್ಪಟ್ಟ ಬ್ರಾಹ್ಮಣನು ಸಂಪೂರ್ಣ ಜ್ಞಾನಿಯಾಗುವನು. ಮಹಾಪಾಪಕಾರ್ಯಗಳಿಂದ ಹುಟ್ಟಿದ ಸಮಸ್ತ, ದುರಿತಗಳನ್ನೂ ಕಳೆದುಕೊಂಡು ಪರಿಶುದ್ಧನಾಗುವನು. ಆದರಲ್ಲಿ ಸಂಶಯವಿಲ್ಲ.

೨೭-೨೮. ಭಸ್ಮವೆಂಬುದು ಅಗ್ನಿಯ ವೀರ್ಯ. ಆದ್ದರಿಂದಲೇ ಯಾರು ಭಸ್ಮಧಾರಿಗಳಾಗುವರೋ ಅವರು ವೀರ್ಯವಂತರೂ, ಜಿತೇಂದ್ರಿಯರೂ ಆಗುವರು. ಯಾರು ಭಸ್ಮವನ್ನೇ ಶಯನವನ್ನಾಗಿ ಮಾಡಿಕೊಳ್ಳುವರೋ, ಯಾರು ಭಸ್ಮದಿಂದಲೇ ಸ್ನಾನ ಮಾಡಿ ಶುದ್ಧರಾಗುವರೋ, ಅಂತಹವರು ಸಮಸ್ತ ಪಾಪನಿರ್ಮುಕ್ತರಾಗಿ ಶಿವಸಾಯುಜ್ಯವನ್ನು ಹೊಂದುವರು" ಎಂದು ಬ್ರಹ್ಮನು ಶಿವಮಹಿಮೆಯನ್ನು ವರ್ಣಿಸುತ್ತಾ ಪರಮೇಶ್ವರನನ್ನು ಬಹುವಾಗಿ ಸ್ತುತಿಸಿದನು

೨೯. ಅನಂತರ ಬ್ರಹ್ಮನೇ ಆ ಪಾಶುಪತವ್ರತವನ್ನಾಚರಿಸಿ, ಭಸ್ಮದಿಂದ ಲಿಪ್ತನಾಗಿ ಪರಮೇಶ್ವರನನ್ನು ತೃಪ್ತಿಗೊಳಿಸಿದನು. ಇದನ್ನು ನೋಡಿದ ಪರಮೇಶ್ವರನು ಸಂತೋಷಪಟ್ಟು,

ಸ ಗತ್ವಾ ಚೋಮಯಾ ಸಾರ್ಧಂ ಸಾನ್ನಿಧ್ಯಮಕರೋತ್ಪ್ರಭುಃ ।
ಅಥ ಸನ್ನಿಹಿತಂ ರುದ್ರಂ ತುಷ್ಟುವುಃ ಸುರಪುಂಗವಾಃ ॥ ೮೦ ॥

ರುದ್ರಂ ಧ್ಯಾಯೇತ್ತು ದೇವೇಶಂ ದೇವದೇವಮುಮಾಪತಿಂ ।
ದೇವೋಽಪಿ ದೇವತಾ ಲೋಕ್ಯ (?) ಘೃಣಯಾ ಚ ವೃಷಧ್ವಜಃ ॥ ೮೧ ॥

ತುಷ್ಟೋಽಸ್ಮೀತ್ಯಾಹ ದೇವೇಶೋ ವರಂ ದತ್ವಾ ವರಾರಿಹಾ ।
ಕ್ಷಣಾದಂತರ್ಹಿತಃ ಶಂಭುರ್ಬ್ರಹ್ಮಾದೀನಾಂ ಪ್ರಪಶ್ಯತಾಂ ॥ ೮೨ ॥

॥ ಸೂತ ಉವಾಚ ॥

ಇಮಂ ಯಃ ಪಠತೇಽಧ್ಯಾಯಂ ಶುಚಿರ್ಭೂತ್ವಾ ಸಮಾಹಿತಃ ।
ಸರ್ವತೀರ್ಥಫಲಂ ಚೈವ ಸರ್ವಯಜ್ಞಫಲಂ ತಥಾ ॥ ೮೩ ॥

ಸರ್ವದೇವವ್ರತಫಲಂ ಸರ್ವಸ್ತೋತ್ರಫಲಂ ತಥಾ ।
ಪ್ರಾಪ್ನೋತಿ ತತ್ಫಲಂ ವಿಪ್ರಾಃ ಶ್ರದ್ಧಯಾ ಶಿವಸನ್ನಿಧೌ ॥ ೮೪ ॥

---

೮೦. ಪಾರ್ವತಿಯೊಡಗೂಡಿ ಬ್ರಹ್ಮಾದಿಗಳಿಗೆ ಪ್ರತ್ಯಕ್ಷನಾದನು. ಅಂಥ ಪರಮೇಶ್ವರನನ್ನು ನೋಡಿದೊಡನೆಯೇ ಬ್ರಹ್ಮಾದಿದೇವತೆಗಳೆಲ್ಲರೂ ಬಹಳವಾಗಿ ಆನಂದಪಟ್ಟರು.

೮೧. ಅಲ್ಲದೆ ದೇವದೇವನಾದ ಆ ಪರಶಿವನನ್ನು ನಾನಾವಿಧವಾಗಿ ಧ್ಯಾನಿಸಿದರು. ಸ್ವಾಮಿಯೂ ಸಹ ಅವರೆಲ್ಲರನ್ನೂ ನೋಡಿ ದಯೆಯಿಂದ ಅವರಿಗೆ ಸಕಲ ವರಗಳನ್ನೂ ಅನುಗ್ರಹಿಸಿದನು.

೮೨. ಅನಂತರ ಪರಮೇಶ್ವರನು ತಾನು ಆ ವ್ರತಾಚರಣೆಯಿಂದ ಅವರಿಗೆ ಅತ್ಯಂತ ತೃಪ್ತನಾಗಿದ್ದೇನೆಂದು ಹೇಳಿ, ನೋಡುತ್ತಿರುವ ಬ್ರಹ್ಮಾದಿಗಳೆದುರಿಗೇ ಮಾಯವಾದನು

೮೩. ಈ ಅಧ್ಯಾಯವನ್ನು ಯಾರು ಶುಚಿರ್ಭೂತರಾಗಿ ಶುದ್ಧಮನಸ್ಸಿನಿಂದ ಪಠಿಸುವರೋ, ಅವರು ಸಮಸ್ತ ತೀರ್ಥಗಳ ಫಲವನ್ನೂ, ಸಮಸ್ತ ಯಾಗಗಳ ಸುಕೃತವನ್ನೂ ಹೊಂದುವರು.

೮೪-೮೫. ಎಲ್ಲಾ ವ್ರತಾಚರಣೆಯ ಫಲವೂ, ಎಲ್ಲಾ ಸ್ತುತಿ ವಚನಗಳ ಪುಣ್ಯವೂ, ಈ ಅಧ್ಯಾಯದ ಪಠನದಿಂದ ಲಭಿಸುವುದು. ಶಿವಸನ್ನಿಧಿಯಲ್ಲಿ ಈ

ಗಾಣಾಪತ್ಯಮವಾಪ್ನೋತಿ ದೇಹಾಂತೇ ಮುನಿಪುಂಗವಾಃ ॥ ೮೫ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಸರ್ವಾತ್ಮಕರುದ್ರ ಪಾಶುಪತವ್ರತ ಕಥನಂ
ನಾಮ ಪಂಚಚತ್ವಾರಿಂಶೋಽಧ್ಯಾಯಃ.

ಅಧ್ಯಾಯವನ್ನು ಪಠಿಸಿದವರಂತೂ, ಐಹಿಕದ ಸಕಲ ಸುಖಗಳನ್ನೂ ಪಡೆದು, ತಮ್ಮ ದೇಹಾಂತ್ಯದಲ್ಲಿ ಶಿವಲೋಕವನ್ನು ಹೊಂದುವರೆಂದು ಸೂತಮಹರ್ಷಿಗಳು ಶೌನಕಾದಿಗಳಿಗೆ ವಿಸ್ತರಿಸಿ ಹೇಳಿದರು.

ಹೀಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ, ಸೂತಶೌನಕ ಸಂವಾದ
ರೂಪವಾಗಿ, ರುದ್ರನ ಮಹಿಮೆ ಮತ್ತು ಪಾಶುಪತವ್ರತವಿಧಾನ ಇವು
ಗಳನ್ನು ತಿಳಿಸುವ ನಲವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಷಟ್‌ಚತ್ವಾರಿಂಶೋಽಧ್ಯಾಯಃ

॥ ಸೂತ ಉವಾಚ ॥

ವಕ್ಷ್ಯಾಮಿ ಶಿವಮಾಹಾತ್ಮ್ಯಂ ಶೃಣುಧ್ವಂ ಮುನಿಪುಂಗವಾಃ ।
ಬಹುಭಿರ್ಬಹುಧಾ ಶಾಸ್ತ್ರೈಃ ಕೀರ್ತಿತಂ ಮುನಿಪುಂಗವೈಃ ॥ ೧ ॥

ಸದಸದ್ರೂಪಮಿತ್ಯಾಹುಃ ಸದಸದ್ಯಪಿ ಸಂಸ್ಥಿತಂ ।
ತಂ ಶಿವಂ ಮುನಯಃ ಕೇಚಿದ್ಯಂ ಪ್ರಪಶ್ಯಂತಿ ಸೂರಯಃ ॥ ೨ ॥

ಭೂತಭಾವವಿಕಾರೇಣ ದ್ವಿತೀಯೇನ ಸದುಚ್ಯತೇ ।
ಅವ್ಯಕ್ತೇನ ವಿಹೀನಂ ಸ್ಯಾದವ್ಯಕ್ತಮಸದಿತ್ಯಪಿ ॥ ೩ ॥

ನಲವತ್ತಾರನೆಯ ಅಧ್ಯಾಯ.

೧. ಸೂತಮಹರ್ಷಿಗಳು, ಮತ್ತೆ ವೈಶಂಪಾಯನಾದಿಗಳಿಗೆ ಶಿವಮಹಾತ್ಮೆಯನ್ನು ವರ್ಣಿಸಲು ಆರಂಭಿಸಿದರು. “ ಎಲೈ ಋಷಿವರ್ಯರೇ, ಶಾಸ್ತ್ರಗಳಲ್ಲಿ ವಿಧವಿಧವಾಗಿ ವರ್ಣಿತವಾಗಿರುವ ಶಿವನ ಮಹಿಮೆಯನ್ನು ಸ್ವಲ್ಪಮಟ್ಟಿಗೆ ವಿವರಿಸುವೆನು, ಕೇಳಿರಿ.

೨. ವಿವೇಕಿಗಳಾದ ಪಂಡಿತರು ಪರಶಿವನನ್ನು ಸತ್, ಅಸತ್, ಎಂಬ ಎರಡು ಆಕಾರವುಳ್ಳವನನ್ನಾಗಿ ಹೇಳುವರು. ಏಕೆಂದರೆ ಲೋಕದಲ್ಲಿ ಸದ್ವಸ್ತು, ಅಸದ್ವಸ್ತು ಎಂಬ ಎರಡು ಭೇದದಿಂದಿರುವ ವಸ್ತು ಸಮೂಹಗಳಲ್ಲಿ, ಅಡಗಿರುವ ದೇವನು ಎರಡು ರೂಪದಲ್ಲಿರುವುದು ಉಚಿತವೆಂದು ಅವರ ಅಭಿಪ್ರಾಯ.

೩. ಪಂಚಭೂತಗಳು ಪ್ರಭಾವ ವಿಕಾರಗಳಿಂದ ಒಂದು ರೀತಿಗೆ ಬಂದು, ಸ್ಫುಟವಾಗಿ ಗೋಚರವಾಗುವ ಒಂದು ರೂಪವೇ ಪರಶಿವನ ಸದ್ರೂಪ. ಯಾವ ಇಂದ್ರಿಯಗಳಿಗೂ ವ್ಯಕ್ತವಾಗದೆ, ಗೋಚರವಾಗದೇ ಇರುವ ಒಂದುರೂಪ,ಈಶ್ವರನ ಅಸದ್ರೂಪ.

ಉಭೇ ತೇ ಶಿವರೂಪೇಣ ಶಿವಾದನ್ಯನ್ನ ವಿದ್ಯತೇ ।
ತಯೋಃ ಪತಿತ್ವಾಚ್ಚ ಶಿವಃ ಸದಸಸ್ಪತಿರುಚ್ಯತೇ ॥ ೪ ॥

ಕ್ಷರಾಕ್ಷರಾತ್ಮಕಂ ಪ್ರಾಹುಃ ಕ್ಷರಾಕ್ಷರಪರಂ ತಥಾ ।
ಶಿವಂ ಮಹೇಶ್ವರಂ ಕೇಚಿನ್ಮುನಯಸ್ತತ್ತ್ವಚಿಂತಕಾಃ ॥ ೫ ॥

ಉಕ್ತಮಕ್ಷರಮವ್ಯಕ್ತಂ ವ್ಯಕ್ತಾಕ್ಷರಮುದಾಹೃತಂ ।
ರೂಪೇ ತೇ ಶಂಕರಸ್ಯೈವ ತಸ್ಮಾನ್ನಾನ್ಯಾ ಪರಮುಚ್ಯತೇ ॥ ೬ ॥

ತಯೋಃ ಪರಃ ಶಿವಃ ಶಾಂತಃ ಕ್ಷರಾಕ್ಷರಪರೋ ಬುಧೈಃ ।
ಉಚ್ಯತೇ ಪರಮಾರ್ಥೇನ ಮಹಾದೇವೋ ಮಹೇಶ್ವರಃ ॥ ೭ ॥

ಸಮಷ್ಟಿವ್ಯಷ್ಟಿ ಯದ್ರೂಪಂ ಸಮಷ್ಟಿವ್ಯಷ್ಟಿಕಾರಣಂ ।
ವದಂತಿ ಕೇಚಿದಾಚಾರ್ಯಾಃ ಶಿವಂ ಪರಮಕಾರಣಂ ॥ ೮ ॥

---

೪. ಈ ಸತ್, ಅಸತ್, ಎಂಬ ಎರಡು ರೂಪಗಳೂ ಶಿವನಲ್ಲಿಯೇ ಐಕ್ಯವಾಗುವುವು. ಈ ಸದಸತ್ತುಗಳಿಗೆ ಒಡೆಯನಾದುದರಿಂದಲೇ, ಪರಮೇಶ್ವರನಿಗೆ ಸದಸಸ್ಪತಿ ಯೆಂಬ ಹೆಸರು ಪ್ರಸಿದ್ಧವಾಗಿದೆ.

೫. ಮತ್ತೆ ಕೆಲವು ತತ್ತ್ವಜ್ಞಾನಿಗಳಾದವರು ಪರಮೇಶ್ವರನನ್ನು ಕ್ಷರಾಕ್ಷರನೆಂದೂ, ಅಂದರೆ ನಾಶವಾಗುವ ಮತ್ತು ಸ್ಥಿರವಾಗಿರುವ ವಸ್ತುರೂಪಿಯೆಂದೂ ಹೇಳುವರು.

೬. ಅವ್ಯಕ್ತವಾದದ್ದನ್ನೇ ಅಕ್ಷರರೂಪಿಯೆನ್ನುವರು. ವ್ಯಕ್ತವಾಗಿ ತೋರುವುದನ್ನೇ ಕ್ಷರವೆನ್ನುವರು. ಅಂತೂ ಯಾವ ಹೆಸರಿನಿಂದಲೇ ಆಗಲಿ ಎರಡು ವಿಧವಾಗಿ ತೋರುವ ಈ ಜಗತ್ತೆಲ್ಲಾ ಶಂಕರನ ಒಂದೇ ಒಂದು ಆಕಾರದಲ್ಲಿ ಲೀನವಾಗುವುದು.

೭ ಆ ಸದಸತ್ತುಗಳಿಗಾಗಲೀ, ಕ್ಷರಾಕ್ಷರಗಳಿಗಾಗಲಿ, ಅಧಿದೇವತೆಯಾಗಿ ಶಾಂತ ಸ್ವಭಾವದಿಂದಿರುವ ದೇವರೆಂದರೆ, ಮಹೇಶ್ವರನಾದ ಶಂಕರನೊಬ್ಬನೇ; ಎಂದು ಎಲ್ಲ ವಿದ್ವಾಂಸರೂ ಹೇಳುವರು.

೮. ಮತ್ತೆ ಕೆಲವರು ಪರಶಿವನರೂಪವು ಸಮಷ್ಟಿ, ವ್ಯಷ್ಟಿ ಎಂಬ ಎರಡು ಭೇದದಿಂದ, ಸಮಷ್ಟಿ ಸೃಷ್ಟಿಗೂ, ವ್ಯಷ್ಟಿ ಸೃಷ್ಟಿಗೂ ಮೂಲಕಾರಣವಾಗಿದೆ, ಎಂದು ಹೇಳುತ್ತಾರೆ.

ಸಮಷ್ಟಿಮಾಹುರವ್ಯಕ್ತಂ ವ್ಯಷ್ಟಿಂ ವ್ಯಕ್ತಿಂ ಮುನೀಶ್ವರಾಃ ।
ರೂಪೇ ತೇ ಗದಿತೇ ಶಂಭೋರ್ನಾಸ್ತ್ಯನ್ಯದ್ವಸ್ತು ಕಿಂಚನ ॥ ೯ ॥

ತಯೋಃ ಕಾರಣಭಾವೇನ ಶಿವೋ ಹಿ ಪರಮೇಶ್ವರಃ ।
ಉಚ್ಯತೇ ಯೋಗಶಾಸ್ತ್ರಜ್ಞೈಃ ಸಮಷ್ಟಿವ್ಯಷ್ಟಿ ಕಾರಣಂ ॥ ೧೦ ॥

ಕ್ಷೇತ್ರಂ ಕ್ಷೇತ್ರಜ್ಞರೂಪೀತಿ ಶಿವಃ ಕೈಶ್ಚಿದುದಾಹೃತಂ ।
ಪರಮಾತ್ಮಾ ಪರಂ ಜ್ಯೋತಿರ್ಭಗವಾನ್ ಪರಮೇಶ್ವರಃ ॥ ೧೧ ॥

ಚತುರ್ವಿಂಶತಿತತ್ತ್ವಾನಿ ಕ್ಷೇತ್ರಶಬ್ದೇನ ಸೂರಯಃ ।
ಪ್ರಾಹುಃ ಕ್ಷೇತ್ರಜ್ಞಶಬ್ದೇನ ಭೋಕ್ತಾರಂ ಪರಮೇಶ್ವರಂ ॥ ೧೨ ॥

ನ ಕಿಂಚಿಚ್ಚ ಶಿವಾದನ್ಯದಿತಿ ಪ್ರಾಹುರ್ಮನೀಷಿಣಃ ।
ಕೇಚಿದೇವಂ ಪ್ರಶಂಸಂತಿ ಮಹಾದೇವಂ ಮುನೀಶ್ವರಂ ॥ ೧೩ ॥

---

೯. ಅವ್ಯಕ್ತವಾದ ವಸ್ತುಜಾತಗಳನ್ನೇ ಸಮಷ್ಟಿಯೆಂದೂ, ವ್ಯಕ್ತವಾಗಬಹುದಾದ ಸಮಸ್ತ ವಸ್ತುಗಳನ್ನೂ ವ್ಯಷ್ಟಿಸೃಷ್ಟಿಯೆಂದೂ ಹೇಳುವರು. ಹಾಗೆ ಎರಡು ರೂಪಗಳಿಂದ ತೋರುವ ಆಕಾರವು ಪರಶಿವನಲ್ಲದೆ ಮತ್ತೆ ಬೇರೆ ಯಾರೂ ಇಲ್ಲ.

೧೦. ಆ ವಿಧವಾದ ಸಮಷ್ಟಿ ಮತ್ತು ವ್ಯಷ್ಟಿ ಸೃಷ್ಟಿಗಳಿಗೆ ಪರಮೇಶ್ವರನೊಬ್ಬನೇ ಕಾರಣನಾಗಿದ್ದು, ಆ ತೆರದ ಎರಡು ಸೃಷ್ಟಿಗಳಿಂದಲೂ. ಲೋಕವನ್ನು ರೂಪಗೊಳಿಸಿರುವನೆಂದು ಯೋಗಿಗಳಲ್ಲಿ ಕೆಲವರು ಹೇಳುವರು.

೧೧. ಮತ್ತೆ ಕೆಲವರು ಶಿವನನ್ನು ಕ್ಷೇತ್ರರೂಪಿಯೆಂದೂ, ಕ್ಷೇತ್ರಜ್ಞರೂಪಿಯೆಂದೂ ಬೋಧಿಸಿರುವರು. ಆದರೆ ಮಹೇಶ್ವರನು ಏನೇ ಆದರೂ, ಸ್ವಯಂಜ್ಯೋತಿಸ್ವರೂಪನು. ಪರಮಾತ್ಮನು. ದೇವದೇವನು.

೧೨. ಕ್ಷೇತ್ರವೆಂದರೆ ಇಪ್ಪತ್ತುನಾಲ್ಕು ತತ್ವಗಳು. ಆ ಕ್ಷೇತ್ರಗಳಿಂದ ಇಪ್ಪತ್ತುನಾಲ್ಕು ತತ್ತ್ವಗಳನ್ನೂ ಅರಿತು ಪ್ರಕಾಶಮಾನವಾಗಿರುವವನು ಕ್ಷೇತ್ರಜ್ಞನು. ಅವನೇ ಪರಶಿವನು.

೧೩. ಅಂತೂ ವಿದ್ವಾಂಸರಾದ ಅನೇಕರು ಲೋಕದಲ್ಲಿ ಶಿವನಿಗಿಂತ ಬೇರೆಯಾಗ ಮತ್ತೊಂದು ವಸ್ತುವು ಇಲ್ಲವೇ ಇಲ್ಲವೆಂದು ಹೇಳುತ್ತಾ, ಮಹೇಶ್ವರನ ಮಹಿಮೆಯನ್ನು ಬೋಧಿಸುವರು.

ವೇದಾರ್ಥತತ್ತ್ವವಿದುಷಃ ಸಮ್ಯಕ್‌ಶ್ರುತ್ಯನುಸಾರತಃ ।
ಪ್ರಾಣೇನ ಪ್ರಾಣಿತಿ ಹ್ಯಸಾವಪಾನೇನ ಹ್ಯಪಾನಿತಿ ॥ ೧೪ ॥

ವ್ಯಾನೇನ ವ್ಯಾನಿತಿ ತಥಾ ಚೋದಾನೇನ ಹ್ಯುದಾನಿತಿ ।
ಸಮಾನಿತಿ ಸಮಾನೇನ ಮನ್ವೀತಿ ಮನಸಾ ದ್ವಿಜಾಃ ॥ ೧೫ ॥

ಬುದ್ಧ್ಯಾ ವಿಚಾರಯತ್ಯೇಷ ಪರ ಏವ ಮಹೇಶ್ವರಃ ।
ಸಮಸ್ತಕರಣೈರ್ಯುಕ್ತೋ ವರ್ತತೇಽಸೌ ಯದಾ ತದಾ ॥ ೧೬ ॥

ಜಾಗ್ರದಿತ್ಯುಚ್ಯತೇ ಸದ್ಭಿರಂತರ್ಯಾಮೀ ಸನಾತನಃ ।
ಯದಾಂತಃಕರಣೈರ್ಯುಕ್ತಃ ಸ್ವೇಚ್ಛಯಾ ವಿಚರತ್ಯಸೌ ॥ ೧೭ ॥

ಸುಪ್ತ ಇತ್ಯುಚ್ಯತೇ ಹ್ಯಾತ್ಮಾ ಸ್ವಯಂ ತಾಪವಿವರ್ಜಿತಃ ।
ನ ಬಾಹ್ಯಕರಣೈರ್ಯುಕ್ತೋ ನ ಚಾಂತಃಕರಣೈಸ್ತಥಾ ॥ ೧೮ ॥

---

೧೪. ಶ್ರುತ್ಯನುಸಾರವಾಗಿ ತತ್ತ್ವವನ್ನರಿತ ಮನುಷ್ಯನ ಹೃದಯದಲ್ಲಿ, ಪ್ರಾಣ ವಾಯುರೂಪದಲ್ಲಿ ಪ್ರಾಣರೂಪಿಯಾಗಿಯೂ ಅಪಾನವಾಯುರೂಪಿಯಾಗಿ, ಅಪಾನ ರೂಪದಿಂದಲೂ ವರ್ತಿಸಿರುವನು.

೧೫. ಹಾಗೆಯೇ ವ್ಯಾನ, ಉದಾನ, ಸಮಾನ ಎಂಬ ವಾಯುಭೇದ ಗಳಿಂದಲೂ, ಜನರ ಹೃದಯವನ್ನು ಪ್ರಕಾಶಗೊಳಿಸುವಂತಹ ಮನೋರೂಪದಿಂದಲೂ ಮಹೇಶ್ವರನು ಸರ್ವತ್ರವ್ಯಾಪಿಯಾಗಿರುವನು.

೧೬. ನಮ್ಮ ಬುದ್ಧಿಯಲ್ಲಿ ಹೆಚ್ಚು ವಿಚಾರ ವಿಮರ್ಶೆಯುಂಟಾಗುವಂತೆ ಮಾಡತಕ್ಕವನೇ ಮಹೇಶ್ವರನು. ಹೀಗೆ ಮಹೇಶ್ವರನು ಸಮಸ್ತ ಕಾರಣ, ಕರಣ ಸಾಮಗ್ರಿಯುಳ್ಳವನಾಗಿ ಎಲ್ಲಾ ಕಡೆಯಲ್ಲಿಯೂ ವಿರಾಜಿಸುತ್ತಿರುವನು.

೧೭. ಸನಾತನ ರೂಪಿಯಾದ ಈ ಪರಶಿವನು ಯಾವಾಗ ಅಂತಃಕರಣದಿಂದ ಕೂಡಿ ಸ್ವೇಚ್ಛೆಯಾಗಿ ವಿಹರಿಸುವನೋ, ಆಗಲೇ ಆ ಆತ್ಮನಿಗೆ ಜಾಗ್ರದವಸ್ಥೆಯು ತೋರುವುದು.

೧೮. ಆತ್ಮನು ತಾಪವಿವರ್ಜಿತನಾಗಿ ಬಾಹ್ಯೇಂದ್ರಿಯ ವ್ಯಾಪಾರಗಳನ್ನು ನಿಲ್ಲಿಸಿ ಅಂತರಿಂದ್ರಿಯ ವ್ಯಾಪಾರಗಳಿಗೂ ಒಳಪಡದೆ ಇರುವನು. ಅದೇ ಆತ್ಮನ ಸುಪ್ತಾವಸ್ಥೆ.

ಸರ್ವೋಪಾಧಿವಿನಿರ್ಮುಕ್ತಃ ಪುಣ್ಯಪಾಪವಿವರ್ಜಿತಃ ।
ಸ ಸ್ವರೂಪೇ ಸದಾ ಹ್ಯಾಸ್ತೇ ಸುಷುಪ್ತ ಇತಿ ಗೀಯತೇ ॥ ೧೯ ॥

ಸ್ವಪ್ನಾಂತಂ ಚೈವ ಬುದ್ಧಾಂತಂ ವಿಚರತ್ಯೇಷ ಶಂಕರಃ ।
ನದೀಜಲೇ ಯಥಾ ಮತ್ಸ್ಯೋ ಗತ್ವಾಽಽಗತ್ಯ ನಿವರ್ತತೇ ॥ ೨೦ ॥

ಶ್ಯೇನೋ ವಾಽಥ ಸುಪರ್ಣೋ ವಾ ಶ್ರಾಂತಃ ಪರ್ವತಕಂದರೇ ।
ಶೇತೇ ಸಂಹೃತ್ಯ ಪಕ್ಷೌ ಚ ಪ್ರತ್ಯಗಾತ್ಮಾ ಹ್ಯಯಂ ತಥಾ ॥ ೨೧ ॥

ಜಾಗ್ರತ್ಸ್ವಪ್ನಗತಾ ಭಾವಾಸ್ತೇಷು ಶಾಂತೋ ಮುಹುರ್ಮುಹುಃ ।
ಸಂಪ್ರಸಾದಂ ತತಃ ಪ್ರಾಪ್ಯ ಪರಾನಂದಮಯೋ ಭವೇತ್ ॥ ೨೨ ॥

---

೧೯. ಸಮಸ್ತ ಉಪಾಧಿಗಳಿಂದ ವಿಮುಕ್ತನಾಗಿ, ಪುಣ್ಯಪಾಪಗಳ ಸಂಬಂಧವಿಲ್ಲದೆ, ಸ್ವಸ್ವರೂಪದಲ್ಲಿರುವ ಆತ್ಮನು ಸುಷುಪ್ತಾವಸ್ಥೆಯಲ್ಲಿರುವನೆಂದು ಭಾವವು.

೨೦. ಸ್ವಪ್ನವು ಮುಗಿಯುವವರೆಗೂ, ಬುದ್ಧಿಯು ಜಾಗ್ರದವಸ್ಥೆಯನ್ನು ಹೊಂದುವವರೆಗೂ, ಪರಶಿವನು, ನದಿಯ ಒಳಭಾಗದಲ್ಲಿ ಮೀನು ಓಡಾಡುವಂತೆ ಜೀವಿಯ ಹೃದಯಾಂತರಾಳದಲ್ಲಿ ಓಡಾಡುತ್ತಿರುವನು.

೨೧. ಈ ಜ್ಞಾನರೂಪಿಯಾದ ಪರಮಾತ್ಮನು, ದೇಹದಲ್ಲಿ ಸುಷುಪ್ತಿ ಅಥವಾ ಸುಪ್ತಾವಸ್ಥೆಯಲ್ಲಿ, ಗಿಡುಗ ಅಥವಾ ಗರುಡಪಕ್ಷಿಯು ಹೊರಗಿನ ಓಡಾಟದಿಂದ ಬಳಲಿ ಕೊನೆಗೆ ರೆಕ್ಕೆಗಳನ್ನು ಮುದುರಿಕೊಂಡು ಹೇಗೆ ಪರ್ವತದಗುಹೆಯಲ್ಲಿ ಮಲಗುವುದೋ, ಹಾಗೇ ಈ ಗೂಡಿನಂತಿರುವ ದೇಹದಲ್ಲಿ ನೆಲೆಸಿರುವನು.

೨೨. ಜಾಗ್ರತ್ತು ಮತ್ತು ಸ್ವಪ್ನ ಈ ಅವಸ್ಥೆಗಳಲ್ಲೆಲ್ಲಾ ಒಂದೇ ಸ್ವಭಾವದಿಂದ ಶಾಂತರೀತಿಯಲ್ಲಿ ನಿರ್ಮಲವಾಗಿ ವರ್ತಿಸಿ, ಕೊನೆಗೆ ಆತ್ಮನು ಪರಮಾನಂದದಲ್ಲಿ ಮುಳುಗಿ ಆನಂದಮಯವಾದ ಮೋಕ್ಷವನ್ನು ಪಡೆಯುವನು.

ಅವಿದ್ಯಯೈವ ಸರ್ವೋಽಯಂ ವ್ಯವಹಾರಃ ಪರಾತ್ಮನಃ ।
ಗುಣಧರ್ಮೌ ಯದಿ ಸ್ಯಾತಾಂ ಸುಷುಪ್ತೌ ರಹಿತಃ ಕಥಂ ॥ ೨೩ ॥

ಸತ್ಯಾಂ ನಿಮಿತ್ತಭೂತಾಯಾಂ ಅವಿದ್ಯಾಯಾಂ ದ್ವಿಜೋತ್ತಮಾಃ ।
ಬುದ್ಧೌ ಭ್ರಮಂತ್ಯಾಮಾತ್ಮಾಪಿ ಭ್ರಮತೀತಿ ಜನಾ ವಿದುಃ ॥ ೨೪ ॥

ನಿತ್ಯಃ ಸರ್ವಗತೋ ಹ್ಯಾತ್ಮಾ ಬುದ್ಧಿಸನ್ನಿಧಿವತ್ತಯಾ ।
ಯಥಾ ಯಥಾ ಭವೇದ್ಬುದ್ಧಿರಾತ್ಮಾ ತದ್ವದಿಹೇಷ್ಯತೇ ॥ ೨೫ ॥

ವಿದ್ಯಾವಿದ್ಯಾಸ್ವರೂಪೀತಿ ಶಂಕರಃ ಕೈಶ್ಚಿದುಚ್ಯತೇ ।
ಧಾತಾ ವಿಧಾತಾ ಲೋಕಾನಾಮಾದಿದೇವೋ ಮಹೇಶ್ವರಃ ॥ ೨೬ ॥

---

೨೩. ಪರಮಾತ್ಮನಿಗೆ ನಿಜವಾಗಿಯೂ ಈ ಪ್ರಾಪಂಚಿಕ ವ್ಯವಹಾರಗಳಿಲ್ಲ. ಅವನು ನಿರ್ಗುಣನು. ನಿರ್ಧರ್ಮಿಯು. ಆದರೂ ಅವಿದ್ಯೆಯೆಂಬ ಒಂದು ಮಾಯಾ ಸಂಬಂಧದಿಂದ ಆತ್ಮನಿಗೆ ಬಂಧಮೋಕ್ಷಗಳು ತೋರಿ ಬರುತ್ತಿವೆ. ಆತ್ಮನಲ್ಲಿ ಯಾವ ವಿಧವಾದ ಗುಣಧರ್ಮಗಳೂ ಇಲ್ಲನೆಂಬುದು, ಸುಷುಪ್ತ್ಯವಸ್ಥೆಯಲ್ಲಿರುವ ಆತ್ಮನಿಂದ ನಮಗೆ ತಿಳಿದು ಬರುವುದು.

೨೪. ಅವಿದ್ಯೆಯೆಂಬುದು ಆತ್ಮನ ಬಂಧಮೋಕ್ಷಗಳಿಗೆ ನಿಮಿತ್ತಭೂತನಾಗಿ ಬುದ್ಧಿಯಲ್ಲಿ ಓಡಾಡುತ್ತಿರುವುದರಿಂದ, ಆತ್ಮನು ಅದಕ್ಕನುಸಾರವಾಗಿ ಓಡಾಡುವಂತೆ ಕಾಣುವನೇ ಹೊರತು, ನಿಜವಾಗಿಯೂ ಪರಬ್ರಹ್ಮನಿಗೆ ಸಂಸಾರ ಸಂಬಂಧವಾದ ಭ್ರಮಣಾದಿಗಳಿಲ್ಲ.

೨೫. ಆತ್ಮನು ನಿತ್ಯನು, ಸರ್ವವ್ಯಾಪಿಯು. ಆದರೂ ಬುದ್ಧಿಯ ಸಾನ್ನಿಧ್ಯವು ಆತ್ಮನಿಗಿರುವುದರಿಂದ, ಸಂಸ್ಕಾರವಶದಿಂದ ಬುದ್ಧಿಯು ಹೇಗೆ ಹೇಗೆ ಓಡಾಡುವುದೋ, ಹಾಗೆಯೇ ಆತ್ಮನೂ ಓಡಾಡಿವಂತೆ ತೋರುವುದು.

೨೬. ಮತ್ತೆ ಕೆಲವರು ವಿದ್ಯಾ, ಅವಿದ್ಯೆಯೆಂಬ ಎರಡು ರೂಪದಿಂದ ತೋರಿ ಬರುವ ವಸ್ತುಗಳು ಶಂಕರನ ಒಂದೇ ಸ್ವರೂಪವೆಂದೇ ಹೇಳುವರು. ಅಂತೂ ಒಟ್ಟಿನಲ್ಲಿ ಧಾತೃ, ವಿಧಾತೃ ಎಂಬ ಹೆಸರಿನಿಂದ ಲೋಕಕ್ಕೆ ಆದಿದೇವನಾಗಿರುವವನು ಮಹೇಶ್ವರನೊಬ್ಬನೇ.

ಭ್ರಾಂತಿವಿದ್ಯಾಪರಶ್ಚೇತಿ ಶಿವರೂಪಮನುತ್ತಮಂ ।
ಅವಾಪ ಮನಸಾ ಸೋಽಯಂ ಕೇಚಿದಾಗಮವೇದಿನಃ ॥ ೨೭ ॥

ಅರ್ಥೇಷು ಬಹುರೂಪೇಷು ವಿಜ್ಞಾನಂ ಭ್ರಾಂತಿರುಚ್ಯತೇ ।
ಆತ್ಮಾಕಾರೇಣ ಸಂವಿತ್ತಿರ್ಬುದ್ಧಿರ್ವಿದ್ಯೇತಿ ಕೀರ್ತ್ಯತೇ ॥ ೨೮ ॥

ವಿಕಲ್ಪರಹಿತಂ ತತ್ತ್ವಂ ಪರಮಿತ್ಯಭಿಧೀಯತೇ ।
ವ್ಯಕ್ತಾವ್ಯಕ್ತಜ್ಞರೂಪೀತಿ ಶಿವಃ ಕೈಶ್ಚಿನ್ನಿಗದ್ಯತೇ ॥ ೨೯ ॥

ಧಾತಾ ಚ ಸರ್ವಲೋಕಾನಾಂ ವಿಧಾತಾ ಪರಮೇಶ್ವರಃ ।
ತಯೋರ್ವಿಂಶತಿತತ್ತ್ವಾನಿ ವ್ಯಕ್ತಿಶಬ್ದೇನ ಸೂರಯಃ ॥ ೩೦ ॥

ವದಂತಿ ವ್ಯಕ್ತಶಬ್ದೇನ ಪ್ರಕೃತಿಂ ಚ ಪರಾಂ ತಥಾ ।
ಕಥಯಂತಿ ಜ್ಞಶಬ್ದೇನ ಪುರುಷಂ ಗುಣಭೋಗಿನಂ ॥ ೩೧ ॥

---

೨೭. ವೇದಜ್ಞರಾದವರು ಅತ್ಯುತ್ತಮವಾದ ಶಿವನರೂಪವನ್ನು, ಭ್ರಾಂತಿಯಿಂದಲೂ, ವಿದ್ಯಾರೂಪದಿಂದಲೂ ಮನಸ್ಸಿನಲ್ಲಿ ವಿಧವಿಧವಾಗಿ ತಿಳಿಯುವರೆಂದು ವಾದಿಸುತ್ತಿರುವರು.

೨೮ ಪದಾರ್ಥಗಳು ಅನೇಕವಾಗಿವೆ. ಅವೆಲ್ಲವೂ ಬೇರೆ ಬೇರೆ ವಸ್ತುಗಳು ಎಂಬ ಜ್ಞಾನವೇ ಭ್ರಾಂತಿಜ್ಞಾನ. ಜಗತ್ತೆಲ್ಲವೂ ಆತ್ಮನುಯ. ವಸ್ತುಗಳೆಲ್ಲಾ ಆತ್ಮವಿಕಾರ, ಎಂಬ ತಿಳಿವಳಿಕೆಯು ನಿಜವಾದ ಜ್ಞಾನವೆನಿಸಿಕೊಳ್ಳುವುದು.

೨೯. ಸಂದೇಹವಿಲ್ಲದ ತತ್ತ್ವವನ್ನು ಪರತತ್ತ್ವವೆನ್ನುವರು. ಮತ್ತೆ ಕೆಲವರು ಪರಶಿವನನ್ನು ವ್ಯಕ್ತಾವ್ಯಕ್ತಜ್ಞರೂಪಿಯೆನ್ನುವರು.

೩೦. ಸಮಸ್ತಲೋಕಗಳಿಗೂ ಒಡೆಯನಾಗಿ, ಪರಮೇಶ್ವರನಾಗಿರುವವನ ಸ್ವರೂಪವು (೨೦) ಇಪ್ಪತ್ತು ತತ್ತ್ವಗಳಿಂದ ವ್ಯಕ್ತಿಯೆಂದು ಹೇಳಲ್ಪಡುವುದು.

೩೧. ವ್ಯಕ್ತವೆಂದರೆ ಶ್ರೇಷ್ಠವಾದ ಪ್ರಕೃತಿ ಎಂದೂ, ಜ್ಞ ಎಂದರೆ ಸರ್ವವನ್ನೂ ತಿಳಿದು ಗುಣಾದಿಗಳಿಂದ ಕೂಡಿ ಫಲಭೋಕ್ತೃವಾದ ಪುರುಷನು ಎಂದೂ ಅರ್ಥ ಮಾಡುವರು.

ತತ್ರ ಯಚ್ಚಾಂಕರಂ ರೂಪಂ ನಾವ್ಯಕ್ತಂ ನ ಚ ಶಂಕರಾತ್ ।
ಯೋ ಹೇತುಸ್ತ್ರಿಗುಣಸ್ಯಾಪಿ ಸರ್ವಸ್ಯ ಪ್ರಕೃತೇಃ ಪರಃ ॥ ೩೨ ॥

ಚತುರ್ವಿಧಶ್ಚ ತ್ರಿವಿಧಃ ಸ ಏವ ಭಗವಾನ್ ಶಿವಃ ।
ಸ ಏವ ಸರ್ವಭೂತಾತ್ಮಾ ಸರ್ವಭೂತಭವೋದ್ಭವಃ ॥ ೩೩ ॥

ಆಸ್ತೇ ಸರ್ವಗತೋ ದೇವೋ ನ ಚ ಸರ್ವತ್ರ ದೃಶ್ಯತೇ ।
ಯೋಗಿನಾಮಪಿ ಯೋ ಯೋಗೀ ಕಾರಣಾನಾಂ ಚ ಕಾರಣಂ ॥ ೩೪ ॥

ರುದ್ರಾಣಾಮಪಿ ಯೋ ರುದ್ರೋ ದೇವತಾನಾಂ ಚ ದೇವತಾ ।
ಬ್ರಹ್ಮಾದ್ಯಾ ಅಪಿ ಯಂ ದೇವಂ ನ ವಿದಂತಿ ಮಹೇಶ್ವರಂ ॥ ೩೫ ॥
ಯಂ ಜ್ಞಾತ್ವಾ ನ ಪುನರ್ಜನ್ಮ ಮರಣಂ ವಾಪಿ ವಿದ್ಯತೇ ॥ ೩೬ ॥

೩೨. ಶಂಕರನ ರೂಪವು ಅವ್ಯಕ್ತವೂ ಅಲ್ಲ. ಕೇವಲ ವ್ಯಕ್ತವೂ ಅಲ್ಲ. ಈ ವ್ಯಕ್ತಾವ್ಯಕ್ತಜ್ಞತ್ವವಾದ ತ್ರಿಗುಣಗಳಿಗೂ ಮೂಲಭೂತವಾದ ಪ್ರಕೃತಿಗಿಂತ ಬೇರೆಯಾದುದು.

೩೩. ನಾಲ್ಕು ವಿಧವಾಗಿಯೋ, ಮೂರುವಿಧವಾಗಿಯೋ, ಸರ್ವಭೂತರೂಪಿಯಾಗಿಯೋ ಕಾಣುವಂತಹವನು ಆ ಶಿವನೊಬ್ಬನೇ. ಆತನೇ ಸರ್ವ ಜಗತ್ತಿನ ಉತ್ಪತ್ತಿಗಾಗಿ ಉತ್ಪನ್ನನಾದವನಂತೆ ತೋರುತ್ತಿರುವನು.

೩೪. ಈ ಪರಮೇಶ್ವರನು ಎಲ್ಲೆಲ್ಲಿಯೂ ಇದ್ದಾನೆ. ಆದರೆ ಎಲ್ಲೂ ಕಾಣುವುದಿಲ್ಲ. ಯೋಗಿಗಳಿಗೆ ಯೋಗಿಯಾಗಿಯೂ, ಸಮಸ್ತ ಕಾರಣಗಳಿಗೆ ಕಾರಣನಾಗಿಯೂ ತೋರಿಬರುತ್ತಿರುವನು.

೩೫-೩೬. ಏಕಾದಶರುದ್ರರಿಗೂ ರುದ್ರನಾಗಿ, ದೇವತೆಗಳಿಗೆಲ್ಲಾ ದೇವತೆಯಾಗಿರುವ, ಈ ಪರಮಾತ್ಮನ ಸ್ವರೂಪವನ್ನು ಬ್ರಹ್ಮಾದಿಗಳೂ ಸಹ ಸಂಪೂರ್ಣವಾಗಿ ತಿಳಿಯಲಾರರು. ಅಂಥ ಆತ್ಮಸ್ವರೂಪವನ್ನು ತಿಳಿದವರು ನಿಜವಾಗಿಯೂ ಜನನ ಮರಣ ದುಃಖಗಳಿಗೆ ಸಿಕ್ಕದೆ ಮುಕ್ತಿಯನ್ನು ಪಡೆಯುವರು.

ಯದಾಽಽಪದೋ ದೇಹಭೃತಾಂ ಭವಂತಿ ।
ಪ್ರಾಣಾತ್ಯಯಪ್ರಾಪ್ತಿಕೃತಸ್ತದಾನೀಂ ।
ವಿಹಾಯ ದೇವಂ ಜಗದೇಕಬಂಧುಂ ।
ಶಿವಂ ನ ಚಾನ್ಯಃ ಪರಿಹಾರಹೇತುಃ ॥ ೩೭ ॥

ಆಸ್ತೇ ಶಿಶುರ್ವರಾನ್ ಸರ್ವಾನ್ ಸರ್ವೇಷಾಂ ದೇಹಿನಾಂ ಸದಾ ।
ದೇಹಭೃತ್ಕಥ್ಯತೇ ತಸ್ಮಾನ್ನಿರ್ಗುಣೋಪಿ ಮಹೇಶ್ವರಃ ॥ ೩೮ ॥

ಭೂಯಾನತ್ರ ಗತಃ ಕಾಲಸ್ತತ್ರೈಕಂ ಜನ್ಮ ಗಚ್ಛತು ।
ಜಿಜ್ಞಾಸ್ಯತಾಮಿಯಂ ತಾವನ್ಮುಕ್ತಿರೇಕೇನ ಜನ್ಮನಾ ॥ ೩೯ ॥

ಭಕ್ತ್ಯಾ ಭಗವತಃ ಶಂಭೋರಿತಿ ದೇವೋಽಬ್ರವೀದ್ರವಿಃ ।
ಸಕೃತ್ಸಂಸ್ಮರಣಾಚ್ಛಂಭೋರ್ನಶ್ಯಂತಿ ಕ್ಲೇಶಸಂಚಯಾಃ ॥ ೪೦ ॥

---

೩೭. ಪ್ರಾಣಿಗಳು ತಮ್ಮ ಪ್ರಾಣಾಂತಕಗಳಾದ ವಿಪತ್ತುಗಳನ್ನು ಪಡೆದಾಗ, ಆ ವಿಪತ್ಪರಂಪರೆಗಳಿಂದ ಪಾರಾಗಲು ಪರಮೇಶ್ವರನನ್ನೇ ಅವರು ಭಜಿಸಬೇಕು. ಅಂತಹ ವಿಪತ್ತುಗಳನ್ನು ಧ್ವಂಸಮಾಡಲು ಪರಮೇಶ್ವರನೊಬ್ಬನಲ್ಲದೆ ಮತ್ತಾರೂ ಸಮರ್ಥರಿರಲಾರರು.

೩೮. ಸಮಸ್ತರಿಗೂ ಅವರವರ ಇಷ್ಟಾರ್ಥಗಳನ್ನು ಒದಗಿಸುವಂತಹ ಪರಮೇಶ್ವರನು ಶಿಶುವಿನಂತೆ ದೇಹವನ್ನು ಹೊಂದಿ ಜನರಿಗೆ ಪ್ರೀತಿಪಾತ್ರನಾಗಿರುವನು. ಆದ್ದರಿಂದಲೇ ಮಹೇಶ್ವರನು ಸ್ವಯಂ ನಿರ್ಗುಣನಾದರೂ, ಭಕ್ತರ ಉದ್ಧಾರಕ್ಕಾಗಿ ಸಗುಣನಂತೆ ಶರೀರಿಯಾಗಿ ಕಾಣುವನು.

೩೯. ಎಲೈ ಶೌನಕಾದಿಗಳೇ, ನೀವು ಇಲ್ಲಿನವರೆಗೂ ಎಷ್ಟೋ ಕಾಲವನ್ನು ಕಳೆದಿರಿ. ಇನ್ನು ಈ ಜನ್ಮದಲ್ಲಾದರೂ ಸ್ಥಿರಮನಸ್ಸಿನಿಂದ ಮಹೇಶ್ವರನ ಮಹಿಮೆಯನ್ನು ಅರಿತು, ಪುನಃ ಜನ್ಮಾಂತರಗಳಿಗೆ ಸಿಕ್ಕದೆ ಮುಕ್ತಿಯನ್ನು ಪಡೆಯಿರಿ.

೪೦. ನಿಮ್ಮ ಮುಕ್ತಿಗೆ ಭಗವಂತನಾದ ಪರಶಿವನಲ್ಲಿ, ನೀವಿಡುವ ಭಕ್ತಿಯೇ ಮುಖ್ಯಕಾರಣವಾಗುವುದು, ಹೀಗೆಂದು ಸೂರ್ಯದೇವನು ಮನುವಿಗೆ ಸಾರಿ ಸಾರಿ ಬೋಧಿಸಿರುವನು. ಪರಮೇಶ್ವರನ ನಾಮ ಸ್ಮರಣೆಯನ್ನು ಒಂದಾವರ್ತಿ ಮಾಡಿದರೂ, ಜೀವಿಯು ತನ್ನ ಅನೇಕ ಕ್ಲೇಶಗಳನ್ನು ಪರಿಹಾರಮಾಡಿಕೊಳ್ಳಬಹುದು.

ಮುಕ್ತಿಂ ಪ್ರಯಾತಿ ಸ್ವರ್ಗಾಪ್ತಿಸ್ತಸ್ಯ ವಿಘ್ನೋಽನುಮೀಯತೇ ।
ತಸ್ಮಾತ್ತಟಿಲ್ಲತಾಲೋಲಂ ಮಾನುಷ್ಯಂ ಪ್ರಾಪ್ಯ ದುರ್ಲಭಂ ॥ ೪೧ ॥

ಶಿವಂ ಸಂಪೂಜಯೇನ್ನಿತ್ಯಂ ಭಕ್ತಿಮಾತ್ರೋಪಲಬ್ಧಯೇ ।
ಮೋಹನಿದ್ರಾಪ್ರಸುಪ್ತೇಽಸ್ಮಿನ್ ಪಶುಪಾಶಶತಾಕುಲೇ ॥ ೪೨ ॥
ಪುರುಷಾಃ ಕೃತಕೃತ್ಯಾಸ್ತೇ ಯೇ ಶಿವಂ ಶರಣಂ ಗತಾಃ ।

ಪುತ್ರದಾರಗೃಹಕ್ಷೇತ್ರ ಧನಧಾನ್ಯರ್ದ್ಧಿಮೇದಿನೀಂ । ॥ ೪೩ ॥
ಲಬ್ಧ್ವೇಮಾಂ ಮಾ ಕೃಥಾ ದರ್ಪಂ ರೇ ರಮಾಂ ಕ್ಷಣಭಂಗುರಾಂ

ತ್ಯಕ್ತ್ವಾ ಕ್ರೋಧಂ ಚ ಕಾಮಂ ಚ ಲೋಭಂ ಮೋಹಂ ಮದಂ ತಥಾ ೪೪
ಜನಾ ಯಜಧ್ವಮೀಶಾನಂ ಸಮೀಹಿತಫಲಪ್ರದಂ ।
ಯಾವನ್ನಾಭ್ಯೇತಿ ಮರಣಂ ಯಾವನ್ನಾಭ್ಯೇತಿ ವೈ ಜರಾ ॥ ೪೫ ॥
ಯಾವನ್ನೇಂದ್ರಿಯವೈಕಲ್ಯಂ ತಾವದೇವಾರ್ಚಯೇಶ್ವರಂ ।

೪೧-೪೨. ಈಶ್ವರನ ನಾಮಸ್ಮರಣೆ ಮಾಡುವವರು, ಸುಲಭವಾಗಿ ಮುಕ್ತಿಯನ್ನು ಗಳಿಸಬಹುದು. ಸ್ವರ್ಗದ ಸುಖವನ್ನು ಆನಂದದಿಂದ ಅನುಭವಿಸಬಹುದು. ವಿಘ್ನಗಳಂತೂ ಅವರ ಎದುರಿಗೇ ನಿಲ್ಲಲಾರವು. ಮನುಷ್ಯ ಜನ್ಮವೆಂಬುದು ಮಿಂಚಿನಂತೆ ನಶ್ವರವಾದದ್ದು. ಆದ್ದರಿಂದ ಪರಶಿವನನ್ನು ನಿತ್ಯವೂ ಭಜಿಸಿ, ತನ್ಮೂಲಕ ಆತ್ಮಜ್ಞಾನವನ್ನು ಪಡೆದು ಆನಂದವನ್ನು ಅನುಭವಿಸಬೇಕು. ಮೋಹ, ನಿದ್ರೆ, ಬಂಧನ ಇವೇ ಮೊದಲಾದ ಪ್ರತಿಬಂಧಕ ಸಾಮಗ್ರಿಗಳಿದ್ದರೂ, ಜ್ಞಾನವನ್ನು ಆಶ್ರಯಿಸಿ ಯಾರು ಶಿವನ ಶರಣನ್ನು ಹೊಂದುವರೋ ಅವರೇ ಧನ್ಯರು.

೪೩. ಎಲೈ ಮಾನವರೇ, ಹೆಂಡತಿ, ಮಕ್ಕಳು, ಮನೆ, ಮಠ, ಹಣ, ಕಾಸು, ಭೂಮಿ, ಕಾಣಿ ಮುಂತಾದ ವಸ್ತುಗಳ ಆಸೆಗಾಗಿ ಹಣವನ್ನು ಗಳಿಸಿ, ಅಹಂಕಾರ ಪಡಬೇಡಿ. ಐಶ್ವರ್ಯವೆಂಬುದು ಒಂದು ಕ್ಷಣದಲ್ಲಿ ನಾಶವಾಗತಕ್ಕದ್ದು.

೪೫ ಎಲೈ ಮಾನವರೇ, ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಾದಿಗಳನ್ನು ಬಿಟ್ಟು, ಸರ್ವಫಲಪ್ರದವಾದ ಪರಮೇಶ್ವರನನ್ನು ಸೇವಿಸಿರಿ. ಮರಣವು ಸನ್ನಿಹಿತವಾಗುವವರೆಗೂ, ಮುಪ್ಪು ಅಡಸುವವರೆಗೂ, ಇಂದ್ರಿಯಗಳ ಪಾಟವವಿರುವವರೆಗೂ ಪರಮೇಶ್ವರನನ್ನು ಭಜಿಸಿರಿ.

ಯೇ ಯಜಂತಿ ನ ದೇವೇಶಂ ವಿಷಯಾಸವಮೋಹಿತಾಃ ॥ ೪೬ ॥
ತೇ ಚಂತೇ ಹಿ ಮೃತಾಃ ಪಂಕಲಗ್ನಾ ವನಗಜಾ ಇವ ।

ಕಾಲಃ ಸನ್ನಿಹಿತಾಪಾಯಃ ಸಂಪದಃ ಪದಮಾಪದಾಂ ॥ ೪೭ ॥
ಸಮಾಗಮಾಃ ಸಾಪಗಮಾಃ ಸರ್ವಮುತ್ಪಾದಿತಂ ಗುರು ।

ಯಜಂತಿ ಯೇ ವಿದಿತ್ವೈವಂ ಲಿಂಗಮೂರ್ತಿಮಹೇಶ್ವರಂ ॥ ೪೮ ॥
ಲಭಂತೇ ವಿಪುಲಾನ್ ಕಾಮಾನಿಹಚಾಮುತ್ರ ಚಾಕ್ಷಯಾನ್ ।
ಆರಾಧಯ ತ್ವಂ ವಿಪ್ರೇಂದ್ರಾಃ ಸರ್ವಜ್ಞಂವಿಶ್ವತೋಮುಖಂ ॥ ೪೯ ॥
ಕ್ಷಿಪ್ರಂ ಯಾಸ್ಯಥ ತೇನೈವ ಸಾಯುಜ್ಯಂ ನಾತ್ರ ಸಂಶಯಃ ।

---

೪೬. ಯಾರು ವಿಷಯ ಸುಖಗಳೆಂಬ ಮದ್ಯದಿಂದ ಮತ್ತರಾಗಿ ಭಗವಂತನನ್ನು ಆರಾಧಿಸುವುದಿಲ್ಲವೋ, ಅವರು ಕೆಸರಿನಲ್ಲಿ ಸಿಕ್ಕಿಕೊಂಡ ಕಾಡಾನೆಯಂತೆ ದುಃಖದಿಂದ ಮೃತರಾಗುವರು.

೪೭. ಕಾಲವು ಪ್ರತಿನಿಮಿಷವೂ ಮಾನವರಿಗೆ ಅಪಾಯವನ್ನು ಕೊಡತಕ್ಕದ್ದೇ ಆಗಿದೆ. ಸಮಸ್ತ ಆಪತ್ತುಗಳಿಗೂ ಮೂಲಭೂತವಾದದ್ದು ಐಶ್ವರ್ಯ. ಸಂಸಾರದಲ್ಲಿ ಬಂಧುಗಳ ಘಟನೆಯು ಒಂದಲ್ಲ, ಒಂದು ಕಾಲದಲ್ಲಿ ವಿಯೋಗವನ್ನುಂಟು ಮಾಡ ತಕ್ಕದ್ದೇ. ಆದರೆ ಸೃಷ್ಟವಾದ ಜಗತ್ತೆಲ್ಲಾ ಪರಮಾತ್ಮ ಸ್ವರೂಪವೇ.

೪೮. ಹೀಗೆಂದು ತಿಳಿದು ಯಾರು ಲಿಂಗರೂಪಿಯಾಗಿರುವ ಮಹಾದೇವನನ್ನು ಭಕ್ತಿಯಿಂದಾರಾಧಿಸುವರೋ, ಅವರು ಖಂಡಿತವಾಗಿ ಐಹಿಕ ಮತ್ತು ಪಾರಲೌಕಿಕ ಸುಖಗಳನ್ನು ಶೀಘ್ರವಾಗಿ ಪಡೆಯುವರು.

೪೯. ಆದ್ದರಿಂದ ಎಲೈ ಶೌನಕಾದಿಗಳೇ, ನೀವು ಸರ್ವಜ್ಞನೂ, ಸರ್ವತೋ ಮುಖನೂ ಆದ ಪರಮೇಶ್ವರನನ್ನು ಭಕ್ತಿಯಿಂದಾರಾಧಿಸಿರಿ. ಅದರಿಂದಲೇ ನೀವು ಶಿವಸಾಯುಜ್ಯವನ್ನು ಬಹುಬೇಗ ಪಡೆಯಬಹುದು. ಇದರಲ್ಲಿ ಸಂದೇಹವಿಲ್ಲ.

ಭಕ್ತ್ಯಾ ಭವಂ ಯಜೇದ್ಯಸ್ತು ಮಹಾಪಾತಕವಾನಪಿ ॥ ೫೦ ॥
ಸೋಽಪಿ ಯಾತಿ ಪರಂ ಸ್ಥಾನಂ ತ್ರಿಸಪ್ತಪುರುಷಾನ್ವಿತಃ ।

ಅಶ್ವಮೇಧಸಹಸ್ರಾಣಿ ರಾಜಸೂಯಶತಾನಿ ಚ ॥ ೫೧ ॥
ಮಹೇಶಾರ್ಚನಪುಣ್ಯಸ್ಯ ಕಲಾಂ ನಾರ್ಹಂತಿ ಷೋಡಶೀಂ ।

ಕ್ರೀಡಂತಿ ಶಿಶವೋ ಯತ್ರ ಲಿಂಗಂ ಕೃತ್ವಾ ವ್ರಜಂತಿ ಯೇ ॥ ೫೨ ॥
ಸೈಕತಂ ಮೃಣ್ಮಯಂ ವಾಪಿ ತೇ ಭವಂತ್ಯೇವ ಭೂಭುಜಃ ।

ಆಧ್ಯಾತ್ಮಿಕಂ ಚಾಧಿದೈವಂ ದುಃಖಂ ಚೈವಾಧಿಭೌತಿಕಂ ॥ ೫೩ ॥
ದೇವಾದೀನಾಂ ವಿದಿತ್ವೈವಂ ಮೋಕ್ಷಾರ್ಥೀ ಶಿವಮರ್ಚಯೇತ್ ।

---

೫೦. ಮನುಷ್ಯರು ತಾವು ಎಷ್ಟೇ ಪಾಪಿಷ್ಠರಾಗಿದ್ದರೂ, ಭಕ್ತಿಯಿಂದ ಶಂಕರನನ್ನು ಅರ್ಚಿಸಿದ್ದೇ ಆದರೆ ಅವರು ತಮ್ಮ ಹಿಂದಿನ ಇಪ್ಪತ್ತೊಂದು ತಲೆಯು ಪರ್ಯಂತವಿದ್ದ, ಪಿತೃಗಳೊಡನೆ ಮೋಕ್ಷಸ್ಥಾನವನ್ನು ಹೊಂದುವರು.

೫೧. ಸಹಸ್ರ ಅಶ್ವಮೇಧಯಾಗಗಳ ಫಲವೂ, ನೂರು ರಾಜಸೂಯ ಯಾಗಗಳ ಸುಕೃತವೂ ಒಟ್ಟುಗೂಡಿ ನಿಂತರೂ, ಮಹೇಶ್ವರನ ಪೂಜಾಲಬ್ಧವಾದ ಪುಣ್ಯದ ಹದಿನಾರನೆಯ ಒಂದು ಭಾಗವಾಗಲಾರದು.

೫೨. ಮಕ್ಕಳು ಮಣ್ಣಿನಿಂದಾಗಲಿ, ಮರಳಿನಿಂದಾಗಲೀ ಶಿವಲಿಂಗವನ್ನು ನಿರ್ಮಿಸಿಕೊಂಡು ಆಟವಾಡುವಾಗ, ಅಂಥ ಶಿವಲಿಂಗದಲ್ಲಿ ಯಾರು ಮಹೇಶ್ವರನ ಸಾನ್ನಿಧ್ಯವನ್ನು ಅರಿಯುವರೋ, ಅವರೂ, ಆ ಮಕ್ಕಳೂ ಸಹ ರಾಜರಾಗಿ ಹುಟ್ಟಿ ರಾಜ್ಯಸುಖಗಳನ್ನು ಅನುಭವಿಸುವರು.

೫೩. ಆತ್ಮಸಂಬಂಧವಾದ ಆಧ್ಯಾತ್ಮಿಕವೂ, ದೈವಿಕವಾಗಿ ಬರುವ ಆಧಿದೈವಿಕವೂ ಪಂಚಭೂತಗಳ ಮೂಲಕ ಬರುವ ಆಧಿಭೌತಿಕವೂ, ಇವು, ಮೂರು ವಿಧವಾದ ದುಃಖಗಳು. ಈ ದುಃಖಗಳು ದೇವತೆಗಳಿಗೂ ತಪ್ಪಲಾರವು. ಆದ್ದರಿಂದ ಮಾನವನು ಈ ತಾಪತ್ರಯಗಳನ್ನು ನಿವಾರಣೆಮಾಡುವಂತಹ ಮೋಕ್ಷವನ್ನು ಶಿವಾರ್ಚನೆಯಿಂದ ಪಡೆಯಲು ಯತ್ನಿಸಬೇಕು.

ಅಪಾರತರಪರ್ಯಂತಾದ್ಘೋರಾತ್ಸಂಸಾರಸಾಗರಾತ್ ।
ಮಹಾಮೋಹಜಲಾತ್ಕಾಮಕ್ರೋಧಗ್ರಾಹಾತ್ಸುಖೋರ್ಮಿಣಃ ॥ ೫೪ ॥

ಪ್ರಾಜ್ಞೋ ವೇದಾಂತವಿದ್ಯೋಗೀ ನಿರ್ಮಮೋ ನಿರಹಂಕೃತಿಃ ।
ಏಕೋ ಯೋಗೀ ಪ್ರಶಾಂತಾತ್ಮಾ ಸ ಸಂತರತಿ ನೇತರಃ। ॥ ೫೫ ॥

ದಾಂತಃ ಸುಸಂಯುತೋ ಧ್ಯಾನಂ ನಿರಾಶೋ ವಿಗತಸ್ಪೃಹಃ ।
ಸರ್ವಸಂಗವಿಹೀನಸ್ಸ ನಿರ್ದ್ವಂದ್ವೋ ನಿರುಪಪ್ಲವಃ ॥ ೫೬ ॥

ಸರ್ವಕರ್ಮಫಲತ್ಯಾಗೀ ಜಡಾಂಧಬಧಿರಾಕೃತಿಃ ।
ಮಿತ್ರಾರಿಷು ಸಮೋ ಮೈತ್ರಃ ಸಮಸ್ತೇಷ್ವೇವ ಜಂತುಷು ॥ ೫೭ ॥

---

೫೪. ಸಂಸಾರವೆಂಬುದೇ ಒಂದು ದೊಡ್ಡ ಸಾಗರ. ಅದಕ್ಕೆ ಕೊನೆ ಮೊದಲಿಲ್ಲ. ಅದರಲ್ಲಿ ದೊಡ್ಡ ಮೋಹವೆಂಬುದೇ ನೀರು. ಕಾಮಕ್ರೋಧಗಳೇ ದೊಡ್ಡ ದೊಡ್ಡ ಮೊಸಳೆಗಳು. ಮೇಲ್ಮೇಲೆ ಕ್ಷಣಿಕವಾಗಿ ಓಡಾಡುವ ಸಂಸಾರದ ದುಃಖವೇ ಅಲೆಗಳು.

೫೫. ಅಂತಹ ಭಯಂಕರವಾದ ಸಂಸಾರಸಾಗರವನ್ನು, ವೇದಾಂತಗಳ ಅರ್ಥವನ್ನು ಚೆನ್ನಾಗಿ ಅನುಸಂಧಾನಮಾಡಿ, ಮಮಕಾರಗಳನ್ನು ಬಿಟ್ಟಿರುವ ಯೋಗಿಯೊಬ್ಬನು ಸುಲಭವಾಗಿ ದಾಟಬಲ್ಲನು. ಮತ್ತಾರಿಂದಲೂ ಸಾಧ್ಯವಿಲ್ಲ.

೫೬. ಮೋಕ್ಷಕಾಮಿಯಾದವನು ದಾನಶೀಲನಾಗಬೇಕು. ಧ್ಯಾನಶೀಲನಾಗಬೇಕು, ಆಸೆಯನ್ನು ಬಿಡಬೇಕು, ಇಚ್ಛೆಯನ್ನು ದೂರಮಾಡಬೇಕು. ಸರ್ವಸಂಗ ಪರಿತ್ಯಾಗಮಾಡಿ ಅದ್ವೈತಬುದ್ಧಿಯಿಂದ ಜ್ಞಾನಾರ್ಜನೆಮಾಡುತ್ತಿರಬೇಕು.

೫೭. ಸರ್ವಕರ್ಮಗಳನ್ನೂ ಫಲಾಪೇಕ್ಷೆಯಿಲ್ಲದೆ ಮಾಡಬೇಕು. ಕುರುಡನಂತೆ, ಕಿವುಡನಂತೆ, ಜಡನಂತೆ ಸರ್ವವಸ್ತುಗಳನ್ನೂ ದೂರಮಾಡಬೇಕು. ಮಿತ್ರರಲ್ಲೂ, ಶತ್ರುಗಳಲ್ಲೂ ಒಂದೇ ವಿಧವಾದ ಮೈತ್ರಿಯನ್ನಿಟ್ಟು, ಸಮಸ್ತ ಪ್ರಾಣಿಗಳಲ್ಲಿಯೂ ಒಂದೇ ಸಮನಾಗಿ ವರ್ತಿಸುತ್ತಿರಬೇಕು.

ಏವಂ ಸುದುರ್ಲಭೋ ಮೋಕ್ಷೋ ನ ಸ್ಯಾದ್ಯೋಗೀವ ತಾದೃಶಃ ।
ಸರ್ವೇ ಪೃಥಿವ್ಯಾಂ ಪಾತಾಳೇ ಮುಕ್ತಾಃ ಪ್ರಕೃತಿಜೈರ್ಗುಣೈಃ ॥ ೫೮ ॥

ಏವಂ ಸುದುರ್ಲಭಂ ಮತ್ವಾ ಮೋಕ್ಷಂ ಹಿ ಬಹುಸಾಧನಂ ।
ಪೂಜಯಧ್ವಂ ಮಹಾದೇವಂ ಕರ್ಮಯೋಗೇನ ಚಾನ್ಯಥಾ ॥ ೫೯ ॥

ಕರ್ಮ ಪೂಜಾ ಜಪೋ ಹೋಮಃ ಶಂಭೋರ್ನಾಮಾನುಕೀರ್ತನಂ ।
ಕರ್ಮಯೋಗಾಃ ಸಮಾಖ್ಯಾತಾ ಏತೈಃ ಪೂಜ್ಯೋ ಮಹೇಶ್ವರಃ ॥ ೬೦ ॥

ಯಂ ಯಂ ಕಾಮಮಭಿಧ್ಯಾಯೇತ್ತದರ್ಪಿತಮನಾಃ ಶಿವಂ ।
ಸಂಪೂಜ್ಯ ತಂ ತಮಾಪ್ನೋತಿ ಸಾವಿತ್ರ್ಯಾಹ ಯಥಾ ಪುರಾ ॥ ೬೧ ॥

ತನ್ನಾಮ ಚಾಪೀ ತತ್ಕರ್ಮರತಿಸ್ತದ್ಗತಮಾನಸಃ ।
ನಿಷ್ಕಾಮಃ ಪುರುಷೋ ವಿಪ್ರಾಃ ಸ ರುದ್ರಪದಮಶ್ನುತೇ ॥ ೬೨ ॥

---

೫೮. ಹೀಗೆ ನಡೆದರೆ ಜನರಿಗೆ ಮೋಕ್ಷವು ಸುಲಭವಾಗಿ ದೊರಕುವುದು. ಅವನು ಸಾಕ್ಷಾದ್ಯೋಗಿಯೇ ಆಗುವನು. ಆ ಗುಣಗಳನ್ನು ಪಡೆದವರು ಭೂಲೋಕದಲ್ಲಿರಲಿ, ಪಾತಾಳದಲ್ಲಿರಲಿ, ಅವರು ಸರ್ವಸಂಗತ್ಯಾಗಿಗಳಾಗಿ ಮೋಕ್ಷವನ್ನು ಪಡೆಯುವರು.

೫೯. ಇಷ್ಟು ದೂರವಿರುವ ಮೋಕ್ಷಕ್ಕೆ ಇನ್ನೂ ಅನೇಕ ದಾರಿಗಳಿರುವುವು. ಅದರಲ್ಲಿ ಸುಲಭವಾಗಿ ಮುಕ್ತಿಯನ್ನೊದಗಿಸುವ ಮಾರ್ಗವೆಂದರೆ, ಕರ್ಮಯೋಗವನ್ನರಿತು ಈಶ್ವರನನ್ನು ಪೂಜಿಸುವುದೇ.

೬೦. ಕರ್ಮಯೋಗವೆಂದರೆ ಈಶ್ವರನ ಪೂಜೆ, ತತ್ಕರ್ಮಕ ಜಪ, ಅವನನ್ನು ಉದ್ದೇಶಿಸಿ ಮಾಡುವ ಹೋಮಾದಿಗಳು, ಪರಶಂಭುವಿನ ನಾಮಸ್ಮರಣೆ, ಈ ಕೆಲಸಗಳು. ಇವುಗಳಿಂದಲೇ ಮಹೇಶ್ವರನನ್ನು ಪೂಜಿಸಬೇಕು.

೬೧. ಯಾವ ಯಾವ ಫಲೋದ್ದೇಶಕ್ಕಾಗಿ ಈಶ್ವರನನ್ನು ಸೇವಿಸಿದರೂ, ಭಕ್ತನು ಆಯಾಫಲಗಳನ್ನು ಸುಲಭವಾಗಿ ಪಡೆಯಬಹುದು. ಇದಕ್ಕೆ, ಹಿಂದೆ ಸಾವಿತ್ರೀದೇವಿಯು ಹೇಳಿದ ಮಾತೇ ದೃಷ್ಟಾಂತ.

೬೨. ಈಶ್ವರಮಂತ್ರಗಳನ್ನೇ ಜಪಿಸುತ್ತಾ ಆ ಕರ್ಮಯೋಗದಲ್ಲಿ ಆಸಕ್ತನಾಗಿ ಅವನಲ್ಲಿಯೇ ಮನಸ್ಸಿಟ್ಟು, ನಿಷ್ಕಾಮಕರ್ಮಗಳನ್ನಾಚರಿಸುವ ಜ್ಞಾನಿಗಳು ಶಿವಸಾಯುಜ್ಯವನ್ನೇ ಹೊಂದುವರು.

ಯಃ ಸರ್ವದಾऽರ್ಚಯೇದೀಶಂ ಸ ರುದ್ರ ಇವ ಭೂತಲೇ ।
ಪಾಪಹಾ ಸರ್ವಮರ್ತ್ಯಾನಾಂ ದರ್ಶನಾತ್ಸ್ಪರ್ಶನಾದಪಿ ॥ ೬೩ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಶಿವಮಾಹಾತ್ಮ್ಯಕಥನಂ ನಾಮ ಷಟ್ಚತ್ವಾರಿಂಶೋऽಧ್ಯಾಯಃ.

---

೬೩. ಯಾವನು ಸರ್ವಕಾಲದಲ್ಲಿಯೂ ಈಶ್ವರನನ್ನೇ ಅರ್ಚಿಸುತ್ತಿರುವನೋ ಅವನು ಸಾಕ್ಷಾದ್ರುದ್ರನೇ ಆಗುವನು. ಅವನ ದರ್ಶನ ಸ್ಪರ್ಶನಾದಿಗಳಿಂದ ಇತರರು ತಮ್ಮ ತಮ್ಮ ದುಷ್ಕೃತಗಳನ್ನು ಕಳೆದುಕೊಳ್ಳಬಹುದು" ಎಂದು ಸೂತರು ಹೇಳಿದರು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತ ಶೌನಕ ಸಂವಾದ ರೂಪವಾಗಿ, ಶಿವಮಹಿಮೆಯನ್ನು ತಿಳಿಸುವ ನಲವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಸಪ್ತಚತ್ವಾರಿಂಶೋಽಧ್ಯಾಯಃ

॥ ಋಷಯ ಊಚುಃ ॥

ಪತಿವ್ರತಾ ಮಹಾಭಾಗಾ ಸಾವಿತ್ರೀ ವರವರ್ಣಿನೀ ।
ಯದಾಹ ತದ್ವದಾಸ್ಮಾಕಂ ಸೂತ ವಾಕ್ಯವಿಶಾರದ ॥ ೧ ॥

॥ ಸೂತ ಉವಾಚ ॥

ಸ್ವರ್ಗೇ ತಾಂ ಶೋಭನಾಂ ದೃಷ್ಟ್ವಾ ಗುಣೈಃ ಸರ್ವೈರಲಂಕೃತಾಂ ।
ಅರುಂಧತ್ಯುತ್ತಮಾ ಸ್ತ್ರೀಣಾಂ ಪರ್ಯಪೃಚ್ಛಚ್ಚ ಚಿಸ್ಮಿತಾ ॥ ೨ ॥

ಶತಶಃ ಸಂತಿ ಸಾವಿತ್ರಿ ದೇವಾಃ ಸ್ವರ್ಗನಿವಾಸಿನಃ ।
ದೇವಪತ್ನ್ಯಸ್ತಥೈವೈತಾಃ ಸಿದ್ಧಾಃ ಸಿದ್ಧಾಂಗನಾಸ್ತಥಾ ॥ ೩ ॥

ನಲವತ್ತೇಳನೆಯ ಅಧ್ಯಾಯ.

೧. ಸತ್ಕಥಾಶ್ರವಣದಲ್ಲಿ ಆಸಕ್ತರಾದ ಶೌನಕಾದಿಗಳು ಸೂತಪುರಾಣಿಕರನ್ನು ಕುರಿತು "ಸ್ವಾಮಿಯೇ, ತಾವು ಹಿಂದೆ ಹೇಳಿದ ಪತಿವ್ರತಾಶಿರೋಮಣಿಯಾದ ಸಾವಿತ್ರಿಯು ಪರಮೇಶ್ವರನಲ್ಲಿ ಕೇಳಿಕೊಂಡ ವರಗಳೇನು? ಅದರಿಂದ ಆಕೆಯು ಪಡೆದ ಫಲವೇನು? ಅದನ್ನು ನಮಗೆ ತಿಳಿಸಬೇಕು" ಎನ್ನಲು

೨. ಸೂತಮಹರ್ಷಿಗಳು ದಯೆಯಿಂದ ಪುನಃ ಶೌನಕಾದಿಗಳಿಗೆ ಸಾವಿತ್ರಿಯ ಭಕ್ತಿಯನ್ನೂ, ಈಶ್ವರನ ವರಪ್ರದಾನವನ್ನೂ, ತಿಳಿಸಲಾರಂಭಿಸಿದರು. "ಋಷಿಗಳೇ, ಸಾವಿತ್ರಿಯು ಸ್ವರ್ಗಲೋಕದಲ್ಲಿ ಪತಿವ್ರತಾಶಿರೋಮಣಿಯಾಗಿ ವಾಸಿಸುತ್ತಿದ್ದಳು. ಒಂದು ದಿನ ಅರುಂಧತೀ ದೇವಿಯು ಅವಳ ಸಮೀಪಕ್ಕೆ ಹೋಗಿ ಹೀಗೆ ಪ್ರಶ್ನೆ ಮಾಡಿದಳು.

೩. "ಸಾವಿತ್ರಿಯೇ, ನಮ್ಮ ಸ್ವರ್ಗಲೋಕದಲ್ಲಿ ಅನೇಕ ಜನ ದೇವತಾ ಸ್ತ್ರೀಯರೂ ಸಿದ್ಧಾಂಗನೆಯರೂ ಇರುವರು.

ನ ತೇಷಾಮೀದೃಶೋ ಗಂಧೋ ನ ಕಾಂತಿ ರ್ನ ಸರೂಪತಾ ।
ನಾನ್ಯೇಷಾಂ ವಿದ್ಯತೇ ಶೋಭಾ ಯಥಾ ತೇ ಪತಿನಾ ಸಹ ॥ ೪ ॥

ನ ಚೈವಾಕಲ್ಪಜಾತಾನಿ ಭ್ರಾಜಂತೇ ಸುರಯೋಷಿತಾಂ ।
ಯಥಾ ತವ ತಥಾ ಪತ್ಯುರ್ಭ್ರಾಜಂತೇ ವರವರ್ಣಿನಿ ॥ ೫ ॥

ನಾಸ್ತಿ ಕಾಂತಿರ್ವಿಮಾನಾನಾಂ ಶಕ್ರಾದೀನಾಂ ದಿವೌಕಸಾಂ ।
ವಿಮಾನಸ್ಯಾಪಿ ತೇ ಕಾಂತಿಸ್ತರುಣಾರ್ಕಾಯುತದ್ಯುತಿಃ ॥ ೬ ॥

ತಪಃ ಪ್ರಭಾವೋ ದಾನಂ ವಾ ಕರ್ಮ ವಾ ಕ್ರತುವಿಸ್ತರಂ ।
ಯುವಯೋಸ್ತನ್ಮಮಾಽಽಚಕ್ಷ್ವ ಯಥಾವದ್ವರವರ್ಣಿನಿ ॥ ೭ ॥

॥ ಸಾವಿತ್ರ್ಯುವಾಚ ॥

ಶೃಣುಷ್ವೇತನ್ಮಹಾಭಾಗೇ ಯತ್ಕೃತಂ ಪೂರ್ವಜನ್ಮನಿ ।
ಭರ್ತ್ರಾ ಸಹ ಮಯಾ ಭದ್ರೇ ಶಂಭೋರಾಯತನೇ ಶುಭೇ ॥ ೮ ॥

---

೪. ಅವರ ದೇಹದಲ್ಲಿ ನಿನ್ನ ಶರೀರದಂತಹ ಸೌಗಂಧ್ಯವೂ, ಸುಕುಮಾರತ್ವವೂ, ಕಾಂತಿಯೂ ಕಾಣುತ್ತಿಲ್ಲ. ಅಲ್ಲದೆ ಅವರ ಪತಿಗಳೂ ಸಹ ನಿನ್ನ ಪತಿಯಂತೆ ತೇಜಸ್ವಿಗಳಾಗಿಲ್ಲ.

೫. ಈ ದೇವತಾಸ್ತ್ರೀಯರು ಎಂಥ ಒಡವೆಗಳನ್ನು ಧರಿಸಿದರೂ, ಆ ಒಡವೆಗಳು ಅವರ ದೇಹವನ್ನು ಶೃಂಗರಿಸಲಾರವು. ಎಲೈ ದೇವಿಯೇ, ಅದೇ ಒಡವೆಗಳು ನಿನ್ನ ಮತ್ತು ನಿನ್ನ ಪತಿಯ ದೇಹವನ್ನು ಮಾತ್ರ ಅತಿಯಾಗಿ ಅಲಂಕರಿಸುತ್ತವೆ.

೬. ಅದೂ ಅಲ್ಲದೆ ನಿನ್ನ ವಿಮಾನಕ್ಕಿರುವ ಬಾಲಸೂರ್ಯಸದೃಶವಾದ ಕಾಂತಿಯು ಇಂದ್ರಾದಿಗಳ ವಿಮಾನಕ್ಕೂ ಇಲ್ಲವಲ್ಲಾ !

೭. ಇಷ್ಟು ವೈಭವವು ನಿಮ್ಮಿಬ್ಬರಿಗೆ ಬಂದುದು ಹೇಗೆ? ನೀವು ಮಾಡಿದ ವ್ರತವಾವುದು ? ದಾನವೇನು ? ಯಾವುದಾದರೂ ಯಾಗಗಳನ್ನೇನಾದರೂ ಆಚರಿಸಿದಿರಾ ? ಅದನ್ನು ದಯವಿಟ್ಟು ನಮಗೆ ತಿಳಿಸು" ಎಂದು ಅರುಂಧತಿಯು ಕೇಳಿಕೊಳ್ಳಲು,

೮. ಸಾವಿತ್ರಿಯು ಅರುಂಧತಿಯನ್ನು ಕುರಿತು 'ಮಹಾ ಪತಿವ್ರತೆಯಾದ ಅರುಂಧತಿಯೇ, ನಾನು ಹಿಂದೆ ಪತಿಯೊಡನೆ ಶಿವಾಲಯದಲ್ಲಿ ಮಾಡಿದ ಕಾರ್ಯಕಲಾಪಗಳನ್ನು ಈಗ ಹೇಳುವೆನು ಕೇಳು.

ಕೃತಂ ಸಂಮಾರ್ಜನಂ ಭಕ್ತ್ಯಾ ಗೋಮಯೇನೋಪಲೇಪನಂ ।
ಸ್ವರ್ಗಪ್ರಾಪ್ತಿರಿಯಂ ತಸ್ಯ ಕರ್ಮಣಃ ಫಲಮುತ್ತಮಂ ॥ ೯ ॥

ತೀರ್ಥೋದಕೈಃ ಸುಗಂಧೈಶ್ಚ ಸ್ನಾಪಿತೋ ಯದುಮಾಪತಿಃ ।
ತೇನ ಕಾಂತಿರತೀವೈಷಾ ದೇಹೇಽಭೂತ್ತ್ರಿದಶೇಶ್ವರಿ ॥ ೧೦ ॥

ಮನಃ ಪ್ರಸಾದಂ ಸೌಮ್ಯತ್ವಂ ಶಾರೀರೀ ಯಾ ಚ ನಿರ್ವೃತಿಃ ।
ಯತ್ಪ್ರಿಯತ್ವಂ ಚ ಸರ್ವಸ್ಯ ತದ್ಘೃತಸ್ನಾನಜಂ ಫಲಂ ॥ ೧೧ ॥

ಆಹ್ಲಾದಃ ಪರಮಸ್ವಾಸ್ಥ್ಯಮಾರೋಗ್ಯಂ ಚಾರುವೇಗತಾ ।
ಪ್ರಾಪ್ತಿಶ್ಚಾಶೇಷಕಾಮಾನಾಂ ದಧಿಕ್ಷೀರಫಲಂ ಶುಭೇ ॥ ೧೨ ॥

ಸೌಗಂಧ್ಯಂ ಯತ್ಪರಂ ದೇಹೇ ಧೂಪದಾನಸ್ಯ ಯತ್ಫಲಂ ।
ಗೀತೈರ್ನೃತ್ಯೈಸ್ತಥಾ ಜಾಪ್ಯೈರ್ನಿಯಮೈಶ್ಚ ಪೃಥಗ್ವಿಧೈಃ ॥ ೧೩ ॥
ತೋಷಿತೋ ಭಗವಾನೀಶಸ್ತಸ್ಯೇಯಂ ಪುಷ್ಟಿರುತ್ತಮಾ ।

---

೯. ಅರುಂಧತೀ ದೇವಿಯೇ! ಮತ್ತಾವ ವ್ರತವನ್ನೂ ನಾನು ಆಚರಿಸಲಿಲ್ಲ. ನಿತ್ಯವೂ ಶಿವದೇವಾಲಯವನ್ನು ಗುಡಿಸಿ, ಸಗಣಿಯಿಂದ ಸಾರಿಸುತ್ತಿದ್ದೆನು. ಅದರ ಫಲವಾಗಿ ನನಗೆ ಈಗ ಸ್ವರ್ಗ ಸುಖವು ದೊರಕಿದೆ.

೧೦. ಅಲ್ಲದೆ ಶಿವಲಿಂಗವನ್ನು ನಾನು ಅನೇಕ ತೀರ್ಥಗಳಿಂದಲೂ, ಸುಗಂಧ ಮಯವಾದ ರಸದ್ರವ್ಯಗಳಿಂದಲೂ ಅಭಿಷೇಕ ಮಾಡಿದೆನು. ಅದರಿಂದ ನನ್ನ ದೇಹ ದಲ್ಲಿ ಹೆಚ್ಚಾದ ಕಾಂತಿಯು ತೋರಿಬರುತ್ತಿದೆ.

೧೧. ಪರಮೇಶ್ವರನಿಗೆ ನಾನು ಘೃತಾಭಿಷೇಕಮಾಡಿದೆನು. ಅದರ ಫಲ ವಾಗಿ ನನಗೆ ಶಾಂತಚಿತ್ತವೂ, ಶಾರೀರಕವಾದ ಸುಖವೂ, ಸರ್ವರ ಪ್ರೀತಿಗೆ ಪಾತ್ರ ಳಾಗುವ ಯೋಗ್ಯತೆಯೂ ಉಂಟಾದುವು.

೧೨. ನನಗೆ ನಿತ್ಯಾನಂದವೂ, ಸಂಪೂರ್ಣವಾದ ಆರೋಗ್ಯವೂ, ವೇಗಾತಿ ಶಯವೂ, ಸಕಲೇಷ್ಟಾರ್ಥಸಿದ್ಧಿಯೂ ಲಭಿಸಿವೆ. ಇದಕ್ಕೆ ಕಾರಣವು, ನಾನು ಪರಶಿವನಿಗೆ ಹಾಲು ಮೊಸರಿನಿಂದ ಮಾಡಿದ ಅಭಿಷೇಕವೇ.

೧೩. ಪರಮೇಶ್ವರನಿಗೆ ಸುಗಂಧವಾದ ಧೂಪವನ್ನು ಅರ್ಪಿಸಿದುದರ ಫಲವಾಗಿ ನನ್ನ ದೇಹವೆಲ್ಲವೂ ಸುಗಂಧಮಯವಾಗಿದೆ. ಶಿವನ ಎದುರಿನಲ್ಲಿ ಗೀತ, ವಾದ್ಯ, ನೃತ್ಯ ಇವೇ ಮೊದಲಾದುವುಗಳನ್ನು ನಡೆಸಿ, ಅವನನ್ನು ತೃಪ್ತಿಪಡಿಸಿದ್ದರಿಂದ ನನ್ನ ದೇಹದಲ್ಲಿ ಇಷ್ಟು ಅಂಗಪುಷ್ಟಿಯು ತೋರುತ್ತಿದೆ.

ಸ್ವರ್ಗೇಪ್ಸುನಾ ಸತ್ಯವತಾ ಮಯಾ ಚ ಶುಭದರ್ಶನೇ ।
ಕೃತಮೇತದತೋ ನ ಸ್ಯಾದಾವಯೋರ್ಭೋಗಸಂಕ್ಷಯಃ ॥ ೧೫ ॥

ಯೇ ನಿಶ್ಚಿತಾ ನರಾಃ ಸಮ್ಯಕ್ಪೂಜಯಂತಿ ಮಹೇಶ್ವರಂ ।
ತೇಷಾಂ ದದಾತಿ ವಿಶ್ವೇಶೋ ದೇವೋ ಮುಕ್ತಿಂ ಸುದುರ್ಲಭಾಂ ॥ ೧೬ ॥

॥ ಸೂತ ಉವಾಚ ॥

ಸೈವ ಮುಕ್ತ್ವಾಥ ಸಾವಿತ್ರ್ಯಾ ಮುನೀಂದ್ರಾ ಹೃಷ್ಟಮಾನಸಾ ।
ಬ್ರಹ್ಮಸ್ನುಷಾ ಶಿವೇಶಾನೌ ಪ್ರಣಿಪತ್ಯೇದಮಬ್ರವೀತ್ ॥ ೧೭ ॥

ಸಾ ಪೂಜ್ಯಾ ಸಾ ನಮಸ್ಕಾರ್ಯಾ ಸಾ ಸಾಧ್ವೀ ಸಾ ಪತಿವ್ರತಾ ।
ಯಾ ಪೂಜಯತಿ ಸಾವಿತ್ರಿ ಸದಾ ಹೈಮವತೀಪತಿಂ ॥ ೧೮ ॥

---

೧೫. ಸ್ವರ್ಗಸುಖದಲ್ಲಿ ಆಸಕ್ತಿಯುಳ್ಳ ಸತ್ಯವಾನನೂ, ನಾನೂ ಪರಶಿವನನ್ನು ಮೇಲಿನ ರೀತಿಯಲ್ಲಿ ಆರಾಧಿಸಿದ್ದರಿಂದ ನಮ್ಮಿಬ್ಬರಿಗೂ ಅನ್ಯೋನ್ಯವಾದ ಮೈತ್ರಿಯೂ, ಸುಖಸಂಪತ್ತೂ ಶಿವಾನುಗ್ರಹದಿಂದ ಅಕ್ಷಯವಾಗಿ ಒದಗಿದೆ.

೧೬. ಯಾರು ಹಾಗೆ ನಿಶ್ಚಲಮನೋಭಾವದಿಂದ ಪರಮೇಶ್ವರನನ್ನು ಪೂಜಿಸುವರೋ, ಅವರಿಗೆ ವಿಶ್ವೇಶ್ವರನು ಅನನ್ಯಸದೃಶವಾದ ಮೋಕ್ಷಸುಖವನ್ನು ದಯಪಾಲಿಸುವನು."

೧೭. ಎಂದು ಹೇಳಿದ ಸಾವಿತ್ರಿಯ ಮಾತುಗಳನ್ನು, ಬ್ರಹ್ಮನ ಸೊಸೆಯಾದ ಅರುಂಧತೀದೇವಿಯು ಕೇಳಿ, ಪಾರ್ವತೀ ಪರಮೇಶ್ವರರಿಗೆ ನಮಸ್ಕರಿಸಿ ಹೀಗೆ ಹೇಳಲಾರಂಭಿಸಿದಳು.

೧೮. ಎಲೈ ಸಾವಿತ್ರಿಯೇ, ಸದಾ ಪಾರ್ವತೀಪರಮೇಶ್ವರರನ್ನು ಆರಾಧಿಸಿ ಮುಕ್ತಿಯನ್ನು ಪಡೆದ ಹೆಂಗಸೇ ಪೂಜ್ಯಳು. ಅವಳೇ ಪತಿವ್ರತೆಯು. ಆಕೆಯೇ ಧನ್ಯಳು, ಮಾನ್ಯಳು.

ಯಮಾರಾಧ್ಯ ದಿತಿಃ ಪುತ್ರಾಲ್ಲೇಭೇ ಶಕ್ರಪುರೋಗಮಾನ್ ।
ದಿತಿಶ್ಚ ದೈತ್ಯಾನ್ವಿಧಾನ್ವಿನತಾ ಗರುಡಾರುಣೌ ॥ ೧೯ ॥

ಶಚ್ಯುರ್ವಶೀಮುಖಾಶ್ಚಾನ್ಯಾಃ ಸಂಪೂಜ್ಯೋಮಾಪತಿಂ ಪುರಾ ।
ಪ್ರಾಪುಶ್ಚಾಭಿಮತಾನ್ ಕಾಮಾಂಸ್ತಮೀಶಂ ಕೋ ನ ಪೂಜಯೇತ್॥ ೨೦ ॥

ಅಭಿನಂಧ್ಯಾಥ ತಾಂ ಚೈವಂ ವಸಿಷ್ಠಾರ್ಧಶರೀರಿಣೀ ।
ಜಗಾಮ ಸ್ವಾಶ್ರಮಂ ಸಾಧ್ವೀ ಸರ್ವದೇವಗಣಾರ್ಚಿತಾ ॥ ೨೧ ॥

ಏವಂ ಸಮರ್ಚ್ಯ ಗೌರೀಶಂ ಶ್ರದ್ಧಧಾನಾಶ್ಚ ಯೋಷಿತಃ ।
ಲಭಂತೇಽಭಿಮತಾನ್ ಭೋಗಾನ್ ಸಾವಿತ್ರ್ಯಾಹ ಯಥಾ ದ್ವಿಜಾಃ ॥ ೨೨ ॥

ಯೇ ನರಾಃ ಸಕೃದಪ್ಯತ್ರ ಪೂಜಯಂತಿ ತ್ರಿಲೋಚನಂ ।
ತೇ ಧನ್ಯಾಸ್ತೇ ಮಹಾತ್ಮಾನಸ್ತೇ ಕೃತಾರ್ಥಾಶ್ಚ ಪಂಡಿತಾಃ ॥ ೨೩ ॥

---

೧೯. ದಿತೀದೇವಿಯು ದೈತ್ಯರನ್ನೂ, ಅದಿತೀದೇವಿಯು ಇಂದ್ರಾದಿದೇವತೆಗಳನ್ನೂ, ವಿನತಾದೇವಿಯು ಗರುಡ ಮತ್ತು ಅರುಣರೆಂಬ ಶೂರರಾದ ಪುತ್ರರನ್ನೂ ಪಡೆದುದು, ಪರಮೇಶ್ವರನ ಆರಾಧನೆಯಿಂದಲ್ಲವೇ ?

೨೦. ಶಚೀದೇವಿಯೂ, ಊರ್ವಶಿಯೇ ಮೊದಲಾದ ಸಮಸ್ತ ದೇವತಾ ಸ್ತ್ರೀಯರೂ, ಉಮಾಪತಿಯಾದ ಶಂಕರನನ್ನು ಸೇವಿಸಿಯೇ ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆದರು. ಅಂತಹ ಮಹಾದೇವನನ್ನು ಪೂಜಿಸದಿದ್ದವರು ಯಾರು ?''

೨೧. ಹೀಗೆಂದು ವಸಿಷ್ಠರ ಪತ್ನಿಯಾದ ಅರುಂಧತಿಯು ಸಾವಿತ್ರಿಯನ್ನು ಹೊಗಳಿ, ಸಮಸ್ತ ದೇವಗಣಗಳಿಂದ ಪೂಜಿತಳಾಗಿ ತನ್ನ ಆಶ್ರಮವನ್ನು ಕುರಿತು ಪ್ರಯಾಣಮಾಡಿದಳು.

೨೨. ಎಲೈ ಶೌನಕಾದಿಗಳೇ, ಭಯಭಕ್ತಿಭರಿತರಾದ ಸ್ತ್ರೀಯರು ಪರಮೇಶ್ವರನನ್ನು ಆರಾಧಿಸಿ, ಸಾವಿತ್ರಿಯು ಹೇಳಿದಂತೆ ಸಮಸ್ತವಾದ ಇಷ್ಟಾರ್ಥಗಳನ್ನೂ ಪಡೆದಿರುವರು.

೨೩. ಹಾಗೆಯೇ ಯಾವ ಪುರುಷರು ಭಕ್ತಿಯಿಂದ ಒಂದು ಸಾರಿ ಪರಮೇಶ್ವರನನ್ನು ಪೂಜಿಸುವರೋ, ಅವರೇ ಧನ್ಯರು, ಅವರೇ ಮಹಾತ್ಮರು. ಅವರೇ ಪಂಡಿತರು.

ಧರ್ಮಾರ್ಥಕಾಮಮೋಕ್ಷಾಣಾಂ ಲಿಂಗಾರ್ಚಾ ಹೇತುರುಚ್ಯತೇ ।
ಸರ್ವೇಷಾಂ ಪ್ರಾಣಿನಾಂ ವಿಪ್ರಾ ಇಂದ್ರಿಯಾಣಾಂ ಯಥಾ ಮನಃ ॥ ೨೪ ॥

ಹೃತ್ಪದ್ಮಕರ್ಣಿಕಾವಾಸಂ ತೇಜೋಮೂರ್ತಿಮಸಂಗಿನಂ ।
ನಿರ್ಮಮಾ ನಿರಹಂಕಾರಾ ಧ್ಯಾಯಂತಿ ಜ್ಞಾನಿನಃ ಸದಾ ॥ ೨೫ ॥

ಶೈಲಜಂ ಬಾಣಲಿಂಗಂ ವಾ ಪೂಜಯೇದ್ವಿಧಿವತ್ಸದಾ ।
ಮೃದ್ದಾರುಘಟಿತಂ ವಾಪಿ ರತ್ನಜಂ ವಾ ಗೃಹಾಶ್ರಮೀ ॥ ೨೬ ॥

ಸಾಮ್ರಾಜ್ಯಂ ಮನುಜೈಃ ಕೈಶ್ಚಿತ್ಸ್ವಾರಾಜ್ಯಂ ಚ ತಥಾಪರೈಃ ।
ತಥಾ ವೈರಾಜ್ಯಮನ್ಯೈಶ್ಚ ಲಿಂಗಮಿಷ್ಟ್ವಾ ತದೈಶ್ವರಂ ॥ ೨೭ ॥

ಶೋಚಂತೇ ತೇ ಪರಂ ಹೀನಾ ಅಭಾಗ್ಯಾಶ್ಚ ದಿನೇದಿನೇ ।
ಪ್ರಮಾದೇನಾಪಿ ಯೈರ್ನೋಕ್ತಂ ಶಿವ ಇತ್ಯಕ್ಷರದ್ವಯಂ ॥ ೨೮ ॥

---

೨೪. ಪ್ರಾಣಿಗಳ ದೇಹದಲ್ಲಿ ಮನಸ್ಸು ಹೇಗೆ ಸಮಸ್ತೇಂದ್ರಿಯ ವ್ಯಾಪಾರಗಳಿಗೂ ಮೂಲಕಾರಣವಾಗಿ ಕುಳಿತಿದೆಯೋ, ಹಾಗೆಯೇ ಶಿವಾರ್ಚನೆಯು ಧರ್ಮಾರ್ಥಕಾಮಮೋಕ್ಷಗಳಿಗೆ ಮೂಲಭೂತವಾಗಿ ನಿಂತಿದೆ.

೨೫. ಮಮಕಾರಗಳಿಂದ ಬಿಡಲ್ಪಟ್ಟು, ಅಹಂಕಾರಶೂನ್ಯರಾಗಿರುವ ಜ್ಞಾನಿಗಳು ತಮ್ಮ ಹೃದಯಕಮಲದಲ್ಲಿ ತೇಜೋಮೂರ್ತಿಯಾಗಿಯೂ, ಶುದ್ಧ ಸ್ವಭಾವದವನಾಗಿಯೂ ಇರುವ ಪರಮೇಶ್ವರನನ್ನು ಸರ್ವದಾ ಧ್ಯಾನಿಸುತ್ತಿರುವರು.

೨೬. ಗೃಹಸ್ಥರಾದ ಮಾನವರು ಶಿಲಾನಿರ್ಮಿತಲಿಂಗವನ್ನಾಗಲಿ, ಬಾಣಾಕಾರವಾಗಿರುವ ಲಿಂಗವನ್ನಾಗಲಿ, ಮಣ್ಣು, ಮರ, ರತ್ನ ಇವುಗಳಿಂದ ನಿರ್ಮಿತವಾದ ಲಿಂಗವನ್ನಾಗಲಿ ಪೂಜಿಸಬಹುದು.

೨೭. ಕೆಲವರು ಪರಮೇಶ್ವರನನ್ನು ಆರಾಧಿಸಿ ಚಕ್ರವರ್ತಿಗಳಾಗಿರುವರು. ಕೆಲವರು ಈಶ್ವರಾರಾಧನೆಯಿಂದ ಸ್ವರಾಜ್ಯವನ್ನು ಪಡೆದಿರುವರು. ಹಲವರು ಇದೇ ಶಿವಾರ್ಚನೆಯಿಂದ, ಸರ್ವದಾ ಪ್ರಕಾಶಮಾನವಾಗಿರುವ ಸ್ವರ್ಗಾದಿಲೋಕಗಳಿಗೆ ಒಡೆಯರಾಗಿರುವರು.

೨೮. ಅಕಸ್ಮಾತ್ತಾಗಿಯೂ ಶಿವನನ್ನು ಪೂಜಿಸದವರು ನಿಜವಾಗಿಯೂ ನಿರ್ಭಾಗ್ಯರು. ಅವರು ಶಿವನಾಮಸ್ಮರಣೆಯನ್ನೂ ಮಾಡದೇ ದುಃಖವಿಶಿಷ್ಟರಾಗಿ ನರಳುತ್ತಿರುವರು.

ಸಂಪೂಜ್ಯೇ ಸರ್ವಸಾಮಾನ್ಯೇ ಸ್ವಾರಾಧ್ಯೇ ಸರ್ವಕಾಮದೇ ।
ಭವೇಽಪಿ ಸತಿ ಸೀದಂತಿ ಭಾವಿನೋ ಯತ್ತದದ್ಭುತಂ　　॥ ೨೯ ॥

ಉಪಸರ್ಗಾಃ ಕ್ಷಯಂ ಯಾಂತಿ ಛಿದ್ಯಂತೇ ವಿಘ್ನಪಲ್ಲವಾಃ ।
ಮನಃ ಪ್ರಸನ್ನತಾಂ ಯಾತಿ ಪೂಜ್ಯಮಾನೇ ಮಹೇಶ್ವರೇ　　॥ ೩೦ ॥

ಪೂಜಿತೇ ಸರ್ವದೇವೇಶೇ ಸರ್ವದೇವನಮಸ್ಕೃತೇ ।
ಪೂಜಿತಾಃ ಸರ್ವದೇವಾಸ್ಸ್ಯುರ್ಯತೋಽಸೌ ಸರ್ವಗೋ ವಿಭುಃ　　॥ ೩೧ ॥

ಶಿವಾರ್ಚನರತೋ ನಿತ್ಯಂ ಮಹಾಪಾತಕಸಂಭವೈಃ ।
ದೋಷೈರ್ನಲಿಪ್ಯತೇ ವಿದ್ವಾನ್ ಪದ್ಮಪತ್ರಮಿವಾಂಭಸಾ　　॥ ೩೨ ॥

ಕಿಮತ್ರ ಶಾಸ್ತ್ರಮಾಲಾಭಿಃ ಸಂಕ್ಷೇಪೇಣೋಪದಿಶ್ಯತೇ ।
ವ್ಯಾಪಾರಾನ್ ಸಕಲಾನ್ ತ್ಯಕ್ತ್ವಾ ಪೂಜಯಧ್ವಂ ಮಹೇಶ್ವರಂ　　॥ ೩೩ ॥

---

೨೯. ಸರ್ವರಿಗೂ ಸುಲಭನಾಗಿ, ಸರ್ವಕಾಮಗಳನ್ನೂ ಒದಗಿಸತಕ್ಕ ಪರಶಿವನನ್ನು ಪೂಜಿಸಿದ್ದೇ ಆದರೆ, ಸಂಸಾರದ ದುಃಖಗಳೆಲ್ಲವೂ ಏಕಕಾಲದಲ್ಲಿ ನಾಶವಾಗುವುವು. ಇದಲ್ಲವೇ ಆಶ್ಚರ್ಯ!

೩೦. ಮಹೇಶ್ವರನ ಸೇವೆಯಿಂದ ಮನುಷ್ಯನಿಗೆ ಆಗಾಗ ಒದಗುವ ಆಡ್ಡಿಗಳು ಬಯಲಾಗುವುವು. ವಿಘ್ನವೆಂಬ ಚಿಗುರುಗಳು ಕತ್ತರಿಸಲ್ಪಡುವುವು. ಮನಸ್ಸು ಪರಿಶುದ್ಧವಾಗುವುದು.

೩೧. ಸರ್ವದೇವಾದಿವಂದ್ಯನಾದ ಮಹೇಶ್ವರನನ್ನು ಪೂಜಿಸಿದ್ದೇ ಆದರೆ, ಸಮಸ್ತ ದೇವತೆಗಳನ್ನೂ ಪೂಜಿಸಿದಂತಾಗುವುದು. ಏಕೆಂದರೆ ಪರಮೇಶ್ವರನು ಸರ್ವತ್ರ ವ್ಯಾಪಿಯಾಗಿರುವ ವಿಭುದ್ರವ್ಯವಲ್ಲವೆ ?

೩೨. ಶಿವಾರಾಧಕನಿಗೆ ಯಾವ ಮಹಾಪಾಪಗಳೂ ಬಂದು ಒದಗಲಾರವು. ಪದ್ಮದ ಎಲೆಯನ್ನು ನೀರು ಹೇಗೆ ಅಂಟಲಾರದೋ, ಹಾಗೆ ಶಿವಭಕ್ತನನ್ನು ದೋಷಗಳು ಸೇರಲಾರವು.

೩೩. ಎಲೈ ಶೌನಕಾದಿಗಳೇ, ಈ ಅನೇಕ ಶಾಸ್ತ್ರಾರ್ಥ ಚರ್ಚೆಯಿಂದೇನು ಪ್ರಯೋಜನ ? ಸಮಸ್ತ ಉದ್ಯೋಗಗಳನ್ನು ಬಿಟ್ಟುಬಿಡಿ. ಇನ್ನುಮೇಲೆ ಮಹೇಶ್ವರನೊಬ್ಬನನ್ನೇ ನಂಬಿ ಪೂಜಿಸಿರಿ.

ನಿಕಟಾ ಏವ ದೃಶ್ಯಂತೇ ಕೃತಾಂತನಗರದ್ರುಮಾಃ ।
ಶಿವಂ ಸ್ಮರ ಶಿವಂ ಧ್ಯಾಯ (?) ಶಿವಂ ಚಿಂತಯ ಸರ್ವದಾ ॥ ೩೪ ॥

ಕಿಂ ವೇದೈಃ ಕಿಮು ವಾ ಶಾಸ್ತ್ರೈಃ ಕಿಂ ವಾ ತೀರ್ಥಾದಿಸೇವಯಾ ।
ಶಿವಃ ಸಂಪೂಜ್ಯತಾಂ ನಿತ್ಯಮುಪದೇಶೋಯಮುತ್ತಮಃ ॥ ೩೫ ॥

ಅಯಮೇವ ಪರೋ ಧರ್ಮಶ್ಚೀರ್ಣಮೇತತ್ಪರಂ ತಪಃ ।
ಇದಮೇವಾಖಿಲಂ ಜ್ಞಾನಂ ಪೂಜನಂ ಯನ್ಮಹೇಶಿತುಃ ॥ ೩೬ ॥

ಶಿವೇ ದತ್ತಂ ಹುತಂ ಜಪ್ತಂ ಬಲಿಪೂಜಾನಿವೇದಿತಂ ।
ಏಕಾಂತತೋತ್ಯಂತಫಲಂ ತದ್ಭವೇನ್ನಾತ್ರಸಂಶಯಃ ॥ ೩೭ ॥

ಕರ್ಮಭೂಮೌ ಹಿ ಮಾನುಷ್ಯಂ ಜನ್ಮನಾಂ ನಿಯುತೈರಪಿ ।
ಸ್ವರ್ಗಾಪವರ್ಗಫಲದಂ ಕದಾಚಿತ್ಪ್ರಾಪ್ಯತೇ ನರೈಃ ॥ ೩೮ ॥

---

೩೪. ಮಹರ್ಷಿಗಳೇ, ಸಾಮಾನ್ಯ ಮನುಷ್ಯರಿಗೆ ಯಾವಾಗಲೂ ಯಮನ ಪಟ್ಟಣದ ಮರಗಳು ಹತ್ತಿರದಲ್ಲಿಯೇ ಕಾಣಬರುವುವು. ಆದ್ದರಿಂದ ಋಷಿವರ್ಯರೇ, ನೀವು ಅದಕ್ಕಾಗಿ ಶಿವನನ್ನು ಸ್ಮರಿಸಿರಿ. ಅವನನ್ನೇ ಸರ್ವದಾ ಧ್ಯಾನಮಾಡಿರಿ. ಸೇವಿಸಿರಿ.

೩೫. ವೇದಶಾಸ್ತ್ರಗಳ ಅಭ್ಯಾಸದಿಂದಲೂ, ತೀರ್ಥಯಾತ್ರೆಗಳ ಸೇವೆಯಿಂದಲೂ ಪ್ರಯೋಜನವಿಲ್ಲ. ನಿತ್ಯವೂ ಶಂಕರನನ್ನು ಪೂಜಿಸಿರಿ. ಇದೇ ನಿಮಗೆ ಮಾಡುವ ಮುಖ್ಯೋಪದೇಶ.

೩೬. ಮಹೇಶ್ವರನ ಪೂಜೆಯೇ ನಿಮಗೆ ಮುಖ್ಯ ಧರ್ಮ. ಇದೇ ನಿಮ್ಮ ಮುಖ್ಯ ತಪಸ್ಸು. ಇದೇ ಜ್ಞಾನ. ಇದೇ ನಿಮಗೆ ಸರ್ವಸ್ವ.

೩೭. ಶಿವನನ್ನು ಉದ್ದೇಶಿಸಿ ಮಾಡಿದ ಹೋಮ, ಜಪಿಸಿದ ಜಪ, ನಿವೇದನ, ಇವೆಲ್ಲವೂ ಅತಿಶಯವಾದ ಫಲಗಳನ್ನು ಕೊಡುತ್ತವೆಯೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ.

೩೮. ಮನುಷ್ಯನು ಕರ್ಮಭೂಮಿಯಲ್ಲಿ ಜನಿಸಿ, ಸಾವಿರಾರು ಜನ್ಮಗಳ ನೆತ್ತುತ್ತಾ ಬಂದರೂ ಮೋಕ್ಷಸುಖವನ್ನು ಕಾಣಲಾರನು. ಎಲ್ಲೋ ಅಕಸ್ಮಾತ್ತಾಗಿ ಕೆಲವರು ಮಾತ್ರ ಸ್ವರ್ಗವನ್ನು ಪಡೆದಾರು.

ಕದೀದೃಗ್ದುರ್ಲಭಂ ಪ್ರಾಪ್ಯ ನಾರ್ಚಯಂತೀಹ ಯೇ ಶಿವಂ ।
ತೇಷಾಂ ಹಿ ಹಸ್ತೇ ಮೂರ್ಖಾಣಾಂ ವಿವೇಕಃ ಕುತ್ರ ತಿಷ್ಠತಿ ॥ ೩೯ ॥

ಆರಾಧಿತೋ ಹಿ ಯಃ ಪುಂಸಾಮೈಹಿಕಾಮುಷ್ಮಿಕಂ ಫಲಂ ।
ದದಾತಿ ಭಗವಾನ್ ಶಂಭುಃ ಕಸ್ತಂ ನ ಪ್ರತಿಪೂಜಯೇತ್ ॥ ೪೦ ॥

ಯೋ ಯಮಿಚ್ಛತಿ ವಿಪ್ರೇಂದ್ರಾಃ ಸಮಾರಾಧ್ಯ ಮಹೇಶ್ವರಂ ।
ನಿಃಸಂಶಯಂ ತಮಾಪ್ನೋತಿ ಪುರಾ ವೈಶ್ರವಣೋ ಯಥಾ ॥ ೪೧ ॥

ದೃಷ್ಟಃ ಸಂಪೂಜಿತೋ ಧ್ಯಾತಃ ಸಂಸ್ಮೃತೋ ವಾ ಸ್ತುತೋಽಪಿ ವಾ ।
ಯೋ ದದಾತಿ ನೃಣಾಂ ಮುಕ್ತಿಂ ತಸ್ಮಾತ್ಕೈರ್ನಾರ್ಚ್ಯತೇ ಶಿವಃ ॥ ೪೨ ॥

ಶ್ವಪಚೋಽಪಿ ಮುನಿಶ್ರೇಷ್ಠಾಃ ಶಿವಭಕ್ತೋ ದ್ವಿಜಾಧಿಕಃ ।
ಶಿವಭಕ್ತಿವಿಹೀನಸ್ತು ದ್ವಿಜೋಽಪಿ ಶ್ವಪಚಾಧಮಃ ॥ ೪೩ ॥

---

೩೯. ಇಂಥ ಕಷ್ಟತರವಾದ ದೇಹವನ್ನು ಪಡೆದಿದ್ದರೂ ಅವರು ಪರಶಿವನನ್ನು ಮಾತ್ರ ಪೂಜಿಸುವುದಿಲ್ಲ. ಅವರು ನಿಜವಾಗಿಯೂ ಮೂರ್ಖರಲ್ಲವೇ? ಅವರಿಗೆ ವಿವೇಕವೆಲ್ಲಿರುವುದು ?

೪೦. ಭಕ್ತಿಯಿಂದ ತನ್ನನ್ನು ಪೂಜಿಸಿದವರಿಗೆ, ಐಹಿಕ ಮತ್ತು ಆಮುಷ್ಮಿಕದ ಫಲವನ್ನು ಕೊಡಲು ಪರಶಿವನು ಸಿದ್ಧನಾಗಿರುವಾಗ, ಅಂಥ ದೇವದೇವನನ್ನು ಪೂಜಿಸದೆ ಇರುವವನು ಎಂತಹ ಮನುಷ್ಯನು ?

೪೧. ಎಲೈ ಶೌನಕಾದಿಗಳೇ, ಈಶ್ವರನನ್ನು ಭಕ್ತಿಯಿಂದ ಪೂಜಿಸಿ ಯಾರು ಏನನ್ನು ಬೇಡಿಕೊಂಡರೂ, ಅವೆಲ್ಲವೂ ಅವರಿಗೆ ಶಿವಾನುಗ್ರಹದಿಂದ ಸಿದ್ಧಿಸುವುವು. ಇದಕ್ಕೆ ಹಿಂದೆ ವೈಶ್ರವಣನೇ ಸಾಕ್ಷಿಯಾಗಿರುವನು.

೪೨. ತನ್ನನ್ನು ದರ್ಶನಮಾಡಿದರೆ, ಪೂಜಿಸಿದರೆ, ಭಕ್ತಿಯಿಂದ ಧ್ಯಾನಿಸಿದರೆ, ಅಥವಾ ಕೇವಲ ಸ್ತುತಿಗೈದರೂ ಸಾಕು, ಅಂಥವರಿಗೆ ಅಸದೃಶವಾದ ಮುಕ್ತಿಯನ್ನೇ ಕೊಡಬಲ್ಲ ಪರಶಿವನನ್ನು ಯಾರು ತಾನೇ ಪೂಜಿಸದೇ ಬಿಡರು ?

೪೩. ಚಂಡಾಲನಾದರೂ ಶಿವಭಕ್ತಿಯುಳ್ಳವನಾದರೆ, ಆತನು ದ್ವಿಜಶ್ರೇಷ್ಠನೆನಿಸುವನು. ಜಾತಿಯಲ್ಲಿ ಬ್ರಾಹ್ಮಣನಾಗಿದ್ದರೂ, ಶಿವಭಕ್ತಿಯಿಲ್ಲದವನಾದರೆ ಅತನು ಚಂಡಾಲನಿಗಿಂತ ಕನಿಷ್ಠನೆನಿಸುವನು.

ಯದ್ವಾ ತದ್ವಾ ಶಿವೇ ಕರ್ಮ ಪುಮಾನ್ ಕೃತ್ವಾ ಶಿವಾಲಯೇ ।
ಲೋಭಾತ್ಸಂಗಾತ್ಪ್ರಮಾದಾದ್ವಾ ಪೃಥಿವ್ಯಾಮೇಕರಾಡ್ಭವೇತ್ ॥ ೪೪ ॥

॥ ಋಷಯ ಊಚುಃ ॥

ಕಥಂ ವೈಶ್ರವಣಃ ಪೂರ್ವಂ ಸಮಾರಾಧ್ಯ ಮಹೇಶ್ವರಂ ।
ಲಬ್ಧಂ ತಸ್ಮಾತ್ಕುಬೇರತ್ವಂ ಸೂತ ತದ್ವಕ್ತುಮರ್ಹಸಿ ॥ ೪೫ ॥

॥ ಸೂತ ಉವಾಚ ॥

ಶೃಣುಧ್ವಮೃಷಯಸ್ಸರ್ವೇ ಯದುಕ್ತಂ ಸಪ್ತಮೇಂತರೇ ।
ಮಾಹಾತ್ಮ್ಯಸೂಚನಕಥಾ ಶಿವಸ್ಯ ಪರಮೇಷ್ಠಿನಃ ॥ ೪೬ ॥

ಕಶ್ಚಿದಾಸೀದ್ದ್ವಿಜೋಽವಂತ್ಯಾಂ ಸೋಮಶರ್ಮೇತಿ ವಿಶ್ರುತಃ ।
ಪುತ್ರಕ್ಷೇತ್ರಕಳತ್ರಾದಿವ್ಯಾಪಾರೇಷು ರತಃ ಸದಾ ॥ ೪೭ ॥

---

೪೪. ಹೇಗಾದರೂ ಸರಿ, ಮನುಷ್ಯನು ಶಿವಾಲಯದಲ್ಲಿ ಆಸೆಯಿಂದಲೋ, ಸಹವಾಸದಿಂದಲೋ, ಅಜ್ಞಾನದಿಂದಲೋ, ನಿಂತು ಶಿವನನ್ನು ಅರ್ಚಿಸಿದ್ದೇ ಆದರೆ, ಆತನು ಮತ್ತೊಂದು ಜನ್ಮದಲ್ಲಿ ರಾಜಾಧಿರಾಜನಾಗುವನು.

೪೫. ಹೀಗೆ ಹೇಳಿದ ಸೂತಮಹಾಮುನಿಗಳ ವಾಕ್ಯಗಳನ್ನು ಕೇಳಿ, ಋಷಿಗಳು ಪುನಃ "ಸ್ವಾಮಿಯೇ, ಹಿಂದೆ ವೈಶ್ರವಣನು ಶಿವಾರಾಧನೆಗೈದು ಕುಬೇರಪದವಿಯನ್ನು ಪಡೆದದ್ದು ಹೇಗೆಂಬುದನ್ನು ಕೇಳಲು, ನಾವು ಈಗ ಕುತೂಹಲದಿಂದಿರುವೆವು. ದಯವಿಟ್ಟು ತಿಳಿಸಬೇಕು" ಎಂದು ಪ್ರಾರ್ಥಿಸಲು,

೪೬. ಸೂತಮುನಿಗಳು ಶೌನಕಾದಿಗಳೊಡನೆ, "ಎಲೈ ಋಷಿಗಳೇ, ಕೇಳಿರಿ. ಹಿಂದೆ ಏಳನೆಯ ಮನ್ವಂತರದಲ್ಲಿ ನಡೆದ, ಶಿವನ ಮಾಹಾತ್ಮ್ಯೆಯನ್ನು ಸೂಚಿಸತಕ್ಕಂತಹ ಒಂದು ಇತಿಹಾಸವನ್ನು ಹೇಳುವೆನು.

೪೭. ಅವಂತೀಪಟ್ಟಣದಲ್ಲಿ ಸೋಮಶರ್ಮನೆಂಬ ಬ್ರಾಹ್ಮಣನಿದ್ದನು. ಆತನು ಯಾವಾಗಲೂ ಮಕ್ಕಳು, ಹೆಂಡತಿ, ಹೊಲ, ಗದ್ದೆ, ವ್ಯಾಪಾರ ಇವೇ ಮೊದಲಾದುವುಗಳಲ್ಲಿ ಆಸಕ್ತನಾಗಿದ್ದನು.

೪೮. ಒಂದು ಸಾರಿ ಆತನು ದ್ರವ್ಯಾರ್ಜನೆಮಾಡಲೋಸುಗ ಮನೆಯನ್ನು ಬಿಟ್ಟು ದೇಶದೇಶಗಳನ್ನು ಸುತ್ತುತ್ತಾ ಪ್ರವಾಸಮಾಡಲಾರಂಭಿಸಿದನು.

ಕಿಂಚಾಯಾಥ ಸ ಗಾರ್ಹಸ್ಥ್ಯಂ ಧನಾರ್ಥಂ ಲೋಭಮೋಹಿತಃ ।
ಪ್ರಚಚಾರ ಮಹೀಂ ಸರ್ವಾಂ ಸಗ್ರಾಮಪುರಪತ್ತನಾಂ ॥ ೪೮ ॥

ಭಾರ್ಯಾ ತಸ್ಯ ವಿಶಾಲಾಕ್ಷೀ ತಸ್ಮಿನ್ ಗೇಹಾದ್ವಿನಿರ್ಗತೇ ।
ಸ್ವಚ್ಛಂದಚಾರಿಣೀ ನಿತ್ಯಂ ಬಭೂವಾನಂಗಮೋಹಿತಾ ॥ ೪೯ ॥

ತಸ್ಯಾಃ ಕದಾಚಿತ್ಪುತ್ರಸ್ತು ಶೂದ್ರಾಜ್ಜಾತೋ ವಿಧೇರ್ವಶಾತ್ ।
ದುರಾತ್ಮಾತೀವ ನಿರ್ಘೋಷೋ ನಾಮ್ನಾ ದುಃಸಹ ಇತ್ಯುತ ॥ ೫೦ ॥

ಸೋಽಥ ಕಾಲೇನ ಮಹತಾ ವ್ಯಸನೋಪಪ್ಲುತೋಽಭವತ್ ।
ಸರ್ವೈರ್ಬಂಧುಜನೈಸ್ತ್ಯಕ್ತಃ ಪರಿಪಂಥಿಪಥೇ ಸ್ಥಿತಃ ॥ ೫೧ ॥

ಪೂಜೋಪಕರಣದ್ರವ್ಯಂ ಸ ಕಸ್ಮಿಂಶ್ಚಿಚ್ಛಿವಾಲಯೇ ।
ರಜನ್ಯಾಂ ಪ್ರವಿವೇಶಾಥ ವ್ಯಸನೇನ ಪ್ರಪೀಡಿತಃ ॥ ೫೨ ॥

---

೪೮. ಒಂದುಸಾರಿ ಆತನು ದ್ರವ್ಯಾರ್ಜನೆ ಮಾಡಲೋಸುಗ ಮನೆಯನ್ನು ಬಿಟ್ಟು ದೇಶದೇಶಗಳನ್ನು ಸುತ್ತುತ್ತಾ ಪ್ರವಾಸ ಮಾಡಲಾರಂಭಿಸಿದನು.

೪೯. ಇತ್ತ ಆತನ ಪತ್ನಿಯಾದ ವಿಶಾಲಾಕ್ಷಿಯು, ತನ್ನ ಪತಿಯು ಮನೆ ಬಿಟ್ಟು ಹೊರಟುಹೋದೊಡನೆಯೇ ಸ್ವೇಚ್ಛಾಚಾರಿಣಿಯಾಗಿ ವ್ಯಭಿಚಾರಕ್ಕೆ ಆರಂಭಿಸಿದಳು.

೫೦. ಅವಳಿಗೆ ಒಬ್ಬ ಶೂದ್ರನ ಸಂಪರ್ಕದಿಂದ ಒಬ್ಬ ಮಗನು ಜನಿಸಿದನು. ಆತನು ಸ್ವಭಾವದಿಂದ ಅತ್ಯಂತ ದುಷ್ಟನಾಗಿಯೂ, ಸ್ವೇಚ್ಛಾಚಾರಿಯೂ ಆದನು. ಅವನಿಗೆ ದುಃಸಹನೆಂಬ ಹೆಸರಾಯಿತು.

೫೧. ಅವನು ಕೆಲವು ಕಾಲಾನಂತರ ಹೆಚ್ಚು ಕಷ್ಟಕ್ಕೆ ಸಿಕ್ಕಿದವನಾಗಿ, ಕೊನೆಗೆ ಸಮಸ್ತ ಬಂಧುಗಳಿಂದಲೂ ತಿರಸ್ಕೃತನಾಗಿ, ಕಳ್ಳರ ಗುಂಪಿಗೆ ಸೇರಿದನು.

೫೨. ಒಂದು ರಾತ್ರಿ ಶಿವಾಲಯದಲ್ಲಿರುವ ಪೂಜಾಪದಾರ್ಥಗಳನ್ನು ಅಪಹರಿಸಲು ಆ ದೇವಾಲಯಕ್ಕೆ ನುಗ್ಗಿದನು. ಅಂದು ಅವನು ಬಹು ತಾಪತ್ರಯದಿಂದ ಕೂಡಿದ್ದನು.

ಯಾವದ್ದೀಪೋ ಗತಪ್ರಾಯೋ ವರ್ತಿಚ್ಛೇದೋಽಭವತ್ಕಿಲ ।
ತಾವತ್ತೇನ ದಶಾ ದತ್ತಾ ದ್ರವ್ಯಾನ್ವೇಷಣಕಾರಣಾತ್ ॥ ೫೩ ॥

ಪ್ರಬುದ್ಧಶ್ಚೋಚ್ಛ್ರಿತಸ್ತತ್ರ ದೇವಪೂಜಾಕರೋ ನರಃ ।
ಕೋಽಯಂ ಕೋಽಯಮಿತಿ ಪ್ರೋಚ್ಚೈರ್ವ್ಯಾಹರನ್ ಪರಿಘಾಯುಧಃ ॥

ಸ ಚ ಪ್ರಾಣಭಯಾನ್ನಷ್ಟೋ ವಿತ್ರಸ್ತಶ್ಚಾಪಿ ಮೂಢಧೀಃ ।
ನ ವಿಂದನ್ನಾತ್ಮನೋ ಜನ್ಮ ಕರ್ಮ ವಾಪಿ ಸುದುಃಖಿತಃ ॥ ೫೫ ॥

ಪುರಪಾಲೈರ್ಹತೋಽವಂತ್ಯಾಂ ಮೃತಃ ಕಾಲಾದಭೂತ್ತತಃ ।
ಗಾಂಧಾರವಿಷಯೇ ರಾಜಾ ಖ್ಯಾತೋ ನಾಮ್ನಾ ಸುದುರ್ಮುಖಃ ॥ ೫೬ ॥

---

೫೩. ಆದರೆ ಆ ದೇವಾಲಯದಲ್ಲಿ ಒಂದು ಸಣ್ಣ ದೀಪವು ಉರಿಯುತ್ತಿತ್ತು. ಅದು ಆರಿಹೋಗುವುದರಲ್ಲಿತ್ತು. ತಾನು ಸಾಮಾನುಗಳನ್ನು ಅಪಹರಿಸಲು, ಅನುಕೂಲವಾಗುವಂತೆ ಒಂದು ಬತ್ತಿಯನ್ನು ಹಾಕಿ ಪುನಃ ದೀಪವನ್ನು ಹೊತ್ತಿಸಿದನು.

೫೪. ಆ ಕಾಲಕ್ಕೆ ಸರಿಯಾಗಿ ಅರ್ಚಕನು, ಎಚ್ಚೆತ್ತು ಯಾರು! ಯಾರು! ಎಂದು ಕೂಗಿಕೊಂಡು, ಅಲ್ಲಿದ್ದ ಪರಿಘವೆಂಬ ಆಯುಧವನ್ನು ತೆಗೆದುಕೊಂಡು ಇವನನ್ನು ಹೊಡೆಯಲು ಬಂದನು.

೫೫. ಈ ಕಳ್ಳನಾದರೋ ತನ್ನ ಪ್ರಾಣರಕ್ಷಣೆಗಾಗಿ ಮುಂದಾಗುವ ಕಷ್ಟನಷ್ಟಗಳನ್ನೂ, ಪಾಪರಾಶಿಯನ್ನೂ, ಯೋಚಿಸದೆ ಆ ಅರ್ಚಕನನ್ನು ಕೊಂದುಬಿಟ್ಟನು.

೫೬. ಅದು ಆ ಊರಿನ ರಕ್ಷಕರಿಗೆ ಹೇಗೋ ತಿಳಿದು, ಅವರು ಈ ಕಳ್ಳನನ್ನು ಬಂಧಿಸಿ, ಸಂಹರಿಸಿದರು. ಮುಂದಿನ ಜನ್ಮದಲ್ಲಿ ಆ ಕಳ್ಳನು ಈ ಶಿವಾಲಯದಲ್ಲಿ ದೀಪವನ್ನು ಹೊತ್ತಿಸಿದ ಒಂದು ಪುಣ್ಯವಿಶೇಷದಿಂದ, ಗಾಂಧಾರದೇಶಕ್ಕೆ ರಾಜನಾಗಿ, ಸುದುರ್ಮುಖನೆಂಬ ಹೆಸರಿನಿಂದ ಜನಿಸಿದನು.

ಗೀತವಾದ್ಯರತ ಸ್ತ್ರೀಭ್ಯೋ ವೇಶ್ಯಾಪಾನರುಚಿರ್ಭೃಶಂ ।
ಪ್ರಜೋಪದ್ರವಕೃನ್ಮೂರ್ಖಃ ಸರ್ವಧರ್ಮಬಹಿಷ್ಕೃತಃ ॥ ೫೭ ॥

ಕಿಂತ್ವರ್ಚಯತ್ಯಸೌ ನಿತ್ಯಂ ಲಿಂಗಂ ರಾಜ್ಯಕ್ರಮಾಗತಂ ।
ಪುಷ್ಪಧೂಪಸುನೈವೇದ್ಯಗಂಧಾದಿಭಿರಮಂತ್ರವಿತ್ ॥ ೫೮ ॥

ಸ್ಮರನ್ ವೈ ಪೌರ್ವಿಕಂ ಕರ್ಮ ಶಿವಸ್ಯಾಯತನೇಷು ಚ ।
ದದಾತಿ ಬಹುಶೋ ದೀಪಾನ್ ವರ್ತಿತೈಲಸಮುಜ್ಜ್ವಲಾನ್ ॥ ೫೯ ॥

ಕದಾಚಿನ್ಮೃಗಯಾಸಕ್ತೋ ಮಮಾರಾಥ ಸ ವೀರ್ಯವಾನ್ ।
ಪೂರ್ವಾರಿಭಿರ್ಗತೋ ಯುದ್ಧ ಐರಾವತ್ಯಾಸ್ತಟೇ ಶುಭೇ ॥ ೬೦ ॥

---

೫೭. ಆಗಲೂ, ಗೀತವಾದ್ಯಾದಿಗಳಲ್ಲಿ ಅನುರಾಗಿಯಾಗಿ, ಸ್ತ್ರೀ, ಪಾನ, ಇವುಗಳಲ್ಲಿ ಲಂಪಟನಾಗಿ, ಪ್ರಜೆಗಳನ್ನು ಹಿಂಸಿಸುತ್ತಾ ಧರ್ಮಬಾಹಿರನಾಗಿ ಜೀವಿಸ ತೊಡಗಿದನು.

೫೮. ಆದರೆ ಪೂರ್ವಪುಣ್ಯವಶದಿಂದ ಆತನು ತನ್ನ ರಾಜ್ಯದಲ್ಲಿ ಅನಾದಿಯಾಗಿದ್ದ ಒಂದು ಶಿವಲಿಂಗವನ್ನು ಮಾತ್ರ ತಪ್ಪದೆ ನಿತ್ಯವೂ ಹೂವು, ಗಂಧ, ನೈವೇದ್ಯ ಇವೇ ಮೊದಲಾದ ಪೂಜಾದ್ರವ್ಯಗಳಿಂದ ಅರ್ಚಿಸುತ್ತಿದ್ದನು. ಆದರೆ ಮಂತ್ರಜ್ಞಾನವು ಮಾತ್ರ ಇವನಿಗಿರಲಿಲ್ಲ.

೫೯. ಹಿಂದೆ ತಾನು ಶಿವಾಲಯದಲ್ಲಿ ದೀಪ ಹೊತ್ತಿಸಿದುದರ ಸಂಸ್ಕಾರವಶದಿಂದ ಆಗಲೂ ತಾನು ಎಣ್ಣೆ, ಬತ್ತಿ, ಇವುಗಳಿಂದ ಕೂಡಿದ ದೀಪಗಳನ್ನು ಹೇರಳವಾಗಿ ಇರಿಸಿ, ದೇವಾಲಯವನ್ನು ಸಿಂಗರಿಸುತ್ತಿದ್ದನು.

೬೦. ಒಂದು ಸಾರಿ ಈ ರಾಜನು ಬೇಟೆಗೆ ಹೋಗಿದ್ದಾಗ, ಐರಾವತೀನದಿಯ ದಡದಲ್ಲಿ ಹಿಂದಿನ ಶತ್ರುಗಳು ಯಾರೋ ಅವಿತುಕೊಂಡಿದ್ದು ಇವನನ್ನು ಎದುರಿಸಿ ಕೊಂದುಬಿಟ್ಟರು.

ಶಿವಪೂಜಾಪ್ರಭಾವೇನ ವಿಧ್ವಸ್ತಾಶೇಷಕಿಲ್ಬಿಷಃ ।
ಪುತ್ರೋಽಭೂದ್ವಿಶ್ರವಸಶ್ಚಾಭೂತ್ಸರ್ವಯಕ್ಷಾಧಿಪೋ ಬಲೀ ॥ ೬೧ ॥
ಕುಬೇರ ಇತಿ ಧರ್ಮಾತ್ಮಾ ಶ್ರುತಿಶಾಸ್ತ್ರಸಮನ್ವಿತಃ ।
ಸಂಪೂಜ್ಯಾಥ ಸ ಚೇಶಾನಂ ವಿಧಿವತ್ಸ್ವರ್ಧುನೀತಟೇ ।
ಸ್ತೋತ್ರೇಣಾನೇನ ತುಷ್ಟಾವ ಭಕ್ತ್ಯಾ ತಂ ಸರ್ವಕಾಮದಂ ॥ ೬೨ ॥

॥ ಕುಬೇರ ಉವಾಚ ॥

ನಮಾಮ್ಯಹಂ ದೇವಮಜಂ ಪುರಾಣ ।
ಮುಪೇಂದ್ರವೇಧೋಮರರಾಜಜುಷ್ಟಂ ।
ಶಶಾಂಕಸೂರ್ಯಾಗ್ನಿಸಮಾನನೇತ್ರಂ ।
ವೃಷೇಂದ್ರಚಿಹ್ನಂ ವಿಲಯಾದಿಹೇತುಂ ॥ ೬೩ ॥

---

೬೧. ಆದರೆ ಆತನು ಮಾಡಿದ ಶಿವಪೂಜಾ ಪ್ರಭಾವದಿಂದ, ಆತನ ಸಮಸ್ತ ಪಾಪಗಳೂ ನಾಶವಾಗಿ, ಮುಂದಿನ ಜನ್ಮವು ಯಕ್ಷರಾಜನಾದ ವಿಶ್ರವಸನ ಮನೆಯಲ್ಲಿ. ದೊರಕಿತು.

೬೨. ಆತನೇ, ಆ ವಿಶ್ರವಸ ಪುತ್ರನಾದ ಕುಬೇರನು. ಧರ್ಮಬುದ್ಧಿಯುಳ್ಳವನಾಗಿ, ವೇದಶಾಸ್ತ್ರಾದಿಗಳನ್ನು ಅಭ್ಯಸಿಸಿ, ಪರಮೇಶ್ವರನನ್ನು ಯಾವಾಗಲೂ ದೇವಗಂಗಾತೀರದಲ್ಲಿ ಅರ್ಚಿಸುತ್ತಾ ಕಾಲ ಕಳೆದನು. ಒಂದುಸಾರಿ ಹೀಗೆ ಪರಮೇಶ್ವರನನ್ನು ಕುರಿತು ಸ್ತೋತ್ರಮಾಡಿದನು.

೬೩. "ಪರಶಿವನು ಉತ್ಪತ್ತಿರಹಿತನು. ಬ್ರಹ್ಮ, ಇಂದ್ರ, ವಿಷ್ಣು ಮೊದಲಾದ ದೇವಶ್ರೇಷ್ಠರಿಂದ ವಂದಿತನಾದವನು. ಸೂರ್ಯ, ಚಂದ್ರ, ಅಗ್ನಿ ಇವರುಗಳನ್ನೇ ಮೂರು ಕಣ್ಣುಗಳನ್ನಾಗಿ ಉಳ್ಳವನು. ವೃಷಭಧ್ವಜನಾಗಿ, ಪ್ರಲಯಕ್ಕೆ ಮೂಲ ಕಾರಣನಾಗಿರುವ ಶ್ರೀ ಶಂಕರನನ್ನು ನಾನು ಭಕ್ತಿಯಿಂದ ನಮಸ್ಕರಿಸುತ್ತೇನೆ.

ಸರ್ವೇಶ್ವರೈಕಂ ತ್ರಿದಶೈಕಬಂಧುಂ ।
ಧ್ಯಾನಾಧಿಗಮ್ಯಂ ಜಗತೋಽಧಿವಾಸಂ ।
ತಂ ವಾಙ್ಮಯಾಧಾರಮನಂತಶಕ್ತಿಂ ।
ಜ್ಞಾನಾರ್ಣವಂ ಸ್ಥೈರ್ಯಗುಣಾಕರಂ ಚ ॥ ೬೪

ಪಿನಾಕಪಾಶಾಂಕುಶಶೂಲಹಸ್ತಂ ।
ಕಪರ್ದಿನಂ ಮೇಘಸಹಸ್ರಘೋಷಂ ।
ಸಕಾಲಕೂಟಂ ಸ್ಫಟಿಕಾವಭಾಸಂ ।
ನಮಾಮಿ ಶಂಭುಂ ಭುವನೈಕನಾಥಂ ॥ ೬೫ ॥

ಕಪಾಲಿನಂ ಮಾಲಿನಮಾದಿದೇವಂ ।
ಜಟಾಧರಂ ಭೀಮಭುಜಂಗಹಾರಂ ।
ಪ್ರಶಾಸಿತಾರಂ ಚ ಸಹಸ್ರಮೂರ್ತಿಂ ।
ಸಹಸ್ರಶೀರ್ಷಂ ಪುರುಷಂ ವರಿಷ್ಠಂ ॥ ೬೬ ॥

---

೬೪. ಓ ಮಹೇಶ್ವರನೇ, ನೀನು ಜಗದೊಡೆಯನು. ದೇವರಕ್ಷಕನು. ಧ್ಯಾನಕ್ಕೆ ಗೋಚರನಾಗುವವನು. ಜಗತ್ತೇ ನಿನ್ನನ್ನು ಆಶ್ರಯಿಸಿ ನಿಂತಿದೆ. ವಾಕ್ಕುಗಳಿಗೆ ಆಶ್ರಯನಾಗಿ, ಅನಂತಶಕ್ತಿಯುತನಾಗಿ, ಜ್ಞಾನರಾಶಿಯಾಗಿರುವ ಭಗವಂತನೇ, ನಿನಗೆ ವಂದನೆಯು.

೬೫. ಪಿನಾಕ, ಪಾಶ, ಅಂಕುಶ, ಶೂಲ ಇವುಗಳನ್ನು ಕೈಯ್ಯಲ್ಲಿ ಧರಿಸಿರುವ ಮತ್ತು ಜಟಾಧಾರಿಯಾಗಿ ಸಹಸ್ರ ಮೇಘಗಳ ಘೋಷಣವನ್ನು ಅನುಸರಿಸಿ ಧ್ವನಿಗೈಯ್ಯುವ ಪರಶಿವನನ್ನು ವಂದಿಸುತ್ತೇನೆ. ಕತ್ತಿನಲ್ಲಿ ಕಾಲಕೂಟವು ಹೊಳೆಯುತ್ತಿದೆ. ದೇಹದಲ್ಲಿ ಸ್ಫಟಿಕದಂತಿರುವ ಹೊಳಪು ಬೆಳಗುತ್ತಿದೆ. ಇಂಥ ಭುವನಾಧಿಪನಾದ ಶಂಕರನಿಗೆ ಸಾಷ್ಟಾಂಗ ಪ್ರಣಾಮವು.

೬೬. ಕಪಾಲಧಾರಿಯಾಗಿ, ಪುಷ್ಪಮಾಲಾಭರಣನಾಗಿ, ಜಟಾ, ಸರ್ಪ, ಇವುಗಳಿಂದ ಅಲಂಕೃತನಾಗಿರುವ ಪಶುಪತಿಯೇ, ನಿನಗೆ ವಂದನೆಯು. ಸಹಸ್ರ ಆಕಾರಗಳಿಂದಲೂ, ಸಹಸ್ರ ಶಿರಸ್ಸುಗಳಿಂದಲೂ ಕೂಡಿ, ಪುರುಷಶ್ರೇಷ್ಠನಾದ ಪಾರ್ವತೀಪತಿಯೇ ನಿನಗೆ ನಮಸ್ಕಾರವು.

ಯಮಕ್ಷರಂ ನಿರ್ಗುಣಮಪ್ರಮೇಯಂ ।
ತಂ ಜ್ಯೋತಿರೇಕಂ ಪ್ರವದಂತಿ ಸಂತಃ ।
ದೂರಂಗಮಂ ವೇದವಿದಾಂ ಚ ವಂದ್ಯಂ ।
ಸರ್ವಸ್ಯ ಹೃತ್ಸ್ಥಂ ಪರಮಂ ಪವಿತ್ರಂ ॥ ೬೭ ॥

ತೇಜೋನಿಧಿಂ ಬಾಲಮೃಗಾಂಕಮೌಲಿಂ ।
ನಮಾಮಿ ರುದ್ರಂ ಸ್ಫುರದುಗ್ರವಕ್ತ್ರಂ ।
ಕಾಲೇಂಧನಂ ಕಾಮದಮಸ್ತರಂಗಂ ।
ಧರ್ಮಾಸನಸ್ಥಂ ಪ್ರಕೃತಿದ್ವಯಸ್ಥಂ ॥ ೬೮ ॥

ಅತೀಂದ್ರಿಯಂ ವಿಶ್ವಭುಜಂ ಜಿತಾರಿಂ ।
ಗುಣತ್ರಯಾತೀತಮಜಾ ನಿರೀಹಂ ।
ಮನೋಮಯಂ ವೇದಮಯಂ ಚ ಹಂಸಂ ।
ಪ್ರಜಾಪತೀಶಂ ಪುರುಹೂತಮಿಂದ್ರಂ ॥ ೬೯ ॥

---

೬೭. ವಿವೇಕಿಗಳಾದ ಜನರು ಪರಶಿವನನ್ನು ನಿರ್ಗುಣನೆಂದೂ, ಪ್ರಮಾಣಾತೀತನೆಂದೂ, ನಾಶರಹಿತನೆಂದೂ ಹೇಳುವರು. ನಿಜವಾಗಿಯೂ ಶಂಕರನು ವೇದವೇದ್ಯನು, ಸಮಸ್ತರಿಗೂ ದೂರನಾದವನು, ಆದರೆ ಸರ್ವರ ಹೃದಯದಲ್ಲೂ ಅಡಗಿರುವವನು.

೬೮. ಪರಮೇಶ್ವರನು ತೇಜೋನಿಧಿಯು. ಬಾಲಚಂದ್ರನನ್ನು ತಲೆಯಲ್ಲಿ ಧರಿಸಿರುವವನು. ಉಗ್ರವಾದ ಮುಖಭಾವವುಳ್ಳವನು. ಯಮನನ್ನು ನುಂಗುವವನು. ಸಕಲೇಷ್ಟಾರ್ಥಗಳನ್ನೂ ಭಕ್ತರಿಗೆ ಒದಗಿಸುವವನು. ಪ್ರಕೃತಿಪುರುಷ ಭೇದದಿಂದ ಎರಡಾಗಿ ತೋರುತ್ತಿದ್ದರೂ ಒಂದೇ ವಿಧವಾದ ಆಕಾರವುಳ್ಳವನು. ಇಂತಹ ಪರಮೇಶ್ವರನನ್ನು ನಾನು ವಂದಿಸುವೆನು.

೬೯. ಇಂದ್ರಿಯಗಳಿಗೆ ಅಗೋಚರನಾಗಿ, ವಿಶ್ವವನ್ನೇ ರಕ್ಷಿಸುತ್ತಾ, ಶತ್ರುಗಳನ್ನು ನಿರ್ನಾಮಗೊಳಿಸಿ, ಗುಣತ್ರಯಗಳಿಗೂ ಸಿಕ್ಕದಿರುವ ಪರಶಿವನಿಗೆ ವಂದನೆಯು. ಮಹಾದೇವನು, ಮನೋಮಯನಾದವನು, ವೇದಪ್ರತಿಪಾದ್ಯನು, ಪರಬ್ರಹ್ಮವಸ್ತುವು, ಬ್ರಹ್ಮನಿಗೆ ಬ್ರಹ್ಮನಂತಿರುವವನು, ಇಂದ್ರರೂಪದಿಂದ ಲೋಕವನ್ನೇ ರಕ್ಷಿಸುತ್ತಿರ ವವನು.

ಅನಾಹತ್ಯೈಕಧ್ವನಿರೂಪಮಾದ್ಯಂ ।
ಧ್ಯಾಯಂತಿ ಯಂ ಯೋಗವಿದೋ ಯತೀಂದ್ರಾಃ ।
ಸಂಸಾರಪಾಶಚ್ಛಿದುರಂ ವಿಮುಕ್ತ್ಯೈ ।
ಪುನಃಪುನಸ್ತಂ ಪ್ರಣಮಾಮಿ ನಿತ್ಯಂ ॥ ೭೦ ॥

ನ ಯಸ್ಯ ರೂಪಂ ನ ಬಲಪ್ರಭಾವೋ ।
ನ ಚ ಸ್ವಭಾವಃ ಪರಮಸ್ಯ ಪುಂಸಃ ।
ವಿಜ್ಞಾಯತೇ ವಿಷ್ಣುಪಿತಾಮಹಾದ್ಯೈಃ ।
ತಂ ವಾಮದೇವಂ ಪ್ರಣಮಾಮ್ಯಚಿಂತ್ಯಂ ॥ ೭೧ ॥

ಶಿವಂ ಸಮಾರಾಧ್ಯ ಯದುಗ್ರಮೂರ್ತಿಂ ।
ಪಪೌ ಸಮುದ್ರಂ ಭಗವಾನಗಸ್ತ್ಯಃ ।
ಲೇಭೇ ದಿಲೀಪೋಽಪ್ಯಖಿಲಾಂ ಸ ಚೋರ್ವೀಂ ।
ತಂ ವಿಶ್ವಯೋನಿಂ ಶರಣಂ ಪ್ರಪದ್ಯೇ ॥ ೭೨ ॥

---

೭೦. ಯೋಗಿವರ್ಯರು, ಪರಶಿವನನ್ನೇ ಧ್ವನಿರೂಪನನ್ನಾಗಿ ತಿಳಿದು ಧ್ಯಾನಿಸುವರು. ಏಕೆಂದರೆ ಧ್ವನಿಯು ವಿಭುರೂಪವಾದ ಆಕಾಶದ ಮುಖ್ಯ ಗುಣವಾಗಿರುವುದು. ಆ ಗುಣವೇ ಪರಮೇಶ್ವರನ ಮುಖ್ಯ ಸ್ವರೂಪವಾಗಿ ತೋರುವುದು. ಅಲ್ಲದೆ ಶಂಕರನು ಸಂಸಾರದ ದುಃಖಗಳನ್ನು ನಾಶಮಾಡತಕ್ಕ ಸಾಮರ್ಥ್ಯವನ್ನು ಪಡೆದಿರುವವನು. ಅಂತಹ ಮಹೇಶ್ವರನನ್ನು ಪದೇ ಪದೇ ನಮಸ್ಕರಿಸುವೆನು.

೭೧. ಪರಶಿವನಿಗೆ ಒಂದು ರೂಪಿಲ್ಲ. ಶಕ್ತಿಯ ಮಿತಿಯು ತೋರುವುದಿಲ್ಲ. ಸ್ವಭಾವವೂ, ನಿಯತವಾಗಿಲ್ಲ. ಅಂತೂ ಬ್ರಹ್ಮ, ವಿಷ್ಣುವೇ ಮೊದಲಾದವರು ಪರಶಿವನನ್ನು ಪರಬ್ರಹ್ಮವಸ್ತುವೆಂದೂ, ಊಹಿಸಲಸಾಧ್ಯವಾದ ಮಹಿಮೆಯುಳ್ಳವನೆಂದೂ ತಿಳಿದಿರುವರು.

೭೨. ಹಿಂದೆ ಅಗಸ್ತ್ಯಮಹರ್ಷಿಯು ಉಗ್ರರೂಪಿಯಾದ ಶಂಕರನನ್ನು ಪೂಜಿಸಿಯೇ ಅಗಾಧವಾದ ಸಮುದ್ರವನ್ನು ಪಾನಮಾಡಿದನು. ಇಕ್ಷ್ವಾಕುರಾಜನಾದ ದಿಲೀಪನೂ ಸಹ ಶಂಭುವನ್ನು ಪೂಜಿಸಿ ಸಕಲ ಭೂಮಂಡಲಕ್ಕೂ ಚಕ್ರವರ್ತಿಯಾಗಿದ್ದನಲ್ಲವೇ ?

ಸಂಪೂಜಯಂತೋ ದಿವಿ ದೇವಸಂಘಾ ।
ಬ್ರಹ್ಮೇಂದ್ರಮುಖ್ಯಾ ವಿವಿಧಾಂಶ್ಚ ಕಾಮಾನ್ ।
ತಂ ಸ್ತೌಮಿ ನೌಮೀಹ ಜಪಾಮಿ ಶರ್ವಂ ।
ವಂದೇಽಭಿವಂದ್ಯಂ ಶರಣಂ ಪ್ರಪದ್ಯೇ ॥ ೭೩ ॥

ಸ್ತುತ್ವೈವಮೀಶಂ ವಿರರಾಮ ಯಾವತ್ ।
ತಾವತ್ಸಹಸ್ರಾರ್ಕಸಮಾನತೇಜಾಃ ।
ದದೌ ಸ ತಸ್ಮೈ ವರದೋಽಂಧಕಾರಿ ।
ರ್ವರತ್ರಯಂ ವೈಶ್ರವಣಾಯ ದೇವಃ ॥ ೭೪ ॥

ಕೃತ್ವಾಧಿರಾಜಂ ಚ ತತಸ್ತ್ರಿನೇತ್ರೋ ।
ಯಶಸ್ವಿನಂ ಗುಹ್ಯಕರಾಜಮತ್ರ ।
ಬ್ರಹ್ಮಾಚ್ಯುತೇಂದ್ರಾದಿ ನತಾಂಘ್ರಿಪದ್ಮೋ ।
ಜಗಾಮ ಕೈಲಾಸಮಮೋಘವಾಕ್ಯಃ ॥ ೭೫ ॥

---

೭೩. ಸ್ವರ್ಗದಲ್ಲಿ ದೇವತೆಗಳೂ ಬ್ರಹ್ಮಾದಿದೇವಶ್ರೇಷ್ಠರೂ ಸಹ ಪರಮೇಶ್ವರನನ್ನು ಪೂಜಿಸಿ, ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆದವರಾಗಿದ್ದಾರೆ. ಅಂತಹ ಶಂಭುವನ್ನೇ ಈಗಲೂ ನಾನು ಆರಾಧಿಸುತ್ತೇನೆ. ಅವನ ಮಂತ್ರಗಳನ್ನೇ ಜಪಿಸುತ್ತೇನೆ. ಅವನನ್ನೇ ಮೊರೆಹೋಗುತ್ತೇನೆ."

೭೪. ಹೀಗೆ ಕುಬೇರನು ಮಹೇಶ್ವರನನ್ನು ನಾನಾರೀತಿಯಿಂದ ಭಜಿಸಿ, ಧ್ಯಾನಿಸಲಾಗಿ ಕೋಟಿ ಸೂರ್ಯಸಮಾನ ತೇಜನಾದ, ಅಂಧಕಾಸುರಸೂದನನಾದ ಶಿವನು ಸಂತುಷ್ಟನಾಗಿ ಆ ಕುಬೇರನಿಗೆ ಮೂರು ವರಗಳನ್ನು ಅನುಗ್ರಹಿಸಿದನು.

೭೫. ಅಲ್ಲದೆ ಆ ಕುಬೇರನನ್ನು ಯಕ್ಷರಿಗೂ, ಗುಹ್ಯಕರಿಗೂ ಅಧಿರಾಜನನ್ನಾಗಿ ಮಾಡಿದನು. ಇದನ್ನು ನೋಡಿದ ಬ್ರಹ್ಮ, ವಿಷ್ಣು, ಇಂದ್ರ ಇವರೇ ಮೊದಲಾದವರು ಶಂಕರನನ್ನು ಒಹುವಾಗಿ ಪೂಜಿಸಲು, ಅವುಗಳನ್ನು ಸ್ವೀಕರಿಸಿ ಸಂತುಷ್ಟನಾಗಿ ತನ್ನ ಕೈಲಾಸಪರ್ವತವನ್ನು ಕುರಿತು ತೆರಳಿದನು.

ಸಖ್ಯಂ ಚ ದಿಕ್ಪಾಲಪದಂ ಚತುರ್ಥಂ ।
ಧನಾಧಿಪತ್ಯಂ ಚ ದಿವೌಕಸಾಂ ಸಃ ।
ತಥಾಧಿಕಂ ಚೈತದನಿಂದ್ಯಕೀರ್ತಿಃ ।
ಸುಖೀ ಬಭೂವಾಪ್ರತಿಮಪ್ರಭಾವಃ ॥ ೭೬ ॥

ದೋಷಾಚರೇಂದ್ರಶ್ಚ ತಥಾ ದಶಾಸ್ಯಃ ।
ಸಂಪೂಜ್ಯ ದೋಷಾಕರಚಾರುಮೌಳಿಂ ।
ದೋಷಾಕರಶ್ಚಾಪ್ಯಜಿತೇಂದ್ರಿಯಶ್ಚ ।
ಮುಕ್ತಿಂ ಸ ಲೇಭೇಽಸ್ತಸಮಸ್ತದೋಷಃ ॥ ೭೭ ॥

ಸ್ವರ್ಗಸ್ಯ ಮಾರ್ಗಾ ಬಹವಃ ಪ್ರದಿಷ್ಟಾ ।
ಸ್ತೇ ಕೃಚ್ಛ್ರಸಾಧ್ಯಾ ಬಹವಃ ಸವಿಘ್ನಾಃ ।
ನಿಮೇಷಮಾತ್ರೇಣ ಮಹಾಫಲೋಽಯ ।
ಮೃಜುಶ್ಚ ಪಂಥಾಃ ಸ್ಮರಣಂ ಪುರಾರೇಃ ॥ ೭೮ ॥

---

೭೬. ಅಂದಿನಿಂದ ಕುಬೇರನು ಮಹೇಶ್ವರನ ಮಿತ್ರನಾದನು. ದಿಕ್ಪಾಲಕನಾಗಿ ಹಾಗೆಯೇ ದೇವತೆಗಳ ನಿಧಿಗೆ ಒಡೆಯನೂ ಆದನು. ಅಲ್ಲಿಂದ ಮುಂದೆ ಶ್ರೇಷ್ಠವಾದ ಕೀರ್ತಿಯನ್ನು ಸಂಪಾದಿಸಿ ಅತ್ಯಂತ ಸುಖಿಯಾಗಿ ಅತಿಶಯವಾದ ಮಹಿಮೆಯನ್ನು ಗಳಿಸಿದನು.

೭೭. ರಾಕ್ಷಸಾಧಿರಾಜನಾದ ರಾವಣನೂ, ಜಿತೇಂದ್ರಿಯನಲ್ಲದ ಚಂದ್ರನೂ ಸಹ ಚಂದ್ರಶೇಖರನಾದ ಶಂಭುವನ್ನೇ ಆರಾಧಿಸಿ, ಅನೇಕ ಪಾಪಕರ್ಮಗಳನ್ನು ಮಾಡಿದರೂ, ಆ ಪಾಪಗಳಿಂದ ಮುಕ್ತರಾಗಿ ಮೋಕ್ಷವನ್ನು ಸಂಪಾದಿಸಿದರು.

೭೮. ಮೋಕ್ಷಸಂಪಾದನೆಗೆ ಅನೇಕ ದಾರಿಗಳಿವೆ. ಆದರೆ ಅವೆಲ್ಲವೂ ಕಷ್ಟಸಾಧ್ಯಗಳು. ಅಲ್ಲದೆ ಅವುಗಳಗೆ ಬಹಳ ತೊಂದರೆಗಳುಂಟು. ಪುರಾರಿಯಾದ ಶಂಕರನ ಸ್ಮರಣೆಯಿಂದ ಒಂದು ನಿಮಿಷಕಾಲದಲ್ಲಿ ಶಾಶ್ವತವಾದ ಮುಕ್ತಿಯನ್ನು ಸುಲಭವಾಗಿ ಸಂಪಾದಿಸಬಹುದು.

ದೃಷ್ಟ್ವಂ ತದೇವಾದ್ಭುತಮತ್ರ ಮರ್ತ್ಯಾ ।
ಮಾಹಾತ್ಮ್ಯಮೈಶಂ ಸ ಸುರಾಸುರಾಶ್ಚ ।
ತ್ಯಕ್ತ್ವಾತ್ಮಯೋಗಂ ಚ ಮಖಕ್ರಿಯಾಶ್ಚ ।
ಯಜಂತ್ಯತಸ್ತ್ರ್ಯಂಬಕಮೇವ ಸರ್ವೇ ॥ ೭೯ ॥

ಗಾಯಂತಿ ದೇವಾಃ ಕಿಲ ಗೀತಕಾನಿ ।
ಧನ್ಯಾಸ್ತು ಯೇ ಭಾರತಭೂಮಿಭಾಗೇ ।
ಸ್ವರ್ಗಾಪವರ್ಗಾಸ್ಪದಮಾರ್ಗಭೂತೇ ।
ಭವಂತಿ ಭೂಯಃ ಪುರುಷಾಃ ಸುರತ್ವಾತ್ ॥ ೮೦ ॥

ಕರ್ಮಾಣ್ಯಸಂಕಲ್ಪಿತ ತತ್ಫಲಾನಿ ।
ಸಂನ್ಯಸ್ಯ ರುದ್ರೇ ಪರಮಾತ್ಮರೂಪೇ ।
ಅವಾಪ್ಯ ತೇ ಕರ್ಮಮಹೀಮನಂತೇ ।
ತಸ್ಮಿಲ್ಲಯಂ ಯೇ ತ್ವಮಲಾಃ ಪ್ರಯಾಂತಿ ॥ ೮೧ ॥

---

೭೯ ಇದನ್ನು ತಿಳಿದೇ ದೇವರಾಕ್ಷಸರೂ ಮತ್ತು ಅನೇಕ ಮನುಷ್ಯರೂ ಸಹ ತಮ್ಮ ತಮ್ಮ ಯೌಗಿಕಕರ್ಮಗಳನ್ನೂ, ಯಜ್ಞಯಾಗಾದಿಗಳನ್ನೂ ಸಹ ಬಿಟ್ಟು, ತ್ರ್ಯಂಬಕನೊಬ್ಬನನ್ನೇ ಸೇವಿಸಿ ಶಿವಸಾಯುಜ್ಯವನ್ನು ಪಡೆಯುತ್ತಿರುವರು.

೮೦. ಸ್ವರ್ಗ ಮೋಕ್ಷಾದಿಗಳನ್ನು ಸುಲಭವಾಗಿ ದೊರಕಿಸತಕ್ಕದ್ದು, ಭರತ ಖಂಡದ ಪುಣ್ಯಭೂಮಿಯು. ಅಂತಹ ಭೂಮಿಯಲ್ಲಿ ಅನೇಕ ಮಹನೀಯರು ಶಿವ ಗೀತೆಗಳನ್ನು ಹಾಡಿ ಶಿವಾನುಗ್ರಹಕ್ಕೆ ಪಾತ್ರರಾಗಿ ದೇವತ್ವವನ್ನು ಹೊಂದುತ್ತಲಿರುವರು.

೮೧. ಪರಿಶುದ್ಧಸ್ವಭಾವವುಳ್ಳ ಜನರು ನಿಷ್ಕಾಮ ಕರ್ಮದಿಂದ ಪರಮಾತ್ಮ ರೂಪಿಯಾದ ಶಂಕರನನ್ನು ತೃಪ್ತಿಗೊಳಿಸಿ, ಕರ್ಮಜನ್ಯವಾದ ಪುಣ್ಯದ ಸಹಾಯದಿಂದ ಜ್ಞಾನಿಗಳಾಗಿ, ಕರ್ಮಭೂಮಿಯನ್ನು ಬಿಡುತ್ತಾ ಅನಂತ ರೂಪಿಯಾದ ಶಿವನಲ್ಲಿ ಐಕ್ಯವನ್ನು ಪಡೆಯುವರು

ಜಾನೀಯ (?) ನ್ಯೈತದ್ಧಿ ಕದಾ ವಿಲೀನೇ ।
ಶುಭಪ್ರದೇ ಕರ್ಮಣಿ ದೇಹಬಂಧಃ ।
ಪ್ರಾಸಾಮ ಖಂಡೇ ಕಿಲ ಭಾರತಾಖ್ಯೇ ।
ಕುಲೇsಕಲಂಕೇ ಶಿವಧರ್ಮನಿಷ್ಠಾಃ ॥ ೮೨ ॥

ಸ್ತೋತ್ರೇಣ ಯೇಽಪಿ ಕ್ವಚಿದತ್ರಭಕ್ತಾಃ ।
ಪ್ರಸಂಸ್ತುವಂತಿ ಪ್ರಮಥೈಕನಾಥಂ ।
ಪ್ರಯಾಂತಿ ತೇ ಲೋಕಮಿಹಾಂಧಕಾರೇಃ ।
ಪುರಂದರೋದ್ಗೀತಮಹಾಪ್ರಭಾವಾಃ ॥ ೮೩ ॥

॥ ಸೂತ ಉವಾಚ ॥

ಏವಂ ವೈಶ್ರವಣೋ ಜಾತೋ ।
ಮಹಾದೇವಪ್ರಸಾದತಃ ।
ಸರ್ವಮೇತದಶೇಷೇಣ ।
ಕಥಿತಂ ಮುನಿಪುಂಗವಾಃ ॥ ೮೪ ॥

---

೮೨. ಕೇವಲ ಕರ್ಮಮಾರ್ಗವು ಶುಭವನ್ನು ಕೊಟ್ಟು ತಾನು ನಷ್ಟವಾಗುವುದೇ ಹೊರತು, ಅದು ಸಾಕ್ಷಾತ್ತಾಗಿ ಮೋಕ್ಷಕ್ಕೆ ಸಾಧಕವಾದುದಲ್ಲ. ಇದನ್ನು ನಾವು ತಿಳಿದು ಪರಿಶುದ್ಧವಾದ ಈ ಭರತಖಂಡದಲ್ಲಿ ಶಿವಧರ್ಮನಿಷ್ಠರಾಗಿದ್ದುಕೊಂಡು ಜ್ಞಾನಿಗಳಾಗಿ ಮುಕ್ತಿಯನ್ನು ಪಡೆಯೋಣ.

೮೩. ಯಾರು ಈ ಸ್ತೋತ್ರಗಳಿಂದ ಪರಮೇಶ್ವರನನ್ನು ಭಕ್ತಿಪುರಸ್ಸರವಾಗಿ ಧ್ಯಾನಿಸುವರೋ, ಅವರು ದೇವಲೋಕದ ಸಮಸ್ತ ಸುಖಭಾಗ್ಯಗಳನ್ನು ಅನುಭವಿಸುತ್ತಾ, ಕೊನೆಗೆ ಪರಮೇಶ್ವರನ ಲೋಕವನ್ನು ಸೇರುವರೆಂಬುದರಲ್ಲಿ ಸಂದೇಹವೇ ಇಲ್ಲ."

೮೪. ಎಲೈ ಶೌನಕಾದಿಗಳೇ, ಕುಬೇರನ ಉತ್ಪತ್ತಿಯು ಹೇಗಾಯಿತೆಂಬುದನ್ನು ನಾನು ವಿಶದವಾಗಿ ತಿಳಿಸಿರುವೆನು. ಕುಬೇರನು ಮಹಾದೇವನ ಅನುಗ್ರಹದಿಂದಲೇ ಯಕ್ಷರಾಜನಾದನೆಂಬುದನ್ನು ಚೆನ್ನಾಗಿ ತಿಳಿಯಿರಿ

ಯಃ ಪಠೇಚ್ಛೃಣುಯಾದ್ವಾಪಿ ।
ಸರ್ವಪಾಪೈಃ ಪ್ರಮುಚ್ಯತೇ ।
ಬ್ರಹ್ಮಲೋಕೇ ವಸೇತ್ಕಲ್ಪ ।
ಮಿತಿ ದೇವೋಽಬ್ರವೀದ್ರವಿಃ ॥ ೮೫ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಅರುಂಧತೀ ಸಾವಿತ್ರೀ ಸಂವಾದಾದಿ ಕಥನಂ ನಾಮ ಸಪ್ತಚತ್ವಾರಿಂಶೋಽಧ್ಯಾಯಃ.

---

೮೫. ಯಾರು ಈ ಸ್ತೋತ್ರಗಳನ್ನೂ, ಈ ಕುಬೇರನ ಉತ್ಪತ್ತಿ ಕ್ರಮವನ್ನೂ, ಸಂಪೂರ್ಣವಾಗಿ ತಿಳಿಯುವರೋ, ಅವರು ಸಮಸ್ತ ಪಾಪಗಳಿಂದ ಮುಕ್ತರಾಗಿ ಕಲ್ಪ ಪರ್ಯಂತ ಬ್ರಹ್ಮಲೋಕದಲ್ಲಿ ವಾಸಮಾಡುತ್ತಾರೆಂಬುದಾಗಿ ಸೂರ್ಯದೇವನು ವೈವಸ್ವತ ಮನುವಿಗೆ ಹೇಳಿದನೆಂದು, ಸೂತಮಹರ್ಷಿಗಳು ಶೌನಕಾದಿಗಳಿಗೆ ತಿಳಿಸಿದರು."

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ, ಸೂತ ಶೌನಕ ಸಂವಾದ ರೂಪವಾಗಿ, ಅರುಂಧತೀ ಸಾವಿತ್ರಿಯರ ಸಂಭಾಷಣೆ, ಮತ್ತು ಕುಬೇರನ ಉತ್ಪತ್ತಿ ಈ ಕಥೆಗಳನ್ನು ತಿಳಿಸುವ ನಲವತ್ತೇಳನೆಯ ಅಧ್ಯಾಯ ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಅಷ್ಟಾಚತ್ವಾರಿಂಶೋಽಧ್ಯಾಯಃ

॥ ಸೂತ ಉವಾಚ ॥

ಪುನರ್ವಕ್ಷ್ಯಾಮಿ ಮಾಹಾತ್ಮ್ಯಂ ದೇವದೇವಸ್ಯ ಶೂಲಿನಃ ।
ಪಠತಾಂ ಶೃಣ್ವತಾಂ ಸದ್ಯೋಽಘಾನಿ ಹಂತಿ ಬಹೂನ್ಯಪಿ ॥ ೧ ॥

ಜಿತಾರೀಂದ್ರಿಯಷಡ್ವರ್ಗಾ ಯೋಗಿನೋಪ್ಯನಹಂಕೃತಾಃ ।
ಯಜಂತಿ ಜ್ಞಾನಯೋಗೇನ ಶಿವಮಾತ್ಮಸ್ವರೂಪಿಣಂ ॥ ೨ ॥

ತೀರ್ಥೋದಕೈರ್ವಿಶುದ್ಧಾ ಯೇ ದಾನಯಜ್ಞತಪೋವ್ರತೈಃ ।
ತೇ ಯಜಂತಿ ಮಹೇಶಾನಂ ಕರ್ಮಯೋಗೇನ ಸಾಧವಃ ॥ ೩ ॥

ನಲವತ್ತೆಂಟನೆಯ ಅಧ್ಯಾಯ.

೧. ಮತ್ತೆ ಸೂತರು ಶೌನಕಾದಿಗಳಿಗೆ ಹೀಗೆ ಉಪದೇಶಿಸಿದರು. "ಎಲೈ ಋಷಿಗಳೇ, ಈಗ ನಿಮಗೆ ಪುನಃ ಶಿವನ ಮಹಿಮೆಯನ್ನು ವಿವರಿಸುವೆನು. ಇದನ್ನು ಓದುವವರೂ, ಕೇಳುವವರೂ ತಮ್ಮ ಅಸಂಖ್ಯಾತವಾದ ಪಾಪರಾಶಿಯನ್ನು ಕಳೆದು ಕೊಳ್ಳುವರು.

೨. ಜಿತೇಂದ್ರಿಯರೂ, ಯೋಗಿಗಳೂ, ಆದ ಜ್ಞಾನಿಗಳು ತಮ್ಮ ಜ್ಞಾನ ಮಾರ್ಗದಿಂದ ಆತ್ಮಸ್ವರೂಪಿಯಾದ ಶಂಕರನನ್ನೇ ಆರಾಧಿಸುತ್ತಿರುವರು.

೩. ತೀರ್ಥಸ್ನಾನಾದಿಗಳಿಂದಲೂ, ದಾನಧರ್ಮಗಳಿಂದಲೂ, ಯಜ್ಞಯಾಗ ಗಳಿಂದಲೂ ಚಿತ್ತಶುದ್ಧಿಯನ್ನು ಪಡೆದಿರುವ ಮಹಾತ್ಮರು, ಅದೇ ಕರ್ಮಯೋಗದಿಂದ ಮಹೇಶ್ವರನನ್ನೇ ಅರ್ಚಿಸುತ್ತಿರುವರು.

ಲುಬ್ಧಾ ವ್ಯಸನಿನೋಽಜ್ಞಾಶ್ಚ ನ ಯಜಂತಿ ಜಗತ್ಪತಿಂ ।
ಅಜರಾಮರವನ್ಮೂಢಾಸ್ತಿಷ್ಠಂತಿ ನರಕೀಟಕಾಃ ॥ ೪ ॥

ಶಿವಧರ್ಮರತಾಃ ಶಾಂತಾಃ ಶಿವಶಾಸ್ತ್ರರತಾಃ ಸದಾ ।
ದೈವಾತ್ಕೇಚಿದಿಹ ಜಾಯಂತೇ ಪೃಥಿವ್ಯಾಂ ಪುರುಷೋತ್ತಮಾಃ ॥ ೫ ॥

ರೂಪಂ ನ ಶಕ್ಯತೇ ತಸ್ಯ ಸಂಸ್ಥಾನಂ ವಾ ಕದಾಚನ ।
ನಿರ್ದೇಷ್ಟುಂ ಪ್ರಾಣಿಭಿಃ ಕೈಶ್ಚಿತ್ ದ್ರಷ್ಟುಂ ವಾ ಪ್ಯಕೃತಾತ್ಮಭಿಃ ॥ ೬ ॥

ಕ್ರಿಯತಾಂ ಮದ್ವಚಃ ಕರ್ಣೇ ಶಿವೇ ತ್ವಾತ್ಮಾ ನಿಯುಜ್ಯತಾಂ ।
ಆದೀಪ್ತೇ ಭವನೇ ಕೂಪಂ ಖನಿತುಂ ನೈವ ಶಕ್ಯತೇ ॥ ೭ ॥

ಸತ್ಯಂ ವಚ್ಮಿ ಹಿತಂ ವಚ್ಮಿ ಸಾರಂ ವಚ್ಮಿ ಪುನಃ ಪುನಃ ।
ಅಸಾರೇ ದಗ್ಧಸಂಸಾರೇ ಸಾರಂ ಯಚ್ಛಿವಪೂಜನಂ ॥ ೮ ॥

---

೪. ಆದರೆ ಲೋಭಿಗಳಾಗಿ, ತಿಳಿವಳಿಕೆಯಿಲ್ಲದೆ ವ್ಯಸನಾಸಕ್ತರಾಗಿರುವ ಮೂಢರು, ತಾವು ಸ್ಥಿರವಾಗಿರುತ್ತೇವೆಂದು ತಿಳಿದು, ಹುಳುಗಳಂತೆ ಪರಮೇಶ್ವರನ ಪೂಜೆಗೆ ಹಿಂದೆಗೆಯುತ್ತಿರುವರು.

೫. ಲೋಕದಲ್ಲಿ ಯಾರೋ ಕೆಲವರು ಮನುಷ್ಯಶ್ರೇಷ್ಠರು ತಮ್ಮ ಪೂರ್ವ ಪುಣ್ಯದಿಂದ ಶಿವನಲ್ಲಿ ಭಕ್ತಿಯುಳ್ಳವರಾಗಿ, ಶಿವಧ್ಯಾನಪರಾಯಣರಾಗಿ ಶಿವತತ್ತ್ವವನ್ನು ಅಭ್ಯಾಸಿಸುತ್ತಾ ಕಾಲಕಳೆಯುವರು.

೬. ಅಜ್ಞಾನಿಗಳಿಗೆ ಪರಮೇಶ್ವರನ ರೂಪವಾಗಲಿ, ಅಧಿಷ್ಠಾನವಾಗಲಿ ಗೋಚರವಾಗುವುದಿಲ್ಲ. ಪುಣ್ಯಶರೀರಿಗಳು ಮಾತ್ರ ಅವುಗಳನ್ನು ತಿಳಿಯಲು ಸಮರ್ಥರಾಗುವರು.

೭. ಎಲೈ ಶೌನಕಾದಿಗಳೇ, ನನ್ನ ಮಾತನ್ನು ಆಲಿಸಿರಿ. ನಿಮ್ಮ ಮನಸ್ಸನ್ನು ಪರಶಿವನಲ್ಲಿ ನೆಲೆಗೊಳಿಸಿರಿ. ಉರಿಯುತ್ತಿರುವ ಮನೆಯಲ್ಲಿ ಬಾವಿಯನ್ನು ತೋಡಲು ಯಾರಿಂದ ತಾನೇ ಸಾಧ್ಯ. ಹಾಗೆ ನೀವು ನಿರ್ಮಲ ಮನಸ್ಸುಳ್ಳವರಾದರೆ ಪರಶಿವನ ಧ್ಯಾನವು ನಿಮ್ಮಲ್ಲಿ ಆಶ್ರಯವನ್ನು ಪಡೆಯುತ್ತದೆ.

೮. ನಿಜವಾಗಿಯೂ, ನಿಮಗೆ ಹಿತವಾದ ಮತ್ತು ಸಾರವಾದ ವಿಷಯವನ್ನು ಉಪೇಕ್ಷೆಯಿಲ್ಲದೆ ತಿಳಿಸುವೆನು. ಅದೇನೆಂದರೆ ನಿಸ್ಸಾರವಾದ ಈ ಸಂಸಾರದಲ್ಲಿ ಶಿವಾರಾಧನೆಯೊಂದೇ ಸಾರಭೂತವಾದದ್ದು.

ತದಸ್ಯ ದಗ್ಧಸಂಸಾರಗ್ರಂಥೇರತ್ಯಂತದುರ್ಭಿದಃ ।
ಪರಂ ನಿರ್ಮೂಲವಿಚ್ಛೇದಿ ಕ್ರಿಯತಾಂ ತದ್ಭವಾರ್ಚನಂ ॥ ೯ ॥

ಮನಸ್ತದ್ವಿದ್ಧಿ ಕರ್ಮಜ್ಞಂ ಶಂಕರೇ ಯತ್ಪ್ರವರ್ತತೇ ।
ಸಾ ವಾಣೀ ವಾಕ್ಪತಿಂ ಶಂಭುಂ ಯಾಸ್ತೌತ್ಯಚ್ಯುತಮಚ್ಯುತಾ ॥ ೧೦ ॥

ಶ್ರವಣೌ ತೌ ಶ್ರುತೌ ಯಾಭ್ಯಾಂ ಶ್ರೂಯಂತೇ ತತ್ಕಥಾಃ ಶುಭಾಃ ।
ಪಾದೌ ತೌ ಸಫಲೌ ಪುಂಸಾಂ ಶಿವಾಯತನಗಾಮಿನೌ ॥ ೧೧ ॥

ತೇ ಚ ನೇತ್ರೇ ಶುಭಾಯಾಲಂ ಯಾಭ್ಯಾಂ ಸಂದೃಶ್ಯತೇ ಶಿವಃ ।
ಸಫಲೌ ತೌ ಸ್ಮೃತೌ ವಿಪ್ರಾಸ್ತತ್ಪೂಜಾಕಾರಿಣೌ ಕರೌ ॥ ೧೨ ॥

ತದೇವ ಸಫಲಂ ಕರ್ಮ ಶಿವಮುದ್ದಿಶ್ಯ ಯತ್ಕೃತಂ ।
ಸೇಯಂ ಲಕ್ಷ್ಮೀಃ ಪರಾ ಪುಂಸಾಂ ಸೇಯಂ ಭಕ್ತಿಃ ಸಮಾಹಿತಾ ॥ ೧೩ ॥

---

೯. ಆದ್ದರಿಂದ ಯಾರಿಂದಲೂ ಭೇದಿಸಲು ಅಸಾಧ್ಯವಾದ, ಈ ನಶ್ವರವಾದ ಸಂಸಾರ ಬಂಧನವನ್ನು ತಪ್ಪಿಸಿಕೊಳ್ಳಲು ನಿಮಗೆ ಅಭಿಪ್ರಾಯವಿದ್ದರೆ ಶಂಭುವಿನ ಆರಾಧನೆಯನ್ನು ಕೈಗೊಳ್ಳಿರಿ.

೧೦. ಶಂಕರನನ್ನು ಧ್ಯಾನಿಸುವ ಮನಸ್ಸೇ ನಿಜವಾದ ಕಾರ್ಯವನ್ನು ತಿಳಿದ ಮನಸ್ಸು. ಯಾವ ಮಾತುಗಳು ವಾಕ್ಪತಿಯೂ, ನಾಶರಹಿತನೂ ಆದ ಶಂಭುವನ್ನು ಹೊಗಳುವುವೋ, ಅವೇ ನಿಜವಾದ ಮಾತುಗಳು.

೧೧. ಶಿವನ ಸಂಬಂಧವಾದ ಕಥೆಗಳನ್ನು ಕೇಳುವ ಕಿವಿಗಳೇ ಕಿವಿಗಳು. ಶಿವಾಲಯಕ್ಕೆ ಹೋಗುವ ಕಾಲುಗಳೇ ಅತ್ಯಂತ ಧನ್ಯವಾದವುಗಳು. ಉಳಿದ ಕಿವಿ ಕಾಲುಗಳ ಸ್ಥಿತಿಯು ನಿರರ್ಥಕ.

೧೨. ಶಿವದರ್ಶನಮಾಡುವ ಕಣ್ಣುಗಳೂ, ಶಿವಪೂಜೆಮಾಡುವ ಕೈಗಳೂ ಸಫಲವಾದವುಗಳು. ಅವೇ ಶುಭಫಲವನ್ನು ಅನುಭವಿಸತಕ್ಕವುಗಳು.

೧೩. ಶಿವಾರ್ಪಣ ಬುದ್ಧಿಯಿಂದ ಮಾಡುವ ಕರ್ಮಗಳೇ ನಿಜವಾದ ಮೋಕ್ಷ ಸಾಧಕಗಳು. ಶಿವವಿಷಯಕವಾದ ಭಕ್ತಿಯೇ ಮನುಷ್ಯನ ನಿಜವಾದ ಸಂಪತ್ತು.

ಶ್ರೇಯಸ್ಕಾನ್‌ಶ್ರೇಯಸ್ಕರೀ ಭಕ್ತಿರ್ಯೇಷಾಂ ಭಕ್ತಿರ್ಯೇಷಾಂ ಗಿರಿಜಾಪತೇಃ ।
ರಿಪವಸ್ತಂ ನ ಹಿಂಸಂತಿ ನ ಚ ಖಾದಂತಿ ರಾಕ್ಷಸಾಃ ॥ ೧೪ ॥

ನ ದಂಶಂತಿ ಚ ನಾಗೇಂದ್ರಾ ನರಂ ರುದ್ರಪರಾಯಣಂ ।
ವಿಪಾಕಕಟುಕಾನ್ ರಮ್ಯಾನ್ವಿಷಯಾ ನ್ವಿಷಸನ್ನಿಭಾನ್ ।
ಸಂತ್ಯಜ್ಯಾಽಽರಾಧಯೇದ್ದೇವಂ ಶಂಕರಂ ಲೋಕಶಂಕರಂ ॥ ೧೫ ॥

ಅಹಿಂಸಾ ಸತ್ಯಮಸ್ತೇಯಂ ದಯಾ ಭೂತೇಷ್ವನುಗ್ರಹಃ ।
ಯಸ್ಯೈತಾನಿ ಸದಾ ವಿಪ್ರಾಸ್ತಸ್ಯ ತುಷ್ಯತಿ ಶಂಕರಃ ॥ ೧೬ ॥

ದೃಷ್ಟ್ವಾ ಸಂಪೂಜಿತಂ ಲಿಂಗಂ ಭಕ್ತ್ಯಾ ಯಶ್ಚಾಭಿನಂದತಿ ।
ತೂರ್ಯತ್ರಿಕಂ ವಾ ಯಃಕುರ್ಯಾತ್ತಸ್ಯ ತುಷ್ಯತಿ ಶಂಕರಃ ॥ ೧೭ ॥

ವಾಙ್ಮನಃಕಾಯಕರ್ಮೇಚ್ಛಾ ಯಸ್ಯ ಭಕ್ತಿರ್ಮಹೇಶ್ವರೇ ।
ವ್ಯಸನೋಪಹತಸ್ಯಾಪಿ ತಸ್ಯ ತುಷ್ಯತಿ ಶಂಕರಃ ॥ ೧೮ ॥

---

೧೪. ಯಾರು ಪಾರ್ವತೀ ಪತಿಯಾದ ಶಿವನಲ್ಲಿ ಅತಿಶಯವಾದ ಭಕ್ತಿಯನ್ನಿಡುವರೋ, ಅವರೇ ಶ್ರೇಯೋಭಾಗಿಗಳು. ಅಂತಹವರನ್ನು ಶತ್ರುಗಳು ಹಿಂಸಿಸಲಾರರು. ರಾಕ್ಷಸರು ಭಕ್ಷಿಸಲಾರರು.

೧೫. ಹಾವುಗಳು ಶಿವಭಕ್ತಿಪರಾಯಣರಾದವರನ್ನು ಕಚ್ಚಲಾರವು. ಶಿವನ ಆರಾಧನೆಗೆ ಕಹಿಯಾದ, ಮತ್ತು ರಮ್ಯವಲ್ಲದ ವಿಷಸಂಬಂಧವಾದ ದ್ರವ್ಯಗಳನ್ನು ಬಳಸಕೂಡದು.

೧೬. ಹಿಂಸೆಮಾಡದಿರುವುದು, ನಿಜಹೇಳುವುದು, ಕಳ್ಳತನವಿಲ್ಲದಿರುವುದು, ಪ್ರಾಣಿದಯೆ ಇವೇ ಮೊದಲಾದ ಸದ್ಗುಣಗಳು ಯಾರಲ್ಲಿ ಕಂಡುಬರುವುವೋ, ಅವನ ವಿಷಯದಲ್ಲಿ ಶಂಕರನು ತೃಪ್ತಿಪಡುವನು.

೧೭. ಶಿವಲಿಂಗವನ್ನು ತಾನು ಪೂಜಿಸದಿದ್ದರೂ, ಭಕ್ತಿಯಿಂದ ಪೂಜಿಸಲ್ಪಟ್ಟ ಶಿವಲಿಂಗವನ್ನು ನೋಡಿ ಆನಂದಪಡುವರೋ, ಯಾರು ವಾದ್ಯಾದಿಗಳ ಧ್ವನಿಮಾಡಿ ಆರಾಧಿಸುವರೋ, ಅಂತಹವರಿಗೂ ಶಂಕರನು ಅನುಗ್ರಹಿಸುವನು.

೧೮. ಮಾತು, ಮನಸ್ಸು, ಶರೀರ, ಕರ್ಮ, ಇಚ್ಛಾ ಇವುಗಳಿಂದ ಯಾವನು ಪರಮೇಶ್ವರನಲ್ಲಿ ದೃಢಭಕ್ತಿಯನ್ನು ನಿಲ್ಲಿಸುವನೋ, ಅವನು ಬೇರೆ ವಿಧವಾದ ಯಾವ ವ್ಯಸನಗಳಿಗೆ ಸಿಕ್ಕಿದ್ದರೂ ಸಹ, ಅವನನ್ನು ಮನ್ನಿಸಿ ಅವನಿಗೆ ವರ ಕೊಡುವನು.

ಯಥಾ ದ್ವಿಜಾ ಹಸ್ತಿಪದೇ ಪದಾನಿ ।
ಸಂಲೀಯಂತೇ ಸರ್ವಸತ್ತ್ವೋದ್ಭವಾನಿ ।
ಏವಂ ಧರ್ಮಾಃ ಶಿವಧರ್ಮೇತು ಸರ್ವೇ ।
ಸಂಲೀಯಂತೇ ನಾತ್ರ ಚಿತ್ರಂ ಮುನೀಂದ್ರಾಃ　　॥ ೧೯ ॥

ಅಲ್ಪಾಶ್ರಯಾನಲ್ಪಫಲಾಂಸ್ತ್ವರಾಂಶ್ಚ ।
ಧರ್ಮಾನನ್ಯಾನ್ಪ್ರಾಹುರಿಹ ದ್ವಿಜೇಂದ್ರಾಃ ।
ಮಹಾಶ್ರಯಂ ಬಹುಕಲ್ಯಾಣರೂಪಂ ।
ವದಂತಿ ಸಂತಃ ಶಿವಧರ್ಮಮೇಕಂ　　॥ ೨೦ ॥

ಸರ್ವೇ ವರ್ಣಾ ದೇವದೇವಸ್ಯ ಶಂಭೋಃ ।
ಪೂಜಾಂ ಕೃತ್ವಾ ಸತ್ಯವಾಕ್ಯಾನಿ ಚೋಕ್ತ್ವಾ ।
ತ್ಯಕ್ತ್ವಾ ಧರ್ಮಂ ದಾರುಣಂ ಮೃತ್ಯುಲೋಕೇ ।
ಯಾಂತಿ ಸ್ವರ್ಗಂ ನಾತ್ರಕಾರ್ಯೋ ವಿಚಾರಃ　　॥ ೨೧ ॥

---

೧೯. ಹೇಗೆ ಹಕ್ಕಿಗಳ ಪಾದಗಳು ಆನೆಯ ಪಾದತಳದಲ್ಲಿ ಅಡಗಿ ಹೋಗುವುವೋ, ಹಾಗೆಯೇ ಸಮಸ್ತ ಧರ್ಮಗಳೂ, ಶಿವಧರ್ಮದಲ್ಲಿ ಐಕ್ಯವಾಗುವುವು. ಇದರಲ್ಲಿ ಆಶ್ಚರ್ಯವೇನಿಲ್ಲ.

೨೦. ಅಲ್ಪಾಶ್ರಯವುಳ್ಳ ಅಲ್ಪಫಲಪ್ರದಾತೃವಾದ ಅನೇಕ ಧರ್ಮಗಳನ್ನು ಬ್ರಾಹ್ಮಣರು ವಿವರಿಸುವರು. ಆದರೆ ಮಹಾಶ್ರಯವುಳ್ಳ ಅತ್ಯಂತ ಕಲ್ಯಾಣ ಫಲಪ್ರದಾತೃವಾದ ಧರ್ಮವೆಂದರೆ ಶಿವಧರ್ಮವೊಂದೇ.

೨೧. ಯಾವ ವರ್ಣದವರೇ ಆಗಲಿ, ಯಾವ ಧರ್ಮದವರೇ ಆಗಲಿ, ಅವರು ಸತ್ಯವಂತರಾಗಿದ್ದು, ಶಿವಾರಾಧಕರಾಗಿದ್ದ ಪಕ್ಷದಲ್ಲಿ ಅವರು ಯಾವ ವಿಧವಾದ ಮೃತ್ಯು ಲೋಕದ ಭಯವನ್ನು ಹೊಂದದೆ ಸಾಕ್ಷಾತ್ತಾಗಿ ಮೋಕ್ಷವನ್ನು ಹೊಂದುವರು.

ಯೇ ವಾಮದೇವಂ ಹಿ ಯಜಂತಿ ನಿತ್ಯಂ ।
ಸದ್ವೃತ್ತಶೀಲಾಃ ಕಿಲ ಲಿಂಗಮೂರ್ತಿಂ ।
ತೇ ಧ್ವಸ್ತದೋಷಾ ಹಿ ಭವಂತಿ ಮರ್ತ್ಯಾಃ ।
ಭವಾಂಬುರಾಶಿಂ ವಿಷಮಂ ತರಂತಿ ತೇ ॥ ೨೨ ॥

ತೈರಿಷ್ಟಂ ವಿವಿಧೈರ್ಯಜ್ಞೈರ್ದೇವರ್ಷಿ ಪಿತೃಮಾನವಾಃ ।
ತರ್ಪಿತಾಃ ಸ್ಯುರ್ಜಗದ್ಧೇತು ರ್ಯೈರಿಷ್ಟೋ ಭಗವಾನ್ ಭವಃ ॥ ೨೩ ॥

ಪರ್ವತಾನ್ ದಶ ಯದ್ದತ್ವಾ ಮಹಾದಾನಾನಿ ಷೋಡಶ ।
ಧೇನೂಶ್ಚ ದಶ ಯದ್ದತ್ವಾ ತದ್ದೃಷ್ಟ್ವಾ ಲಿಂಗಮಾಪ್ನುಯಾತ್ ॥ ೨೪ ॥

ಶಿವಭಕ್ತೋ ನ ಯೋ ರಾಜಾ ಭಕ್ತೋಽನ್ಯೇಷು ಸುರೇಷು ಸಃ ।
ಸ್ವಪತ್ನೀಂ ಯುವತೀಂ ತ್ಯಕ್ತ್ವಾ ಯಥೈವಾನ್ಯಾಸು ರಜ್ಯತೇ ॥ ೨೫ ॥

---

೨೨. ಯಾರು ನಿತ್ಯವೂ ಸದ್ವರ್ತನೆಯಿಂದ ಕೂಡಿದವರಾಗಿ ಲಿಂಗವನ್ನು ಆರಾಧಿಸುವರೋ, ಅವರು ಸಮಸ್ತ ಪಾಪಮುಕ್ತರಾಗಿ ಕಠಿಣಕರವಾದ ಸಂಸಾರ ಸಮುದ್ರವನ್ನು ಸುಲಭವಾಗಿ ದಾಟುವರು.

೨೩. ಯಾವ ಯಜ್ಞಯಾಗಗಳಲ್ಲೇ ಆಗಲಿ, ಜಗತ್ತಿಗೆ ಮೂಲಕಾರಣನಾದ ಪರಮೇಶ್ವರನು ಯಾವ ಕರ್ಮಗಳಿಂದ ತೃಪ್ತಿಪಡುವನೋ, ಅದೇ ಕರ್ಮಗಳಿಂದ ಸಮಸ್ತ ದೇವತೆಗಳೂ, ಪಿತೃವರ್ಗದವರೂ ತೃಪ್ತಿಹೊಂದುವರು.

೨೪. ಒಂದು ಸಾರಿ ಭಕ್ತಿಯಿಂದ ಲಿಂಗ ದರ್ಶನ ಮಾಡಿದ್ದೇ ಆದರೆ, ಹತ್ತು ಪರ್ವತಗಳ ದಾನದಿಂದ, ಹದಿನಾರು ಮಹಾದಾನಗಳಿಂದ, ದಶಗೋದಾನಗಳಿಂದ ಯಾವ ಪುಣ್ಯವು ಲಭಿಸುವುದೋ, ಅಷ್ಟೇ ಪುಣ್ಯರಾಶಿಯು ಆ ಶಿವದರ್ಶನದಿಂದ ಒದಗುವುದು.

೨೫. ರಾಜನಾದವನು ಶಿವನನ್ನು ಪೂಜಿಸದೆ ಇತರ ದೇವತೆಗಳನ್ನೇ ಆರಾಧಿಸುತ್ತಿದ್ದರೆ, ತನ್ನ ಧರ್ಮಪತ್ನಿಯನ್ನು ದೂರಮಾಡಿ ಪರಸ್ತ್ರೀಯರನ್ನು ಸೇವಿಸುವಂತಹ ನೀಚ ಮನುಷ್ಯನಂತೆ ಅಧರ್ಮಿಯಾಗುವನು.

ವ್ಯಾಜೇನಾಪಿ ಹಿ ಯೇ ಕುರ್ಯುಃ ಕಿಂಚಿತ್ಕರ್ಮ ಶಿವಾಲಯೇ ।
ನ ತೇ ಯಾಂತೀಹ ನರಕಂ ಪಾಪಾತ್ಮಾನೋಽಪಿ ಮಾನವಾಃ ॥ ೨೬ ॥

ಸಂಮಾರ್ಜನಾದಿಕರ್ತಾರೋ ಮಾರ್ಗಶೋಭಾಕರಾಶ್ಚ ಯೇ ।
ತೇಽವಶ್ಯಂ ಪೃಥಿವೀಪಾಲಾ ಭವಂತಿ ತ್ರಿದಶೋಪಮಾಃ ॥ ೨೭ ॥

ಅಸ್ಮಿನ್ನರ್ಥೇ ಪುರಾ ವೃತ್ತಂ ತಚ್ಛೃಣುಧ್ವಂ ದ್ವಿಜೋತ್ತಮಾಃ ।
ಯಚ್ಛ್ರುತ್ವಾ ಪ್ರಾಣಿನಃ ಪ್ರಾಯೋ ನ ಮೋಹಮುಪಯಾಂತಿ ತೇ ॥ ೨೮ ॥

ಸ್ವಾಯಂಭುವೇಽಂತರೇ ಹ್ಯಾಸೀದ್ರಾಜಾ ಪರಮಧಾರ್ಮಿಕಃ ।
ಪಂಚಾಲವಿಷಯೇ ವಿಪ್ರಾ ನರವರ್ಮೇತಿ ವಿಶ್ರುತಃ ॥ ೨೯ ॥

ದೈವಮಂತ್ರವಿದುತ್ಸಾಹಶಕ್ತಿಯುಕ್ತಃ ಪ್ರತಾಪವಾನ್ ।
ಷಾಡ್ಗುಣ್ಯವಿನ್ಮಹಾಸತ್ವಃ ಸ್ಮಿತಪೂರ್ವಾಭಿಭಾಷಿತಃ ॥ ೩೦ ॥

---

೨೬. ಮನುಷ್ಯರು ಯಾವ ಕಾರಣಾಂತರದಿಂದಲಾದರೂ ಶಿವಾಲಯದಲ್ಲಿ ಒಂದು ಸತ್ಕರ್ಮವನ್ನಾಚರಿಸಿದರೆ, ಅವರು ಎಷ್ಟೇ ಪಾಪಿಷ್ಠರಾಗಿದ್ದರೂ ನರಕವನ್ನು ಪಡೆಯಲಾರರು.

೨೭. ಶಿವಾಲಯವನ್ನು ಗುಡಿಸುವುದು, ಅಲಂಕರಿಸುವುದು, ದಾರಿಯನ್ನು ಸರಿಪಡಿಸುವುದು ಇವೇ ಮೊದಲಾದ ಶಿವಸತ್ಕಾರಗಳನ್ನು ಮಾಡಿದವರು ದೇವತೆಗಳಿಗೆ ಸಮಾನರಾಗಿದ್ದು, ಕೆಲವು ಕಾಲಾನಂತರ ಭೂಪತಿಗಳಾಗಿ ಜನಿಸುವರು.

೨೮. ಇದೇ ವಿಚಾರಕ್ಕೆ ಸಂಬಂಧಿಸಿದ ಒಂದು ಇತಿಹಾಸವನ್ನು ನಿಮಗೆ ಈಗ ತಿಳಿಸುವೆನು. ಇದನ್ನು ಕೇಳಿ ಪ್ರಾಣಿಗಳು ತಮ್ಮ ಅಜ್ಞಾನವನ್ನು ಕಳೆದುಕೊಳ್ಳಬಹುದು.

೨೯. ಸ್ವಾಯಂಭುವಮನ್ವಂತರದಲ್ಲಿ ಪರಮಧರ್ಮಿಷ್ಠನಾಗಿಯೂ, ಪಾಂಚಾಲ ದೇಶಕ್ಕೆ ಒಡೆಯನಾಗಿಯೂ ಇದ್ದ ರಾಜನೊಬ್ಬನಿದ್ದನು.

೩೦. ಆತನು ಸಮಸ್ತ ದೇವತಾಸ್ವರೂಪವನ್ನೂ, ಅಖಿಲ ಮಂತ್ರಗಳನ್ನೂ ಅರಿತವನಾಗಿ ರಾಜನಿಗಿರಬೇಕಾದ ಶಕ್ತಿ, ಉತ್ಸಾಹ, ಪ್ರತಾಪ, ಷಡ್ಗುಣಗಳು ಇವೆಲ್ಲವನ್ನೂ ಹೊಂದಿದ್ದನು. ಯಾರೊಡನೆ ಮಾತನಾಡಬೇಕಾದರೂ ಹಸನ್ಮುಖಿಯಾಗಿ ವ್ಯವಹರಿಸುತ್ತಿದ್ದನು.

ತಸ್ಯ ಭಾರ್ಯಾಸಹಸ್ರಾಣಾಂ ದರ್ಶನೀಯತಮಾಕೃತಿಃ ।
ದಶಾನಾಮಗ್ರಮಹಿಷೀ ಸುದೇವೀತ್ಯಭಿವಿಶ್ರುತಾ ॥ ೩೧ ॥

ಸರ್ವಲಕ್ಷಣಸಂಪನ್ನಾ ಶಚೀವ ವರವರ್ಣಿನೀ ।
ಭರ್ತುಶ್ಚಾಪಿ ಪ್ರಿಯಾ ಸಾಧ್ವೀ ಚಂದ್ರಕಾಂತಿಸಮಪ್ರಭಾ ॥ ೩೨ ॥

ಕರೋತಿ ಪ್ರತ್ಯಹಂ ರಾಜ್ಞೀ ಭೂಮಿಸಂಮಾರ್ಜನಾದಿಭಿಃ ।
ದ್ವಾರಶೋಭಾಂ ಮಾರ್ಗಶೋಭಾಂ ಶಿವಸ್ಯಾಯತನೇ ಶುಭೇ ॥ ೩೩ ॥

ತಾಂ ತಥಾಭಿರತಾಂ ದೃಷ್ಟ್ವಾ ತಸ್ಯ ರಾಜ್ಞಃ ಪುರೋಹಿತಃ ।
ಪಪ್ರಚ್ಛೇದಂ ಸ ತನ್ವಂಗೀಂ ಗಾಲವೋ ರಹಸಿ ಸ್ಥಿತಾಂ ॥ ೩೪ ॥

ಬ್ರೂಹಿ ಸುಭ್ರು ಮಹಾಭಾಗೇ ಕಿಮರ್ಥಂ ಹರಮಂದಿರೇ ।
ಸಂಮಾರ್ಜನರತಾ ನಿತ್ಯಮನ್ಯಕರ್ಮಪರಾಙ್ಮುಖೀ ॥ ೩೫ ॥

---

೩೧. ಅವನಿಗೆ ಅನೇಕ ಜನ ಪತ್ನಿಯರಿದ್ದರು. ಅವರಲ್ಲಿ ಅತ್ಯಂತ ಸುಂದರಿಯಾದ ಸುದೇವಿಯೆಂಬುವಳು ರಾಜನಿಗೆ ಪಟ್ಟಮಹಿಷಿಯಾಗಿ ಪ್ರಸಿದ್ಧಳಾಗಿದ್ದಳು.

೩೨. ಸಮಸ್ತಸ್ತ್ರೀಲಕ್ಷಣಗಳಿಂದ ಕೂಡಿ, ಶಚೀದೇವಿಯಂತೆ ಶೋಭಿಸುತ್ತಿದ್ದಳು. ಚಂದ್ರಕಾಂತಿಯಂತೆ ಪತಿಗೆ ಆಹ್ಲಾದಕರಳಾಗಿ ಪತಿವ್ರತಾ ಧರ್ಮದಿಂದ ವರ್ತಿಸುತ್ತಿದ್ದಳು.

೩೩. ಪ್ರತಿನಿತ್ಯವೂ ಆಕೆಯು, ಶಿವಾಲಯಕ್ಕೆ ಹೋಗಿ, ಆ ದೇವಾಲಯವನ್ನು ಗುಡಿಸುವುದು, ಹೊಸಿಲನ್ನು ಶೃಂಗರಿಸುವುದು, ದಾರಿಯನ್ನು ಸರಿಪಡಿಸುವುದು ಇವೇ ಮೊದಲಾದ ಕಾರ್ಯಗಳಿಂದ ಮಹೇಶ್ವರನನ್ನು ಸೇವಿಸುತ್ತಿದ್ದಳು.

೩೪. ಹೀಗೆ ನಿತ್ಯವೂ ಆಚರಿಸುತ್ತಿದ್ದ ಆ ಮಹಾರಾಣಿಯನ್ನು ನೋಡಿ ಆಕೆಯ ಪುರೋಹಿತನಾದ ಗಾಲವನು ಏಕಾಂತದಲ್ಲಿ ಹೀಗೆ ಪ್ರಶ್ನಿಸಿದನು.

೩೫. "ಎಲೈ ಸರ್ವಲಕ್ಷಣ ಸಂಪನ್ನೆಯೇ, ಮಹಾರಾಣಿಯೇ, ಏತಕ್ಕಾಗಿ ನೀನು ನಿತ್ಯವೂ ಶಿವಾಲಯವನ್ನು ಗುಡಿಸುತ್ತಿರುವೆ? ಬೇರೆ ಕಾರ್ಯಗಳು ನಿನಗೇನೂ ಇಲ್ಲವೇ?"

ಸೈವಮುಕ್ತಾ ತದಾ ತೇನ ಮುನಿನಾ ವಿನಯಾನ್ವಿತಾ ।
ಪ್ರಹಸ್ಯಾಹ ವಿಶಾಲಾಕ್ಷೀ ಮುನೀಂದ್ರಂ ಗಾಲವಂ ಪ್ರತಿ　　　॥ ೩೬ ॥

ನ ಮೇನ್ಯತ್ರ ಪರಾಭಕ್ತಿರ್ಯಥಾ ಸಂಮಾರ್ಜನಾದಿಷು ।
ತನಾಹಂ ಕಥಯಿಷ್ಯಾಮಿ ಪುರಾ ಕರ್ಮಕೃತಂ ಮಯಾ　　　॥ ೩೭ ॥

ಪೂರ್ವಮಾಸಮಹಂ ಗೃಧ್ರೀ ಪಕ್ಷಿಣೀ ವ್ಯೋಮಚಾರಿಣೀ ।
ಕದಾಚಿದ್ಭ್ರಮಮಾಣಾ ತು ಗತಾ ಕಿಷ್ಕಿಂಧಪರ್ವತಂ　　　॥ ೩೮ ॥

ಸಿದ್ಧವಿದ್ಯಾಧರಾಕೀರ್ಣಂ ಹೇಮಕೂಟಮಿವಾಪರಂ ।
ಆಶ್ಚರ್ಯವನ್ನಿರಾಬಾಧಂ ಖಲಿಂಗಂ ಯತ್ರ ತಿಷ್ಠತಿ　　　॥ ೩೯ ॥

ಯಸ್ಯ ಸಂದರ್ಶನಾದೇವ ಸ್ವರ್ಗಂ ಯಾಂತಿ ಮನೀಷಿಣಃ ।
ಸಂಪೂಜ್ಯಾಥ ತಮೇವೇಶಂ ಪುಷ್ಪೈರ್ಧೂಪಾಕ್ಷತಾದಿಭಿಃ　　　॥ ೪೦ ॥

---

೩೬. ಎಂದು ಪ್ರಶ್ನಿಸಲ್ಪಟ್ಟ ಸುದೇವಿರಾಣಿಯು ಅತ್ಯಂತ ವಿನಯದಿಂದ ಕೂಡಿ ನಗುತ್ತಾ ಗಾಲವಮುನಿಯೊಡನೆ ಹೀಗೆಂದಳು.

೩೭. "ಎಲೈ ಋಷಿಯೇ, ನನಗೆ ಶಿವಾಲಯವನ್ನು ಗುಡಿಸುವುದರಲ್ಲಿ ಹೆಚ್ಚು ಆಸಕ್ತಿ. ಅದೇ ನನ್ನ ಪರಾಭಕ್ತಿಯು. ಅದಕ್ಕೆ ಕಾರಣವಾಗಿ ಹಿಂದೆ ನಡೆದ ಒಂದು ಸನ್ನಿವೇಶವನ್ನು ನಿನಗೆ ತಿಳಿಸುವೆನು.

೩೮. ಹಿಂದಿನ ಜನ್ಮದಲ್ಲಿ ನಾನು ಅಂತರಿಕ್ಷದಲ್ಲಿ ಓಡಾಡುವ ಹೆಣ್ಣು ಗಿಡ್ಡಾಗಿದ್ದೆನು. ಒಂದು ಸಾರಿ ಹಾರಾಡುತ್ತಾ ಕಿಷ್ಕಿಂಧಪರ್ವತಕ್ಕೆ ಹೋದೆನು.

೩೯. ಅದು ಸಿದ್ಧವಿದ್ಯಾಧರರಿಂದ ಕೂಡಿರುವ ಮೇರುಪರ್ವತದಂತೆ ರಮ್ಯವಾಗಿತ್ತು. ಅಲ್ಲಿ ಸರ್ವರಿಗೂ ಆಶ್ಚರ್ಯವನ್ನುಂಟುಮಾಡುವಂತಹ ಆಕಾಶ ಲಿಂಗವೊಂದಿತ್ತು.

೪೦. ಆ ಲಿಂಗದ ಸಂದರ್ಶನದಿಂದಲೇ ಸ್ವರ್ಗಪ್ರಾಪ್ತಿಯಾಗುವುದೆಂದು ವಿದ್ವಾಂಸರ ಅಭಿಪ್ರಾಯ. ಅಂತಹ ಲಿಂಗವನ್ನು ಯಾರೋ ಭಕ್ತಿಯಿಂದ ಗಂಧ ಪುಷ್ಪಾಕ್ಷತಾದಿಗಳಿಂದ ಪೂಜಿಸಿ ನೈವೇದ್ಯ ವಸ್ತುವನ್ನು ಆ ಲಿಂಗದ ಪಕ್ಕದಲ್ಲಿಟ್ಟಿದ್ದರು.

ನ್ಯಸ್ತಂ ಕೇನಾಪಿ ತತ್ರಾಶ್ವೈ ನೈವೇದ್ಯಂ ಯತ್ತತ್ಪೈವ ಹಿ ।
ತದಾದಾತುಂ ಸಮಾಗತ್ಯ ಲಿಂಗಂ ಕೃತ್ವಾಪ್ರದಕ್ಷಿಣಂ ॥ ೪೧ ॥

ಕ್ಷುಧಾರ್ತಾಹಂ ಮಹಾಭಾಗ ನೈವೇದ್ಯೇ ತು ಕೃತೋದ್ಯಮಾ ।
ಕ್ರಮಾತ್ತನ್ನಾಗ್ರಹೀದ್ವಿಪ್ರ ಪಕ್ಷಾಭ್ಯಾಂ ಪಾಂಶುಮಾರ್ಜನಂ ॥ ೪೨ ॥

ಕೃತಂ ದೇವಸ್ಯ ಪುರತೋ ದೈವಯೋಗಾತ್ಕ್ಷಣಾತ್ತತಃ ।
ತಾವತ್ತತ್ರ ಸಮಾಯಾತಸ್ತಸ್ಯ ದೇವಸ್ಯ ಪೂಜಕಃ ॥ ೪೩ ॥

ಉದ್ಗತಾಹಂ ತತಃ ಕಾಲಾನ್ಮೃತಾ ಜಾತಾ ವಸೋರ್ಗೃಹೇ ।
ನೃವರ್ಮಣೇ ಚ ತೇನಾಹಂ ಪ್ರದತ್ತಾ ಪ್ರಥಮಾ ವಧೂಃ ॥ ೪೪ ॥

ದಶರಾಜ್ಞೀಸಹಸ್ರಾಣಾಮುತ್ತಮಾ ತತ್ಪ್ರಭಾವತಃ ।
ಮಾನ್ಯಾ ಚ ದಯಿತಾ ರಾಜ್ಞಃ ಪುತ್ರಪೌತ್ರಸಮನ್ವಿತಾ ॥ ೪೫ ॥

೪೧-೪೨. ಹಸಿವಿನಿಂದ ಕೂಡಿದ್ದ ನಾನು ಆ ನೈವೇದ್ಯವಾದ ವಸ್ತುವನ್ನು ತಿನ್ನಲು ಆತುರಳಾಗಿ ಹೇಗೋ ಲಿಂಗಕ್ಕೆ ಪ್ರದಕ್ಷಿಣಾಕಾರವಾಗಿ ಸುತ್ತಿ ರೆಕ್ಕೆಯನ್ನು ಬಡಿಯುತ್ತಾ ಅಲ್ಲಿಗೆ ಹೋದೆನು. ಆ ರೆಕ್ಕೆಗಳ ಹೊಡೆತದಿಂದ ಎದ್ದ ಗಾಳಿಯು ಆ ಶಿವಲಿಂಗದ ಮುಂದೆ ಬಿದ್ದಿದ್ದ ಧೂಳನ್ನೆಲ್ಲಾ ಹೋಗಲಾಡಿಸಿತು. ನನ್ನ ರೆಕ್ಕೆಯಿಂದುಂಟಾದ ಗಾಳಿಯಿಂದ ಆ ಪ್ರದೇಶವನ್ನೆಲ್ಲ ಗುಡಿಸಿದಂತಾಯಿತು. ಆದರೆ ನಾನು ನೈವೇದ್ಯವನ್ನು ತಿನ್ನಲಿಲ್ಲ. ಏಕೆಂದರೆ ಆ ಕಾಲಕ್ಕೆ ಸರಿಯಾಗಿ ಅಕಸ್ಮಾತ್ತಾಗಿ ಆ ದೇವಾಲಯದ ಅರ್ಚಕನು ಅಲ್ಲಿಗೆ ಬಂದುಬಿಟ್ಟನು.

೪೪. ಕೆಲವು ಕಾಲಾನಂತರ ಆ ಜನ್ಮವು ಹೋದಮೇಲೆ ನಾನು ವಸುವಿನ ಮಗಳಾಗಿ ಹುಟ್ಟಿದೆನು. ಅಲ್ಲಿಂದ ಮುಂದೆ ನಾನು ಈಗ ನರವರ್ಮರಾಜನಿಗೆ ಪಟ್ಟಮಹಿಷಿಯಾಗಿರುವೆನು.

೪೫ ರಾಜನಿಗಿರುವ ಹತ್ತುಸಾವಿರ ಪತ್ನಿಯರಲ್ಲಿ ನಾನೇ ಉತ್ತಮ ಸ್ತ್ರೀಯಾಗಿರುವೆನು. ಅಲ್ಲದೆ ರಾಜನಿಗೆ ಅತ್ಯಂತ ಪ್ರೀತಿಪಾತ್ರಳಾಗಿ, ಮಕ್ಕಳು ಮೊಮ್ಮಕ್ಕಳಿಂದ ಕೂಡಿ ಸುಖಿನಿಯಾಗಿರುವೆನು. ಇದಕ್ಕೆಲ್ಲಾ ಹಿಂದಿನ ಜನ್ಮದಲ್ಲಿ ಈಶ್ವರಲಿಂಗದ ಮುಂದೆ ರೆಕ್ಕೆಯಿಂದ ಕಸಗುಡಿಸಿ ಸಂಪಾದಿಸಿದ ಪುಣ್ಯವೇ ಕಾರಣವಲ್ಲವೇ?

ಅಜ್ಞಾನಾದೀಶ್ವರಾಗಾರೇ ಕೃತ್ವೈವಂ ಪಾಂಶುಮಾರ್ಜನಂ ।
ಮುಹುಕಾಹಂ ವಸೋರ್ಜಾತಾ ರಾಜ್ಞೋ ಜಾತಿಸ್ಮರಾ ತಥಾ ॥ ೪೬ ॥

ಕಾಮಾತ್ಸಂಮಾರ್ಜನಂ ಕೃತ್ವಾ ಭವಿಷ್ಯಾಮಿ ನ ವೇದ್ಮಿ ತತ್ ।
ಏವಮುಕ್ತಸ್ತಯಾ ರಾಜ್ಞ್ಯಾ ಪ್ರಹೃಷ್ಟಸ್ತಾಮಥಾಬ್ರವೀತ್ ॥ ೪೭ ॥

ಸಮಾರಾಧ್ಯ ಸುರೇಶಾನಂ ಸರ್ವದಂ ತ್ರಿಪುರಾಂತಕಂ ।
ಕಿಮಾಶ್ಚರ್ಯಂ ಗುಣಾಢ್ಯಾಸೇ ಯದೇತತ್ಪ್ರಾಪ್ತವತ್ಯಸಿ ॥ ೪೮ ॥

ಚಕ್ಷುಷಾ ಪ್ರೇಕ್ಷಣಂ ಚೈವ ನಮನಂ ಚ ಪ್ರದಕ್ಷಿಣಂ ।
ಲಿಂಗಮೂರ್ತೇಃ ಶಿವಸ್ಯೈವ ರಾಜ್ಯಾವಾಪ್ತಿಕರಂ ಸ್ಮೃತಂ ॥ ೪೯ ॥

ಜಾತಿಸ್ಮರತ್ವಮೈಶ್ವರ್ಯಂ ವಿದ್ಯಾಜ್ಞಾನಂ ಪ್ರಜಾಸುಖಂ ।
ಅಜ್ಞಾನಾದ್ವಾ ಭಯಾದ್ವಾಪಿ ದೃಷ್ಟ್ವೈವೇಹ ಮಹೇಶ್ವರಂ ॥ ೫೦ ॥

---

೪೬. ಯಾವ ಫಲಾಪೇಕ್ಷೆಯೂ ಇಲ್ಲದೆ ಈಶ್ವರಾಲಯದಲ್ಲಿ ದೂಳನ್ನು ಗುಡಿಸಿದ್ದರಿಂದ ನಾನು ವಸುವಿನ ಮಗಳಾಗಿಯೂ ರಾಜನಿಗೆ ಪತ್ನಿಯಾಗಿಯೂ ಆದೆನು.

೪೭. ಈಗಲೂ ಅದೇ ಕೆಲಸವನ್ನು ಈಶ್ವರ ಪ್ರೀತಿಗಾಗಿ ಮಾಡುತ್ತಿರುವೆನು. ಇದರಿಂದ ನನಗೆ ಮುಂದೇನು ಲಭಿಸುವುದೋ ಎಂಬುದನ್ನು ಹೇಳಲಾರೆನು." ಎಂದು ರಾಣಿಯು ಹೇಳಲು ಪುರೋಹಿತನಾದ ಗಾಲವನು ಸಂತೋಷಪಟ್ಟು ಪುನಃ ಹೀಗೆ ಹೇಳಿದನು.

೪೮. " ದೇವಶ್ರೇಷ್ಠನೂ, ಸರ್ವವನ್ನು ಅನುಗ್ರಹಿಸುವವನೂ, ತ್ರಿಪುರಾಂತಕನೂ ಆದ ಪರಮೇಶ್ವರನನ್ನು ಸೇವಿಸಿದರೆ ಯಾವುದು ತಾನೇ ದೊರೆಯಲಾರದು? ಗುಣವಂತಳೇ, ಇಷ್ಟನ್ನು ನೀನು ಪಡೆದಿರುವುದು ಆಶ್ಚರ್ಯವೇನು ?

೪೯. ಈಶ್ವರಲಿಂಗದ ದರ್ಶನವೂ, ಪ್ರದಕ್ಷಿಣೆಯೂ, ನಮಸ್ಕಾರವೂ ಭಕ್ತರಿಗೆ ರಾಜ್ಯಪ್ರಾಪ್ತಿಯನ್ನೊದಗಿಸತಕ್ಕದ್ದೆಂದು ಹೇಳಲ್ಪಟ್ಟಿದೆ.

೫೦. ಮಹೇಶ್ವರನನ್ನು, ಜ್ಞಾನದಿಂದಲೋ ಅಜ್ಞಾನದಿಂದಲೋ, ಒಂದಾವೃತ್ತಿ ದರ್ಶನ ಮಾಡಿದರೆ ಸಾಕು. ಅಂತಹವರಿಗೆ ಹಿಂದಿನ ಜನ್ಮದ ಸ್ಮರಣೆಯೂ ಸಕಲೈಶ್ವರ್ಯವೂ, ವಿದ್ಯಾಪ್ರಾಪ್ತಿಯೂ, ಪುತ್ರಸಂಪತ್ತೂ ಸುಲಭವಾಗಿ ದೊರೆಯುವುದು.

ನಾಮ್ನಾಪಿ ನರಕಚ್ಛೇದಃ ಸ್ಮರಣಾದ್ವೈಬುಧಂ ಪದಂ ।
ಪೂಜನಾದ್ಯಸ್ಯ ನಿರ್ವಾಣಂ ತಮೀಶಂ ಕೋ ನ ಸಂಶ್ರಯೇತ್ ॥ ೫೧ ॥

ಫಲಂ ಪ್ರಸಾದಾಜ್ಜಾಯೇತ ಧ್ರುವಂ ಕಾಲೇನ ದೇಹಿನಾಂ ।
ಅರ್ಥಿನಾಂ ತ್ವಖಿಲಾನ್‌ಕಾಮಾನ್ ಸದ್ಯಃ ಫಲತಿ ಶಂಕರಃ ॥ ೫೨ ॥

ಶಾಠ್ಯೇನಾಪಿ ನರಾ ನಿತ್ಯಂ ಯೇ ಸ್ಮರಂತಿ ಮಹೇಶ್ವರಂ ।
ತೇಽಪಿ ಯಾಂತಿ ತನುಂ ತ್ಯಕ್ತ್ವಾ ಶಿವಲೋಕಮನಾಮಯಂ ॥ ೫೩ ॥

ಚರಾಚರಗುರೋರಸ್ಯ ಶಂಭೋರಮಿತತೇಜಸಃ ।
ನ ಕೃತಾ ಯೈರ್ದೃಢಾ ಭಕ್ತಿರ್ವಂಚಿತಾಸ್ತೇ ಸ್ಫುಟಂ ಜನಾಃ ॥ ೫೪ ॥

---

೫೧. ಪರಶಿವನ ನಾಮಸ್ಮರಣೆಯಿಂದ ನರಕದ ಭಯವು ತಪ್ಪುವುದು. ಭಕ್ತಿಯಿಂದ ಆರಾಧಿಸಿದರೆ ಮೋಕ್ಷಸುಖವು ಲಭಿಸುವುದು. ಇಂತಹ ಸ್ವಾಮಿಯನ್ನು ಯಾರು ತಾನೇ ಆಶ್ರಯಿಸಲಾರರು ?

೫೨. ಭಕ್ತಿಯಿಂದ ಪರಮಾತ್ಮನನ್ನು ಆರಾಧಿಸತಕ್ಕ ಮನುಷ್ಯರು, ಈಶ್ವರಾನುಗ್ರಹದಿಂದ ತಮ್ಮ ಕೋರಿಕೆಗಳನ್ನು ನೆನೆಸಿದೊಡನೆಯೇ ಪಡೆಯುತ್ತಾರೆ. ಇದು ಶಂಕರನ ಅಸದೃಶವಾದ ಭಕ್ತಪ್ರೇಮ.

೫೩. ಮೋಸದಿಂದಾಗಲಿ, ಕ್ಷುದ್ರಬುದ್ಧಿಯಿಂದಾಗಲಿ ಮಹೇಶ್ವರನನ್ನು ಒಂದು ಸಾರಿ ಸ್ಮರಿಸಿದರೂ ಸಾಕು. ಅಂತಹವರು ಶಾಶ್ವತವಾದ ಶಿವಸಾಯುಜ್ಯವನ್ನು ಪಡೆಯುವರು.

೫೪. ಸ್ಥಾವರಜಂಗಮಗಳಿಗೆ ನಿಯಾಮಕನಾಗಿ ಮಹಾಮಹಿಮಾಶಾಲಿಯಾದ ಈಶ್ವರನಲ್ಲಿ ಭಕ್ತಿಯಿಡದವರು ನಿಜವಾಗಿಯೂ ಅಜ್ಞಾನಿಗಳೇ, ಮೋಸಹೋದವರೇ ಆಗುವರು.

ಪ್ರಮಾದೇನಾಪಿ ಯೈಃ ಕ್ವಾಪಿ ಪ್ರಣಾಮಃ ಶೂಲಿನಃ ಕೃತಃ ।
ಕಲ್ಪಾಂತೇಽಪಿ ಭವಗ್ರಂಥಿರ್ನ ತೇಷಾಂ ಜಾಯತೇ ಪುನಃ ॥ ೫೫ ॥

ತಾವದ್ಭ್ರಮಂತಿ ಸಂಸಾರೇ ಶೋಕಮೋಹಪರಾಯಣಾಃ ।
ನಾರ್ಚಯಂತಿ ವಿರೂಪಾಕ್ಷಂ ಯಾವದೇವ ಶರೀರಿಣಃ ॥ ೫೬ ॥

ಇತಿಹಾಸಪುರಾಣಾನಿ ಶಿವಪುಸ್ತಕವಾಚನಂ ।
ಯೇ ಕುರ್ಯುಃ ಸಕೃದಪ್ಯೇವಂ ಭಕ್ತ್ಯಾ ಶೃಣ್ವಂತಿ ಯೇ ನರಾಃ ॥ ೫೭ ॥

ವ್ರತೋಪವಾಸದಾನೇಷು ತೀರ್ಥಸ್ನಾನೇಷು ಯತ್ಫಲಂ ।
ತತ್ತೇಷಾಂ ಸ್ಯಾನ್ನ ಸಂದೇಹ ಇತ್ಯಾಹ ಪರಮೇಶ್ವರಃ ॥ ೫೮ ॥

ವಿನಷ್ಟಲೋಭಾ ವಿಷಯೇಷು ನಿಸ್ಪೃಹಾಃ ।
ಪ್ರಸನ್ನಚಿತ್ತಾಶ್ಚ ಶಿವಾರ್ಚನೋದ್ಯತಾಃ ।
ವ್ರಜಂತಿ ಶಂಭೋಃ ಪರಮಂ ಸನಾತನಂ ।
ನಿರಾಮಯಂ ಯತ್ಪ್ರವದಂತಿ ಸೂರಯಃ ॥ ೫೯ ॥

---

೫೫ ಯಾವ ಕಾರಣದಿಂದಲಾದರೂ, ಒಂದು ಸಾರಿ ಶಂಭುವಿಗೆ ತಲೆ ಬಾಗಿದ್ದೇ ಆದರೆ, ಅವರಿಗೆ ಕಲ್ಪಾಂತಪರ್ಯಂತವಾಗಿ ಸಂಸಾರದ ದುಃಖಗಳು ಒದಗಲಾರವು.

೫೬ ಮನುಷ್ಯರು ಭಕ್ತಿಯಿಂದ ಎಲ್ಲಿನವರೆಗೆ ಪರಮೇಶ್ವರನನ್ನು ಆರಾಧಿಸುವುದಿಲ್ಲವೋ ಅಲ್ಲಿನವರೆಗೆ ಅವರ ಸಂಸಾರಸಂಬಂಧವಾದ ಶೋಕಮೋಹಾದಿಗಳು ತೊಲಗಲಾರವು. ಅವುಗಳಲ್ಲಿಯೇ ಸಿಕ್ಕಿ ನರಳುತ್ತಿರುವರು.

೫೭-೫೮. ಶಿವಚರಿತ್ರೆಗಳನ್ನೂ, ಶಿವಪುರಾಣಗಳನ್ನೂ, ಶಿವಮಂತ್ರಗಳನ್ನೂ, ಒಂದು ಸಾರಿ ಭಕ್ತಿಯಿಂದ ಪಠಿಸಿದವರು; ಅನೇಕ ವ್ರತೋಪವಾಸಗಳಿಂದಲೂ, ತೀರ್ಥಸ್ನಾನಗಳಿಂದಲೂ ಪಡೆಯುವ ಪುಣ್ಯರಾಶಿಸಮಹಾದ ಪುಣ್ಯವನ್ನು ಸಂಪಾದಿಸುವರು." ಎಂದು ಸಾಕ್ಷಾತ್ಪರಮೇಶ್ವರನೇ ಅಪ್ಪಣೆಕೊಡಿಸಿರುವನು.

೫೯ ಆಸೆಗೆ ಸಿಕ್ಕದೆ, ವಿಷಯಸುಖಗಳಿಗೆ ಮನಗೊಡದೆ, ನಿರ್ಮಲಚಿತ್ತರಾಗಿ ಈಶ್ವರಾರಾಧನೆಯಲ್ಲಿ ಉದ್ಯುಕ್ತರಾದವರು, ಶಂಭುವಿನ ಪರಮ ಪೂಜ್ಯವಾದ ಸಾನ್ನಿಧ್ಯವನ್ನು ಸುಲಭವಾಗಿ ಪಡೆಯುವರೆಂದು ವಿದ್ವಾಂಸರು ಹೇಳುತ್ತಿರುವರು.

ಕುಲಂ ಪವಿತ್ರಂ ಪಿತರಃ ಸಮುದ್ಧೃತಾಃ ।
ವಸುಂಧರಾ ತೇನ ಚ ಪಾವಿತಾ ದ್ವಿಜಾಃ ।
ಸನಾತನೋಽನಾದಿರನಂತ ವಿಗ್ರಹೋ ।
ಹೃದಿಸ್ಥಿತೋ ಯಸ್ಯ ಸದೈವ ಶಂಕರಃ ॥ ೬೦ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಸುದೇವ್ಯುಪಾಖ್ಯಾನಂ ನಾಮ
ಅಷ್ಟಾಚತ್ವಾರಿಂಶೋಽಧ್ಯಾಯಃ.

---

೬೦ ಯಾರು ಶಂಕರನನ್ನು ಸದಾ ಧ್ಯಾನಿಸುವರೋ, ಅವರ ವಂಶವು ಪವಿತ್ರವಾಗುವುದು. ಅವರ ಪಿತೃಗಳು ಮುಕ್ತರಾಗುವರು. ಅವರು ವಾಸಿಸುವ ಭೂಮಿಯೂ ಪರಿಶುದ್ಧವಾಗುವುದು· ಕೊನೆಗೆ ಅವರು ಆದ್ಯಂತರಹಿತವಾದ ಶರೀರವನ್ನು ಪಡೆದವರಾಗಿ ಶಾಶ್ವತವಾದ ಆನಂದವನ್ನನುಭವಿಸುತ್ತಾ ಶಿವಾಭೇದವನ್ನು ಪಡೆಯುವರು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ
ಸಂವಾದರೂಪವಾಗಿ ಸುದೇವಿಯ ಉಪಾಖ್ಯಾನವೆಂಬ
ನಲವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಏಕೋನ ಪಂಚಾಶೋಽಧ್ಯಾಯಃ

॥ ಋಷಯ ಊಚುಃ ॥

ಪಾರ್ವತ್ಯಾಃ ಶ್ರೋತುಮಿಚ್ಛಾಮೋ ಮಾಹಾತ್ಮ್ಯಂ ರೋಮಹರ್ಷಣ ।
ಜಘಾನ ಸಾ ಯಥಾ ದೈತ್ಯಾನ್ ರಕ್ತಾಸುರಪುರೋಗಮಾನ್ ॥ ೧ ॥

॥ ಸೂತ ಉವಾಚ ॥

ಪ್ರಣಿಪತ್ಯ ಮಹಾದೇವೀಂ ಶಂಕರಾರ್ಧಶರೀರಿಣೀಂ ।
ಮಹೇಂದ್ರಾಣೀಶ್ವರನುತಾಂ ಭಕ್ತಾನುಗ್ರಹಕಾರಿಣೀಂ ॥ ೨ ॥

ನಲವತ್ತೊಂಬತ್ತನೆಯ ಅಧ್ಯಾಯವು.

೧. "ಎಲೈ ರೋಮಹರ್ಷಣನೇ, ಹಿಂದೆ ಪಾರ್ವತಿಯು ರಕ್ತಾಸುರರೇ ಮೊದಲಾದ ರಾಕ್ಷಸರನ್ನು ಕೊಂದುದು ಹೇಗೆ? ಆ ಪಾರ್ವತಿಯ ಮಹಿಮೆಯ ವಿಷಯವಾಗಿ ನಮಗೆ ಸ್ವಲ್ಪ ವಿಷಯಗಳನ್ನು ಅರುಹಬೇಕು," ಎಂದು ಶೌನಕಾದಿಗಳು ಸೂತಮಹರ್ಷಿಯನ್ನು ಕೇಳಿಕೊಳ್ಳಲು,

೨. ಆಗ ಸೂತಮಹರ್ಷಿಗಳು, ಹೀಗೆ ಹೇಳಲಾರಂಭಿಸಿದರು. "ಶಂಕರನ ಅರ್ಧಾಂಗಿಯೂ, ಭಕ್ತರಕ್ಷಕಳೂ ಆದ ಪಾರ್ವತಿಯನ್ನು ನಮಸ್ಕರಿಸುತ್ತೇನೆ. ಈಶ್ವರನ ಪತ್ನಿಯಾದರೂ, ದೇವಿಯು ಈಶ್ವರನಿಗೆ ವಂದ್ಯಳಾಗಿರುವಳು." ಎಂದು ದೇವಿಯನ್ನು ವಂದಿಸಿ ಮುಂದೆ ದೇವಿಯ ಮಹಿಮೆಯನ್ನು ಹೇಳತೊಡಗಿದರು

ಏಕಾಕ್ಷರೀತಿ ವಿಖ್ಯಾತಾ ಬ್ರಾಹ್ಮೀ ದಾಕ್ಷಾಯಣೀತಿ ಯಾ ।
ಉಮಾ ಹೈಮವತೀ ದುರ್ಗಾ ಸತೀ ಮಾತಾ ಮಹೇಶ್ವರೀ ॥ ೩ ॥

ಆರ್ಯಾಂಬಿಕಾ ಮೃಡಾನೀ ಚ ಚಂಡೀ ನಾರಾಯಣೀ ಶಿವಾ ।
ಮಹಾಲಕ್ಷ್ಮೀರ್ಜಗನ್ಮಾತಾ ಕಾಲಿಕಾ ಮೇನಕಾತ್ಮಜಾ ॥ ೪ ॥

ನಾನಾರೂಪಧರಾ ಸೈವಮವತೀರ್ಯೈವ ಪಾರ್ವತೀ ।
ಧರ್ಮಸಂಸ್ಥಾಪನಾರ್ಥಾಯ ನಿಘ್ನಂತೀ ದೈತ್ಯದಾನವಾನ್ ॥ ೫ ॥

ಪರಮಾತ್ಮಾ ಯಥಾ ರುದ್ರ ಏಕೋಽಪಿ ಬಹುಧಾ ಸ್ಥಿತಃ ।
ಪ್ರಯೋಜನವಶಾದ್ದೇವೀ ಸೈಕಾಪಿ ಬಹುಧಾ ಭವೇತ್ ॥ ೬ ॥

ಆಸೀದ್ರಕ್ತಾಸುರೋ ನಾಮ ಮಹಿಷಸ್ಯ ಸುತೋ ಬಲೀ ।
ಮಹಾಮಾಯೋ ಮಹಾಬಾಹುರ್ಹಿರಣ್ಯಾಕ್ಷ ಇವಾಪರಃ ॥ ೭ ॥

---

೩. ಪಾರ್ವತಿಯು ಏಕಾಕ್ಷರಿಯು. ಅಂದರೆ ಪ್ರಣವಸ್ವರೂಪಳು ಎಂದರ್ಥ. ಪಾರ್ವತಿಗೆ ಬ್ರಾಹ್ಮೀ, ಉಮಾ, ಹಿಮವಂತನ ಪುತ್ರಿ, ದುರ್ಗಿ, ಸತೀ ದೇವಿ, ಮಹೇಶ್ವರಿ ಎಂಬ ಅನೇಕ ನಾಮಗಳಿವೆ.

೪. ಆರ್ಯಾದೇವಿಗೆ, ಅಂಬಿಕೆ, ಮೃಡನ ಪತ್ನಿ, ಚಂಡೀವೇಷಧಾರಿಣಿಯು, ನಾರಾಯಣಿ, ಮಹಾಲಕ್ಷ್ಮೀಸ್ವರೂಪಳು, ಜಗನ್ಮಾತೆ, ಮೇನಕೆಯ ಮಗಳು, ಹೀಗೆ ನಾನಾಸ್ವರೂಪಗಳೂ, ನಾನಾ ಆಕಾರಗಳೂ ಕಂಡು ಬರುತ್ತಿವೆ.

೫. ಅಂತೂ ದೇವಿಯು ನಾನಾರೂಪಧಾರಿಣಿಯಾಗಿ, ಲೋಕದಲ್ಲಿ ಧರ್ಮವನ್ನು ನೆಲೆಗೊಳಿಸಲು ದೈತ್ಯರನ್ನೂ ದಾನವರನ್ನೂ ನಾಶಪಡಿಸುತ್ತಲಿರುವರು.

೬. ಪರಮೇಶ್ವರನು ಹೇಗೆ ಒಬ್ಬನಾದರೂ ನಾನಾರೂಪದಿಂದ ಗೋಚರಿಸುವನೋ, ಅದೇ ರೀತಿ ದೇವಿಯು ಒಬ್ಬಳೇ ಆದರೂ ನಾನಾ ಅವತಾರಗಳಿಂದ ಜಗತ್ತಿನಲ್ಲಿ ಆವಿರ್ಭವಿಸುತ್ತಿರುವಳು.

೭. ಹಿಂದೆ ರಕ್ತಾಸುರನೆಂಬವನು ಮಹಿಷಾಸುರನ ಮಗನಾಗಿ ಹುಟ್ಟಿದನು. ಆತನು ಮಾಯಾವಿ, ಶೂರನು. ಎರಡನೆಯ ಹಿರಣ್ಯಾಕ್ಷನೋ ಎಂಬಂತೆ ಭಯಂಕರನಾಗಿದ್ದನು.

ಸ ವಿಜಿತ್ಯ ಸುರಾನ್ ಸರ್ವಾನ್ ವಿಷ್ಣ್ವಿಂದ್ರಾಗ್ನಿಪುರೋಗಮಾನ್ ।
ತ್ರೈಲೋಕ್ಯೇಽಸ್ಮಿನ್ನಿರಾತಂಕಶ್ಚಕ್ರೇ ರಾಜ್ಯಂ ಪ್ರತಾಪವಾನ್ ॥ ೮ ॥

ತಸ್ಯೈತೇ ಮಂತ್ರಿಣಶ್ಚಾಸನ್ ರುದ್ರಾತ್ಮಾನೋ ಮದೋತ್ಕಟಾಃ ।
ತ್ರಯಸ್ತ್ರಿಂಶದ್ದ್ವಿಜಶ್ರೇಷ್ಠಾಃ ಸಹಸ್ರಾಕ್ಷೌಹಿಣೀಯುತಾಃ ॥ ೯ ॥

ಸಿಂಹಸ್ಕಂಧಾ ಮಹಾಕಾಯಾ ದುರಾತ್ಮಾನೋ ಮಹಾಬಲಾಃ ।
ಧೂಮ್ರಾಕ್ಷೋ ಭೀಮದಂಷ್ಟ್ರಶ್ಚ ಕಾಲಪಾಶೋ ಮಹಾಹನುಃ ॥ ೧೦ ॥

ಬ್ರಹ್ಮಘ್ನೋ ಯಜ್ಞಕೋಪಶ್ಚ ಸ್ತ್ರೀಘ್ನೋ ಬಾಲಘ್ನ ಏವ ಚ ।
ವಿದ್ಯುನ್ಮಾಲೀ ಚ ಬಂಧೂಕಃ ಶಂಕುಕರ್ಣೋ ವಿಭಾವಸುಃ ॥ ೧೧ ॥

ದೇವಾಂತಕೋ ವಿಧರ್ಮಶ್ಚ ದುರ್ಭಿಕ್ಷಃ ಕ್ರೂರ ಏವ ಚ ।
ಹಯಗ್ರೀವೋಽಶ್ವಕರ್ಣಶ್ಚ ಕೇತುಮಾನ್ ವೃಷಭೋ ಗಜಃ ॥ ೧೨ ॥

ಶಲಭಃ ಶರಭೋ ವ್ಯಾಘ್ರೋ ನಿಕುಂಭೋ ಮಣಿಕೋ ಬಕಃ ।
ಸೂರ್ಯಕೋ ವಿಕ್ಷುರೋ ಮಾಲೀ ಕಾಲೋ ದಂಡಶ್ಚ ಕೇರಲಃ ॥ ೧೩ ॥

---

೮. ಆ ರಕ್ತಾಸುರನು, ವಿಷ್ಣು, ಇಂದ್ರ, ಅಗ್ನಿ ಇವರೇ ಮೊದಲಾದ ದೇವತೆಗಳನ್ನೆಲ್ಲಾ ಗೆದ್ದು, ಮೂರು ಲೋಕದಲ್ಲಿಯೂ ಶೂರನೆನಿಸಿಕೊಂಡು ರಾಜ್ಯವನ್ನು ಪರಾಕ್ರಮದಿಂದ ಆಳತೊಡಗಿದನು.

೯. ಆ ರಾಜನಿಗೆ ಭಯಂಕರ ಸ್ವಭಾವವುಳ್ಳ ಮತ್ತು ಮದಿಸಿದ ದೇಹವುಳ್ಳ ಮೂವತ್ತುಮೂರು ಜನ ಮಂತ್ರಿಗಳಿದ್ದರು. ಹಾಗೆಯೇ ಸಹಸ್ರ ಅಕ್ಷೌಹಿಣೀ ಸೈನ್ಯವೂ ಆತನಿಗೆ ಬೆಂಬಲವಾಗಿತ್ತು.

೧೦-೧೩. ಆ ರಕ್ತಾಸುರನಿಗೆ ಅತ್ಯಂತ ಮಿತ್ರರಾಗಿ ಸಹಾಯಕರಾಗಿದ್ದವರು ಇವರು. ಸಿಂಹಸ್ಕಂಧ, ಮಹಾಕಾಯ ದುರಾತ್ಮ, ಮಹಾಬಲ, ಧೂಮ್ರಾಕ್ಷ, ಭೀಮದಂಷ್ಟ್ರ, ಕಾಲಪಾಶ, ಮಹಾಹನು, ಬ್ರಹ್ಮಘ್ನ, ಯಜ್ಞಕೋಪ, ಸ್ತ್ರೀಘ್ನ, ಬಾಲಘ್ನ, ವಿದ್ಯುನ್ಮಾಲೀ, ಬಂಧೂಕ, ಶಂಕುಕರ್ಣ, ವಿಭಾವಸು, ದೇವಾಂತಕ, ವಿಧರ್ಮ, ದುರ್ಭಿಕ್ಷ, ಕ್ರೂರ, ಹಯಗ್ರೀವ, ಅಶ್ವಕರ್ಣ, ಕೇತುಮಾನ್, ವೃಷಭ, ಗಜ, ಶಲಭ, ಶರಭ, ವಾಘ್ರ, ನಿಕುಂಭ, ಮಣಿಕ, ಬಕ, ಸೂರ್ಯಕ, ವಿಕ್ಷುರ, ಮಾಲಿ, ಕಾಲ, ದಂಡ, ಕೇರಲ ಇವರೆಲ್ಲರೂ ಆ ರಾಕ್ಷಸನ ಪರಿವಾರದ ವೀರರಾಕ್ಷಸರು.

ಸ ಕದಾಚಿತ್ಸಮಾಸೀನೋ ದೈತ್ಯಕೋಟಿಸಮಾವೃತಃ ।
ಸದಸ್ಯಥಾಬ್ರವೀದ್ದೈತ್ಯಾನ್ ದಾನವಾನ್ ಸನರಾಂಸ್ತಥಾ ॥ ೧೪ ॥

ಮಾಂ ಯಜಧ್ವಂ ಸ್ತುವಧ್ವಂ ಚ ಪೂಜ್ಯೋಽಹಂ ಭವತಾಂ ಸದಾ ।
ಯಸ್ತು ದೇವಾನ್ ಸಮಾತಿಷ್ಠೇತ್ಸ ಗಚ್ಛೇದ್ವಧ್ಯತಾಂ ಮಮ ॥ ೧೫ ॥

ನಾನಾಯಜ್ಞೋಪವಾಸಾಂಶ್ಚ ತ್ಯಕ್ತ್ವಾ ದೇವರ್ಷಿದರ್ಶಿತಾನ್ ।
ಪ್ರತ್ಯಕ್ಷಸೌಖ್ಯಾನ್ ಭುಂಜೀಧ್ವಂ ಯಥೇಷ್ಟಂ ಸುರಯೋಷಿತಃ ॥ ೧೬ ॥

ಇತಿ ದೈತ್ಯೇಂದ್ರವಾಕ್ಯೇನ ನಷ್ಟಾ ಯಜ್ಞಕ್ರಿಯಾಸ್ತತಃ ।
ನಾಧೀಯಂತೇ ತದಾ ವೇದಾ ನ ಪೂಜ್ಯಂತೇ ಚ ದೇವತಾಃ ॥ ೧೭ ॥

ಉತ್ಸವಾ ನ ಪ್ರವರ್ತಂತೇ ಸರ್ವಮಾಸೀತ್ತದಾಸುರಂ ।
ಧರ್ಮಹೀನಸ್ತತೋ ಲೋಕೋ ಮ್ಲೇಚ್ಛಾಕುಲ ಇವಾಭವತ್ ॥ ೧೮ ॥

---

೧೪. ಒಂದು ದಿನ ಆ ರಕ್ತಾಸುರನು ಸಭೆಯಲ್ಲಿ ಕುಳಿತಿದ್ದ ಅನೇಕಕೋಟಿ ದೈತ್ಯರನ್ನೂ ದಾನವರನ್ನೂ, ಮನುಷ್ಯರನ್ನೂ ನೋಡುತ್ತಾ ಹೀಗೆ ಹೇಳಿದನು.

೧೫. “ನೀವೆಲ್ಲರೂ ಇನ್ನು ಮೇಲೆ ನನ್ನನ್ನೇ ಸ್ತುತಿಸಬೇಕು. ಯಜ್ಞಯಾಗಗಳಲ್ಲಿ ಹವಿರ್ಭಾಗಗಳನ್ನು ನನಗೆ ಅರ್ಪಿಸಬೇಕು. ನಾನೇ ನಿಮಗೆ ಪೂಜ್ಯನಾದವನು. ನನ್ನನ್ನು ಬಿಟ್ಟು ನೀವು ಬೇರೆ ದೇವತೆಗಳನ್ನು ಆರಾಧಿಸುವುದಾದರೆ, ನಿಮ್ಮನ್ನು ನಾನು ಒಡನೆಯೇ ನಿಗ್ರಹಿಸುವೆನು.

೧೬. ದೇವರ್ಷಿಗಳು ಹೇಳಿರುವ ದಾನಧರ್ಮಗಳನ್ನು, ಯಾಗ. ಉಪವಾಸ ಮುಂತಾದ ಕರ್ಮಗಳನ್ನು ದೂರಮಾಡಿರಿ. ಐಹಿಕ ಸುಖವನ್ನುಂಟು ಮಾಡುವ ಕರ್ಮಗಳಲ್ಲಿ ಆಸಕ್ತರಾಗಿ, ದೇವತಾಸ್ತ್ರೀಯರನ್ನು ಉಪಭೋಗಿಸುತ್ತಾ ಸುಖದಿಂದಿರಿ”

೧೭. ಎಂದು ಹೇಳಿದ ರಾಕ್ಷಸರಾಜನ ಮಾತುಗಳನ್ನು ಕೇಳಿ ಪ್ರಜೆಗಳೆಲ್ಲರೂ ಯಜ್ಞಯಾಗಗಳನ್ನು ಮರೆತುಬಿಟ್ಟರು. ವೇದಾಧ್ಯಯನವನ್ನು ನಿಲ್ಲಿಸಿದರು. ದೇವತಾರಾಧನೆಗಳು ಎಲ್ಲೂ ಕಾಣದಾದವು.

೧೮. ದೇವರ ಉತ್ಸವಗಳು ನಿಂತು ರಾಕ್ಷಸಕೃತ್ಯಗಳು ಆರಂಭವಾದುವು. ಎಲ್ಲೆಲ್ಲೂ ಧರ್ಮಕಾರ್ಯಗಳಿಗೆ ವಿಘ್ನವುಂಟಾಗಿ ಸರ್ವರೂ ಮ್ಲೇಚ್ಛರಂತೆ ನಡೆಯಲಾರಂಭಿಸಿದರು.

ಧರ್ಮನಾಶಾತ್ಸುರೇಂದ್ರಸ್ಯ ಬಲಹಾನಿರಜಾಯತ ।
ಜ್ಞಾತ್ವಾ ಹೀನಬಲಂ ಶಕ್ರಂ ದಾನವಾಸ್ತಂ ಸಮಾದ್ರವನ್ ॥ ೧೯ ॥

ಸೋಽಭಿಭೂತೋಽಸುರೈರ್ಗಾಢಂ ತ್ಯಕ್ತ್ವಾ ರಾಜ್ಯಂ ಚ ದೇವರಾಟ್ ।
ಬೃಹಸ್ಪತಿಮುಪಾಗಮ್ಯ ವಾಕ್ಯಮೇತದುವಾಚ ಹ ॥ ೨೦ ॥

ರಕ್ತಾಸುರಾಭ್ಯನುಜ್ಞಾತಾ ದೈತ್ಯಾಃ ಕೋಟಿಸಹಸ್ರಶಃ ।
ಆಬಾಧಂತೇ ಸ್ಮ ಸರ್ವತ್ರ ಮದ್ವಧಾರ್ಥಂ ನ ಸಂಶಯಃ ॥ ೨೧ ॥

ನ ಸ್ಥಾತುಮತ್ರ ಶಕ್ನೋಮಿ ನ ಗಂತುಂ ತೈಸ್ತ್ವಭಿದ್ರುತಃ ।
ಸರ್ವಥಾ ಯೋದ್ಧುಮಿಚ್ಛಾಮಿ ಯದ್ಭಾವ್ಯಂ ತದ್ಭವಿಷ್ಯತಿ ॥ ೨೨ ॥

ನಶ್ಯತೋ ಯುಧ್ಯತೋ ವಾಪಿ ತಾವದ್ಭವತಿ ಜೀವಿತಂ ।
ಯಾವತ್ಪ್ರಮಾರ್ಷ್ಟಿ ನ ವಿಧಿರ್ಭಾಲೇಽಸ್ಯ ಲಿಖಿತಾಕ್ಷರಂ ॥ ೨೩ ॥

---

೧೯. ಹೀಗೆ ಭೂಲೋಕದಲ್ಲಿ ಧರ್ಮಕಾರ್ಯಗಳು ನಿಂತಮೇಲೆ ದೇವೇಂದ್ರನು ಸ್ವರ್ಗದಲ್ಲಿ ಬಲಹೀನನಾದನು. ಹವಿಸ್ಸುಗಳು ದೇವತೆಗಳಿಗೆ ನಿಂತುಹೋದವು. ಇದರಿಂದ ದುರ್ಬಲರಾದ ದೇವತೆಗಳನ್ನು ರಾಕ್ಷಸರು ಸುಲಭವಾಗಿ ಓಡಿಸಿದರು.

೨೦. ಇಂದ್ರನು ಹಾಗೆ ರಾಕ್ಷಸರಿಂದ ಸೋಲಿಸಲ್ಪಟ್ಟು, ರಾಜ್ಯಭ್ರಷ್ಟನಾಗಿ, ಬೃಹಸ್ಪತಿಯೊಡನೆ ಓಡಿಹೋಗಿ, ಅವನೊಡನೆ ಹೀಗೆ ಹೇಳಿಕೊಂಡನು.

೨೧. "ಎಲೈ ಗುರುವೆ, ರಕ್ತಾಸುರನಿಂದ ಪ್ರೇರಿತರಾದ ರಾಕ್ಷಸರು ಕೋಟಿ ಸಂಖ್ಯೆಯಿಂದ ಕೂಡಿ, ನನ್ನನ್ನು ಕೊಲ್ಲಲು ಪ್ರಯತ್ನ ಪಡುತ್ತಿದ್ದಾರೆ. ಹಾಗೆಯೇ ಅನೇಕ ವಿಘ್ನಗಳನ್ನೂ ತಂದೊಡ್ಡುತ್ತಿರುವರು.

೨೨. ನಾನು ಇಲ್ಲಿ ಧೈರ್ಯವಾಗಿ ನಿಲ್ಲಲು ಶಕ್ತಿಯಿಲ್ಲ. ಅವರನ್ನು ಹೊಡೆದಟ್ಟಲು ಸಾಧ್ಯವಿಲ್ಲ. ಅಂತೂ ಏನೇ ಆದರೂ ಅವರೊಡನೆ ಯುದ್ಧಮಾಡಿಯೇ ಮಾಡುವೆನು. ಆಗುವುದು ಆಗಿಹೋಗಲಿ.

೨೩. ಬ್ರಹ್ಮನ ಹಣೆಯ ಬರೆಹವು ಯಾವರೀತಿ ಇರುತ್ತದೋ, ಬ್ರಹ್ಮನು ನಮಗೆ ಎಲ್ಲಿನವರೆಗೆ ಆಯುಸ್ಸನ್ನು ಬರೆದಿರುವನೋ, ಅದರಂತೆಯೇ ಅಲ್ಲಿನವರೆಗೂ ಯುದ್ಧಮಾಡುತ್ತೇವೆ. ಮುಂದಿನ ಫಲಾಫಲಗಳು ದೈವೇಚ್ಛೆಯಂತಾಗಲಿ.

ಜಯಮಾಶಂಸ ಮೇ ಬ್ರಹ್ಮನ್ ಯೋತ್ಸ್ಯೇಹಮರಿಭಿಸ್ಸಹ ।
ಮುಹೂರ್ತಂ ಜ್ವಲಿತಂ ಶ್ರೇಯೋ ನ ತು ಧೂಮಾಯಿತಂ ಚಿರಂ ॥ ೨೪ ॥

ಧಿಕ್ತಸ್ಯ ಜೀವಿತಂ ಪುಂಸಃ ಶತ್ರೂಣಾಮಾತತಾಯಿನಾಂ ।
ಅಪಕರ್ತುಮಶಕ್ತೋ ಯೋ ಜೀವಾಮೀತ್ಯಧಿಗಚ್ಛತಿ ॥ ೨೫ ॥

ಕರ್ಮಾಯತ್ತಂ ಕಿಲೈಶ್ವರ್ಯಂ ಮಮಾಯತ್ತಂ ಚ ಪೌರುಷಂ ।
ತಸ್ಮಾದ್ಯುದ್ಧಂ ಕರಿಷ್ಯಾಮಿ ಧ್ರುವಂ ಶ್ರೇಯೋ ಭವಿಷ್ಯತಿ ॥ ೨೬

ಶ್ರುತ್ವೈವಂ ಮಘವದ್ವಾಕ್ಯಂ ವಾಚಸ್ಪತಿರಥಾಬ್ರವೀತ್ ।
ನ ಕಾಲೋ ವಿಗ್ರಹಸ್ಯಾದ್ಯ ಕಿಂ ಕೋಪೇನ ಶಚೀಪತೇ ॥ ೨೭ ॥

ನ ಚ ಖೇದಸ್ತ್ವಯಾ ಕಾರ್ಯಃ ಕಾರ್ಯಾಣಾಂ ಗತಿರೀದೃಶೀ ।
ದೈವಾದ್ಭವಂತಿ ಭೂತಾನಾಂ ಸಂಪದೋ ವಿಪದೋಪಿ ವಾ ॥ ೨೮ ॥

---

೨೪. ಎಲೈ ಗುರುವೇ, ನನಗೆ ಜಯವನ್ನು ಕೋರು. ನಾನು ಶತ್ರುಗಳೊಡನೆ ಈಗ ಯುದ್ಧಕ್ಕೆ ನಿಲ್ಲುವೆನು. ಸುಮ್ಮನೆ ಹೊಗೆಯಾಡಿಕೊಂಡಿರುವ ಅಗ್ನಿಗಿಂತಲೂ ಕ್ಷಣಕಾಲ ಉರಿಯುವ ಬೆಂಕಿಯೇ ನಮಗೆ ಕಾರ್ಯಸಾಧಕವು.

೨೫. ಶತ್ರುಗಳನ್ನೂ, ವಧೋದ್ಯುಕ್ತರನ್ನೂ ಶಿಕ್ಷಿಸದೆ ತಾನು ಮಾತ್ರ ಹೇಗೋ ಜೀವವನ್ನು ರಕ್ಷಿಸಿಕೊಳ್ಳುವುದು ವೀರನ ಲಕ್ಷಣವಲ್ಲ. ಅಂತಹ ಅಶಕ್ತನ ಜೀವನವೇ ವ್ಯರ್ಥ.

೨೬. ಯಾವಾಗಲೂ ಐಶ್ವರ್ಯವು ಅವರವರ ಅದೃಷ್ಟಕ್ಕೆ ಸೇರಿದ್ದು. ಪರಾಕ್ರಮವು ಮಾತ್ರ ನಮ್ಮ ಆಧೀನ. ಆದ್ದರಿಂದ ಈಗ ನಾನು ಯುದ್ಧವನ್ನೇ ಮಾಡುವೆನು. ಇದರಿಂದ ನಿಜವಾಗಿಯೂ ನಮಗೆ ಶ್ರೇಯಸ್ಸೇ ಆಗುವುದು."

೨೭. ಎಂದು ಇಂದ್ರನು ಹೇಳಲು, ಬೃಹಸ್ಪತಿಯು ಆ ಮಾತುಗಳನ್ನು ಕೇಳಿ, "ಇಂದ್ರನೇ, ಇದು ಯುದ್ಧಕ್ಕೆ ಸಮಯವಲ್ಲ. ವೃಥಾ ಕ್ರುದ್ಧನಾಗಬೇಡ.

೨೮. ನೀನು ವೃಥಾ ದುಃಖಿಸಲೂ ಬೇಡ. ಲೋಕದಲ್ಲಿ ನಡೆಯುವುದು ಹೀಗೆಯೇ. ಪ್ರಾಣಿಗಳಿಗೆ ಅವರವರ ಕರ್ಮಾನುಸಾರವಾಗಿ ಐಶ್ವರ್ಯವೂ, ವಿಪತ್ತೂ ಸಂಭವಿಸುವುದುಂಟು.

ಸ್ವಶಕ್ತಿಂ ಪರಶಕ್ತಿಂ ಚ ಷಾಡ್ಗುಣ್ಯವಿದುದಾರಧೀಃ ।
ದೇಶಕಾಲಬಲೋಪೇಯಾನ್ ಜ್ಞಾತ್ವಾ ವಿಗ್ರಹಮಾಚರೇತ್ ॥ ೨೯ ॥

ದೇಶಕಾಲವಿಹೀನಾನಿ ಕರ್ಮಾಣಿ ವಿಪರೀತವತ್ ।
ಕ್ರಿಯಮಾಣಾನಿ ದುಷ್ಯಂತಿ ಹವಿರಪ್ರಯತೇಷ್ವಿವ ॥ ೩೦ ॥

ಸಮ್ಯಗ್ವಿಜ್ಞಾತಶಾಸ್ತ್ರಾರ್ಥೋ ರಾಜಾ ವಿಜಯಮಾಚರೇತ್ ।
ಸಪ್ತಾಂಗರಾಜ್ಯತ್ರಾಣಂ ಚ ಬುದ್ಧ್ವಾ ವಾಽರಿವಿನಿಗ್ರಹಂ ॥ ೩೧ ॥

ಕುರ್ಯಾದೇವಾನ್ಯಥಾ ನಾಶಮುಪಯಾಂತಿ ಶಚೀಪತೇ ।
ವಿಶ್ವಾಸಯತಿ ಭೂತಾನಿ ನ ಚ ವಿಶ್ವಸತೇ ಕ್ವಚಿತ್ ॥ ೩೨ ॥

ಛಿದ್ರೇಷು ಯೋಽನ್ವಿಯಾಚ್ಛತ್ರುಂ ಸ ರಾಜ್ಯಂ ಮಹದಶ್ನುತೇ ।
ಸಾಂಪ್ರತಂ ಬದ್ಧಮೂಲೋಽಸೌ ತ್ವಂ ದೈವಾನವಲೋಕಿತಃ ॥ ೩೩ ॥

---

೨೯. ರಾಜನಾದವನು, ಷಡ್ಗುಣಪರಿಪೂರ್ಣನಾಗಿದ್ದು, ತನ್ನ ಮತ್ತು ಶತ್ರುಗಳ ಶಕ್ತಿಯನ್ನು ಪರ್ಯಾಲೋಚಿಸಿ, ದೇಶ, ಕಾಲ, ಬಲ, ಇವೇ ಮೊದಲಾದವುಗಳನ್ನರಿತು ಯುದ್ಧಮಾಡಬೇಕು.

೩೦. ದೇಶ, ಕಾಲಗಳನ್ನರಿಯದೇ ಮಾಡಿದ ಕೆಲಸಗಳು ವಿರುದ್ಧಫಲಪ್ರದಗಳಾಗುತ್ತವೆ. ಅವಿಧಿಯಾಗಿ ಹೋಮಮಾಡಿದ ಹವಿಸ್ಸಿನಂತೆ ವ್ಯರ್ಥವೂ ಆಗುವುದು.

೩೧-೩೨. ಶಾಸ್ತ್ರಾರ್ಥಗಳನ್ನು ತಿಳಿದು ಅದರಂತೆ ನಡೆದ ರಾಜನು ವಿಜಯಿಯಾಗುವನು. ತನ್ನ ಏಳು ಅಂಗಗಳನ್ನೂ, ರಾಜ್ಯವನ್ನೂ ರಕ್ಷಿಸಿಕೊಂಡು ಶತ್ರುವನ್ನು ನಿಗ್ರಹಿಸಬೇಕು. ಇಲ್ಲವಾದರೆ, ರಾಜನೇ! ರಾಜ್ಯವು ನಾಶವಾಗುವುದು. ಪ್ರಜೆಗಳು ರಾಜನನ್ನು ನಂಬುವರು. ಆದರೆ ರಾಜನು ಮಾತ್ರ ಪ್ರಜೆಗಳನ್ನು ಪ್ರೀತಿಸದೇ ಹೋಗುತ್ತಾನೆ. ಇದು ನ್ಯಾಯವಲ್ಲ.

೩೩. ಶತ್ರುವು ಜನಾನುರಾಗಿಯಾಗುವುದಕ್ಕೆ ಮುಂಚೆ, ಕಷ್ಟದಲ್ಲಿದ್ದಾಗ ಅವನನ್ನು ಸುಲಭವಾಗಿ ಗೆಲ್ಲಬಹುದು. ಅದರಿಂದ ರಾಜ್ಯಲಾಭವುಂಟು. ಈಗ ಶತ್ರುವು ಪ್ರಬಲನಾಗಿರುತ್ತಾನೆ. ನೀನಾದರೋ ದುರದೃಷ್ಟಶಾಲಿಯಾಗಿರುವೆ.

ಅತೋ ಯುದ್ಧಾವಕಾಶಂ ತೇ ನ ಪಶ್ಯಾಮಿ ಶತಕ್ರತೋ।
ಮತ್ಸಹಾಯಾಶ್ಚ ಯೇ ಶೂರಾಃ ಶಕ್ತಿಮಂತೋ ನಿರುತ್ಸುಕಾಃ ॥ ೩೪ ॥
ದುರ್ಧರ್ಷಾನಪಿ ತೇ ಶತ್ರೂನ್ ಜಯಂತ್ಯೇವ ಸದಾ ನೃಪಾಃ ।
ಪುರೋಧಸೈವಮುಕ್ತಸ್ತು ಪುನರಾಹ ಪುರಂದರಃ ॥ ೩೫ ॥
ಅಭಿಭೂತೋ ಭೃಶಂ ದೈತ್ಯೈರ್ನಾಹಂ ಜೀವಿತುಮುತ್ಸಹೇ ।
ಶತ್ರುಭಿರ್ವರ್ತಮಾನಸ್ಯ ಮೂರ್ಖಸ್ಯ ಸ್ತ್ರೀಜಿತಸ್ಯ ಚ ॥ ೩೬ ॥
ವ್ಯಾಧಿತಸ್ಯ ದರಿದ್ರಸ್ಯ ಶ್ರೇಯೋ ಮೃತ್ಯುರ್ನ ಜೀವಿತಂ ।
ಕಿಮತ್ರ ಬಹುನೋಕ್ತೇನ ಯೋತ್ಸ್ಯೇಽಹಂ ದಾನವೈಸ್ಸಹ ॥ ೩೭ ॥
ನೃಣಾಂ ಕರ್ಮಸಮಾರಂಭೇ ಶ್ರೇಯಸೀ ಹ್ಯೇಕಚಿತ್ತತಾ ।
ಗುಣದೋಷಾವುಭಾವೇತಾವೇಕೀಕೃತ್ಯ ವಿಚಕ್ಷಣಃ ॥ ೩೮ ॥
ಕಾರ್ಯಮಾರಭತೇ ಯಸ್ತು ತಸ್ಯ ದೋಷಾಃ ಪರಾಙ್ಮುಖಾಃ ॥

---

೩೪. ಆದ್ದರಿಂದ ದೇವೇಂದ್ರನೇ, ನೀನು ಈಗ ಯುದ್ಧಮಾಡುವುದು ನ್ಯಾಯವಾಗಿ ಕಾಣುವುದಿಲ್ಲ. ನಮಗೆ ಸಹಾಯಕರಾಗಿರುವ ರಾಜರು ಶೂರರು, ಶಕ್ತಿಯುಳ್ಳವರು. ಆದರೆ ಉತ್ಸಾಹ ಹೀನರಾಗಿರುವರು.

೩೫. ನಿನ್ನ ಶತ್ರುಗಳು ಎಷ್ಟೇ ಬಲಿಷ್ಠರಾಗಿದ್ದರೂ ಅವರನ್ನು ನಾಶಮಾಡುವ ಶಕ್ತಿ ಅವರಿಗಿದೆ. ಆದರೆ ಈಗ ಬೇಡ. ಮುಂದೆ ಅವರ ಸಹಾಯದಿಂದ ನೀನು ಜಯಶಾಲಿಯಾಗುವೆ". ಎಂದು ಹೇಳಿದ ಗುರುವಿನ ಮಾತನ್ನು ಕೇಳಿ ಇಂದ್ರನು ಪುನಃ ಹೇಳಲಾರಂಭಿಸಿದನು.

೩೬-೩೭. " ಓ ಗುರುವೇ, ನನಗೆ ಶತ್ರುಗಳಿಂದ ಬಹಳ ಅಪಮಾನವಾಗಿದೆ. ಶತ್ರುಗಳಿಂದ ಪೀಡಿತನಾದವನು, ಮೂರ್ಖನು, ಹೆಂಗಸರಿಗೆ ಅಧೀನನಾದವನು, ರೋಗಕ್ಕೆ ಸಿಕ್ಕಿದವನು, ದರಿದ್ರನು, ಇವರು ಬದುಕಿರುವುದಕ್ಕಿಂತ ಸಾಯುವುದು ಲೇಸು. ಆದ್ದರಿಂದ ನೀನು ಏನೇ ಹೇಳಿದರೂ ನಾನು ಈಗ ಯುದ್ಧಮಾಡಿಯೇ ಬಿಡುವೆನು.

೩೮. ಮನುಷ್ಯನು ಒಂದು ಕಾರ್ಯವನ್ನು ಪ್ರಾರಂಭಿಸಬೇಕಾದರೆ ಒಮ್ಮನಸ್ಸಿನಿಂದಾರಂಭಿಸುವುದು ಶ್ರೇಯಸ್ಕರವು. ಬುದ್ಧಿವಂತನಾದವನು ತನ್ನ ಗುಣಾವಗುಣಗಳನ್ನು ಒತ್ತಡಿಗಿಟ್ಟು ಕಾರ್ಯವನ್ನು ಪ್ರಾರಂಭಿಸಿಬಿಡಬೇಕು. ಹಾಗೆ ಆರಂಭಮಾಡಿದರೆ ಅವನ ದೋಷಗಳೆಲ್ಲವೂ ಬಯಲಾಗುವುವು.

ತಾವದ್ಭಯಸ್ಯ ಭೇತವ್ಯಂ ಯಾವದ್ಭಯಮನಾಗತಂ ।
ಆಗತಂ ತು ಭಯಂ ದೃಷ್ಟ್ವಾ ಯೋದ್ಧವ್ಯಂ ವಾಪ್ಯಭೀರುವತ್ ॥ ೩೯ ॥

ಮೃತಸ್ಯ ಜೀವತೋ ವಾಪಿ ನರಸ್ಯೇಹ ಪ್ರಯುಧ್ಯತಃ ।
ಶ್ರೇಯ ಏವ ಮಹದ್ಭಿಃ ಸ್ಯಾತ್ತಸ್ಮಾದ್ಯೋತ್ಸ್ಯಾಮ್ಯಹಂ ಪರೈಃ ॥ ೪೦ ॥

ತಯೋಸ್ಸಂವದತೋರೇವಂ ಬ್ರಹ್ಮಾಗತ್ಯೇದಮಬ್ರವೀತ್ ॥ ೪೧ ॥

ಮಾ ವಿಷಾದಂ ಕೃಥಾಃ ಶಕ್ರ ಶರಣಂ ವ್ರಜ ಪಾರ್ವತೀಂ ।
ಯಾ ಜಘ್ನೇ ಮಹಿಷಂ ದೈತ್ಯಂ ರುರುಂ ಚಿತ್ರಾಸುರಂ ಯಥಾ ॥ ೪೨ ॥

ಸಹ್ಯೋ ರಕ್ತಾಸುರಂ ಹತ್ವಾ ಸ್ವಂ ರಾಜ್ಯಂ ತೇ ಪ್ರದಾಸ್ಯತಿ ।
ಏವಮುಕ್ತ್ವಾ ಹರಿಂ ಬ್ರಹ್ಮಾ ತತ್ರೈವಾಂತರಧೀಯತ ॥ ೪೩ ॥

---

೩೯. ಒಬ್ಬನಿಗೆ ಭಯವು ಪ್ರಾಪ್ತವಾಗುವ ಪರ್ಯಂತ ಭಯಕ್ಕೆ ಹೆದರಬೇಕು. ಭಯವು ಒದಗಿದ ಮೇಲೆ ಧೀರನಂತೆ ಅದನ್ನು ಎದುರಿಸಬೇಕು.

೪೦-೪೧. ಯುದ್ಧದಲ್ಲಿ ಮನುಷ್ಯನು ಗೆದ್ದರೂ ಸತ್ತರೂ ಒಂದೇ ವಿಧವಾದ ಶ್ರೇಯಸ್ಸು. ಅದಕ್ಕಾಗಿಯೇ ನಾನು ಈಗ ಹೋರಾಟಕ್ಕೆ ನಿಲ್ಲುವೆನು." ಎಂದು ಇಂದ್ರನು ಬೃಹಸ್ಪತಿಯೊಡನೆ ಹೇಳುತ್ತಿರುವಾಗಲೇ ಬ್ರಹ್ಮನು ಅಲ್ಲಿಗೆ ಬಂದು ಹೀಗೆ ಹೇಳಿದನು.

೪೨. "ಎಲೈ ದೇವೇಂದ್ರನೇ, ವೃಥಾ ದುಃಖಿಸಬೇಡ. ಈಗ ಪಾರ್ವತೀ ದೇವಿಯನ್ನು ಮೊರೆಹೊಗು. ಆ ದೇವಿಯು ಹಿಂದೆ ಮಹಿಷಾಸುರ, ರುರು, ಚಿತ್ರಾಸುರ ಇವರೇ ಮೊದಲಾದ ರಾಕ್ಷಸರನ್ನು ಕೊಂದಿರುವಳು.

೪೩. ಈಗಲೂ ರಕ್ತಾಸುರನನ್ನು ಕೊಂದು ನಿನ್ನ ರಾಜ್ಯವನ್ನು ನಿನಗೆ ಕೊಡಿಸುವಳು. ಹೆದರಬೇಡ." ಎಂದು ಬ್ರಹ್ಮನು ಇಂದ್ರನಿಗೆ ಆಶ್ವಾಸನಕೊಟ್ಟು ಕಣ್ಮರೆಯಾದನು.

ಶಕ್ರೋಽಪಿ ತ್ರಿದಶೈಃ ಸಾರ್ಧಂ ಜಗಾಮ ಹಿಮವದ್ಗಿರಿಂ ।
ಸ ತತ್ರ ಗತ್ವಾ ಶರ್ವಾಣೀಂ ನಿರ್ಭಯೋ ವಿಗತಜ್ವರಃ ॥ ೪೪ ॥
ಸ್ತೋತ್ರೇಣಾನೇನ ತುಷ್ಟಾವ ಶಿವಾಂ ಶಂಕರವಲ್ಲಭಾಂ ।

॥ ಶಕ್ರ ಉವಾಚ ॥

ಜಯಾಕ್ಷರೇ ಜಯಾನಂತೇ ಜಯಾವ್ಯಕ್ತೇ ನಿರಾಮಯೇ ॥ ೪೫ ॥
ಜಯ ದೇವಿ ಮಹಾಮಾಯೇ ಜಯ ತ್ರಿದಶವಂದಿತೇ ।
ಜಯ ಭದ್ರೇ ವಿದೇಹಸ್ಥೇ ಜಯಾಽದ್ಯೇ ತ್ರಿಗುಣಾತ್ಮಿಕೇ ॥ ೪೬ ॥

ಜಯ ವಿಶ್ವಂಭರೇ ಗಂಗೇ ಜಯ ಸರ್ವಾರ್ಥಸಿದ್ಧಿದೇ ।
ಜಯ ಬ್ರಹ್ಮಾಣಿ ಕೌಮಾರಿ ಜಯ ನಾರಾಯಣೀಶ್ವರಿ ॥ ೪೭ ॥

ಜಯ ವಾರಾಹಿ ಚಾಮುಂಡೇ ಜಯೇಂದ್ರಾಣಿ ಮಹೇಶ್ವರಿ ।
ಜಯ ಮಾತರ್ಮಹಾಲಕ್ಷ್ಮಿ ಜಯ ಪಾರ್ವತಿ ಸರ್ವಗೇ ॥ ೪೮ ॥

---

೪೪. ಇದನ್ನು ಕೇಳಿ ಒಡನೆಯೇ ದೇವೇಂದ್ರನು ಹಿಮಾಲಯಕ್ಕೆ ಹೋಗಿ ಅಲ್ಲಿ ಭಯವಿಲ್ಲದೆ, ಜಿತಮನಸ್ಸಿನಿಂದ ಪಾರ್ವತಿಯನ್ನು ಕುರಿತು ತಪಸ್ಸುಮಾಡಿದನು.

೪೫-೪೬. ಆ ಸಮಯದಲ್ಲಿ ಇಂದ್ರನು ಈ ರೀತಿಯಾಗಿ ದೇವಿಯನ್ನು ಸ್ತುತಿಸಲಾರಂಭಿಸಿದನು. “ನಾಶರಹಿತಳೂ, ಆದ್ಯಂತವಿಲ್ಲದವಳೂ, ಅವ್ಯಕ್ತವಾದ ಆಕಾರದಿಂದ ಕೂಡಿ ಮಾಯಾಸ್ವರೂಪಿಣಿಯಾಗಿ ಲೋಕವನ್ನು ಆವರಿಸಿರುವವಳೂ ಆದ ದೇವಿಯೇ, ನಿನಗೆ ಜಯವಾಗಲಿ. ದೇವಿಯೇ! ನೀನು ಮಂಗಳರೂಪಿಣಿಯು. ದೇವವಂದ್ಯಳು. ವಿದೇಹರಾಜ ಪುತ್ರಿಯು. ಗುಣತ್ರಯ ಯುಕ್ತಳಾಗಿ ಆದಿಮಾತೆಯಾಗಿರುವವಳು ನೀನು.

೪೭ ಲೋಕರಕ್ಷಕಳೇ, ಸರ್ವಾರ್ಥಸಿದ್ಧಿಪ್ರದಳೇ, ನಿನಗೆ ಮಂಗಳವು. ಬ್ರಾಹ್ಮೀ ಮಾಹೇಶ್ವರೀ, ಕೌಮಾರಿ, ವೈಷ್ಣವೀ ರೂಪದಿಂದಿರುವವಳೇ, ನಿನಗೆ ಜಯವಾಗಲಿ.

೪೮-೪೯. ವಾರಾಹಿ, ಚಾಮುಂಡಾ, ಇಂದ್ರಾಣಿ, ಮಹೇಶ್ವರಿ ಇವೆಲ್ಲವೂ ನಿನ್ನ ನಾಮಾಂತರಗಳು. ತಾಯಿಯಾದ ಮಹಾಲಕ್ಷ್ಮಿಯೇ, ಪಾರ್ವತಿಯೇ, ಸರ್ವವ್ಯಾಪಿನಿಯೇ, ಲೋಕದಲ್ಲಿ ಹಿರಿಯವಳೇ, ನಿನಗೆ ಜಯವಾಗಲಿ. ತೇಜೋವತಿ

ಜಯ ದೇವಿ ಜಗಜ್ಜ್ಯೇಷ್ಠೆ ಜಯೈರಾವತಿ ಭಾರತಿ ।
ಷ್ಯೃಗಾವತಿ ಜಯಾನಂತೇ ತೇಜೋವತಿ ಜಯಾಮಲೇ ॥ ೪೯ ॥

ಜಯೇಶಾನಿ ಶಿವೇ ಸರ್ವೇ ಜಯ ನಿತ್ಯೇ ಜಯಾರ್ಚಿತೇ ।
ಮೋಕ್ಷದೇ ಜಯ ಸರ್ವಜ್ಞೇ ಜಯ ಧರ್ಮಾರ್ಥಕಾಮದೇ ॥ ೫೦ ॥

ಜಯ ಗಾಯತ್ರಿ ಕಲ್ಯಾಣಿ ಜಯ ಸಂಧ್ಯೇ ವಿಭಾವರಿ ।
ಜಯ ದುರ್ಗೇ ಮಹಾಕಾಳೀ ಶಿವದೂತೀ ಜಯಾಜಯೇ ॥ ೫೧ ॥

ಜಯ ದಂಡಮಹಾಮುಂಡೇ ಜಯ ನಂದೇ ಶಿವಪ್ರಿಯೇ ।
ಜಯ ಕ್ಷೇಮಂಕರಿ ಶಿವೇ ಜಯ ಭ್ರಾಮಣಿ ರೇವತಿ ॥ ೫೨ ॥

ಜಯೋ ಮೇ ಸಾಧ್ವಿ ಮಾಂಗಲ್ಯೇ ಹರಸಿದ್ಧೇ ನಮೋಸ್ತು ತೇ ।
ಜಯಾನಂದೇ ಮಹಾವರ್ಣೇ ಮಹಿಷಾಸುರಘಾತಿನಿ ॥ ೫೩ ॥

ಜಯಾನಘೇ ವಿಶಾಲಾಕ್ಷೀ ಜಯಾನಂಗೇ ಸರಸ್ವತೀ ।
ಜಯಾಶೇಷಗುಣಾವಾಸೇ ಜಯ ವೃತ್ರಾಸುರಾಂತಕೇ ॥ ೫೪ ॥

ಯಾಗಿ, ಅಮಲಕೀರ್ತಿಯುತಳಾಗಿ, ಈಶಾನಪತ್ನಿಯಾಗಿ, ನಿತ್ಯಾರ್ಚಿತಳಾಗಿ, ಸರ್ವಜ್ಞರೂಪಿಣಿಯಾಗಿರುವ ದೇವಿಯೇ, ನೀನು ಸಕಲರಿಗೂ ಮೋಕ್ಷಪ್ರದಾತಳಲ್ಲವೇ? ಧರ್ಮಾರ್ಥಕಾಮಗಳನ್ನು ಸುಲಭವಾಗಿ ಅನುಗ್ರಹಿಸುವವಳಲ್ಲವೇ ?

೫೨. ಸಾವಿತ್ರೀದೇವಿಯೇ ನಿನಗೆ ಜಯವು. ಕಲ್ಯಾಣಿಯಾಗಿ ಸಂಧ್ಯಾ, ರೂಪಿಣಿಯಾಗಿ, ರಾತ್ರೀದೇವಿಯಾಗಿ ದುರ್ಗಿಯೆನಿಸಿರುವ ಮಹಾಕಾಳಿಯೇ, ಶಿವ ದೂತಿಯೇ ನಿನಗೆ ಮಂಗಳವು. ದಂಡನೆಯಲ್ಲಿ ಮುಖಂಡಳಾಗಿರುವ, ಜಗದಾನಂದ ದಾಯಿನಿಯಾದ, ಲೋಕಕ್ಷೇಮವನ್ನುಂಟುಮಾಡುವ, ಲೋಕವನ್ನೇ ಚಲನೆಗೊಳಿಸುವ ಶಾಂತರೂಪಿಣಿಯಾದ ಶಕ್ತಿದೇವತೆಯೇ, ನನ್ನನ್ನು ರಕ್ಷಿಸು,

೫೩-೫೪. ಉಮಾದೇವಿಯೇ, ಮಂಗಳ ಪ್ರದಳಾದ ಸಾಧ್ವಿಯೇ, ಹರನ ಅರ್ಧಾಂಗಿಯೇ, ನಿನಗೆ ವಂದನೆಯು. ಆನಂದದಾಯಿನಿಯಾಗಿ, ಮಹಿಷಾಸುರ ಮರ್ದಿನಿಯಾಗಿ, ಅನಘರೂಪಳಾಗಿರುವ, ವಿಶಾಲಾಕ್ಷಿಯೇ, ಮನ್ಮಥರೂಪಿಣಿಯೇ ನಿನಗೆ ಮಂಗಳವು. ದೇವಿಯೇ, ನಿನ್ನಲ್ಲಿ ಸಮಸ್ತಗುಣಗಳೂ ಅಡಗಿವೆ. ವೃತ್ರಾಸುರ ನನ್ನು ನಾಶಪಡಿಸಿದವಳೂ ನೀನೇ ಅಲ್ಲವೆ !

ಜಯ ಯೋಗೇಶಿ ಸಂಕಲ್ಪೆ ಜಯ ತ್ರೈಲೋಕ್ಯಸುಂದರಿ ।
ಜಯ ಶುಂಭನಿಶುಂಭಘ್ನೇ ಜಯ ಪದ್ಮೇಂದುಸಂಭವೇ ॥ ೫೫ ॥

ಜಯ ಕೌಶಿಕಿ ಕೌಮಾರಿ ಜಯ ವಾರುಣಿ ಕಾಮದೇ ।
ನಮೋ ನಮಸ್ತೇ ಶರ್ವಾಣಿ ಭೂಯೋ ಭೂಯೋ ಜಯಾಂಬಿಕೇ ॥ ೫೬ ॥

ತ್ರಾಹಿ ನಸ್ತ್ರಾಹಿ ನೋ ದೇವಿ ಶರಣಾಗತವತ್ಸಲೇ ।
ಯ ಇಮಾಂ ಕೀರ್ತಯಿಷ್ಯಂತಿ ಜಯ ಮಾಲಾಂ ಭವಾನಿ ತೇ ॥ ೫೭ ॥

ತ್ರಿವಿಧೈರಪಿ ದುಃಖೌಘೈರ್ಮುಚ್ಯಂತೇ ಪರಮೇಶ್ವರಿ ।
ಸರ್ವಪಾಪವಿನಿರ್ಮುಕ್ತಾಃ ಸರ್ವೈಶ್ವರ್ಯಸಮನ್ವಿತಾಃ ॥ ೫೮ ॥

ಭಾಂತಿ ಲೋಕೇ ತಥಾಽಽದಿತ್ಯಾಃ ಸರ್ವರೋಗವಿವರ್ಜಿತಾಃ ।
ದೇಹಾವಸಾನೇ ತೇಽವಶ್ಯಂ ಪಶ್ಯಂತ್ಯೇವ ಹಿ ಪಾರ್ವತೀಂ ॥ ೫೯ ॥

೫೫-೫೬. ಯೋಗಶಾಸ್ತ್ರಾಧಿದೇವಿಯೇ, ಮೂರುಲೋಕಕ್ಕೂ ಸುಂದರಿಯಾಗಿರುವವಳೇ, ಶುಂಭನಿಶುಂಭರೆಂಬ ರಾಕ್ಷಸರನ್ನು ನಾಶಮಾಡಿದವಳೇ, ಪದ್ಮದಲ್ಲಿಯೂ ಚಂದ್ರನಲ್ಲಿಯೂ ನೆಲಸಿರುವವಳೇ, ನೀನು ಜಯಶಾಲಿನಿಯಾಗು. ಕೌಶಿಕಿಯೆನಿಸಿ ಕುಮಾರ್ಯಾವಸ್ಥೆಯಲ್ಲಿದ್ದು, ಮದ್ಯದಭಿಮಾನಿಯಾಗಿ ಭಕ್ತರ ಇಷ್ಟಾರ್ಥಗಳನ್ನು, ಒದಗಿಸುವಂತಹ ದೇವಿಯೇ, ನಿನ್ನನ್ನು ಬಾರಿಬಾರಿಗೂ ವಂದಿಸುವೆನು. ಅಂಬಿಕೆಯೇ, ನೀನು ಜಯಶಾಲಿನಿಯಾಗು.

೫೭. ಎಲೈ ದೇವಿಯೇ, ಶರಣಾಗತವತ್ಸಲೆಯೇ, ನನ್ನನ್ನು ರಕ್ಷಿಸು, ನಮ್ಮನ್ನು ಕಾಪಾಡು. ಯಾರು ಈ ದೇವಿಯ ಜಯಮಾಲೆಯನ್ನು ಭಕ್ತಿಯಿಂದ ಪಠಿಸುವರೋ,

೫೮-೫೯. ಅವರು ತಾಪತ್ರಯಗಳಿಂದ ಮುಕ್ತರಾಗುವರು. ಸಮಸ್ತ ಪಾಪಗಳೂ ಅವರಿಂದ ದೂರವಾಗುವುವು. ಸಮಸ್ತೈಶ್ವರ್ಯಗಳೂ ಅವರನ್ನು ಹೊಂದುವುವು. ಲೋಕದಲ್ಲಿ ಅವರು ಸೂರ್ಯನಂತೆ ಹೊಳೆಯುತ್ತಾ, ಸಮಸ್ತ ರೋಗಗಳಿಂದ ವಿವರ್ಜಿತರಾಗಿ, ದೇಹಾವಸಾನದಲ್ಲಿ ಅವಶ್ಯವಾಗಿ ಸಾಕ್ಷಾತ್ಪರಮೇಶ್ವರಿಯ ದರ್ಶನವನ್ನು ಪಡೆಯುವರು.

ನೇಂದ್ರಿಯಾಣಾಂ ವಿಕಲತಾ ಯಥಾನ್ಯೇಷಾಂ ಭವೇನ್ನೃಣಾಂ।
ದೇವೀಲೋಕಂ ಗಮಿಷ್ಯಂತಿ ಸ್ಕಂದಲೋಕೋಪರಿ ಸ್ಥಿತಂ　　॥ ೬೦ ॥
ಪುನರಾವೃತ್ತಿರಹಿತಂ ಸ್ತೋತ್ರಜಾಪ್ಯಾನ್ನ ಸಂಶಯಃ ॥

॥ ಸೂತ ಉವಾಚ ॥

ಸ್ಯೈವಂ ಸ್ತುತಾ ಭಗವತೀ ಮಹೇಂದ್ರೇಣಾಥ ಪಾರ್ವತೀ ।
ಆತ್ಮಾನಂ ದರ್ಶಯಾಮಾಸ ಸರ್ವಾಲಂಕರಣಾನ್ವಿತಂ　　॥ ೬೧ ॥

ನಮಸ್ಕೃತ್ಯಾಥ ತಾಮೂಚುಃ ಸುರಾಸ್ತೇ ಭಯನಾಶನೀಂ।
ಹತ್ವಾ ರಕ್ತಾಸುರಂ ದೈತ್ಯಂ ಪಾಹಿ ನೋ ಮಹತೋ ಭಯಾತ್　　॥ ೬೨ ॥

ತೇಷಾಂ ತದ್ವಚನಂ ಶ್ರುತ್ವಾ ದತ್ವಾ ತೇಭ್ಯೋಽಭಯಂ ತತಃ।
ಬಭೂವಾದ್ಭುತರೂಪಾ ಸಾ ತ್ರಿನೇತ್ರಾ ಚಂದ್ರಶೇಖರಾ　　॥ ೬೩ ॥

---

೬೦. ಈ ಜಯಮಾಲಾಸ್ತೋತ್ರಪಠನೆಯಿಂದ ಮನುಷ್ಯರಿಗೆ ಇಂದ್ರಿಯ ವೈಕಲ್ಯಗಳುಂಟಾಗುವದಿಲ್ಲ. ಅದೂ ಅಲ್ಲದೆ ಅಂಥ ಭಕ್ತರು ಪುನಃ ಆವೃತ್ತಿಯಿಲ್ಲದಿರುವ ಸ್ಕಂದಲೋಕದ ಮೇಲಿರುವ, ದೇವೀಲೋಕವನ್ನು ಹೊಂದುವರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

೬೧. ಹೀಗೆ ಇಂದ್ರನಿಂದ ಪ್ರಾರ್ಥಿಸಲ್ಪಟ್ಟ ದೇವಿಯು ಪ್ರತ್ಯಕ್ಷಳಾಗಿ, ತನ್ನ, ಸರ್ವಾಲಂಕಾರ ಪೂರ್ಣವಾದ ದಿವ್ಯರೂಪವನ್ನು ತೋಪ-ಡಿಸಿದಳು.

೬೨. ಒಡನೆಯೇ ಅಲ್ಲಿದ್ದ ದೇವತೆಗಳೆಲ್ಲರೂ ಭಯನಾಶಕಳಾದ ಆ ದೇವಿಯನ್ನು ವಂದಿಸಿ, ದುಷ್ಟನಾದ ರಕ್ತಾಸುರನನ್ನು ಕೊಂದು, ತಮಗೊದಗಿರುವ ಭಯವನ್ನು ತಪ್ಪಿಸಿ ಕಾಪಾಡಬೇಕೆಂದು ಕೇಳಿಕೊಂಡರು.

೬೩-೬೪. ಅವರ ಮಾತನ್ನು ಕೇಳಿ ದೇವಿಯು ದಯಾದ್ರ್ರಹೃದಯಳಾಗಿ ರಕ್ತಾಸುರನನ್ನು ಸಂಹರಿಸಲು ತಕ್ಕ ವೇಷವನ್ನು ಧರಿಸಿಕೊಂಡಳು. ಈಶ್ವರನಂತೆ

ಸಿಂಹಾರೂಢಾ ಮಹಾದೇವೀ ನಾನಾಶಸ್ತ್ರಾಸ್ತ್ರಧಾರಿಣೀ ।
ಸುವಕ್ತ್ರಾ ವಿಂಶತಿಭುಜಾ ಸ್ಫೂರ್ಜಾ ವಿದ್ಯುಲ್ಲತೋಪಮಾ ॥ ೬೪ ॥

ತತೋಂಬಿಕಾ ನನಾದೋಚ್ಚೈಃ ಸಾಟ್ಟಹಾಸಂ ಮುಹುರ್ಮುಹುಃ ।
ತಸ್ಯಾ ನಾದೇನ ಘೋರೇಣ ಕೃತ್ಸ್ನಮಾಪೂರಿತಂ ಜಗತ್ ॥ ೬೫ ॥

ಪ್ರಕಂಪಿತಾಖಿಲಾ ಚೋರ್ವೀ ತದಾ ವಾರಿಧಿಮೇಖಲಾ ।
ಶೈಲೋತ್ತುಂಗಸ್ತನಾ ರಮ್ಯಾ ಪ್ರಮದೇವ ಭಯಾತುರಾ ॥ ೬೬ ॥

ತೇಪಿ ತತ್ರಾಸುರಾಃ ಪ್ರಾಪ್ತಾಶ್ಚತುರಂಗಬಲೋತ್ಕಟಾಃ ।
ಸಮ್ಯಗ್ವಿದಿತವೃತ್ತಾಂತಾಃ ಕಾಲಾಂತಕಯಮೋಪಮಾಃ ॥ ೬೭ ॥

ರಕ್ಷೋದಾನವದೈತ್ಯಾಶ್ಚ ಪಾತಾಲೇಷ್ವಪಿ ಯೇ ಸ್ಥಿತಾಃ ।
ತೇ ಸರ್ವ ಏವ ದೈತ್ಯೇಂದ್ರಂ ಕೋಟಿಶಸ್ತಮುಪಾಗತಾಃ ॥ ೬೮ ॥

ತಾನೂ ಅಗ್ನಿನೇತ್ರವನ್ನೂ, ಶಿರಸ್ಸಿನಲ್ಲಿ ಬಾಲಚಂದ್ರನನ್ನೂ ಧರಿಸಿ, ಸಿಂಹವಾಹಿನಿಯಾಗಿ, ಶಾಸ್ತ್ರಾರ್ಥದಲ್ಲಿ ವಿವೃತವಾಗಿರುವ ಲಕ್ಷಣಗಳಿಂದ ಕೂಡಿ, ಇಪ್ಪತ್ತು ತೋಳುಗಳು, ತೇಜಸ್ಸುಳ್ಳ ಮುಖ, ಇವುಗಳನ್ನು ಹೊಂದಿ ಶಸ್ತ್ರಾಸ್ತ್ರಗಳನ್ನೂ ಧರಿಸಿ ಮಿಂಚಿನಂತೆ ಚಲಿಸಲು ಉದ್ಯುಕ್ತಳಾದಳು.

೬೫. ಅದಾದ ಒಡನೆಯೇ ಒಂದು ಸಾರಿ ದರ್ಪದಿಂದ ಗರ್ಜನೆ ಮಾಡಿದಳು. ಆ ಗರ್ಜನೆಯು ಲೋಕದಲ್ಲೆಲ್ಲಾ ಮುಸುಕಿ ಎಲ್ಲರಿಗೂ ಭಯೋದ್ರೇಕವಾಗುವಂತೆ ಮಾಡಿತು.

೬೬. ಈ ದೇವಿಯ ಗರ್ಜನೆಗೆ ಭೂಮಿಯು ನಡುಗಿತು. ಸಮುದ್ರರಶನೆಯಾದ ಭೂದೇವಿಯು, ಶೈಲಗಳೆಂಬ ಎತ್ತರವಾದ ಸ್ತನಗಳಿಂದ ಕೂಡಿ ಭಯಚಕಿತಳಾದ ಸ್ತ್ರೀಯಂತೆ ಹೆದರಿಬಿಟ್ಟಳು.

೬೭. ಆ ಕಾಲಕ್ಕೆ ಸರಿಯಾಗಿ ಯಮನಂತಿರುವ ರಾಕ್ಷಸರ ತಂಡವು ಈ ವಿಷಯವನ್ನು ತಿಳಿದು ಚತುರಂಗಬಲಸಮೇತವಾಗಿ ಅಲ್ಲಿಗೆ ಬಂದು ನೆರೆಯಿತು.

೬೮. ರಾಕ್ಷಸರು, ದೈತ್ಯರು, ದಾನವರು, ಮತ್ತು ಪಾತಾಳವಾಸಿಗಳಾದ ಇತರ ರಾಕ್ಷಸರು, ಇವರೆಲ್ಲರೂ ಕೋಟಿಸಂಖ್ಯೆಯುಳ್ಳವರಾಗಿ ರಕ್ತಾಸುರನನ್ನು ಹಿಂಬಾಲಿಸಿ ಬಂದರು.

ದೇವಾರಯಸ್ತದಾ ಸರ್ವೇ ಸಂನದ್ಧಾಶ್ಚೋಚ್ಛ್ರಿತಧ್ವಜಾಃ ।
ಪಾಲಿತಾ ದಾನವೇಂದ್ರೇಣ ನಾನಾಶಸ್ತ್ರಾಸ್ತ್ರಪಾಣಯಃ ॥ ೬೯ ॥

ತಮಾಲಾಲಿಕುಲಾಭಾಸಾ ಜೀಮೂತಧ್ವನಿನಿಃಸ್ವನಾಃ ।
ಯುಗಾಂತಮಿವ ಕುರ್ವಾಣಾ ನಾನಾಲಂಕಾರಭೂಷಿತಾಃ ॥ ೭೦ ॥

ಗಜಘಂಟಾರವೈಶ್ಚೋಗ್ರೈಃ ಹಯಾನಾಮಥ ಹೇಷಿತೈಃ ।
ಸಿಂಹನಾದೈಶ್ಚ ಶೂರಾಣಾಂ ಶಸ್ತ್ರಾಣಾಂ ಕ್ವಣಿತೇನ ಚ ॥ ೭೧ ॥

ರಥನೇಮಿನಿನಾದೈಶ್ಚ ಕಂಪಯಂತೋ ವಸುಂಧರಾಂ ।
ತತಸ್ತೇ ದಾನವಾಸ್ಸರ್ವೇ ದೇವೀಂ ದೃಷ್ಟ್ವಾ ಪ್ರಹರ್ಷಿತಾಃ ॥ ೭೨ ॥

ಆಸ್ಫೋಟಯಂತಃ ಪಟಹಾನ್ ಭೇರೀಜರ್ಜರಿಣೀಮುಖಾನ್ ।
ಅನೇಕಾನ್ವಾದಯಂತೋಽನ್ಯೇ ಶಂಖಡಮರುಡಿಂಡಿಮಾನ್ ॥ ೭೩ ॥

---

೬೯. ಅವರೆಲ್ಲರೂ ರಕ್ತಾಸುರನಿಂದ ಪಾಲಿಸಲ್ಪಟ್ಟವರಾಗಿದ್ದರು. ಅಲ್ಲದೆ ನಾನಾವಿಧವಾದ ಅಸ್ತ್ರಪ್ರತ್ಯಸ್ತ್ರಗಳಿಂದ ಕೂಡಿ, ಧ್ವಜಪತಾಕಾದಿಗಳಿಂದ ಶೋಭಿತರಾಗಿ ಯುದ್ಧಸನ್ನದ್ಧರಾಗಿಯೇ ಬಂದರು.

೭೦. ಅವರ ದೇಹಕಾಂತಿಯು ಹೊಂಗೆಯಮರದ ಮತ್ತು ಭ್ರಮರರಾಶಿಯ ಕಾಂತಿಯಂತೆ ಕಪ್ಪಾಗಿ ಹೊಳೆಯುತ್ತಿತ್ತು. ಅವರ ಧ್ವನಿಯು ಮೇಘ ಧ್ವನಿಯಂತೆ ಉನ್ನತವಾಗಿತ್ತು. ಸಮಸ್ತಾಭರಣಗಳಿಂದಲಂಕೃತರಾಗಿ, ಪ್ರಳಯಕಾಲದ ಘನ ಗರ್ಜನೆ ಮಾಡುತ್ತಾ ಮುಂದುವರಿದರು.

೭೧. ಆನೆಗಳ ಘಂಟಾಧ್ವನಿ, ಕುದುರೆಗಳ ಹೇಷಾಧ್ವನಿ, ಶೂರರ ಸಿಂಹನಾದ, ಶಸ್ತ್ರಗಳ ಘರ್ಷಣಧ್ವನಿ, ಇವೆಲ್ಲವೂ ಭಯಂಕರವಾಗಿಯೇ ಇದ್ದವು.

೭೨. ರಥಚಕ್ರಧ್ವನಿಯಂತೂ ಮೇಲಿನ ಸಮೂಹಗಳಿಂದ ಕೂಡಿ ಭೂಮಿಯನ್ನು ನಡುಗಿಸುತ್ತಿತ್ತು. ರಾಕ್ಷಸರೆಲ್ಲರೂ ಒಟ್ಟಾಗಿ ಈ ದೇವಿಯನ್ನು ನೋಡಿ ಅತ್ಯಂತ ಹರ್ಷಿತರಾದರು.

೭೩. ತಮ್ಮಟೆಗಳನ್ನೂ ಭೇರಿಗಳನ್ನೂ ಬಹಳವಾಗಿ ಹೊಡೆದು ಕೆಲವರು ಆರ್ಭಟಿಸಿದರು. ಮತ್ತೆ ಕೆಲವರು ನಾನಾವಿಧವಾದ ಶಂಖ, ಡಮರು, ಡಿಂಡಿಮ ಇವೇ ಮೊದಲಾದ ವಾದ್ಯವಿಶೇಷಗಳನ್ನು ಬಾರಿಸಿದರು.

ಮನೋಜವೈರ್ಹಯೈರ್ಜಾತ್ಯೈರ್ಗಜೈಶ್ಚಾಚಲಸಂನಿಭೈಃ ।
ಅನ್ಯೈರ್ವಿಚಿತ್ರೈರಾರೂಢಾ ವಿರೇಜುರ್ದೈತ್ಯಪುಂಗವಾಃ ॥ ೭೪ ॥

ಏವಂ ವಿಧೇ ಸಮಾಜೇ ತಾಂ ಭವಾನೀಂ ತ್ರಿದಶಾರಯಃ ।
ಸರ್ವ ಏವ ಸಮಾಜಘ್ನುಃ ಶರ್ವಾಣೀಂ ಸರ್ವತೋಮುಖಂ ॥ ೭೫ ॥

ಬಾಣೈರ್ನಾನಾವಿಧೈರ್ಘೋರೈರ್ಯಮದಂಡೋಪಮೈಸ್ಸಿತೈಃ
ಕುಠಾರಚಕ್ರಪರಶುಮುಸಲಾಂಕುಶಲಾಂಗಲೈಃ ॥ ೭೬ ॥

ಪಾಶತೋಮರಶೂಲೈಶ್ಚ ದಂಡಪಟ್ಟಿಶಮುದ್ಗರೈಃ ।
ಪರಿಘಪ್ರಾಸಶಕ್ತ್ಯೃಷ್ಟಿಶತಘ್ನೀಕಣಪೋಪಲೈಃ ॥ ೭೭ ॥

ಅಯೋಗುಡೈರ್ಭುಶುಂಡೀಭಿಶ್ಚಕ್ರಕುಂತಗದಾದಿಭಿಃ ।
ಛಾದಯಂತೋ ಮಹಾದೇವೀಂ ಸಿಂಹನಾದಾನ್ವಿನೇದಿರೇ ॥ ೭೮ ॥

---

೭೪. ಮನೋವೇಗವುಳ್ಳ ಜಾತೀ ಕುದುರೆಗಳನ್ನೂ, ಬೆಟ್ಟದಂತಿರುವ ಆನೆಗಳನ್ನೂ, ಇನ್ನೂ ವಿಧವಿಧವಾದ ವಾಹನಗಳನ್ನೂ ಹತ್ತಿದವರಾಗಿ ರಾಕ್ಷಸರೆಲ್ಲರೂ ಶೋಭಿಸುತ್ತಿದ್ದರು.

೭೫. ಹೀಗೆ ಭಯಂಕರರಾದ ರಾಕ್ಷಸರು ಮಧ್ಯದಲ್ಲಿ ನಿಂತಿದ್ದ ಭವಾನೀದೇವಿಯನ್ನು ನೋಡುತ್ತಲೇ, ತಮ್ಮ ತಮ್ಮ ಭಯಂಕರವಾದ ಅಸ್ತ್ರಾದಿಗಳಿಂದ ಸರ್ವತೋಮುಖವಾಗಿ ಹೊಡೆಯಲು ಆರಂಭಿಸಿದರು.

೭೬-೭೮. ರಾಕ್ಷಸರು, ನಾನಾವಿಧವಾದ ಬಾಣಗಳಿಂದಲೂ, ಯಮದಂಡದಂತಿರುವ ಕುಠಾರ, ಚಕ್ರ, ಪರಶು, ಒನಕೆ, ಅಂಕುಶ, ಲಾಂಗಲವೆಂಬ ಆಯುಧ, ಪಾಶ, ತೋಮರ, ಶೂಲ, ದಂಡ, ಪಟ್ಟಿಶ, ಮುದ್ಗರ, ಪರಿಘ, ಪ್ರಾಸ, ಶಕ್ತಿ, ಋಷ್ಟಿ ಶತಘ್ನ, ಕಣಪ, ಉಪಲ, ಕಬ್ಬಿಣದ ಗುಂಡು, ಭುಶುಂಡೀ, ಚಕ್ರ, ಕುಂತ, ಗದೆ, ಇವೇ ಮೊದಲಾದ ಆಯುಧಗಳಿಂದಲೂ, ದೇವಿಯನ್ನು ಹೊಡೆಯುತ್ತಾ ಸಿಂಹನಾದ ಮಾಡುತ್ತಾ ರಾಕ್ಷಸರು ಮುಂದುವರಿಯುತ್ತಿದ್ದರು.

ತಾ ಹನ್ಯಮಾನಾ ರೋಷೇಣ ಜಜ್ವಾಲ ಸಮರೇಂಬಿಕಾ ।
ಅಗ್ರಸತ್ಸಾsಥ ಶರ್ವಾಣೀ ಶಸ್ತ್ರಾಸ್ತ್ರಾಣಿ ಸುರದ್ವಿಷಾಂ ॥ ೭೯ ॥

ಶೈಲೇಂದ್ರತನಯಾ ದೇವೀ ಸ್ತೂಯಮಾನಾ ಸುರರ್ಷಿಭಿಃ ।
ಯುಯುಧೇ ದಾನವೈಃ ಸಾರ್ಧಂ ಮಹಾಸಮರದುರ್ದಿನೇ ॥ ೮೦ ॥

ತೇ ಹನ್ಯಮಾನಾಃ ಪಾರ್ವತ್ಯಾ ತಾಮೇವಾಭಿಪ್ರದುದ್ರುವುಃ ।
ಪರಿಪೂರ್ಣೇ ಯಥಾ ಕಾಲೇ ಶಲಭಾ ಜಾತವೇದಸಂ ॥ ೮೧ ॥

ಸೈಕಾ ಪ್ರದ್ರವತೀ ತೇಷಾಂ ಬಹೂನಾಮಾತತಾಯಿನಾಂ ।
ದಧಾರ ವೇಗಂ ಸರ್ವೇಷಾಂ ಮರುತಾಮಿವ ಪರ್ವತಃ ॥ ೮೨ ॥

ಪಾರ್ವತೀಶಸ್ತ್ರನಿರ್ಭಿನ್ನಾ ದೈತ್ಯಾಸ್ತೇ ಕ್ಷತಜೇಕ್ಷಣಾ ।
ಆಲಿಂಗ್ಯ ಶೇರತೇ ಕ್ಷೋಣೀಂ ರತೇ ಕಾಂತಾಮಿವ ಪ್ರಿಯಾಂ ॥ ೮೩ ॥

---

೭೯. ಇಂತಹ ರಾಕ್ಷಸರನ್ನು ಶರ್ವಾಣಿಯು ಕೋಪದಿಂದ ಸುಡುತ್ತಿದ್ದಳು. ಅಲ್ಲದೆ ಅವರು ಪ್ರಯೋಗಿಸುತ್ತಿದ್ದ ಶಸ್ತ್ರಾಸ್ತ್ರಗಳನ್ನೆಲ್ಲಾ ಒಂದೇ ಸಾರಿ ನುಂಗಿಹಾಕುತ್ತಿದ್ದಳು.

೮೦. ದೇವರ್ಷಿಗಳಿಂದ ಸ್ತುತಿಸಲ್ಪಟ್ಟ ದೇವಿಯು, ಮಳೆಯಂತೆ ಸುರಿಯುತ್ತಿರುವ ಬಾಣಗಳುಳ್ಳ ರಣರಂಗದಲ್ಲಿ, ದೈತ್ಯರೊಡನೆ ಘೋರವಾಗಿ ಯುದ್ಧಮಾಡಲಾರಂಭಿಸಿದಳು.

೮೧. ಪಾರ್ವತಿಯು ಆ ಎದುರಿಸಿ ಬರುತ್ತಿರುವ ರಾಕ್ಷಸರನ್ನೆಲ್ಲಾ ಕೊಲ್ಲಲಾರಂಭಿಸಿದಳು. ಕೆಲವು ಹೊತ್ತಿಗೆ ಪತಂಗದ ಹುಳುಗಳು ಅಗ್ನಿಯನ್ನು ಎದುರಿಸಿ ನಾಶವಾಗುವಂತೆ ಅನೇಕರು ಪಾರ್ವತಿಯಿಂದ ಹತರಾದರು.

೮೨. ಅಷ್ಟಾದರೂ ಇನ್ನೂ ಸಾಯಲಿಚ್ಛೆಯಿಂದ ಬರುತ್ತಿರುವ ಸಮಸ್ತ ರಾಕ್ಷಸರ ವೇಗವನ್ನೆಲ್ಲಾ, ಗಾಳಿಯ ವೇಗವನ್ನು ತಡೆಯುವ ಪರ್ವತದಂತೆ ತಡೆದು ನಿಲ್ಲಿಸಿದಳು.

೮೩. ಪಾರ್ವತಿಯ ಬಾಣಗಳ ಏಟಿಗೆ ಮೃತರಾದ ರಾಕ್ಷಸರು, ರತಿಕಾಲದಲ್ಲಿ ಪತ್ನಿಯನ್ನಾಲಂಗಿಸುವಂತೆ, ಭೂಮಿಯನ್ನು ಆಲಿಂಗಿಸಿಕೊಂಡು ಸತ್ತುಬಿದ್ದರು.

ಮಂಡಲೀಕೃತಕೋದಂಡಾಂ ದದೃಶುಶ್ಚಾಂಬಿಕಾಂ ತದಾ ।
ಮೃತ್ಯುಜಿಹ್ವೋದಿತಾಕಾರಾಂ ಪ್ರಾಣಕರ್ಷಣತತ್ಪರಾಂ ॥ ೮೪ ॥

ಜಘ್ನುಸ್ತೇ ಕೋಟಿಶೋ ದೈತ್ಯಾಃ ಪಾರ್ವತೀಂ ಸಮರಾಂಗಣೇ ।
ಹುಂಕಾರೇಣ ನಿನಾದೇನ ಪಾತಯಂತೀ ಸಹಸ್ರಶಃ ॥ ೮೫ ॥

ಪ್ರಚಿಚ್ಛೇದ ರಣೇಽರೀಣಾಂ ಶಿರಾಂಸಿ ನಿಶಿತೈಃ ಶರೈಃ ।
ದೇವೀಕಾರ್ಮುಕನಿರ್ಮುಕ್ತೈರ್ದಿವ್ಯೈರ್ನಾನಾವಿಧೈಃ ಶರೈಃ. ॥ ೮೬ ॥

ದಹ್ಯಂತೇಽಸುರಸೈನ್ಯಾನಿ ತೃಣಾನೀವ ದವಾಗ್ನಿನಾ ।
ಸಿಂಹವೇಗಾನಿಲೋದ್ಧೂತಾಂ ಶ್ಚೂರ್ಣಯಂತೀ ಮಹಾರಥಾನ್ ॥ ೮೭ ॥

ವವರ್ಷ ಶರವರ್ಷಾಣಿ ಯುಗಾಂತಾಂಬುದಸನ್ನಿಭಾನ್ ।
ಗಜವಾಜಿರಥಾನಾಂ ಚ ದ್ರವತಾಂ ಪತತಾಂ ತಥಾ ॥ ೮೮ ॥

---

೮೪. ಆ ರಾಕ್ಷಸರಿಗೆ ದೇವಿಯು, ಮೃತ್ಯುವಿನ ನಾಲಗೆಯಂತೆಯೂ, ಪ್ರಾಣಗಳನ್ನು ಎಳೆಯುವ ಶಕ್ತಿಯಂತೆಯೂ ಕಾಣುತ್ತಿದ್ದಳು. ಆಕೆಯು ಬಿಲ್ಲನ್ನು ಬಗ್ಗಿಸಿ ಬಾಣಗಳನ್ನು ಧಾರಾಕಾರವಾಗಿ ಬಿಡುವುದು ರಾಕ್ಷಸರಿಗೆ ಮೃತ್ಯುದರ್ಶನವಾದಂತಿತ್ತು.

೮೫. ಆದರೂ ದೈತ್ಯರು ಕೋಟಿ ಸಂಖ್ಯೆಯಲ್ಲಿ ನಿಂತು ಅನೇಕ ಬಾಣಗಳಿಂದ, ದೇವಿಯನ್ನು ಹೊಡೆದರು. ದೇವಿಯು ಅವರೆಲ್ಲರನ್ನೂ ತನ್ನ ಹೂಂಕಾರದಿಂದಲೇ ಧ್ವಂಸಮಾಡಿದಳು.

೮೬. ಯುದ್ಧದಲ್ಲಿ ಪಾರ್ವತಿಯು ಕ್ರೂರವಾದ ಬಾಣಗಳು ಶತ್ರುಶಿರಸ್ಸನ್ನು ಕತ್ತರಿಸಿ ಹಾಕಿದುವು. ಹಾಗೂ ದೇವಿಯ ಕೈಯಿಂದ ನಾನಾವಿಧವಾದ ಬಾಣಪರಂಪರೆಗಳು ಅತ್ಯಂತವಾಗಿ ಹೊರಡುತ್ತಲೇ ಇದ್ದವು.

೮೭. ರಾಕ್ಷಸಸೈನ್ಯವು, ಕಾಡುಕಿಚ್ಚಿನಿಂದ ದಹಿಸಲ್ಪಟ್ಟ ಹುಲ್ಲುರಾಶಿಯಂತೆ ದೇವಿಯ ಬಾಣವೇಗದಿಂದ ಧ್ವಂಸವಾಯಿತು. ಅತಿಶಯವಾದ ವೇಗದಿಂದ ಮೇಲ್ಮೇಲೆ ಬರುವ ಮಹಾರಥಗಳು ನುಚ್ಚುಚೂರಾದವು.

೮೮. ದೇವಿಯು ಪ್ರಳಯಕಾಲದ ಮೇಘಗಳಂತೆ ಗರ್ಜಿಸುವ ಬಾಣರಾಶಿಯನ್ನು, ದೈತ್ಯರ ಆನೆ, ಕುದುರೆ, ರಥ ಇವುಗಳ ಮೇಲೆ ಬಹುವಾಗಿ ಪ್ರಯೋಗಿಸಿದಳು. ಅದರಿಂದ ಅವೆಲ್ಲವೂ ನಾಶವಾಗಿ ಕೆಳಗೆ ಬಿದ್ದವು.

ದೈತ್ಯೇಂದ್ರಾಣಾಂ ಚ ಭಾರೇಣ ಶ್ವಸತೀವ ವಸುಂಧರಾ ।
ಸಮುತ್ಥಿತಂ ರಜೋಘೋರಂ ಸಂಸ್ಪೃಷ್ಟ್ವಾರ್ಕೇಂದುಮಂಡಲಂ ॥ ೮೯ ॥

ಗಜಾಶ್ವದೈತ್ಯರಕ್ತೌಘೈಃ ಪ್ರಶಾಂತಿಮುಗಮತ್ತತಃ ।
ಪ್ರಾವರ್ತತ ನದೀ ತತ್ರ ಶೋಣಿತೋದತರಂಗಿಣೀ ॥ ೯೦ ॥

ಹಯಮತ್ಸ್ಯಾ ಗಜಗ್ರಾಹಾ ಚರ್ಮಕೂರ್ಮಾಸ್ಥಿಸಂಕುಲಾ ।
ಮಹಾರಥಮಹಾವರ್ತಾ ಪತಾಕಾಛತ್ರಫೇನಿಲಾ ॥ ೯೧ ॥

ವಹಂತೀ ಯಮಲೋಕಾಂತಂ ದೈತ್ಯಾಸುರತಟದ್ರುಮಾನ್ ।
ತದ್ಬಲಂ ಚ ಬಭೌ ಶೀಘ್ರಂ ಶಸ್ತ್ರಾಸ್ತ್ರಕ್ಷತಕಂಧರಂ ॥ ೯೨ ॥

ಗಲದ್ರುಧಿರಫೇನೌಘಂ ಘೂರ್ಣಿತಾರ್ಣವಸಂನಿಭಂ ।
ವಧ್ಯಮಾನಂ ಸ್ವಕಂ ಸೈನ್ಯಂ ದೃಷ್ಟ್ವಾ ದೇವ್ಯಾಶ್ಚ ವಿಕ್ರಮಂ ॥ ೯೩ ॥

---

೮೯. ರಾಕ್ಷಸರ ಭಾರವನ್ನು ತಾಳಲಾರದೆ ಭೂಮಿಯು ನಿಟ್ಟುಸಿರಿಡುತ್ತಿದೆಯೋ ಎಂಬಂತೆ, ಭೂಮಿಯಿಂದ ಎದ್ದ ಧೂಳು ಸೂರ್ಯಚಂದ್ರಮಂಡಲಗಳನ್ನು ಮುಟ್ಟುತ್ತಿತ್ತು.

೯೦. ಆನೆ, ಕುದುರೆ, ದೈತ್ಯರು ಇವರೆಲ್ಲರೂ ನಾಶವಾಗಿ ಅವರ ರಕ್ತರಾಶಿಯಿಂದ ರಣರಂಗವೆಲ್ಲವೂ ಶಾಂತವಾಯಿತು. ಅಲ್ಲಿ ರಕ್ತದ ಒಂದು ನದಿಯೇ ಹರಿಯುವದಕ್ಕೆ ಆರಂಭಿಸಿತು.

೯೧-೯೨. ಆ ರಕ್ತಪ್ರವಾಹದಲ್ಲಿ ಕುದುರೆಗಳು ಮೀನುಗಳಂತೆ ಓಡಾಡಿದುವು. ಆನೆಗಳು ಮೊಸಳೆಗಳಂತಾದುವು. ಚರ್ಮ, ಮೂಳೆ ಇವುಗಳು ಆಮೆಗಳಂತೆ ಕಾಣುತ್ತಿದ್ದುವು. ಮಹಾರಥಗಳು ಸುಳಿಗಳಂತೆಯೂ, ಪತಾಕೆ, ಶ್ವೇತಛತ್ರ ಇವುಗಳು ನೊರೆಯ ರಾಶಿಯಂತೆಯೂ, ತೋರುತ್ತಿದ್ದುವು. ಆ ಪ್ರವಾಹವು ಯಮಲೋಕದವರೆಗೂ ಹರಿಯಲು ದಡದಲ್ಲಿ ರಾಕ್ಷಸರೆಂಬ ಮರಗಳು ಹುಟ್ಟಿಕೊಂಡಿರುವುವೋ ಎಂಬಂತೆ ಎಲ್ಲೆಲ್ಲೂ ರಾಕ್ಷಸಮಯವಾಗಿಯೇ ಕಾಣುತ್ತಿತ್ತು. ಅಲ್ಲಲ್ಲಿ ರಾಕ್ಷಸರ ತಲೆಬುರುಡೆಗಳು ತೇಲುತ್ತಿದ್ದವು.

೯೩-೯೪. ಆ ರಕ್ತದ ಹೊಳೆಯಲ್ಲಿ, ಸಮುದ್ರದಂತೆ ಆರ್ಭಟಿಸುವ ರಕ್ತದ ಅಲೆಗಳನ್ನೂ, ಅದರಲ್ಲಿ ನಾಶವಾಗುತ್ತಿರುವ ತನ್ನ ಸೈನ್ಯವನ್ನೂ, ರಕ್ತಾಸುರನು

ರಕ್ತಾಸುರೋಽಭ್ಯುವಾಚೇದಂ ಸೈನಿಕಾನ್ ಜಾತವಿಸ್ಮಯಃ ।
ಹನ್ಯತಾಂ ಹನ್ಯತಾಂ ಶೀಘ್ರಂ ಭವಾನೀ ಕಾಲಸಂನಿಭಾ ॥ ೯೪ ॥

ಪರಿವೃತ್ಯ ರಥೈರ್ನಾಗೈರ್ಹಯೈಶ್ಚೈವ ಪದಾತಿಭಿಃ ।
ದಾನವೇಶ್ವರವಾಕ್ಯೇನ ತತಸ್ತೇ ತಸ್ಯ ಸೈನಿಕಾಃ ॥ ೯೫ ॥

ತ್ಯಕ್ತ್ವಾತ್ಮಾನಂ ಮಹಾತ್ಮಾನೋ ದೇವೀಮಾಪುರ್ಬಲಾನ್ವಿತಾಃ ।
ಧೂಮ್ರಾಕ್ಷಪ್ರಮುಖಾ ಧೀರಾಃ ಷೋಡಶೈವ ಮಹಾರಥಾಃ ॥ ೯೬ ॥

ಶರಶಕ್ತಿಗದಾಶೂಲೈಸ್ತಾಡಯಂತೋಽಂಬಿಕಾಂ ರಣೇ ।
ಶ್ವಸಂತ ಇವ ನಾಗೇಂದ್ರಾಃ ಪ್ರಜ್ವಲಂತ ಇವಾಗ್ನಯಃ ॥ ೯೭ ॥

ಜೃಂಭಂತ ಇವ ಶಾರ್ದೂಲಾ ಗರ್ಜಂತ ಇವ ತೋಯದಾಃ ।
ಯುಯುಧುಸ್ತೇ ಸ್ಥಿರೀಭೂತಾ ವಿವಿಧಾಯುಧಯೋಧಿನಃ ॥ ೯೮ ॥

ದೂರದಿಂದಲೇ ನೋಡಿದನು. ಒಡನೆಯೇ ತನ್ನ ಸೈನಿಕರನ್ನು ಕುರಿತು, ಕಾಲಸ್ವರೂಪಳಾಗಿ ಬಂದಿರುವ ಈ ದೇವಿಯನ್ನು ಹೊಡೆಯಿರಿ, ಕೊಲ್ಲಿರಿ ಎಂದು ಕೂಗುತ್ತಾ ಕೂಗುತ್ತಾ ಸೈನಿಕರನ್ನು ಹುರಿದುಂಬಿಸುತ್ತಿದ್ದನು.

೯೫. ಅದನ್ನು ಕೇಳಿ ರಾಕ್ಷಸಸೈನಿಕರು, ರಥ, ಆನೆ, ಕುದುರೆ, ಕಾಲಾಳು ಇವೇ ಮುಂತಾದ ಸಾಮಗ್ರಿಗಳಿಂದ ಕೂಡಿ, ರಾಕ್ಷಸರಾಜನ ಮಾತಿನಂತೆ ಯುದ್ಧ ಮಾಡುತ್ತಿದ್ದರು.

೯೬. ಅವರಲ್ಲಿ ಧೂಮ್ರಾಕ್ಷನೇ ಮೊದಲಾದ ಹದಿನಾರು ಜನ ಮಹಾರಥಿಕರು ದೇವಿಯನ್ನು ಎದುರಿಸಿ, ಕೊನೆಗೆ ತಮ್ಮ ದೇಹವನ್ನು ಬಿಟ್ಟು ದೇವಿಯ ಸಾನ್ನಿಧ್ಯವನ್ನು ಪಡೆದರು.

೯೭-೯೮. ಮತ್ತೆ ಕೆಲವರು ನಾನಾವಿಧವಾದ ಬಾಣ, ಶಕ್ತಿ, ಗದೆ, ಶೂಲ ಮೊದಲಾದ ಆಯುಧಗಳನ್ನು ಹಿಡಿದು, ಸಿಟ್ಟುಸಿರು ಬಿಡುವ ಆನೆಗಳಂತೆಯೂ ಜ್ವಲಿಸುವ ಬೆಂಕಿಯಂತೆಯೂ, ಮೇಲೆ ಬೀಳುವ ಹುಲಿಗಳಂತೆಯೂ, ಗರ್ಜಿಸುವ ಮೇಘಗಳಂತೆಯೂ, ದೇವಿಯನ್ನು ಎದುರಿಸುತ್ತಿದ್ದರು.

ಶಾರ್ವರೀ ಚಂಡಕೋದಂಡನಾದಾಪೂರಿತದಿಙ್ಮುಖಾ ।
ಸ್ವೈಕ್ಯಂತೀವ ಚ ರುದ್ರಾಣೀ ನೂನಂ ಭಾತಿ ಮಹಾಹವೇ ॥ ೯೯ ॥

ಪಟ್ಟಿಶಾಭಿಹತಾನ್ ಕಾಂಶ್ಚಿತ್ ಮುಸಲೋನ್ಮಥಿತಾಂಸ್ತಥಾ ।
ಸಾರೋಹಾನ್ ಪಾತಯಾಮಾಸ ಗಜಾನಶ್ವಾಂಶ್ಚ ಕೋಟಿಶಃ ॥ ೧೦೦ ॥

ಕಾಲಪಾಶಶಿರಶ್ಛಿತ್ವಾ ಸಾರ್ಧಚಂದ್ರೇಣ ಭಾಸುರಂ ।
ಗದಯಾ ಪ್ರಮಮಾಥಾಶು ದೇವಾಂತಕಮಹಾಹನುಂ ॥ ೧೦೧ ॥

ಬ್ರಹ್ಮಘ್ನಸ್ಯಾಸಿನಾ ಕಾಯಾತ್ಪಾತಯಾಮಾಸ ಚಾಂಬಿಕಾ ।
ಧೂಮ್ರಾಕ್ಷಂ ಕಾಲದಂಡೇನ ವಜ್ರೇಣ ಕ್ರೂರಮೇವ ಚ ॥ ೧೦೨ ॥

ಯಜ್ಞದಂಷ್ಟ್ರಂ ಯಜ್ಞಕೋಪಂ ವಿಧರ್ಮಂ ಚ ಚಮೂಪತಿಂ ।
ರೌದ್ರಾನನ್ಯಾಂಸ್ತ್ರಿಶೂಲೇನ ಜಘಾನ ಪರಮೇಶ್ವರೀ ॥ ೧೦೩ ॥

---

೯೯. ಉಗ್ರವಾದ ಧನುರ್ಬಾಣಗಳ ಧ್ವನಿಯಿಂದ ದಿಕ್ಕುಗಳನ್ನೆಲ್ಲಾ ಮೊಳಗಿಸುತ್ತಾ ಪಾರ್ವತಿಯು ರಣರಂಗದಲ್ಲಿ ನಾಟ್ಯವಾಡುತ್ತಿರುವಳೋ ಎಂಬಂತಿದ್ದಳು.

೧೦೦. ಪಟ್ಟಾಯುಧದಿಂದ ಕೆಲವರನ್ನೂ, ಮುಸಲಾಯುಧದಿಂದ ಹಲವರನ್ನೂ, ಗಜಾಶ್ವಾದಿಗಳನ್ನೂ ಕೋಟಿಸಂಖ್ಯೆಯಲ್ಲಿ ಧ್ವಂಸಮಾಡಿದಳು.

೧೦೧. ಕಾಲಪಾಶನೆಂಬ ರಾಕ್ಷಸನ ಸುಂದರವಾದ ತಲೆಯನ್ನು ಅರ್ಧಚಂದ್ರಾಯುಧದಿಂದ ಕತ್ತರಿಸಿದಳು. ದೇವಾಂತಕನಾಗಿರುವ ಮಹಾಹನುವನ್ನು ಗದೆಯಿಂದ ಚೂರ್ಣಮಾಡಿದಳು.

೧೦೨. ದೇವಿಯು, ಬ್ರಹ್ಮಘ್ನನೆಂಬವನನ್ನು ಕತ್ತಿಯಿಂದ ಕಡಿದು, ಕಾಲದಂಡದಿಂದ ಧೂಮ್ರಾಕ್ಷನನ್ನೂ, ವಜ್ರಾಯುಧದಿಂದ ಕ್ರೂರನನ್ನೂ ನಾಶಮಾಡಿದಳು.

೧೦೩. ಇನ್ನುಳಿದ ಯಜ್ಞದಂಷ್ಟ್ರ, ಯಜ್ಞಕೋಪ, ವಿಧರ್ಮ ಇವರೇ ಮೊದಲಾದ ಭಯಂಕರರಾದ ಸೇನಾಪತಿಗಳನ್ನು ದೇವಿಯು ತ್ರಿಶೂಲದಿಂದ ತಿವಿದು ಕೊಂದಳು.

ಸಶಂಕುಕರ್ಣದುರ್ಭಿಕ್ಷವಿದ್ಯುನ್ಮಾಲಿವಿಭಾವಸೂನ್ ।
ದುರ್ವಾರಪೌರುಷಾಂಶ್ಚಕ್ರೇ ಚಕ್ರೇಣೋತ್ಕೃತ್ತಮಸ್ತಕಾನ್ ॥ ೧೦೪ ॥

ರಕ್ತಾಸುರಾನುಜಾ ಚೋಭೌ ಮಹಾಬಲಪರಾಕ್ರಮೌ ।
ಕೂಷ್ಮಾಂಡಶುಭಕಾಕ್ಷೌ ತು ಜಘ್ನತುರ್ಮುಶಲಾಶ್ಮಭಿಃ ॥ ೧೦೫ ॥

ಮಹಾಬಲೌ ಮಹಾಕಾಯೌ ಘೋರೌ ತತ್ರ ಮಹಾಸುತೌ ।
ಶರ್ಕರಾಶೀವಿಷಾಕಾರೈರ್ಜಘಾನಾಥ ತದಾ ದ್ವಿಜಾಃ ॥ ೧೦೬

ತತಃ ಸ್ತ್ರೀಘ್ನೋಽಭ್ಯಧಾವತ್ತಾಂ ದೃಷ್ಟ್ವಾ ತೌ ವಿನಿಪಾತಿತೌ ।
ತಮಪ್ಯಪಾತಯದ್ಭವಾ ಖಡ್ಗೇನಾಭಿಹತಂ ರುಷಾ ॥ ೧೦೭ ॥

ಘಂಟಕಶ್ಚಾಥ ದೈತ್ಯೇಂದ್ರೋ ಗಿರೀಂದ್ರಸದೃಶೋ ಬಲೀ ।
ಪರಿಘೇಣಾಯಸೇನಾಜೌ ದೇವೀಂ ಕ್ರುದ್ಧೋಽಭ್ಯತಾಡಯತ್ ॥ ೧೦೮ ॥

---

೧೦೪. ಶಂಕುಕರ್ಣ, ದುರ್ಭಿಕ್ಷ, ವಿದ್ಯುನ್ಮಾಲಿ, ವಿಭಾವಸು ಇವರನ್ನು ಅಂಬಿಕೆಯು ತನ್ನ ಚಕ್ರಾಯುಧದಿಂದ ಶಿರಚ್ಛೇದಮಾಡಿ, ಅವರ ಪರಾಕ್ರಮವನ್ನು ಮಗ್ಗಿಸಿದಳು.

೧೦೫. ರಕ್ತಾಸುರನ ತಮ್ಮಂದಿರಾದ ಕೂಷ್ಮಾಂಡ, ಶುಭಕಾಕ್ಷ ಎಂಬುವರು ಮಹಾವೀರರಾಗಿ ಯುದ್ಧಮಾಡಿದರು. ಅವರನ್ನು ಮುಶಲಾಶ್ಮವೆಂಬ ಕ್ಷೇಪಣೀಯಾಯುಧದಿಂದ ಹೊಡೆದಳು.

೧೦೬. ಆದರೆ ಅವರಿಬ್ಬರೂ ಮಹಾಬಲಿಷ್ಠರು. ಒರಟು ದೇಹದವರು. ಭಯಂಕರ ಸ್ವರೂಪಿಗಳು. ಅಂಥವರನ್ನು ಸರ್ಪಾಕಾರದ ಬಾಣಗಳಿಂದ ಕೊಂದು ಹಾಕಿದಳು.

೧೦೭. ಅವರಿಬ್ಬರೂ ಸತ್ತದ್ದನ್ನು ಸ್ತ್ರೀಘ್ನನೆಂಬವನು ನೋಡಿ, ಕೋಪದಿಂದ ದೇವಿಯನ್ನು ಎದುರಿಸಲು ಬಂದನು. ಅವನನ್ನು ತತ್‌ಕ್ಷಣವೇ ತನ್ನ ಕತ್ತಿಯಿಂದ ಹೊಡೆದು ಕೊಂದಳು.

೧೦೮. ಆ ಮೇಲೆ ಘಂಟಕನೆಂಬ ಪರ್ವತಸದೃಶನಾದ ರಕ್ಕಸನು, ಕಬ್ಬಿಣದ ಪರಿಘಾಯುಧದಿಂದ ದೇವಿಯನ್ನು ಹೊಡೆದನು.

ಶಠಃ ಸಪರಿಘಶ್ಚಾಸೌ ದೇವ್ಯಾಃ ಕರತಲಾಹತಃ ।
ಸ ಪಪಾತ ತದಾ ಭೂಮೌ ವಜ್ರಾಹತ ಇವಾಚಲಃ ॥ ೧೦೯ ॥

ಪ್ರಾಪಂಚಿಕೋ ಮಹಾಬಾಹುಶ್ಚಕ್ರೇ ಕೃತಶರಾಸನಃ ।
ಶಕ್ತ್ಯಾ ದಗ್ಧತನುತ್ರಾಣೋ ಜಗಾಮಾಂತಕಮಂದಿರಂ ॥ ೧೧೦ ॥

ಅಷ್ಟಾದಶೈವಂ ದುರ್ಧರ್ಷಾನ್ನಿಹತ್ಯಾಸುರಸೈನಿಕಾನ್ ।
ಸಾನಂದಾ ವಿನನಾದೋಚ್ಚೈಃ ಸಂವರ್ತಕಘನೋಪಮಾ ॥ ೧೧೧ ॥

ಜಘಾನ ದಾನವಾನೀಕಮೇಕಾನೇಕಸ್ವರೂಪಿಣೀ ।
ವಿದ್ಯುತ್ಸಂಪಾತನಿರ್ಹ್ರಾದಾ ವಿದ್ಯುತ್ಸಂಪಾತಚಂಚಲಾ ॥ ೧೧೨ ॥

ಪಾತಯಂತೀ ಚಚಾರಾಜೌ ಸಾಸುರೇಂದ್ರಮಹಾಚಮೂಂ ।
ತತ್ರಾಕುಲಶ್ಚ ತುಮುಲೋ ನಾದೋ ಬಾಧ್ಯೇಷು ಶತ್ರುಷು ॥ ೧೧೩ ॥

---

೧೦೯. ಅನಂತರ ಆ ಘಂಟಕನು ತನ್ನ ಪರಿಘಾಯುಧಸಹಿತವಾಗಿಯೇ ದೇವಿಯಿಂದ ಹೊಡೆಯಲ್ಪಟ್ಟವನಾಗಿ, ವಜ್ರಾಹತವಾದ ಪರ್ವತದಂತೆ ಭೂಮಿಯಲ್ಲಿ ಒರಗಿದನು.

೧೧೦. ಪ್ರಾಪಂಚಿಕನೆಂಬ ಶೂರರಾಕ್ಷಸನು ತನ್ನ ಧನುಸ್ಸಿನಿಂದ ದೇವಿಗೆ ಬಾಣಪ್ರಯೋಗಮಾಡಿದನು. ಕೊನೆಗೆ ದೇವಿಯ ಶಕ್ತ್ಯಾಯುಧದಿಂದ ಹೊಡೆಯಲ್ಪಟ್ಟು ಯಮನ ಮನೆಗೆ ಹೋದನು.

೧೧೧. ಹೀಗೆ ಅಂಬಿಕೆಯು ಹದಿನೆಂಟು ಜನ ವೀರರಾಕ್ಷಸಸೈನಿಕರನ್ನು ಕೊಂದು, ಪ್ರಳಯಕಾಲದ ಮೇಘದಂತೆ ಸಂತೋಷದಿಂದ ಗರ್ಜಿಸಿದಳು.

೧೧೨. ಮಿಂಚಿನಂತೆ ಚಂಚಲಳಾಗಿ, ಮಿಂಚಿನ ವೇಗದಲ್ಲಿ ಹಾರಿ, ದೇವಿಯು ಒಬ್ಬಳೇ ಆದರೂ, ಎಲ್ಲೆಲ್ಲೂ ವ್ಯಾಪಿಸಿಕೊಂಡು ಆ ಸಮಸ್ತ ದುಷ್ಟರಾಕ್ಷಸರನ್ನೆಲ್ಲಾ ಕೊಲ್ಲುತ್ತ ಬಂದಳು.

೧೧೩. ಹೀಗೆ ಪಾರ್ವತಿಯು ರಾಕ್ಷಸಮಹಾಸೈನ್ಯವನ್ನೆಲ್ಲಾ ಓಡಾಡಿಸಿಕೊಂಡು ಧ್ವಂಸಮಾಡುತ್ತಾ ಯುದ್ಧಮಾಡಿದಳು. ಆಲ್ಲಿ ಶತ್ರುಗಳಿಗೂ ದೇವಿಗೂ ದ್ವಂದ್ವಯುದ್ಧವು ಅಲ್ಲೋಲಕಲ್ಲೋಲವಾಗಿ ನಡೆಯಿತು.

ಬಭೂವ ಯೇನ ಬ್ರಹ್ಮಾಂಡಮಕಾಂಡಾಕುಲತಾಂ ಯಯೌ ।
ಜಘಾನೈವಂ ಚತುಸ್ಸಪ್ತತ್ರಿದಶೈಸ್ತ್ರಿದಶದ್ವಿಷಾಂ ॥ ೧೧೪ ॥

ಅಕ್ಷೌಹಿಣೀಸಹಸ್ರಾಣಿ ತ್ರಯಸ್ತ್ರಿಂಶತ್ಸುರೇಶ್ವರೀ ।
ಏಕತ್ರಿಂಶತ್ಸಹಸ್ರಾಣಿ ಶತಾನ್ಯಷ್ಟೌ ಚ ಸಪ್ತತಿಃ ॥ ೧೧೫ ॥

ಸಾನುಗಾನಾಂ ಸಯೋಧಾನಾಂ ರಥಾನಾಂ ವಾತರಂಹಸಾಂ ।
ಸಂಖ್ಯೈವೇಷಾ ಗಜೇಂದ್ರಾಣಾಮಕ್ಷೌಹಿಣ್ಯಾಂ ಮಹೌಜಸಾಂ ॥ ೧೧೬ ॥

ತ್ರಿಗುಣಂ ಚತುರಂಗಾಣಾಂ ಪಂಚ ಚೈವ ಪದಾತಿನಾಂ ।
ಕ್ವಚಿದ್ರಥಸ್ಥಿತಾ ಸೈವ ವಿವಿಧಾಯುಧಧಾರಿಣೀ ॥ ೧೧೭ ॥

ಜಘಾನಾಸುರಸೈನ್ಯಾನಿ ಹಯಹಸ್ತಿಗತಾ ಕ್ವಚಿತ್ ।
ಕ್ವಚಿಚ್ಚ ಮಹಿಷಾರೂಢಾ ವೃಷಭೇ ಚ ಸ್ಥಿತಾ ಕ್ವಚಿತ್ ॥ ೧೧೮ ॥
ವೇತಾಳೈಃ ಪ್ರೇತಭೂತೈಶ್ಚ ಸ್ವೇಚ್ಛಾಸೃಷ್ಟೈರ್ವೃತಾಽದ್ಭುತೈಃ ॥ ೧೧೯ ॥

೧೧೪-೧೧೫. ಆ ತುಮುಲ ಯುದ್ಧದಿಂದ ಬ್ರಹ್ಮಾಂಡವೇ ಹೆದರಿ ನಡುಗುವಂತಾಯಿತು. ಹೀಗೆ ಸುರೇಶ್ವರಿಯು ರಾಕ್ಷಸರ ಮೂವತ್ತುಮೂರು ಅಕ್ಷೌಹಿಣೀ ಸೇನೆಯೆಲ್ಲವನ್ನೂ ಇಪ್ಪತ್ತೆಂಟು ಸಾರಿ ಕೊಂದುಹಾಕಿದಳು.

೧೧೬. ರಾಕ್ಷಸರನ್ನು ಅನುಸರಿಸಿ ವಾಯುವೇಗವುಳ್ಳ ರಥದಲ್ಲಿಕುಳಿತು ಬಂದ ಸೈನಿಕರ ಸಂಖ್ಯೆಯು ಮೂವತ್ತೊಂದು ಸಾವಿರದ ಎಂಟುನೂರ ಎಪ್ಪತ್ತು(೩೧೮೭೦) ಆಗಿತ್ತು. ಅದರಲ್ಲಿ ಆನೆಗಳು ಮತ್ತು ಕುದುರೆ, ರಥ ಇವುಗಳ ಸಂಖ್ಯೆಯು,

೧೧೭. ಮೂರರಷ್ಟು, ನಾಲ್ಕರಷ್ಟು ಆಗಿದ್ದಿತು. ಸೈನಿಕರ ದಳವು ಅದರ ಐದರಷ್ಟಾಗಿತ್ತು. ಇಷ್ಟನ್ನೂ ದೇವಿಯು ಕೆಲವು ಕಡೆ ರಥದಲ್ಲಿ ಕುಳಿತು ಆಯುಧ ಧಾರಿಣಿಯಾಗಿ ಧ್ವಂಸಮಾಡಿದಳು.

೧೧೮. ಕೆಲವು ಸ್ಥಳದಲ್ಲಿ ಆನೆಯ ಮೇಲೆ, ಒಂದೊಂದು ಸ್ಥಳದಲ್ಲಿ ಕುದುರೆಯ ಮೇಲೆ, ಒಂದೊಂದು ಕಡೆ ಎಮ್ಮೆಯ ಮೇಲೆ, ಎತ್ತಿನ ಮೇಲೆ ಹೀಗೆ ನಿಂತು ಯುದ್ಧ ಮಾಡಲುಪಕ್ರಮಿಸಿದಳು.

೧೧೯. ದೇವಿಯು ಯುದ್ಧಸಮಯದಲ್ಲಿ ಪ್ರೇತಗಳು ಮತ್ತು ಬೇತಾಳಗಳು ಇನ್ನೂ ಅದ್ಭುತವಾಗಿ ಸೃಷ್ಟಿಮಾಡಿದ ಪ್ರಾಣಿಗಳಿಂದ ಕೂಡಿ ಯುದ್ಧಮಾಡಿದಳು.

ಕಬಂಧನೃತ್ಯಸಂಕುಲೇ ಹ್ಯಸೃಗ್ವಸಾಸ್ಥಿಕರ್ದಮೇ ।
ರಣಾಜಿರೇ ನಿಶಾಚರಾಸ್ತತೋ ವಿರೇಜುರೂರ್ಜಿತಾಃ ।
ಸೃಗಾಲಗೃಧ್ರವಾಯಸಾಃ ಪರಂ ಪ್ರಪಾನಮಾದಧುಃ ।
ಕ್ವಚಿತ್ಪರೇತಶಾವಕಾಃ ಪ್ರತೀತಶೋಣಿತಾ ಬಭುಃ　　॥ ೧೨೦ ॥

ಕ್ವಚಿತ್ಪಿನಾಕಪಾಣಯಃ ಪಿಶಾಚಯಕ್ಷರಾಕ್ಷಸಾಃ ।
ಪ್ರತರ್ಪ್ಯ ಚಾಸೃಜಾ ಪಿತೄನ್ ಸಮರ್ಚಯನ್ನಥಾಮಿಷೈಃ ।
ಗಜಾನ್ನರಾಂಸ್ತುರಂಗಮಾನ್ ಪ್ರಭಕ್ಷಯಂತಿ ನಿರ್ಘೃಣಾ ।
ಸ್ತದೋಡುಪೈಸ್ತಥಾಪರೇ ತರಂತಿ ಶೋಣಿತಾಪಗಾಂ　　॥ ೧೨೧ ॥

ಇತಿ ಪ್ರಗಾಢಸಂಗರೇ ಸುರಾರಿಸಂಘಸಂಕುಲೇ ।
ವಿರಾಜತೇಂಬಿಕಾ ಧನುಃ ಶರಾಸಿಶೂಲಧಾರಿಣೀ ।
ಗಜೇಂದ್ರವೃಂದಮರ್ದಿನೀ ತುರಂಗಯೂಥಪೋಥಿನೀ ।
ಮಹಾರಥೌಘಘಾತಿನೀ ಸುರಾರಿಸೈನ್ಯನಾಶಿನೀ　　॥ ೧೨೨ ॥

---

೧೨೦. ರಣಾಂಗಣದಲ್ಲಿ ಎಲ್ಲೆಲ್ಲೂ ರಾಕ್ಷಸರ ರುಂಡಗಳೂ, ಮುಂಡಗಳೂ ಕುಣಿಯಲಾರಂಭಿಸಿದುವು. ಮಾಂಸ, ಮಜ್ಜಾ ಮೂಳೆ ಇವೆಲ್ಲವೂ ಅಲ್ಲಲ್ಲಿ ರಾಶಿರಾಶಿಯಾಗಿ ಬಿದ್ದಿದ್ದುವು. ನರಿ, ಹದ್ದು, ಕಾಗೆ ಮೊದಲಾದುವೆಲ್ಲವೂ ಆಹಾರಕ್ಕಾಗಿ ಓಡಾಡಲಾರಂಭಿಸಿದುವು. ಪ್ರೇತಶಾವಕಗಳು ಅಲ್ಲಲ್ಲಿ ತಲೆಹಾಕಿ ರಕ್ತಪಾನ ಮಾಡುತ್ತಿದ್ದುವು.

೧೨೧. ಪಿನಾಕವನ್ನು ಹಿಡಿದಿರುವ ಪಿಶಾಚಿಗಳೂ, ಯಕ್ಷರೂ, ರಾಕ್ಷಸರೂ, ಆ ರಣರಂಗದಲ್ಲಿ ಓಡಾಡುತ್ತಾ, ರಕ್ತದಿಂದಲೂ ಮಾಂಸದಿಂದಲೂ, ತಮ್ಮ ಪಿತೃಗಳಿಗೆ ತರ್ಪಣವನ್ನು ಕೊಡುತ್ತಿದ್ದರು. ಆನೆಗಳು, ಕುದುರೆಗಳು, ಮನುಷ್ಯರು, ಇವರ ಹೆಣಗಳನ್ನು ತಿನ್ನುತ್ತಿದ್ದರು. ದಾರಿಯಲ್ಲಿ ಸಿಕ್ಕಿದ ರಕ್ತಪ್ರವಾಹವನ್ನು ಸಣ್ಣಸಣ್ಣ ದೋಣಿಗಳಿಂದ ದಾಟಲು ಯತ್ನಿಸುತ್ತಿದ್ದರು.

೧೨೨. ಇಂತಹ ರಣರಂಗದಲ್ಲಿ ಸುತ್ತಲೂ ದೇವಗಣಗಳಿಂದ ಆವರಿಸಲ್ಪಟ್ಟ ದೇವಿಯು, ಧನುರ್ಬಾಣಗಳಿಂದಲೂ, ಶೂಲಕತ್ತಿಗಳಿಂದಲೂ ಅಲಂಕೃತಳಾಗಿ ಶೋಭಿಸುತ್ತಿದ್ದಳು. ಆನೆಗಳನ್ನೂ, ಕುದುರೆಗಳ ಗುಂಪನ್ನೂ, ಮಹಾರಥಗಳ ಸಂಘವನ್ನೂ ಧ್ವಂಸಮಾಡಿ ರಾಕ್ಷಸರನ್ನೆಲ್ಲಾ ದಿಕ್ಕಾಪಾಲಾಗಿ ಓಡಿಸಿದ ದೇವಿಯು ರಣರಂಗದ ಮಧ್ಯದಲ್ಲಿ ಬಹುವಾಗಿ ವಿರಾಜಿಸುತ್ತಿದ್ದಳು.

ತತಶ್ಚಂಡಿಕಾಚಂಡಕೋದಂಡಮುಕ್ತೈಃ ।
ದಿವಾಹಾರಿಣಾಂ ಕೋಟಿಯೋಽಷ್ಟಾ ತಥಾಕ್ಷ್ಣಾ ।
ಹತಾಃ ಪಟ್ಟಿಶೈ ರಾಕ್ಷಸಾನಾಂ ಚ ಲಕ್ಷಾ ।
ಸ್ತ್ರಯಸ್ತ್ರಿಂಶದಷ್ಟಾದಶೈವಾತ್ರ ಕೋಟ್ಯಃ ॥ ೧೨೩ ॥

ತತೋ ದಾನವೇಂದ್ರಂ ರಣೇ ತರ್ಜಯಂತೀ ।
ವಿಲಾಸೋಲ್ಲಸದ್ಬಾಹುವಿನ್ಯಸ್ತಶಸ್ತ್ರಾ ।
ನನರ್ತಾಪ್ರಮೇಯಪ್ರಭಾವಾ ಭವಾನೀ ।
ಮಹೇಂದ್ರಾದಿದೇವಾನ್ಮುದಾ ಹರ್ಷಯಂತೀ ॥ ೧೨೪ ॥

ಹಯಗ್ರೀವಮುಖ್ಯಾಃ ಪುನರ್ದೈತ್ಯಸಂಘಾಃ ।
ದಶೈವಾವಶಿಷ್ಟಾ ಮಹಾರೌದ್ರರೂಪಾಃ ।
ನಮಸ್ಕೃತ್ಯ ರಕ್ತಾಸುರಂ ತೇಽಭ್ಯಧಾವನ್ ।
ರಣೇ ಪಾರ್ವತೀಂ ತಾಡಯಂತೋಽಸ್ತ್ರಪೂಗೈಃ ॥ ೧೨೫ ॥

---

೧೨೩. ಆಗ ಚಂಡಿಯ ಕ್ರೂರವಾದ ಬಾಣಗಳ ಪೆಟ್ಟಿಗೆ ಸಿಕ್ಕಿ ಮೃತರಾದ ರಾಕ್ಷಸ ಸೈನಿಕರ ಸಂಖ್ಯೆಯು ಹದಿನೆಂಟು ಕೋಟಿಯಾಗಿತ್ತು. ಹಾಗೆಯೇ, ದೇವತೆಗಳ ಪಟ್ಟಿಶವೆಂಬ ಆಯುಧದ ಏಟಿಗೆ ಸಿಕ್ಕಿ ಅಲ್ಲಲ್ಲಿ ಮೃತರಾಗಿ ಬಿದ್ದಿದ್ದ ರಾಕ್ಷಸರ ಸಂಖ್ಯೆಯು ಹದಿನೆಂಟು ಕೋಟಿ ಮೂವತ್ತು ಮೂರು ಲಕ್ಷ ಸಂಖ್ಯೆಯಿಂದ ಕೂಡಿತ್ತು.

೧೨೪. ಅನಂತರ ದೇವಿಯು ಹಾಗೆ ರಾಕ್ಷಸರ ತಂಡವನ್ನೆಲ್ಲಾ ನಾಶಗೈದು, ಆಯುಧಪಾಣಿಯಾಗಿ, ಮಹೇಂದ್ರನೇ ಮೊದಲಾದ ದೇವತೆಗಳಿಗೆ ಸಂತೋಷವನ್ನುಂಟು ಮಾಡುತ್ತಾ, ಅಪ್ರಮೇಯ ಪ್ರಭಾವಶಾಲಿನಿಯಾಗಿ ನರ್ತಿಸಲಾರಂಭಿಸಿದಳು

೧೨೫. ಆ ಮೇಲೆ ರಕ್ತಾಸುರನ ಕಡೆಯಲ್ಲಿ ಹಯಗ್ರೀವನೇ ಮೊದಲಾದ ರೌದ್ರರೂಪಿನ ಹತ್ತು ಜನ ರಾಕ್ಷಸರು ಮಾತ್ರ ಉಳಿದರು. ಅವರು ರಕ್ತಾಸುರನಿಗೆ ವಂದಿಸಿ ಯುದ್ಧದಲ್ಲಿ ಪಾರ್ವತಿಯನ್ನು ಗೆಲ್ಲುತ್ತೇವೆಂದು ದೇವಿಯನ್ನು ಎದುರಿಸಿದರು.

ಸಮುದ್ಧೃತ್ಯ ನೇತ್ರಾಣಿ ಕಿಂಚಿದ್ಧಸಂತೀ ।
ದ್ವಿಷತ್ಸೈನ್ಯಸಂಘಾನಿ ಸಾ ಸಂಹರಂತೀ ।
ನ್ಯಮುಂಚತ್ತತೋಽಸ್ತ್ರಾಣಿ ದಿವ್ಯಾನಿ ದೇವೀ ।
ನದನ್ ಸಾರ್ಯತೂರ್ಯೇಷು ಖೇಽನಂತಸತ್ವಾ ॥ ೧೨೬ ॥

ತತೋ ಗಿರೀಂದ್ರಜಾರೀಣಾಂ ಚಕ್ರೇ ಸೈನ್ಯಾನಿ ಭಸ್ಮಸಾತ್ ।
ರಕ್ತಾಸುರಮಥಾಭ್ಯೇತ್ಯ ಶಸ್ತ್ರಾಸ್ತ್ರಧೃತಪಾಣಿನಂ ॥ ೧೨೭ ॥

ಪಾದಾಕ್ರಾಂತ್ಯಾನತಭುವಂ ಸಂಕ್ಷೋಭಿತಜಗತ್ತ್ರಯಂ ।
ಮಂಡಲೀಕೃತಕೋದಂಡಂ ಗರ್ಜಂತಂ ಕಾಲಮೇಘವತ್ ॥ ೧೨೮ ॥

ಶರವರ್ಷಾಣಿ ಮುಂಚಂತಂ ಪಾರ್ವತೀ ತಮುವಾಚ ಹ ।
ಕೃತ್ವೋಪತಾಪಂ ದೇವಾನಾಂ ಜೀವನ್ ಕ್ವಾದ್ಯ ಗಮಿಷ್ಯಸಿ ॥ ೧೨೯ ॥

---

೧೨೬. ಆಗ ಗಿರಿಜೆಯು ಅವರನ್ನು ನೋಡಿ ನಗುತ್ತಾ, ಅವರ ಅಲ್ಪಸೈನ್ಯವನ್ನೆಲ್ಲಾ ಸಂಹರಿಸಿ, ಅವರ ಮೇಲೆ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದಳು. ಆ ಧ್ವನಿಯು, ರಣಭೇರಿಯಲ್ಲಿ ಅಡಗಿ ಸಮಸ್ತ ಬ್ರಹ್ಮಾಂಡವನ್ನೂ ವ್ಯಾಪಿಸಿತು.

೧೨೭. ಹಾಗೆ ಪಾರ್ವತಿಯು ಶತ್ರುಸೈನಿಕರನ್ನು ಸಂಹರಿಸಿ, ಸೇನಾಪತಿಗಳನ್ನು ಬೂದಿಮಾಡಿ ಮುಂದೆ ನುಗ್ಗಿ ರಕ್ತಾಸುರನಿದ್ದಲ್ಲಿಗೆ ಬಂದಳು.

೧೨೮. ಆ ರಕ್ತಾಸುರನು ಶಸ್ತ್ರಾಸ್ತ್ರಗಳನ್ನು ಧರಿಸಿ, ಭೂಮಿಯನ್ನೇ ಪಾದಾಕ್ರಾಂತವನ್ನಾಗಿ ಮಾಡಿಕೊಂಡು, ಮೂರು ಲೋಕಗಳನ್ನೂ ಕ್ಷೋಭೆಗೊಳಿಸಿದ್ದನು. ಆತನು ಈಗ ತನ್ನ ಬಿಲ್ಲನ್ನು ಬಗ್ಗಿಸಿ ಬಾಣವನ್ನು ಹೂಡಿ ಕಾಲಮೇಘದಂತೆ ಗರ್ಜಿಸುತ್ತಿದ್ದನು.

೧೨೯. ಅಂತಹ ಅಸುರನ ಮೇಲೆ ಪಾರ್ವತಿಯು ಬಾಣಪ್ರಯೋಗ ಮಾಡುತ್ತಾ ಅವನೊಡನೆ ಹೀಗೆ ಹೇಳಿದಳು. “ ಎಲೈ ರಾಕ್ಷಸಾಧಮನೇ, ದೇವತೆಗಳಿಗೆ ಅನೇಕ ಹಿಂಸೆಯನ್ನು ಕೊಟ್ಟು ಈಗ ಬದುಕಿ ಎಲ್ಲಿಗೆ ಹೋಗಬೇಕೆಂದಿರುವೆ ದುಷ್ಟಾ.”

ಪುಷ್ಟ್ವೇತ್ಯುಕ್ತ್ವಾಽಥ ಸಾ ದೇವೀ ಶೂಲೇನಾಭಿಹನದ್ಧೃದಿ ।
ಸಂಭಿನ್ನಹೃದಯೋ ದೈತ್ಯೋ ಮೂರ್ತಿಂ ಚಕ್ರೇ ಸುದಾರುಣಾಂ ॥ ೧೩೦ ॥

ರಕ್ತಬಿಂದುಸಮೋ ದೈತ್ಯೋ ದೇವೀಂ ವ್ಯಾಮೋಹಯನ್ನಿವ ।
ಜಗಾಮಾನೇಕರೂಪೋಽಸೌ ನಿಹತೋಂಬಿಕಯಾ ರಣೇ ॥ ೧೩೧ ॥

ರಕ್ತಾಸುರೋಽಪಿ ನಿಧನಂ ಗತ್ವಾ ತ್ರಿದಶಕಂಟಕಃ ।
ಪಪಾತ ಮುನಿಶಾರ್ದೂಲಾಃ ಪ್ರಜ್ವಲಜ್ಜ್ವಲನೋಪಮಃ ॥ ೧೩೨ ॥

ಹಾಹಾಕಾರಂ ಪ್ರಕುರ್ವಾಣಾ ದೈತ್ಯಾಸ್ತೇಽಥ ಪ್ರದುದ್ರುವುಃ ।
ಕೇಚಿಚ್ಛಿಷ್ಟಾ ಭಯತ್ರಸ್ತಾ ವಿಸೃಷ್ಟ್ವಾಯುಧಜೀವಿತಾಃ ॥ ೧೩೩ ॥

ಕೇಚಿತ್ಸಮುದ್ರಂ ವಿವಿಶುರದ್ರಿಂಕೇಚಿಚ್ಚ ದಾನವಾಃ ।
ಕೇಚಿಲ್ಲುಂಚಿತಮೂರ್ಧಾನೋ ನಗ್ನಾ ಭೂತ್ವಾ ವನೇಽವಸನ್ ॥ ೧೩೪ ॥

---

೧೩೦. ಎಂದು ಕೂಗುತ್ತಾ ತನ್ನ ತ್ರಿಶೂಲವನ್ನು ಎತ್ತಿ ಅವನ ಹೃದಯಕ್ಕೆ ಸರಿಯಾಗಿ ತಿವಿದಳು. ಒಡನೆಯೇ ರಾಕ್ಷಸನ ಎದೆಯು ಒಡೆದು ಹೋಯಿತು. ಅದರಿಂದ ಅವನ ಆಕಾರವು ಇನ್ನೂ ಭಯಂಕರವಾಯಿತು.

೧೩೧. ಅಲ್ಲದೆ ಅವನ ದೇಹದ ಒಂದೊಂದು ರಕ್ತದ ಹನಿಯೂ ಒಬ್ಬೊಬ್ಬ ರಕ್ತಾಸುರನಾಯಿತು. ಎಲ್ಲೆಲ್ಲೂ ರಕ್ತಾಸುರನ ಬಿಂಬಗಳೇ ಓಡಾಡಲಾರಂಭಿಸಿದುವು. ಅವರೆಲ್ಲರನ್ನೂ ದೇವಿಯು ಕೊಲ್ಲುತ್ತ ಬಂದಳು.

೧೩೨. ಕೊನೆಗೆ ದೇವತೆಗಳಿಗೆ ಕಂಟಕನಾಗಿದ್ದ ರಕ್ತಾಸುರನು ದೇವಿಯ ಬಾಣದ ಉರಿಗೆ ಸಿಕ್ಕಿ ಉರಿಯುವ ದೇಹವುಳ್ಳವನಾಗಿ ಕೆಳಕ್ಕೆ ಬಿದ್ದನು.

೧೩೩. ಅದನ್ನು ನೋಡಿ ಉಳಿದ ರಾಕ್ಷಸರೆಲ್ಲರೂ ಹಾಹಾಕಾರ ಮಾಡುತ್ತಾ ರಣರಂಗದಿಂದ ಓಡಲಾರಂಭಿಸಿದರು. ಮತ್ತೆ ಕೆಲವರು ಆಯುಧಗಳನ್ನು ಎಸೆದು ಭಯದಿಂದ ಅಲ್ಲಿಯೇ ನಿಂತರು.

೧೩೪. ಕೆಲವರು ಸಮುದ್ರಕ್ಕೂ, ಕೆಲವರು ಪರ್ವತದ ಸಾನುಭಾಗಕ್ಕೂ ಓಡಿಹೋದರು. ಹಲವರು ತಲೆಮರಸಿಕೊಂಡು ದಿಗಂಬರರಾಗಿ ಕಾಡಿನಲ್ಲಿ ವಾಸಿಸಲು ಆರಂಭಿಸಿದರು.

ದಯಾಧರ್ಮಂ ಬ್ರುವಾಣಾಶ್ಚ ನಿರ್ಗ್ರಂಥವ್ರತಮಾಶ್ರಿತಾಃ ।
ಕೇಚಿತ್ಪ್ರಾಣಪರಾ ಭೀತಾಃ ಪಾಖಂಡವ್ರತಮಾಶ್ರಿತಾಃ ॥ ೧೩೫ ॥

ಹೇತುವಾದಪರಾ ಮೂಢಾ ನಿಃಶೌಚಾ ನಿರಪೇಕ್ಷಕಾಃ ।
ಅಸುರಸ್ಯ ಜನಸ್ಯೈತೇ ಕ್ಷಪಣಾ ಇವ ಲಕ್ಷಿತಾಃ ॥ ೧೩೬ ॥

ತೇ ಚಾದ್ಯಾಪೀಹ ದೃಶ್ಯಂತೇ ಲೋಕೇ ಕ್ಷಪಣಕಾಃ ಕಿಲ ।
ಅರ್ಹಂತಶ್ಚ ತಥೈವಾನ್ಯೇ ಶಿವಶಾಸ್ತ್ರಬಹಿಷ್ಕೃತಾಃ ॥ ೧೩೭ ॥

ಮಂತ್ರೌಷಧಪ್ರಯೋಗೈಶ್ಚ ಜನವಂಚನಕಾರಕಾಃ ।
ಸಮುತ್ಪತ್ಸ್ಯಂತಿ ದೈತ್ಯಾಶ್ಚ ಘೋರೇಽಸ್ಮಿನ್ ವೈ ಕಲೌ ಯುಗೇ ॥ ೧೩೮ ॥

ಶಿವೋಕ್ತಂ ಕರ್ಮಯೋಗಂ ಚ ದ್ವಿಷಂತಶ್ಚ ಕುಯುಕ್ತಿಭಿಃ ।
ದೇವ್ಯಾಃ ಕ್ರೋಧಾಗ್ನಿನಾ ದಗ್ಧಾ ವೇದಮಾರ್ಗವಿನಿಂದಕಾಃ ॥ ೧೩೯ ॥

---

೧೩೫. ಕೆಲವು ರಾಕ್ಷಸರು ದಯಾಧರ್ಮಗಳ ಸ್ವರೂಪವನ್ನು ತಿಳಿಸುತ್ತಾ ಗ್ರಂಥಾಭ್ಯಾಸಮಾಡದೆ ವ್ರತಿಗಳಾದರು. ಮತ್ತೆ ಕೆಲವರು ಪ್ರಾಣಿರಕ್ಷಣೆಗೆ ನಿಂತವರಾಗಿ ಪಾಖಂಡವ್ರತಧಾರಿಗಳಾದರು.

೧೩೬. ಕೆಲವರು ರಾಕ್ಷಸರು, ತಮ್ಮ ಕ್ರೂರಕರ್ಮಗಳನ್ನು ಬಿಟ್ಟು, ಹೇತುವಾದ ಮಾಡಿ, ಮನಸ್ಸಿಗೆ ತೋರಿದ ತತ್ತ್ವಗಳನ್ನು ಪ್ರಚಾರಮಾಡುತ್ತಾ ಆಚಾರಹೀನರಾಗಿ ನಿಂತರು. ಕೆಲವರು ಜೈನಸಂನ್ಯಾಸಿಗಳಂತೆ ವೇಷಧಾರಿಗಳಾದರು.

೧೩೭. ಅವರು ಈಗಲೂ ಕ್ಷಪಣಕರೆಂಬ ಹೆಸರಿನಿಂದ ಅಲ್ಲಲ್ಲಿ ಇರುವರು. ಮತ್ತೆ ಕೆಲವರು ಶಿವಶಾಸ್ತ್ರಗಳನ್ನು ದೂರಮಾಡಿ ಅರ್ಹಂತರೆನಿಸಿಕೊಂಡಿರುವರು.

೧೩೮. ಅದೇ ರಾಕ್ಷಸರೇ ಈ ಕಲಿಯುಗದಲ್ಲಿ ಮಂತ್ರ, ಔಷಧಿ, ಪ್ರಯೋಗ ಇವೇ ಮೊದಲಾದ ಕರ್ಮಗಳಿಂದ ಜನರನ್ನು ವಂಚಿಸುತ್ತಾ ಮೋಸಗಾರರಾಗಿ ಹುಟ್ಟುವರು.

೧೩೯. ಅವರು ಶಿವಪ್ರೋಕ್ತವಾದ ಕರ್ಮಗಳನ್ನು ಕುತರ್ಕಗಳಿಂದ ದ್ವೇಷಿಸುವರು. ಕೊನೆಗೆ ದೇವಿಯ ಕ್ರೋಧಾಗ್ನಿಯಿಂದ ಸುಡಲ್ಪಟ್ಟವರಾಗಿ ವೇದಮಾರ್ಗಾದಿಗಳನ್ನು ದೂಷಿಸುತ್ತಾ ನರಕಭಾಗಿಗಳಾಗುವರು.

ಶಾಸ್ಯಂತೇ ನರಕಾಗ್ನೌ ತೇ ನಿಶ್ಶೇಷಾಃ ಪಾಪಕರ್ಮಿಣಃ ।
ನ ದೃಷ್ಟಾ ನಿಷ್ಕೃತಿಸ್ತೇಷಾಂ ಶಾಸ್ತ್ರೇಷು ಪರಮರ್ಷಿಭಿಃ ॥ ೧೪೦ ॥

ರರಾಜಾಚಿಂತ್ಯಮಾಹಾತ್ಮ್ಯಾ ಚಿದ್ರೂಪಾ ಪರಮೇಶ್ವರೀ ।
ಹತ್ವಾರಿಂ ಜಗದೈಶ್ವರ್ಯಂ ದತ್ವಾ ನಮುಚಿಶತ್ರವೇ ॥ ೧೪೧ ॥

ಜಗಾಮಾದರ್ಶನಂ ದೇವೀ ವ್ಯಕ್ತಾವ್ಯಕ್ತಸ್ವರೂಪಿಣೀ ।
ಶಕ್ರೋಪಿ ತಾಂ ಪ್ರಣಮ್ಯಾಥ ಸರ್ವಜ್ಞಾಂ ವಿಶ್ವರೂಪಿಣೀಂ ।
ಪ್ರಯಯೌ ವಿಬುಧೈಸ್ಸಾರ್ಧಂ ಸ್ವಾಂ ಪುರೀಮಮರಾವತೀಂ ॥ ೧೪೨ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ರಕ್ತಾಸುರವಧಕಥನಂ ನಾಮೈಕೋನ
ಪಂಚಾಶೋಧ್ಯಾಯಃ.

---

೧೪೦. ಅಂಥ ಪಾಪಿಷ್ಠರು ನರಕವೆಂಬ ಬೆಂಕಿಯಲ್ಲಿ ಶಿಕ್ಷೆಯನ್ನು ಪಡೆಯು ವರು. ಅವರಿಗೆ ಎಂದೂ ಮೋಕ್ಷಸುಖವಿಲ್ಲ. ಶಾಸ್ತ್ರದಲ್ಲಿಯೂ ಹಾಗೆಯೇ ಪ್ರತಿ ಪಾದಿಸಲ್ಪಟ್ಟಿದೆ.

೧೪೧. ಹೀಗೆ ದೇವಿಯು ರಕ್ತಾಬೀಜಾಸುರನನ್ನು ಪರಿವಾರ ಸಮೇತ ನಾಶ ಮಾಡಿ, ಚಿದ್ರೂಪಳಾಗಿ ರಣರಂಗದಲ್ಲಿ ಪ್ರಕಾಶಿಸುತ್ತಿದ್ದಳು. ಅನಂತರ ಭಕ್ತಾಗ್ರೇಸರ ನಾದ ದೇವೇಂದ್ರನಿಗೆ ಪ್ರಪಂಚದ ಐಶ್ವರ್ಯವನ್ನೆಲ್ಲಾ ಕೊಟ್ಟು, ಅಭಯ ಪ್ರದಾನ ಮಾಡಿ ವ್ಯಕ್ತಾವ್ಯಕ್ತಸ್ವರೂಪಳಾಗಿ ದೇವಿಯು ಕಣ್ಮರೆಯಾದಳು.

೧೪೨. ಇಂದ್ರನು, ಸರ್ವಜ್ಞಳೂ, ವಿಶ್ವರೂಪಿಣಿಯೂಆದ ದೇವಿಯನ್ನು ವಂದಿಸಿ, ತನ್ನ ದೇವತೆಗಳೊಡಗೂಡಿ ಅಮರಾವತಿಗೆ ತೆರಳಿದನು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರದಲ್ಲಿ ಸೂತಶೌನಕ
ಸಂವಾದ ರೂಪವಾಗಿ, ರಕ್ತಾಸುರವಧೆಯನ್ನು ತಿಳಿಸುವ
ನಲವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಶ್ರೀ ಶಿವಾಯನಮಃ

ಅಥ ಶ್ರೀ ಸೌರಪುರಾಣೇ ಪಂಚಾಶೋಽಧ್ಯಾಯಃ.

॥ ಸೂತ ಉವಾಚ ॥

ಅಥೋಪವಿಶ್ಯ ಸುರರಾಟ್ ಪೂಜ್ಯಮಾನೋ ವರಾಸನೇ ।
ಅಪ್ಸರೋಗಣಗಂಧರ್ವಸಿದ್ಧವಿದ್ಯಾಧರೋರಗೈಃ ॥ ೧ ॥

ಸಹಸ್ರಾನುಚರಾಣಾಂ ಚ ದೇವತಾನಾಂ ಮಹೌಜಸಾಂ ।
ನಿರ್ಜರಾಣಾಂ ತ್ರಯಸ್ತ್ರಿಂಶತ್ಕೋಟಿಭಿಃ ಪರಿವಾರಿತಃ ॥ ೨ ॥

ಸೋಽಭಿಷಿಕ್ತಸ್ತದಾ ಸರ್ವೈಃ ಬೃಹಸ್ಪತಿಪುರೋಗಮೈಃ ।
ತ್ರೈಲೋಕ್ಯೇಽಸ್ಮಿನ್ ಪುನಃ ಶಕ್ರಶ್ಚಕ್ರೇ ರಾಜ್ಯಮಕಂಟಕಂ । ॥ ೩ ॥

ಐವತ್ತನೆಯ ಅಧ್ಯಾಯವು.

೧-೨. ಒಂದು ದಿವಸ ದೇವೇಂದ್ರನು ಸಿಂಹಾಸನದಲ್ಲಿ ಕುಳಿತುಕೊಂಡು, ಅಪ್ಸರಸ್ತ್ರೀಯರಿಂದಲೂ, ಸಿದ್ಧವಿದ್ಯಾಧರರಿಂದಲೂ, ಗಂಧರ್ವೋರಗಗಳಿಂದಲೂ ಸಾವಿರಾರು ತೇಜಸ್ವಿಗಳಾದ ದೇವತೆಗಳಿಂದಲೂ ಮೂವತ್ತುಮೂರು ಕೋಟಿ ದೇವಸೈನ್ಯದಿಂದಲೂ, ಪರಿವೃತನಾಗಿ ಸಭೆಯಲ್ಲಿ ಕುಳಿತಿದ್ದನು.

೩. ಆಗಲೇ ಬೃಹಸ್ಪತಿಯೇ ಮೊದಲಾದ ದೇವಪುರೋಹಿತರು ಇಂದ್ರನಿಗೆ ತ್ರೈಲೋಕ್ಯಾಧಿಪತ್ಯವನ್ನು ಸೂಚಿಸುವಂತಹ ಪಟ್ಟಾಭಿಷೇಕಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು. ಅಂದಿನಿಂದ ಇಂದ್ರನು ಪುನಃ ತ್ರಿಲೋಕಾಧಿಪತಿಯಾದನು.

ಸಮಾಜಗ್ಮುಸ್ತದಾ ದ್ರಷ್ಟುಂ ಪ್ರಾಪ್ತರಾಜ್ಯಂ ಸುರಾಧಿಪಂ ।
ಮುನಯಶ್ಚಾಂಗಿರಾದಕ್ಷವಸಿಷ್ಠಕ್ರತುಗೌತಮಾಃ ॥ ೪ ॥

ಪುಲಸ್ತ್ಯಪುಲಹಾಗಸ್ತ್ಯ ವಿಶ್ವಾಮಿತ್ರಾತ್ರಿಶೌನಕಾಃ ।
ಜಮದಗ್ನಿಭರದ್ವಾಜಭೃಗುಭಾಗುರಿಗಾಲವಾಃ ॥ ೫ ॥

ಋಭುಃ ಶಾಂಡಿಲ್ಯದುರ್ವಾಸೋ ಗರ್ಗಜೈಮಿನಿನಾರದಾಃ ।
ದಾತ್ಯೂಹೋದ್ದಾಲಬಾಭ್ರವ್ಯಶರಭಂಗನಿಶಾಕರಾಃ ॥ ೬ ॥

ಮರೀಚಿಚ್ಯವನೋತ್ತಂಗಕಾತ್ಯಾಯನಪರಾಶರಾಃ ।
ಸಂವರ್ತಶಂಖಲಿಖಿತದೇವಭಾಗಸುಷೇಣಕಾಃ ॥ ೭ ॥

ತ್ರಿತರೈಭ್ಯಯವಕ್ರೀತಶ್ವೇತಕೇತೂಪಮನ್ಯವಃ ।
ಶಾಕಟಾಯನಕೌಂಡಿನ್ಯಕಚಗೃತ್ಸಮದಾಸಿತಾಃ ॥ ೮ ॥

ದೇವರಾತಶ್ಚ ಜಾಬಾಲಿರ್ಹಾರೀತಶ್ಚೈವ ಕಶ್ಯಪಃ ।
ಬೃಹದಶ್ವಾಂಬಿಕೌತಥ್ಯಾ ಜಾತೂಕರ್ಣ್ಯಃ ಪರಾಶರಃ ॥ ೯ ॥

---

೪. ಆಗ ರಾಜ್ಯವನ್ನು ಪುನಃ ಪಡೆದು ಸುರಾಧಿಪನಾಗಿರುವ ದೇವೇಂದ್ರನನ್ನು ನೋಡಲು, ಅಂಗಿರಸ್ಸು, ದಕ್ಷ, ವಸಿಷ್ಠ, ಕ್ರತು, ಗೌತಮ ಇವರೇ ಮೊದಲಾದ ಋಷಿಗಳು ಅಮರಾವತಿಗೆ ಬಂದರು.

೫-೧೧. ಇನ್ನೂ ಪುಲಸ್ತ್ಯ, ಪುಲಹ, ಅಗಸ್ತ್ಯ, ವಿಶ್ವಾಮಿತ್ರ, ಅತ್ರಿ, ಶೌನಕ, ಜಮದಗ್ನಿ, ಭರದ್ವಾಜ, ಭೃಗು, ಭಾಗುರಿ, ಗಾಲವ, ಋಭು, ಶಾಂಡಿಲ್ಯ, ದೂರ್ವಾಸ, ಗರ್ಗ, ಜೈಮಿನಿ, ನಾರದ, ದಾತ್ಯೂಹ, ಉದ್ದಾಲ; ಬಾಭ್ರವ್ಯ, ಶರಭಂಗ, ನಿಶಾಕರ, ಮರೀಚಿ, ಚ್ಯವನ, ಉತ್ತಂಕ, ಕಾತ್ಯಾಯನ, ಪರಾಶರ, ಸಂವರ್ತ, ಶಂಖಲಿಖಿತ ದೇವಭಾಗ, ಸುಷೇಣಕ, ತ್ರಿತ, ರೈಭ್ಯ, ಯವಕ್ರೀತ, ಶ್ವೇತಕೇತು, ಉಪಮನ್ಯು, ಶಾಕಟಾಯನ, ಕೌಂಡಿನ್ಯ, ಕಚ, ಗೃತ್ಸಮದ, ಅಸಿತಾ, ದೇವರಾತ, ಜಾಬಾಲಿ, ಹಾರೀತ, ಕಶ್ಯಪ, ಬೃಹದಶ್ವ, ಅಂಬಿಕ, ಔತಥ್ಯ, ಜಾತೂಕರ್ಣ್ಯ, ಪರಾಶರ, ಪೈಠೀನಸಿ

ವ್ಯಾಘ್ರಪಾದೋ ವೀತಿಹೋತ್ರಾಶ್ವಲಾಯನಾಃ ।
ಶಾತಾತಪೋ ಮಧುಚ್ಛಂದಾ ಋಚೀಕಕ್ರತುದೇವಲಾಃ ॥ ೧೦॥

ವಾಮದೇವಶ್ಚ ಮೈತ್ರೇಯಮಾರ್ಕಂಡೇಯಪುರೋಗಮಾಃ ।
ಬಕೃಷ್ಣಾಜಿನೋತ್ತರೀಯಾಸ್ತೇ ಜಟಿಲಾ ಭಸ್ಮಭೂಷಿತಾಃ ॥ ೧೧ ॥

ರುದ್ರಾ ಇವ ಮಹಾತ್ಮಾನೋ ವೇದವೇದಾಂಗಪಾರಗಾಃ ।
ತಾನಾಗತಾನ್ ಸುಸಂಪೂಜ್ಯ ಕೃತಾಸನಪರಿಗ್ರಹಾನ್ ॥ ೧೨ ॥

ಬ್ರಹ್ಮಕಲ್ಪಾನೃಷೀಂ ಸರ್ವಾನ್ ಪಪ್ರಚ್ಛೇದಂ ಪುರಂದರಃ ।
ಕಥಮಾರಾಧ್ಯತೇ ದೇವೀ ವರದಾಽಚಲಕನ್ಯಕಾ ॥ ೧೩ ॥

ತೇ ಧನ್ಯಾಸ್ತೇ ಕೃತಾರ್ಥಾಸ್ತೇ ಯೈಃ ಸಮ್ಯಕ್ಪೂಜಿತಾ ಶಿವಾ ।
ಯಸ್ಯಾಃ ಪ್ರಸಾದಾದ್ಭೂಯೋಽಪಿ ರಾಜ್ಯಂ ಪ್ರಾಪ್ತಮಿದಂ ಮಯಾ ॥ ೧೪ ॥

ವ್ಯಾಘ್ರಪಾದ, ವೀತಿಹೋತ್ರ, ಆಶ್ವಲಾಯನ, ಶಾತಾತಪ, ಮಧುಚ್ಛಂದ, ಋಷೀಕ, ಕ್ರತು, ದೇವಲ, ವಾಮದೇವ, ಮೈತ್ರೇಯಿ, ಮಾರ್ಕಂಡೇಯ, ಇವರೇ ಮೊದಲಾದ ಋಷಿವರ್ಯರು, ಕೃಷ್ಣಾಜಿನಗಳನ್ನು ಹೊದ್ದು, ಜಟಾಭಸ್ಮಭೂಷಿತರಾಗಿ ಇಂದ್ರನ ಸಭೆಗೆ ಬಂದರು.

೧೨. ಅವರೆಲ್ಲರೂ ವೇದವೇದಾಂಗಪಾರಂಗತರಾಗಿ ಸಾಕ್ಷಾನ್ಮಹೇಶ್ವರನಂತೆ ಕಂಗೊಳಿಸುತ್ತಿದ್ದರು. ಅಂತಹ ಮಹಾತ್ಮರನ್ನು ಪೂಜಿಸಿ ದೇವೇಂದ್ರನು ಅವರೆಲ್ಲರಿಗೂ ಉಚಿತವಾದ ಆಸನಗಳನ್ನಿತ್ತನು.

೧೩. ಅನಂತರ ಇಂದ್ರನು ಬ್ರಹ್ಮಸದೃಶರಾದ ಋಷಿಗಳನ್ನು ಕುರಿತು, “ ಓ ಋಷಿವರ್ಯರೇ, ಪರ್ವತರಾಜಪುತ್ರಿಯಾದ ದೇವಿಯನ್ನು ಆರಾಧಿಸುವ ಕ್ರಮವು ಹೇಗೆ” ಎಂದು ಪ್ರಶ್ನಿಸಿದನು.

೧೪. ಪುನಃ ಋಷಿಗಳೊಡನೆ ಇಂದ್ರನು “ ಮಹರ್ಷಿಗಳೇ, ಯಾರು ಭವಾನಿಯನ್ನು ಭಕ್ತಿಯಿಂದಾರಾಧಿಸುವರೋ ಅವರೇ ಧನ್ಯರು. ಅವರೇ ಸುಕೃತಿಗಳು. ಆಕೆಯ ಅನುಗ್ರಹದಿಂದಲೇ ಅಲ್ಲವೇ ನಾನು ಈಗ ಮತ್ತೆ ಸುರೇಂದ್ರನಾಗಿರುವುದು ?

ಭವಾನ್ಯಾಃ ಸರ್ವಮೇವೈತದ್ವ್ಯಕ್ತಮರ್ಹಥ ಸತ್ತಮಾಃ ।
ತೇ ಚೈವಮುಕ್ತಾಃ ಶಕ್ರೇಣ ಮುನಯೋ ಮುನಿಪುಂಗವಾಃ ॥ ೧೫ ॥

ಪ್ರತ್ಯೂಚುಸ್ತಾಂ ನಮಸ್ಕೃತ್ಯ ಶರ್ವಾಣೀಂ ಶಿವರೂಪಿಣೀಂ ।
ತೇ ಧನ್ಯಾಸ್ತೇ ಕೃತಾರ್ಥಾಶ್ಚ ಸಾಧವಸ್ತೇ ಶಚೀಪತೇ ॥ ೧೬ ॥

ಭಕ್ತ್ಯಾ ಯಜಂತಿ ಯೇ ನಿತ್ಯಂ ಪಾರ್ವತೀಂ ಪರಮೇಶ್ವರೀಂ ।
ಕುರ್ವಂತೋಽಪೀಹ ಕರ್ಮಾಣಿ ಚಂಡಿಕಾರ್ಪಿತಮಾನಸಾಃ ॥ ೧೭ ॥

ಸೂರ್ಯಾಂಶವ ಇವ ಜಾಲೈರ್ನ ಬಾಧ್ಯಂತೇಽತ್ರ ಕಿಲ್ಬಿಷೈಃ ।
ಆಯುರಾರೋಗ್ಯಸೌಖ್ಯಾನಿ ಸೌಭಾಗ್ಯಂ ಚ ವರಸ್ತ್ರಿಯಃ ॥ ೧೮ ॥

ಭವಂತಿ ತೇಷಾಂ ಯೇ ನಿತ್ಯಂ ಸ್ತುವಂತಿ ಪರಮೇಶ್ವರೀಂ ।
ಸಂವತ್ಸರಾಸ್ತಥಾ ಮಾಸಾ ವಿಫಲಾ ದಿವಸಾಶ್ಚ ತೇ ॥ ೧೯ ॥

---

೧೫. ಋಷಿವರ್ಯರೇ, ಈ ಜಗತ್ತೆಲ್ಲವೂ ದೇವಿಯದೇ, ಅದರಲ್ಲಿ ಅನುಮಾನವಿಲ್ಲ. ಅದರಿಂದ ಅಂಥ ದೇವಿಯನ್ನು ಆರಾಧಿಸುವ ಕ್ರಮವನ್ನು ಅನುಗ್ರಹಿಸಿರಿ" ಎಂದು ಪ್ರಶ್ನಿಸಲಾಗಿ ಋಷಿಗಳು ಇಂದ್ರನೊಡನೆ ಹೀಗೆ ಹೇಳಿದರು.

೧೬. ಅನಂತರ ಋಷಿಗಳು ಮೊದಲು ಭವಾನೀ ದೇವಿಗೆ ಸಾಷ್ಟಾಂಗ ನಮಸ್ಕಾರ ವೆಸಗಿ, ಅನಂತರ ಇಂದ್ರನಿಗೆ ದೇವಿಯ ಮಹಿಮೆಯನ್ನು ಹೇಳತೊಡಗಿದರು. "ಎಲೈ ಶಚೀಪತಿಯೇ, ಯಾರು ದೇವಿಯನ್ನು ಭಕ್ತಿಯಿಂದಾರಾಧಿಸುವರೋ ಅವರೇ ಧನ್ಯರು.

೧೭-೧೮. ಅವರು ಯಾವ ಕೆಲಸವನ್ನು ಮಾಡಿದರೂ ಚಂಡಿಕಾತೃಪ್ತಿಯಿಂದ ಮಾಡುವರು. ಅಂತಹವರನ್ನು ಪಾಪಗಳು ಎಂದಿಗೂ ಕಟ್ಟಲಾರವು. ಕಿಟಕಿಯಿಂದ ಬಂದ ಸೂರ್ಯಕಿರಣಗಳು ಹೇಗೆ ಕತ್ತಲೆಯನ್ನು ತೊಲಗಿಸಿ ಬೆಳಕನ್ನು ಕೊಡುವುವೋ, ಹಾಗೆಯೇ ದೇವಿಯ ಅನುಗ್ರಹವು ಅವರ ಪಾಪಗಳನ್ನು ನಾಶಮಾಡಿ, ಅವರನ್ನು ಸುಖಿಗಳನ್ನಾಗಿ ಮಾಡುವುದು. ಅಲ್ಲದೆ ಅವರು ದೇವಿಯ ಪೂಜಾಫಲದಿಂದ, ಆಯುಸ್ಸು, ಆರೋಗ್ಯ, ಸೌಖ್ಯ, ಸ್ತ್ರೀಲಾಭ ಇವುಗಳನ್ನು ಸುಲಭವಾಗಿ ಪಡೆಯುವರು.

೧೯. ಯಾರು ನಿತ್ಯವೂ ದೇವಿಯ ಅರ್ಚನೆಯಲ್ಲಿ ಮನಸ್ಸಿಡುವರೋ, ಅವರಿಗೆ ಸಂವತ್ಸರ, ತಿಂಗಳು, ದಿವಸಗಳು ಇವುಗಳೆಲ್ಲಾ ವ್ಯರ್ಥವಾಗುವುವು. ಅಂದರೆ ಅವರಿಗೆ ಕಾಲಗಣನೆಯಿಲ್ಲದೆ ಮೋಕ್ಷವು ಲಭಿಸುವುದು.

ನರಾಣಾಂ ವಿಷಯಾಂಧಾನಾಂ ಯೇಷಾಂ ಗೇಹೇ ನ ಪಾರ್ವತೀ ।
ಯತ್ರ ಯತ್ರಾರ್ಚ್ಯತೇ ದೇವೀ ವರದಾ ಪರಮೇಶ್ವರೀ ॥ ೨೦ ॥

ತತ್ರ ತತ್ರಾಕ್ಷಯಂ ಪುಣ್ಯಂ ಸ್ಯಾದಿತ್ಯಾಹ ಪ್ರಜಾಪತಿಃ ।
ನಾಮೋಚ್ಚಾರಣಮಾತ್ರೇಣ ಯಸ್ಯಾಃ ಕ್ಷೀಣಾಘಸಂಚಯಃ ॥ ೨೧ ॥
ಭವತ್ಯವಾಪ್ತಕಲ್ಯಾಣಃ ಕಸ್ತಾಂ ನಾಽಽರಾಧಯೇಚ್ಛಿವಾಂ ।

ಪಶುಭಿಸ್ತ್ವಿಹ ತುಲ್ಯಾಸ್ತೇ ಮೂಢೈರ್ವಾ ತೇ ಶವಾ ಇವ ॥ ೨೨ ॥
ಯೇ ಮೂಢಾ ನಾರ್ಚಯಂತ್ಯಾರ್ಯಾಂ ಪಾರ್ವತೀಂ ಪರಮೇಶ್ವರೀಂ ।

ಅಚಿಂತ್ಯಾಂ ಸತ್ಸ್ವರೂಪಾಂ ತಾಂ ಶಾಶ್ವತೀಂ ವಿಶ್ವತೋಮುಖೀಂ ।
ಯೇ ಯಜಂತೀಹ ಧನ್ಯಾಸ್ತೇ ಶಿವಾಂ ಸ್ವರ್ಗಾಪವರ್ಗದಾಂ ॥ ೨೩ ॥

---

೨೦. ವಿಷಯಸುಖಿಗಳಾದ ಮನುಷ್ಯರು ಯಾರು ದೇವಿಯನ್ನು ಅರ್ಚಿಸದೇ ಇರುವರೋ, ಅವರ ಸಂವತ್ಸರಾದಿಕಾಲಗಳಾದರೋ ವ್ಯರ್ಥವಾಗಿ ಹೋಗುವುವು. ಒಟ್ಟಿನಲ್ಲಿ ಅವರ ಆಯುಸ್ಸೇ ವ್ಯರ್ಥವೆನಿಸುವುದು. ಯಾರು ಯಾರು ನಿತ್ಯವೂ ದೇವ್ಯಾರಾಧಕರಾಗುವರೋ,

೨೧. ಅವರಿಗೆ ನಿತ್ಯವೂ ಸುಕೃತವು ಅಭಿವೃದ್ಧಿಯಾಗುವುದೆಂದು ಸಾಕ್ಷಾದ್ಬ್ರಹ್ಮದೇವನೇ ಹೇಳಿರುವನು. ಆ ದೇವಿಯ ನಾಮೋಚ್ಚಾರಣೆಯಿಂದಲೇ ಪಾಪ ರಾಶಿಗಳು ನಿವೃತ್ತಿಯಾಗುತ್ತವೆಂದು ಹೇಳಿದ ಮೇಲೆ, ಆಕೆಯ ಆರಾಧನೆಯಿಂದ ಎಂತಹ ಕಲ್ಯಾಣವನ್ನು ಪಡೆಯಬಹುದೆಂಬುದನ್ನು ಮನುಷ್ಯನು ಆಲೋಚಿಸಬೇಕು.

೨೨. ಯಾರು ದೇವಿಯ ಮಹಿಮೆಯನ್ನು ತಿಳಿದೂ, ಪೂಜ್ಯಳಾದ ಮತ್ತು ಪರಮೇಶ್ವರನ ಪ್ರಿಯತಮಳಾದ ಪಾರ್ವತಿಯನ್ನು ಅರ್ಚಿಸುವುದಿಲ್ಲವೋ, ಅವರು ನಿಜವಾಗಿಯೂ ಮೂಢರು ಮತ್ತು ಪಶುಸದೃಶರೇ. ಅಥವಾ ಅವರನ್ನು ಮೃತಪ್ರಾಯರಂತೆ ತಿಳಿಯಬಹುದು.

೨೩. ಪರಮೇಶ್ವರಿಯು, ಅಚಿಂತ್ಯಸ್ವರೂಪಳು, ಸ್ಥಿರವಾದ ಮತ್ತು ಸತ್ತಾದ ಆಕಾರವುಳ್ಳವಳು. ಸರ್ವತೋ ಮುಖವುಳ್ಳವಳು. ಅಂತಹ ದೇವಿಯನ್ನು ಆರಾಧಿಸುವವರೇ ಧನ್ಯರು.

ತಪಸ್ತೀರ್ಥಪ್ರದಾನೈಶ್ಚ ಯಜ್ಞೈರ್ವಾ ಬಹುದಕ್ಷಿಣೈಃ ।
ನ ತಾಂ ಗತಿಂ ಲಭಂತೇತ್ರ ಯಾಂ ಸ್ತುತ್ವಾಚಲಕನ್ಯಕಾಂ ॥ ೨೪ ॥

ಸರ್ವಾನ್ ಕಾಮಾನವಾಪ್ನೋತಿ ಯಾನ್ಯಾನಿಚ್ಛತಿ ಮಾನವಃ ।
ವ್ರತೋಪವಾಸಪೂಜಾಭಿಃ ಸಮಾರಾಧ್ಯ ಮಹೇಶ್ವರೀಂ ॥ ೨೫ ॥

ವ್ರತೇನ ಯೇನ ದೇವೇಂದ್ರ ಪ್ರಸೀದತ್ಯಾಶು ಪಾರ್ವತೀ ।
ಯಚ್ಚೋಲ್ಕಾನವಮೀಸಂಜ್ಞಂ ಶೃಣು ಸರ್ವಫಲಪ್ರದಂ ॥ ೨೬ ॥

ತಸ್ಯಾಂ ನವಮ್ಯಾಂ ಶರ್ವಾಣೀ ಮಹಿಷಾದೀನ್ಮಹಾಸುರಾನ್ ।
ಜಘಾನ ಸಮರೇ ಶಕ್ರ ತೇನ ಸಾ ನವಮೀ ಪ್ರಿಯಾ ॥ ೨೭ ॥

ಆಶ್ವಯುಕ್ಛುಕ್ಲಪಕ್ಷಸ್ಯ ನವಮ್ಯಾಂ ಪ್ರಯತಾತ್ಮವಾನ್ ।
ಸ್ನಾತ್ವಾಭ್ಯರ್ಚ್ಯ ಪಿತ್ರೂನ್ ದೇವಾನ್ ಮನುಷ್ಯಾಂಶ್ಚ ಯಥಾಕ್ರಮಂ ॥೨೮॥

---

೨೪. ದೇವಿಯನ್ನು ಆರಾಧಿಸಿದ ಮನುಷ್ಯನು ಸಮಸ್ತ ತೀರ್ಥ ಯಾತ್ರೆಗಳ, ಯಜ್ಞಯಾಗಗಳ, ಅಸದೃಶವಾದ ಪುಣ್ಯರಾಶಿಯನ್ನೆಲ್ಲಾ ಸುಲಭವಾಗಿ ದೇವಿಯ ಸೇವೆಯಿಂದ ಪಡೆಯುವನು.

೨೫. ದೇವಿಯನ್ನು ವ್ರತ, ಉಪವಾಸ, ಪೂಜೆ, ಇವುಗಳಿಂದ ಅರ್ಚಿಸಿದವನು, ಅವನು ಅಪೇಕ್ಷೆಮಾಡುವ ಸಮಸ್ತ ಇಷ್ಟಾರ್ಥಗಳನ್ನೂ ಸುಲಭವಾಗಿ ಪಡೆಯುವನು.

೨೬. ದೇವೇಂದ್ರನೇ, ದೇವಿಯನ್ನು ತೃಪ್ತಿಗೊಳಿಸಿ, ದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕಾದರೆ, ಉಲ್ಕಾನವಮಿಯೆಂಬ ಇಷ್ಟಾರ್ಥಪ್ರದವಾದ ವ್ರತವನ್ನು ಮಾಡಬೇಕು.

೨೭. ಶರ್ವಾಣಿಯು ಮಹಿಷಾಸುರನೇ ಮೊದಲಾದ ದುಷ್ಟರಾಕ್ಷಸರನ್ನು ಸಂಹರಿಸಿದುದು ನವಮಿಯ ದಿನವೇ. ಆದ್ದರಿಂದಲೇ ಆ ನವಮೀ ತಿಥಿಯು ದೇವಿಗೆ ಇಷ್ಟವಾದದ್ದಾಗಿದೆ.

೨೮. ಆಶ್ವಯುಜ ಶುದ್ಧ ನವಮಿಯೇ ಆ ಪ್ರಸಿದ್ಧವಾದ ವ್ರತಕ್ಕೆ ಶ್ರೇಷ್ಠವಾದ ತಿಥಿಯು. ಆ ದಿವಸ ಪ್ರಾತಃಕಾಲ ಸ್ನಾನಸಂಧ್ಯಾ ವಂದನಾದಿಗಳನ್ನು ತೀರಿಸಿಕೊಂಡು ಕ್ರಮವಾಗಿ ಪಿತೃ, ದೇವ, ಮನುಷ್ಯ ಯಜ್ಞಗಳನ್ನು ನೆರವೇರಿಸಬೇಕು.

ಯಜೇತ್ಪಶ್ಚಾನ್ಮಹಾದೇವೀಂ ಮಹಿಷಾಸುರಘಾತಿನೀಂ ।
ಪುಷ್ಪೈರ್ಧೂಪೈಶ್ಚ ನೈವೇದ್ಯೈಃ ಪಯೋದಧಿಫಲಾದಿಭಿಃ ।
ಭಕ್ತ್ಯಾ ಸಂಪೂಜಯಿತ್ವೈವಂ ಸ್ತುತ್ವಾ ಸಂಪ್ರಾರ್ಥಯೇತ್ತತಃ ॥ ೩೦ ॥

ಮಂತ್ರೇಣಾನೇನ ವೃತ್ರಾರೇ ಶ್ರದ್ಧಾವಾನ್ ಪ್ರಯತೋ ವ್ರತೀ ।
ಮಹಿಷಘ್ನಿ ಮಹಾಮಾಯೇ ಚಾಮುಂಡೇ ಮುಂಡಘಾತಿನಿ ॥ ೩೧ ॥

ದ್ರವ್ಯಮಾರೋಗ್ಯವಿಜಯಂ ದೇಹಿ ದೇವಿ ನಮೋಸ್ತು ತೇ ।
ಭೂತಪ್ರೇತಪಿಶಾಚೇಭ್ಯೋ ರಕ್ಷೋಭ್ಯಶ್ಚ ಮಹೇಶ್ವರಿ ॥ ೩೨ ॥
ದೇವೇಭ್ಯೋ ಮಾನುಷೇಭ್ಯಶ್ಚ ಭಯೇಭ್ಯೋ ರಕ್ಷ ಮಾಂ ಸದಾ ।

ಸರ್ವಮಂಗಳಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।
ಉಮೇ ಬ್ರಹ್ಮಾಣಿ ಕೌಮಾರಿ ವಿಶ್ವರೂಪೇ ಪ್ರಸೀದ ಮೇ ॥ ೩೩ ॥

---

೩೦. ಅನಂತರ ಮಹಿಷಾಸುರಮರ್ದಿನಿಯಾದ ದೇವಿಯನ್ನು ಹೂವು, ಧೂಪ, ದೀಪ ನೈವೇದ್ಯಾದಿಗಳಿಂದಲೂ, ಹಾಲು, ಮೊಸರು, ಹಣ್ಣು ಮೊದಲಾದ ಪೂಜಾ ದ್ರವ್ಯಗಳಿಂದಲೂ, ಭಕ್ತಿಯಿಂದ ಅರ್ಚಿಸಿ ಪ್ರಾರ್ಥಿಸಬೇಕು.

೩೧–೩೨. ಎಲೈ ವೃತ್ರಾರಿಯೆ, ಶ್ರದ್ಧೆಯಿಂದ ದೇವಿಯನ್ನು ಆರಾಧಿಸಿದ ಮೇಲೆ ಈ ರೀತಿಯಾಗಿ ಪ್ರಾರ್ಥನೆ ಮಾಡಬೇಕು. ಎಲೈ ಮಹಿಷಾಸುರಮರ್ದಿನಿಯೇ, ಮಾಯಾರೂಪಳೇ, ಮುಂಡಾಸುರನಿಷೂದಿನಿಯೇ, ನಮಗೆ ಸಮಸ್ತ ಐಶ್ವರ್ಯವನ್ನೂ, ಆರೋಗ್ಯವನ್ನೂ, ವಿಜಯವನ್ನೂ ಕೊಡು. ಭೂತ, ಪ್ರೇತ, ಪಿಶಾಚಿಗಳಿಂದಲೂ, ಯಕ್ಷರಾಕ್ಷಸರಿಂದಲೂ, ದೇವಮನುಷ್ಯರಿಂದಲೂ, ಭಯವಿಲ್ಲದಂತೆ ನನ್ನನ್ನು ರಕ್ಷಿಸು.

೩೩. ಸರ್ವಮಂಗಳಪ್ರದಳೇ, ಶುಭಾದಾಯಕಳೇ, ಸಮಸ್ತ ಇಷ್ಟಾರ್ಥವನ್ನೂ ಸಾಧಿಸುವವಳೇ, ಗೌರೀದೇವಿಯೇ, ಬ್ರಹ್ಮಜ್ಞಾನಪ್ರದಾಯಕಳೇ, ಸರ್ವದಾ ಕುಮಾರೀ ರೂಪದಿಂದಿರುವವಳೇ, ಪ್ರಪಂಚರೂಪಿಣಿಯೇ, ನನಗೆ ಪ್ರಸನ್ನಳಾಗು. ನಮ್ಮನು ರಕ್ಷಿಸು, ಎಂದು ಪ್ರಾರ್ಥಿಸಬೇಕು.

ಕುಮಾರೀರ್ಭೋಜಯಿತ್ವಾ ವಾ ಕುರ್ಯಾದಾಚ್ಛಾದನಾದಿಭಿಃ ।
ಯಥಾವರ್ಣಂ ಕುಮಾರೀಶ್ಚ ಭೋಜಯಿತ್ವಾ ಕ್ಷಮಾಪಯೇತ್ ॥
ನವ ಸಪ್ತಾಥ ಏಕಾಂ ವಾ ಚಿತ್ತವಿತ್ತಾನುಸಾರತಃ ॥ ೩೫ ॥

ಶ್ರದ್ಧಯಾ ಪ್ರೀತಿಮಾಪ್ನೋತಿ ದೇವೀ ಭಗವತೀ ಶಿವಾ ।
ಅನೇನ ವಿಧಿನಾ ವರ್ಷಂ ಮಾಸಿ ಮಾಸಿ ಸಮಾಚರೇತ್ ॥ ೩೬ ॥

ತತಃ ಸಂವತ್ಸರಸ್ಯಾಂತೇ ಭೋಜಯಿತ್ವಾ ಕುಮಾರಿಕಾಃ ।
ವಸ್ತ್ರೈರಾಭರಣೈಃ ಪೂಜ್ಯಾಃ ಪ್ರಣಿಪತ್ಯ ವಿಸರ್ಜಯೇತ್ ॥ ೩೭
ಸರುಕ್ಮಶೃಂಗಾಂ ಗಾಂ ದದ್ಯಾತ್ಸವಿಪ್ರಾಯ ಸುಶೋಭನಾಂ ।
ನರೋ ವಾ ಯದಿ ವಾ ನಾರೀ ವ್ರತಮೇತತ್ಕರೋತಿ ಚ ॥ ೩೮ ॥
ಉಲ್ಕಾವತ್ಸಾ ಸಪತ್ನೀನಾಂ ತೇಜಸಾ ಭಾತಿ ಭೂತಲೇ ।
ಶ್ರೀಮಹಾನವಮೀತ್ಯೇಷಾ ಖ್ಯಾತಾ ಸುರಪತೇಽಧುನಾ ॥ ೩೯ ॥

---

೩೫. ಹೀಗೆ ವ್ರತವೆಲ್ಲಾ ಆದಮೇಲೆ ತನ್ನ ಶಕ್ತಿಯನ್ನು ಅನುಸರಿಸಿ ಹೆಣ್ಣು ಮಕ್ಕಳಿಗೆ ವಸ್ತ್ರಭೂಷಣಾದಿಗಳನ್ನು ಕೊಟ್ಟು ಭೋಜನ ಮಾಡಿಸಬೇಕು. ಏಳುಜನ ಅಥವಾ ಒಂಬತ್ತುಜನ ಹೆಣ್ಣುಮಕ್ಕಳಿಗೆ ಭೋಜನಾದಿಗಳನ್ನು ಮಾಡಿಸುವುದು ಒಳ್ಳೆಯದು, ಶಕ್ತಿಯಿಲ್ಲದಿದ್ದರೆ ಒಬ್ಬಳೇ ಹೆಣ್ಣು ಮಗುವಿಗೆ ತೃಪ್ತಿ ಪಡಿಸಿದರೂ ಸಾಕು.

೩೬. ಹೀಗೆ ಆ ವ್ರತವನ್ನು ಶ್ರದ್ಧೆಯಿಂದ ವರ್ಷಪರ್ಯಂತವಾಗಿ ಪ್ರತಿ ತಿಂಗಳಲ್ಲೂ ಆಚರಿಸಿದರೆ, ದೇವಿಯು ತೃಪ್ತಳಾಗಿ ಸರ್ವಾತಿಶಯವಾದ ಫಲವನ್ನು ಕೊಡುವಳು.

೩೭. ಹೀಗೆ ಸಂವತ್ಸರಪರ್ಯಂತ ವ್ರತಮಾಡಿದ ಮೇಲೆ ಕೊನೆಯಲ್ಲಿ ಭೋಜನಾದಿಗಳಿಂದ ತೃಪ್ತಿಪಡಿಸಿ, ಅವರಿಗೆ ನಮಸ್ಕಾರಾದಿಗಳನ್ನು ಮಾಡಿ ವ್ರತವನ್ನು ಸಮಾಪ್ತಿಗೊಳಿಸಬೇಕು.

೩೮-೩೯. ಈ ವ್ರತಾಂಗವಾಗಿ ಸುವರ್ಣದ ಮುಚ್ಚಳದಿಂದ ಕೂಡಿದ ಕೊಂಬುಳ್ಳ ಒಂದು ಹಸುವನ್ನು ದಾನಮಾಡಬೇಕು. ಈ ವ್ರತವನ್ನು ಹೆಂಗಸರಾಗಲಿ, ಗಂಡಸರಾಗಲಿ ಮಾಡಬಹುದು. ಸ್ತ್ರೀಯು ಆಚರಿಸಿದ್ದೇ ಆದರೆ, ಹೆಚ್ಚು ತೇಜಸ್ವಿನಿಯಾಗಿ ಸವತಿಯರಿಗೆ ಉಲ್ಕಾಪಾತದಂತೆ ಭೀಕರಳಾಗಿದ್ದು, ತಾನು ಅತಿಶಯವಾದ ಸುಖವನ್ನು ಪಡೆಯುವಳು. ಈ ವ್ರತಕ್ಕೆ ಮಹಾನವಮೀ ವ್ರತವೆಂದೂ ಹೆಸರು.

ಸರ್ವಸಿದ್ಧಿಕರೀ ಪುಣ್ಯಾ ಸರ್ವೋಪದ್ರವನಾಶಿನೀ ।
ನಾಽಽಧ್ಯಾತ್ಮಿಕಂ ತಸ್ಯ ಭಯಂ ದೈವಂ ಸ್ಯಾನ್ನಾಧಿಭೌತಿಕಂ ॥ ೪೦ ॥

ರಕ್ಷತ್ಯೇವ ಸದಾ ಶಕ್ರ ಸರ್ವಾಪತ್ಸು ಚ ಚಂಡಿಕಾ ।
ಶಾಂತಿಪುಷ್ಟಿಕರೀ ಪುಣ್ಯಾ ಪುತ್ರಾರೋಗ್ಯಾರ್ಥಲಾಭದಾ ॥ ೪೧ ॥
ಅನುಷ್ಠೇಯಾ ಸದಾ ಪುಂಭಿಶ್ಚತುರ್ವರ್ಗಫಲಾರ್ಥಿಭಿಃ ।

ಯಶ್ಛದ್ಮನಾಪಿ ಕುರುತೇ ವ್ರತಮೇತದಿತ್ಥಂ ।
ಚಂಡೀಪ್ರಿಯಂ ಸುರಪತೇ ಮುನಿಸಿದ್ಧಜುಷ್ಟಂ ।
ರುದ್ರಾಂಗನಾಕುಲವರಾಕುಲಿತಂ ವಿಮಾನಮಾರುಹ್ಯ ।
ಯಾತಿ ಸ ಸುಖೇನ ಶಿವಸ್ಯ ಲೋಕಂ ॥ ೪೨ ॥

---

೪೦. ಈ ವ್ರತವು ಸಮಸ್ತಸಿದ್ಧಿಯನ್ನೂ ಒದಗಿಸತಕ್ಕದ್ದು. ಸಮಸ್ತ ತೊಂದರೆಗಳನ್ನೂ ನಿವಾರಿಸತಕ್ಕದು. ಇದನ್ನಾಚರಿಸಿದವರಿಗೆ, ಆಧ್ಯಾತ್ಮಿಕವಾದ, ಮತ್ತು ಆದಿಭೌತಿಕವಾದ ಭಯಗಳು ಎಂದೂ ಇರುವುದಿಲ್ಲ.

೪೧. ಎಲೈ ದೇವೇಂದ್ರನೇ, ಚಂಡೀದೇವಿಯು ಭಕ್ತರನ್ನು ಸರ್ವಾಪತ್ಕಾಲದಲ್ಲಿಯೂ ರಕ್ಷಿಸುವಳು. ಶಾಂತಿ, ಪುಷ್ಟಿ, ಪುತ್ರಸಂಪತ್ತು, ಆರೋಗ್ಯ, ಐಶ್ವರ್ಯ ಇವೇ ಮೊದಲಾದುವುಗಳು, ಈ ದೇವಿಯ ಅನುಗ್ರಹದಿಂದಲೇ ಲಭಿಸುವುವು. ಆದ್ದರಿಂದ ಫಲಕಾಮಿಗಳಾದವರು ಸರ್ವದಾ ಈ ವ್ರತವನ್ನಾಚರಿಸಬೇಕು.

೪೨. ಯಾರು ದೇವಿಗೆ ಅತ್ಯಂತಪ್ರಿಯವೂ ಸಕಲಮುನಿಪ್ರಣೀತವೂ ಆದ ಈ ವ್ರತವನ್ನು ವ್ಯಾಜಾಂತರದಿಂದಲಾದರೂ ಭಕ್ತಿಯಿಂದಾಚರಿಸುವರೋ, ಅವರು ಈ ದೇಹತ್ಯಾಗಾನಂತರದಲ್ಲಿ, ಅಪ್ಸರಸ್ತ್ರೀಯರಿಂದ ಸುತ್ತುವರಿಯಲ್ಪಟ್ಟು, ದಿವ್ಯವಿಮಾನವನ್ನು ಹತ್ತಿ, ಸುಖವಾಗಿ ಶಿವಲೋಕವನ್ನು ಹೊಂದುವರು. ಇದರಲ್ಲಿ ಸಂಶಯವಿಲ್ಲ

ಶೂಲಾಗ್ರಭಿನ್ನಮಹಿಷಾಸುರಪಾದಪೀಠಾ ।
ಮುತ್ಖಾತಖಡ್ಗರುಚಿರಾಂಗದಬಾಹುದಂಡಾಂ ।
ಯೇಽಭ್ಯರ್ಚಯಂತಿ ಹಿ ತು ನಕ್ತಭುಜೋ ನವಮ್ಯಾಂ ।
ದುರ್ಗಾರ್ತಿದುರ್ಗಗಹನಂ ನ ವಿಶಂತಿ ಮರ್ತ್ಯಾಃ ॥ ೪೩ ॥

ಅನ್ಯದ್ಯದಾಹ ಕಪಿಲೋ ಭಗವಾನ್ಮಹಾತ್ಮಾ ।
ಮೇರೌ ಚ ದೈತ್ಯಗುರವೇ ಭೃಗುನಂದನಾಯ ।
ತತ್ತ್ವಂ ಶೃಣುಷ್ವ ಸುಮನಾ ಮಘವನ್ ಮಹಾಂತ ।
ಮಾರಾಧನಂ ಕಿಯದಪಿ ತ್ರಿಜಗಜ್ಜನನ್ಯಾಃ ॥ ೪೪ ॥

ಯಾ ಕಾಮಧೇನು ಸದೃಶೀ ಕಿಲ ಭಕ್ತಿಭಾಜಾಂ ।
ಯಾ ಕಲ್ಪಪಾದಪಸಮಾ ಸುಕೃತಾರ್ಥಿನಾಂ ಚ ।

---

೪೩. ದೇವಿಯು ತನ್ನ ತ್ರಿಶೂಲದಿಂದ ಮಹಿಷಾಸುರನನ್ನು ಕೊಂದು ಅವನ ದೇಹವನ್ನೇ ತುಳಿದು ನಿಂತಿರುವಳು. ಕೈಯ್ಯಲ್ಲಿ ನಿಶಿತವಾದ ಖಡ್ಗವೂ, ತೋಳಿನಲ್ಲಿ ಸುಂದರವಾದ ವಜ್ರದ ಬಳೆಯೂ, ದೇವಿಯ ಬಾಹುದಂಡವನ್ನಲಂಕರಿಸುತ್ತಿವೆ. ಇಂತಹ ದೇವಿಯನ್ನು ಯಾರು ನವಮಿಯ ದಿನ ಉಪವಾಸವಿದ್ದು ಪೂಜಿಸುವರೋ, ಅವರು ಎಂದಿಗೂ ಪೀಡೆಯೆಂಬ ಗಹನವಾದ ಕೋಟೆಯನ್ನು ಪ್ರವೇಶಿಸಲಾರರು.

೪೪. ಓ ಇಂದ್ರನೇ, ಈ ತತ್ತ್ವವನ್ನು ಹಿಂದೆ ಮಹಾತ್ಮನಾದ ಕಪಿಲಾಚಾರ್ಯನು ರಾಕ್ಷಸಗುರುವಾದ ಶುಕ್ರಾಚಾರ್ಯನಿಗೆ ಮೇರುಪರ್ವತದಲ್ಲಿ ವಿವರಿಸಿದನು. ಆದ್ದರಿಂದ, ಎಲೈ ಮಘವಂತನೇ, ನೀನು ಈ ಜಗಜ್ಜನನಿಯ ಆರಾಧನೆಯು ಮಹಾಫಲಪ್ರದಾಯಕವೆಂಬುದನ್ನು ದೃಢವಾಗಿ ತಿಳಿದುಕೋ.

೪೫. ಕಪಿಲಾಚಾರ್ಯನು ಶುಕ್ರಾಚಾರ್ಯನಿಗೆ ಹೀಗೆ ದೇವಿಯ ಮಹಿಮೆಯನ್ನು ವಿವರಿಸಿದನು. ಅಯ್ಯಾ ಶುಕ್ರಾಚಾರ್ಯನೇ, ಭಕ್ತರಿಗೆ ದೇವಿಯು ಕಾಮಧೇನು ಸದೃಶಳು. ಕಲ್ಪವೃಕ್ಷದಂತೆ, ಸುಕೃತರಾಶಿಯನ್ನೂ ಸಮಸ್ತ ಇಷ್ಟಾರ್ಥಗಳನ್ನೂ

ಚಿಂತಾಮಣೀತ್ಯವಗತಾ ಧನಲಿಪ್ಸುಭಿರ್ಯಾ ।
ಕೇಸ್ಮಾನ್ನ ತಾಂ ಭೃಗುಸುತಾತ್ರ ಯಜಂತಿ ಗೌರೀಂ ॥ ೪೫ ॥

ಯೇ ತಾಂ ಸ್ಮರಂತಿ ನಿಗಡೈರಪಿ ಬದ್ಧಪಾದಾ ।
ವ್ಯಾಘ್ರಾಹಿಚೋರನೃಪವಹ್ನಿಭಯೇಷು ದುರ್ಗಾಂ ।
ತೇಷಾಂ ನ ಕಿಂಚಿದಪಿ ಶತ್ರುಭಯಂ ನೃಣಾಂ ಸ್ಯಾ ।
ದ್ದೃಢಾಸ್ತು ಮುಕ್ತಿಮುಪಲಭ್ಯ ಸುಖಂ ಲಭಂತೇ ॥ ೪೬ ॥

ಹೇ ಭಾರ್ಗವಾರ್ಯ ಗಿರಿಜಾಪ್ರಣತಿಪ್ರಸಾದೇ ।
ದೈವಂ ನಿರುದ್ಧಮಪಿ ನ ಪ್ರಭವತ್ಯವಶ್ಯಂ ।
ಆಸನ್ನಮೇಘಸಮಯಾಂ ವನರಾಜಿಮುಚ್ಚೈಃ ।
ಗ್ರೀಷ್ಮೋಽಪಿ ಪಲ್ಲವಚಯೋಪಚಿತಾಂ ಕರೋತಿ ॥ ೪೭ ॥

ಒದಗಿಸತಕ್ಕವಳು. ದ್ರವ್ಯಾಭಿಲಾಷೆಯುಳ್ಳ ಸೇವಕರಿಗೆ ಚಿಂತಾಮಣಿಯಂತಿರುವವಳು. ಇಂತಹ ಗೌರೀದೇವಿಯನ್ನು ಯಾರು ತಾನೇ ಪೂಜಿಸಲಾರರು ?

೪೬. ಮನುಷ್ಯರು ಬಂಧನಕ್ಕೆ ಸಿಕ್ಕಿ ಕಷ್ಟಪಡುತ್ತಿದ್ದರೂ, ಹುಲಿ, ಹಾವು, ಕಳ್ಳರು, ಬೆಂಕಿ ಇವುಗಳ ಅನಾಹುತಕ್ಕೆ ಒಳಪಟ್ಟು ನರಳುತ್ತಿದ್ದರೂ, ದೇವಿಯನ್ನು ದೃಢಮನಸ್ಸಿನಿಂದ ಅವರು ಭಜಿಸಿದ್ದೇ ಆದರೆ, ಮೇಲಿನ ಭಯಗಳೆಲ್ಲದರಿಂದಲೂ ಅವರು ಮುಕ್ತರಾಗಿ ನಿಜವಾದ ಮೋಕ್ಷಕ್ಕೂ ಅರ್ಹರೆನಿಸುವರು.

೪೭. ಎಲೈ ಶುಕ್ರಾಚಾರ್ಯನೇ, ಪಾರ್ವತಿಯ ಪಾದಪದ್ಮದ ಅನುಗ್ರಹವು ಮನುಷ್ಯರಿಗೆ ಒದಗಿದ್ದೇ ಆದರೆ, ಅವರಿಗೆ ದೈವವು ಎಷ್ಟೇ ವಿರುದ್ಧವಾಗಿದ್ದರೂ ಅದು ದುಷ್ಫಲವನ್ನು ಎಂದಿಗೂ ಕೊಡಲಾರದು. ಗ್ರೀಷ್ಮಋತುವು ಎಷ್ಟೇ ತರುಲತೆಗಳನ್ನು ಒಣಗಿಸುವ ಶಕ್ತಿಯುಳ್ಳದ್ದಾದರೂ, ಮುಂದೆ ವರ್ಷಋತುವಿರುವುದರಿಂದ ಅದೇ ಗ್ರೀಷ್ಮವು, ಲತೆಗಳನ್ನು ಬೆಳೆಸುವುದರಲ್ಲಿ ಸಹಾಯಕವಾಗುವುದಿಲ್ಲವೆ ?

ಧಾತ್ರಾ ಸ್ವಹಸ್ತಲಿಖಿತಾನಿ ಲಲಾಟಪಟ್ಟೇ ।
ದೈವಾಕ್ಷರಾಣಿ ದುರಿತೈಕನಿಬಂಧನಾನಿ ।
ಗೌರೀಪ್ರಸಾದಜನಿತೇನ ಜನಃ ಸಮಸ್ತ ।
ಸ್ತಾನ್ಯೇಕತಃ ಸ ಪರಿಮಾರ್ಜಯತೀತಿ ಚಿತ್ರಂ ॥ ೪೮ ॥

ತೇ ಸಂಮತಾ ಜನಪದೇಷು ಧನಾನಿ ತೇಷಾಂ ।
ತೇಷಾಂ ಯಶಾಂಸಿ ನ ಚ ಸೀದತಿ ಬಂಧುವರ್ಗಃ ।
ಧನ್ಯಾಸ್ತ ಏವ ನಿಭೃತಾತ್ಮಜಭೃತ್ಯದಾರಾ ।
ಯೇಷಾಂ ಸದಾಽಭ್ಯುದಯದಾ ಗಿರಿಜಾ ಪ್ರಸನ್ನಾ ॥ ೪೯ ॥

ಯಃ ಕಾರಯೇದ್ವರಪತಾಕಸಿತಾಭ್ರಗೌರಂ ।
ತದ್ಗೋಪುರಂ ಚ ಸುಧಯಾಽಽಯತನಂ ಭವಾನ್ಯಾಃ ।
ಚಂದ್ರಾವದಾತಭವನೇ ವಿಪುಲೇ ಚ ಸೌಖ್ಯಂ ।
ರಾಜ್ಯಂ ಶ್ರಿಯಂ ಚ ಭುವಿ ಕಾಮಮುಪೈತಿ ಸತ್ಯಂ ॥ ೫೦ ॥

---

೪೮. ನಮ್ಮ ಪಾಪಕರ್ಮಾನುಗುಣವಾಗಿ ಬ್ರಹ್ಮನು, ನಾವು ಪಡುವ ಕಷ್ಟ ಪರಂಪರೆಗಳನ್ನು, ನಮ್ಮ ಹಣೆಯಲ್ಲಿ ಬರೆದಿಡುವನು. ಆ ಬರವಣಿಗೆಯನ್ನು ಗೌರೀ ದೇವಿಯ ಅನುಗ್ರಹದಿಂದ ಮನುಷ್ಯರು ಸುಲಭವಾಗಿ ಅಳಿಸಿಹಾಕಿಬಿಡುವರು. ಇದು ಆಶ್ಚರ್ಯವಲ್ಲವೇ ?

೪೯. ಯಾರು ಪಾರ್ವತಿಯ ಅನುಗ್ರಹಕ್ಕೆ ಪಾತ್ರರಾಗುವರೋ, ಅವರು ಜಾಗ್ರತೆಯಾಗಿ ಏಳಿಗೆಯನ್ನು ಪಡೆಯುವರು. ಅವರೇ ಧನ್ಯರು. ಅವರೇ ಲೋಕ ಮಾನ್ಯರು. ಅವರಿಗೆ ಐಶ್ವರ್ಯ, ಕೀರ್ತಿ, ಬಂಧುವರ್ಗ, ಇವೆಲ್ಲವೂ ಅಭಿವೃದ್ಧಿ ಯಾಗುವುವು.

೫೦. ದೇವಿಯ ಅರ್ಚನೆಗಾಗಿ, ಪವಿತ್ರವಾದ ಪತಾಕೆಗಳಿಂದಲೂ, ಶುಭ್ರವಾದ ಸುಣ್ಣಬಣ್ಣಗಳಿಂದಲೂ, ಕಂಗೊಳಿಸುವ ಗೋಪುರದಿಂದ ಕೂಡಿದ ದೇವಾಲಯವನ್ನು ಯಾರು ನಿರ್ಮಿಸುವರೋ, ಅವರು ಈ ಲೋಕದಲ್ಲಿಯೇ ರಾಜರಾಗಿ, ಚಂದ್ರಿಕೆಯಿಂದ ಮನೋಹರವಾಗಿ, ಕಂಗೊಳಿಸುವ ದಿವ್ಯಭವನದಲ್ಲಿ ಸುಖಸಂಪತ್ತುಗಳಿಂದ ಕೂಡಿ ವಾಸಿಸುವರು. ಅಲ್ಲದೆ ಸಕಲ ಇಷ್ಟಾರ್ಥಗಳನ್ನೂ ನಿಜವಾಗಿ ಹೊಂದುವರು.

ಯೇ ಕಾರಯಂತಿ ಭವನಂ ಭೃಗುನಂದನಾಸ್ಯಯೋಃ ।
ಶಕ್ತ್ಯಾ ಸುವರ್ಣರಜತಾಯಸತಾಮ್ರಶೈಲಂ ।
ಸಾಮಂತಮೌಳಿಮಣಿರಶ್ಮಿಸಮುಜ್ಜ್ವಲೇ ತೇ ।
ಸಿಂಹಾಸನೇಽಂಗದಕಿರೀಟಭೃತೋ ರಮಂತೇ ॥ ೫೧ ॥

ಯೇ ಮೇರುಮೂರ್ಧ್ನಿ ಸುರಸಂಘಕೃತಾಭಿಷೇಕಾಂ ।
ಪಂಚಾಮೃತೈರ್ಗಿರಿಸುತಾಮಭಿಷೇಚಯಂತಿ ।
ತೇ ದಿವ್ಯಕಲ್ಪಮನುಭೂಯ ಸುರೇಂದ್ರರಾಜ್ಯಂ ।
ರಾಜ್ಯಾಭಿಷೇಕಕಮಲಂ ಪುನರಾಪ್ನುವಂತಿ ॥ ೫೨ ॥

ಯೇ ದೇವದಾರುಮಲಯೋದ್ಭವಚಂದನೇನ ।
ಯೇ ಕುಂಕುಮೇನ ಚ ಶಿವಾಮುಪಲೇಪಯಂತಿ ।

---

೫೧. ಎಲೈ ಶುಕ್ರಾಚಾರ್ಯನೇ, ದೇವಿಗೆ ಸುವರ್ಣದಿಂದಾಗಲಿ ಬೆಳ್ಳಿಯಿಂದಾಗಲಿ, ಕಬ್ಬಿಣ, ತಾಮ್ರ ಇವುಗಳಿಂದಾಗಲೀ ಯಾರು ಸ್ಥಿರವಾದ ಆಲಯವನ್ನು ನಿರ್ಮಿಸುವರೋ ಅವರು ಸಾಮಂತರಾಜರ ಕಿರೀಟದ ಕಾಂತಿಯಿಂದ ಕೂಡಿದ ಸಿಂಹಾಸನದಲ್ಲಿ, ಸರ್ವಾಲಂಕಾರಭೂಷಿತರಾಗಿ ಸುಖಪಡುವರು.

೫೨. ಹಿಂದೆ ಸಮಸ್ತದೇವತೆಗಳೂ ದೇವಿಗೆ ಮೇರುಪರ್ವತದ ಶಿಖರದಲ್ಲಿ ದಿವ್ಯಪಂಚಾಮೃತಗಳಿಂದ ಅಭಿಷೇಕಮಾಡಿದ್ದರು. ಹಾಗೆಯೇ ಈಗಲೂ ಯಾರಾದರೂ ಮೇರುಪರ್ವತದ ಶಿಖರದಲ್ಲಿರುವ ದೇವಿಯನ್ನು ಪಂಚಾಮೃತಗಳಿಂದ ಅಭಿಷೇಕ ಮಾಡಿ, ಅರ್ಚನೆಮಾಡಿದ್ದೇ ಆದರೆ, ಅವರು ಕಲ್ಪಪರ್ಯಂತವಾಗಿ ದೇವೇಂದ್ರನ ಸೌಖ್ಯವನ್ನನುಭವಿಸಿ, ಪ್ರತಿಜನ್ಮದಲ್ಲಿಯೂ ಹಾಗೆಯೇ, ರಾಜ್ಯಾಭಿಷೇಕವನ್ನು ಮಾಡಿಸಿಕೊಳ್ಳುವರು.

೫೩. ದೇವದಾರು, ಶ್ರೀಗಂಧ, ಚಂದನ, ಕುಂಕುಮಕೇಸರಿ, ಇವೇ ಮೊದಲಾದ ಸುಗಂಧ ದ್ರವ್ಯಗಳಿಂದ ಗಂಧವನ್ನು ಮಾಡಿ, ದೇವಿಯ ದೇಹಕ್ಕೆ ಯಾರು ಲೇಪಿಸುವರೋ, ಅವರು, ದಿವ್ಯಗಂಧಭೂಯಿಷ್ಠವಾದ ಸುವಸ್ತ್ರಗಳನ್ನು

ತೇ ದಿವ್ಯಗಂಧಪಟವಾಸಸುಗಂಧದೇಹಾ ।
ನಂದಂತಿ ನಂದನವನೇಷು ಸಹಾಪ್ಸರೋಭಿಃ ॥ ೫೩ ॥

ದಿವ್ಯೈಶ್ಚ ಪದ್ಮಕರವೀರಕಜಾತಿಪುಷ್ಪೈಃ ।
ಗೌರೀಂ ಶುಭ್ರೈರನುದಿನಂ ನನು ಯೇಽರ್ಚಯಂತಿ ।
ತೇ ಭೂತಲೇ ನರಪತಿತ್ವಮವಾಪ್ಯ ಯೋಗಾ ।
ದ್ಭೋಕ್ಷ್ಯಂತಿ ಸೌಖ್ಯಮಣರೇಚಿ ಪರಾಂ ಚ ಸಿದ್ಧಿಂ ॥ ೫೪ ॥

ಆಮೋದಿಭಿರ್ಗುರುಕಪುಷ್ಪಸುಗಂಧಧೂಪೈರ್ಯೇ ।
ಲೋಕನಾಥದಯಿತಾಮಿಹ ಧೂಪಯಂತಿ ।
ಕರ್ಪೂರರಸಾರಸಮಗಂಧವರಾಃ ಸುರಾಮಾ ।
ಆಲಿಂಗಯಂತಿ ದಯಿತಾಃ ಸುರರಾಜಲೋಕೇ ॥ ೫೫ ॥

ಧರಿಸಿಕೊಂಡು ನಂದನವನದಲ್ಲಿ ಅಪ್ಸರಸ್ತ್ರೀಯರಿಂದ ಪರಿವೃತರಾಗಿ ಸುಖಹೊಂದುವವರಾಗುವರು.

೫೪. ಯಾರು ನಿತ್ಯವೂ ದೇವಿಯನ್ನು ಸುಗಂಧಮಯವಾದ ಕಮಲ, ಕಣಿಗಲು, ಜಾಜಿ ಮೊದಲಾದ ಹೂವುಗಳಿಂದ ಅರ್ಚಿಸುವರೋ, ಅವರು ಭೂಮಿಯಲ್ಲಿ ರಾಜರಪದವಿಯನ್ನು ಪಡೆಯುವುದಲ್ಲದೆ, ಆ ರಾಜಸೌಖ್ಯಗಳನ್ನು ಅನುಭವಿಸಿ ಕೊನೆಗೆ ಮೋಕ್ಷಸಿದ್ಧಿಯನ್ನು ಹೊಂದುವರು.

೫೫. ಸುಗಂಧಮಯವಾದ ಪುಷ್ಪಗಳಿಂದಲೂ, ಸುವಾಸನೆಯುಳ್ಳ ಧೂಪಗಳಿಂದಲೂ ಯಾರು ದೇವಿಯನ್ನು ಸೇವಿಸುವರೋ ಅಂತಹವರಿಗೆ, ಕರ್ಪೂರದ ಸುವಾಸನೆಯಂತೆ ವಾಸನೆಯುಳ್ಳ ಸುಂದರಸ್ತ್ರೀಯರು ದೇವಲೋಕದಲ್ಲಿ ದೊರಕಿ ಅಂತಹವರಿಂದ ವಿಶೇಷ ಸೌಖ್ಯವನ್ನು ಹೊಂದುವರಾಗುವರು.

ಚೋಧೂಯತೇ ಕನಕದಂಡವಿರಾಜಿತೈಶ್ಚ ।
ಸಚ್ಚಾಮರೈಃ ಪ್ರಚಲಕುಂಡಲಸುಂದರೀಭಿಃ ।
ದಿವ್ಯಾಂಬರಸ್ರಗನುಲೇಪನಭೂಷಿತಾಂಗಃ ।
ಕೃತ್ವಾ ಮೃಡಾನಿಭವನೇ ವರವಸ್ತ್ರಪೂಜಾಂ ॥ ೫೬ ॥

ದೇದೀಪ್ಯತೇ ಸಕನಕೋಜ್ಜ್ವಲಪದ್ಮರಾಗ ।
ರತ್ನಪ್ರಭಾಭರಣಹೇಮಮಯೇ ವಿಮಾನೇ ।
ದಿವ್ಯಾಂಗನಾಪರಿವೃತೋ ಮನಸೋಽಭಿರಾಮಃ ।
ಪ್ರಜ್ವಾಲ್ಯ ದೀಪಮಮಲಂ ಭವನೇ ಭವಾನ್ಯಾಃ ॥ ೫೭ ॥

ಯೋ ಜಾಗರಂ ಗಿರಿಸುತಾಭವನೇ ದದಾತಿ ।
ಚೈತ್ರೋತ್ಸವಾದಿದಿವಸೇಽಭ್ಯಧಿ ತೂರ್ಯನಾದಂ ।
ವೀಣಾಮೃದಂಗಮಧುರಸ್ವರಭಾಷಿಣೀಭಿಃ ।
ಸಂಗೀಯತೇ ಸ ಹಿ ಕೃಶೋದರಕಿಂನರೀಭಿಃ ॥ ೫೮ ॥

---

೫೬. ದೇವಿಗೆ ಉತ್ತಮವಾದ ವಸ್ತ್ರವನ್ನಿಟ್ಟು ಅರ್ಚಿಸಿದವರು, ಸುವರ್ಣ ಮಯವಾದ ಚಾಮರಗಳನ್ನು ಹಿಡಿದಿರುವ ಸುರಸುಂದರಿಯರಿಂದ ಸೇವಿಸಲ್ಪಡುವರು. ಅಲ್ಲದೆ ದಿವ್ಯಾಂಬರ, ದಿವ್ಯಮಾಲ್ಯ, ದಿವ್ಯಾಭರಣ, ಇವುಗಳಿಂದ ಅಲಂಕೃತರಾಗಿ ಸದಾ ಕಾಂತಿಯುಕ್ತರಾಗಿ ವಿರಾಜಿಸುತ್ತಿರುವರು.

೫೭. ದೇವಿಯ ದೇವಾಲಯದಲ್ಲಿ ದೀಪಗಳನ್ನು ಉರಿಸಿ. ಆ ಮೂಲಕ ದೇವಿಯ ಅನುಗ್ರಹಕ್ಕೆ ಪಾತ್ರರಾದವರು, ಸುವರ್ಣಗಳಿಂದಲೂ ಪದ್ಮರಾಗಮಣಿ ಗಳಿಂದಲೂ, ದಿವ್ಯರತ್ನಗಳಿಂದಲೂ ನಿರ್ಮಿತವಾದ ವಿಮಾನದಲ್ಲಿ ಕುಳಿತವರಾಗಿ ದಿವ್ಯ ನಾರಿಯರಿಂದ ಸೇವಿತರಾಗುತ್ತಾ ದಿವ್ಯಸುಖವನ್ನು ಹೊಂದುವರು.

೫೮. ದೇವಿಯ ಭವನದಲ್ಲಿ, ದೇವಿಯ ಎದುರಿಗೆ ಚೈತ್ರೋತ್ಸವವೇ ಮೊದ ಲಾದ ಉತ್ಸವಗಳನ್ನು ನೆರವೇರಿಸುತ್ತಾ, ದಿವ್ಯ ಗಾನಾದಿಗಳಿಂದ ಕಾಲವನ್ನು ಕಳೆದವರು ಐಹಿಕದೇಹತ್ಯಾಗಾನಂತರದಲ್ಲಿ, ಸ್ವರ್ಗಲೋಕದ ಕಿನ್ನರಿಯರ ಕಲಕಂಠದ ಸುವ್ಯಕ್ತ ರಾಗವನ್ನು ಕೇಳುತ್ತಾ ಸುಖಿಸುವರು.

ಕುರ್ವಂತಿ ಯೇ ಸದುಪಲೇಪನವಾಸಚಿತ್ರಂ ।
ಸಂಮಾರ್ಜನಂ ಗಿರಿಸುತಾಯತನೇಽನುರಕ್ತಾಃ ।
ಮುಕ್ತಾಕಲಾಪಮಣಿಕಾಂಚನಭಿತ್ತಿಚಿತ್ರೈಃ ।
ವೈಡೂರ್ಯಕುಟ್ಟಿಮತಲೇ ಭವನೇ ವಸಂತಿ ॥ ೫೯ ॥

ದದ್ಯಾಚ್ಚ ಯಃ ಪರಮಭಕ್ತಿಯುತೋ ಭವಾನ್ಯಾ ।
ಘಂಟಾವಿತಾನಮಥ ಚಾಮರಮಾತಪತ್ರಂ ।
ಕೇಯೂರಹಾರಮಣಿಕುಂಡಲಮಂಡಿತೋಽಸೌ ।
ರತ್ನಾಧಿಪೋ ಭವತಿ ಭೂತಲಚಕ್ರವರ್ತೀ ॥ ೬೦ ॥

ಅಭ್ಯರ್ಚಯಂತಿ ವಿಧಿವದ್ವಿವಿಧೋಪಚಾರೈ ।
ಗಂಧರ್ವಸಿದ್ಧವಿಬುಧಸ್ತುತಪಾದಪದ್ಮಾಂ
ಭಕ್ತ್ಯಾ ಪ್ರಹೃಷ್ಟಮನಸಃ ಪ್ರಣಮಂತಿ ದೇವೀಂ ।
ತೇ ಭೂರ್ಭುವಃಸ್ವಮಹಿಮಾಪ್ತಫಲಾ (?)ಭವಂತಿ ॥ ೬೧ ॥

---

೫೯. ಯಾರು ದೇವಿಯ ಆಲಯವನ್ನು ನಿತ್ಯವೂ ಗುಡಿಸುತ್ತಾ ಬಟ್ಟೆಯೇ ಮೊದಲಾದುವುಗಳಿಂದ ಅಲಂಕರಿಸುತ್ತಾ ದೇವಿಯನ್ನು ಆರಾಧಿಸುವರೋ, ಅವರು ರತ್ನ, ಸುವರ್ಣ, ವೈಡೂರ್ಯ ಇವುಗಳಿಂದ ಕೆತ್ತಲ್ಪಟ್ಟ ಗೋಡೆಯುಳ್ಳ ದಿವ್ಯಭವನದಲ್ಲಿ ವಾಸಿಸುವರು.

೬೦. ದೇವಿಗೆ ಭಕ್ತಿಯಿಂದ ಕಿರುಗೆಜ್ಜೆಗಳುಳ್ಳ ಛತ್ರಿಚಾಮರಗಳನ್ನು, ಅರ್ಪಿಸಬೇಕು. ಹಾಗೆ ಅರ್ಪಣಮಾಡಿದವರು ಅನರ್ಘ್ಯವಾದ ಆಭರಣಗಳಿಂದ ಕೂಡಿದವರಾಗಿ, ಭೂಮಿಯಲ್ಲಿ ರತ್ನಗಳಿಗೆ ಒಡೆಯರೆನಿಸಿ ಕುಬೇರನಿಗೆ ಸರಿಸಮರೆನಿಸುವರು.

೬೧. ಗಂಧರ್ವರಿಂದಲೂ, ಸಿದ್ಧವಿದ್ಯಾಧರರಿಂದಲೂ ಅರ್ಚಿತವಾದ ಪಾದಪದ್ಮವುಳ್ಳ ದೇವಿಯನ್ನು ಸಂತೋಷಚಿತ್ತರಾಗಿ ಯಾರು ಧ್ಯಾನಮಾಡುವರೋ, ಯಾರು ನಮಸ್ಕರಿಸುವರೋ, ಅಂತಹವರು ಭೂರ್ಭುವಾದಿ ಸಮಸ್ತಲೋಕಗಳ ಐಶ್ವರ್ಯವೆನ್ನೂ ಪಡೆದು ಸುಖಿಗಳೆನಿಸುವರು.

ಗಾಯಂತಿ ಯೇ ಗಿರಿಸುತಾಂ ಚ ವಿಲೋಕಯಂತಿ ।
ಧ್ಯಾಯಂತಿ ವಾಮಲಧಿಯಶ್ಚ ಶಿವಾಂ ಸ್ಮರಂತಿ ।
ಗೌರೀಮುಮಾಂ ಭಗವತೀಂ ಜಗದೇಕದೇವೀಂ ।
ತೇ ವೈ ಪ್ರಯಾಂತಿ ಪರಮಂ ಪದಮಿಂದುಮೌಳೇಃ ॥ ೬೨ ॥

ದೇವೀಂ ಸಮಸ್ತಭುವನಾದಿವಿಚಿತ್ರದೇಹಾಂ ।
ಸೂರ್ಯಾಗ್ನಿಚಂದ್ರನಯನಾಮಿಹ ಕಾಲವಕ್ತ್ರಾಂ ।
ದೀರ್ಘಾಷ್ಟದಿಗ್ಭುಜಚಯಾಂ ಮೃದುಭಾವಹಾಸಾಂ ।
ಯೇಽಭ್ಯರ್ಚಯಂತಿ ಹೃದ್ಯಹಂತ ತ ಏವ ಧನ್ಯಾಃ ॥ ೬೩ ॥

ಇಕ್ಷ್ವಾಕುಪೂರುಪೃಥುರಾಘವ ದುಂಧುಮಾರ ।
ಮಾಂಧಾತೃಹೈಹಯ ಯಯಾತ್ಯಜಮೀಢಮುಖ್ಯೈಃ ।

---

೬೨. ಗೌರೀದೇವಿಯೆನಿಸಿ, ಲೋಕಮಾತೆಯಂತೆ ಸರ್ವರನ್ನೂ ರಕ್ಷಿಸುವ ಭಗವತಿಯಾದ ಉಮೆಯನ್ನು ಕುರಿತು, ಯಾರು ಗಾನಮಾಡುವರೋ, ಯಾರು ದರ್ಶನಗೈಯ್ಯುವರೋ, ಯಾರು ಸ್ಮರಿಸುವರೋ, ಅವರೆಲ್ಲರೂ ಅನಾಯಾಸವಾಗಿ ಶಿವ ಸಾಯುಜ್ಯವನ್ನು ಪಡೆಯುವರು.

೬೩. ಸಮಸ್ತಲೋಕಕ್ಕೂ ಆಶ್ಚರ್ಯವನ್ನುಂಟುಮಾಡುವಂತಹ ದೇಹವುಳ್ಳ ವಳು ಪಾರ್ವತಿಯು. ದೇವಿಗೆ ಸೂರ್ಯ, ಅಗ್ನಿ, ಚಂದ್ರ, ಇವರು ಮೂವರು ಮೂರು ಕಣ್ಣುಗಳು. ದೀರ್ಘವಾದ ಎಂಟು ಭುಜಗಳು ದೇವಿಗೆ ಕಂಡುಬರುತ್ತಿವೆ. ಮುಖವು ಮೃದುವಾದ ಮಂದಹಾಸದಿಂದ ಕೂಡಿದೆ. ಇಂತಹ ದೇವಿಯನ್ನು ಯಾರು ಮನಸ್ಸಿನಲ್ಲಿ ಸರ್ವದಾ ಉಪಾಸನೆಮಾಡುವರೋ ಅವರೇ ಧನ್ಯರು.

೬೪. ಹಿಂದೆ, ಆರೋಗ್ಯ, ಸಂತಾನ, ಭೂಮಿ, ಕೀರ್ತಿ, ಸುಖ ಇವುಗಳನ್ನು ಅತಿಶಯವಾಗಿ ಪಡೆಯಲು, ಇಕ್ಷ್ವಾಕು, ಪೂರು, ಪೃಥು, ರಾಘವ, ದುಂಧುಮಾರ, ಮಾಂಧಾತೃ, ಹೈಹಯ, ಯಯಾತಿ, ಅಜಮಿಳ ಇವರೇ ಮೊದಲಾದವರು ದೇವಿ

ಆರೋಗ್ಯಸಂತತಿಧರಾಜಯಸೌಖ್ಯಲುಬ್ಧೈಃ |
ಸಂಪೂಜಿತಾ ಭಗವತೀ ಮನುಜೈರ್ಭವಾನೀ ॥ ೬೪ ॥

ಯೋಗೇಶ್ವರೀಂ ವೇದವತೀಂ ಭವಾನೀಂ |
ಬ್ರಾಹ್ಮೀಂ ಕುಮಾರೀಂ ಸುಭಗಾಂ ಚ ವಾಣೀಂ |
ನಾರಾಯಣೀಂ ಹೈಮವತೀಮನಂತಾಂ |
ವಿಶ್ವಾದಿಭೂತಾಂ ಭಜ ಭಾರ್ಗವಾರ್ಯಾಂ ॥ ೬೫ ॥

ಯಶಾಂಸಿ ವಿದ್ಯಾಃ ಸುಖಮರ್ಥಮಾಯು |
ರ್ವಿಭೂತಯಃ ಪುಷ್ಟಿರನರ್ಥಹಾನಿಃ |
ತದ್ಭಕ್ತಿಭಾಜಾಂ ಭವಿನಾಂ ವಿಮುಕ್ತಯೇ |
ಭವಂತಿ ಯೋಗಾನುಗತಾಃ ಸಮಾಧಯಃ ॥ ೬೬ ॥

ಯನ್ನು ಆರಾಧಿಸಿರುವರು. ಅಲ್ಲದೆ, ಅವರು ತಮ್ಮ ತಮ್ಮ ಇಷ್ಟಾರ್ಥಗಳನ್ನು ದೇವಿಯ ವರಬಲದಿಂದ ಪಡೆದಿರುವರು.

೬೫. ಎಲೈ ಶುಕ್ರಾಚಾರ್ಯನೇ, ಪಾರ್ವತೀದೇವಿಯನ್ನು ಯೋಗಾಭಿಮಾನಿ ದೇವತೆಯೆಂದೂ, ವೇದಜ್ಞಳೆಂದೂ ತಿಳಿದು, ಭವಾನಿ, ಬ್ರಾಹ್ಮೀ, ಕುಮಾರಿ, ವಾಣೀ, ನಾರಾಯಣೀ, ಹಿಮವತ್ಪುತ್ರೀ, ಅನಂತಳು, ಲೋಕಕ್ಕೆ ಆದಿಶಕ್ತಿಯಂತಿರುವವಳು ಎಂಬ ಭಾವನೆಯಿಂದ ಧ್ಯಾನಮಾಡು.

೬೬. ದೇವಿಯು ತನ್ನ ಭಕ್ತರಿಗೆ ಯಶಸ್ಸನ್ನೂ, ವಿದ್ಯೆಯನ್ನೂ, ಸುಖವನ್ನೂ, ಆಯುರ್ಧನಾದಿಗಳನ್ನೂ ಕೊಟ್ಟು, ಅವರ ಅನರ್ಥಗಳನ್ನು ತೊಲಗಿಸಿ, ಅವರನ್ನು ಸರ್ವವಿಧದಲ್ಲಿಯೂ ಅಭಿವೃದ್ಧಿಪಡಿಸುವಳು. ಕೊನೆಯಲ್ಲಿ, ಯೋಗಿಗಳಿಗೆ ಒದಗುವ ಜ್ಞಾನಸಂಪತ್ತನ್ನು ಅವರಿಗೆ ದಯಪಾಲಿಸಿ, ಮುಕ್ತರನ್ನಾಗಿ ಮಾಡುವಳು.

ನೀಚೋಽಪಿ ಮಂದಮತಿರಲ್ಪಕುಲೋದ್ಭವೋಽಪಿ ।
ಭೀರುಃ ಶಠೋಽಪಿ ಚಪಲೋಽಪಿ ನಿರುದ್ಯಮೋಽಪಿ ।
ಗೌರೀಪದಾಬ್ಜಯುಜನಾರ್ಥಮಿಹೋದ್ಯತಶ್ಚ ।
ಸಂದೃಶ್ಯತೇ ನನು ಸುರೈರಪಿ ಗೌರವೇಣ ॥ ೬೭ ॥

ತಾವತ್ಕೃತಾಕೃತಮಪಿ ಪ್ರತಿಘಾತಮೇತಿ ।
ಕರ್ಮಾರ್ಜಿತೇನ ವಿಧಿನಾಪಿ ಕೃತೋದ್ಯಮೇನ ।
ಆರ್ಯಾಪದಾಂಬುಜರಜೋ ವಿರಜಃ ಪ್ರಣಮ್ಯ ।
ಯಾವನ್ನ ವತ್ಸ ಶಿರಸಾ ಧ್ರಿಯತೇ ಜನೇನ ॥ ೬೮ ॥

ವಿದ್ಯಾ ತಪಃ ಕುಲಜನಿರ್ವಿವಿಧಂ ಚ ಶಿಲ್ಪಂ ।
ಶೌರ್ಯಂ ಮತಿಶ್ಚ ವಿನಯಸ್ತು ವಿದಗ್ಧತಾ ಚ ।

---

೬೭. ನೀಚನಾದರೂ, ಅಲ್ಪಜ್ಞನಾದರೂ, ದುಷ್ಕುಲಪ್ರಸೂತನಾದರೂ, ಭಯಗ್ರಸ್ತನಾಗಿದ್ದರೂ, ಚಪಲನಾದರೂ, ಉದ್ಯೋಗಹೀನನಾಗಿ ಮೋಸಗಾರನಾಗಿದ್ದರೂ, ಗೌರಿಯ ಪಾದಕಮಲದ ಆರಾಧನೆಯಲ್ಲಿ ತೊಡಗಿದವನಾದರೆ ಅವನನ್ನು ದೇವತೆಗಳು ಸಹ ಮರ್ಯಾದೆಯಿಂದ ಕಾಣುವರು.

೬೮. ಅಯ್ಯಾ, ಶುಕ್ರನೇ, ಮನುಷ್ಯರು ಶುದ್ಧರಾಗಿ ಎಲ್ಲಿಯವರೆಗೆ ದೇವಿಯ ಚರಣರಜವನ್ನು ತಮ್ಮ ಶಿರಸ್ಸಿನಲ್ಲಿ ಧರಿಸಲಾರರೋ ಅಲ್ಲಿಯವರೆಗೆ, ಅವರು ಪಾಪ ಕರ್ಮದಿಂದ ಒದಗಿ ಬಂದ ದುಷ್ಫಲಗಳನ್ನು ತೆಗೆದುಹಾಕಲು ಯಾವರೀತಿಯಿಂದಲೂ ಸಾಧ್ಯರಾಗಲಾರರು. ಅವರು ತಮ್ಮ ಪಾಪದ ಫಲವನ್ನು ಅನುಭವಿಸುತ್ತಲೇ ಇರಬೇಕಾಗುವುದು.

೬೯. ಪಾರ್ವತಿಯ ಅನುಗ್ರಹವೊಂದು ದೊರೆಯದೆ, ಇತರ ವಿಧಗಳಾದ ವಿದ್ಯೆ, ತಪಸ್ಸು, ಸತ್ಕುಲಜನನ, ಶಿಲ್ಪ, ಶೌರ್ಯಬುದ್ಧಿ, ವಿನಯ, ಪಾಂಡಿತ್ಯ ಇವೇ ಮೊದಲಾದುವುಗಳು ಎಷ್ಟೇ ಅತಿಯಾಗಿ ತನ್ನಲ್ಲಿದ್ದರೂ ಅವೆಲ್ಲವೂ ಹುಲ್ಲುಕಡ್ಡಿಗೆ

ಏತೇ ಗುಣಾ ಗುಣವತಾಂ ಪರಮೋ ಚ ಭೇದ್ರಾ ।
ಗೌರೀಪ್ರಸಾದರಹಿತಸ್ಯ ತೃಣೀಭವಂತಿ ॥ ೬೯ ॥

ತಾವನ್ನ ಸಿಧ್ಯತಿ ರಸೋ ನ ರಸಾಯನಾನಿ ।
ಮಂತ್ರಾ ಮಹೋದಯಫಲಾ ವಿಲಸತ್ಪ್ರವಾದಾಃ ।
ಕ್ಲಿಶ್ಯಂತಿ ಸಾಧಕಜನಾ ಭುವಿ ವರ್ತಿಕಾಶ್ಚ ।
ಯಾವನ್ನ ತುಷ್ಯತಿ ಕನೇ ವರದಾ ಭವಾನೀ ॥ ೭೦ ॥

ಗೋಬ್ರಾಹ್ಮಣಾರ್ಚನಪರಾಶ್ಚ ರತಾಃ ಸ್ವಧರ್ಮೇ ।
ಯೇ ಮದ್ಯಮಾಂಸವಿಮುಖಾಃ ಶುಚಯಶ್ಚ ಶೈವಾಃ ।
ಸತ್ಯಪ್ರಿಯಾಃ ಸಕಲಭೂತಹಿತೇ ರತಾಶ್ಚ ।
ತೇಷಾಂ ಚ ತುಷ್ಯತಿ ಸದಾ ಸುಮತೇ ಮೃಡಾನೀ ॥ ೭೧ ॥

ಸಮನಾಗಿ ವ್ಯರ್ಥವಾಗುವುವು. ಗೌರಿಯ ಅನುಗ್ರಹಕ್ಕೆ ಪಾತ್ರರಾದವರಿಗೆ ಇವು ಗುಣಗಳಾಗಿ ಪರಿಣಮಿಸುವುವು.

೭೦. ಮನುಷ್ಯನು ಒಂದು ರಸಸಿದ್ಧಿಯನ್ನು ಪಡೆಯಬೇಕಾದರೂ, ರಸಾಯನಗಳ ಪ್ರಯೋಜನವನ್ನು ಕಾಣಬೇಕಾದರೂ, ಮಂತ್ರಗಳ ಮಹಿಮೆಯನ್ನು ಅರಿಯಬೇಕಾದರೂ, ಸಾಧ್ಯಾಂಶಗಳನ್ನು ಸಾಧಿಸಬೇಕಾದರೂ, ಭವಾನೀದೇವಿಯ ಅನುಗ್ರಹವು ಅತ್ಯಾವಶ್ಯಕ. ಭವಾನಿಯ ಕರುಣೆಯಿಲ್ಲದೆ ಅವು ಯಾವುವೂ ಸಿದ್ಧಿಸಲಾರವು.

೭೧. ಪಾರ್ವತಿಯ ದಯೆಗೆ ಪಾತ್ರರಾಗಬೇಕಾದರೆ, ಮನುಷ್ಯರು, ಗೋಬ್ರಾಹ್ಮಣರ ಸೇವೆಯಲ್ಲಿ ನಿರತರಾಗಿರಬೇಕು. ತಮ್ಮ ತಮ್ಮ ಧರ್ಮವನ್ನು ಪಾಲಿಸುತ್ತಾ, ಮದ್ಯಮಾಂಸಗಳನ್ನು ಭಕ್ಷಿಸದೆ,ಶುಚಿಯಾಗಿ, ಶಿವಭಕ್ತರಾಗಿ, ಸತ್ಯದಲ್ಲಿ ಆಸಕ್ತಿಯನ್ನು ಹೊಂದಿ, ಪ್ರಾಣಿದಯಾಶಾಲಿಗಳಾಗಿರಬೇಕು. ಇಂತಹವರಿಗೆ ಪಾರ್ವತಿಯು ಸುಲಭವಾಗಿ ಒಲಿಯುವಳು.

ಭೂತಾದಿಭೂತಾಂ ವಿಷಯೇಂದ್ರಿಯಾಣಾಂ ।
ಪರಾಂ ತಥಾಂತಃಕರಣಾತ್ಮರೂಪಾಂ ।
ಸದಾಕ್ಷಯಾಂ ಕಾಯಮನೋವಚೋಭಿಃ ।
ಸಂಚಿಂತಯಾರ್ಯಾಂ ಸಕಲಾರ್ಥದಾತ್ರೀಂ ॥ ೭೨ ॥

ಅಜಾಮೇಕಾಂ ಲೋಹಿತಶುಕ್ಲವರ್ಣಾಂ ।
ಬಹ್ವೀಃ ಪ್ರಜಾಃ ಸೃಜ್ಯಮಾನಾಂ ಸುರೂಪಾಂ ।
ಅಜೋಹ್ಯೇಕೋ ಜುಷಮಾಣೋನುಶೇತೇ ।
ಜಹಾತ್ಯೇನಾಂ ಭುಕ್ತಭೋಗಾಮಜೋಽನ್ಯಃ ॥ ೭೩ ॥

ಪ್ರಭಾವಮೇತಂ ತ್ರಿಜಗಜ್ಜನನ್ಯಾಃ ।
ತವೋದಿತಂ ಭಾರ್ಗವ ವೇದಗುಹ್ಯಂ ।

---

೭೨. ಎಲೈ ಭಾರ್ಗವನೇ, ದೇವಿಯು ಸಕಲ ಲೋಕಕ್ಕೂ ಆದಿಕಾರಣಳು. ವಿಷಯೇಂದ್ರಿಯಗಳೆಲ್ಲಕ್ಕೂ ಅಂತಃಕರಣಸ್ಥಾನದಲ್ಲಿರತಕ್ಕವಳು. ಎಂದಿಗೂ ನಾಶವಾಗದಂತಹ ಆಕೃತಿಯುಳ್ಳ ಮತ್ತು ಸಕಲ ಇಷ್ಟಾರ್ಥಗಳನ್ನೂ ಒದಗಿಸುವಂತಹ ಪಾರ್ವತಿಯನ್ನು, ದೇಹದಿಂದಲೂ, ಮಾತು ಮತ್ತು ಮನಸ್ಸಿನಿಂದಲೂ ಸೇವಿಸಿ ಧನ್ಯನಾಗು.

೭೩. ದೇವಿಯು ಉತ್ಪತ್ತಿರಹಿತಳು. ಶ್ವೇತ, ರಕ್ತ ಇವುಗಳಿಂದ ಮಿಶ್ರಿತವಾದ ವರ್ಣವುಳ್ಳವಳು. ಪ್ರಜೆಗಳನ್ನು ಸೃಷ್ಟಿಸುವುದರಲ್ಲಿ ದಕ್ಷಳು. ಮಹಾಮಹಿಮಳು. ಇಂತಹ ದೇವಿಯನ್ನು ಸೇವಿಸುವವನು, ಪುನರ್ಜನ್ಮವನ್ನು ಹೊಂದದೆ ಮುಕ್ತನಾಗುವನು. ಪಾಪಾನುಭವಸಿದ್ಧನಾದವನು ಈ ದೇವಿಯನ್ನು ಭಜಿಸದೆ ನೀಚನೆನಿಸಿಕೊಳ್ಳುವನು.

೭೪. ಎಲೈ ಶುಕ್ರಾಚಾರ್ಯನೇ, ತ್ರಿಲೋಕಮಾತೆಯಾದ ಪಾರ್ವತಿಯ ಮಹಿಮೆಯನ್ನು ನಿನಗೆ ವಿಸ್ತರಿಸಿರುವೆನು. ಈ ದೇವಿಯ ಮಹಿಮೆಯು ಸಕಲ

ಶ್ರೋತುಂ ಯದಿಚ್ಛಾ ತದುದೀರಯಸ್ವ ।
ವಿಪ್ರೇಷು ಕಿಂ ವಾ ಕಥನೀಯಮಸ್ತಿ ॥ ೭೪ ॥

ಶೃಣ್ವಂತಿ ಯೇ ವಾಥ ಪಠಂತಿ ಮರ್ತ್ಯಾಃ ।
ಸ್ತವಾನ್ವಿತಾಖ್ಯಾನಮಿದಂ ಭವಾನ್ಯಾಃ ।
ಭುಕ್ತ್ವಾಕ್ಷಯಾನ್ ಕಾಮಸುಖಾಂಶ್ಚ ತೇತ್ರ ।
ಪ್ರಯಾಂತಿ ಶಂಭೋಃ ಪರಮಂ ಪದಂ ಚ ॥ ೭೫ ॥

॥ ಸೂತ ಉವಾಚ ॥

ಏವಂ ಮುನೀನಾಂ ಗದಿತಂ ಭವಾನ್ಯಾಶ್ಚರಿತಂ ಶುಭಂ ।
ಶ್ರುತ್ವಾ ಪುರಂದರಃ ಶ್ರೀಮಾನ್ ಭಕ್ತ್ಯಾ ಪರಮಯಾ ದ್ವಿಜಾಃ ॥ ೭೬ ॥

ಆರಾಧಯಾಮಾಸ ತದಾ ಪಾರ್ವತೀಂ ಪರಮೇಶ್ವರೀಂ ।
ವರಾಂಶ್ಚ ವಿವಿಧಾಲ್ಲಬ್ಧ್ವಾ ಚಕ್ರೇ ರಾಜ್ಯಮಕಂಟಕಂ ॥ ೭೭ ॥

ವೇದಗಳಲ್ಲಿಯೂ ಗೋಪ್ಯರೀತಿಯಲ್ಲಿ ವಿವರಿಸಲ್ಪಟ್ಟಿದೆ. ಇನ್ನೇನಾದರೂ ನೀನು ಕೇಳಲು ಇಷ್ಟವಿದ್ದರೆ ಪ್ರಶ್ನಿಸು. ಅದನ್ನು ಹೇಳುವೆನು. ತಿಳಿದವರಲ್ಲಿ ಹೆಚ್ಚಾಗಿ ಹೇಳತಕ್ಕದ್ದೇನಿದೆ?

೭೫. ಯಾರು ದೇವಿಯ ಮಹಿಮಾದರ್ಶಕವಾದ ಈ ಅಧ್ಯಾಯವನ್ನು ಕೇಳುವರೋ, ಓದುವರೋ, ಅವರು ಸಮಸ್ತವಾದ ಸುಖಭೋಗಗಳನ್ನು ಅನುಭವಿಸಿ ಕೊನೆಗೆ ಶಿವಸಾಯುಜ್ಯವನ್ನು ಪಡೆಯುವರು.''

೭೬. ಹೀಗೆ ಸಕಲ ಮುನಿಗಳೂ ಹೇಳಿದ ಪಾರ್ವತಿಯ ಮಹಿಮೆಯನ್ನು ದೇವೇಂದ್ರನು ಭಕ್ತಿಯಿಂದ ಶ್ರವಣಮಾಡಿದನು.

೭೭. ಆಗ ಇಂದ್ರನು ಭಕ್ತಿಯಿಂದ ಪರಮೇಶ್ವರಿಯಾದ ಪಾರ್ವತಿಯನ್ನು ಆರಾಧಿಸಿ, ದೇವಿಯ ಅನುಗ್ರಹದಿಂದ ಅನೇಕ ವರಗಳನ್ನು ಪಡೆದು ತನ್ನ ರಾಜ್ಯವನು ನಿಷ್ಕಂಟಕವನ್ನಾಗಿ ಮಾಡಿಕೊಂಡು ಸ್ಥಿರವಾಗಿ ರಾಜ್ಯವಾಳಲಾರಂಭಿಸಿದನು.

ಇತಿ ಶ್ರೀ ಬ್ರಹ್ಮಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ
ಪಾರ್ವತೀಪ್ರಭಾವಕಥನಂ ನಾಮ
ಪಂಚಾಶೋಽಧ್ಯಾಯಃ.

ಇಲ್ಲಿಗೆ ಬ್ರಹ್ಮಪುರಾಣಾಂತರ್ಗತವಾದ ಸೌರೋಪಪುರಾಣದಲ್ಲಿ ಸೂತ ಶೌನಕ ಸಂವಾದ ರೂಪವಾಗಿ, ಪಾರ್ವತೀಪ್ರಭಾವವನ್ನು ವರ್ಣಿಸುವ ಐವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಏಕಪಂಚಾಶೋಽಧ್ಯಾಯಃ

॥ ಋಷಯ ಊಚುಃ ॥

ತಿಥೀನಾಂ ನಿರ್ಣಯಂ ಸೂತ ಪ್ರಾಯಶ್ಚಿತ್ತವಿಧಿಂ ತಥಾ ।
ವಕ್ತುಮರ್ಹಸಿ ಚಾಸ್ಮಾಕಂ ವ್ಯಾಸಶಿಷ್ಯ ಮಹಾಮತೇ ॥ ೧ ॥

॥ ಸೂತ ಉವಾಚ ॥

ಶೃಣುಧ್ವಮೃಷಯಸ್ಸರ್ವೇ ತಿಥೀನಾಂ ನಿರ್ಣಯಂ ಪರಂ ।
ಅನಿರ್ಣೀತಾಸು ತಿಥಿಷು ನ ಕಿಂಚಿತ್ಕರ್ಮ ಸಿದ್ಧ್ಯತಿ ॥ ೨ ॥

ಐವತ್ತೊಂದನೆಯ ಅಧ್ಯಾಯ.

೧. ಶೌನಕಾದಿಮಹರ್ಷಿಗಳು ಪುನಃ ಸೂತಪುರಾಣೀಕರನ್ನು ಕುರಿತು, "ಮಹರ್ಷಿಯೇ, ಸಕಲ ಕರ್ಮಗಳಿಗೂ ಮೂಲಭೂತವಾದದ್ದು ತಿಥಿನಿರ್ಣಯವು. ಆ ತಿಥಿಗಳಲ್ಲಿ ಮಾಡುವ ಕರ್ಮದಲ್ಲಿ ವ್ಯತ್ಯಾಸವು ತೋರಿಬಂದರೆ ಅದಕ್ಕೆ ಪ್ರಾಯಶ್ಚಿತ್ತವೂ ಹೇಳಲ್ಪಟ್ಟಿದೆಯಷ್ಟೆ. ಆ ತಿಥಿನಿರ್ಣಯವನ್ನೂ, ಪ್ರಾಯಶ್ಚಿತ್ತವನ್ನೂ ನಮಗೆ ವಿವರವಾಗಿ ತಿಳಿಸಬೇಕು" ಎನ್ನಲು,

೨. ಅದನ್ನು ವಿವರಿಸಲೋಸುಗ ಸೂತಮಹರ್ಷಿಗಳು ಹೀಗೆ ಹೇಳತೊಡಗಿದರು. "ಎಲೈ ಋಷಿಶ್ರೇಷ್ಠರೇ, ನಿಮ್ಮ ಕೋರಿಕೆಯಂತೆ ಈಗ ತಿಥಿನಿರ್ಣಯವನ್ನು ನಿರೂಪಿಸುವೆನು. ತಿಥಿನಿರ್ಣಯವಿಲ್ಲದೆ ಮಾಡಿದ ಕರ್ಮವು ಎಂದಿಗೂ ಫಲಕಾರಿಯಾಗುವುದಿಲ್ಲ.

ಶ್ರೌತಂ ಸ್ಮಾರ್ತಂ ವ್ರತಂ ದಾನಂ ಯಚ್ಚಾನ್ಯತ್ಕರ್ಮ ವೈದಿಕಂ ।
ನಿರ್ಣೀತಾಸು ತಿಥಿಷ್ವೇವ ಕರ್ಮ ಕುರ್ವೀತ ನಾನ್ಯಥಾ ॥ ೩ ॥

ಪ್ರಾಯಃ ಪ್ರಾಂತಮುಪೋಷ್ಯಂ ಸ್ಯಾತ್ತಿಥೇರ್ದೈವಫಲೇಪ್ಸುಭಿಃ ।
ಮೂಲಂ ಹಿ ಪಿತೃತುಷ್ಟ್ಯರ್ಥಂ ಪಿತ್ರ್ಯಂ ಚೋಕ್ತಂ ಮಹರ್ಷಿಭಿಃ ॥ ೪ ॥

ಯಾಂ ಪ್ರಾಪ್ಯಾಸ್ತಮುಪೈತ್ಯರ್ಕಃ ಸಾ ಚೇತ್ಸ್ಯಾತ್ತ್ರಿಮುಹೂರ್ತಿಕಾ।
ಧರ್ಮಕೃತ್ಯೇಷು ಸರ್ವೇಷು ಸಂಪೂರ್ಣಾಂ ತಾಂ ವಿದುಸ್ತಿಥಿಂ ॥ ೫ ॥

ಕ್ಷಯೇ ಪೂರ್ವಾ ಪ್ರಕರ್ತವ್ಯಾ ವೃದ್ಧೌ ಕಾರ್ಯಾ ತಥೋತ್ತರಾ ।
ತಿಥೇಸ್ತುಸ್ಯಾಸ್ತ್ರಿಕ್ಷಣಾಯಾಃ ಕ್ಷಯವೃದ್ಧಿತ್ವಕಾರಣಂ ॥ ೬ ॥

---

೩. ಶ್ರುತ್ಯುಕ್ತವೇ ಆಗಲಿ, ಸ್ಮೃತಿಪ್ರೇರಿತವೇ ಆಗಲಿ, ವ್ರತ, ದಾನ, ಇವುಗಳಲ್ಲಿ ಯಾವುದೇ ಕರ್ಮವಾದರೂ, ಅದಕ್ಕಾಗಿ ನಿರ್ಣಯವಾಗಿರುವ ತಿಥಿಯಲ್ಲಿ ಅದನ್ನು ನಡೆಸದೇ ಇದ್ದರೆ ಅದು ವ್ಯರ್ಥವೆನಿಸುವುದು.

೪. ದೈವಫಲವನ್ನು ಅಪೇಕ್ಷಿಸುವವರು, ಆ ತಿಥಿಯಲ್ಲಿ ಉಕ್ತವಾದ ದೈವಿಕ ಕರ್ಮಗಳನ್ನು ಮಾಡಲು ಮುಂಚೆ ಉಪವಾಸವನ್ನು ಮಾಡಬೇಕು. ಪಿತೃತೃಪ್ತ್ಯರ್ಥವಾಗಿ ಮಾಡುವ ಕೆಲಸಗಳಿಗೆ ಪೈತೃಕಕರ್ಮವೆಂದು ಹೆಸರು.

೫. ಸೂರ್ಯಾಸ್ತಕಾಲದಲ್ಲಿರುವ ತಿಥಿಯು ಆ ದಿನದಲ್ಲಿ ಪೂರ್ವಭಾವಿಯಾಗಿ ಮೂರುಮುಹೂರ್ತ ಅಂದರೆ ಆರು ಗಳಿಗೆಗಳು ವ್ಯಾಪ್ತಿಯಿದ್ದರೆ, ಆ ತಿಥಿಯೇ ಧರ್ಮಕಾರ್ಯಗಳಿಗೆ ಪ್ರಶಸ್ತವಾದುದೆಂದು ಹೇಳುವರು.

೬. ತಿಥಿಕ್ಷಯದಲ್ಲಿ ತಿಥಿಯ ಪೂರ್ವಭಾಗವೂ, ತಿಥಿವೃದ್ಧಿಯಲ್ಲಿ ಉತ್ತರಭಾಗವೂ ಕರ್ಮಾನುಷ್ಠಾನಗಳಿಗೆ ಯೋಗ್ಯವಾದದ್ದು ಒಂದು ದಿನದಲ್ಲಿ ಆ ತಿಥಿಯು ಮೂರು ಗಳಿಗೆಗಿಂತ ಕಮ್ಮಿ ಬಂದರೆ ಅದು ಕ್ಷಯತಿಥಿಯು. ಮೂರು ಗಳಿಗೆಗಿಂತ ಹೆಚ್ಚಿನ ಗಳಿಗೆಗಳು ಆ ದಿನದಲ್ಲಿ ಕಂಡುಬಂದರೆ, ಅದು ವೃದ್ಧಿತಿಥಿಯೆನಿಸುವುದು.

ಅಷ್ಟಮ್ಯೇಕಾದಶೀ ಷಷ್ಠೀ ತೃತೀಯಾ ಚ ಚತುರ್ದಶೀ ।
ಕರ್ತವ್ಯಾಃ ಪರಸಂಯುಕ್ತಾ ಅಪರಾಃ ಪೂರ್ವಮಿಶ್ರಿತಾಃ ॥ ೭ ॥

ಬೃಹತ್ತಲ್ಪಾ ತಥಾ ರಂಭಾ ಸಾವಿತ್ರೀ ವಟಪೈತೃಕೀ ।
ಕೃಷ್ಣಾಷ್ಟಮೀ ಚ ಭೂತಾ ಚ ಕರ್ತವ್ಯಾ ಸಂಮುಖೀ ತಿಥಿಃ ॥ ೮ ॥

ಶುಕ್ಲೇ ದ್ವೇ ದ್ವೇ ತಥಾ ಕೃಷ್ಣೇ ಯುಗಾದೀ ಕವಯೋ ವಿದುಃ ।
ಶುಕ್ಲೇ ಪೂರ್ವಾಹ್ಣಿಕೇ ಕಾರ್ಯೇ ಕೃಷ್ಣೇ ಚೈವಾಪರಾಹ್ಣಿಕೇ ॥ ೯ ॥

ನಾಗವಿದ್ಧಾ ತು ಯಾ ಷಷ್ಠೀ ಶಿವವಿದ್ಧಾ ತು ಸಪ್ತಮೀ ।
ದಶಮ್ಯೇಕಾದಶೀ ವಿದ್ಧಾ ನೋಪೋಷ್ಯೈವ ಕದಾಚನ ॥ ೧೦ ॥

---

೭. ಅಷ್ಟಮೀ, ಏಕಾದಶೀ, ಷಷ್ಠೀ, ತದಿಗೆ, ಚತುರ್ದಶೀ ಈ ತಿಥಿಗಳಲ್ಲಿ ಕರ್ಮಗಳನ್ನು ಮಾಡಲು ಆ ತಿಥಿಗಳು ಮುಂದಿನ ತಿಥಿಯ ಸಂಬಂಧಪಡೆದ ದಿವಸಗಳೇ ಉತ್ತಮವಾದುವುಗಳು. ಅವುಗಳ ಪೂರ್ವತಿಥಿಯ ಸಂಬಂಧವು ಆ ಕರ್ಮಕ್ಕೆ ನಿಷೇಧವೆನಿಸುವುದು. ಉಳಿದ ತಿಥಿಗಳು ಮಾತ್ರ ಪೂರ್ವತಿಥಿಗಳ ಸಂಬಂಧದಿಂದ ಶ್ರೇಷ್ಠವೆನಿಸುವುವು.

೮. ಪ್ರಥಮೈಕಾದಶೀ. ರಂಭಾತೃತೀಯಾ, ಸಾವಿತ್ರೀದ್ವಿತೀಯಾ, ವಟಪಿತೃಶ್ರಾದ್ಧ, ಕೃಷ್ಣಾಷ್ಟಮೀವ್ರತ ಇವುಗಳನ್ನು ನಡೆಸಲು ಮುಂದಿನ ತಿಥಿಯ ಸಂಪರ್ಕವು ಆ ಮೇಲಿನ ತಿಥಿಗಳಿಗೆ ಸೇರಿರಬೇಕು.

೯. ನಾಲ್ಕು ಯುಗಾದಿಗಳ ಆ ದಿವಸಗಳಲ್ಲಿ ಎರಡು ತಿಥಿಗಳು ಶುಕ್ಲಪಕ್ಷದಲ್ಲೂ, ಎರಡು ತಿಥಿಗಳು ಕೃಷ್ಣಪಕ್ಷದಲ್ಲೂ ಬರುವುವು. ಅದರಲ್ಲಿ ಶುಕ್ಲಪಕ್ಷದ ಯುಗಾದಿಗಳನ್ನು ಪೂರ್ವಾಹ್ಣದಲ್ಲೂ, ಕೃಷ್ಣಪಕ್ಷದ ಯುಗಾದಿಯ ದಿನಗಳಲ್ಲಿ ಅಪರಾಹ್ಣದಲ್ಲಿಯೂ ಆ ಯುಗಾದಿಯ ನಿಮಿತ್ತವಾದ ಕರ್ಮಾದಿಗಳನ್ನು ಆಚರಿಸಬೇಕು.

೧೦. ಪಂಚಮೀವೇಧೆಯುಳ್ಳ ಷಷ್ಠೀತಿಥಿಯೂ, ಅಷ್ಟಮೀವೇಧೆಯುಳ್ಳ ಸಪ್ತಮಿಯೂ, ದಶಮೀ ವೇಧೆಯುಳ್ಳ ಏಕಾದಶಿಯೂ, ಉಪವಾಸಕ್ಕೆ ಯೋಗ್ಯವಾದ ತಿಥಿಗಳಲ್ಲ.

ಜ್ಞಾತ್ವೈವಂ ಸೂರ್ಯಚಂದ್ರಾಭ್ಯಾಂ ತಿಥಿಂ ಸ್ಫುಟತರಂ ವ್ರತೀ ।
ಏಕಾದಶೀಂ ತೃತೀಯಾಂ ಚ ಷಷ್ಠೀಂ ಚೋಪವಸೇತ್ಸದಾ ॥ ೧೧ ॥

ಫಲಮೇಕಾದಶೀ ಹಂತಿ ವಿಹಿತಂ ದಶಮೀಯುತಾ ।
ಪಾರಣಂ ತು ತ್ರಯೋದಶ್ಯಾಮುಲ್ಲಂಘ್ಯ ದ್ವಾದಶೀವ್ರತಂ ॥ ೧೨ ॥

ಪಾರಣಾಹೇ ನ ಲಭ್ಯೇತ ದ್ವಾದಶೀ ಸಕಲಾಪಿ ಚೇತ್ ।
ತದಾನೀಂ ದಶಮೀ ವಿದ್ಧಾ ಹ್ಯುಪೋಷ್ಯೈಕಾದಶೀ ತಿಥಿಃ ॥ ೧೩ ॥

ಶುಕ್ಲೇ ವಾ ಯದಿ ವಾ ಕೃಷ್ಣೇ ಭವೇದೇಕಾದಶೀದ್ವಯಂ ।
ಉತ್ತರಾಂ ತು ಯತಿಃ ಕುರ್ಯಾತ್ ಪೂರ್ವಾಮೇವ ಸದಾ ಗೃಹೀ ॥ ೧೪ ॥

---

೧೧. ಆದ್ದರಿಂದ ಸೂರ್ಯಚಂದ್ರಸ್ಫುಟಗಳಿಂದ ಕ್ರಮವಾಗಿ ತಿಥ್ಯಾನಯನವನ್ನು ಮಾಡಿ, ಸ್ಪಷ್ಟ ತಿಥಿಯನ್ನು ತಿಳಿದುಕೊಳ್ಳಬೇಕು. ಅದರಲ್ಲಿ ಏಕಾದಶೀ, ತದಿಗೆ, ಷಷ್ಠೀ ಈ ತಿಥಿಗಳಲ್ಲಿ ಉಪವಾಸಮಾಡುವುದು ಒಳ್ಳೆಯದು. ಆ ತಿಥಿಗಳಿಗೆ ಹಿಂದೆ ಹೇಳಿದಂತೆ ವೇಧೆಯಿರಕೂಡದು.

೧೨. ದಶಮೀ ವೇಧೆಯುಳ್ಳ ಏಕಾದಶಿಯಲ್ಲಿ ಮಾಡಿದ ವ್ರತವು ಸಫಲಗೊಳ್ಳಲಾರದು. ಹಾಗೆಯೇ ತ್ರಯೋದಶೀವ್ಯಾಪ್ತಿಯಿಲ್ಲದ ದ್ವಾದಶಿಯೇ ಪಾರಣೆಗೆ ಯೋಗ್ಯವಾದ ತಿಥಿಯು.

೧೩. ಪಾರಣೆಯ ದಿನದಲ್ಲಿ ದ್ವಾದಶಿಯು ಸಂಪೂರ್ಣವಾಗಿಲ್ಲದಿದ್ದರೆ, ದಶಮೀ ವೇಧೆಯುಳ್ಳ ಏಕಾದಶಿಯಲ್ಲಿಯೇ ಉಪವಾಸಮಾಡಬಹುದು.

೧೪. ಶುಕ್ಲಪಕ್ಷದಲ್ಲಾಗಲಿ, ಕೃಷ್ಣಪಕ್ಷದಲ್ಲಾಗಲಿ ಎರಡು ಏಕಾದಶೀ ತಿಥಿಗಳು ಬರುವುದಾದರೆ, ಅವುಗಳಲ್ಲಿ ಮೊದಲಿನ ಏಕಾದಶೀತಿಥಿಯು ಗೃಹಸ್ಥರಿಗೂ, ಪರದಿನ ಬರುವ ಏಕಾದಶಿಯು ಯತಿಗಳಿಗೂ ಉಪವಾಸಕ್ಕೆ ಶ್ರೇಷ್ಠವಾದದ್ದು.

ದರ್ಶಂ ಚ ಪೌರ್ಣಮಾಸಂ ಚ ಸಪ್ತಮೀಂ ಪಿತೃವಾಸರಂ ।
ಪೂರ್ವವಿದ್ಧಮಕುರ್ವಾಣೋ ನರಕಂ ಪ್ರತಿಪದ್ಯತೇ ॥ ೧೫ ॥

ಸಿನೀವಾಲೀ ದ್ವಿಜೈರ್ಗ್ರಾಹ್ಯಾ ಸಾಗ್ನಿಕೈಃ ಶ್ರಾದ್ಧಕರ್ಮಣಿ ।
ಕುಹೂಃ ಸ್ತ್ರೀಭಿಸ್ತಥಾ ಶೂದ್ರೈರಪಿ ಚಾನ್ಯೈರನಗ್ನಿಕೈಃ ॥ ೧೬ ॥

ಪಾರಣೇ ಮರಣೇ ನೃಣಾಂ ತಿಥಿಸ್ತಾತ್ಕಾಲಿಕೀ ಸ್ಮೃತಾ ।
ನಿಶಾ ವ್ರತೇಷು ಚ ಗ್ರಾಹ್ಯಾ ಪ್ರದೋಷವ್ಯಾಪಿನೀ ಸದಾ ॥ ೧೭ ॥

ಉಪೋಷಿತವ್ಯಂ ನಕ್ಷತ್ರಂ ಯೇನಾಸ್ತಂ ಯಾತಿ ಭಾಸ್ಕರಃ ।
ಯಚ್ಛ ವಾ ಯುಜ್ಯತೇ ವಿಪ್ರಾಃ ಪ್ರದೋಷೇ ಹಿಮರಶ್ಮಿನಾ ॥ ೧೮ ॥

---

೧೫. ಅಮಾವಾಸ್ಯೆ, ಪೂರ್ಣಿಮಾ, ಸಪ್ತಮಿ, ಪಿತೃದಿನಗಳು ಇವುಗಳು ಪೂರ್ವತಿಥಿಯಿಂದ ವೇಧೆಯನ್ನು ಪಡೆದಿರಬೇಕು. ಅಂತಹ ತಿಥಿಗಳೇ ಕರ್ಮಾನುಷ್ಠಾನಕ್ಕೆ ಅರ್ಹವಾದವುಗಳು. ಹಾಗಲ್ಲದೆ ಪರವಿದ್ಧತಿಥಿಗಳಲ್ಲಿ ಆಚರಿಸಿದರೆ ಅವರು ನರಕಭಾಗಿಗಳಾಗುವರು.

೧೬. ಚತುರ್ದಶೀ ವೇಧೆಯುಳ್ಳ ಅಮಾವಾಸ್ಯೆಯೇ ಸಿನೀವಾಲಿಯು. ಅದರಲ್ಲಿಯೇ ಗೃಹಸ್ಥರಾದ ಬ್ರಾಹ್ಮಣರು ಶ್ರಾದ್ಧಾದಿಗಳನ್ನು ಮಾಡಬೇಕು. ಪ್ರತಿಪತ್ಸಂಬಂಧವಾದ ಅಮಾವಾಸ್ಯೆಯೇ ಕುಹೂ. ಅದರಲ್ಲಿ ಸ್ತ್ರೀಯರೂ, ಶೂದ್ರರೂ, ಗೃಹಸ್ಥರಲ್ಲದವರೂ ಕರ್ಮಾದಿಗಳನ್ನು ಆಚರಿಸಬೇಕು.

೧೭. ಪಾರಣೆಯ ವ್ರತದಲ್ಲೂ, ಮರಣತಿಥಿ ನಿರ್ಣಯದಲ್ಲಿಯೂ, ಆ ಕಾಲದಲ್ಲಿದ್ದ ತಿಥಿಯನ್ನೇ ಪರಿಗ್ರಹಿಸಬೇಕು. ರಾತ್ರಿಮಾಡುವ ವ್ರತಗಳಿಗೆ ಪ್ರದೋಷಕಾಲದಲ್ಲಿ ಆ ತಿಥಿಯ ಸಂಬಂಧವಿರಬೇಕು.

೧೮. ನಕ್ಷತ್ರನಿಮಿತ್ತವಾಗಿ ಉಪವಾಸಮಾಡಬೇಕಾದರೆ ಆ ನಕ್ಷತ್ರವು ಸೂರ್ಯಾಸ್ತಕಾಲದಲ್ಲಿರಬೇಕು. ಅಥವಾ ಪ್ರದೋಷಕಾಲದಲ್ಲಿ ಚಂದ್ರನಿಂದ ಆ ನಕ್ಷತ್ರವು ಕೂಡಿರಬೇಕು. ಅಂದರೆ ಆ ಸಮಯದಲ್ಲಾಗಲಿ, ಪ್ರದೋಷಕಾಲದಲ್ಲಾಗಲಿ ಆ ನಕ್ಷತ್ರವಿರಬೇಕು ಎಂದು ಅಭಿಪ್ರಾಯ.

ಅರ್ವಾಕ್ಷೋಡಶನಾಡ್ಯಸ್ತು ಪರತಶ್ಚೈವ ಷೋಡಶ ।
ಪುಣ್ಯಕಾಲೋಽರ್ಕಸಂಕ್ರಾಂತೌ ಸ್ನಾನದಾನಜಪಾದಿಷು ॥ ೧೯ ॥

ಆಸನ್ನಸಂಕ್ರಮಂ ಪುಣ್ಯಂ ದಿನಾರ್ಧಂ ಸ್ನಾನದಾನಯೋಃ ।
ರಾತ್ರೌ ಸಂಕ್ರಮಣೇ ಭಾನೋರ್ವಿಷುವತ್ಯಯನೇ ದಿನೇ ॥ ೨೦ ॥

ಸೂರ್ಯೇಂದುಗ್ರಹಣಂ ಯಾವತ್ತಾವತ್ಕುರ್ಯಾಜ್ಜಪಾದಿಕಂ ।
ನ ಸ್ವಪ್ಯಾನ್ನ ಚ ಭುಂಜೀತ ಸ್ನಾತ್ವಾ ಭುಂಜೀತ ಮುಕ್ತಯೋಃ ॥ ೨೧ ॥

ಆದಿತ್ಯಶೀತಕಿರಣೌ ಗ್ರಸ್ತಾವಸ್ತಂ ಗತೌ ಯದಾ ।
ದೃಷ್ಟ್ವಾ ತದಾನ್ಯದಿವಸೇ ಸ್ನಾತ್ವಾ ಭುಂಜೀತ ವಾಗ್ಯತಃ ॥ ೨೨ ॥

---

೧೯. ರವಿಸಂಕ್ರಾಂತಿಕಾಲದ ಹಿಂದಿನ ಹದಿನಾರು, ಮುಂದಿನ ಹದಿನಾರು ಗಳಿಗೆಗಳು ಪುಣ್ಯಕಾಲವೆನಿಸಿಕೊಳ್ಳುವುವು. ಆ ಕಾಲವು ಸ್ನಾನ, ದಾನ, ಜಪ ಇವೇ ಮೊದಲಾದುವುಗಳಿಗೆ ಶ್ರೇಷ್ಠವೆನಿಸಿಕೊಳ್ಳುವುದು.

೨೦. ಸಂಕ್ರಮಣಕಾಲದ ಸಾಮೀಪ್ಯಸಮಯವೇ ಅತ್ಯಂತ ಪುಣ್ಯತಮವಾದದ್ದು. ರಾತ್ರಿಯಲ್ಲಿ ಸಂಕ್ರಮಣವಾದರೆ, ಮತ್ತು ಮೇಷ, ತುಲಾ ಸಂಕ್ರಮಣಗಳಲ್ಲಿ ಮುಂದಿನ ಮತ್ತು ಹಿಂದಿನ ಅರ್ಧ ದಿನ ಪುಣ್ಯಕಾಲವೆನಿಸುತ್ತದೆ.

೨೧. ಸೂರ್ಯಚಂದ್ರಗ್ರಹಣಕಾಲಗಳಲ್ಲಿ ಗ್ರಹಣಮೋಕ್ಷವಾಗುವವರೆಗೂ ನಿದ್ದೆ ಮತ್ತು ಆಹಾರ ಇವುಗಳನ್ನು ಬಿಡಬೇಕು. ಮೋಕ್ಷಾನಂತರ ಸ್ನಾನಮಾಡಿ ಆಹಾರಸೇವನೆಮಾಡಬೇಕು. ಗ್ರಹಣಕಾಲ ಪೂರ್ತಿಯಾಗಿ ಜಪ, ಪೂಜೆ, ಇವುಗಳನ್ನು ಮಾಡುತ್ತಿರಬೇಕು.

೨೨. ಸೂರ್ಯಚಂದ್ರರು ಗ್ರಸ್ತರಾಗಿಯೇ ಅಸ್ತರಾದರೆ ಮಾರನೆಯ ದಿವಸ ಸೂರ್ಯಚಂದ್ರರ ಶುದ್ಧಬಿಂಬಗಳನ್ನು ನೋಡಿಯೇ ಊಟಮಾಡಬೇಕು. ಶುದ್ಧ ಬಿಂಬದರ್ಶನವಾದ ಮೇಲೆ ಸ್ನಾನಾದಿಗಳನ್ನು ಮಾಡಬೇಕು.

ನ್ಮೃತಕೇ ಸೂತಕೇ ವಾಪಿ ನೋಪವಾಸಂ ತ್ಯಜೇದ್ವ್ರತೀ ।
ಯಸ್ಮಾದ್ಭಗ್ನವ್ರತೋಽತೀವ ಗರ್ಹಿತೋ ವೇದವಾದಿಭಿಃ ॥ ೨೩ ॥

ತಸ್ಮಾತ್ಪ್ರಮಾದದುಃಖೇ ವಾ ಸೂತಕೇ ವ್ಯಸನೇಽಪಿ ಚ ।
ಸ್ನಾತ್ವಾ ಕಾರ್ಯಂ ವ್ರತಂ ವಿಪ್ರಾ ಅನ್ಯಥಾ ವ್ರತಲೋಪಭಾಕ್ ॥ ೨೪ ॥

ದೇವಾರ್ಚನಾದಿಕಂ ಕರ್ಮ ಕಾರ್ಯಂ ದೀಕ್ಷಾನ್ವಿತೈಃ ಸದಾ ।
ನಾಸ್ತಿ ಶಾವಂ ಯತಸ್ತೇಷಾಂ ಸೂತಕಂ ಚ ಯದಾತ್ಮನಾಂ ॥ ೨೫ ॥

ಶಿವೇ ದೇವಾರ್ಚನಂ ಯಸ್ಯ ಯಸ್ಯ ವಾಗ್ನಿಪರಿಗ್ರಹಃ ।
ಬ್ರಹ್ಮಚಾರಿಯತೀನಾಂ ಚ ಶರೀರೇ ನಾಸ್ತಿ ಸೂತಕಂ ॥ ೨೬ ॥

---

೨೩. ಮೃತಾಶೌಚ, ಜಾತಾಶೌಚಕಾಲಗಳಲ್ಲಿಯೂ ಉಪವಾಸಾದಿಗಳನ್ನು ಬಿಡುವುದು ಗರ್ಹಿತವಾಗಿದೆ. ಏಕೆಂದರೆ ಯಾವ ಕಾಲದಲ್ಲಿಯೂ ವ್ರತಾದಿಗಳ ಆಚರಣೆಯನ್ನು ಬಿಡುವುದನ್ನು ವೇದಜ್ಞರು ನಿಷೇಧಮಾಡಿರುತ್ತಾರೆ.

೨೪. ಆದ್ದರಿಂದ, ಪ್ರಮಾದದಿಂದ ಉಂಟಾದ ದುಃಖದಲ್ಲಾಗಲಿ, ಸೂತಕದಲ್ಲಾಗಲಿ, ವ್ರತವನ್ನು ಮಾಡಬೇಕಾದರೆ ಸ್ನಾನಾದಿಗಳಿಂದ ಶುದ್ಧನಾಗಿ ವ್ರತವನ್ನು ಆಚರಿಸಬಹುದು. ಹಾಗಿಲ್ಲದಿದ್ದರೆ ವ್ರತಲೋಪದ ಪಾಪವನ್ನು ಈತನು ಅನುಭವಿಸಬೇಕಾಗುವುದು.

೨೫. ದೀಕ್ಷಾಕ್ರಮದಿಂದ ದೇವಾರ್ಚನಾದಿಗಳನ್ನು ಅಂಗೀಕರಿಸಿದವರಿಗೆ ಮೃತಾಶೌಚವಾಗಲಿ, ಜಾತಾಶೌಚವಾಗಲಿ ಇರುವುದಿಲ್ಲ. ಏಕೆಂದರೆ ಆತ್ಮನಿಗೆ ಯಾವಾಗಲೂ, ಜಾತಾಶೌಚವಾಗಲಿ, ಮೃತಾಶೌಚವಾಗಲಿ ಸಂಬಂಧಿಸುವುದಿಲ್ಲ. ಅವುಗಳು ಶರೀರಕ್ಕೆ ಮಾತ್ರ ಸಂಬಂಧಿಸಿದವುಗಳು.

೨೬. ಶಿವಾರ್ಚನೆಯಲ್ಲಿ ತೊಡಗಿರುವವನಿಗೂ, ಅಗ್ನಿಹೋತ್ರಿಗೂ, ಬ್ರಹ್ಮಚಾರಿಗೂ, ಸಂನ್ಯಾಸಿಗೂ, ಶಾರೀರಕವಾದ ಸೂತಕಾದಿಗಳು ಇರುವುದಿಲ್ಲ. ಅಂದರೆ ಅವರ ಶರೀರಕ್ಕೂ ಆ ಶೌಚಾದಿಗಳು ಸೇರುವುದಿಲ್ಲ.

ಮಹಚ್ಛಬ್ಧಪ್ರಯುಕ್ತಾ ಯಾ ಯಾ ಚ ಸೋಽಪಪದಾ ತಿಥಿಃ ।
[illegible]ಮಾವಾಸ್ಯಾ ಸಮಾ ಜ್ಞೇಯಾ ದಾನಾಧ್ಯಯನಕರ್ಮಸು ॥ ೨೭ ॥

ಮಾರ್ಗಾಶ್ಯಪರಪಕ್ಷೇ ತು ಪೂರ್ವಮಧ್ಯಾ ತು ಶಬ್ದಿತಾ ।
ಸ್ಯಾಶ್ಚತುರಷ್ಟಕಾಸ್ತಿಸ್ರಃ ಸಪ್ತಮ್ಯಾದಿಷ್ವನುಕ್ರಮಾತ್ ॥ ೨೮ ॥

ಮಾಘೇ ಪಂಚದಶೀ ಕೃಷ್ಣಾ ನಭಸ್ಯೇ ಚ ತ್ರಯೋದಶೀ ।
ತೃತೀಯಾ ಮಾಧವೇ ಶುಕ್ಲಾ ನವಮೀ ಕಾರ್ತಿಕೇ ಸಿತಾ ॥ ೨೯ ॥

ಏತಾ ಯುಗಾದಯಃ ಪ್ರೋಕ್ತಾಃ ಸರ್ವಾಶ್ಚಾಕ್ಷಯಪುಣ್ಯದಾಃ ।
ಸಿಂಹವೃಶ್ಚಿಕಯೋಃ ಕುಂಭಸಂಕ್ರಾಂತಿಷು(?)ಭವಂತ್ಯುತ ॥ ೩೦ ॥

ಕ್ರಮಾತ್ಕೃತಯುಗಾದೀನಾಂ ಯುಗಾಂತಾಶ್ಚ ಮಹರ್ಷಯಃ ।
ಶ್ರಾದ್ಧಪಕ್ಷೇ ತ್ರಯೋದಶ್ಯಾಂ ಮಖಾಸ್ವಿಂದುಃ ಕರೇ ರವಿಃ ॥ ೩೧ ॥

---

೨೭. ಮಹಚ್ಛಬ್ದಯುಕ್ತವಾದ ಮಹಾನವಮಿ, ಮಹಾಲಯ, ಮೊದಲಾದ ತಿಥಿಗಳೂ, ಉಪಪದದಿಂದ ಕೂಡಿದ, ಅಕ್ಷಯತದಿಗೆ, ಸಂಕಷ್ಟಚತುರ್ಥೀ, ಮುಂತಾದ ತಿಥಿಗಳೂ ಅಮಾವಾಸ್ಯೆಗೆ ಸಮನಾದವುಗಳು. ಆ ತಿಥಿಗಳಲ್ಲಿ ದಾನ, ಅಧ್ಯಯನ ಮುಂತಾದುವುಗಳನ್ನು ಅಮಾವಾಸ್ಯೆಯಂತೆ ಮಾಡಬೇಕು

೨೮. ಮಾರ್ಗಶಿರ ಮತ್ತು ಮಾಘಮಾಸದ ಕೃಷ್ಣಪಕ್ಷದಲ್ಲಿ ಸಪ್ತಮೀತಿಥಿಯಿಂದ ಮೂರುದಿನಗಳು ತಿಸ್ರೋಽಷ್ಟಕವೆನಿಸುವುವು. ಇವುಗಳಲ್ಲಿ ಪೂರ್ವಭಾಗವೂ, ಮಧ್ಯಭಾಗವೂ ಅಷ್ಟಕಾಶ್ರಾದ್ಧಾದಿಗಳಿಗೆ ಉತ್ತಮವಾದವುಗಳು.

೨೯-೩೦. ಮಾಘಶುದ್ಧ ಪೂರ್ಣಿಮಾ, ಭಾದ್ರಪದ ಮಾಸದ ಕೃಷ್ಣತ್ರಯೋದಶೀ, ವೈಶಾಖ ಶುದ್ಧ ತೃತೀಯಾ, ಕಾರ್ತಿಕ ಶುದ್ಧ ನವಮೀ, ಈ ತಿಥಿಗಳು ಕ್ರಮವಾಗಿ ಯುಗಾದಿಯ ದಿನಗಳಾಗುವುವು. ಇವು ಸಾಮಾನ್ಯವಾಗಿ, ಸಿಂಹ, ವೃಶ್ಚಿಕ, ಕುಂಭ ಮೊದಲಾದ ಸೌರಮಾನಗಳಲ್ಲಿಯೇ ಆಗುವುವು. ಇವು ದಾನಧರ್ಮಾದಿಗಳಿಗೆ ಪ್ರಶಸ್ತವಾದವುಗಳು.

೩೧-೩೨. ಯುಗಾದಿಯ ತಿಥಿಗಳೂ, ಹಾಗೆಯೇ ಯುಗಾಂತದ ತಿಥಿಗಳೂ ಶ್ರಾದ್ಧಾದಿ ಕರ್ಮಗಳಿಗೆ ವಿಹಿತವಾದವುಗಳು. ಮಖಾನಕ್ಷತ್ರದಲ್ಲಿ ಚಂದ್ರನೂ, ಹಸ್ತ

ಯುಗಾ ತದಾ ಗಜಚ್ಛಾಯಾ ಶ್ರಾದ್ಧೇ ಪುಣ್ಯೈರವಾಪ್ಯತೇ ।
ಧನುಸ್ತ್ರೀಮೀನಯುಗ್ಮಾಂಕಾಃ ಷಡಶೀತಿಮುಖಾಃ ಸ್ಮೃತಾಃ ॥ ೩೨ ॥

ಆಶ್ವಯುಕ್ಶುಕ್ಲನವಮೀ ದ್ವಾದಶೀ ಕಾರ್ತಿಕೇ ಸಿತಾ ।
ತೃತೀಯಾ ಚೈತ್ರಮಾಸಸ್ಯ ತಥಾ ಭಾದ್ರಪದಸ್ಯ ಚ ॥ ೩೩ ॥

ಫಾಲ್ಗುನಸ್ಯ ತ್ವಮಾವಾಸ್ಯಾ ಪೌಷಸ್ಯೈಕಾದಶೀ ತಥಾ ।
ಆಷಾಢಸ್ಯಾಪಿ ದಶಮೀ ಮಾಘಮಾಸಸ್ಯ ಸಪ್ತಮೀ ॥ ೩೪ ॥

ಶ್ರಾವಣಸ್ಯಾಷ್ಟಮೀ ಕೃಷ್ಣಾ ತಥಾಷಾಢೀ ಚ ಪೌರ್ಣಿಮಾ ।
ಕಾರ್ತಿಕೀ ಫಾಲ್ಗುನೀ ಚೈವ ಜ್ಯೇಷ್ಠೇ ಪಂಚದಶೀ ಸಿತಾ ॥ ೩೫ ॥
ಮನ್ವಂತರಾದಯಶ್ಚೈತಾಃ ದತ್ತಸ್ಯಾಕ್ಷಯಕಾರಿಕಾಃ ।

ಸಂಕ್ರಾಂತಯಸ್ತಥಾ ಪುಣ್ಯಾ ಭಾಸ್ವತೋ ದ್ವಾದಶೈವ ಹಿ । ॥ ೩೬ ॥
ಪರ್ವಸ್ವೇತೇಷು ದಾನಾನಿ ಧೇನುಶೈಲಾದಿಕಾನಿ ಚ ।
ಪ್ರಯಚ್ಛಂತಿ ದ್ವಿಜೇಂದ್ರೇಭ್ಯೋ ಲಭಂತೇ ಚಾಕ್ಷಯಾಂ ಗತಿಂ ॥ ೩೭ ॥

ನಕ್ಷತ್ರದಲ್ಲಿ ಸೂರ್ಯನೂ, ತ್ರಯೋದಶಿಯ ತಿಥಿಯಲ್ಲಿ ಸಂಚರಿಸುತ್ತಿದ್ದರೆ, ಆ ದಿನಕ್ಕೆ ಗಜಚ್ಛಾಯೆಯೆಂದು ಹೆಸರು. ಆ ದಿವಸ ಶ್ರಾದ್ಧವು ಅತ್ಯಂತ ಪುಣ್ಯಪ್ರದವು. ಧನುಸ್ಸು, ಕನ್ಯಾ, ಮೀನ, ಮಿಥುನ ಸಂಕ್ರಮಣ ಕಾಲಗಳಿಗೆ ಷಡಶೀತಿ ಪುಣ್ಯಕಾಲವೆಂದು ಹೆಸರು.

೩೩-೩೫. ಆಶ್ವಯುಜ ಶುದ್ಧನವಮೀ, ಕಾರ್ತಿಕ ಶುದ್ಧ ದ್ವಾದಶೀ, ಚೈತ್ರ ಮತ್ತು ಭಾದ್ರಪದ ಮಾಸಗಳ ಶುದ್ಧತೃತೀಯಾ, ಫಾಲ್ಗುಣ ಬಹುಳ ಅಮಾವಾಸ್ಯಾ, ಪುಷ್ಯ ಬಹುಳ ಏಕಾದಶಿ, ಆಷಾಢ ಶುದ್ಧ ದಶಮೀ, ಮಾಘ ಶುದ್ಧ ಸಪ್ತಮೀ, ಶ್ರಾವಣ ಕೃಷ್ಣ ಅಷ್ಟಮೀ, ಆಷಾಢ ಶುದ್ಧ ಪೂರ್ಣಿಮಾ, ಕಾರ್ತಿಕ, ಫಾಲ್ಗುನ ಮತ್ತು ಜ್ಯೇಷ್ಠ ಮಾಸಗಳ ಪೂರ್ಣಿಮಾತಿಥಿ ಇವುಗಳಿಗೆ ಮನ್ವಂತರತಿಥಿಗಳೆಂದು ಹೆಸರು. ಈ ತಿಥಿಗಳಲ್ಲಿ ಮಾಡಿದ ದಾನಗಳು ಅಕ್ಷಯಪುಣ್ಯಪ್ರದಗಳು.

೩೭. ಸೂರ್ಯಸಂಕ್ರಮಣಗಳು ಹನ್ನೆರಡು. ಈ ಹನ್ನೆರಡು ಸಂಕ್ರಮಣ ಕಾಲಗಳಿಗೂ ಪರ್ವಕಾಲಗಳೆಂದು ಹೆಸರು. ಈ ಕಾಲಗಳಲ್ಲಿ ಗೋವು, ಪರ್ವತ, ಮುಂತಾದ ಉತ್ತಮೋತ್ತಮ ವಸ್ತುಗಳನ್ನು ಬ್ರಾಹ್ಮಣ ಶ್ರೇಷ್ಠರಿಗೆ ದಾನಮಾಡಬೇಕು. ಇದರಿಂದ ದಾನಮಾಡಿದವರು ಅಕ್ಷಯವಾದ ಪುಣ್ಯಫಲಗಳನ್ನು ಹೊಂದುವರು.

ಪಾನೀಯಮಪ್ಯತ್ರ ತಿಲೈರ್ವಿಮಿಶ್ರಂ ।
ದದ್ಯಾತ್ಪಿತೃಭ್ಯಃ ಪ್ರಯತೋ ಮನುಷ್ಯಃ ।
ಶ್ರಾದ್ಧಂ ಕೃತಂ ತೇನ ಸಮಾಸಹಸ್ರಂ ।
ರಹಸ್ಯಮೇತತ್ಪಿತರೋ ವದಂತಿ ॥ ೩೮ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ತಿಥಿನಿರ್ಣಯಾದಿ ಕಥನಂ ನಾಮೈಕ ಪಂಚಾಶೋಽಧ್ಯಾಯಃ.

---

೩೮. ಈ ಪರ್ವಕಾಲಗಳಲ್ಲಿ ಮನುಷ್ಯರು ತಮ್ಮ ಪಿತೃದೇವತೆಗಳ ತೃಪ್ತ್ಯರ್ಥ ವಾಗಿ ಎಳ್ಳು, ನೀರು ಮುಂತಾದ ವಸ್ತುಗಳನ್ನು ದಾನಮಾಡಿದ್ದೇ ಆದರೆ, ಅವರು ಸಹಸ್ರವರ್ಷಪರ್ಯಂತ ಪಿತೃಶ್ರಾದ್ಧವನ್ನು ಮಾಡಿದ ಫಲವನ್ನು ಪಡೆಯುವರು. ಇದು ಅತ್ಯಂತವಾದ ರಹಸ್ಯವೆಂದು ಪಿತೃದೇವತೆಗಳು ಹೇಳುವರು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರದಲ್ಲಿ ಸೂತಶೌನಕ ಸಂವಾದ ರೂಪವಾಗಿ, ತಿಥಿನಿರ್ಣಯವೇ ಮೊದಲಾದ ವಿಷಯಗಳನ್ನು ತಿಳಿಸುವ ಐವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಶ್ರೀ ಶಿವಾಯನಮಃ

ಅಥ ಶ್ರೀ ಸೌರಪುರಾಣೇ ದ್ವಿಪಂಚಾಶೋಽಧ್ಯಾಯಃ.

॥ ಸೂತ ಉವಾಚ ॥

ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ಶೃಣುಧ್ವಂ ಮುನಿಪುಂಗವಾಃ ।
ಸರ್ವೇಷಾಮೇವ ವರ್ಣಾನಾಂ ಶುದ್ಧಿಮಾಹ ಯಥಾ ರವಿಃ ॥ ೧ ॥

ದ್ವಿವಿಧಂ ಪಾಪಮಿತ್ಯುಕ್ತಂ ಪ್ರಕಟಂ ಗುಪ್ತಮೇವ ಚ ।
ಪ್ರಕಟಂ ಪ್ರಕಟೇನೈವ ರಹಸ್ಯೇನ ತಥೇತರತ್ ॥ ೨ ॥

ವೇದಶಾಸ್ತ್ರಾರ್ಥವಿದ್ವಾಂಸೋ ಧರ್ಮಶಾಸ್ತ್ರಾರ್ಥಪಾರಗಾಃ ।
ಕಾಮಕ್ರೋಧವಿನಿರ್ಮುಕ್ತಾಃ ಶಾಂತಾತ್ಮಾನೋ ಜಿತೇಂದ್ರಿಯಾಃ ॥ ೩ ॥

ಐವತ್ತೆರಡನೆಯ ಅಧ್ಯಾಯ.

೧. ಎಲೈ ಋಷಿಗಳೇ, ಹಿಂದೆ ಸೂರ್ಯದೇವನು ಎಲ್ಲಾ ಜಾತಿಯವರಿಗೂ ಒಂದೊಂದು ವಿಧದಲ್ಲಿ ಪ್ರಾಯಶ್ಚಿತ್ತವನ್ನು ಹೇಳಿರುವನು. ಅದನ್ನು ನಿಮಗೆ ಈಗ ತಿಳಿಸುವೆನು, ಎಂದು ಸೂತಮಹರ್ಷಿಗಳು ಪ್ರಾಯಶ್ಚಿತ್ತ ವಿಧಿಯನ್ನು ಹೇಳಲಾರಂಭಿಸಿದರು.

೨. ಪಾಪವು, ಪ್ರಕಟ ಗುಪ್ತವೆಂದು ಎರಡುವಿಧವಾಗಿದೆ ಪ್ರಕಟವಾದ ಪಾಪವನ್ನು ಪ್ರಕಟವಾದ ಪ್ರಾಯಶ್ಚಿತ್ತದಿಂದಲೂ, ರಹಸ್ಯಪಾಪವನ್ನು ರಹಸ್ಯವಾದ ಪ್ರಾಯಶ್ಚಿತ್ತದಿಂದಲೂ ಕಳೆದುಕೊಳ್ಳಬೇಕು.

೩-೪. ವೇದಶಾಸ್ತ್ರಾರ್ಥಗಳನ್ನು ತಿಳಿದು, ಧರ್ಮಶಾಸ್ತ್ರದ ಅರ್ಥದಲ್ಲಿ ನಿಪುಣರಾಗಿ ಕಾಮ ಕ್ರೋಧಾದಿಗಳನ್ನು ಬಿಟ್ಟು, ಶಾಂತಸ್ವಭಾವದಿಂದ ಜಿತೇಂದ್ರಿಯರಾಗಿರುವವರೂ, ಶತ್ರುಮಿತ್ರರಲ್ಲಿ ಒಂದೇ ಸ್ವಭಾವದಿಂದಿರುವವರೂ, ಹಿಂಸೆ, ಲೋಭ ಇವು

[illegible] ಶತ್ರೌ ಚ ಮಿತ್ರೇ ಚ ಹಿಂಸಾಲೋಭವಿವರ್ಜಿತಾಃ ।
ಏಕವಿಂಶತಿಸಂಖ್ಯಾಕಾಃ ಸಪ್ತ ಪಂಚ ತ್ರಯೋಽಥ ವಾ ॥ ೪ ॥
ಯಂ ಬ್ರೂಯುರುಕ್ತಸಂಖ್ಯಾಕಾಃ ಸ ಧರ್ಮಃ ಸ್ಯಾದಿತಿ ಶ್ರುತಿಃ ।

ಬ್ರಹ್ಮಹಾ ಮದ್ಯಪಃ ಸ್ತೇಯೀ ಗುರುತಲ್ಪಗ ಏವ ಚ ।
ಮಹಾಪಾತಕಿನಶ್ಚೈತೇ ಯಶ್ಚ ತೈಃ ಸಹ ಸಂವಸೇತ್ ॥ ೫ ॥

ಯಸ್ತು ಸಂವತ್ಸರಂ ತ್ವೇಭಿಃ ಪತಿತೈಸ್ಸಹ ಸಂವಸೇತ್ ।
ಯಾನಶಯ್ಯಾಸನೈರ್ನಿತ್ಯಂ ಜಾನನ್ವೈ ಪತಿತೋ ಭವೇತ್ ॥ ೬ ॥

ಬ್ರಹ್ಮಹಾ ದ್ವಾದಶಾಬ್ದಾನಿ ನಿಯತಾತ್ಮಾ ವನೇ ವಸೇತ್ ।
ಭಿಕ್ಷಾಹಾರೇಣ ಸತತಂ ಧೃತ್ವಾ ಶವಶಿರೋಧ್ವಜಂ । ॥ ೭ ॥

ಗಳನ್ನು ದೂರಮಾಡಿರುವವರೂ ಆದ ಮಹಾನುಭಾವರು, ಧರ್ಮವನ್ನು ಏಳು, ಐದು ಅಥವಾ ಮೂರು ವಿಧಗಳಿಂದ ಪ್ರತಿಪಾದಿಸಿರುವರು. ಅವರು ತೋರ್ಪಡಿಸಿರುವ ಸನ್ಮಾರ್ಗವೇ ನಿಜವಾದ ಧರ್ಮವೆಂದು ವೇದಗಳು ಇಂದಿಗೂ ಹೇಳುತ್ತಿವೆ.

೫. ಬ್ರಹ್ಮಹತ್ಯೆ ಮಾಡಿದವನು, ಮದ್ಯಪಾನ ಮಾಡುವವನು, ಕಳ್ಳತನ ಮಾಡುವವನು, ಗುರುಪತ್ನೀಗಮನ ಮಾಡಿದವನು ಇಂಥವರ ಸಂಸರ್ಗದಲ್ಲಿ ಸೇರಿದವನೂ ಸಹ ಮಹಾಪಾಪಿಗಳೆನಿಸುವರು. ಇವುಗಳನ್ನೇ ಪಂಚಮಹಾಪಾಪಗಳೆನ್ನುವರು.

೬. ಯಾರು ಮಹಾಪಾಪಿಗಳೊಡನೆ ಕೂಡಿ, ಏಕವಾಹನದಲ್ಲಿ ಪ್ರಯಾಣ, ಏಕಶಯ್ಯೆಸಿದ್ದೆ, ಏಕಾಸನದಲ್ಲಿ ಕೂರುವಿಕೆ, ಇವುಗಳಿಂದ ಅವರ ಸ್ನೇಹಿತನಾಗಿ ಒಂದು ವರ್ಷ ವಾಸಮಾಡುವರೋ, ಅವರೂ ಪತಿತರೆನಿಸಿಕೊಳ್ಳುವರು.

೭–೮. ಬ್ರಹ್ಮಹತ್ಯೆ ಮಾಡಿದವನು ಹನ್ನೆರಡು ವರ್ಷಗಳ ಪರ್ಯಂತ ನಿಯಮದಿಂದ ಅರಣ್ಯದಲ್ಲಿ ವಾಸಮಾಡಬೇಕು. ನಿತ್ಯವೂ ಭಿಕ್ಷಾಹಾರದಿಂದ ಜೀವಿಸಬೇಕು. ಹೆಣದ ತಲೆಯ ಬುರುಡೆಯನ್ನೇ ಧ್ವಜವನ್ನಾಗಿ ಮಾಡಿಕೊಂಡು ಸಂಚರಿಸಬೇಕು.

ಏಕಕಾಲಂ ಚರೇದ್ಭೈಕ್ಷಂ ದೋಷಂ ವಿಖ್ಯಾಪಯನ್ ನೃಣಾಂ ॥ ೮ ॥
ಪೂರ್ಣೇ ತು ದ್ವಾದಶೇ ವರ್ಷೇ ಬ್ರಹ್ಮಹತ್ಯಾಂ ವ್ಯಪೋಹತಿ ।

ಅಕಾಮಸ್ಯ ಸ್ಮೃತಾ ಶುದ್ಧಿಃ ಕಾಮತೋ ಮರಣಾಂತಿಕೀ ॥ ೯ ॥
ಜ್ವಲಂತಂ ಪ್ರವಿಶೇದಗ್ನಿಂ ಭೃಗೋಃ ಪತನಮೇವ ಚ ।

ಕುರ್ಯಾದನಶನಂ ವಾಪಿ ಬ್ರಾಹ್ಮಣಾರ್ಥೇ ತ್ಯಜೇದಸೂನ್ ॥ ೧೦ ॥
ಗುರ್ವರ್ಥೇ ವಾ ತ್ಯಜೇತ್ಪ್ರಾಣಾನ್ ಬ್ರಹ್ಮಹತ್ಯಾಂ ವ್ಯಪೋಹತಿ ।

ಗತ್ವಾ ವಾರಾಣಸೀಂ ವಾಪಿ ಕಾಲಾತ್ತತ್ರ ತ್ಯಜೇದಸೂನ್ ॥ ೧೧ ॥
ಸರ್ವಪಾಪವಿನಿರ್ಮುಕ್ತೋ ಯಾತಿ ಶೈವಂ ಪರಂ ಪದಂ ।

ದಿನಕ್ಕೊಂದೇಸಾರಿ ಭಿಕ್ಷೆಮಾಡುತ್ತಾ ತಾನು ಮಾಡಿದ ತಪ್ಪನ್ನು ಜನರಿಗೆಲ್ಲಾ ಹೇಳು ತ್ತಿರಬೇಕು. ಹೀಗೆ ಹನ್ನೆರಡು ವರ್ಷಕಾಲ ವನವಾಸವಾಚರಿಸಿದರೆ ಬ್ರಹ್ಮಹತ್ಯಾ ದೋಷವು ಹೋಗುವುದು.

೯-೧೦. ಹಿಂದೆ ಹೇಳಿದ ಪ್ರಾಯಶ್ಚಿತ್ತವು, ತಿಳಿಯದೆ ಮಾಡಿದವನಿಗೆ. ತಿಳಿದೂ ಬುದ್ಧಿಪೂರ್ವಕವಾಗಿ ಬ್ರಹ್ಮಹತ್ಯವನ್ನು ಆಚರಿಸಿದವನಿಗೆ ಮರಣವೇ ಪ್ರಾಯಶ್ಚಿತ್ತ. ಆತನು ಅಗ್ನಿಪ್ರವೇಶದಿಂದಾಗಲೀ, ಕಂದಕಕ್ಕೆ ಬೀಳುವುದರಿಂದಾಗಲೀ, ನಿರಾಹಾರದಿಂದಾಗಲಿ, ಬ್ರಾಹ್ಮಣನ ರಕ್ಷಣೆಗಾಗಿಯೋ, ಗುರುವಿಗಾಗಿಯೋ, ತನ್ನ ದೇಹತ್ಯಾಗಮಾಡುವುದರಿಂದಾಗಲಿ, ಮರಣವನ್ನು ಪಡೆದು ಬ್ರಹ್ಮಹತ್ಯೆಯನ್ನು ಕಳೆದುಕೊಳ್ಳಬೇಕು.

೧೧. ಹಾಗಲ್ಲದಿದ್ದರೆ ಕಾಶಿಗೆ ಹೋಗಿ ಅಲ್ಲಿಯೇ ಕೆಲವು ಕಾಲವಿದ್ದು ಪ್ರಾಣ ತ್ಯಾಗಮಾಡಿಕೊಳ್ಳಬೇಕು. ಇದರಿಂದ ಸರ್ವಪಾಪಮುಕ್ತನಾಗಿ ಆತನು ಶಿವ ಸಾಯುಜ್ಯವನ್ನು ಪಡೆಯುವನು.

ಸುರಾಪಸ್ತು ಸುರಾಂ ತಪ್ತಾಮಗ್ನಿವರ್ಣಾಂ ಪಿಬೇತ್ತತಃ || ೧೨ ||
ಶುದ್ಧೋ ಭವತಿ ನಿರ್ದಗ್ಧ ಸ್ತದ್ವರ್ಣಂ ವಾ ಪಯಃ ಪಿಬೇತ್ ।
ಗೋಮೂತ್ರಂ ವಾ ಘೃತಂ ವಾ ಪಿ ತತ್ಪಾಪಾನ್ಮುಚ್ಯತೇ ದ್ವಿಜಃ || ೧೩ ||

ಬ್ರಹ್ಮಹತ್ಯಾವ್ರತಂ ಚಾಪಿ ಚರೇತ್ತತ್ಪಾಪಶಾಂತಯೇ ।
ಅಭಿಗಮ್ಯ ತು ರಾಜಾನಂ ಸುವರ್ಣಸ್ತೇಯವಾನ್ ದ್ವಿಜಾಃ || ೧೪ ||

ಸ್ವಕರ್ಮ ಖ್ಯಾಪಯನ್ ಬ್ರೂಯಾತ್ತ್ವಂ ಮಾಂ ಹಂತುಮಿಹಾರ್ಹಸಿ ।
ಗೃಹೀತ್ವಾ ಮುಶಲಂ ರಾಜಾ ಸಕೃದ್ಧನ್ಯಾತ್ತು ತಂ ಸ್ವಯಂ || ೧೫ ||
ವಧೇ ತು ಮುಚ್ಯತೇ ತೇನ ಕೃಚ್ಛ್ರೈರ್ವಾ ವಿವಿಧೈರ್ದ್ವಿಜಾಃ ।

ಅವಗೂಹೇತ್ ಸ್ತ್ರಿಯಂ ತಪ್ತಾಮಾಯಸೀಂ ಗುರುತಲ್ಪಗಃ || ೧೬ ||
ಯಸ್ಯ ಯಸ್ಯ ಚ ಸಂಪರ್ಕಾತ್ತತ್ಸಂಯೋಗೀ ಭವೇದ್ದ್ವಿಜಾಃ ।
ತಸ್ಯ ತಸ್ಯ ವ್ರತಂ ಕುರ್ಯಾತ್ ತತ್ತತ್ಪಾಪಾಪನುತ್ತಯೇ || ೧೭ ||

೧೨-೧೩. ಮದ್ಯಪಾನ ಮಾಡಿದವನು ಬೆಂಕಿಯಿಂದ ಕೆಂಪಗೆ ಕಾಯಿಸಲ್ಪಟ್ಟು ಕುದಿಯುತ್ತಿರುವ ಮದ್ಯವನ್ನಾಗಲಿ, ಹಸುವಿನ ಹಾಲನ್ನಾಗಲಿ, ಗಂಜಲವನ್ನಾಗಲಿ, ತುಪ್ಪವನ್ನಾಗಲಿ ಗಳಗಳನೆ ಕುಡಿದು, ಅದರಿಂದ ತನ್ನ ದೇಹವನ್ನು ಸುಟ್ಟುಕೊಂಡರೆ ಆ ಪಾಪವು ಹೋಗುವುದು.

೧೪-೧೫. ಮದ್ಯಪಾಯಿಯು, ಬ್ರಹ್ಮಹತ್ಯಾಪ್ರಾಯಶ್ಚಿತ್ತದಿಂದಲೂ ತನ್ನ ಪಾಪವನ್ನು ಕಳೆದುಕೊಳ್ಳಬಹುದು. ಇನ್ನು ಸುವರ್ಣವನ್ನು ಕದ್ದವನು, ತಾನೇ ರಾಜನಲ್ಲಿಗೆ ಹೋಗಿ, ತಾನು ಮಾಡಿದ ಅಪರಾಧವನ್ನು ಮುಚ್ಚು ಮರೆಯಿಲ್ಲದೆ ಹೇಳಿ ಕೊಳ್ಳಬೇಕು. ರಾಜನು ಒಡನೆಯೇ ಒನಕೆಯಿಂದ ಅವನ ತಲೆಯನ್ನು ಒಡೆದು ಕೊಲ್ಲಬೇಕು. ಅನಂತರ ರಾಜನು ಆ ತನ್ನ ಪಾಪವನ್ನು ಅನೇಕ ಕೃಚ್ಛ್ರಾಚರಣೆ ಗಳಿಂದ ನಿವಾರಿಸಿಕೊಳ್ಳಬೇಕು.

೧೬-೧೭. ಗುರುಪತ್ನೀಗಮನ ಮಾಡಿದವನು, ಕಾದ ಕಬ್ಬಿಣದ ಹೆಂಗಸಿನ ಪ್ರತಿಮೆಯನ್ನು ಆಲಿಂಗಿಸಿಕೊಳ್ಳಬೇಕು. ಅಂಥ ಪಾತಕಿಯ ಜೊತೆಯಲ್ಲಿ ಕೂಡಿ ದವನೂ ಸಹ ಪಾತಕಿಯೆನಿಸಿಕೊಳ್ಳುವನು ಆ ಸಂಯೋಗಿಯೂ ಸಹ ಆ ಪಾಪನಾಶಕ ವಾದ ಪ್ರಾಯಶ್ಚಿತ್ತವನ್ನು ಆಚರಿಸಬೇಕು.

ಸ್ನಾತ್ವಾಶ್ವಮೇಧಾವಭೃಥೇ ಸರ್ವೇ ಪಾತಕಿನೋ ದ್ವಿಜಾಃ ।
ಶುಧ್ಯೇರನ್ ತತ್ಕ್ಷಣಾದೇವ ರವಿರಿತ್ಯಬ್ರವೀತ್ಸ್ವಯಂ ॥ ೧೮ ॥

ಮಾತೃಷ್ವಸಾಂ ಮಾತುಲಾನೀಂ ತಥೈವ ಚ ಪಿತೃಷ್ವಸಾಂ ।
ಭಾಗಿನೇಯೀಂ ಸಮಾರುಹ್ಯ ಕುರ್ಯಾತ್ ಕೃಚ್ಛ್ರಾತಿಕೃಚ್ಛ್ರಕೌ ॥ ೧೯ ॥

ಚಾಂದ್ರಾಯಣಂ ವಾ ಕುರ್ವೀತ ತಸ್ಯ ಪಾಪಾಪನುತ್ತಯೇ ।
ಭ್ರಾತೃಜಾಯಾಂ ಭಾಗಿನೇಯೀಂ ತಸ್ಯ ಪಾಪಾಪನುತ್ತಯೇ ॥ ೨೦ ॥
ಚಾಂದ್ರಾಯಣಾನಿ ಚತ್ವಾರಿ ಪಂಚ ವಾ ಕಥಿತಾನಿ ವೈ ।

ಮಾತುಲಸ್ಯ ಸುತಾಂ ಗತ್ವಾ ಸಖಿಭಾರ್ಯಾಂ ತಥೈವ ಚ ॥ ೨೧ ॥
ಅಹೋರಾತ್ರೋಷಿತೋ ಭೂತ್ವಾ ತಪ್ತಕೃಚ್ಛ್ರಂ ಸಮಾಚರೇತ್ ।
ಉದಕ್ಯಾ ಗಮನೇ ಚೈವ ತ್ರಿರಾತ್ರೇಣ ವಿಶುಧ್ಯತಿ ॥ ೨೨ ॥

---

೧೮. ಯಾವ ಪಾಪಿಷ್ಠನೇ ಆಗಲಿ, ಅಶ್ವಮೇಧಯಾಗದ ಅವಭೃಥ ಸ್ನಾನವನ್ನಾಚರಿಸಿದರೆ, ಆತನು ಸಮಸ್ತ ಪಾಪಗಳಿಂದಲೂ ಮುಕ್ತನಾಗುವನೆಂದು ಸೂರ್ಯದೇವನೇ ಸ್ಪಷ್ಟಪಡಿಸಿರುವನು.

೧೯. ಚಿಕ್ಕಮ್ಮ, ಸೋದರತ್ತೆ, ಸೋದರಮಾವನ ಹೆಂಡತಿ, ಇವರೇ ಮೊದಲಾದವರನ್ನು ಕೂಡಿ ಭೋಗಿಸಿದ್ದೇ ಆದರೆ, ಆತನು ಕೃಚ್ಛ್ರ, ಅತಿಕೃಚ್ಛ್ರಗಳನ್ನಾಚರಿಸಿ ಶುದ್ಧನಾಗಬೇಕು.

೨೦. ಅಥವಾ ಚಾಂದ್ರಾಯಣ ವ್ರತದಿಂದಲೂ ಆ ಪಾಪವನ್ನು ಕಳೆದುಕೊಳ್ಳಬಹುದು. ಸೋದರರ ಪತ್ನಿಯನ್ನೂ, ತಂಗಿಯಮಗಳನ್ನೂ ಭೋಗಿಸಿದವನು ನಾಲ್ಕು ಚಾಂದ್ರಾಯಣವ್ರತಗಳನ್ನು ಆಚರಿಸಿ ಶುದ್ಧನಾಗಬೇಕು.

೨೧.–೨೨ ಸೋದರಮಾವನ ಮಗಳನ್ನೂ, ಸ್ನೇಹಿತನ ಹೆಂಡತಿಯನ್ನೂ ಉಪಭೋಗಿಸಿದವನು, ಅಹೋರಾತ್ರ ಉಪವಾಸಮಾಡಿ, ತಪ್ತಕೃಚ್ಛ್ರವ್ರತವನ್ನು ಮಾಡಬೇಕು. ಬಹಿಷ್ಠೆಯಾದ ಸ್ತ್ರೀಸಂಭೋಗಮಾಡಿದರೆ ತ್ರಿರಾತ್ರೋಪವಾಸದಿಂದ ಶುದ್ಧನಾಗುವನು.

ಬ್ರಾಹ್ಮಣೋ ಬ್ರಾಹ್ಮಣೀಂ ಗತ್ವಾ ಕೃಚ್ಛ್ರಮೇಕಂ ಸಮಾಚರೇತ್ ।
ಕನ್ಯಾಗಮನೇ ಚೈವ ಚರೇಚ್ಚಾಂದ್ರಾಯಣವ್ರತಂ ॥ ೨೩ ॥

ರೇತಃ ಸಿಕ್ತ್ವಾ ಜಲೇ ಯಸ್ತು ಕೃಚ್ಛ್ರಂ ಸಾಂತಪನಂ ಚರೇತ್ ।
ವೇಶ್ಯಾಯಾ ಗಮನೇ ಚೈವ ಪ್ರಾಜಾಪತ್ಯಂ ಸಮಾಚರೇತ್ ॥ ೨೪ ॥

ನಾನ್ಯಾಸಾಂ ನಿಷ್ಕೃತಿರ್ದೃಷ್ಟಾ ಶಾಸ್ತ್ರೇಷು ಪರಮರ್ಷಿಭಿಃ ।
ಸಂವತ್ಸರಸ್ಯ ಚಾಭ್ಯಾಸಾದ್ಗುರುತಲ್ಪವ್ರತಂ ಸ್ಮೃತಂ ॥ ೨೫ ॥

ಯದಿ ತತ್ರ ಪ್ರಜೋತ್ಪತ್ತಿಃ ನಿಷ್ಕೃತಿರ್ನ ವಿಧೀಯತೇ ।
ಶೂದ್ರಾ ಭವತಿ ಚೇದೂಢಾ ಬ್ರಾಹ್ಮಣಸ್ಯ ಯದಾ ತದಾ ॥ ೨೬ ॥

---

೨೩. ಬ್ರಾಹ್ಮಣನು ಬೇರೆಯಾದ ಬ್ರಾಹ್ಮಣಸ್ತ್ರೀಯನ್ನು ಉಪಭೋಗಿಸಿದರೆ ಒಂದು ಕೃಚ್ಛ್ರವ್ರತದಿಂದ ಶುದ್ಧನಾಗುವನು. ಋತುಮತಿಯಾಗದ ಕನ್ಯಕಾ ಸಂಭೋಗದ ಪ್ರಾಯಶ್ಚಿತ್ತವಾಗಿ ಚಾಂದ್ರಾಯಣವ್ರತವನ್ನು ಆಚರಿಸಬೇಕು.

೨೪. ನೀರಿನಲ್ಲಿ ತನ್ನ ವೀರ್ಯವನ್ನು ಬಿಟ್ಟಿದ್ದೇ, ಆದರೆ ಅದರ, ಪ್ರಾಯಶ್ಚಿತ್ತ ರೂಪವಾಗಿ ಸಾಂತಪನ ಕೃಚ್ಛ್ರವ್ರತವನ್ನು ಆಚರಿಸಬೇಕು. ವೇಶ್ಯಾಸ್ತ್ರೀಸಂಬಂಧ ದಿಂದುಂಟಾದ ಪಾಪವು ಪ್ರಾಜಾಪತ್ಯವ್ರತಾಚರಣೆಯಿಂದ ನಿವಾರಣೆಯಾಗುವುದು.

೨೫. ಉಳಿದ ಸ್ತ್ರೀಯರ ಸಂಪರ್ಕದಿಂದ ಅಂಥ ವಿಶೇಷವಾದ ಪಾಪವು ಶಾಸ್ತ್ರಗಳಲ್ಲಿ ಉಕ್ತವಾಗಿಲ್ಲದಿದ್ದರೂ, ಅಂಥ ಸ್ತ್ರೀಯರ ಸಹವಾಸವು ಒಂದು ವರ್ಷ ಪರ್ಯಂತ ನಡೆದದ್ದೇ ಆದರೆ, ಗುರುತಲ್ಪ ಗಮನದ ಪ್ರಾಯಶ್ಚಿತ್ತವನ್ನೇ ಅನುಭವಿಸಬೇಕು.

೨೬. ಕೆಲವೆಡೆಗಳಲ್ಲಿ ಸಂತಾನೋತ್ಪತ್ತಿಯೇ ಮುಖ್ಯ ಪ್ರಯೋಜನವಾಗಿದ್ದು, ಅಲ್ಲಿ ಆ ಫಲವು ದೊರಕಿದಲ್ಲಿ ಪ್ರಾಯಶ್ಚಿತ್ತವಿಲ್ಲ. ಬ್ರಾಹ್ಮಣನು ಶೂದ್ರಸ್ತ್ರೀಯನ್ನು ವಿಧಿವತ್ತಾಗಿ ವಿವಾಹಮಾಡಿಕೊಂಡು, ಅವಳಲ್ಲಿ ಸಂತಾನವಾದಪಕ್ಷದಲ್ಲಿ ಆ ದೋಷವು ಬ್ರಾಹ್ಮಣನಿಗೆ ಸೇರುವುದಿಲ್ಲ.

ನ ತಸ್ಯಾ ಗಮನೇ ಪಾಪಂ ಪ್ರಜೋತ್ಪತ್ತೌ ತಥೈವ ಚ ।
ರಂಡಾಯಾ ಗಮನೇ ಚೈವ ಚರೇತ್ಸಾಂತಪನಂ ವ್ರತಂ ॥ ೨೭॥

ಸಂವತ್ಸರೇಣ ಭವತಿ ಗುರುತಲ್ಪಸಮೋ ಹಿ ಸಃ ।
ನಟೀಂ ಶೈಲೂಷಿಕೀಂ ಚೈವ ರಜಕೀಂ ವೇಣುಜೀವನೀಂ ॥ ೨೮ ॥

ಗತ್ವಾ ಚಾಂದ್ರಾಯಣಂ ಕುರ್ಯಾತ್ತಥಾ ಚರ್ಮೋಪಜೀವನೀಂ ।
ದೀಕ್ಷಿತಂ ಕ್ಷತ್ರಿಯಂ ಹತ್ವಾ ಚರೇದ್ಬ್ರಹ್ಮಹಣೋ ವ್ರತಂ ॥ ೨೯ ॥

ಅದೀಕ್ಷಿತಸ್ಯ ಹನನೇ ಷಡಬ್ದಂ ಕೃಚ್ಛ್ರಮಾಚರೇತ್ ।
ವೈಶ್ಯಂ ತು ಕಾಮತೋ ಹತ್ವಾ ತ್ರ್ಯಬ್ದಕೃಚ್ಛ್ರಂ ಸಮಾಚರೇತ್ ॥ ೩೦ ॥

---

೨೭. ದುಷ್ಟಳೂ, ಗಂಡುಬೀರಿಯೂ ಆದ ಸ್ತ್ರೀಸಂಬಂಧಕ್ಕೆ ಸಾಂತಪನ ವ್ರತಾಚರಣೆಯೇ ಪ್ರಾಯಶ್ಚಿತ್ತವು. ಹೀಗೆ ಒಂದು ವರ್ಷ ಆಕೆಯ ಸಂಬಂಧ ಮಾಡಿದ್ದೇ ಆದರೆ, ಗುರುತಲ್ಪಗಮನಕ್ಕೆ ತಕ್ಕಂತಹ ಪ್ರಾಯಶ್ಚಿತ್ತವನ್ನು ಮಾಡಿ ಕೊಳ್ಳಬೇಕು.

೨೮-೨೯. ನಾಟ್ಯವಾಡುವ ಹೆಂಗಸನ್ನೂ, ನಾಟಕರಂಗದಲ್ಲಿ ಪಾತ್ರ ವಹಿಸು ವವಳನ್ನೂ ಭೋಗಿಸಿದರೆ, ಚಾಂದ್ರಾಯಣ ವ್ರತದಿಂದ ಶುದ್ಧನಾಗುವನು. ಕರ್ಮದಲ್ಲಿ ದೀಕ್ಷಿತನಾಗಿರುವವನನ್ನೂ ಕ್ಷತ್ರಿಯನನ್ನೂ ಕೊಂದುಹಾಕಿದರೆ, ಬ್ರಹ್ಮಹತ್ಯಾದೋಷಕ್ಕೆ ಸಮನಾದ ಪ್ರಾಯಶ್ಚಿತ್ತವನ್ನು ಅನುಭವಿಸಬೇಕು.

೩೦. ದೀಕ್ಷಿತನಲ್ಲದ ಸಾಮಾನ್ಯ ಮನುಷ್ಯನನ್ನು ಕೊಂದರೆ ಆರು ವರ್ಷ ಕಾಲ ಕೃಚ್ಛ್ರಚಾಂದ್ರಾಯಣ ವ್ರತವನ್ನು ಅನುಸರಿಸಬೇಕು. ಉದ್ದೇಶಪೂರ್ವಕ ವಾಗಿ ವೈಶ್ಯನನ್ನು ಸಂಹರಿಸಿದರೆ ಮೂರು ವರ್ಷಕಾಲ ಕೃಚ್ಛ್ರಾಚರಣೆಯಲ್ಲಿರ ಬೇಕು.

೩೧. ಬ್ರಾಹ್ಮಣನಾದವನು ಬ್ರಾಹ್ಮಣಸ್ತ್ರೀಯನ್ನು ವಧಿಸಿದರೆ ಎಂಟು ವರ್ಷ ಗಳೂ, ಕ್ಷತ್ರಿಯ ಸ್ತ್ರೀಯನ್ನು ವಧಿಸಿದರೆ ಆರು ವರ್ಷಗಳೂ, ವೈಶ್ಯಸ್ತ್ರೀಯನ್ನು ವಧಿ ಸಿದರೆ ಆರು ವರ್ಷಗಳೂ, ವೈಶ್ಯಸ್ತ್ರೀಯನ್ನು ಕೊಂದರೆ ಮೂರು ವರ್ಷಗಳೂ ಕೃಚ್ಛ್ರ ವ್ರತವನ್ನಾಚರಿಸಬೇಕು.

ನಿಹತ್ಯ ಬ್ರಾಹ್ಮಣೀಂ ವಿಪ್ರಸ್ತ್ವಷ್ಟವರ್ಷಂ ವ್ರತಂ ಚರೇತ್ ।
ವರ್ಷಷಟ್ಕಂ ತು ರಾಜನ್ಯಾಂ ವೈಶ್ಯಾಂ ಸಂವತ್ಸರತ್ರಯಂ ॥ ೩೧ ॥

ವತ್ಸರೇಣ ವಿಶುದ್ಧಸ್ಸ್ಯಾಚ್ಛೂದ್ರಸ್ತ್ರೀವಧ ಏವ ಚ ।
ವೇಶ್ಯಾಂ ಹತ್ವಾ ಪ್ರಮಾದೇನ ಕಿಂಚಿದ್ದಾನಮಿಹೋಚಿತಂ ॥ ೩೨ ॥

ಮರ್ಕಟಂ ನಕುಲಂ ಕಾಕಂ ವರಾಹಂ ಮೂಷಕಂ ತಥಾ ।
ಮಾರ್ಜಾರಂ ವ್ಯಾಥ ಮಂಡೂಕಂ ಶ್ವಾನಂ ವೈ ಕುಕ್ಕುಟಂ ಸ್ವರಂ ॥ ೩೩ ॥

ಪಾದಕೃಚ್ಛ್ರಂ ಚರೇದ್ಧತ್ವಾ ಕೃಚ್ಛ್ರಮಶ್ವವಧೇ ಸ್ಮೃತಂ ।
ತಪ್ತಕೃಚ್ಛ್ರಂ ಹಸ್ತಿವಧೇ ಪಾರಾಕಂ ಗೋವಧೇ ಸ್ಮೃತಂ ॥ ೩೪ ॥

ಕಾಮತೋ ಗೋವಧೇ ನೈವ ಶುದ್ಧಿರ್ದೃಷ್ಟಾ ಮನೀಷಿಭಿಃ ।
ಭಕ್ಷ್ಯಭೋಜ್ಯಾಪಹರಣೇ ಯಾನಶಯ್ಯಾಸನಸ್ಯ ಚ ॥ ೩೫ ॥

---

೩೨. ಶೂದ್ರಸ್ತ್ರೀಯನ್ನು ಕೊಂದವನು ಒಂದು ವರ್ಷ ಕೃಚ್ಛ್ರ ಚಾಂದ್ರಾಯಣವ್ರತವನ್ನಾಚರಿಸಿದರೆ ಆ ಪಾಪವು ನಿವೃತ್ತಿಯಾಗುವುದು. ಅಕಸ್ಮಾತ್ತಾಗಿ ವೇಶ್ಯೆಯನ್ನು ಕೊಂದರೆ ಕೆಲವು ದಾನಧರ್ಮಾದಿಗಳಿಂದ ಪಾಪವನ್ನು ಕಳೆದುಕೊಳ್ಳಬಹುದು.

೩೩-೩೪. ಕೋತಿ, ಮುಂಗುಸಿ, ಕಾಗೆ, ಹಂದಿ, ಇಲಿ, ಬೆಕ್ಕು, ಕಪ್ಪೆ, ನಾಯಿ, ಕೋಳಿ, ಧ್ವನಿಮಾಡುವ ಹಕ್ಕಿಗಳು, ಇವುಗಳನ್ನು ವಧಿಸಿದವನು ಪಾದಕೃಚ್ಛ್ರದಿಂದ ಶುದ್ಧನಾಗುವನು. ಕುದುರೆಯನ್ನು ಕೊಂದವನು, ಪೂರ್ಣಕೃಚ್ಛ್ರದಿಂದಲೂ, ಆನೆಯನ್ನು ವಧಿಸಿದವನು ತಪ್ತಕೃಚ್ಛ್ರದಿಂದಲೂ, ಗೋವಧೆಮಾಡಿದವನು, ಪಾರಾಕ ಕೃಚ್ಛ್ರದಿಂದಲೂ ಶುದ್ಧನಾಗುವನು.

೩೫. ಆದರೆ ಬುದ್ಧಿಪೂರ್ವಕವಾಗಿ ಗೋಹತ್ಯಮಾಡಿದವನಿಗೆ ಯಾವ ಪ್ರಾಯಶ್ಚಿತ್ತದಿಂದಲೂ ಶುದ್ಧಿಯೊದಗಲಾರದು. ಭಕ್ಷ್ಯ, ಭೋಜ್ಯ, ಹಾಸಿಗೆ, ಪೀಠ, ಹೂವು, ಹಣ್ಣು, ಕಂದಮೂಲಗಳು ಇವುಗಳನ್ನು ಕದ್ದವರು ಪಂಚಗವ್ಯಪ್ರಾಶನದಿಂದ ಶುದ್ಧರಾಗಬೇಕು.

ಪುಷ್ಪಮೂಲಫಲಾನಾಂ ಚ ಪಂಚಗವ್ಯಂ ವಿಶೋಧನಂ ।
ತೃಣಕಾಷ್ಠದ್ರುಮಾಣಾಂ ಚ ಶುಷ್ಕಾನ್ನಸ್ಯ ಗುಡಸ್ಯ ಚ ॥ ೩೬ ॥

ಚೈಲಚರ್ಮಾಮಿಷಾಣಾಂ ಚ ತ್ರಿರಾತ್ರಂ ಸ್ಯಾದಭೋಜನಂ ।
ಹಂಸಂ ಕಾರಂಡವಂ ಚೈವ ಚಕ್ರವಾಕಂ ಚ ಟಿಟ್ಟಿಭಂ ॥ ೩೭ ॥

ಶುಕಂ ಚ ಸಾರಸಂ ಚೈವ ಉಲೂಕಂ ಚ ಕಪೋತಕಂ ।
ಚಾಷಂ ಚ ಶಿಶುಮಾರಂ ಚ ಬಲಾಕಾಂ ಚ ಬಕಂ ತಥಾ ॥ ೩೮ ॥

ಜಗ್ಧ್ವಾ ಚೈತಾನ್ ದ್ವಿಜಃ ಕುರ್ಯಾದ್ದ್ವಾದಶಾಹಮಭೋಜನಂ ।
ನಾಲಿಕಾಂ ತಂಡುಲೀಯಂ ಚ ಜಗ್ಧ್ವಾ ಕೃಚ್ಛ್ರಂ ಸಮಾಚರೇತ್ ॥ ೩೯ ॥

ಕಾಮತೋಽಉದುಂಬರಂ ಜಗ್ಧ್ವಾ ತಪ್ತಕೃಚ್ಛ್ರಂ ಸಮಾಚರೇತ್ ।
ಅಲಾಬುಂ ಕಿಂಶುಕಂ ಜಗ್ಧ್ವಾ ಪ್ರಾಜಾಪತ್ಯಂ ಸಮಾಚರೇತ್ ॥ ೪೦ ॥

---

೩೬. ಹುಲ್ಲು, ಸೌದೆ, ಮರ, ಒಣಗಿದ ಅನ್ನ, ಬೆಲ್ಲ, ಬಟ್ಟೆ, ಚರ್ಮ, ಮಾಂಸ, ಇವುಗಳನ್ನು ಅಪಹರಿಸಿದವರು ಮೂರು ದಿವಸ ಪರ್ಯಂತ ಉಪವಾಸವಿದ್ದು ತಮ್ಮ ಪಾಪವನ್ನು ಕಳೆದುಕೊಳ್ಳಬೇಕು.

೩೭-೩೯. ಹಂಸ, ಕೊಕ್ಕರೆ, ಚಕ್ರವಾಕ, ಟಿಟ್ಟಿಭವೆಂಬ ಹಕ್ಕಿ, ಗಿಳಿ, ಹಾಲುಹಕ್ಕಿ, ಗೂಬೆ, ಕಪೋತ, ಗುಬ್ಬಚ್ಚಿ, ಕೀಚುಬಾಲದಹಕ್ಕಿ, ನೀರುಕೊಕ್ಕರೆ, ಬಕ, ಇವುಗಳನ್ನು ಬ್ರಾಹ್ಮಣನಾದವನು ತಿಂದರೆ ಅವನು ಹನ್ನೆರಡು ದಿನಗಳ ಪರ್ಯಂತ ಉಪವಾಸಮಾಡಬೇಕು. ಆಮೇಲೆ ಅಕ್ಕಿಯ ಗಂಜಿಯನ್ನು ಕುಡಿದು ಕೃಚ್ಛ್ರವ್ರತವನ್ನಾಚರಿಸಿ ಶುದ್ಧನಾಗಬೇಕು.

೪೦. ಮನಃಪೂರ್ವಕವಾಗಿ ಅತ್ತಿಯ ಹಣ್ಣನ್ನು ತಿಂದವನು ತಪ್ತಕೃಚ್ಛ್ರವನ್ನೂ, ಅಲಾಬು, ಮುತ್ತುಗದಹಣ್ಣು ಇವುಗಳನ್ನು ಭಕ್ಷಿಸಿದವನು ಪ್ರಾಜಾಪತ್ಯಕೃಚ್ಛ್ರವನ್ನೂ ಆಚರಿಸಬೇಕು.

ಯಾನಿ ಕ್ಷೀರಾಣ್ಯಪೇಯಾನಿ ತೇಷಾಂ ಪಾನಾದ್ವ್ರತಂ ತ್ವಿದಂ ।
ಗೋಮೂತ್ರಯಾವಕಾಹಾರೋ ಮಾಸೇನೈಕೇನ ಶುದ್ಧ್ಯತಿ ॥ ೪೧ ॥

ಅಸುರಾ ಮದ್ಯಪಾನೇನ ಕುರ್ಯಾಚ್ಚಾಂದ್ರಾಯಣವ್ರತಂ ।
ಪ್ರಾಜಾಪತ್ಯಂ ಚರೇತ್ಸಮ್ಯಗ್ರೇತೋವಿಣ್ಮೂತ್ರಭಕ್ಷಣೇ ॥ ೪೨ ॥

ವಿಡ್ವರಾಹಖರೋಷ್ಟ್ರಾಣಾಂ ಗೋಮಾಯೋಃ ಕಪಿಕಾಕಯೋಃ ।
ಏತೇಷಾಂ ಭಕ್ಷಣೇ ಚೈವ ದ್ವಿಜಶ್ಚಾಂದ್ರಾಯಣಂ ಚರೇತ್ ॥ ೪೩ ॥

ಬ್ರಾಹ್ಮಣೋ ಬ್ರಾಹ್ಮಣೋಚ್ಛಿಷ್ಟಂ ಭುಕ್ತ್ವಾ ಕೃಚ್ಛ್ರಂ ಸಮಾಚರೇತ್ ।
ಕ್ಷತ್ರಿಯೇ ತಪ್ತಕೃಚ್ಛ್ರಂ ಸ್ಯಾದ್ವೈಶ್ಯೇ ಚೈವಾತಿಕೃಚ್ಛ್ರಕಂ ॥ ೪೪ ॥

ಶೂದ್ರೋಚ್ಛಿಷ್ಟಂ ದ್ವಿಜೋ ಭುಕ್ತ್ವಾ ಚರೇಚ್ಚಾಂದ್ರಾಯಣಂ ವ್ರತಂ ।
ಸುರಾಭಾಂಡೋದಕಂ ಪೀತ್ವಾ ಚರೇಚ್ಚಾಂದ್ರಾಯಣಂ ವ್ರತಂ ॥ ೪೫ ॥

---

೪೧. ಯಾವ ಯಾವ ಹಾಲುಗಳನ್ನು ಕುಡಿಯಬಾರದೋ, ಅಂಥವುಗಳನ್ನು ಕುಡಿದವರು, ಒಂದು ತಿಂಗಳ ಪರ್ಯಂತ ಹಸುವಿನ ಗಂಜಲ, ಗಂಜಿ, ಇವುಗಳನ್ನು ತಿನ್ನುತ್ತಾ ಜೀವಿಸಬೇಕು. ಇದರಿಂದ ಶುದ್ಧನಾಗುವನು.

೪೨. ಸುರಾಸದೃಶವಾದ ಮಾದಕವಸ್ತುಗಳನ್ನು ಸೇವಿಸಿದವನು, ಚಾಂದ್ರಾಯಣವ್ರತವನ್ನೂ, ರೇತಸ್ಸು, ಮಲ, ಮೂತ್ರ, ಇವುಗಳನ್ನು ತಿಂದವನು ಪ್ರಾಜಾಪತ್ಯವ್ರತವನ್ನೂ ಆಚರಿಸಿ ಶುದ್ಧನಾಗಬೇಕು.

೪೩. ಹಂದಿ, ಕತ್ತೆ, ಒಂಟೆ, ನರಿ, ಕಪಿ, ಕಾಗೆ, ಇವುಗಳನ್ನು ಬ್ರಾಹ್ಮಣನು ತಿಂದದ್ದೇ ಆದರೆ, ಆತನು ಚಾಂದ್ರಾಯಣವ್ರತವನ್ನು ಆಚರಿಸಬೇಕು.

೪೪. ಬ್ರಾಹ್ಮಣನು ಬ್ರಾಹ್ಮಣನ ಎಂಜಲನ್ನು ತಿಂದರೆ, ಕೃಚ್ಛ್ರವೊಂದನ್ನೂ ಕ್ಷತ್ರಿಯೋಚ್ಛಿಷ್ಟವನ್ನು ತಿಂದರೆ ತಪ್ತಕೃಚ್ಛ್ರವನ್ನೂ, ವೈಶ್ಯನ ಎಂಜಲನ್ನು ತಿಂದರೆ ಅತಿಕೃಚ್ಛ್ರವನ್ನೂ ಆಚರಿಸಿ ಶುದ್ಧನಾಗಬೇಕು.

೪೫. ಶೂದ್ರನ ಎಂಜಲನ್ನು ತಿಂದವನೂ, ಹೆಂಡದ ಗಡಿಗೆಯಲ್ಲಿ ನೀರನ್ನು ಕುಡಿದವನೂ, ಚಾಂದ್ರಾಯಣವ್ರತವನ್ನು ಮಾಡಬೇಕು.

ಮಹಾಪಾತಕಿನಂ ದೃಷ್ಟ್ವಾ ವೇದವಿಕ್ರಯಿಣಂ ತಥಾ ।
ರಜಸ್ವಲಾಂ ಚ ಚಾಂಡಾಲೀಂ ಸುಜ್ಞಾತ್ವಾ ಯದಿ ಭೋಜಯೇತ್ ॥ ೪೬ ॥
ತ್ರಿರಾತ್ರೋಪೋಷಿತೋ ಭೂತ್ವಾ ಪಂಚಗವ್ಯೇನ ಶುಧ್ಯತಿ ।

ತೈಲಾಭ್ಯಕ್ತೋ ದ್ವಿಜೋ ಯಸ್ತು ಕುರ್ಯಾನ್ಮೂತ್ರಪುರೀಷಕೇ ।
ಅಹೋರಾತ್ರೇಣ ಶುದ್ಧಿಃ ಸ್ಯಾತ್ ಶ್ಮಶ್ರುಕರ್ಮಣಿ ಮೈಥುನೇ ॥ ೪೭ ॥

ಖರಯಾನಂ ಸಮಾರುಹ್ಯ ತಥಾ ಚೈವೋಷ್ಟ್ರಯಾನಕಂ ॥ ೪೮ ॥
ನಗ್ನೋ ಯಸ್ತು ವಿಶೇದಾಪಸ್ತ್ರಿರಾತ್ರೇಣ ವಿಶುಧ್ಯತಿ ।

ಪಾಪಾನಾಮಧಿಕಂ ಪಾಪಂ ದೇವತಾನಾಂ ಚ ನಿಂದನಂ ॥ ೪೯ ॥
ಮೋಹಾದ್ವೈ ಕುರುತೇ ಯಸ್ತು ಕೃಚ್ಛ್ರಂ ಚಾಂದ್ರಾಯಣಂ ಚರೇತ್ ।

---

೪೬. ಮಹಾಪಾಪಗಳನ್ನು ಮಾಡಿದವನನ್ನೂ, ವೇದವಿಕ್ರಯಮಾಡುವವನನ್ನೂ, ಬಹಿಷ್ಠಳಾದ ಹೆಂಗುಸನ್ನೂ, ಚಾಂಡಾಲಸ್ತ್ರೀಯನ್ನೂ ತಿಳಿಯದೆ ಮುಟ್ಟಿ ಹಾಗೆಯೇ ಊಟಮಾಡಿದರೆ, ಅದನ್ನು ತಿಳಿದ ಆತನು ಮೂರು ದಿವಸ ಉಪವಾಸ ಮಾಡಿ ಪಂಚಗವ್ಯದಿಂದ ಶುದ್ಧನಾಗಬೇಕು.

೪೭. ಬ್ರಾಹ್ಮಣನು ತೈಲಾಭ್ಯಂಜನಮಾಡುವಾಗಲೂ, ಕ್ಷುರಕರ್ಮಕಾಲದಲ್ಲೂ, ಸ್ತ್ರೀಸಂಭೋಗಕಾಲದಲ್ಲೂ, ಮೂತ್ರಪುರೀಷಗಳನ್ನು ವಿಸರ್ಜಿಸಬಾರದು. ಹಾಗೆ ವಿಸರ್ಜಿಸಿದರೆ ಒಂದು ದಿನ ಪೂರ್ತಿ ಉಪವಾಸಮಾಡಿ ಶುದ್ಧನಾಗಬೇಕು.

೪೮. ಕತ್ತೆಯಗಾಡಿ, ಒಂಟೆಯಗಾಡಿ ಇವುಗಳನ್ನು ಹತ್ತಿ ಪ್ರಯಾಣಮಾಡಿದವನು, ಬರೀಮೈಯ್ಯಲ್ಲಿ ನೀರಿನೊಳಗೆ ಪ್ರವೇಶಮಾಡಿದವನು, ತ್ರಿರಾತ್ರೋಪವಾಸದಿಂದ ಶುದ್ಧನಾಗುವನು.

೪೯. ದೈವನಿಂದನೆಯು ಪಾಪಗಳಲ್ಲೆಲ್ಲಾ ಅಧಿಕವಾದ ಪಾಪವು. ಅಜ್ಞಾನದಿಂದ ದೈವನಿಂದನೆಮಾಡಿದವನು ಚಾಂದ್ರಾಯಣವ್ರತವನ್ನಾಚರಿಸಿ ಪವಿತ್ರನಾಗಬೇಕು.

ಕಶ್ಚಿದ್ಯಃ ಕುರುತೇ ನಿಂದಾಂ ಶಿವಸ್ಯ ಪರಮೇಷ್ಠಿನಃ || ೫೦ ||
ತಸ್ಯ ಶುದ್ಧಿರ್ನ ದೃಷ್ಟಾಸ್ತಿ ಪುರಾಣೇ ಮುನಿಭಿಃ ಕೃತಾ ।
ಕುರ್ಯಾದ್ಯದಿ ಗುರುಃ ಶುದ್ಧಿಂ ಕಾರುಣ್ಯಾತ್ಪರಮೇಷ್ಠಿನಃ || ೫೧ ||

ಚಾಂದ್ರಾಯಣತ್ರಯಂ ಬ್ರೂಯಾನ್ನಾನ್ಯಥಾ ಶುದ್ಧಿರಿಷ್ಯತೇ ।
ಶೃಣೋತಿ ಗುರುನಿಂದಾಂ ಯಸ್ತಸ್ಯ ಚಾಂದ್ರಾಯಣತ್ರಯಂ || ೫೨ ||

ಏಕಾಸನಂ ಚೋಪವಿಶೇದ್ಗುರುಣಾ ಸಹ ಮೂಢಧೀಃ ।
ಪ್ರಾಯಶ್ಚಿತ್ತಂ ನ ತಸ್ಯಾಸ್ತಿ ಪಾಪಂ ಗುರುತರಂ ಹಿ ತತ್ || ೫೩ ||

ಪ್ರಾಯಶ್ಚಿತ್ತಮಪೀಚ್ಛಂತಿ ಕೇಚಿದಜ್ಞಾನತಃ ಕೃತೇ ।
ಕುರ್ಯಾತ್ಸಾಂತಪನಂ ಚೈವ ಚಾಂದ್ರಾಯಣಚತುಷ್ಟಯಂ || ೫೪ ||

೫೦-೫೧. ಯಾವನು ಪರಬ್ರಹ್ಮರೂಪಿಯಾದ ಪರಮೇಶ್ವರನನ್ನು ನಿಂದಿಸು ವನೋ, ಅಂತಹವನಿಗೆ ಪ್ರಾಯಶ್ಚಿತ್ತವು ಎಲ್ಲೂ ಉಕ್ತವಾಗಿಲ್ಲ. ಹಾಗೆ ಪ್ರಾಯ ಶ್ಚಿತ್ತವನ್ನು ಮಾಡಲು, ಪರಬ್ರಹ್ಮನ ಕರುಣೆಯಿಂದ, ಸದ್ಗುರುವೊಬ್ಬನಿಗೆ ಅಧಿ ಕಾರವುಂಟು.

೫೨. ಒಂದು ವೇಳೆ ಅಂತಹ ಪಾಪಿಯನ್ನು ಉದ್ಧರಿಸುವುದಾದರೆ ಗುರು ವಾದವನು ಆತನಿಗೆ ಮೂರು ಚಾಂದ್ರಾಯಣವ್ರತಮಾಡುವಂತೆ ವಿಧಿಸಬೇಕು. ಹಾಗೆಯೇ ಗುರುನಿಂದನೆಯು ಮಹಾದೋಷವು. ಅಂಥ ಗುರುನಿಂದನೆಯನ್ನು ಕೇಳಿದವನು ಮೂರು ಚಾಂದ್ರಾಯಣ ವ್ರತಾಚರಣೆಯಿಂದ ಶುದ್ಧನಾಗುವನು.

೫೩. ಶಿಷ್ಯನಾದವನು ಯಾವಾಗಲೂ ಗುರುವಿಗೆ ಸರಿಸಮನಾಗಿ ಒಂದೇ ಆಸನದಲ್ಲಿ ಕುಳಿತುಕೊಳ್ಳಬಾರದು. ಹಾಗೆ ಕುಳಿತುಕೊಳ್ಳುವವನಿಗೆ ಯಾವ ಪ್ರಾಯ ಶ್ಚಿತ್ತವೂ ಇರುವುದಿಲ್ಲ. ಏಕೆಂದರೆ ಅದು ಮಹಾಪಾಪಗಳಲ್ಲೊಂದು.

೫೪. ಅಜ್ಞಾನದಿಂದ ಆ ಪಾಪವನ್ನೆಸಗಿದವರಿಗೆ ಸಾಂತಪನಕೃಚ್ಛ್ರಾಚರಣೆ ಯಿಂದಲೂ, ನಾಲ್ಕು ಚಾಂದ್ರಾಯಣವ್ರತಾಚರಣೆಯಿಂದಲೂ ಶುದ್ಧಿಯುಂಟೆಂದು ಹೇಳುವರು.

ಯೋಽಯಂ ಶುದ್ಧವಿಧಿಃ ಪ್ರೋಕ್ತೋ ಗುರೋರಂಗೀಕೃತೇಪ್ಸಯಾ ।
ನಾಗ್ದತ್ತಸ್ಯಾಪ್ರದಾನೇನ ಬ್ರಹ್ಮಹತ್ಯಾಸಮಂ ಭವೇತ್ ॥ ೫೫ ॥

ಪ್ರಾಯಶ್ಚಿತ್ತಂ ನ ತಸ್ಯಾಸ್ತಿ ದತ್ತೈರ್ಗ್ರಾಮಶತೈರಪಿ ।
ಶಿವದ್ರವ್ಯಾಪಹರಣಂ ಗುರೋರಪ್ಯಣುಮಾತ್ರಕಂ ॥ ೫೬ ॥

ಕುತ್ಸನಂ ಚ ತಥಾ ಶಂಭೋರ್ಗುರೋರಪಿ ತಥೈವ ಚ ।
ತಥಾ ಚ ಶಿವಭಕ್ತಾನಾಂ ಜ್ಞಾನಸ್ಯ ಚ ವಿದೂಷಣಂ ॥ ೫೭ ॥

ಗಿರಿಜಾಯಾಶ್ಚ ವಿಷ್ಣೋಶ್ಚ ಸ್ಕಂದಸ್ಯೇಭಮುಖಸ್ಯ ಚ ।
ಯೋಗಿನಾಂ ಚ ತಥಾ ನಿಂದಾ ನಿಂದಿನೋಽಪಿ ತಥಾ ದ್ವಿಜಾಃ ॥ ೫೮ ॥

---

೫೫. ಆ ಶುದ್ಧಿಯೂ ಸಹ ಗುರುವಿಗೆ ಆ ಶಿಷ್ಯನಲ್ಲಿ ಅಭಿಮಾನವಿದ್ದರೇ ಸರಿ. ಇಲ್ಲವಾದರೆ ಅದಕ್ಕೆ ಪ್ರಾಯಶ್ಚಿತ್ತವೇ ಇಲ್ಲ. ಹಾಗೆಯೇ ಮಾತಿನಲ್ಲಿ ದಾನವನ್ನು ಕೊಡುತ್ತೇನೆಂದು ಭರವಸೆಕೊಟ್ಟು, ಅದನ್ನು ಕಾರ್ಯತಃ ನಡೆಸದಿದ್ದರೆ ಅದು ಬ್ರಹ್ಮಹತ್ಯಾಸಮವಾದ ದೋಷವೆನಿಸುವುದು.

೫೬-೬೦. ಆಡಿದ ಮಾತಿನಂತೆ ದಾನಮಾಡದವನು ಎಷ್ಟೇ ಅಧಿಕಸಂಖ್ಯೆಯಲ್ಲಿ ಗ್ರಾಮಗಳನ್ನೇ ದಾನಮಾಡಿದರೂ, ಆ ಪಾಪವು ನಿವೃತ್ತಿಯಾಗುವುದಿಲ್ಲ. ಶಿವದ್ರವ್ಯಗಳನ್ನು ಕದಿಯುವುದು, ಚಿಕ್ಕವನಾದರೂ ಗುರುವನ್ನು ಹಿಯ್ಯಾಳಿಸಿ ಅವರ ದ್ರವ್ಯವನ್ನಪಹರಿಸುವುದು, ಈಶ್ವರನನ್ನು ದೂಷಿಸುವುದು, ಶಿವಭಕ್ತರ ಮತ್ತು ಜ್ಞಾನಿಗಳ ತತ್ತ್ವವನ್ನು ನಿಂದಿಸುವುದು, ಪಾರ್ವತಿ, ವಿಷ್ಣು, ಕುಮಾರಸ್ವಾಮಿ, ಗಣಪತಿ, ಯೋಗಿಗಳು ಇವರನ್ನು ಬೈಯ್ಯುವುದು, ಇವೆಲ್ಲವೂ ಮಹಾಪಾಪಗಳಿಗೆ ಸಮನಾದವುಗಳು. ಬ್ರಹ್ಮಹತ್ಯೆಯಂತೆ ಹೆಚ್ಚು ದೋಷಪ್ರದವಾದವುಗಳು. ಆದ್ದರಿಂದ ಮೋಕ್ಷಾರ್ಥಿಯಾದವನು ಎಂದೂ ಮೇಲೆ ಹೇಳಿದ ಕಾರ್ಯಗಳನ್ನು ಮಾಡಬಾರದು. ಅಲ್ಲದೆ ದೇಹದಿಂದಲಾಗಲಿ, ಮಾತಿನಿಂದಾಗಲಿ ಮನಸ್ಸಿನಿಂದಾಗಲಿ ಇಂತಹ ಕಾರ್ಯಗಳನ್ನು ಎಸಗಬಾರದು. ಆದರೆ ಸರ್ವಪಾಪಕೃತ್ಯಗಳಿಗೂ ಪಶ್ಚಾತ್ತಾಪ ಪೂರ್ವಕ

ಪಾಪಾನ್ಯೇತಾನಿ ಸರ್ವಾಣಿ ಬ್ರಹ್ಮಹತ್ಯಾಸಮಾನಿ ವೈ ।
ತಸ್ಮಾನ್ನನಿಂದೇದೇತಾಂಸ್ತು ಕರ್ಮಣಾ ಮನಸಾ ಗಿರಾ ॥ ೫೯ ॥

ಯದೀಚ್ಛೇಚ್ಛಾಶ್ವತಂ ಸ್ಥಾನಮಿತಿ ದೇವೋಽಬ್ರವೀದ್ರವಿಃ ।
ಪ್ರಾಯಶ್ಚಿತ್ತಸ್ಯ ಸರ್ವಸ್ಯ ಪಶ್ಚಾತ್ತಾಪೋ ಹಿ ಕಾರಣಂ ॥ ೬೦ ॥

ನ ತೇನ ರಹಿತಂ ಪಾಪಂ ಗಚ್ಛತೀತಿ ಹಿ ನಿಶ್ಚಿತಂ ।
ಪ್ರಾಯಶ್ಚಿತ್ತೇ ಕೃತೇ ಪಶ್ಚಾತ್ತಸ್ಮಿನ್ ಪಾಪೇ ಪ್ರವರ್ತತೇ ॥ ೬೧ ॥
ಕೃತಂ ತ್ವಕೃತಮೇವ ಸ್ಯಾತ್ತತ್ಪಾಪಂ ಪೂರ್ವವತ್ ಸ್ಥಿತಂ ।

ಸ್ಥೂಲಾನಿ ಯಾನಿ ಪಾಪಾನಿ ಸೂಕ್ಷ್ಮಾಣಿ ವಿವಿಧಾನ್ಯಪಿ । ॥ ೬೨ ॥
ತಾನಿ ನಾಶಯತಿ ಕ್ಷಿಪ್ರಂ ಮುಹೂರ್ತಂ ಶಿವಚಿಂತನಂ ।
ಸರ್ವಪಾಪಾಪನೋದಾರ್ಥಂ ಪ್ರಾಯಶ್ಚಿತ್ತಂ ವದಾಮ್ಯಹಂ ॥ ೬೩ ॥

ವಾಗಿಯೇ ಪ್ರಾಯಶ್ಚಿತ್ತವು ಉಕ್ತವಾಗಿದೆ. ಆದ್ದರಿಂದ ಪ್ರಾಯಶ್ಚಿತ್ತಗಳನ್ನು ಆಚರಿಸತಕ್ಕವನು, ತಾನು ಮಾಡಿದ ಪಾಪಕ್ಕೆ ಪಶ್ಚಾತ್ತಾಪವನ್ನು ಮೊದಲು ಸೂಚಿಸಬೇಕು.

೬೧. ಪಶ್ಚಾತ್ತಾಪಪಡದೆ ಪ್ರಾಯಶ್ಚಿತ್ತಮಾಡಿಕೊಂಡರೆ ಆ ಪಾಪವು ನಿವಾರಣೆಯಾಗಲಾರದು. ಪ್ರಾಯಶ್ಚಿತ್ತವಾದ ಅನಂತರ ಪುನಃ ಪಾಪಕ್ಕೆ ಪ್ರವರ್ತಿಸಿದರೆ ಹಿಂದೆ ನಡೆಸಿದ ಪ್ರಾಯಶ್ಚಿತ್ತಕರ್ಮವು ವ್ಯರ್ಥವಾದಂತೆಯೇ ಸರಿ. ಪಾಪಶೇಷವು ಎಂದಿಗೂ ನಿವೃತ್ತಿಯಾಗುವುದಿಲ್ಲ.

೬೨-೬೩. ಸ್ಥೂಲವಾದ ಮತ್ತು ಸೂಕ್ಷ್ಮವಾದ ಅನೇಕ ಪಾಪಗಳು ಲೋಕದಲ್ಲಿವೆ. ಆ ಪಾಪಗಳ ನಿವಾರಣೆಯು ಒಂದು ಮುಹೂರ್ತಕಾಲ ಏಕಮನಸ್ಸಿನಿಂದ ಶಿವಧ್ಯಾನಮಾಡುವುದರಿಂದಲೇ ಆಗುವುದು. ಹಾಗೆಯೇ ಸಮಸ್ತ ಪಾಪಗಳನ್ನು ನಿವಾರಿಸುವಂತಹ ಪ್ರಾಯಶ್ಚಿತ್ತವೊಂದನ್ನು ಈಗ ನಿಮಗೆ ಹೇಳುವೆನು.

ಸಮಾಹಿತೋ ಜಲೇ ಮಗ್ನಃ ಶಿವಂ ಧ್ಯಾಯನ್ ಪ್ರಸನ್ನಧೀಃ ।
ಅಷ್ಟಕೃತ್ವೋ ಹರ ಇತಿ ಜಪನ್ ಪಾಪೈಃ ಪ್ರಮುಚ್ಯತೇ ॥ ೬೪ ॥

ಕಾರ್ತಿಕ್ಯಾಂ ಶುಕ್ಲಪಕ್ಷಸ್ಯ ಯಾ ಸಾ ಪುಣ್ಯಾ ಚತುರ್ದಶೀ ।
ತಸ್ಯಾಂ ಸಂಪೂಜ್ಯ ದೇವೇಶಂ ದೇವದೇವಮುಮಾಪತಿಂ ॥ ೬೫ ॥

ಜಪ್ತ್ವಾಥರ್ವಶಿರೋ ಯಸ್ತು ಬ್ರಹ್ಮಹತ್ಯಾಂ ವ್ಯಪೋಹತಿ ।
ತಸ್ಯಾಮೇವ ನವಮ್ಯಾಂ ಚ ಭಗವಂತಮುಮಾಪತಿಂ ॥ ೬೬ ॥

ಉದ್ದಿಶ್ಯ ದದ್ಯಾದ್ಯತ್ಕಿಂಚಿತ್ಸರ್ವಪಾಪೈಃ ಪ್ರಮುಚ್ಯತೇ ।
ಪೌರ್ಣಮಾಸ್ಯಾಮಮಾವಾಸ್ಯಾಂ ಗ್ರಹಣೇ ಚಂದ್ರಸೂರ್ಯಯೋಃ ॥ ೬೭ ॥

ಪಂಚಾಮೃತೈಃ ಸುಸಂಸ್ನಾಪ್ಯ ಲಿಂಗಮೂರ್ತಿಧರಂ ಹರಂ ।
ಪೂಜಯಿತ್ವಾ ವಿಧಾನೇನ ಸರ್ವಪಾಪೈಃ ಪ್ರಮುಚ್ಯತೇ ॥ ೬೮ ॥

---

೬೪. ನೀರಿನಲ್ಲಿ ಮುಳುಗಿ ಸಮಾಹಿತಚಿತ್ತನಾಗಿ, ಈಶ್ವರನನ್ನೇ ಧ್ಯಾನಿಸುತ್ತಾ, ಹರ ಎಂಬ ನಾಮವನ್ನು ಎಂಟುಸಾರಿ ಜಪಮಾಡುತ್ತ ಬಂದರೆ ಆತನು ಸಮಸ್ತ ಪಾಪಗಳಿಂದ ಮುಕ್ತನಾಗುವನು.

೬೫. ಕಾರ್ತಿಕಮಾಸದ ಶುದ್ಧ ಚತುರ್ದಶಿಯ ದಿನ ಭಗವಂತನಾದ ಪರಮೇಶ್ವರನನ್ನು ಭಕ್ತಿಯಿಂದರ್ಚಿಸಿದರೆ, ಆತನು ಸಮಸ್ತಪಾಪಮುಕ್ತ ನಾಗುವನು.

೬೬. ಅಥರ್ವಶೀರ್ಷೋಪನಿಷತ್ತನ್ನು ಯಾರು ಭಕ್ತಿಯಿಂದ ಜಪಿಸುವರೋ ಅವರು ಬ್ರಹ್ಮಹತ್ಯಾದೋಷದಿಂದ ಮುಕ್ತರಾಗಬಹುದು. ಕಾರ್ತಿಕಮಾಸದ ನವಮಿಯಲ್ಲಿ ಹರನನ್ನು ಉದ್ದೇಶಿಸಿ ಕೆಲವುದಾನಗಳನ್ನು ಮಾಡಿದರೆ ಅವರು ಸಮಸ್ತಪಾಪ ಮುಕ್ತರಾಗುವರು.

೬೭-೬೮. ಪೂರ್ಣಿಮಾ ಅಮಾವಾಸ್ಯಾ ತಿಥಿಗಳಲ್ಲಿಯೂ, ಸೂರ್ಯ ಚಂದ್ರರ ಕಾಲಗಳಲ್ಲಿಯೂ, ಲಿಂಗರೂಪಿಯಾದ ಪರಶಿವನನ್ನು ಪಂಚಾಮೃತಾಭಿಷೇಕಗಳಿಂದಲೂ, ವಿಧವಿಧವಾದ ಸ್ತುತಿಗಳಿಂದಲೂ ಅರ್ಚನೆಮಾಡಿದ್ದೇ ಆದರೆ, ಸಮಸ್ತ ಪಾಪಗಳೂ ನಿವಾರಣೆಯಾಗುವುವು.

ಮಂದವಾರಯುತಾ ಪುಣ್ಯಾ ಶುಕ್ಲಪಕ್ಷೇ ತ್ರಯೋದಶೀ ।
ತಸ್ಯಾಮುಪೋಷ್ಯ ವಿಧಿನಾ ಸಂಪೂಜ್ಯ ಗಿರಿಜಾಪತಿಂ　　　　|| ೭೯
ಬ್ರಹ್ಮಹತ್ಯಾದಿಭಿಃ ಪಾಪೈರ್ಮುಕ್ತೋ ಭವತಿ ಮಾನವಃ ।

ತೃತೀಯಾ ಯಾ ಸಮಾಖ್ಯಾತಾ ವೈಶಾಖೇಽಕ್ಷಯಸಂಜ್ಞಿತಾ　　　　॥ ೭೦ ॥
ತಸ್ಯಾಂ ಶಿವಾಯ ಯತ್ಕಿಂಚಿದ್ದದ್ಯಾದ್ವಾ ಶಿವಯೋಗಿನೇ ।
ಸರ್ವಪಾಪವಿನಿರ್ಮುಕ್ತೋ ಪರಾಂ ಗತಿಮವಾಪ್ನುಯಾತ್　　　　॥ ೭೧ ॥

ಬ್ರಹ್ಮಹತ್ಯಾದಿಭಿಃ ಪಾಪೈರ್ಯುಕ್ತೋ ಲೋಕವಿನಿಂದಿತಃ ।
ಶಂಕರಂ ಶರಣಂ ಗತ್ವಾ ಸರ್ವಪಾಪೈಃ ಪ್ರಮುಚ್ಯತೇ　　　　॥ ೭೨ ॥

---

೭೯. ಶುಕ್ಲಪಕ್ಷದ ತ್ರಯೋದಶೀ ತಿಥಿಯು ಶನಿವಾರದಿಂದ ಕೂಡಿದ್ದೇ ಆದರೆ ಅದು ಶನಿಪ್ರದೋಷವೆನಿಸುವುದು. ಆದಿನ ಉಪವಾಸಮಾಡಿ, ಗಿರಿಜಾಪತಿಯಾದ ಶಂಕರನನ್ನು ಪೂಜಿಸಿ ತೃಪ್ತಿಪಡಿಸಿದರೆ, ಬ್ರಹ್ಮಹತ್ಯೆಯೇ ಮೊದಲಾದ ಸಮಸ್ತಪಾಪಗಳಿಂದಲೂ ಮುಕ್ತನಾಗುವನು ಎಂಬುದರಲ್ಲಿ ಸಂಶಯವಿಲ್ಲ.

೭೦-೭೧. ವೈಶಾಖಶುದ್ಧತೃತೀಯಾ ದಿವಸಕ್ಕೆ ಅಕ್ಷಯತದಿಗೆಯೆಂದು ಹೆಸರು. ಆ ದಿವಸ ಶಿವತೃಪ್ತಿಗಾಗಿ ಯಾವುದಾದರೊಂದು ದಾನವಸ್ತುವನ್ನು ಯೋಗ್ಯನಾದ ಶಿವಭಕ್ತನಿಗೆ ದಾನಮಾಡಬೇಕು. ಇದರಿಂದ ಮನುಷ್ಯನು ಸಮಸ್ತ ಪಾಪಗಳನ್ನೂ ಕಳೆದುಕೊಂಡು ಮೋಕ್ಷಮಾರ್ಗವನ್ನು ಸಂಪಾದಿಸುವನು.

೭೨. ಒಟ್ಟಿನಲ್ಲಿ ಮನುಷ್ಯನು ಬ್ರಹ್ಮಹತ್ಯೆಯೇ ಮೊದಲಾದ ಎಂಥ ಮಹಾಪಾಪಕೃತ್ಯಗಳನ್ನು ಆಚರಿಸಿದ್ದರೂ, ತನ್ನ ತಪ್ಪಿಗಾಗಿ ಪಶ್ಚಾತ್ತಾಪಪಟ್ಟು ಶ್ರೀಶಂಕರನನ್ನು ಮರೆಹೊಕ್ಕಿದ್ದೇ ಆದರೆ, ಆತನು ಸಮಸ್ತ ಪಾಪಗಳಿಂದಲೂ ಮುಕ್ತನಾಗಿ ಶುದ್ಧನೆನಿಸುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ.

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಪ್ರಾಯಶ್ಚಿತ್ತವಿಧಿಕಥನಂ ನಾಮ ದ್ವಿಪಂಚಾಶೋಽಧ್ಯಾಯಃ.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದರೂಪವಾಗಿ ಪ್ರಾಯಶ್ಚಿತ್ತವಿಧಿಗಳನ್ನು ಹೇಳುವ ಐವತ್ತೆರಡನೆಯ ಅಧ್ಯಾಯವು ಮುಗಿದುದು.

ಕೃಚ್ಛ್ರವೆಂದರೆ—ಮೂರುದಿನ, ಹಗಲು ಮಾತ್ರ ಏಕಭುಕ್ತನಾಗಿ, ಮೂರು ದಿನ ರಾತ್ರಿವೇಳೆ ಏಕಭುಕ್ತನಾಗಿದ್ದು, ಮುಂದಿನ ಮೂರು ದಿನಗಳು ಅಯಾಚಿತವಾದ ಆಹಾರಭಕ್ಷಣೆಮಾಡಿ, ಮುಂದಿನ ಮೂರುದಿನಗಳು ನಿರಾಹಾರದಿಂದಿರುವುದು. ಹೀಗೆ ಹನ್ನೆರಡು ದಿನಗಳು ಆಹಾರ ನಿಯಮದಿಂದಿರುವುದೇ ಕೃಚ್ಛ್ರವು. ಇದರಲ್ಲಿ ತಪ್ತ ಕೃಚ್ಛ್ರ, ಅತಿಕೃಚ್ಛ್ರ, ಸಾಂತಪನಕೃಚ್ಛ್ರ, ಶೀತಕೃಚ್ಛ್ರಗಳೆಂಬ ಅನೇಕ ವಿಧಗಳಿವೆ.

ಚಾಂದ್ರಾಯಣವ್ರತವೆಂದರೆ — ಚಂದ್ರನ ವೃದ್ಧಿಹ್ರಾಸಗಳಿಗನುಸಾರವಾಗಿ ಆಹಾರವನ್ನು ಹೆಚ್ಚು ಕಮ್ಮಿಮಾಡಿಕೊಂಡು ಒಂದುತಿಂಗಳು ಜೀವಿಸುವುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ತ್ರಿಪಂಚಾಶೋಽಧ್ಯಾಯಃ

॥ ಋಷಯ ಊಚುಃ ॥

ಶ್ರುತಮಸ್ಮಾಭಿರಖಿಲಂ ಜ್ಞಾನಂ ಮಹೇಶ್ವರಂ ಮಹತ್ ।
ವರ್ಣಾಶ್ರಮವಿಧಿಶ್ಚೈವ ಪ್ರಾಯಶ್ಚಿತ್ತಮಶೇಷತಃ ।
ಇದಾನೀಂ ಶ್ರೋತುಮಿಚ್ಛಾಮೋ ವಿವಾಹಂ ಗಿರಿಜಾಪತೇಃ ॥ ೧ ॥

॥ ಸೂತ ಉವಾಚ ॥

ಯದುವಾಚ ಪುರಾ ದೇವಃ ಪೃಷ್ಟೋ ಮಾರ್ತಂಡಸೂನುನಾ ।
ಸ್ತುತ್ವಾ ಚ ಸ್ತೋತ್ರವರ್ಯೇಣ ತಚ್ಛೃಣುಧ್ವಂ ದ್ವಿಜೋತ್ತಮಾಃ ॥ ೨ ॥

ಐವತ್ತುಮೂರನೆಯ ಅಧ್ಯಾಯವು.

೧. ಶೌನಕಾದಿಮಹರ್ಷಿಗಳು ಸೂತಪುರಾಣಿಕರನ್ನು ಕುರಿತು "ಸ್ವಾಮಿಯೇ, ತಾವು ನಮಗೆ ಮಹೇಶ್ವರ ಸಂಬಂಧವಾದ ಜ್ಞಾನವನ್ನೂ, ವರ್ಣಾಶ್ರಮವಿಧಿಗಳನ್ನೂ, ಪಾಪರಾಶಿಗಳ ಪ್ರಾಯಶ್ಚಿತ್ತವಿಧಿಯನ್ನೂ ವಿಸ್ತಾರವಾಗಿ ತಿಳಿಸಿರುವಿರಿ. ಈಗ ಶಂಕರನು ಪಾರ್ವತಿಯನ್ನು ವಿವಾಹವಾದುದು ಹೇಗೆ ? ಎಂಬುದನ್ನು ತಿಳಿಯಲು ಬಯಸುತ್ತಿರುವೆವು. ದಯವಿಟ್ಟು ತಿಳಿಸಬೇಕು " ಎನ್ನಲು.

೨. ಸೂತಮಹರ್ಷಿಗಳು ಶೌನಕಾದಿಗಳಿಗೆ ಹೀಗೆ ಹೇಳಲಾರಂಭಿಸಿದರು. "ಹಿಂದೆ ಸೂರ್ಯಪುತ್ರನಾದ ಮನುರಾಜನು, ತಂದೆಯಾದ ಸೂರ್ಯದೇವನನ್ನು ನಾನಾವಿಧವಾಗಿ ಸ್ತುತಿಸಿ ಇದನ್ನೇ ಪ್ರಶ್ನಿಸಿದನು. ಆ ವಿಷಯವನ್ನೇ ನಿಮಗೆ ಈಗ ತಿಳಿಸಲಿಚ್ಛಿಸುವೆನು.

॥ ಮನುರುವಾಚ ॥

ಭಗವನ್ಯದ್ಯಥಾ ಪೃಷ್ಟಂ ತತ್ತಥೈವ ತ್ವಯೋದಿತಂ ।
ಶ್ರುತಂ ತದಖಿಲಂ ತಾತ ಹೃದಿ ತಚ್ಚ ಸ್ಥಿರೀಕೃತಂ ॥ ೩ ॥

ಜಾನಾಸಿ ತ್ವಂ ಭಗವತೋ ಮಾಹಾತ್ಮ್ಯಂ ಪಾರ್ವತೀಪತೇಃ ।
ಭವತೋ ನಾಪರಃ ಕಶ್ಚಿದ್ವೇತ್ತಾಸ್ತೀತ್ಯಬ್ರವೀಚ್ಛ್ರುತಿಃ ॥ ೪ ॥

ತ್ವಮೀಶಸ್ಯಾಪದಾ ಮೂರ್ತಿರ್ಯತೋಽಸಿ ಪರಮೇಶ್ವರಃ ।
ಅತಸ್ತ್ವಮೇವ ಜಾನಾಸಿ ಮಹಿಮಾನಂ ಮಹೇಶಿತುಃ ॥ ೫ ॥

ತ್ವಾಮೇವ ರುದ್ರಂ ವರದಂ ಶಿವಂ ಪರಮಕಾರಣಂ ।
ತಪನಂ ಶರಣಂ ಯಾಮಿ ಸಹಸ್ರಾಕ್ಷಂ ಹಿರಣ್ಮಯಂ ॥ ೬ ॥

---

೩. ಮನುವು ತಂದೆಯೊಡನೆ ಕೇಳಿಕೊಂಡುದು ಏನೆಂದರೆ, ' ಎಲೈ ಪೂಜ್ಯನೇ, ಇಲ್ಲಿನವರೆಗೂ ನಾನು ಕೇಳಿಕೊಂಡ ವಿಷಯಗಳೆಲ್ಲವನ್ನೂ ನೀನು ನನಗೆ ವಿವರವಾಗಿ ತಿಳಿಸಿರುವೆ. ಅದೆಲ್ಲವೂ ನನಗೆ ಮಂದಟ್ಟಾಗಿದೆ.

೪. ಓ ದೇವನೇ, ನೀನು ಪರಮೇಶ್ವರನ ಮಹಿಮೆಯನ್ನು ಸಂಪೂರ್ಣವಾಗಿ ತಿಳಿದಿರುವೆ. ನಿನಗಿಂತ ಹೆಚ್ಚಾಗಿ ಶಿವಮಹಿಮೆಯನ್ನು ತಿಳಿದವರು ಮತ್ತಾರೂ ಇಲ್ಲವೆಂದು ವೇದವು ಹೇಳುತ್ತಿದೆ.

೫. ನೀನು ಈಶ್ವರನ ಒಂದು ಮೂರ್ತಿಯು. ಏಕೆಂದರೆ ಪರಶಿವನಂತೆ ನೀನೂ ಲೋಕಕ್ಕೆ ಒಡೆಯನಾದವನು. ಆದ್ದರಿಂದ ಮಹೇಶ್ವರನ ಮಹಿಮೆಯು ನಿನಗೆ ಸ್ಪಷ್ಟವಾಗಿ ತಿಳಿದಿದೆ.

೬-೯. ಎಲೈ ದೇವದೇವನೇ, ನೀನೇ ರುದ್ರನು, ವರದನು, ಲೋಕಕ್ಕೆ ಮುಖ್ಯಕಾರಣನು. ಸಹಸ್ರ ಕಿರಣವುಳ್ಳವನು. ಹಿರಣ್ಮಯನು, ತೇಜೋರಾಶಿಯು. ನಕ್ಷತ್ರಗಳಿಗೆಲ್ಲಾ ತೇಜಸ್ಸನ್ನು ಒದಗಿಸುವವನು ನೀನೇ, ಗ್ರಹರಾಜನು, ಅಂಬಿಕಾಪತಿಯು, ಹಿರಣ್ಯಬಾಹುವು, ಓಂಕಾರದಲ್ಲಿ ವಿರಾಜಿಸುವವನು, ವರುಣನು, ಜಗದೊಡೆಯನು. ನಿನ್ನಲ್ಲಿ ಇಷ್ಟು ಮಹಿಮೆಯಿರುವುದು. ಎಲೈ ದೇವನೇ, ಈಗ ಪರಬ್ರಹ್ಮರೂಪಿಯಾದ ಮಹೇಶ್ವರನ ವಿವಾಹವಿಷಯವನ್ನು ನಮಗೆ ತಿಳಿಸುವವನಾಗು.

ಅಧ್ಯಕ್ಷ್ಯಂ ಪ್ರಭಾಕರಂ ಭಾನುಂ ಜ್ಯೋತಿಷಾಂ ಜ್ಯೋತಿರವ್ಯಯಂ ।
ಅಂಬಿಕಾಪತಿಮೀಶಾನಂ ಜ್ಯೋತಿಷ್ಮಂತಂ ದಿವಾಕರಂ ॥ ೭ ॥

ಹಿರಣ್ಯಬಾಹುಂ ಜಟಿಲಮೋಂಕಾರಾಖ್ಯಂ ಪ್ರಚೇತಸಂ ।
ಬ್ರೂಹಿ ಮೇ ದೇವದೇವೇಶ ವಿವಾಹಂ ಪರಮೇಷ್ಠಿನಃ ॥ ೮ ॥
ಕಾಳೀ ಹೈಮವತೀ ಗೌರೀ ಪುನರ್ಜಾತಾ ಕಥಂ ವಿಭೋ ॥ ೯ ॥

॥ ಭಾನುರುವಾಚ ॥

ಪೃಷ್ಟಂ ಯತ್ತತ್ಪ್ರವಕ್ಷ್ಯಾಮಿ ಶೃಣುಷ್ವ ಮನುಜೇಶ್ವರ ।
ಸರ್ವಪಾಪಕ್ಷಯಕರಂ ಪರಂ ಬ್ರಹ್ಮ ಸನಾತನಂ ॥ ೧೦ ॥

ನೀಲಗ್ರೀವೋ ಮಹಾದೇವಃ ಶರಣ್ಯೋ ಗೋಪತಿರ್ವಿರಾಟ್ ।
ಪ್ರಪದ್ಯೇ ತ್ವಾಂ ಮಹೇಶಾನಮುಗ್ರಂ ಶರ್ವಂ ಕಪರ್ದಿನಂ ॥ ೧೧ ॥

ತ್ವಾಂ ನಮಾಮಿ ಪರಂ ಹಂಸಂ ಪಶುಭರ್ತಾರಮೀಶ್ವರಂ ।
ಸರ್ವೇಷಾಂ ಸ್ಮರಣಾದೇವ ದೇಹಿನಾಂ ಮೋಕ್ಷಸಾಧನಂ ॥ ೧೨ ॥

ಅಲ್ಲದೆ ಕಾಳೀದೇವಿಯು ಹಿಮವಂತನ ಪುತ್ರಿಯಾಗಿ ಗೌರಿಯೆಂಬ ಹೆಸರಿನಿಂದ ಪುನಃ ಹೇಗೆ ಜನಿಸಿದಳು ? ಎಂಬುದನ್ನು ವಿವರವಾಗಿ ತಿಳಿಸಬೇಕು ಎನ್ನಲು, ''

೧೦. ಸೂರ್ಯದೇವನು ಮನುವನ್ನು ಕುರಿತು '' ಮನುರಾಜನೇ ನೀನು ಕೇಳಿದ ಸರ್ವಪಾಪನಾಶಕವಾದ ಪರಮೇಶ್ವರನ ವಿವಾಹ ವಿಷಯವನ್ನು ಈಗ ನಾನು ಹೇಳುವೆನು, ಕೇಳು.

೧೧-೧೨. ಪರಮೇಶ್ವರನು ನೀಲಗ್ರೀವನು, ರಕ್ಷಕನು, ಸ್ವರ್ಗಲೋಕಕ್ಕೆ ಒಡೆಯನಾದವನು, ವಿರಾಟ್ಪುರುಷನು. ಇಂತಹ ಪರಶಿವನನ್ನು ನಾನು ಭಜಿಸುತ್ತೇನೆ. ಪಶುರಕ್ಷಕನಾಗಿ, ಪರಮಜ್ಞಾನಿಯಾದ ಈಶ್ವರನನ್ನು ಯಾರು ಸ್ಮರಿಸುವರೋ ಅವರಿಗೆ ಮೋಕ್ಷವು ಸುಲಭವಾಗಿ ದೊರಕುವುದು. ಅಂತಹ ಜ್ಞಾನಪ್ರದಾತೃವಾದ ಮಹಾದೇವನನ್ನು ಭಜಿಸುತ್ತೇನೆ.

ಯ ಏತೈರ್ನಾಮಭಿಃ ಸ್ತೌತಿ ಪ್ರಾತಃ ಸಂಪ್ರಯತಾತ್ಮವಾನ್ ।
ತಸ್ಯ ಪಾಪಂ ಕ್ಷಯಂ ಯಾತಿ ಲಕ್ಷ್ಮೀಶ್ಚೈವ ಪ್ರವರ್ಧತೇ ॥ ೧೩ ॥
ಸರ್ವರೋಗವಿನಿರ್ಮುಕ್ತೋ ಜೀವೇದ್ವರ್ಷಶತಂ ನರಃ । ॥ ೧೪ ॥

॥ ಸೂತ ಉವಾಚ ॥

ಏವಂ ಮನೋರ್ವಚಃ ಶ್ರುತ್ವಾ ಯದುವಾಚ ದಿವಾಕರಃ ।
ತದಹಂ ಸಂಪ್ರವಕ್ಷ್ಯಾಮಿ ಶೃಣುಧ್ವಂ ಮುನಿಪುಂಗವಾಃ ॥ ೧೫ ॥

ಯಾ ಸಾ ದಕ್ಷಸುತಾ ದೇವೀ ಸತೀ ತ್ರೈಲೋಕ್ಯಪೂಜಿತಾ ।
ತ್ಯಕ್ತ್ವಾ ದಾಕ್ಷಂ ಶರೀರಂ ಚ ಬಭೂವಾಚಲಕನ್ಯಕಾ ॥ ೧೬ ॥

ನಾಮ್ನಾ ಕಾಳೀತಿ ವಿಖ್ಯಾತಾ ವಿಶ್ವರೂಪಾ ಮಹೇಶ್ವರೀ ।
ಜಗಚ್ಚೈತನ್ಯರೂಪಾ ಚ ಜಗಚ್ಚೈತನ್ಯಬೋಧಿನೀ ॥ ೧೭ ॥

೧೩-೧೪. ಎಂದು, ಯಾರು ಪರಶಿವನನ್ನು ನಿತ್ಯವೂ ಪ್ರಾತಃಕಾಲ ಈ ರೀತಿ ಸ್ತುತಿಸುವರೋ, ಅವರ ಪಾಪವೆಲ್ಲವೂ ನಾಶವಾಗಿ, ಐಶ್ವರ್ಯವು ಅಭಿವೃದ್ಧಿಯಾಗುವುದು. ಸರ್ವರೋಗಮುಕ್ತರಾಗಿ ನೂರಾರು ವರ್ಷಕಾಲ ಸುಖದಿಂದ ಜೀವಿಸುವರು," ಎಂದು ಸೂರ್ಯದೇವನು ಮನುವಿಗೆ ಉಪದೇಶಿಸಿದನು.

೧೫. ಅಲ್ಲದೆ ಸೂರ್ಯನು ತನ್ನ ಪುತ್ರನಿಗೆ ತಿಳಿಸಿದ ಪಾರ್ವತೀ ವಿವಾಹದ ವಿಷಯವನ್ನು ನಿಮಗೆ ತಿಳಿಸುವೆನೆಂದು ಸೂತಮಹರ್ಷಿಗಳು ಶೌನಕಾದಿಗಳಿಗೆ ಹೇಳತೊಡಗಿದರು.

೧೬. ದಕ್ಷಬ್ರಹ್ಮನ ಪುತ್ರಿಯಾದ ಸತೀದೇವಿಯು ಲೋಕಪೂಜಿತಳಾಗಿದ್ದು ಕಾರಣಾಂತರದಿಂದ ಆ ದೇಹವನ್ನು ತ್ಯಜಿಸಿ ಹಿಮವಂತನ ಪುತ್ರಿಯಾಗಿ ಜನಿಸಿದಳಷ್ಟೇ.

೧೭. ಮಹೇಶ್ವರ ಪತ್ನಿಯಾದ ಮಾಹೇಶ್ವರಿಯು ಕಾಳಿಯೆಂಬ ಹೆಸರಿನಿಂದ ವಿಖ್ಯಾತಳಾಗಿ ಜಗತ್ತನ್ನೇ ಚೈತನ್ಯಗೊಳಿಸುತ್ತಾ, ಜಗತ್ತಿಗೆ ಶಕ್ತಿಯನ್ನು ಒದಗಿಸುತ್ತಾ, ಇರುವಳು.

ಅಭಿಷ್ಕಿತಸ್ತಯಾ ಕಾಳ್ಯಾ ಹಿಮವಾನ್ ಪರ್ವತೋತ್ತಮಃ ।
ಪುಣ್ಯಸ್ಥಾನಮಭೂದ್ವಿಪ್ರಾ ಮೋಕ್ಷದಃ ಸರ್ವದೇಹಿನಾಂ ॥ ೧೮ ॥

ಸಿದ್ಧಾನಾಂ ಚ ಮುನೀನಾಂ ಚ ಗಂಧರ್ವಾಣಾಂ ದಿವೌಕಸಾಂ ।
ಆವಾಸಃ ಕಿನ್ನರಾಣಾಂ ಚ ಸ್ಮರಣಾತ್ಪುಣ್ಯದೋ ನೃಣಾಂ ॥ ೧೯ ॥

ಶಿವಂ ಭರ್ತಾರಮಿಚ್ಛಂತೀ ತಸ್ಮಿನ್ ಗಿರಿವರೋತ್ತಮೇ ।
ತಪಸ್ತಪ್ತುಂ ಗತಾ ಕಾಳೀ ಶಿವಾ ಪಿತ್ರೋರನುಜ್ಞಯಾ ॥ ೨೦ ॥

ಅಥಾಸ್ಮಿನ್ನಂತರೇ ದೈತ್ಯಸ್ತಾರಕೋ ಲೋಕಕಂಟಕಃ ।
ಜಾತೋ ದೈತ್ಯಕುಲೇ ವೀರೋ ಮೃತ್ಯುರೂಪೋ ದಿವೌಕಸಾಂ ॥ ೨೧ ॥

ಬ್ರಹ್ಮಾಣಂ ತಪಸಾರಾಧ್ಯ ವರಂ ತಸ್ಮಾದವಾಪ ಹ ।
ದೇವಾಃ ಪಲಾಯಿತಾಸ್ತೇನ ತಾರಕೇನ ಬಲೀಯಸಾ ॥ ೨೨ ॥

---

೧೮. ಅಂಥ ದೇವಿಯು ಹಿಮಾಲಯಪರ್ವತವನ್ನು ಆಶ್ರಯಿಸಿದ ಮೇಲೆ, ಆ ಪರ್ವತವು ಸಮಸ್ತ ಪ್ರಾಣಿಗಳಿಗೂ ಪುಣ್ಯಸ್ಥಾನವಾಗಿ ಮೋಕ್ಷವನ್ನು ಕೊಡತಕ್ಕದ್ದಾಯಿತು.

೧೯. ಆ ಪರ್ವತವು ಸಿದ್ಧಗಂಧರ್ವರಿಗೂ, ದೇವಋಷಿಗಳಿಗೂ, ಕಿನ್ನರ ಕಿಂಪುರುಷರಿಗೂ ಆಶ್ರಯವಾಯಿತು. ಅಲ್ಲದೆ ಆ ಪರ್ವತದ ಸ್ಮರಣೆಯಿಂದ ಜನರಿಗೆ ವಿಶೇಷ ಪುಣ್ಯವು ಲಭಿಸುವಂತಾಯಿತು.

೨೦. ಅಂತಹ ಪರ್ವತದಲ್ಲಿ ಪಾರ್ವತಿಯು ಪರಮೇಶ್ವರನನ್ನೇ ವಿವಾಹವಾಗಲು ಅಪೇಕ್ಷಿಸಿ, ಅದಕ್ಕಾಗಿ ತಂದೆತಾಯಿಗಳ ಅನುಮತಿಯಂತೆ ಘೋರವಾಗಿ ತಪಸ್ಸುಮಾಡಲು ಆರಂಭಿಸಿದಳು.

೨೧. ಈ ಸಂದರ್ಭದಲ್ಲಿ ತಾರಕನೆಂಬ ರಾಕ್ಷಸನು ಲೋಕಕಂಟಕನಾಗಿ ದೈತ್ಯರ ವಂಶದಲ್ಲಿ ದೇವತೆಗಳಿಗೆ ಮೃತ್ಯುರೂಪದಿಂದ ಜನಿಸಿದನು.

೨೨. ಅಲ್ಲದೆ ಆ ತಾರಕನು ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ, ವರವನ್ನು ಪಡೆದು ದೇವತೆಗಳಿಗೆ ಅಜೇಯನೆನಿಸಿದನು. ಅವನ ಪರಾಕ್ರಮಕ್ಕೆ ಹೆದರಿ ದೇವತೆಗಳೆಲ್ಲರೂ ಓಡಲಾರಂಭಿಸಿದರು.

ದೇವಾನಾಂ ಯೋಷಿತೋ ಯಾಶ್ಚ ಬಲಾದಪಹೃತಾಶ್ಚ ತಾಃ ।
ದುಃಖಾಗ್ನಿನಾ ಸುಸಂತಪ್ತಾಃ ಶಕ್ರಾದ್ಯಾಃ ಪ್ರಥಿತೌಜಸಃ ॥ ೨೩ ॥

ಗತಾಃ ಸಶಕ್ರಾಃ ಶರಣಂ ಬ್ರಹ್ಮಾಣಂ ತ್ರಿದಶೇಶ್ವರಂ ।
ಆಗತಾಂಶ್ಚ ಸುರಾನ್ ದೃಷ್ಟ್ವಾ ತತಃ ಪ್ರೋವಾಚ ಪದ್ಮಜಃ ॥ ೨೪ ॥

॥ ಬ್ರಹ್ಮೋವಾಚ ॥

ತಸ್ಮಾತ್ತ್ರಸ್ತಾಃ ಸುರಾ ಯೂಯಮಾಗತಾ ವೈ ಮಮಾಂತಿಕೇ ।
ಬ್ರೂತ ತತ್ಸಕಲಂ ದೇವಾ ಉಪಾಯಂ ವಚ್ಮಿ ವಃ ಸ್ಫುಟಂ ॥ ೨೫ ॥

॥ ದೇವಾ ಊಚುಃ ॥

ತಾರಕಾದ್ಭಯಸಂತ್ರಸ್ತಾಃ ಶರಣಂ ದೇವಮಾಗತಾಃ ।
ಯಥಾ ಮೃತ್ಯೋರ್ಭಯಂ ದೇವ ತಸ್ಮಾನ್ನಸ್ತ್ರಾತುಮರ್ಹಸಿ ॥ ೨೬ ॥

---

೨೩. ತಾರಕನು ದೇವಲೋಕದ ಸ್ತ್ರೀಯರನ್ನೆಲ್ಲಾ ಬಲಾತ್ಕಾರವಾಗಿ ಅಪಹರಿಸಲಾರಂಭಿಸಿದನು. ಇಂದ್ರಾದಿಗಳು ಇದರಿಂದ ಬಹಳ ದುಃಖಿತರಾಗಿ ಕಳೆಗುಂದಿನಿಂತರು.

೨೪. ಕಡೆಗೆ ಇಂದ್ರಾದಿಗಳು ದೇವಲೋಕದ ಒಡೆಯನಾದ ಬ್ರಹ್ಮನನ್ನು ಮೊರೆಹೊಕ್ಕರು. ದುಃಖಿತರಾಗಿ ಬಂದಂಥ ದೇವತೆಗಳನ್ನು ನೋಡಿ ಬ್ರಹ್ಮನು ಹೀಗೆ ಹೇಳಿದನು.

೨೫. "ಎಲೈ ದೇವತೆಗಳೇ, ನೀವು ಈಗ ನನ್ನ ಸಮೀಪಕ್ಕೆ ಬರಲು ಕಾರಣವೇನು ? ನಿಮಗೆ ಯಾರಿಂದ ಭಯವುಂಟಾಗಿದೆ ? ಅವೆಲ್ಲವನ್ನೂ ಈಗ ನನಗೆ ತಿಳಿಸಿರಿ. ಅದಕ್ಕೆ ಉಪಾಯವನ್ನು ಈಗಲೇ ನಾನು ಹೇಳುವೆನು" ಎಂದು ಬ್ರಹ್ಮನು ಧೈರ್ಯಕೊಟ್ಟನು.

೨೬. ಆಗ ದೇವತೆಗಳು "ಸ್ವಾಮಿಯೇ, ನಮಗೆ ಈಗ ತಾರಕಾಸುರನು ಮೃತ್ಯುವಿನಂತಿರುವನು. ಅವನ ಭಯವನ್ನು ಹೇಗಾದರೂ ತಪ್ಪಿಸಿ ನಮ್ಮನ್ನು ಕಾಪಾಡು" ಎಂದು ಕೇಳಿಕೊಂಡರು.

ಅಪಿ ಕ್ಷಣಂ ಸುರಶ್ರೇಷ್ಠ ನ ಲಭಾಮೋ ವಯಂ ಸುಖಂ ।
ತ್ರಿಂಶದ್ವರ್ಷಸಹಸ್ರಾಣಿ ಹರಿತಾರಕಯೋಸ್ಸದಾ ॥ ೨೭ ॥

ಅಹರ್ನಿಶಮವಿಶ್ರಾಂತಂ ಯುದ್ಧಮಾಸೀತ್ಸುದಾರುಣಂ ।
ತಥಾಪಿ ನ ಜಿತಸ್ತೇನ ದೇವದೇವೇನ ಚಕ್ರಿಣಾ ॥ ೨೮ ॥

ಅವಧ್ಯೋಽಯಮಿತಿ ಜ್ಞಾತ್ವಾ ಯಯೌ ತ್ಯಕ್ತ್ವಾ ಮಹೋದಧಿಂ ।
ಭ್ರಾಂತಚಿತ್ತಸ್ತದಾ ಶಾರ್ಙ್ಗೀ ಗತಸ್ತೂರ್ಣಂ ಮಹಾಬಲಃ ॥ ೨೯ ॥

ವಯಮಪ್ಯೇವಮೇವಂ ಹಿ ಭೀತಾಸ್ತ್ವಾಂ ಶರಣಂ ಪ್ರಭೋ ।
ಆಗತಾಸ್ತ್ರಾಹಿ ನಸ್ತಸ್ಮಾತ್ಸುಖದೋ ಭವ ಪದ್ಮಜ ॥ ೩೦ ॥

॥ ಬ್ರಹ್ಮೋವಾಚ ॥

ಶೃಣುಧ್ವಂ ಮೇಽಮರಾಃ ಸರ್ವೇ ಯುಷ್ಮಾಕಂ ಸುಖದಂ ಮಹತ್ ।
ಯೋಽಸೌ ದೃಷ್ಟಸ್ತಾರಕಾಖ್ಯಸ್ತತಾಪ ಪರಮಂ ತಪಃ ॥ ೩೧ ॥

೨೭-೨೮. ಬ್ರಹ್ಮನೇ, ನಮಗೆ ಈಗ ಒಂದು ಕ್ಷಣವೂ ಸುಖವು ದೊರಕುವಂತಿಲ್ಲ. ಹಿಂದೆ ವಿಷ್ಣುವು ಇವನನ್ನು ಕೊಲ್ಲಲು ಮೂವತ್ತು ಸಹಸ್ರ ವರ್ಷಗಳು ಇವನೊಡನೆ ಯುದ್ಧಮಾಡಿದನು. ಆದರೂ ವಿಷ್ಣುವು ಜಯಶೀಲನಾಗಲಿಲ್ಲ.

೨೯ ಕೊನೆಗೆ ವಿಷ್ಣುವು ಈ ತಾರಕನು ಸಾಯುವವನಲ್ಲವೆಂದು ನಿಶ್ಚೈಸಿ ಆ ತನ್ನ ಕ್ಷೀರಸಮುದ್ರವನ್ನು ಕುರಿತು ನಿರಾಶನಾಗಿ, ಜಾಗ್ರತೆಯಾಗಿ ಹೊರಟುಹೋದನು.

೩೦. ಹಾಗೆಯೇ ಎಲೈ ಬ್ರಹ್ಮನೇ, ನಾವೂ ಸಹ ಆ ತಾರಕನಿಗೆ ಹೆದರಿ ನಿನ್ನ ಸಮೀಪಕ್ಕೆ ಓಡಿಬಂದು ನಿನ್ನನ್ನು ಮೊರೆಹೊಕ್ಕಿರುವೆವು. ನಮ್ಮನ್ನು ಹೇಗಾದರೂ ಮಾಡಿ ರಕ್ಷಿಸು " ಎಂದು ದೈನ್ಯದಿಂದ ಕೇಳಿಕೊಂಡರು.

೩೧. ಆಗ ಬ್ರಹ್ಮನು ದೇವತೆಗಳನ್ನು ನೋಡಿ, " ಎಲೈ ದೇವತೆಗಳೇ, ನೀವು ಮಾಡುವಂತಹ ಸುಖಕರವಾದ ತಪಸ್ಸನ್ನೇ ಆ ತಾರಕನೂ ಆಚರಿಸಿದನು. ಅದನ್ನು ನಿಮಗೆ ಹೇಳುವೆನು ಕೇಳಿ.

ತಸ್ಯ ದೈತ್ಯಸ್ಯ ತಪಸಾ ದಗ್ಧಮಾಸಂ ಚರಾಚರಂ ।
ದೃಷ್ಟ್ವಾ ತದ್ವರದಾನಾರ್ಥಂ ಗತೋಽಹಂ ತಾರಕಾಂತಿಕಂ ॥ ೩೨ ॥

ಉಕ್ತಂ ಮಯಾ ವರಂ ವತ್ಸ ವರಯೇತಿ ಮಹಾಸುರಃ ।
ಅಬ್ರವೀದ್ದೈತ್ಯರಾಜೋ ಮಾಮಭಿವಂದ್ಯ ಕೃತಾಂಜಲಿಃ ॥ ೩೩ ॥

॥ ತಾರಕ ಉವಾಚ ॥

ಅವಧ್ಯೋಽಹಂ ಸುರೈಃ ಸರ್ವೈರ್ವಿಷ್ಣ್ವಾದ್ಯೈಃ ಪದ್ಮಸಂಭವ ।
ಭವಾಮ್ಯಹಂ ಯಥಾ ದೇವ ತಥಾ ತ್ವಂ ದೇಹಿ ಮೇ ವರಂ ॥ ೩೪॥

ಏವಮಸ್ತ್ವಿತ್ಯಹಂ ತಸ್ಮೈ ವರಂ ದತ್ವಾ ಸುರೋತ್ತಮಾಃ ।
ಅನ್ಯಚ್ಚೋಕ್ತಂ ಹಿತಾರ್ಥಂ ವಃ ಕಸ್ಮಾದ್ವಧ್ಯೋಽಸಿ ತದ್ವದ ॥ ೩೫ ॥

---

೩೨. ಆ ದೈತ್ಯನ ತಪೋಜ್ವಾಲೆಯು ಲೋಕವನ್ನೆಲ್ಲಾ ದಹಿಸಲಾರಂಭಿಸಿತು. ಅದನ್ನು ನೋಡಿ ನಾನು ತಾರಕಾಸುರನಿಗೆ ಪ್ರತ್ಯಕ್ಷನಾಗಿ,

೩೩. ನಿನಗೆ ಬೇಕಾದ ವರವನ್ನು ಕೇಳು. ನಿನ್ನ ಭಕ್ತಿಗೆ ಮೆಚ್ಚಿರುವೆನು. ಎಂದು ಹೇಳಲು ತಾರಕಾಸುರನು ನನ್ನನ್ನು ಬಹುವಾಗಿ ಹೊಗಳಿ, ಅಂಜಲಿಬದ್ಧನಾಗಿ ಹೀಗೆಂದು ಕೇಳಿಕೊಂಡನು.

೩೪. "ಓ ಬ್ರಹ್ಮನೇ, ನಾನು ವಿಷ್ಣುವೇ ಮೊದಲಾದ ಯಾವ ದೇವತೆಗಳಿಗೂ ಸೋಲದಂತೆಯೂ, ಅವರಿಂದ ನಾನು ಸಾಯದಂತೆಯೂ ವರವನ್ನು ಕೊಡು." ಎಂದು ತಾರಕನು ಕೇಳಿಕೊಂಡನು.

೩೫. ಆಗ ನಾನು ಹಾಗೆಯೇ ಆಗಲೆಂದು ವರವನ್ನಿತ್ತು, ಕೊನೆಗೆ ನಿಮ್ಮ ಹಿತಕ್ಕಾಗಿ "ಅಯ್ಯಾ ತಾರಕನೇ, ಹಾಗಾದರೆ ನೀನು ಸಾಯುವುದು ಯಾರಿಂದ?" ಎಂದು ಕೇಳಿದೆನು.

|| ತಾರಕ ಉವಾಚ ||

ಯೋಽಯಂ ದೇವಾಧಿದೇವೇಶಃ ಕಪರ್ದೀ ನೀಲಲೋಹಿತಃ ।
ತಸ್ಯ ರೇತಃ ಸುರಾಃ ಪೀತ್ವಾ ಸಗರ್ಭಾ ವಿಷ್ಣುನಾ ಸಹ || ೩೬ ||

ಭವಿಷ್ಯಂತಿ ತತೋ ಜಾತಾನ್ಮೃತ್ಯುರಿಷ್ಟೋ ನ ವಾಽಪರಃ ।
ತಥಾಸ್ತ್ವಿತಿ ತತಶ್ಚೋಕ್ತ್ವಾ ಗತೋಽಹಂ ಮೇರುಮೂರ್ಧನಿ || ೩೭ ||

ಗಚ್ಛಧ್ವಂ ಶರಣಂ ತಸ್ಮಾಚ್ಛರಣ್ಯಂ ಸರ್ವದೇಹಿನಾಂ ।
ವಿಶ್ವೇಶ್ವರಮುಮಾಕಾಂತಂ ಶಂಕರಂ ಲೋಕಶಂಕರಂ || ೩೮ ||

ಮುಕ್ತ್ವಾ ಹರಾತ್ಮಕಂ ದೇವಂ ತ್ರೈಲೋಕ್ಯೇ ಸಚರಾಚರೇ ।
ನ ತಂ ಪಶ್ಯಾಮಿ ಭೋ ದೇವಾಸ್ತಾರಕಂ ಯೋ ವಧಿಷ್ಯತಿ || ೩೯ ||

ಬ್ರಹ್ಮಣೋ ವಚನಂ ಶ್ರುತ್ವಾ ಸಹಸ್ರಾಕ್ಷಃ ಶಚೀಪತಿಃ ।
ಕಥಂ ಭವಿಷ್ಯತೀತ್ಯೇವಮಾಲೋಕ್ಯ ಮನಸಾ ದ್ವಿಜಾಃ || ೪೦ ||

---

೩೬. ಆಗ ತಾರಕನು "ಬ್ರಹ್ಮನೇ, ದೇವಾಧಿದೇವನಾದ ಪರಮೇಶ್ವರನ ರೇತಸ್ಸನ್ನು ವಿಷ್ಣುವೇ ಮೊದಲಾದ ದೇವತೆಗಳೆಲ್ಲರೂ ಕುಡಿದು ಗರ್ಭವನ್ನು ತಾಳುವರು. ಆ ಸಮಯದಲ್ಲಿ ಹುಟ್ಟಿದವನೊಬ್ಬನಿಂದ ನನಗೆ ಮರಣವು ಒದಗಲಿ."

೩೭. ಎಂದು ತಾರಕಾಸುರನು ಕೇಳಿಕೊಳ್ಳಲು ನಾನು ಹಾಗೆಯೇ ಆಗಲೆಂದು ವರಕೊಟ್ಟು ಮೇರುಪರ್ವತಕ್ಕೆ ಹೊರಟುಹೋದೆನು.

೩೮. ಆದ್ದರಿಂದ ಎಲೈ ದೇವತೆಗಳೇ, ನೀವು ಈಗಲೇ ತ್ರಿಲೋಕರಕ್ಷಕನಾದ ಮತ್ತು ಸಮಸ್ತರಿಗೂ ಒಡೆಯನಾದ ಲೋಕಶಂಕರನನ್ನು ಕುರಿತು ಮೊರೆಯಿಡಿ.

೩೯. ಈ ಚರಾಚರಾತ್ಮಕವಾದ ಜಗತ್ತಿನಲ್ಲಿ ಪರಶಿವನೊಬ್ಬನನ್ನು ಬಿಟ್ಟರೆ ನಿಮ್ಮನ್ನು ಕಾಪಾಡಲು ತಾರಕನನ್ನು ಕೊಲ್ಲುವಂತಹವನು ಮತ್ತೊಬ್ಬನಿರಲಾರನು."

೪೦. ಎಂದು ಹೇಳಿದ ಬ್ರಹ್ಮನ ಮಾತುಗಳನ್ನು ಕೇಳಿದ ದೇವೇಂದ್ರನು "ಇದು ಹೇಗೆ ನಡೆಯುತ್ತದೆ" ಎಂದು ಮನಸ್ಸಿನಲ್ಲಿ ಬಹುವಾಗಿ ಆಲೋಚಿಸಿದನು.

ಗುರುಣಾ ದೈವತೈಸ್ಸಾರ್ಧಂ ಪುನರೇವ ಸ ದೇವರಾಟ್ ।
ಪರಸ್ಯೈವ ಸುತೋತ್ಪತ್ತಾವುಪಾಯಶ್ಚಿಂತ್ಯತಾಂ ಸುರಾಃ ॥ ೪೧ ॥

ಇತ್ಯುಕ್ತ್ವಾ ಪ್ರಯಯುರ್ದೇವಾಃ ಶಕ್ರಾದ್ಯಾ ಬ್ರಹ್ಮಣಾ ಸಹ ।
ಮೇರೋರುತ್ತರತಃ ಶೃಂಗಂ ಯತ್ರ ತಿಷ್ಠತಿ ಮಾಧವಃ ॥ ೪೨ ॥

ಗುಪ್ತಸ್ತಿಷ್ಠತ್ಯಮೇಯಾತ್ಮಾ ತಾರಕಾದ್ಭಯಪೀಡಿತಃ ।
ಸಬ್ರಹ್ಮಕಾನ್ ಸುರಾನ್ ದೃಷ್ಟ್ವಾ ದೃಷ್ಟಃ ಪ್ರೋವಾಚ ಮಾಧವಃ ॥ ೪೩ ॥

॥ ಮಾಧವ ಉವಾಚ ॥

ಉಪಾಯಶ್ಚಿಂತಿತಃ ಕೋತ್ರ ವಧಾರ್ಥಂ ತಾರಕಸ್ಯ ಹಿ ।
ಅಸ್ತಿ ಚೇದುಚ್ಯತಾಂ ದೇವಾಃ ಶರ್ಮ ನೋ ಜಾಯತೇ ಯಥಾ ॥ ೪೪ ॥

---

೪೧. ಆ ಕಾಲಕ್ಕೆ ಗುರುವಾದ ಬೃಹಸ್ಪತಿಯೂ ಇತರ ದೇವತೆಗಳೂ ಇಂದ್ರನೊಡನೆ ಪರಮೇಶ್ವರನಿಗೆ ಮಕ್ಕಳಾಗುವ ಉಪಾಯವಾವುದು, ಎಂಬುದನ್ನು ಯೋಚಿಸಲಾರಂಭಿಸಿದರು.

೪೨. ಹಾಗೆ ಯೋಚಿಸಿ ಸಮಸ್ತ ದೇವತೆಗಳೂ ಇಂದ್ರನೊಡನೆ ಮೇರುವಿನ ಉತ್ತರದಿಕ್ಕಿನಲ್ಲಿರುವ ಒಂದು ಶಿಖರದಲ್ಲಿ, ವಿಷ್ಣುವು ವಾಸಿಸುತ್ತಿದ್ದ ಸ್ಥಳಕ್ಕೆ ಹೋದರು.

೪೩. ಅಲ್ಲಿ ಶ್ರೀಮನ್ನಾರಾಯಣನು ತಾರಕನಿಗೆ ಬಹುವಾಗಿ ಹೆದರಿ ಅಡಗಿಕೊಂಡಿದ್ದನು. ಆಗ ತನ್ನಲ್ಲಿಗೆ ಬಂದ ಬ್ರಹ್ಮಾದಿಗಳನ್ನು ಕಂಡು,

೪೪. “ಎಲೈ ದೇವತೆಗಳೇ, ತಾರಕನ ವಧೆಗಾಗಿ ನೀವೇನಾದರೂ ಉಪಾಯವನ್ನು ಯೋಚಿಸಿರುವಿರಾ! ಹಾಗೇನಾದರೂ ಇದ್ದರೆ ಹೇಳಿ. ಅದರಿಂದ ನಮಗೆ ಸುಖವಾಗುವುದು” ಎಂದು ಶ್ರೀವಿಷ್ಣುವು ಹೇಳಲು,

॥ ಸೂತ ಉವಾಚ ॥

ಏವಂ ವಿಷ್ಣೋರ್ವಚಃ ಶ್ರುತ್ವಾ ಬ್ರಹ್ಮಾದ್ಯಾಃ ಸುರಸತ್ತಮಾಃ ।
ಯಥೋಕ್ತಂ ಬ್ರಹ್ಮಣಾ ತೇಭ್ಯಸ್ತಥೋಕ್ತಂ ವಿಷ್ಣವೇ ಸುರೈಃ ॥ ೪೫ ॥

ಕಿಮಿದಾನೀಂ ತು ಕರ್ತವ್ಯಮಿತಿ ಸಂಚಿಂತ್ಯ ದೇವರಾಟ್ ।
ಸೋಽಸ್ಮರನ್ಮನಸಾ ಕಾಮಮಜೇಯಮಸುರೈಃ ಸುರೈಃ ॥ ೪೬ ॥

ಶಕ್ರಸ್ಯ ಚಿಂತಿತಂ ಜ್ಞಾತ್ವಾ ಕಾಮೋ ರತಿಪತಿಃ ಸ್ವಯಂ ।
ಶಚೀಪತಿಂ ಸಮಾಗಮ್ಯ ಪ್ರಾಹ ಪುಷ್ಪಧನುರ್ಧರಃ ॥ ೪೭ ॥

॥ ಕಾಮ ಉವಾಚ ॥

ಕಿಂ ಕಾರ್ಯಂ ತ್ರಿದಶಶ್ರೇಷ್ಠ ಕರ್ತವ್ಯಂ ಕಿಂ ಮಯಾ ಪ್ರಭೋ ।
ತೀವ್ರೇಣ ತಪಸಾ ಕೋ ಹಿ ಸ್ಥಾನಮೀಹೇತ ತಾವಕಂ ॥ ೪೮ ॥

---

೪೫. ಅದನ್ನು ಕೇಳಿ ಬ್ರಹ್ಮಾದಿದೇವತೆಗಳು, ವಿಷ್ಣುವಿಗೆ ಹಿಂದೆ ಬ್ರಹ್ಮನು ಹೇಳಿದ್ದ ವಿಚಾರವನ್ನೆಲ್ಲಾ ವಿವರವಾಗಿ ತಿಳಿಸಿದರು.

೪೬. ಆಗ ಮುಂದೇನು ಮಾಡಬೇಕೆಂದು ಯೋಚಿಸುತ್ತಿರುವಾಗ, ದೇವೇಂದ್ರನು ದೇವರಾಕ್ಷಸರಿಗೂ ಅಜೇಯನಾಗಿರುವ ಮನ್ಮಥನನ್ನು ಸ್ಮರಿಸಿ ಕೊಂಡನು.

೪೭. ಇಂದ್ರನು ನೆನೆಸಿಕೊಂಡಿದ್ದುದನ್ನು ಕಾಮನು ಒಡನೆಯೇ ತಿಳಿದು ಬಂದು, ಇಂದ್ರನನ್ನು ಕುರಿತು ಹೀಗೆ ಹೇಳತೊಡಗಿದನು.

೪೮. " ಎಲೈ ದೇವೇಂದ್ರನೇ, ಈಗ ನನಗೆ ವಿಧಿಸುವ ಕಾರ್ಯವಾವುದು ? ನಾನು ಮಾಡಬೇಕಾಗಿರುವುದೇನು ? ಯಾವನು ನಿನ್ನ ಸ್ಥಾನವನ್ನು ಆಕ್ರಮಿಸಲು ಉಗ್ರವಾಗಿ ತಪಸ್ಸುಮಾಡುತ್ತಿರುವನು ?

ಕಿಂ ವಾ ಕಾಚಿತ್ತವಾದೇಶಂ ಕರ್ತುಂ ನೇಚ್ಛತಿ ಚಾಂಗನಾ ।
ತಾಂ ಕಾಮಿನೀಂ ಕರೋಮ್ಯದ್ಯ ತವ ಧ್ಯಾನಪರಾಯಣಾಂ ॥ ೪೯ ॥

ನ ಕಶ್ಚಿದಸ್ತಿ ಮೇ ಶೂರೋ ನ ಮಾನೀ ನ ಚ ಪಂಡಿತಃ ।
ವ್ಯಾಪಯಾಮಿ ಜಗತ್ಕೃತ್ಸ್ನಂ ಬ್ರಹ್ಮಾದ್ಯಂ ಸ್ತಂಭಗೋಚರಂ ॥ ೫೦ ॥

ಅಥ ಕಿಂ ಬಹುನೋಕ್ತೇನ ದುರ್ವಾಸಾ ವಾ ಮಹಾಮುನಿಃ ।
ಸೋಽಪಿ ವಿದ್ಧಃ ಪತತ್ಯಾಶು ಮದ್ಬಾಣೈರ್ಮರುತಾಂ ಪತೇ ॥ ೫೧ ॥

॥ ಇಂದ್ರ ಉವಾಚ ॥

ಜಾನಾಮ್ಯಹಂ ರತೇರ್ನಾಥ ಸಾಮರ್ಥ್ಯಂ ಪುಷ್ಪಧನ್ವಿನಃ ।
ನೂನಂ ಹಿ ಸರ್ವಕಾರ್ಯಾಣಿ ತ್ವತ್ತಃ ಸಿದ್ಧ್ಯಂತಿ ನಾನ್ಯಥಾ ॥ ೫೨ ॥

---

೪೯. ಯಾವ ಹೆಂಗಸು ನಿನ್ನ ಅಪ್ಪಣೆಯನ್ನು ಪಾಲಿಸದೆ ನಿನಗೆ ವಿಮುಖಳಾಗಿರುವಳು? ಈಗಲೇ ಹೇಳು. ಅವಳು ಈಗಲೇ ನಿನ್ನನ್ನೇ ಬಂದು ಓಲೈಸುವಂತೆ ಮಾಡುವೆನು.

೫೦. ನನಗೆ ವಶನಾಗದ ಶೂರನಿಲ್ಲ. ಯಾವ ವಿದ್ವಾಂಸನೇ ಆಗಲಿ, ಎಂತಹ ಧೀರನೇ ಆಗಲಿ, ಅವನನ್ನು ನಾನು ಅಲ್ಲಾಡಿಸಿಬಿಡುವೆನು. ಹೆಚ್ಚೇನು? ಸಮಸ್ತ ಜಗತ್ತನ್ನೂ ಬ್ರಹ್ಮಾದಿಗಳನ್ನೂ ಕಂಬದಂತೆ ಸ್ಥಿರವಾಗಿ ನಿಲ್ಲಿಸಿಬಿಡುವೆನು.

೫೧. ಹೆಚ್ಚು ಹೇಳುವುದೇಕೆ? ಬಹು ಕೋಪಿಷ್ಠನಾದ ದೂರ್ವಾಸಋಷಿಯನ್ನೂ ಸಹ ನನ್ನ ಬಾಣಗಳಿಂದ ನೋಯಿಸಿ ನನ್ನ ಇಷ್ಟದಂತೆ ಅವನನ್ನು ನಡೆಸಿಬಿಡುವೆನು, ದೇವೇಂದ್ರನೇ, ಯೋಚಿಸಬೇಡ" ಎಂದು ಹೇಳಲು,

೫೨. ಇಂದ್ರನು ಅದಕ್ಕೆ ಸಂತೋಷಪಟ್ಟು "ಪುಷ್ಪಧನ್ವಿಯೇ, ನಿನ್ನ ಶಕ್ತಿಯು ನನಗೆ ಗೊತ್ತು. ಸಮಸ್ತ ಕಾರ್ಯಗಳೂ ನಿನ್ನಿಂದಲೇ ಸಿದ್ಧಿಸುವುವು. ಇದು ನಿಶ್ಚಯ.

ಗಚ್ಛ ಪಾರ್ಶ್ವಂ ಮಹೇಶಸ್ಯ ಸುರಾಣಾಂ ಹಿತಕಾಮ್ಯಯಾ ।
ಚಿತ್ತಂ ಹರಸ್ಯ ಸಂಕ್ಷೋಭ್ಯ ಪಾರ್ವತ್ಯಾಃ ಸಂಗಮಂ ಕುರು ॥ ೫೩ ॥

ಏತದೇವ ಹಿ ಮೇ ಕಾರ್ಯಮೇಷ ಏವ ಮನೋರಥಃ ।
ಏತಸ್ಮಾತ್ಕಾರಣಾತ್ತ್ವಂ ಹಿ ಸ್ಮೃತಃ ಪುಷ್ಪಧನುರ್ಧರ ॥ ೫೪ ॥

ಏವಂ ಶಕ್ರವಚಃ ಶ್ರುತ್ವಾ ಬಲವಾನ್ ಮಕರಧ್ವಜಃ ।
ಮಧೋಃ ಸಖಾ ರತೀಯುಕ್ತಃ ಪಂಚಬಾಣೋ ಮನೋಭವಃ ॥ ೫೫ ॥

ಯತ್ರಾಸ್ತೇ ಭಗವಾನ್ ಶಂಭುರ್ಧ್ಯಾನದೃಷ್ಟ್ಯಾ ಸಮಾಹಿತಃ ।
ನಿಷ್ಕಂಪಃ ಸ್ವಾತ್ಮನಾತ್ಮಾನಂ ಚಿಂತಯಾನೋ ಮಹೇಶ್ವರಃ ॥ ೫೬ ॥

ಪ್ರಾಪ್ಯ ಶಂಭೋರಾಯತನಮಪಶ್ಯನ್ಮಕರಧ್ವಜಃ ।
ಶೈಲಾದಿಂ ದ್ವಾರದೇಶೇ ತು ಮೇರುಶೃಂಗಮಿವೋದಿತಂ ॥ ೫೭ ॥

---

೫೩. ಈಗ ನಮಗೆ ನೀನು ಹಿತವನ್ನುಂಟುಮಾಡಬೇಕಾದರೆ, ಈಶ್ವರನ ಸಮೀಪಕ್ಕೆ ಹೋಗು. ಅವನ ಮನಸ್ಸನ್ನು ಕಲಕಿ, ಪಾರ್ವತಿಯೊಡನೆ ಶಿವನು ಮೋಹಗೊಳ್ಳುವಂತೆ ಮಾಡಿ ಅವರಿಬ್ಬರ ಪ್ರೇಮವನ್ನು ಬೆಳೆಸು.

೫೪. ಅನಂತರ ನಮ್ಮ ಇಷ್ಟಾರ್ಥವು ಸಿದ್ಧಿಸುವುದು. ಇದೇ ನಿನ್ನಿಂದ ನಮಗೆ ಆಗಬೇಕಾಗಿರುವ ಸಹಾಯ. ಪುಷ್ಪಬಾಣಧಾರಿಯೇ! ಇದಕ್ಕಾಗಿಯೇ ನಾವು ನಿನ್ನನ್ನು ಸ್ಮರಿಸಿದುದು.

೫೫-೫೬ ಹೀಗೆ ಹೇಳಿದ ಇಂದ್ರನ ಮಾತುಗಳನ್ನು ಬಲಿಷ್ಠನೂ, ರತಿ ಪತಿಯೂ, ಮಧುಸಖನೂ ಆದ ಮನೋಭವನು ಕೇಳಿ, ಶಂಕರನನ್ನೇ ಮನಸ್ಸಿನಲ್ಲಿ ಧ್ಯಾನಿಸುತ್ತಾ ಧೈರ್ಯದಿಂದ ಮಹೇಶ್ವರನಿದ್ದ ಸ್ಥಳಕ್ಕೆ ಹೋದನು.

೫೭. ಅಲ್ಲಿ ಶಿವಗೃಹದ ಮುಂಭಾಗದಲ್ಲಿದ್ದ ಒಂದು ಸುಂದರವಾದ ಪರ್ವತವನ್ನು ನೋಡಿದನು. ಅದು ಮೇರುಶಿಖರದಂತೆ ಬಹು ಸುಂದರವಾಗಿತ್ತು.

ಸರ್ವಾಭರಣಸಂಯುಕ್ತಂ ಸಹಸ್ರಾದಿತ್ಯವರ್ಚಸಂ ।
ಶೂಲಹಸ್ತಂ ತ್ರಿನೇತ್ರಂ ಚ ಚಂದ್ರಾವಯವಭೂಷಣಂ ॥ ೫೮ ॥

ವಜ್ರಪಾಣಿಂ ಚತುರ್ಬಾಹುಂ ದ್ವಿತೀಯಮಿವ ಶಂಕರಂ ।
ತಂ ದೃಷ್ಟ್ವಾ ಮದನೋ ವಿಪ್ರಾಶ್ಚಿಂತಾಕ್ರಾಂತಸ್ತದಾಽಭವತ್ ॥ ೫೯ ॥

ಕಥಂ ಪ್ರವಿಶ್ಯ ವಕ್ಷ್ಯಾಮಿ ಶಂಭುಂ ತ್ರಿದಶವಂದಿತಂ ।
ಕಥಂ ಕಾರ್ಯಂ ಕರಿಷ್ಯಾಮಿ ಸುರಾಣಾಂ ಪ್ರೀತಿವರ್ಧನಂ ॥ ೬೦ ॥

ಚಿಂತಯಿತ್ವಾ ತು ಬಹುಧಾ ವಂಚನಾರ್ಥಾಯ ನಂದಿನಃ ।
ವಾಯುರೂಪಂ ತತಃ ಕೃತ್ವಾ ಸುಗಂಧಂ ಮೃದುಶೀತಲಂ ॥ ೬೧ ॥

ಪ್ರವಿವೇಶ ತದಾ ಕಾಮೋ ದಕ್ಷಿಣಾಂ ದಿಶಮಾಶ್ರಯಂ ।
ಯೇನ ಯಾಮ್ಯಾಂ ದಿಶಿ ಗತೋ ವಾಯುರ್ವಾತಿ ಸುಖಾವಹಃ ॥ ೬೨ ॥

೫೮-೫೯. ಅಲ್ಲಿ ನಂದೀಶ್ವರನು ನಿಂತಿದ್ದನು. ಆತನು ಸರ್ವಾಭರಣಭೂಷಿತನಾಗಿ ಸಹಸ್ರ ಸೂರ್ಯರಂತೆ ಹೊಳೆಯುತ್ತಾ, ಮೂರು ಕಣ್ಣುಗಳಿಂದಲೂ, ಶಿರಸ್ಸಿನಲ್ಲಿರುವ ಚಂದ್ರಲೇಖೆಯಿಂದಲೂ, ಕೈಯ್ಯಲ್ಲಿ ತ್ರಿಶೂಲ, ವಜ್ರಾಯುಧ, ಇವುಗಳಿಂದಲೂ ಕೂಡಿ ಚತುರ್ಬಾಹುವಾಗಿ, ಎರಡನೆಯ ಪರಮೇಶ್ವರನೋ ಎಂಬಂತೆ ವಿರಾಜಿಸುತ್ತಿದ್ದನು. ಅವನನ್ನು ನೋಡಿ ಮನ್ಮಥನು ಭಯದಿಂದ ಚಿಂತಾಕ್ರಾಂತನಾದನು.

೬೦. ಈಗ ಹೇಗೆ ಒಳಕ್ಕೆ ಹೋಗಲಿ ? ಶಂಕರನನ್ನು ನೋಡುವುದು ಹೇಗೆ ? ದೇವತೆಗಳ ಕಾರ್ಯವನ್ನು ನಾನು ಹೇಗೆ ಸಾಧಿಸುವೆನೋ ಕಾಣೆನಲ್ಲಾ ! ಎಂದು ಬಹಳವಾಗಿ ಯೋಚಿಸಿದನು.

೬೧. ಹೀಗೆ ನಾನಾವಿಧವಾಗಿ ಯೋಚಿಸಿ, ನಂದೀಶ್ವರನನ್ನು ವಂಚಿಸುವ ಸಲುವಾಗಿ ಸುಗಂಧಮಯವಾದ ಮತ್ತು ಶೀತಲವಾದ ವಾಯುರೂಪವನ್ನು ತಾಳಿದನು.

೬೨. ಹಾಗೆಯೇ ದಕ್ಷಿಣದಿಕ್ಕಿನ ಬಾಗಿಲಿಂದ ಶಿವಾಲಯವನ್ನು ಪ್ರವೇಶಿಸಿದನು. ಆಗ ದಕ್ಷಿಣಭಾಗದಿಂದ ಸುಗಂಧವೂ ಸುಶೀತಲವೂ ಆದ ವಾಯುವು ಬೀಸಲಾರಂಭಿಸಿತು.

ಅದ್ಯಾಪಿ ಕಾರಣಾತ್ಸೋಽಯಂ ಸುಗಂಧೋ ಮೃದುಶೀತಲಃ ।
ಅಪಶ್ಯತ್ತತ್ರ ಮದನಃ ಸೂರ್ಯಕೋಟಿಮಿವೋದಿತಂ ॥ ೬೩ ॥

ಸಹಸ್ರನಯನಂ ದೇವಂ ಸಹಸ್ರತನುಮೀಶ್ವರಂ ।
ನೀಲಕಂಠಂ ಸುಧಾಭಾಸಂ ಶುಭ್ರಖಂಡೇಂದುಧಾರಿಣಂ ॥ ೬೪ ॥

ಜಗದುತ್ಪತ್ತಿಸಂಹಾರಸ್ಥಿತ್ಯನುಗ್ರಹಕಾರಿಣಂ ।
ಶುದ್ಧಸ್ಫಟಿಕಸಂಕಾಶಂ ವಿಧೂಮಮಿವ ಪಾವಕಂ ॥ ೬೫ ॥

ರುಂಡಮಾಲಾಚಿತಂ ದೇವಂ ಸೂರ್ಯಮಾಲಾವಿಭೂಷಿತಂ ।
ಅನೌಪಮ್ಯಮಸಾದೃಶ್ಯಮಪ್ರಮೇಯಮನಾಕುಲಂ ॥ ೬೬ ॥

ಜಗಚ್ಚಕ್ಷುರ್ಜಗದ್ಬಾಹುಂ ಜಗಚ್ಛೀರ್ಷಂ ಜಗನ್ಮಯಂ ।
ಜಗತ್ಪಾದಂ ಜಗಚ್ಛ್ರೋತ್ರಂ ಸೂಕ್ಷ್ಮಸ್ಥೂಲಂ ಪರಾತ್ಪರಂ ॥ ೬೭ ॥

---

೬೩. ಹೀಗೆ ಸುಗಂಧವಾಯುರೂಪಿಯಾದ ಮದನನು ದಕ್ಷಿಣಭಾಗದಿಂದ ಶಿವಾಲಯವನ್ನು ಪ್ರವೇಶಿಸಿ, ಅಲ್ಲಿ ಸೂರ್ಯಕೋಟಿಯಂತೆ ಪ್ರಕಾಶಮಾನನಾದ ಶಂಕರನನ್ನು ಕಂಡನು.

೬೪-೬೬. ಅಲ್ಲಿ ಶಂಕರನಾದರೋ, ಸಹಸ್ರ ನಯನಗಳಿಂದಲೂ, ಸಹಸ್ರ ದೇಹಗಳಿಂದಲೂ ಕೂಡಿದ್ದನು. ಅವನ ಕಂಠವು ನೀಲಿಯ ಬಣ್ಣದಲ್ಲಿದ್ದರೂ ದೇಹವೆಲ್ಲಾ ಅಮೃತದಂತೆ ಶುಭ್ರವಾಗಿತ್ತು. ಬಾಲಚಂದ್ರನು ಶಿವನ ಹಣೆಯಲ್ಲಿ ಹೊಳೆಯುತ್ತಿದ್ದನು. ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಕರ್ತನಾಗಿ ಶುದ್ಧವಾದ ಸ್ಫಟಿಕರಾಶಿಯಂತೆ ಹೊಳೆಯುತ್ತಾ ಹೊಗೆಯಿಲ್ಲದ ಉರಿಯಂತೆ ಪ್ರಕಾಶಿಸುತ್ತಿದ್ದನು. ರುಂಡಾಮಾಲೆಗಳು ಸೂರ್ಯಪ್ರಭೆಯೂ, ಪರಮೇಶ್ವರನನ್ನು ಸಾದೃಶ್ಯರಹಿತನನ್ನಾಗಿಯೂ ಮಹಾಮಹಿಮನನ್ನಾಗಿಯೂ ಮಾಡಿದುವು.

೬೭-೬೮. ಪರಮೇಶ್ವರನ ಕಣ್ಣುಗಳು ಜಗದ್ರೂಪವಾಗಿದ್ದುವು. ಲೋಕವೇ ಆತನ ತೋಳುಗಳಾಗಿದ್ದುವು. ಜಗತ್ತೇ ಪರಶಿವನ ಶಿರಸ್ಸು. ಜಗತ್ತೆಲ್ಲವೂ ಶಿವನ ಹೃದಯದಲ್ಲಿ ಅಡಗಿವೆ. ಸ್ಥೂಲ, ಸೂಕ್ಷ್ಮರೂಪದಿಂದಲೂ, ಪರಾಪರ ರೂಪ

ರುದ್ರಂ ಸರ್ವಂ ಪಶುಪತಿಮುಗ್ರಂ ಭೀಮಂ ಭವಂ ದ್ವಿಜಾಃ ।
ಮಹಾದೇವಂ ಮಹೇಶಾನಮಷ್ಟಮೂರ್ತಿಂ ಜಗತ್ಪತಿಂ ॥ ೭೮ ॥

ವ್ಯಕ್ತಾವ್ಯಕ್ತಂ ತ್ರಿಲೋಕೇಶಂ ಪೂಜಿತಂ ಚ ಸುರಾಸುರೈಃ ।
ಅಥ ದೃಷ್ಟ್ವಾ ಮಹಾದೇವಂ ಪ್ರಹೃಷ್ಟೋ ಮಕರಧ್ವಜಃ ॥ ೭೯ ॥

ನಿಸ್ಸೃಷ್ಯ ಚಾಪಮಾಪೂರ್ಯ ಸ್ಥಿತಃ ಪಶ್ಯನ್ ಭವೋದ್ಭವಂ ।
ಏವಂ ಸ್ಥಿತಸ್ಯ ಕಾಮಸ್ಯ ಸಹಸ್ರಾಣ್ಯಯುತಾನಿ ಷಟ್ ॥ ೭೦ ॥

ಗತಾನಿ ತಸ್ಯ ವರ್ಷಾಣಿ ಮುನೀಂದ್ರಾಶ್ಚಿತ್ತಜನ್ಮನಃ ।
ತತಸ್ಸಭಗವಾನ್ ದೇವೋ ನೇತ್ರೇ ಉನ್ಮೀಲ್ಯ ಶಂಕರಃ ॥ ೭೧ ॥

ಅಪಶ್ಯದ್ಗಿರಿಜಾಂ ದೇವೀಮಗ್ರೇ ವಿಶ್ವೇಶ್ವರಃ ಶಿವಃ ।
ಗಿರೀಂದ್ರಪುತ್ರೀಂ ತಪಸಃ ಪ್ರಸಕ್ತಾಂ ಲಜ್ಜಯಾನ್ವಿತಾಂ ॥ ೭೨ ॥

ದಿಂದಲೂ, ಜಗತ್ತನ್ನು ಆವರಿಸಿ, ರುದ್ರ, ಶರ್ವ, ಪಶುಪತಿ, ಉಗ್ರ, ಭೀಮ, ಭವ, ಅಷ್ಟಮೂರ್ತಿ, ಮಹೇಶ್ವರ, ಜಗತ್ಪತಿ ಎಂಬ ಹೆಸರುಗಳಿಂದ ಜಗದ್ವಂದ್ಯನಾಗಿರುವ ಪರಶಿವನನ್ನು ನೋಡಿದನು.

೭೯. ವ್ಯಕ್ತಾವ್ಯಕ್ತರೂಪಿಯಾಗಿ, ಮೂರು ಲೋಕಕ್ಕೂ ಪೂಜ್ಯನಾಗಿ, ಸುರಾಸುರರಿಗೆ ವಂದ್ಯನಾಗಿರುವ ಮಹಾದೇವನನ್ನು ಮನ್ಮಥನು ಸಂತೋಷದಿಂದ ನೋಡಿದನು.

೭೦-೭೧. ಒಡನೆಯೇ ತನ್ನ ಪುಷ್ಪಬಾಣವನ್ನು ಧನುಸ್ಸಿಗೆ ಹೂಡಿ, ಪರಮೇಶ್ವರನ ಮುಂದೆ ನಿಂತನು. ಹೀಗೆ ಪುಷ್ಪಬಾಣಗಳನ್ನು ಪ್ರಯೋಗಿಸುತ್ತಾ, ಅರುವತ್ತು ಸಹಸ್ರವರ್ಷ ಕಾಮನು ಶಿವನ ಮುಂದೆಯೇ ನಿಂತಿದ್ದನು. ಅಮೇಲೆ ಒಂದು ದಿನ ಶಂಕರನು ತನ್ನ ಕಣ್ಣುಗಳನ್ನು ತೆರೆದು ನೋಡಲಾಗಿ,

೭೨. ಎದುರಿನಲ್ಲಿ ಪಾರ್ವತಿಯು ಲಜ್ಜಾವನತಮುಖಿಯಾಗಿ, ತಪಸ್ಸಿನಿಂದ ಪರಿಶುದ್ಧಳಾಗಿ ನಿಂತಿರುವುದನ್ನು ಕಂಡನು.

ದೃಷ್ಟ್ವಾ ಕಿಮತ್ರೇತಿ ವಿಕಲ್ಪಬುದ್ಧ್ಯಾ ।
ಕಾಮೋಯಮತ್ರೇತಿ ವಿಚಿಂತ್ಯ ಶರ್ವಃ ।
ಜ್ಞಾತ್ವಾ ವಿಲೋಕ್ಯ ಪ್ರವಿಕೃಷ್ಟಚಾಪಂ ।
ನೇತ್ರಾಗ್ನಿನಾಽಸೌ ಮದನೋಽಪಿ ದಗ್ಧಃ ॥ ೭೩ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಮದನದಹನಂ ನಾಮ ತ್ರಿಪಂಚಾಶೋಽಧ್ಯಾಯಃ.

---

೭೩. ಈರೀತಿ ನನ್ನ ಮನಶ್ಚಾಂಚಲ್ಯಕ್ಕೆ ಈ ಕಾಮನೇ ಕಾರಣನೆಂದು ತಿಳಿದು ಮಹೇಶ್ವರನು, ತನ್ನ ಉರಿಗಣ್ಣಿನಿಂದ ಬಿಲ್ಲನ್ನು ಹಿಡಿದು ನಿಂತಿದ್ದ ಮದನನನ್ನು ಸುಟ್ಟುಹಾಕಿದನು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದರೂಪವಾಗಿ ಮದನದಹನದ ಕಥೆಯಲ್ಲಿ ಐವತ್ತುಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಶ್ರೀ ಶಿವಾಯನಮಃ

ಅಥ ಶ್ರೀ ಸೌರಪುರಾಣೇ ಚತುಷ್ಪಂಚಾಶೋಽಧ್ಯಾಯಃ.

॥ ಸೂತ ಉವಾಚ ॥

ದಗ್ಧೇ ರತಿಪತೌ ಶಂಭುರುವಾಚಾಚಲಕನ್ಯಕಾಂ ।
ಕಿಮಹಂ ತವ ದೇವೇಶಿ ಕರೋಮಿ ಮನಸಿ ಸ್ಥಿತಂ ॥ ೧ ॥

ವರಂ ಬ್ರೂಹಿ ಮಹಾದೇವಿ ದಾಸ್ಯಾಮ್ಯದ್ಯ ಸುರೇಶ್ವರಿ ।
ಮಯಿ ಪ್ರಸನ್ನೇ ದೇವೇಶಿ ಕಿಂ ದುರ್ಲಭಮಿಹಾಸ್ತಿ ತೇ ॥ ೨ ॥

॥ ಶ್ರೀಪಾರ್ವತ್ಯುವಾಚ ॥

ಹತೇ ತು ಕಾಮೇ ವದ ನೀಲಕಂಠ ।
ವರೇಣ ಕಿಂ ದೇವ ಕರೋಮಿ ತೇಽದ್ಯ ।

ಐವತ್ತುನಾಲ್ಕನೆಯ ಅಧ್ಯಾಯ.

೧-೨. ಕಾಮನು ಹಾಗೆ ಮಹೇಶ್ವರನ ಹಣೆಗಣ್ಣಿನಿಂದ ಭಸ್ಮವಾಗಲು, ಶಂಕರನು ಎದುರಿನಲ್ಲಿ ನಿಂತಿದ್ದ ಪಾರ್ವತಿಯನ್ನು ಕುರಿತು “ ಎಲೈ ದೇವಿಯೇ, ನೀನು ಏಕೆ ಇಲ್ಲಿ ನಿಂತಿದ್ದೀಯೆ ? ವರವನ್ನು ಕೇಳು. ನಿನಗೆ ನಾನು ಪ್ರಸನ್ನನಾಗಿರುವೆನು. ಬೇಕಾದ್ದನ್ನು ಕೊಡುವೆನು. ಇನ್ನು ನಿನಗೆ ದುರ್ಲಭವಾದ ವಸ್ತುವಾವುದಿರುವುದು? ಎಂದು ಕೇಳಿದನು.

೩. ಅದಕ್ಕೆ ಪಾರ್ವತಿಯು “ ಸ್ವಾಮಿಯೇ, ಪರಮೇಶ್ವರನೇ, ನಮ್ಮೆದುರಿಗೇ ಮನ್ಮಥನು ಧ್ವಂಸವಾಗಿರಲಾಗಿ ಇನ್ನು ನಮಗೆ ಬೇಕಾದದ್ದೇನು ? ಸ್ತ್ರೀಪುರುಷರ

ವಿನ್ಯೈವ ಕಾಮೇನ ನ ಚಾಸ್ತಿ ಭಾವಃ ।
ಸ್ತ್ರೀಪುಂಸಯೋರ್ಭಾಸ್ಕರಕೋಟಿಕಲ್ಪಃ ॥ ೩ ॥

ಭಾವಸ್ಯ ಹಾನೇಃ ಸುಖಸನ್ನಿಕರ್ಷಃ ।
ಕಥಂ ಭವೇದ್ಬ್ರೂಹಿ ಸುರೇಶವಂದ್ಯ ।
ಉವಾಚ ಭೂಯೋ ಮದನಾಂತಕಾರೀ ।
ದೇಹೇ ನ ಚಾಹಂ ಮದನಂ ಸುನೇತ್ರೇ ।
ನೇತ್ರಸ್ಯ ಚೈವ ಜ್ವಲನಾತ್ಮಕಸ್ಯ ।
ಸುರೂಪಮೇತದ್ವದ ಕಿಂ ಕರೋಮಿ ॥ ೪ ॥

॥ ದೇವ್ಯುವಾಚ ॥

ಬಾಲೇತಿ ಮತ್ವಾ ಭವ ಭೂತನಾಥ ।
ವ್ಯಾಮೋಹಸೇ ಕಿಂ ತ್ವಮನಿಂದ್ಯವರ್ಯ ।
ಸ್ವತಂತ್ರವೃತ್ತಿರ್ಯದಿ ವಾ ತವೈಷಾ ।
ತದಾ ದಹೇರ್ಮಾಮಪಿ ಚಾಗ್ರಸಂಸ್ಥಾಂ ॥ ೫ ॥

ಅನುರಾಗವನ್ನು ಅಭಿವೃದ್ಧಿಗೊಳಿಸುವ, ಸೂರ್ಯಕೋಟಿ ಸದೃಶವಾದ ಪ್ರೀತಿಭಾವವನ್ನೇ ತೊಡೆದುಹಾಕಿರುವ ನಿನ್ನಲ್ಲಿ ನಾನು ಕೇಳತಕ್ಕದ್ದೇನು.

೪. ಮನುಷ್ಯರಿಗೆ ಸುಖವನ್ನುಂಟುಮಾಡುವುದು ಒಂದು ಭಾವ. ಆ ಭಾವಾನುರಾಗಕ್ಕೆ ಒಡೆಯನು ಕಾಮನು. ಅವನೇ ನಾಶವಾದ ಮೇಲೆ ಇನ್ನು ಮನುಷ್ಯರಿಗೆ ಸುಖವೆಲ್ಲಿ ಬಂತು" ಎಂದು ದೇವಿಯು ಹೇಳುತ್ತಿರಲು ಪರಶಿವನು ದೇವಿಯನ್ನು ಕುರಿತು "ಎಲೈ ಸುರೂಪಿಣಿಯೇ, ನಾನು ಕಾಮನನ್ನು ಕೊಲ್ಲಲಿಲ್ಲ. ನನ್ನ ಹಣೆಗಣ್ಣಿನಲ್ಲಿರುವ ಅಗ್ನಿಯರೂಪವನ್ನು ತಾನಾಗಿಯೇ ಹೊಂದಿದನು. ಇದಕ್ಕೆ ನಾನು ಮಾಡುವುದೇನು." ಎನಲು,

೫. ಪಾರ್ವತಿಯು "ಸ್ವಾಮಿಯೇ, ಪ್ರಾಣಿಗಳಿಗೆ ಒಡೆಯನೇ, ನನ್ನಲ್ಲಿ ನಿನಗೆ ನಿಜವಾಗಿಯೂ ಪ್ರೀತಿಯಿರುವುದಾದರೆ, ನಿನ್ನ ಮನೋಭಾವನೆಯಂತೆ ನಿನ್ನ ವ್ಯಾಪಾರವು ನಡೆಯುವುದಾದರೆ, ನಿನ್ನ ಮುಂದಿರುವ ನನ್ನನ್ನು ನಿನ್ನ ಹಣೆಗಣ್ಣಿನಿಂದ ಸುಟ್ಟುಬಿಡು."

ಯದಿ ವಿಶ್ವೇಶ್ವರೋ ದೇವೋ ಬ್ರಹ್ಮಾದೀನಾಂ ಹರಶ್ಶಿವಃ ।
ಪ್ರತಾರಣೇ ಪ್ರವೃತ್ತಶ್ಚೇತ್ಕೋ ನಿವಾರಯಿತುಂ ಕ್ಷಮಃ ॥ ೬ ॥

ನಾಹಂ ಪ್ರತಾರ್ಯಾ ಭಗವಂಸ್ತ್ವಾಮಹಂ ಶರಣಂ ಗತಾ ।
ಗತಿರ್ನಾನ್ಯಾಸ್ತಿ ಮೇ ದೇವ ತಸ್ಮಾನ್ಮಾಂ ತ್ರಾತುಮರ್ಹಸಿ ॥ ೭ ॥

ತ್ವಮೇವ ಚಕ್ಷುರ್ಜಗತಸ್ತ್ವಮೇವ ವಚಸಾಂ ಪತಿಃ ।
ತ್ವಮೇವ ಧಾತಾ ಜಗತೋ ವಿಧಾತಾ ವಿಶ್ವತೋಮುಖಃ ॥ ೮ ॥

ನಮಾಮ್ಯಹಂ ದೇವವರಂ ಪುರಾಣಂ ।
ಉಪೇಂದ್ರವೇಧೋಮರರಾಜಜುಷ್ಟಂ ।
ಶಶಾಂಕಸೂರ್ಯಾಗ್ನಿಮಯಂ ತ್ರಿನೇತ್ರಂ ।
ಧ್ಯಾನಾಧಿಗಮ್ಯಂ ಜಗತಃ ಪ್ರಕಾಶಂ ॥ ೯ ॥

---

೬. ಲೋಕಕ್ಕೆ ಒಡೆಯನಾಗಿ, ಬ್ರಹ್ಮಾದಿದೇವತೆಗಳಿಗೂ ಸ್ವಾಮಿಯಾಗಿರುವ ನೀನೇ ವಂಚನೆಗೆ ಹೊರಟರೆ ಅದನ್ನು ತಪ್ಪಿಸುವರಾರು.

೭. ಸ್ವಾಮಿಯೇ. ನಾನು ನಿನ್ನ ಮೋಸಕ್ಕೆ ಸಿಕ್ಕುವವಳಲ್ಲ. ಏಕೆಂದರೆ ನಾನು ನಿನ್ನನ್ನೇ ಶರಣುಹೊಕ್ಕಿರುವೆನು. ನನಗೆ ನಿನ್ನನ್ನು ಬಿಟ್ಟರೆ ಮತ್ತಾರೂ ದಿಕ್ಕಿಲ್ಲ. ಆದ್ದರಿಂದ ಈಗ ನನ್ನನ್ನು ಕಾಪಾಡುವ ಭಾರವು ನಿನ್ನದಾಗಿದೆ.

೮. ನೀನೇ ಲೋಕಕ್ಕೆ ಕಣ್ಣು. ನೀನೇ ವಾಕ್ಪತಿಯು. ಜಗತ್ತಿನ ಸೃಷ್ಟಿಗೆ ನೀನೇ ಮೂಲಕಾರಣ. ಪ್ರಪಂಚವನ್ನೆಲ್ಲಾ ಏಕಮುಖದಿಂದ ರಕ್ಷಿಸುವವನೂ ನೀನೇ ಆಗಿರುವೆ.

೯. ಎಲೈ ಪರಮೇಶ್ವರನೇ, ನೀನು ಪುರಾಣಪುರುಷನು. ಬ್ರಹ್ಮ ವಿಷ್ಣು ಮೊದಲಾದ ದೇವತೆಗಳಿಂದ ಸೇವಿಸಲ್ಪಡುವವನು. ಸೋಮಸೂರ್ಯಾಗ್ನಿಗಳನ್ನೇ ಮೂರು ಕಣ್ಣುಗಳನ್ನಾಗಿ ಉಳ್ಳವನು. ಧ್ಯಾನಗೋಚರನು. ಇಂತಹ ನಿನಗೆ ನಮಸ್ಕಾರವು

ಶ್ವಾಂ ವಾಙ್ಮಯಾಧಾರಮನಂತವೀರ್ಯಂ ।
ಜ್ಞಾನಾರ್ಣವಂ ಚೈವ ಗುಣಾರ್ಣವಂ ಚ ।
ಪರಾಪರಂ ಧಾಮನಿಧಿಂ ಸುಸೂಕ್ಷ್ಮ ।
ಮನಾದಿಮಧ್ಯಾಂತವಿಹೀನರೂಪಂ ॥ ೧೦ ॥

ಹಿರಣ್ಯಗರ್ಭಂ ಜಗತಃ ಪ್ರಸೂತಿಂ ।
ನಮಾಮಿ ದೇವಂ ಹರಿಣಾಂಕಚಿಹ್ನಂ ।
ಪಿನಾಕಪಾಶಾಂಕುಶಶೂಲಹಸ್ತಂ ।
ಕಪರ್ದಿನಂ ಮೇಘಸಹಸ್ರಘೋಷಂ ॥ ೧೧ ॥

ತಮಾಲಕಂಠಂ ಸ್ಫಟಿಕಾವದಾತಂ ।
ನಮಾಮಿ ಶಂಭುಂ ಭುವನೈಕಸಿಂಹಂ ।
ದಶಾರ್ಧವಕ್ತ್ರಂ ಸುರಸಿಂಧುಶೀರ್ಷಂ ।
ಶಶಾಂಕಚಿಹ್ನಂ ನರಸಿಂಹದಾರುಣಂ ॥ ೧೨ ॥

---

೧೦. ವಾಕ್ಕುಗಳಿಗೆ ಅಧೀಶ್ವರನಾಗಿಯೂ, ವೀರ್ಯದಲ್ಲಿ ಅಸದೃಶನಾಗಿಯೂ, ಜ್ಞಾನಕ್ಕೆ ಸಮುದ್ರನಂತೆಯೂ, ಗುಣಗಳಿಗೆ ನಿಧಿಯಾಗಿಯೂ, ಪರಾಪರವಾದ ತೇಜಸ್ಸಿಗೆ ಆಶ್ರಯನಾಗಿಯೂ, ಆದಿಮಧ್ಯಾಂತ ಶೂನ್ಯನಾಗಿಯೂ ಇರುವ ಪರಮೇಶ್ವರನೇ, ನಿನ್ನನ್ನು ನಾನು ಮೊರೆಹೊಕ್ಕಿರುವೆನು.

೧೧. ಪರಮೇಶ್ವರನೇ, ನಿನ್ನಲ್ಲಿ ಸಮಸ್ತ ನಿಧಿಯೂ ಅಡಗಿದೆ. ಲೋಕಕ್ಕೆ ಉತ್ಪತ್ತಿಸ್ಥಾನವಾಗಿ, ಚಂದ್ರನನ್ನೇ ಧರಿಸಿ, ಪಿನಾಕ, ಪಾಶ, ಅಂಕುಶ, ತ್ರಿಶೂಲ, ಇವುಗಳನ್ನು ಹಿಡಿದು ಜಟಾಜೂಟಧಾರಿಯಾಗಿ, ಸಹಸ್ರ ಮೇಘಗಳಂತೆ ಗರ್ಜಿಸುವ ನಿನಗೆ ವಂದನೆಯು.

೧೨. ಹೊಂಗೆಯ ಮರದಂತೆ ನೀಲವಾದ ಕಂಠವುಳ್ಳವನೇ, ಸ್ಫಟಿಕದಂತೆ ಶುಭ್ರವಾದ ದೇಹವುಳ್ಳವನೇ, ಲೋಕಕ್ಕೆ ಸಿಂಹಪ್ರಾಯನೇ, ಪಂಚಮುಖದಿಂದ ಕೂಡಿ ದೇವಗಂಗೆಯನ್ನೇ ಶಿರದಲ್ಲಿ ಧರಿಸಿರುವವನೇ, ಚಂದ್ರಶೇಖರನೇ, ನೃಸಿಂಹನಂತೆ ಭಯಂಕರನಾದವನೇ, ನಿನ್ನನ್ನು ಶರಣುಹೋಗುತ್ತೇನೆ.

ತ್ವಾಂ ನಮಾಮಿ ಶರಭರೂಪಧರೋರಗೇಂದ್ರ ।
ರಾಜಹಾರಂ ಚಲದ್ವಲಯಭೂಷಣಂ ಹರಂ ।
ವರವಿಬುಧಮುಕುಟಾರ್ಚಿತಾಂಘ್ರಿಂ ।
ನಮಾಮಿ ಹಿ ಹರಿಚರ್ಮವಸನಂ ತ್ವಾಂ ॥ ೧೩ ॥

ಯದಕ್ಷರಂ ನಿರ್ಗುಣಮಪ್ರಮೇಯಂ ।
ಯಜ್ಜ್ಯೋತಿರೇಕಂ ಪ್ರವದಂತಿ ಸಂತಃ ।
ದೂರಂಗಮಂ ದೇವಮನಂತಮೂರ್ತಿಂ ।
ನಮಾಮಿ ಸೂಕ್ಷ್ಮಂ ಪರಮಂ ಪವಿತ್ರಂ ॥ ೧೪ ॥

ನಮಾಮಿ ರುದ್ರಂ ಪ್ರಮಥಾಧಿನಾಥಂ ।
ಧರ್ಮಾಸನಸ್ಥಂ ಪ್ರಕೃತಿದ್ವಯಸ್ಥಂ ।
ತೇಜೋನಿಧಿಂ ಬಾಲಶಶಾಂಕಮೌಲಿಂ ।
ಕಾಲೇಂಧನಂ ವಹ್ನಿರವೀಂದುನೇತ್ರಂ ॥ ೧೫ ॥

---

೧೩. ಪರಮೇಶ್ವರನೇ, ನೀನು ಶರಭಾವತಾರ ಮಾಡಿ ಆದಿಶೇಷನನ್ನೇ ಹಾರವನ್ನಾಗಿ ಮಾಡಿಕೊಂಡವನಲ್ಲವೇ ? ಚಂಚಲನಾದ ತೋಳುಬಳೆಗಳಿಂದಲೂ, ಸಮಸ್ತ ದೇವತೆಗಳ ಕಿರೀಟದ ರತ್ನಗಳಿಂದ ಅಲಂಕೃತವಾದ ಪಾದಪದ್ಮಗಳಿಂದಲೂ, ವ್ಯಾಘ್ರಾಜಿನದಿಂದಲೂ ಶೋಭಿಸುತ್ತಿರುವ ಪರಮಾತ್ಮನೇ, ನಿನಗೆ ವಂದನೆಯು.

೧೪. ಸ್ವಾಮಿಯೇ, ಸತ್ಪುರುಷರು ನಿನ್ನನ್ನು ನಾಶರಹಿತನೆಂದೂ, ನಿರ್ಗುಣ ಸ್ವರೂಪನೆಂದೂ, ಪ್ರಮಾಣಾತೀತನೆಂದೂ, ಜ್ಯೋತಿಸ್ವರೂಪನೆಂದೂ ಹೇಳುವರು. ಅಂತೂ ಸಮಸ್ತವೇದಶಾಸ್ತ್ರಾದಿಗಳಿಗೆ ದೂರನಾಗಿ ಅನಂತ ಮೂರ್ತ್ಯಾತ್ಮಕನಾದ ಪರಮ ಪವಿತ್ರನಾದ ನಿನಗೆ ನಮಸ್ಕಾರವು.

೧೫. ಪ್ರಮಥಾಧಿಪತಿಯಾಗಿಯೂ, ಧರ್ಮಪೀಠಾಂತರ್ಗತನಾಗಿಯೂ, ಪ್ರಕೃತಿಮಧ್ಯವರ್ತಿಯಾಗಿಯೂ, ತೇಜೋನಿಧಿಯಾಗಿಯೂ, ಬಾಲಚಂದ್ರಧರ ನಾಗಿಯೂ, ಕಾಲಕಾಲನಾಗಿಯೂ ಇದ್ದು, ಸೂರ್ಯಚಂದ್ರಾದಿಗಳನ್ನೇ ಕಣ್ಣುಗಳನ್ನಾಗಿ ಮಾಡಿಕೊಂಡಿರುವ ಪರಾಪರವಸ್ತುವೇ ನಿನಗೆ ವಂದನೆಯು.

॥ ಸೂತ ಉವಾಚ ॥

ಪ್ರಸನ್ನೋಽಥಾಬ್ರವೀದ್ದೇವೀಂ ಕಾಲೀಂ ತ್ರಿಪುರಹಾ ಹರಃ ।
ವರಯಸ್ವ ವರಂ ದೇವಿ ದದಾಮಿ ತವ ಸುವ್ರತೇ ॥ ೧೬ ॥

॥ ದೇವ್ಯುವಾಚ ॥

ಜೀವತ್ವಯಂ ಮಹಾದೇವ ಕಾಮೋ ಲೋಕಪ್ರತಾಪನಃ ।
ವಿನಾ ಕಾಮೇನ ಭಗವನ್ ನಾಹಂ ಯಾಚೇ ಕಥಂಚನ ॥ ೧೭ ॥

॥ ಈಶ್ವರ ಉವಾಚ ॥

ಭವತ್ವನಂಗೋ ಮದನಸ್ತ್ವತ್ಪ್ರಿಯಾರ್ಥಂ ಸುಲೋಚನೇ ।
ತೇನ ರೂಪೇಣ ಲೋಕಸ್ಯ ಕ್ಷೋಭಣಾಯ ಭವತ್ವಲಂ ॥ ೧೮ ॥

ತತೋತ್ಥಿತೋ ವಾಯುರಿವಾಪ್ರಮೇಯ ।
ಸ್ತ್ವನಂಗರೂಪೋ ಮಕರಧ್ವಜಶ್ಚ ।
ಹರಸ್ಯ ವಾಕ್ಯಾದುಮಯೇರಿತಶ್ಚ ।
ಸ ಚಾಪಬಾಣಸ್ಸರತಿರ್ಬಭೂವ ॥ ೧೯ ॥

---

೧೬. ಇಷ್ಟು ಭಕ್ತಿಯಿಂದ ಪ್ರಾರ್ಥನೆಮಾಡಿದ ಗಿರಿಜೆಯನ್ನು ಪರಮೇಶ್ವರನು ನೋಡಿ, ಅವಳ ಭಕ್ತಿಗೆ ಮೆಚ್ಚಿ ಬೇಕಾದ ವರಗಳನ್ನು ಕೇಳಿಕೊಳ್ಳುವಂತೆ ಅನುಗ್ರಹಿಸಿದನು.

೧೭. ಆಗ ದೇವಿಯು "ಸ್ವಾಮಿಯೇ, ಲೋಕವನ್ನೇ ಮೋಹಗೊಳಿಸಿ ಸುಖವನ್ನುಂಟು ಮಾಡುವವನು ಈ ಮನ್ಮಥನು. ಇವನು ಪುನಃ ಬದುಕುವವರೆಗೂ ನಾನು ಯಾವವರಗಳನ್ನೂ ಕೇಳಲಾರೆನು" ಎಂದು ನುಡಿದಳು.

೧೮. ಅದನ್ನು ಕೇಳಿದ ಪರಶಿವನು ದಯೆಯಿಂದ ಪಾರ್ವತಿಯೊಡನೆ "ಎಲೈ ಸುಲೋಚನೆಯೇ, ನಿನ್ನ ಇಷ್ಟದಂತೆ ಮನ್ಮಥನು ಲೋಕವನ್ನು ಮೋಹಗೊಳಿಸಲು ಕಾಮರೂಪದಿಂದ ಅನಂತನಾಗಿ ಜೀವಿಸಿಕೊಂಡಿರಲಿ" ಎಂದು ವರವಿತ್ತನು.

೧೯. ಈಶ್ವರನು ಹಾಗೆಂದೊಡನೆಯೇ ಮನ್ಮಥನು ಅನಂತರೂಪದಿಂದ ವಾಯುವಿನಂತೆ ಎದ್ದು ನಿಂತನು. ಹರನ ಅನುಗ್ರಹದಿಂದಲೂ, ಪಾರ್ವತಿಯ ಕರುಣೆಯಿಂದಲೂ ಕಾಮನು ಬಿಲ್ಲುಬಾಣಗಳಿಂದಕೂಡಿ ರತಿಯೊಡನೆ ನಿಂತುಕೊಂಡನು.

ಇತಿ ಪ್ರೀತ್ಯಾ ಮಹೇಶಾನೋ ವರಂ ದತ್ವಾ ಹರಃ ಸ್ವಯಂ ।
ಸ್ಮರಸ್ಯ ಪಂಚಬಾಣಸ್ಯ ತತ್ರೈವಾಂತರಧೀಯತ ॥ ೨೦ ॥

ಯಃ ಪಠೇದಿಮಮಧ್ಯಾಯಂ ಭಕ್ತ್ಯಾ ದೇವಸ್ಯ ಸನ್ನಿಧೌ ।
ಸರ್ವಪಾಪವಿನಿರ್ಮುಕ್ತೋ ಬ್ರಹ್ಮಲೋಕೇ ಮಹೀಯತೇ ॥ ೨೧ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಮಹಾದೇವವರಪ್ರದಾನಂ ನಾಮ
ಚತುಷ್ಪಂಚಾಶೋಽಧ್ಯಾಯಃ.

---

೨೦. ಹೀಗೆ ಮಹೇಶ್ವರನು ಪ್ರೀತಿಯಿಂದ, ಭಸ್ಮರಾಶಿಯಾಗಿದ್ದ ಸ್ಮರನನ್ನು ಬದುಕಿಸಿ ತಾನು ಮಾಯವಾದನು.

೨೧. ಈ ಅಧ್ಯಾಯವನ್ನು ಯಾರು ಭಕ್ತಿಯಿಂದ ಶಿವಸನ್ನಿಧಿಯಲ್ಲಿ ಪಠಿಸುವರೋ, ಅವರು ಸರ್ವಪಾಪಮುಕ್ತರಾಗಿ ಬ್ರಹ್ಮಸಾಯುಜ್ಯವನ್ನು ಹೊಂದುವರು.

ಹೀಗೆ ಬ್ರಹ್ಮಪುರಾಣೋಪಪುರಾಣವಾದ ಸೌರದಲ್ಲಿ ಸೂತ ಶೌನಕ ಸಂವಾದ
ರೂಪವಾಗಿ ಮಹಾದೇವನು ಮನ್ಮಥನಿಗೆ ವರಪ್ರದಾನ ಮಾಡಿದ
ಐವತ್ತುನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಪಂಚಪಂಚಾಶೋಽಧ್ಯಾಯಃ

॥ ಸೂತ ಉವಾಚ ॥

ಶಂಕರಾಚ್ಚ ವರಂ ಲಬ್ಧ್ವಾ ದೇವೀ ತ್ರೈಲೋಕ್ಯಪೂಜಿತಾ ।
ಉಮಾ ಭಗವತೀ ಕಾಳೀ ಸಂಪ್ರಾಪ್ತಾ ಪಿತೃಮಂದಿರಂ ॥ ೧ ॥

ಅಪಶ್ಯದ್ಗಿರಿರಾಜಸ್ತಾಂ ಚಂದ್ರಕಾಂತಿನಿಭಾನನಾಂ ।
ದೀಪಯಂತೀಂ ಜಗತ್ಸರ್ವಂ ವಿದ್ಯುತ್ಪುಂಜಸಮಪ್ರಭಾಂ ॥ ೨ ॥

ಅಂಕೇ ಕಾಳೀಂ ಸಮಾಧಾಯ ಶಿರಸ್ಯಾಘ್ರಾಯ ಚ ದ್ವಿಜಾಃ ।
ಉವಾಚ ಪರಯಾ ಪ್ರೀತ್ಯಾ ವಿಶ್ವೇಶೀಂ ಪರ್ವತೇಶ್ವರಃ ॥ ೩ ॥

ಐವತ್ತೈದನೆಯ ಅಧ್ಯಾಯ.

೧. ಪಾರ್ವತಿಯು ಹಾಗೆ ಪರಮೇಶ್ವರನ ಅನುಗ್ರಹವನ್ನು ಪಡೆದು ತ್ರಿಲೋಕ ಮಾನ್ಯಳಾಗಿ ತನ್ನ ತಂದೆಯ ಮನೆಗೆ ಹಿಂದಿರುಗಿದಳು.

೨. ಆಗ ದೇವಿಯು ಚಂದ್ರನಂತೆ ಕಾಂತಿಯುಳ್ಳ ಮುಖದಿಂದಲೂ, ಮಿಂಚಿನಂತೆ ಹೊಳೆಯುವ ದೇಹದಿಂದಲೂ, ಜಗತ್ತನ್ನೇ ಪ್ರಕಾಶಗೊಳಿಸುವಂತಿದ್ದಳು. ಅಂತಹ ಮಗಳನ್ನು ಗಿರಿರಾಜನು ನೋಡಿ,

೩. ಒಡನೆಯೇ ತೊಡೆಯಮೇಲೆ ಕುಳ್ಳಿರಿಸಿಕೊಂಡು, ಶಿರಸ್ಸನ್ನು ಆಘ್ರಾಣಿಸಿ, ಲೋಕಪೂಜ್ಯಳಾದ ಪಾರ್ವತಿಯೊಡನೆ ಹೀಗೆ ಮಾತನಾಡಿದನು.

॥ ಹಿಮಾಲಯ ಉವಾಚ ॥

ತಪಸಾ ತೋಷಿತಶ್ಶಂಭುರಮೇಯಾತ್ಮಾ ಸನಾತನಃ ।
ಕೀದೃಶಶ್ಚ ವರೋ ಲಬ್ಧಸ್ತ್ವಯಾ ದೇವಾನ್ಮಹೇಶ್ವರಾತ್ ॥ ೪ ॥

॥ ದೇವ್ಯುವಾಚ ॥

ತಪಸಾರಾಧ್ಯ ವಿಶ್ವೇಶಂ ಗೋಪತಿಂ ಶೂಲಪಾಣಿನಂ ।
ತಮೇವೇಶಂ ಪತಿಂ ಲಬ್ಧ್ವಾ ಕೃತಾರ್ಥಾಸ್ಮೀತಿ ಮೇ ವರಃ ॥ ೫ ॥

ಭೇದೋಸ್ತಿ ತತ್ತ್ವತೋ ರಾಜನ್ನ ಮೇ ದೇವಾನ್ಮಹೇಶ್ವರಾತ್ ।
ಸಿದ್ಧಮೇವಾವಯೋರೈಕ್ಯಂ ವೇದಾಂತಾರ್ಥವಿಚಾರಣಾತ್ ॥ ೬ ॥

ಯದೇತದೈಶ್ವರಂ ತೇಜಸ್ತನ್ಮಾಂ ವಿದ್ಧಿ ನಗೇಶ್ವರ ।
ಸರ್ವಭೂತಾತ್ಮಕಂ ಶಾಂತಂ ವಿಶ್ವಂ ಯತ್ರ ಪ್ರತಿಷ್ಠಿತಂ ॥ ೭ ॥

---

೪. "ಎಲೈ ಮಗಳೇ, ನೀನು ನಿನ್ನ ತಪಸ್ಸಿನಿಂದ ಸನಾತನನಾದ ಪರಮೇಶ್ವರನನ್ನು ಮೆಚ್ಚಿಸಿ ಏನು ವರವನ್ನು ಪಡೆದೆ" ಎಂದನು.

೫. ದೇವಿಯು ತಂದೆಯನ್ನು ಕುರಿತು 'ಜನಕನೇ, ನಾನು ಲೋಕನಾಥನೂ, ಶೂಲಪಾಣಿಯೂ ಆದ ಶಂಕರನನ್ನು ತಪಸ್ಸಿನಿಂದ ಮೆಚ್ಚಿಸಿ, ಆತನನ್ನೇ ಪತಿಯನ್ನಾಗಿ ಮಾಡಿಕೊಂಡು ಧನ್ಯಳಾಗಿರುವೆನು. ಇದೇ ನಾನು ಪಡೆದ ವರ.

೬. ನೋಡುವವರಿಗೆ ನಾನೂ ಈಶ್ವರನೂ ಬೇರೆಯೆಂದು ಕಾಣುವುದು. ತತ್ತ್ವವಿಚಾರಮಾಡಿ, ವೇದಾಂತಗಳ ಅರ್ಥವಿಮರ್ಶೆಯಿಂದ ನೋಡಿದರೆ ನಾವಿಬ್ಬರೂ ಒಂದೇ. ಇದನ್ನು ಅನ್ಯಥಾ ತಿಳಿಯಬೇಡ.

೭. ಸರ್ವಭೂತಾಂತರ್ವರ್ತಿಯೂ, ಶಾಂತವೂ ಆದ ಈಶ್ವರನ ತೇಜಸ್ಸೇ ನಾನು ಎಂಬುದನ್ನು ಮರೆಯಬೇಡ.

ಅಹಂ ಸರ್ವಾನ್ತರಾ ಶಕ್ತಿರ್ಮಾಯಯಾ ಮಾಯೀ ಮಹೇಶ್ವರಃ ।
ಅಹಮೇಕಾ ಪರಾಶಕ್ತಿರೇಕ ಏವ ಮಹೇಶ್ವರಃ ॥ ೮ ॥

ನಾವಯೋ ರ್ಭಿದ್ಯತೇ ರಾಜನ್ ಭೇದೋ ವೈ ಪರಮಾರ್ಥತಃ ।
ಏಕಾಹಂ ವಿಶ್ವಗಾನಂತಾ ವಿಶ್ವರೂಪಾ ಸನಾತನೀ ॥ ೯ ॥

ಪಿನಾಕಪಾಣೇರ್ದಯಿತಾ ನಿತ್ಯಾ ಗಿರಿವರೋತ್ತಮ ।
ಜ್ಞಾತುಂ ನ ಶಕ್ತಾ ಬ್ರಹ್ಮಾದ್ಯಾ ಮತ್ಸ್ವರೂಪಂ ಹಿ ತತ್ತ್ವತಃ ॥ ೧೦ ॥

ಇಚ್ಛಾಶಕ್ತಿರಹಂ ರಾಜನ್ ಜ್ಞಾನಶಕ್ತಿರಹಂ ಪುನಃ ।
ಕ್ರಿಯಾಶಕ್ತಿಃ ಪ್ರಾಣಶಕ್ತಿಃ ಶಕ್ತಿಮಾನ್ ಭಗನೇತ್ರಹಾ ॥ ೧೧ ॥

ಕೂಟಸ್ಥಮಚಲಂ ಸೂಕ್ಷ್ಮಂ ಸತ್ಯಂ ನಿರ್ಗುಣಮವ್ಯಯಂ ।
ಆನಂದಮಕ್ಷರಂ ಬ್ರಹ್ಮ ತಾತ ಜಾನೀಹಿ ಮತ್ಪದಂ ॥ ೧೨ ॥

---

೮. ನಾನು ಸರ್ವವಸ್ತುಗಳಲ್ಲಿ ಅಡಗಿರುವ ಮಾಯಾಶಕ್ತಿಯು. ಮಾಯಾ ವಿಶಿಷ್ಟನಾದವನೇ ಮಹೇಶ್ವರನು. ನಾನು ಕೇವಲ ಮಾಯಾಸ್ವರೂಪಳೇ ಹೊರತು ಈಶ್ವರನಿಗಿಂತ ಬೇರೆಯಾದವಳಲ್ಲ.

೯. ಎಲೈ ಪರ್ವತರಾಜನೇ, ಈ ನಿಮ್ಮಿಬ್ಬರನ್ನು ಬಿಟ್ಟು ಜಗತ್ತು ಬೇರೆಯಿಲ್ಲ. ಭೇದತೋರುವುದಾದರೂ ಅದು ಪರಮಾರ್ಥವಲ್ಲ. ಅಂತೂ ವಿಶ್ವಾಂತರ್ವರ್ತಿಯೂ ವಿಶ್ವವ್ಯಾಪಕವೂ ಆದ ನಿಜವಾದ ಶಕ್ತಿಯೇ ನಾನು. ಈ ಶಕ್ತಿಯು ಸನಾತನವಾದುದು.

೧೦. ನಾನು ಈಗ ಪರಮೇಶ್ವರನ ಪತ್ನಿಯಾಗಿದ್ದೇನೆ. ಎಲೈ ನಗರಾಜನೇ, ನನ್ನ ಸ್ವರೂಪವನ್ನು ಬ್ರಹ್ಮಾದಿಗಳೂ ಕೂಡ ತಾತ್ತ್ವಿಕವಾಗಿ ಅರಿಯಲಾರರು.

೧೧. ಎಲೈ ಪರ್ವತರಾಜನೇ, ಚತುರ್ವಿಧಗಳಾದ ಶಿವಶಕ್ತಿಗಳಲ್ಲಿ ಇಚ್ಛಾಶಕ್ತಿ, ಜ್ಞಾನಶಕ್ತಿ ಇವೆರಡೂ ನಾನೇ ಆಗಿರುವೆ. ಪರಶಿವನು ಕ್ರಿಯಾಶಕ್ತಿ, ಪ್ರಾಣಶಕ್ತಿ ಎಂಬ ಎರಡು ಶಕ್ತಿಗಳಿಂದ ಕೂಡಿರುವನು.

೧೨. ನನ್ನ ಸ್ಥಾನವಾದರೋ, ಪ್ರಣವಗಳಿಗೆ ಮುಖ್ಯಾಶ್ರಯವಾದ ಬ್ರಹ್ಮರಂಧ್ರಸ್ಥಾನವು. ಚಲವಿಲ್ಲದ್ದು. ಅತ್ಯಂತಸೂಕ್ಷ್ಮವಾದದ್ದು. ಸತ್ಯವೂ, ನಿರ್ಗುಣವೂ, ನಾಶರಹಿತವೂ, ಆನಂದದಾಯಕವೂ, ಬ್ರಹ್ಮಸಾಕ್ಷಾತ್ಕಾರ ಯೋಗ್ಯವೂ ಆಗಿದೆ ಎಂದು, ತಿಳಿ.

ತತ್ಪದಂ ತೇ ಪ್ರಪಶ್ಯಂತಿ ಯೇಷಾಂ ಭಕ್ತಿರ್ಮಯಿ ಸ್ಥಿರಾ ।
ನಾನ್ಯಥಾ ಕರ್ಮಕಾಂಡೈಶ್ಚ ತಪೋಭಿಶ್ಚೈವ ದುಷ್ಕರೈಃ ॥ ೧೩ ॥

ಶಿವಸ್ಯ ಪರಮಾ ಶಕ್ತಿರ್ನಿತ್ಯಾನಂದಮಯೀ ಹ್ಯಹಂ ।
ಬ್ರಹ್ಮಣೋ ವಚನಾದ್ರಾಜನ್ ಅಭವಂ ದಕ್ಷಕನ್ಯಕಾ ॥ ೧೪ ॥

ಶೂಲಿನೋ ದೇವದೇವಸ್ಯ ನಿಂದಕಂ ಪರಮೇಷ್ಠಿನಃ ।
ವಿನಿಂದ್ಯ ಪಿತರಂ ದಕ್ಷಂ ಜಾತಾಸ್ಮಿ ತವ ಕನ್ಯಕಾ ॥ ೧೫ ॥

ಸ್ವೇಚ್ಛಯೈವಾವತಾರೋ ಮೇ ನೈವ ಚಾನ್ಯವಶಾತ್ಪಿತಃ ।
ತಸ್ಮಾನ್ಮಾಂ ಪರಮಾಂ ಶಕ್ತಿಮಿತಿ ಜ್ಞಾತ್ವಾ ಸುಖೀಭವ ॥ ೧೬ ॥

ನಾಶಯಾಮಿ ತವಾಜ್ಞಾನಂ ಭವಬಂಧನಕಾರಣಂ ।
ದಿವ್ಯಂ ದದಾಮಿ ತೇ ಜ್ಞಾನಂ ದುಃಖತ್ರಯವಿನಾಶಕೃತ್ ॥ ೧೭ ॥

---

೧೩. ಯಾರು ನನ್ನಲ್ಲಿ ಅತಿಶಯವಾದ ಭಕ್ತಿಯನ್ನಿಟ್ಟಿರುವರೋ ಅವರು ಸುಲಭವಾಗಿ ನನ್ನ ಸ್ಥಾನವನ್ನು ಹೊಂದುವರು. ಭಕ್ತಿಯಿಲ್ಲದೆ ಮಾಡಿದ ಸಕಲ ಕರ್ಮಗಳೂ, ತಪಸ್ಸುಗಳೂ ನನ್ನ ಸ್ಥಾನವನ್ನು ಕೊಡಲಾರವು.

೧೪. ನಾನು ನಿತ್ಯಾನಂದ ಸ್ವರೂಪಿಣಿಯಾದ ಶಿವಶಕ್ತಿಯು. ನನಗೆ ಉತ್ಪತ್ತಿ ವಿನಾಶಗಳಿಲ್ಲ. ಆದರೂ ಬ್ರಹ್ಮನ ಅಪ್ಪಣೆಯಂತೆ ನಾನು ದಕ್ಷಬ್ರಹ್ಮನ ಪುತ್ರಿಯಾದೆನು.

೧೫. ಶಿವದ್ವೇಷಿಯಾದ ಆ ದಕ್ಷಬ್ರಹ್ಮನನ್ನು ನಾನು ತಿರಸ್ಕರಿಸಿ, ಈಗ ನಿನ್ನ ಪುತ್ರಿಯಾಗಿ ಜನಿಸಿರುವೆನು.

೧೬. ತಂದೆಯೇ, ನನ್ನ ಅವತಾರವು ನನ್ನ ಇಷ್ಟದಂತೆ ನಡೆಯುವುದೇ ಹೊರತು, ಮತ್ತೊಬ್ಬನಿಗೆ ಅಧೀನವಾಗಿಲ್ಲ. ಇದರಿಂದಲೇ ನೀನು ನನ್ನ ಅತಿಶಯವಾದ ಶಕ್ತಿಯನ್ನು ಊಹಿಸಬಹುದು. ಅದರಿಂದ ನಿನಗೆ ಕ್ಷೇಮವುಂಟಾಗುವುದು.

೧೭. ಪರ್ವತಶ್ರೇಷ್ಠನೇ, ಈಗ ನಿನ್ನ, ಅಜ್ಞಾನವು ನಾಶವಾಗಿ ಭವಬಂಧನಗಳನ್ನೆಲ್ಲಾ ದೂರೀಕರಿಸುವ ದಿವ್ಯಜ್ಞಾನವನ್ನು ಉಪದೇಶಿಸುವೆನು. ಇದರಿಂದ ನಿನ್ನ ತಾಪತ್ರಯಗಳು ನಿವೃತ್ತಿಯಾಗುವುವು.

ಏವಂ ದೇವ್ಯಾಃ ಪ್ರಸಾದೇನ ಹಿಮವಾನ್ ಪರ್ವತೇಶ್ವರಃ ।
ಲಬ್ಧ್ವಾ ಮಾಹೇಶ್ವರಂ ಜ್ಞಾನಂ ಜೀವನ್ಮುಕ್ತಸ್ತದಾಭವತ್ ॥ ೧೮ ॥

ಅಪಶ್ಯದಖಿಲಂ ವಿಶ್ವಮುಮಾಮಹೇಶ್ವರಾತ್ಮಕಂ ।
ನಿತ್ಯಾನಂದಂ ನಿರ್ವಿಭಾಗಮಾತ್ಮಾನಂ ಚ ತದಾತ್ಮಕಂ ॥ ೧೯ ॥

ಮಾನಮೇಯಾದಿರಹಿತಂ ಭೇದಾಭೇದವಿವರ್ಜಿತಂ ।
ಬಾಹ್ಯಾಭ್ಯಂತರನಿರ್ಮುಕ್ತಂ ಶುದ್ಧಂ ನಿರ್ಗುಣಮವ್ಯಯಂ ॥ ೨೦ ॥

ನ ಸಮೀಪಂ ನ ದೂರಸ್ಥಂ ನ ಸ್ಥೂಲಂ ನಾಪಿ ವಾ ಕೃಶಂ ।
ನ ದೀರ್ಘಂ ನಾಪಿ ವಾ ಹ್ರಸ್ವಂ ನ ಪೀತಂ ನಾಪಿ ಲೋಹಿತಂ ॥ ೨೧ ॥

ನ ನೀಲಂ ನ ಚ ಕೃಷ್ಣಂ ಚ ನ ಶುಕ್ಲಂ ನಾಪಿ ಕರ್ಬುರಂ ।
ಪಾಣಿಪಾದವಿನಿರ್ಮುಕ್ತಂ ನ ಶ್ರೋತ್ರಂ ನ ಚ ಚಾಕ್ಷುಷಂ ॥ ೨೨ ॥

---

೧೮. ಹೀಗೆ ದೇವಿಯು ಪರ್ವತರಾಜನಿಗೆ ಜ್ಞಾನೋಪದೇಶಮಾಡಿದ ಮೇಲೆ ನಗರಾಜನು ಮಹೇಶ್ವರನ ದಿವ್ಯಮಹಿಮೆಯನ್ನು ತಿಳಿದವನಾಗಿ ಜೀವನ್ಮುಕ್ತನಾದನು.

೧೯. ಆಗ ಪರ್ವತರಾಜನು ಈ ಜಗತ್ತೆಲ್ಲವೂ ಪಾರ್ವತೀ ಪರಮೇಶ್ವರರ ಶಕ್ತಿಯಿಂದಾವೃತವಾಗಿದೆ. ಶಿವಶಕ್ತಿಯು, ಆನಂದಮಯವಾದದ್ದು. ಅದಕ್ಕೆ ಯಾವ ವಿಭಾಗಾದಿ ತಾರತಮ್ಯಗಳೂ ಇಲ್ಲ.

೨೦. ಶಿವಶಕ್ತಿಗೆ ಅಳತೆ ಪ್ರಮಾಣಗಳಿಲ್ಲ. ಯಾವತರದ ವ್ಯತ್ಯಾಸವೂ ಅಲ್ಲಿಲ್ಲ ಬಾಹ್ಯಾಭ್ಯಂತರವೆಂಬ ಸ್ಥಳನಿರ್ದೇಶಗಳಲ್ಲಿ ಶುದ್ಧವಾಗಿ ನಿರ್ಗುಣವಾಗಿ, ನಾಶರಹಿತವಾಗಿರತಕ್ಕದ್ದು.

೨೧-೨೨. ಪರಶಿವನ ಆದಿಶಕ್ತಿಗೆ ಹತ್ತಿರ ದೂರಗಳೆಂಬ ಸ್ಥಳವಿವೇಚನೆ ಇಲ್ಲ. ಅದು ಸ್ಥೂಲವೂ ಅಲ್ಲ. ಸೂಕ್ಷ್ಮವೂ ಅಲ್ಲ. ಹ್ರಸ್ವ ದೀರ್ಘಗಳೆಂಬ ಅಳತೆಯಿಲ್ಲ. ಹಳದಿ ಕೆಂಪುಗಳೆಂಬ ಬಣ್ಣವಿಲ್ಲ. ನೀಲಿ, ಕಪ್ಪು, ಬಿಳುಪು, ಮಿಶ್ರವೆಂಬ ಬಣ್ಣಗಳ ಸಂಪರ್ಕವೇ ಇಲ್ಲ. ಆ ಶಕ್ತಿಗೆ ಕೈಕಾಲುಗಳಾಗಲಿ, ಕಿವಿಕಣ್ಣುಗಳಾಗಲಿ ತೋರುವುದಿಲ್ಲ.

ಅನಾಸಿಕಮಜಿಹ್ವಂ ಚ ಮನೋಬುದ್ಧಿವಿವರ್ಜಿತಂ ।
ಬಂಧಮೋಕ್ಷವಿನಿರ್ಮುಕ್ತಂ ಬೋಧಾಬೋಧವಿವರ್ಜಿತಂ ॥ ೨೩ ॥

ನಾಧಾರಸ್ಥಂ ನ ನಾಭಿಸ್ಥಂ ನ ಹೃದಿಸ್ಥಂ ನ ಕಂಠಗಂ ।
ನಾಹಿ ನಾಸಾಗ್ರಗಂ ವಿಪ್ರಾ ನ ಭ್ರೂಮಧ್ಯಗತಂ ಹಿ ತತ್ ॥ ೨೪ ॥

ನ ನಾಡೀತ್ರಯಮಧ್ಯಸ್ಥಂ ದ್ವಾದಶಾಂತಗತಂ ನ ಚ ।
ನೋರ್ಣಾತಂತುನಿಭಂ ತತ್ತು ವಿದ್ಯುತ್ಪುಂಜನಿಭಂ ನ ಚ ॥ ೨೫ ॥

ಸರ್ವೋಪಾಧಿವಿನಿರ್ಮುಕ್ತಂ ಚೈತನ್ಯಂ ಸರ್ವಗಂ ಶಿವಂ ।
ತದೇವೇದಮಿದಂ ವಿಶ್ವಂ ತಸ್ಮಾದನ್ಯನ್ನ ವಿದ್ಯತೇ ॥ ೨೬ ॥

---

೨೩. ಆತ್ಮಸ್ವರೂಪಿಯಾದ ಶಿವನಿಗೆ ಮೂಗು, ನಾಲಿಗೆ, ಮನಸ್ಸು, ಬುದ್ಧಿ, ಇವೇ ಮೊದಲಾದ ಇಂದ್ರಿಯಗಳು ತೋರುತ್ತಿಲ್ಲ. ಬಂಧವಾಗಲಿ, ಮೋಕ್ಷವಾಗಲಿ, ಜ್ಞಾನ ಅಜ್ಞಾನಗಳಾಗಲಿ ಯಾವುವೂ ಆ ಪರಾಪರವಸ್ತುವಿನಲ್ಲಿ ಸಂಬಂಧಿಸುವುದಿಲ್ಲ.

೨೪. ಆ ಆತ್ಮನು, ಹೃದಯದಲ್ಲಾಗಲಿ, ನಾಭಿಯಲ್ಲಾಗಲಿ, ಬ್ರಹ್ಮರಂಧ್ರ, ಕತ್ತು, ಮೂಗು, ಹುಬ್ಬು ಇವೇ ಮೊದಲಾದ ಯಾವ ಅವಯವಗಳಲ್ಲಾಗಲಿ ಇದ್ದಾನೆಂದು ಹೇಳಲು ಸಾಧ್ಯವಿಲ್ಲ.

೨೫. ವಾತಪಿತ್ತಕಫಗಳೆಂಬ ಯಾವ ನಾಡಿಗಳಲ್ಲೂ, ದ್ವಾದಶಾಂತವೆಂಬ ಮೂರ್ಧಸ್ಥಾನದಲ್ಲೂ ಪರಮಾತ್ಮನು ವಾಸಿಸುವುದಿಲ್ಲ. ಉಣ್ಣೆಯದಾರದಂತೆ ಮಂಕಾಗಿಯೂ ಇಲ್ಲ. ಮಿಂಚಿನ ರಾಶಿಯಂತೆ ಪ್ರಕಾಶಮಾನವಾಗಿಯೂ ಇಲ್ಲ.

೨೬. ಸಮಸ್ತ ಉಪಾಧಿಗಳಿಂದ ಬಿಡಲ್ಪಟ್ಟವನಾಗಿ, ಚೈತನ್ಯರೂಪಿಯಾಗಿ, ಸರ್ವತ್ರವ್ಯಾಪ್ತನಾಗಿರುವವನೇ ಶಿವನು. ಅವನೇ ಆತ್ಮನು. ಆ ಆತ್ಮರೂಪಿಯೇ ಈ ಜಗತ್ತು ಆತ್ಮಭಿನ್ನವಾದ ಪದಾರ್ಥವೊಂದೂ ಇಲ್ಲ.

ಆಸ್ಥಾಯ ಪರಮಾಂ ಭಕ್ತಿಂ ಶಿವಯೋಃ ಪಾದಪಂಕಜೇ ।
ಪಿತ್ರೋರ್ಹಿರಣ್ಯಗರ್ಭಸ್ಯ ಶಾಙ್ಗಿಣಶ್ಚಾಪಿ ಸುವ್ರತ　　॥ ೨೭ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಮಾಹೇಶ್ವರಜ್ಞಾನಕಥನಂ ನಾಮ
ಪಂಚಪಂಚಾಶೋಧ್ಯಾಯಃ

---

೨೭. ಪರಮೇಶ್ವರ ಮತ್ತು ಪಾರ್ವತಿ ಇವರಿಬ್ಬರೂ, ಬ್ರಹ್ಮ, ವಿಷ್ಣು ಮೊದಲಾದ ಸಮಸ್ತರಿಗೂ ಮಾತಾಪಿತೃಸ್ವರೂಪರಾಗಿರುವರು. ಅಂಥ ಜಗತ್ಪಿತೃಗಳಾದ ಆ ಉಮಾ ಮಹೇಶ್ವರರಲ್ಲಿ ಅನನ್ಯ ಸದೃಶವಾದ ಭಕ್ತಿಯನ್ನಿಟ್ಟು ಮುಕ್ತನಾಗು ಎಂದು ದೇವಿಯು ನಗರಾಜನಿಗೆ ಉಪದೇಶಿಸಿದಳು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತ ಶೌನಕ
ಸಂವಾದ ರೂಪವಾಗಿ ಮಹೇಶ್ವರ ಜ್ಞಾನಬೋಧನೆಯನ್ನು
ತಿಳಿಸುವ ಐವತ್ತೈದನೆಯ ಅಧ್ಯಾಯವು ಮುಗಿದುದು.

|| ಶ್ರೀ ||

ಶ್ರೀ ಶಿವಾಯನಮಃ

ಅಥ ಶ್ರೀ ಸೌರಪುರಾಣೇ ಷಟ್ಪಂಚಾಶೋಽಧ್ಯಾಯಃ.

|| ಸೂತ ಉವಾಚ ||

ಆಹ್ವಾನಯತ್ತತೋ ವಿಶ್ವಕರ್ಮಾಣಂ ಪರ್ವತೇಶ್ವರಃ ।
ವಿವಾಹಮಂಡಪಂ ಕರ್ತುಂ ನಾನಾಶ್ಚರ್ಯವಿಭೂಷಿತಂ || ೧ ||

ತೇನಾಹೂತಸ್ತತಶ್ಶೀಘ್ರಂ ವಿಶ್ವಕರ್ಮಾ ಮಹಾಮತಿಃ ।
ಪ್ರಯಯೌ ಹಿಮವತ್ಪಾರ್ಶ್ವಂ ಕುಶಲೋ ವಿಶ್ವಕರ್ಮಣಿ || ೨ ||

ದೃಷ್ಟ್ವಾಽಥ ವಿಶ್ವಕರ್ಮಾಣಂ ಹೃಷ್ಟಃ ಪರ್ವತರಾಟ್ ಸ್ವಯಂ ।
ಸ್ವಾಗತಾಸನಪಾದ್ಯಾರ್ಘ್ಯೈಃ ಸಾದರಸ್ತಮಪೂಜಯತ್ || ೩ ||
ವಿಧಿವತ್ಪೂಜಯಿತ್ವಾ ತು ವಿಶ್ವಕರ್ಮಾಣಮಬ್ರವೀತ್ || ೪ ||

ಐವತ್ತಾರನೆಯ ಅಧ್ಯಾಯ.

೧. ಅನಂತರ ಪರ್ವತರಾಜನು ಮಗಳ ವಿವಾಹಕ್ಕಾಗಿ ಆಶ್ಚರ್ಯವನ್ನುಂಟು ಮಾಡತಕ್ಕ ಮಂಟಪವನ್ನು ನಿರ್ಮಿಸಲು ಶಿಲ್ಪಿವರ್ಯನಾದ ವಿಶ್ವಕರ್ಮನನ್ನು ಕರೆಸಿದನು

೨. ಅವನ ಅಪ್ಪಣೆಯಂತೆ ವಸ್ತುಸೃಷ್ಟಿಕಾರ್ಯದಲ್ಲಿ ನಿಪುಣನಾದ ವಿಶ್ವಕರ್ಮನು ಜಾಗ್ರತೆಯಾಗಿ ಬಂದು ಹಿಮವಂತನ ಪಕ್ಕದಲ್ಲಿ ನಿಂತುಕೊಂಡನು.

೩-೪. ಕುಶಲನಾದ ವಿಶ್ವಕರ್ಮನನ್ನು ನೋಡಿದೊಡನೆಯೇ ಪರ್ವತರಾಜನು, ಅವನನ್ನು ಸ್ವಾಗತಿಸಿ, ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ, ವಿಧಿವತ್ತಾಗಿ ವಿಶ್ವಕರ್ಮನನ್ನು ಪೂಜಿಸಿ, ಹೀಗೆ ಹೇಳಿದನು.

॥ ಪರ್ವತರಾಡುವಾಚ ॥

ವಿಶ್ವಕರ್ಮನ್ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಯತ್ಕಾರಣಾದಿಹಾಹೂತೋ ಮಯಾ ತ್ವಂ ತದ್ಬ್ರವೀಮ್ಯಹಂ ॥ ೫ ॥

ವಿಶ್ವೇಶ್ವರೋ ಮಹಾದೇವೋ ಭಗವಾನ್ನೀಲಲೋಹಿತಃ ।
ಆಗಮಿಷ್ಯತಿ ವಿಶ್ವೇಶೀಂ ಪರಿಣೇತುಂ ಶಿವಃ ಸ್ವಯಂ ॥ ೬ ॥

ಮಂಡಪಸ್ತತ್ರ ಕರ್ತವ್ಯೋ ಯಜ್ಞಾರ್ಥಂ ಹಿ ಹಿರಣ್ಮಯಃ ।
ಯೋಜನಾಯುತವಿಸ್ತೀರ್ಣಮನೇಕಾಶ್ಚರ್ಯಸಂಯುತಂ ॥ ೭ ॥

ದೃಷ್ಟಮಾತ್ರೇಣ ಸರ್ವಸ್ಯ ಪ್ರೀತಿರ್ಭವತಿ ವೈ ಯಥಾ ।
ತಥಾ ತ್ವಂ ಮಂಟಪಂ ಶೀಘ್ರಂ ಕುರು ವಿಶ್ವೇಶ್ವರಪ್ರಿಯಂ ॥ ೮ ॥

ಏವಮುಕ್ತಸ್ತದಾ ತೇನ ಗಿರಿಣಾ ವಿಶ್ವಕರ್ಮಕೃತ್ ।
ವೈವಾಹಂ ಮಂಡಪಂ ಶೀಘ್ರಮಸೃಜದ್ರತ್ನವಿಗ್ರಹಂ ॥ ೯ ॥

---

೫. “ಎಲೈ ಶಿಲ್ಪಶಾಸ್ತ್ರಪಂಡಿತನೂ, ನಿಪುಣನೂ, ಆದ ವಿಶ್ವಕರ್ಮನೇ, ನಿನ್ನನ್ನು ಈಗ ಬರಮಾಡಿದ ಕಾರಣವನ್ನು ಹೇಳುವೆನು ಕೇಳು.

೬. ಈಗ ಲೋಕನಾಯಕನಾದ ಭಗವಾನ್ ನೀಲಲೋಹಿತನು ಲೋಕನಾಯಕಿಯಾದ ಪಾರ್ವತಿಯನ್ನು ವಿವಾಹವಾಗಲು ಇಲ್ಲಿಗೆ ಬರಲಿರುವನು.

೭. ಆ ವಿವಾಹದಲ್ಲಿ ಹವನಹೋಮಾದಿಗಳನ್ನು ನಡೆಸುವುದಕ್ಕಾಗಿ ಹತ್ತು ಸಾವಿರ ಯೋಜನದಗಲವುಳ್ಳ ಸುಂದರವಾದ ಸುವರ್ಣಮಂಟಪವನ್ನು ನಿರ್ಮಾಣ ಮಾಡಬೇಕಾಗಿದೆ.

೮. ನೋಡಿದೊಡನೆಯೇ ಎಲ್ಲರೂ ಮೋಹಗೊಳ್ಳುವಂತೆಯೂ, ಪರಶಿವನಿಗೆ ಇಷ್ಟವಾಗುವಂತೆಯೂ ಒಂದು ಮಂಟಪವನ್ನು ನೀನು ಈಗ ನಿರ್ಮಿಸು.”

೯. ಎಂದು ಹೇಳಿದ ಪರ್ವತರಾಜನ ಮಾತನ್ನು ಪಾಲಿಸಿ, ವಿಶ್ವಕರ್ಮನು ಬಹು ಬೇಗ ಅತ್ಯಂತ ಸುಂದರವಾದ ಮತ್ತು ರತ್ನಮಯವಾದ ಮಂಟಪವನ್ನು ನಿರ್ಮಿಸಿಯೇ ಬಿಟ್ಟನು.

ಸ್ತಂಭೈರ್ಹೇಮಮಯೈಶ್ಚಿತ್ರೈಃ ಮಣಿಭಿಸ್ಸೂರ್ಯಸನ್ನಿಭೈಃ ।
ಇಂದ್ರನೀಲಮಯೈರ್ದಿವ್ಯೈಃ ವೈಡೂರ್ಯೈರ್ವಿದ್ರುಮೈರಪಿ ॥ ೧೦ ॥

ಮೌಕ್ತಿಕೈರ್ವಜ್ರನೀಲೈಶ್ಚ ಚಂದ್ರಕಾಂತಮಯೈರಪಿ ।
ಸ್ಫಟಿಕೈರ್ವಿದ್ರುಮೈಶ್ಚಾಪಿ ಮುಕ್ತಾದಾಮವಿಲಂಬಿತೈಃ ॥ ೧೧ ॥

ಚಾಮರಾಲಂಕೃತೈರುಚ್ಚೈರ್ದರ್ಪಣೈರ್ವಿವಿಧೈರಪಿ ।
ಸೂರ್ಯಬಿಂಬಪ್ರತೀಕಾಶೈಶ್ಚಂದ್ರಬಿಂಬಸಮಪ್ರಭೈಃ ॥ ೧೨ ॥

ಧ್ವಜಮಾಲಾಕುಲಂ ದಿವ್ಯಂ ಪತಾಕಾನೇಕಶೋಭಿತಂ ।
ರತ್ನಜೈಃ ಸಿಂಹಶಾರ್ದೂಲೈರ್ಗಜವರ್ಣೈರ್ನಿರಂತರಂ ॥ ೧೩

ರಚಿತಂ ಮಂಡಪಂ ದಿವ್ಯಂ ಪ್ರಿಯಂ ತ್ರಿಪುರವಿದ್ವಿಷಃ ।
ರುದ್ರಾಣಾಂ ಚ ತಥಾ ರೂಪೈರ್ಗಂಧರ್ವಾಪ್ಸರಸಾಂ ತಥಾ ॥ ೧೪ ॥

---

೧೦. ಆ ಮಂಟಪದಲ್ಲಿರುವ ಕಂಬಗಳೆಲ್ಲವೂ ಚಿನ್ನದಿಂದಲೇ ನಿರ್ಮಿಸಲ್ಪಟ್ಟಿದ್ದುವು. ಅದರಲ್ಲಿ ಸೂರ್ಯನಂತೆ ಹೊಳೆಯುವ ರತ್ನರಾಶಿಯಿಂದಲೂ ಇಂದ್ರನೀಲಮಣಿಗಳಿಂದಲೂ, ವಜ್ರ, ವೈಡೂರ್ಯ, ಹವಳ ಇವೇ ಮೊದಲಾದ ಅಮೂಲ್ಯ ವಸ್ತುಗಳಿಂದಲೂ ಚಿತ್ರವಿಚಿತ್ರವಾದ ಅಲಂಕಾರಗಳನ್ನು ನಿರ್ಮಿಸಲಾಗಿತ್ತು.

೧೧. ಆ ವಿವಾಹ ಮಂಟಪದಲ್ಲಿ ಮುತ್ತು, ವಜ್ರ, ನೀಲ, ಚಂದ್ರಕಾಂತ ಶಿಲೆ, ಸ್ಫಟಿಕ, ಹವಳ, ಮುತ್ತಿನ ಸರಗಳು ಇವುಗಳು ಅಲ್ಲಲ್ಲಿ ಅಲಂಕಾರವಸ್ತುಗಳಾಗಿ ಕಂಗೊಳಿಸುತ್ತಿದ್ದವು.

೧೨. ಸೂರ್ಯಬಿಂಬದಂತೆ ಹೊಳೆಯುವ ಚಾಮರಗಳಿಂದಲೂ, ಚಂದ್ರಬಿಂಬದಂತೆ ಶೋಭಿಸುವ ಕನ್ನಡಿಗಳಿಂದಲೂ ಆ ಮಂಟಪವು ಮಿರುಗುತ್ತಿದ್ದಿತು.

೧೩. ಅಲ್ಲಲ್ಲಿ ಧ್ವಜಗಳು. ಪತಾಕೆಗಳು, ರತ್ನಗಳಿಂದ ನಿರ್ಮಿತವಾದ ಸಿಂಹ, ಹುಲಿ, ಆನೆ ಇವುಗಳ ಪ್ರತಿಬಿಂಬಗಳು, ಇಂತಹ ಅಲಂಕಾರ ವಸ್ತುಗಳಿಂದ ತುಂಬಿ ಆ ಚಪ್ಪರವು ಕಂಗೊಳಿಸುತ್ತಿತ್ತು.

೧೪. ಆ ವಿವಾಹ ಮಂಟಪವು ತ್ರಿಪುರಾರಿಯಾದ ಪರಶಿವನಿಗೂ, ಏಕಾದಶ ರುದ್ರರಿಗೂ, ಗಂಧರ್ವಾಪ್ಸರಸ್ಸುಗಳಿಗೂ ಪ್ರಿಯವಾದದ್ದಾಗಿತ್ತು.

ದೇವೈಶ್ಚೈವ ಮನೋಹಾರ್ಯೈರ್ಮರ್ತ್ಯಜೈಶ್ಚ ತಥಾ ಪರೈಃ ।
ಮಾಲಾಭಿಸ್ತಬಕೈರ್ವಿಪ್ರಾ ರತ್ನಜೈಃ ಕುಸುಮೈರ್ಭೃಶಂ ॥ ೧೫ ॥

ಕ್ವಚಿಚ್ಚಾಮೀಕರೇಣಾಥ ಹೃದ್ಯಾಂ ಭೂಮಿಂ ವಿನಿರ್ಮಮೇ ।
ಕ್ವಚಿತ್ಪದ್ಮದಲಾಕಾರಾಮಿಂದ್ರಾಯುಧಸಮಪ್ರಭಾಂ ॥ ೧೬ ॥

ಕ್ವಚಿನ್ನೀಲೋತ್ಪಲಾಭಾಸಾಂ ನೀಲಜೀಮೂತಸಪ್ರಭಾಂ ।
ಮನಸೈವ ಯಥಾ ಬ್ರಹ್ಮಾ ವಿಶ್ವಮೇತದ್ಧಿ ನಿರ್ಮಮೇ ॥ ೧೭ ॥

ಕ್ವಚಿದ್ಬಂಧೂಕಸಂಕಾಶಾಂ ದೀಪ್ತಾಂ ವಿದ್ರುಮಸನ್ನಿಭಾಂ ।
ಅನೇಕಾಕಾರವಿನ್ಯಾಸೈಸ್ತತೋ ಧಾತ್ರೀಂ ವಿನಿರ್ಮಮೇ ॥ ೧೮ ॥

---

೧೫. ಮನೋಹರವಾದ ದೇವತೆಗಳ ಮತ್ತು ಮನುಷ್ಯರ ಪ್ರತಿಬಿಂಬಗಳಿಂದಲೂ, ಇನ್ನೂ ವಿಧವಿಧವಾದ ಪುಷ್ಪಮಾಲಾಸಮೂಹಗಳಿಂದಲೂ ಆ ಚಪ್ಪರವು ಸುಂದರವಾಗಿತ್ತು.

೧೬-೧೭. ಒಂದುಕಡೆ ಚಿನ್ನದಿಂದ ತುಂಬಿ ಹೊಳೆಯುತ್ತಿರುವ ಭೂಮಿಯನ್ನು ನಿರ್ಮಿಸಿದನು. ಮತ್ತೊಂದು ಕಡೆ ಪದ್ಮದ ಎಸಳಿನಲ್ಲಿ ಕಾಮನ ಬಿಲ್ಲಿನ ಬಣ್ಣಗಳನ್ನು ತೋರಿಸಿ, ಕಮಲದ ಆಕಾರದ ಜಗುಲಿಯನ್ನು ಸೃಷ್ಟಿಸಿದನು. ನೀಲಿಯಮೇಘದ ಬಣ್ಣವುಳ್ಳ ನೀಲೋತ್ಪಲಾಕಾರದ ಪ್ರದೇಶವನ್ನು ಮಗುದೊಂದು ಕಡೆ ಮಾಡಿಸಿದನು. ಅಂತೂ ಬ್ರಹ್ಮನು ತನ್ನ ಮನಸ್ಸಿಗೆ ತೋರಿದಂತೆ ಹೇಗೆ ನಾನಾರೀತಿಯಲ್ಲಿ ಪ್ರಾಣಿಗಳನ್ನು ಸೃಷ್ಟಿಸುವನೋ, ವಿಶ್ವಕರ್ಮನೂ ಹಾಗೆಯೇ ಆ ಚಪ್ಪರವನ್ನು ಅನೇಕ ಮಾದರಿಗಳಲ್ಲಿ ನಿರ್ಮಾಣಮಾಡಿದನು.

೧೮. ಒಂದು ಭಾಗವು ದಾಸವಾಳದ ಹೂವಿನಂತೆ, ಹವಳದ ಬಣ್ಣದಂತೆ, ಹೊಳೆಯುತ್ತಿತ್ತು. ಹೀಗೆ ಅನೇಕವಾದ ಆಕಾರಗಳಿಂದ ಭೂಮಿಯನ್ನೇ ಅನೇಕ ರೀತಿಯಲ್ಲಿ ವಿನ್ಯಾಸಮಾಡಿದನು.

ಕ್ವಚಿತ್ಕಲಶವಿನ್ಯಾಸೈಃ ಕ್ವಚಿತ್ಸ್ವಸ್ತಿಕಭೂಷಣೈಃ ।
ಹರಿಚಂದನಗಂಧಾಢ್ಯೈಃ ಕರ್ಪೂರೋದ್ಗಾರಗಂಧಿಭಿಃ ॥ ೧೯ ॥

ಜಾತೀಪಾಟಲಪದ್ಮಾನಾಂ ಚಂಪಕಾನಾಂ ಸುಗಂಧಿಭಿಃ ।
ಆಸನೈರ್ವಿವಿಧೈಃ ಪುಷ್ಪೈಃ ಚಂದ್ರ ಜೀಮೂತಸನ್ನಿಭೈಃ ॥ ೨೦ ॥

ಉದಯಾರ್ಕಸಮಾಕಾರೈ ರ್ಮೇರುಶೃಂಗೋಪಮೈರ್ಭೃಶಂ ।
ತಮಾಲಚಂಪಕಾಭೈಶ್ಚ ಇಂದ್ರನೀಲಮಯೈಸ್ತಥಾ ॥ ೨೧ ॥

ಸಿಂದೂರಚಯಸಂಕಾಶೈರ್ಜಪಾಕುಸುಮಸನ್ನಿಭೈಃ ।
ಸಂಧ್ಯಾರಾಗನಿಭೈಶ್ಚಾನ್ಯೈರ್ದಾಡಿಮೀಕುಸುಮಪ್ರಭೈಃ ॥ ೨೨ ॥

---

೧೯. ಒಂದು ಕಡೆ ಕಲಶಗಳು, ಒಂದು ಕಡೆ ಹಸೆಗಳು, ಒಡವೆಗಳ ಆಕಾರದ ರಂಗವಲ್ಲಿಗಳು, ಹರಿಚಂದನ, ಗಂಧ, ಕರ್ಪೂರ ಇವೇ ಮೊದಲಾದ ಸುಗಂಧದ್ರವ್ಯಗಳು, ಇವುಗಳಿಂದ ಚಪ್ಪರವು ಕೂಡಿ ಶೋಭಿಸುತ್ತಿತ್ತು.

೨೦. ಜಾಜೀ, ಪಾದರಿ, ಪದ್ಮ, ಸಂಪಿಗೆ, ಇನ್ನೂ ವಿಧವಿಧವಾದ ಸುಗಂಧಮಯವಾದ ಪುಷ್ಪಗಳಿಂದ ರಚಿತವಾದ ಆಸನಗಳು ಅಲ್ಲಿ ಹೇರಳವಾಗಿದ್ದುವು. ಇದರಿಂದ ಆ ಸಭೆಯು ಚಂದ್ರನಿಂದ ಕೂಡಿದ ಮೇಘಮಂಡಲದಂತೆ ಪ್ರಕಾಶಿಸುತ್ತಿದ್ದುವು.

೨೧, ಬಾಲಸೂರ್ಯನಂತೆ ಕೆಂಪಾದ, ಮೇರುಶಿಖರದಂತೆ ಉನ್ನತವಾದ, ಹೊಂಗೇಮರದ ಮತ್ತು ಸಂಪಿಗೆ ಹೂವಿನಂತೆ ಕಾಂತಿಯುಳ್ಳ ಇಂದ್ರನೀಲಮಣಿ ಖಚಿತವಾದ ಭಾಗವು ಆ ಮಂಟಪದಲ್ಲಿ ಹೊಳೆಯುತ್ತಿತ್ತು.

೨೨. ಮತ್ತೆ ಕೆಲವು ಸ್ಥಳಗಳು ಚಂದ್ರದ ರಾಶಿಯಂತೆಯೂ, ಜಪಾಕುಸುಮಗಳ ಗುಂಪಿನಂತೆಯೂ, ಸಂಧ್ಯಾರಾಗದ ಬಣ್ಣದಂತೆಯೂ, ದಾಳಿಂಬ ಹೂವುಗಳ ಕಾಂತಿಯಂತೆಯೂ ಹೊಳೆಯುತ್ತಿದ್ದುವು.

ತಾರಕಾಪುಂಜಸಂಕಾಶೈಃ ಪದ್ಮನೀಲೇಂದ್ರನೀಲಜೈಃ ।
ತತ್ರೈವ ಮಂಡಪೇ ದಿವ್ಯೇ ತೋಯಸ್ಥಾನಾನ್ಯಕಲ್ಪಯತ್ ॥ ೨೩ ॥

ದೀರ್ಘಿಕಾಸ್ತೋಯಪೂರ್ಣಾಶ್ಚ ಕ್ಷೀರಪೂರ್ಣಾಸ್ತಥೈವ ಚ ।
ದಧಿಹ್ರದಾನನೇಕಾಂಶ್ಚ ಸುಧಾಸಂಪೂರಿತಾನಿ ವೈ ॥ ೨೪ ॥

ಘೃತಪೂರ್ಣಾ ಮಹಾನದ್ಯೋ ರತ್ನಸೋಪಾನಮಂಡಿತಾಃ ।
ವೃಕ್ಷಾಂಶ್ಚ ಕಾಮಿಕಾರ್ಣ ದಿವ್ಯಾನ್ ದೀರ್ಘಿಕಾಣಾಂ ತಥೋಭಯೋಃ ॥೨೫॥

ಅಸೃಜತ್ಕ್ರೀಡನಾರ್ಥಾಯ ಸದಾ ಪುಷ್ಪಫಲಾನ್ವಿತಾನ್ ।
ಭಕ್ಷ್ಯೈರ್ನಾನಾವಿಧೈರ್ದಿವ್ಯೈಃ ಫಲಿತಾನ್ ಮುನಿಪುಂಗವಾಃ ॥ ೨೬ ॥

ಕದಲೀಖಂಡಮಧ್ಯೇ ತು ತಮಾಲಗಹನೇಷ್ವಪಿ ।
ಕ್ರೀಡಾವಾಪ್ಯಃ ಸುಶೋಭಾಢ್ಯಾಸ್ತಥೈವಾಶೋಕಸಂಕುಲಾಃ ॥ ೨೭ ॥

---

೨೩. ನಕ್ಷತ್ರಗಳ ಗುಂಪಿನಂತೆಯೂ, ನೀಲಪದ್ಮಗಳಂತೆಯೂ, ಇರುವ ಸ್ಥಳಗಳೂ ಆ ಮಂಟಪದಲ್ಲಿದ್ದುವು. ಅಲ್ಲದೆ ಆ ಮಂಟಪದಲ್ಲಿಯೇ ವಿಧವಿಧವಾದ ಜಲಾಶಯಗಳೂ ನಿರ್ಮಿತವಾದವು.

೨೪. ನೀರಿನ ಕೊಳಗಳು, ಹಾಲು, ಮೊಸರು, ಅಮೃತ ಇವುಗಳಿಂದ ತುಂಬಿದ ಬಾವಿಗಳೂ ಅಲ್ಲಿ ಕಂಗೊಳಿಸಲಾರಂಭಿಸಿದುವು.

೨೫. ತುಪ್ಪದ ನದಿಗಳು, ಆ ನದಿಗಳಿಗೆ ರತ್ನದ ಮೆಟ್ಟಲುಗಳೂ, ಅದರ ಎರಡು ಪಕ್ಕಗಳಲ್ಲಿಯೂ, ಕಲ್ಪವೃಕ್ಷಸದೃಶವಾದ ಮರಗಳು ಇವೆಲ್ಲವೂ ಅಲ್ಲಿ ಕಾಣಿಸುತ್ತಿದ್ದುವು.

೨೬. ಅದೇ ಚಪ್ಪರದ ಒಂದು ಭಾಗದಲ್ಲಿ ವಿಹಾರಾರ್ಥವಾಗಿ ಫಲಪುಷ್ಪ ಭರಿತವಾದ ಮತ್ತು ನಾನಾಜಾತಿಯ ಹಣ್ಣುಗಳುಳ್ಳ ವೃಕ್ಷರಾಜಿಯನ್ನೂ ವಿಶ್ವಕರ್ಮನು ಸೃಷ್ಟಿಮಾಡಿದನು.

೨೭. ಬಾಳೆಯತೋಟದ ಮಧ್ಯದಲ್ಲಿಯೂ, ಹೊಂಗೆಯಮರಗಳ ಪಕ್ಕದಲ್ಲಿಯೂ ಬಹುಸುಂದರವಾದ ಕ್ರೀಡಾಸರಸ್ಸುಗಳಿದ್ದುವು. ಆದರ ಸುತ್ತಲೂ ಅಶೋಕವೃಕ್ಷಗಳ ಸಮೂಹವು ವಿರಾಜಿಸುತ್ತಿತ್ತು.

ದೀರ್ಘಿಕಾಣಾಂ ತಟೇ ರಮ್ಯೇ ತರುಣಾಃ ಸ್ನಿಗ್ಧಶಾಖಿಷು ।
ದೋಲಾಶ್ಚಾಬಂಧಯಾಮಾಸುರ್ಮುಕ್ತಾದಾಮಭಿರುಜ್ಜ್ವಲೈಃ ॥ ೨೮ ॥

ರಮಣೀಯಾನಿ ದಿವ್ಯಾನಿ ಮನಸ್ತುಷ್ಟಿಕರಾಣಿ ಚ ।
ಉದ್ಯಾನವನಖಂಡಾನಿ ಸ್ಥಾನೇ ಸ್ಥಾನೇಽಪ್ಯಕಲ್ಪಯತ್ ॥ ೨೯ ॥

ತ್ರೈಲೋಕ್ಯತಿಲಕೇ ತಸ್ಮಿನ್ ಹೇಮಪೀಠಸ್ಯ ಮಧ್ಯಗಾಂ ।
ಸಿಂಹೈಶ್ಚ ವಿಧೃತಾಂ ಶ್ವೇತೈಃ ಸಹಸ್ರದಳಮಂಡಿತಾಂ ॥ ೩೦ ॥

ಪಾರಿಜಾತದ್ರುಮಾಣಾಂ ಚ ಮಂಜರೀಭಿರಲಂಕೃತಾಂ ।
ಇಂದ್ರನೀಲಮಯೀಂ ವೇದಿಂ ಚಾರುಸೋಪಾನಭೂಷಿತಾಂ ॥ ೩೧ ॥

ಶತಯೋಜನವಿಸ್ತೀರ್ಣಾಂ ಸ್ತಂಭೈಶ್ಚ ಕಲಶಾನ್ವಿತಾಂ ।
ನಾನಾನೇಕಾಪ್ಸರೋಭಿಶ್ಚ ರತ್ನಜಾಂ ದಿವ್ಯರೂಪಿಣೀಂ ॥ ೩೨ ॥

---

೨೮. ಕೊಳಗಳ ದಡದಲ್ಲಿ ಚಿಗುರುಗಳಿಂದ ತುಂಬಿದ ಮರಗಳೂ, ಅದರಲ್ಲಿ ಮುತ್ತಿನಿಂದ ಅಲಂಕೃತವಾದ ಸರಪಣಿಗಳಿಂದ ಉಯ್ಯಾಲೆಗಳೂ ಕಂಗೊಳಿಸುತ್ತಿದ್ದುವು

೨೯. ಮತ್ತು ಅಲ್ಲಲ್ಲಿ ಮನಸ್ಸಿಗೆ ಹರುಷವನ್ನುಂಟುಮಾಡುವಂತಹ ಸುಂದರವಾದ ಉದ್ಯಾನವನಗಳನ್ನು ಯಥೇಚ್ಛವಾಗಿ ನಿರ್ಮಾಣಮಾಡಿದ್ದನು.

೩೦-೩೧ ಅಂಥ ತ್ರಿಲೋಕಕ್ಕೆ ಆಶ್ಚರ್ಯವನ್ನುಂಟುಮಾಡುವಂತಹ ವಿವಾಹ ಮಂಟಪದ ಮಧ್ಯಭಾಗದಲ್ಲಿ ಒಂದು ಹಸೆಜಗುಲಿಯನ್ನು ಕಟ್ಟಿಸಿದನು. ಅದು ಕೇವಲ ಸುವರ್ಣಮಯವಾಗಿತ್ತು. ಬಿಳಿಯ ಸಿಂಹಗಳು ಸುತ್ತಲೂ ಆ ವೇದಿಕೆಯನ್ನು ಹೊತ್ತಿದ್ದುವು. ಸಾವಿರ ಎಸಳುಗಳೂ ಅದರಲ್ಲಿ ಕಾಣುತ್ತಿದ್ದುವು. ಸುತ್ತಲೂ ಪಾರಿಜಾತ ವೃಕ್ಷಗಳು, ಅದರ ಗೊಂಚಲುಗಳು ವಿರಾಜಿಸುತ್ತಿದ್ದುವು. ಆ ವೇದಿಕೆಗೆ ಇಂದ್ರನೀಲ ಮಣಿಗಳನ್ನು ಅಲ್ಲಲ್ಲಿ ಜೋಡಿಸಿ, ಅದಕ್ಕೆ ಸುಂದರವಾದ ಮೆಟ್ಟಲುಗಳನ್ನು ನಿರ್ಮಾಣ ಮಾಡಿದ್ದನು.

೩೨. ಅದು ನೂರುಯೋಜನ ವಿಸ್ತೀರ್ಣವುಳ್ಳದ್ದಾಗಿತ್ತು. ಅದಕ್ಕೆ ಅನೇಕ ಕಲಶಗಳಿಂದ ಕೂಡಿದ ಕಂಬಗಳು ನಿರ್ಮಿತವಾಗಿದ್ದವು. ಅನೇಕ ಜನ ಅಪ್ಸರಸ್ತ್ರೀಯರು ಅಲ್ಲಿ ಸರ್ವದಾ ನರ್ತನಮಾಡುತ್ತಿದ್ದರು.

ಪೀನೋರುಜಘನಾಸ್ತಾಶ್ಚ ಪೀನೋನ್ನತಪಯೋಧರಾಃ ।
ಚಾಮರಾಗ್ರಕರಾಸ್ತಾಸ್ತು ಹಾರಾವಳಿವಿಭೂಷಿತಾಃ ॥ ೩೩ ॥

ವೀಣಾವೇಣುಕರಾಶ್ಚಾನ್ಯಾಃ ಕಾಂಚೀಗುಣವಿರಾಜಿತಾಃ ।
ಚಂಚಲಾಯತನೇತ್ರಾಶ್ಚ ತಿಲಕಾಲಕಮಂಡಿತಾಃ ॥ ೩೪ ॥

ಮಧ್ಯಕ್ಷಾಮಾಶ್ಚ ಬಿಂಬೋಷ್ಠ್ಯಃ ಕಮಲೋತ್ಪಲಮಾಲಿಕಾಃ ।
ಅನೇಕಾಕಾರವಿನ್ಯಾಸೈರ್ನಿರ್ಮಮೇ ತಾಃ ಪೃಥಕ್ಪೃಥಕ್ ॥ ೩೫ ॥

ಏವಂ ಹಿ ದಿವ್ಯೈಃ ಸುರಸುಂದರೀಭಿಃ ।
ನಾನಾಪ್ರಯೋಗೈರ್ವಿವಿಧೈಶ್ಚ ಚಿತ್ರೈಃ ।

---

೩೩. ದಪ್ಪವಾದ ಎದೆ ಮತ್ತು ಜಘನಗಳುಳ್ಳ ಮತ್ತು ತುಂಗವಾದ ಸ್ತನಗಳುಳ್ಳ ಅಪ್ಸರಸ್ತ್ರೀಯರು, ಚಾಮರಗಳನ್ನು ಕೈಯಲ್ಲಿ ಹಿಡಿದು ಹಾರಾದಿಗಳಿಂದ ಅಲಂಕೃತರಾಗಿ ನಿಂತಿದ್ದರು.

೩೪. ಕೆಲವು ಸ್ತ್ರೀಯರು ವೀಣೆ, ಕೊಳಲು ಇವುಗಳನ್ನು ಕೈಯ್ಯಲ್ಲಿ ಹಿಡಿದು ಭಂಗಾರದ ಒಡ್ಯಾಣದಿಂದ ಅಲಂಕೃತರಾಗಿ ವಿಶಾಲವಾದ ಮತ್ತು ಚಂಚಲವಾದ ಕಣ್ಣುಗಳುಳ್ಳವರಾಗಿ, ತಿಲಕ ಮತ್ತು ಮುಂಗುರುಳುಗಳಿಂದ ಕೂಡಿ ಕಂಗೊಳಿಸುತ್ತಿದ್ದರು.

೩೫. ಆ ವೇದಿಕೆಯ ಸುತ್ತಲೂ ತೆಳುವಾದ ಸೊಂಟವುಳ್ಳ, ತೊಂಡೇಹಣ್ಣಿನಂತೆ ತುಟಿಯುಳ್ಳ, ಉತ್ಪಲಮಾಲಾಧರರಾದ, ಅನೇಕ ಆಕಾರಗಳಿಂದ ಶೋಭಿಸುವ ಹೆಂಗಸರನ್ನು ಪ್ರತ್ಯೇಕಪ್ರತ್ಯೇಕವಾಗಿ ನಿರ್ಮಿಸಿ ನಿಲ್ಲಿಸಿದನು.

೩೬. ಹೀಗೆ ಆ ವಿವಾಹ ಮಂಟಪದ ಮಧ್ಯದಲ್ಲಿ ವಿರಾಜಮಾನವಾದ ಒಂದು ವೇದಿಕೆಯು ಅತಿಜಾಗ್ರತೆಯಲ್ಲಿ ನಿರ್ಮಿತವಾಯಿತು. ಅದರಲ್ಲಿ ಇನ್ನೂ ನೋಡುವವರಿಗೆ ಅತ್ಯಂತ ಹರ್ಷವನ್ನುಂಟುಮಾಡುವ ಚಿತ್ರವಿಚಿತ್ರವಾದ ವಸ್ತುಗಳು ಬಹಳವಾಗಿದ್ದವು. ಅದನ್ನು ನೋಡಿದಮಾತ್ರದಿಂದಲೇ ಸಮಸ್ತರೂ ಹರ್ಷಚಿತ್ತರಾಗಿ ತಮ್ಮ ಕಣ್ಣುಗಳ

ಮನೋಭಿರಾಮ್ಯೈರ್ನಯನಾಭಿರಾಮ್ಯೈ ।
ಯುರ್ಕ್ತಾಂತವೇದಿಂ ತ್ವರಿತಶ್ಚಕಾರ ॥ ೩೬ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಸಾಂಬವಿವಾಹಮಂಡಪವರ್ಣನಂ
ನಾಮ ಷಟ್ಪಂಚಾಶೋಽಧ್ಯಾಯಃ.

ಸಾಫಲ್ಯವನ್ನು ನೆನೆದು ಸಂತೋಷಪಡುತ್ತಿದ್ದರು. ಇಂತಹ ವಿವಾಹ ವೇದಿಕೆಯು ಆ ಚಪ್ಪರದ ಮಧ್ಯಭಾಗದಲ್ಲಿ ಕಂಗೊಳಿಸುತ್ತಿತ್ತು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣದ ಸೌರಪುರಾಣದಲ್ಲಿ ಸೂತಶೌನಕಸಂವಾದ
ರೂಪವಾಗಿ ಪರಮೇಶ್ವರನ ವಿವಾಹಮಂಟಪದ ವರ್ಣನೆಯನ್ನು
ವಿವರಿಸುವ ಐವತ್ತಾರನೆಯ ಅಧ್ಯಾಯವು
ಮುಗಿದುದು.

॥ ಶ್ರೀ ॥

ಶ್ರೀ ಶಿವಾಯನಮಃ

ಅಥ ಶ್ರೀ ಸೌರಪುರಾಣೇ ಸಪ್ತಪಂಚಾಶೋಽಧ್ಯಾಯಃ.

॥ ಸೂತ ಉವಾಚ ॥

ಮಂಡಪಂ ನಿರ್ಮಿತಂ ಶ್ರುತ್ವಾ ಶಂಕರೋ ವಿಶ್ವಕರ್ಮಣಾ ।
ಶೈಲಾದಿಮಬ್ರವೀದ್ದೇವೋ ವಿಶ್ವೇಶೋ ವಿಶ್ವಪೂಜಿತಃ ॥ ೧ ॥

। ಶ್ರೀಭಗವಾನುವಾಚ ।

ಹಿತಾರ್ಥಂ ಸರ್ವದೇವಾನಾಮಸ್ಮಾಕಂ ಚ ವಿಶೇಷತಃ ।
ವಿವಾಹಯಜ್ಞ ಆರಬ್ಧೋ ನಗರಾಜೇನ ಧೀಮತಾ ॥ ೨ ॥

ದಾನಾರ್ಥಮದ್ರಿಕನ್ಯಾಯಾಃ ಪ್ರಸ್ಥಿತೋ ಹಿಮವಾನ್ ಸ್ವಯಂ ।
ಅಹಂ ತತ್ರ ಗಮಿಷ್ಯಾಮಿ ಸುರೈರ್ಬ್ರಹ್ಮಾದಿಭಿಃ ಸಹ ॥ ೩ ॥

ಐವತ್ತೇಳನೆಯ ಅಧ್ಯಾಯ.

೧. ಹೀಗೆ ವಿಶ್ವಕರ್ಮನು ವಿವಾಹಮಂಟಪವನ್ನು ನಿರ್ಮಿಸಿರುವನೆಂಬ ವರ್ತಮಾನವನ್ನು ಈಶ್ವರನು ಕೇಳಿ ನಂದೀಶ್ವರನನ್ನು ಕುರಿತು ಹೀಗೆಂದನು.

೨. "ಎಲೈ ನಂದಿಯೇ, ಪ್ರಾಜ್ಞನಾದ ಪರ್ವತರಾಜನು ನನ್ನ ಮತ್ತು ದೇವತೆಗಳ ಹಿತಕ್ಕಾಗಿ ಪಾರ್ವತೀವಿವಾಹವೆಂಬ ಯಜ್ಞವನ್ನು ಆರಂಭಿಸಿರುವನು.

೩. ತನ್ನ ಮಗಳನ್ನು ನನಗೆ ದಾನಮಾಡಲು ಹಿಮವಂತನೇ, ಈಗ ಸಿದ್ಧನಾಗಿರುವನು. ಪ್ರತಿಗ್ರಹಕ್ಕಾಗಿ ನಾನು ಬ್ರಹ್ಮಾದಿದೇವತೆಗಳೊಡನೆ ಅಲ್ಲಿಗೆ ಹೊರಡಲಿರುವೆನು.

ತ್ವಮಿಹಾವಾಹಯ ಸುರಾನ್ ಕಾಲಾಗ್ನ್ಯಾದೀನ್ ದ್ವಿಜಾಂಸ್ತಥಾ ।
ದ್ವೀಪಾಂಶ್ಚ ಸಾಗರಾಂಶ್ಚೈವ ಪರ್ವತಾಂಶ್ಚ ನದೀಸ್ತಥಾ ॥ ೪ ॥

ಮಂಡಪಂ ಸುಂದರಂ ಯತ್ರ ನಿರ್ಮಿತಂ ವಿಶ್ವಕರ್ಮಣಾ ॥
ತತ್ರ ತಿಷ್ಠತ್ಯುಮಾ ದೇವೀ ಮಮ ಧ್ಯಾನಪರಾಯಣಾ ॥ ೫ ॥

ವಿದ್ಯುಲ್ಲತೇವ ಭಾಸಂತೀ ಚಂದ್ರಕೋಟಿನಿಭಾನನಾ ।
ಏವಮುಕ್ತೋ ಮಹೇಶೇನ ನಂದೀ ಸೂರ್ಯಾಯುತಪ್ರಭಃ ॥ ೬ ॥

ನತ್ವಾ ವಿಶ್ವೇಶ್ವರಂ ದೇವಂ ಧ್ಯಾನಾರೂಢಸ್ತದಾಽಭವತ್ ।
ಧ್ಯಾತಃ ಕ್ಷಣಾತ್ಸಮಾಯಾತಃ ಕಾಲಾಗ್ನಿರ್ವಿಶ್ವದಾಹಕಃ ॥ ೭ ॥

ರುದ್ರೈಃ ಪರಿವೃತೋ ದೇವಃ ಕೋಟಿಕೋಟಿಗಣೇಶ್ವರೈಃ ।
ತತೋಽಬ್ರವೀತ್ಸ ಕಾಲಾಗ್ನಿಃ ಸರ್ವಜ್ಞಂ ನಂದೀಕೇಶ್ವರಂ ॥ ೮ ॥

---

೪. ನೀನು ಸಮಸ್ತ ದೇವತೆಗಳನ್ನೂ, ಕಾಲಾಗ್ನಿಯೇ ಮೊದಲಾದ ದ್ವಿಜರನ್ನೂ, ಸಾಗರಗಳನ್ನೂ, ದ್ವೀಪಗಳನ್ನೂ, ಪರ್ವತ ಮತ್ತು ನದಿಗಳನ್ನೂ ಇಲ್ಲಿಗೆ ಬರಮಾಡು.

೫. ವಿಶ್ವಕರ್ಮನು ಸುಂದರವಾದ ವಿವಾಹಮಂಟಪವನ್ನು ನಿರ್ಮಿಸಿರುವನು. ಅಲ್ಲಿ ಪಾರ್ವತಿಯು ನನ್ನನ್ನೇ ಧ್ಯಾನಿಸುತ್ತಾ ಇರುವಳು.

೬. ಮಿಂಚಿನ ಕುಡಿಯಂತೆ ಹೊಳೆಯುವ ಮತ್ತು ಕೋಟಿಚಂದ್ರರಿಗೆ ಸದೃಶವಾದ ಮುಖಕಾಂತಿಯುಳ್ಳವಳಾಗಿ ಪಾರ್ವತಿಯು ಶೋಭಿಸುತ್ತಿರುವಳು" ಎಂದು ಹೇಳಿದ ಈಶ್ವರನ ಮಾತನ್ನು ಸೂರ್ಯನಂತೆ ಅತಿತೇಜಸ್ವಿಯಾದ ನಂದಿಯು ಕೇಳಿ,

೭. ಶಿವನನ್ನು ಧ್ಯಾನಿಸಿ, ಕ್ಷಣಕಾಲ ಮೌನದಿಂದಿದ್ದನು. ತಕ್ಷಣವೇ ಪ್ರಪಂಚವನ್ನೇ ಸುಡುವಂತಹ ಕಾಲಾಗ್ನಿಯು ಅಲ್ಲಿಗೆ ಓಡಿಬಂದನು.

೮. ಕಾಲಾಗ್ನಿಯ ಸುತ್ತಲೂ ಏಕಾದಶರುದ್ರರೂ, ಕೋಟಿ ಸಂಖ್ಯೆಯ ಪ್ರಮಥಗಣಗಳೂ ಬಂದು ನೆರೆದವು. ಆಗ ಕಾಲಾಗ್ನಿಯು ಸರ್ವಜ್ಞನಾದ ನಂದೀಶ್ವರನನ್ನು ನೋಡಿ,

ಕಿಮರ್ಥಮಹಮಾಹೂತೋ ದೇವದೇವೇನ ಶಂಭುನಾ ।
ಉಪಸ್ಥಿತೋ ವಾ ಪ್ರಳಯಃ ಸಂಹರಿಷ್ಯಾಮಿ ತತ್ಕ್ಷಣಾತ್ ॥ ೯ ॥

ಏವಮುಕ್ತಸ್ತದಾ ತೇನ ಶೈಲಾದಿಸ್ತಮಥಾಬ್ರವೀತ್ ।
ಪ್ರಲಯಾರ್ಥಂ ನಚಾಹೂತಸ್ತ್ವಂ ವಿಶ್ವೇಶೇನ ಶಂಭುನಾ ॥ ೧೦ ॥

ಗ್ರಹೀಷ್ಯತಿ ಗಿರೇಃ ಪುತ್ರೀಂ ಪತ್ನೀತ್ವೇನ ಮಹೇಶ್ವರಃ ।
ತದರ್ಥಂ ತ್ವಮಿಹಾಹೂತೋ ಬ್ರಹ್ಮಾದ್ಯಾಶ್ಚ ದಿವೌಕಸಃ ॥ ೧೧ ॥

ನಂದಿನೋ ವಚನಂ ಶ್ರುತ್ವಾ ಕಾಲಾಗ್ನಿರಿದಮಬ್ರವೀತ್ ।
ದ್ರಷ್ಟುಕಾಮಾ ವಯಂ ಸರ್ವೇ ಬ್ರಹ್ಮಾದ್ಯಾಃ ಶೂಲಪಾಣಿನಂ ॥ ೧೨ ॥

ಶೀಘ್ರಂ ದರ್ಶಯ ಶೈಲಾದೇ ನಿರ್ವೃತಾಃ ಸ್ಮೋ ಯಥಾ ವಯಂ ।
ವಿಜ್ಞಾಪಯ ಮಹಾದೇವಂ ಬ್ರಹ್ಮಾದ್ಯಾಶ್ಚಾಗತಾ ಇತಿ ॥ ೧೩ ॥

---

೯. "ದೇವದೇವನಾದ ನಂದಿಯೇ? ಏತಕ್ಕಾಗಿ ನನ್ನನ್ನು ಬರಮಾಡಿದೆ? ಪ್ರಳಯಕಾಲವು ಸನ್ನಿಹಿತವಾಯಿತೇ? ಲೋಕಗಳನ್ನೆಲ್ಲಾ ಧ್ವಂಸಮಾಡಲೇ" ಎಂದು ಕೇಳಿಕೊಳ್ಳಲು

೧೦. ನಂದಿಯು "ಅಯ್ಯಾ ಕಾಲಾಗ್ನಿಯೇ, ನಿನ್ನನ್ನು ಈಗ ಶಂಕರನು ಪ್ರಲಯದ ಕಾರ್ಯಕ್ಕಾಗಿ ಕರೆಸಲಿಲ್ಲ.

೧೧. ಮಹೇಶ್ವರನು ಈಗ ಪರ್ವತರಾಜ ಪುತ್ರಿಯನ್ನು ವಿವಾಹವಾಗುವನು. ಅದಕ್ಕಾಗಿ ಬ್ರಹ್ಮಾದಿದೇವತೆಗಳನ್ನೂ ನಿನ್ನನ್ನೂ ಈಗ ಕರೆಸಲಾಗಿದೆ."

೧೨. ಎಂದು ಹೇಳಿದ ನಂದೀಶ್ವರನ ಮಾತುಗಳನ್ನು ಕಾಲಾಗ್ನಿಯು ಕೇಳಿ, "ಬ್ರಹ್ಮಾದಿಗಳಾದ ನಾವು ಪರಶಿವನನ್ನು ದರ್ಶನಮಾಡಲು, ಉತ್ಸುಕರಾಗಿದ್ದೇವೆ.

೧೩. ನಂದಿಯೇ, ಈಗಲೇ ಜಾಗ್ರತೆಯಾಗಿ ಶಂಕರನಿಗೆ ನಾವು ಬಂದಿರುವುದನ್ನು ತಿಳಿಸಿ ನಮಗೆ ಸ್ವಾಮಿಯ ದರ್ಶನವನ್ನು ಮಾಡಿಸು.

ಸರ್ವೇ ತ್ವದ್ಧ್ಯಾನನಿರತಾಃ ಸರ್ವೇ ತ್ವದ್ದರ್ಶನೋತ್ಸುಕಾಃ ।
ಕಾಲಾಗ್ನಿಪ್ರಮುಖಾನಾಂ ಚ ವಚಃ ಶ್ರುತ್ವಾ ಗಣಾಗ್ರಣೀಃ ।
ಪ್ರಾಹ ವಿಶ್ವೇಶ್ವರಂ ದೇವಂ ಸ್ನಿಗ್ಧಗಂಭೀರಯಾ ಗಿರಾ ॥ ೧೪ ॥

॥ ನಂದಿಕೇಶ್ವರ ಉವಾಚ ॥

ಬ್ರಹ್ಮಾದ್ಯಾಶ್ಚಾಗತಾ ಸ್ಸರ್ವೇ ಶೂಲಪಾಣೇ ತವಾಽಜ್ಞಯಾ ।
ದ್ರಷ್ಟುಮಿಚ್ಛಂತಿ ತೇ ಸರ್ವೇ ನಮಸ್ಕರ್ತುಂ ತದಾ ಮುದಾ ॥ ೧೫ ॥

ದಿಶಾಽಽದೇಶಂ ಪುರಾರೇ ಮಾಂ ಕಿಂ ವಕ್ಷ್ಯಾಮಿ ಸುರಾಸುರಾನ್ ।
ವಾರಿತಾ ದ್ವಾರಮೂಲೇಷು ದ್ರಷ್ಟುಕಾಮಾಶ್ಚ ಸಂಸ್ಥಿತಾಃ ॥ ೧೬ ॥

ಯತ್ತೇ ನಿರುಪಮಂ ರೂಪಂ ತೇಜೋಮಯಮನಿಂದಿತಂ ।
ಯದಧೋಭಾಗಮಾಶ್ರಿತ್ಯ ರುದ್ರಃ ಕಾಲಾಗ್ನಿಸಂಜ್ಞಿತಃ ॥ ೧೭ ॥

---

೧೪. ನಾವೆಲ್ಲರೂ ಪರಮೇಶ್ವರನ ಧ್ಯಾನದಿಂದಲೇ, ಪರಶಿವನ ದರ್ಶನಾಕಾಂಕ್ಷಿಗಳಾಗಿದ್ದೇವೆ" ಎಂದು ಹೇಳಿದ ಕಾಲಾಗ್ನಿಗಳ ಮಾತುಗಳನ್ನು ಕೇಳಿ ನಂದಿಯು, ಮೃದುಮಧುರವಾದ ವಾಣಿಯಿಂದ ಸ್ವಾಮಿಯನ್ನು ಕುರಿತು ಹೀಗೆ ಹೇಳಿದನು.

೧೫. " ಓ ಶೂಲಪಾಣಿಯೇ, ನಿನ್ನ ಅಪ್ಪಣೆಯಂತೆ ಬ್ರಹ್ಮಾದಿ ಸಕಲ ದೇವತೆಗಳೂ ಇಲ್ಲಿಗೆ ಬಂದಿರುವರು. ಈಗ ನಿನ್ನ ದರ್ಶನಾಕಾಂಕ್ಷೆಯಿಂದ ನಮಸ್ಕಾರಮಾಡಲು ಸಿದ್ಧರಾಗಿ ನಿಂತಿರುವರು.

೧೬. ಮಹಾದೇವನೇ, ಸುರಾಸುರರು ನಿನ್ನನ್ನು ನೋಡಲೋಸುಗ ಬಾಗಿಲಿನಲ್ಲಿ ನಿಂತಿರುವರು. ಅವರನ್ನು ನಾನು ತಡೆದಿರುವೆನು. ಮುಂದೇನುಮಾಡಲಿ, ಎಂಬುದನ್ನು ಅಪ್ಪಣೆಕೊಡು.

೧೭-೧೮. ಈ ನಿನ್ನ ನಿರುಪಮವಾದ, ತೇಜೋಮಯವಾದ, ಶುದ್ಧವಾದ ರೂಪವನ್ನು ಕಾಲಾಗ್ನಿರುದ್ರನು ಕೆಳಭಾಗದಲ್ಲಿ ನಿಂತುನೋಡಲಿ. ದೇವತೆಗಳೆಲ್ಲರೂ ಭೂತೇಶನಾಗಿಯೂ ಪ್ರಕಾಶಮಾನವಾಗಿಯೂ ಇರುವ ನಿನ್ನ ರೂಪವನ್ನು ದರ್ಶನ

ಪಶ್ಯಂತು ಚೈತೇ ಭೂತೇಶಂ ಶೂಲಂ ಚೈವ ಸದೋಜ್ಜ್ವಲಂ ।
ತತೋ ವಿವೇಶ ಕಾಲಾಗ್ನಿರ್ವಿಷ್ಣುರ್ಬ್ರಹ್ಮಾ ಶತಕ್ರತುಃ ॥ ೧೮ ॥

ಅನ್ಯೇ ಚ ದೇವಗಂಧರ್ವಾ ಋಷಯೋ ಮನವಸ್ತಥಾ ।
ಸರ್ವೇ ಕೋಲಾಹಲಂ ಕೃತ್ವಾ ದೇವಾಸುರಮಹೋರಗಾಃ ॥ ೧೯ ॥

ವಿವಿಶುರ್ಹರಸಂಸ್ಥಾನಂ ನದ್ಯಾದ್ಯಾ ಇವ ಸಾಗರಂ ।
ಪ್ರವಿಶ್ಯ ಭವನೇ ರಮ್ಯೇ ನಾನಾಧಾತುವಿಚಿತ್ರಿತೇ ॥ ೨೦ ॥

ಗಣಕೋಟಿಸಮಾಕೀರ್ಣೇ ರುದ್ರಕೋಟಿಸುಸೇವಿತೇ ।
ಅಗ್ರಜನ್ಮಗುರುಃ ಪೂರ್ವಂ ರುದ್ರೈರ್ದೇವೈರ್ವೃತಸ್ತದಾ ॥ ೨೧ ॥

ಭವಾರಿಮಂಧಕಾರಿಂ ತಮಪಶ್ಯದಂತಕಾನಲಃ ।
ಮುಕ್ತಾಚಲಪ್ರತೀಕಾಶಂ ಶಶಾಂಕಚಯಸಂನಿಭಂ ॥ ೨೨ ॥

ಮಾಡಲಿ" ಎಂದು ಹೇಳಿದ ನಂದಿಯ ಮಾತನ್ನು ಕೇಳಿ ದೇವತೆಗಳೂ, ಕಾಲಾಗ್ನಿ, ವಿಷ್ಣು, ಬ್ರಹ್ಮ, ಇಂದ್ರ ಇವರೆಲ್ಲರೂ ಈಶ್ವರನಿದ್ದ ಸ್ಥಳಕ್ಕೆ ಪ್ರವೇಶಿಸಿದರು.

೧೯-೨೦. ಆಮೇಲೆ ದೇವಗಂಧರ್ವರೂ, ಋಷಿಗಳೂ, ಮನುಗಳೂ, ದೇವಾಸುರರೂ, ಉರಗಗಳೂ, ಜಯಶಬ್ದ ಮಾಡುತ್ತಾ ನದಿಗಳು ಸಮುದ್ರವನ್ನು ಪ್ರವೇಶಿಸುವಂತೆ ಹರನಿದ್ದ ಸ್ಥಳಕ್ಕೆ ಹೋದರು.

೨೧. ಆ ಸ್ಥಳದಲ್ಲಿ ಪ್ರಮಥಗಣಗಳೂ, ರುದ್ರಾಂಶಸಂಭೂತರೂ ಅಸಂಖ್ಯೆಯಲ್ಲಿ ನೆರೆದಿದ್ದರು. ಆಗ ಬ್ರಹ್ಮನು ರುದ್ರಾದಿಗಳಿಂದ ಕೂಡಿ ಮೊದಲು ಆ ಸ್ಥಳವನ್ನು ಹೊಕ್ಕನು.

೨೨. ಅಲ್ಲಿ ಪರಮೇಶ್ವರನನ್ನು ನೋಡಿದನು. ಪರಶಿವನಾದರೋ ಭವರೋಗನಾಶಕನು, ಅಂಧಕಾಸುರಸೂದನನು, ಯಮನಿಗೆ ಯಮನು, ಮುತ್ತಿನ ಪರ್ವತದಂತೆ, ಚಂದ್ರರ ಸಮೂಹದಂತೆ ಹೊಳೆಯುತ್ತಿರುವವನು.

ನೀಲಕಂಠಂ ತ್ರಿನೇತ್ರಂ ಚ ಶೂಲಿನಂ ಸರ್ವತೋಮುಖಂ ।
ಕೋಟಿಸೂರ್ಯಪ್ರತೀಕಾಶಂ ಜಗದಾನಂದಕಾರಿಣಂ ॥ ೨೩ ॥

ಕಪಾಲಮಾಲಿನಂ ದೇವಂ ಕಪರ್ದಕೃತಭೂಷಣಂ ।
ದಶಬಾಹುಂ ದಶಾರ್ಧಾಸ್ಯಮನಂತಂ ತೇಜಸಾಂ ನಿಧಿಂ ॥ ೨೪ ॥

ಜಗದುತ್ಪತ್ತಿಸಂಹಾರಸ್ಥಿತ್ಯನುಗ್ರಹಕಾರಿಣಂ ।
ಅಪ್ರಮೇಯಮನಾಕಾರಮಪ್ರಪಂಚಮನಾಕುಲಂ ॥ ೨೫ ॥

ಸಿಂಹಾಸನಸ್ಥಮಚಲಂ ಚರಾಚರವಿಭೂತಿದಂ ।
ಕ್ಷೀರೋದಮಿವ ನಿಷ್ಕಂಪಂ ತ್ರೈಲೋಕ್ಯಪ್ರಭವಂ ಶಿವಂ ॥ ೨೬ ॥

ಸರ್ವತಃ ಪಾಣಿಪಾದಾಂತಂ ಸರ್ವತೋಽಕ್ಷಿಶಿರೋಮುಖಂ ।
ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ಸಂಸ್ಥಿತಂ ॥ ೨೭ ॥

ಸುರಾಸುರೈರ್ವಂದ್ಯಮಾನಂ ಧ್ಯಾಯಮಾನಂ ಮುಮುಕ್ಷುಭಿಃ ।
ಇದಂ ರೂಪಂ ಸಮಾಲೋಕ್ಯ ದೇವದೇವಸ್ಯ ಶೂಲಿನಃ ॥ ೨೮ ॥

೨೩-೨೪. ನೀಲವರ್ಣದ ಕಂಠದಿಂದ ಕೂಡಿ, ಮೂರು ಕಣ್ಣುಗಳುಳ್ಳವನಾಗಿ, ತ್ರಿಶೂಲಧಾರಿಯಾದವನು, ಪರಶಿವನು. ಆತನು ಸರ್ವತೋಮುಖನು, ಕೋಟಿ ಸೂರ್ಯತೇಜನು, ಜಗತ್ತಿಗೆ ಆನಂದದಾಯಕನು, ಕಪಾಲಮಾಲಾಧಾರಿಯು, ಜಟಾ ಜೂಟದಿಂದ ಅಲಂಕೃತನಾದವನು. ಪರಶಿವನಿಗೆ ಐದು ಮುಖಗಳು, ಹತ್ತು ಭುಜ ಗಳು ತೋರಿಬರುತ್ತವೆ. ತೇಜೋನಿಧಿಯಾಗಿ ವಿರಾಜಿಸುತ್ತಿರುವನು.

೨೫-೨೬. ಲೋಕದ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾಗಿ, ಅಪ್ರಮೇಯನೂ, ಆಕಾರರಹಿತನೂ, ಅನಾಕುಲನೂ ಆದ ಶಂಕರನು ಸಿಂಹಾಸನದಲ್ಲಿ ಕುಳಿತು ಚರಾಚರ ವಸ್ತುಗಳಿಗೆ ತೇಜಸ್ಸನ್ನು ಒದಗಿಸುತ್ತಾ, ಕ್ಷೀರಸಮುದ್ರದಂತೆ ನಿಶ್ಚಲನಾಗಿ ಕುಳಿತಿದ್ದನು.

೨೭-೨೮. ಭಗವಂತನಾದ ಸದಾಶಿವನಿಗೆ ಎಲ್ಲೆಲ್ಲೂ ಕೈಕಾಲುಗಳೇ, ಎಲ್ಲ ಕಡೆಯೂ ತಲೆ, ಕಣ್ಣು ಮುಂತಾದವುಗಳು. ಜಗತ್ತೆಲ್ಲವೂ ಶಿವನ ಕಿವಿಗಳೇ. ಪ್ರಪಂಚವೇ ಶಿವಮಯ. ಹೀಗೆ ಸುರಾಸುರರಿಂದ ವಂದಿಸಲ್ಪಟ್ಟ ಪರಮೇಶ್ವರನ ರೂಪವನ್ನು ಸರ್ವರೂ ಆದರದಿಂದ ನೋಡಿದರು.

ಅಗ್ರೇ ಸ್ಥಿತಃ ಸ ಕಾಲಾಗ್ನಿಃ ಮೇರೌ ಮೇರುರಿವಾಪರಃ ।
ಅಥೋವಾಚ ಸ ಶೈಲಾದಿಃ ಪ್ರಣಿಪತ್ಯ ಸನಾತನಂ ॥ ೨೯ ॥

ನರಕಾಣಾಮಧೋಭಾಗೇ ಪುರತ್ರಯಂ ಪ್ರತಿಷ್ಠಿತಂ ।
ಯೋಜನಾಯುತವಿಸ್ತೀರ್ಣಂ ಕಾಮದಂ ಶುಭಲಕ್ಷಣಂ ॥ ೩೦ ॥

ಯಸ್ಯೈವೋರ್ಧ್ವಂ ನಿರಾಲಂಬಂ ಶತಯೋಜನಮಾನತಃ ।
ಜ್ವಾಲಾಮಾಲಾಕುಲಂ ದಿವ್ಯಂ ಸರ್ವಲೋಕಭಯಂಕರಂ ॥ ೩೧ ॥

ಪ್ರಾಕಾರಾಟ್ಟಾಲಕೈರ್ಯುಕ್ತಂ ಗೋಪುರೈಸ್ತೋರಣಾನ್ವಿತಂ ।
ರಕ್ತನೀಲಸಮಾನಾಭೈ ರ್ಭೀಮಘೋಷೈರ್ದುರಾಸದೈಃ ॥ ೩೨ ॥

ವೃತೋ ರುದ್ರಸಹಸ್ರೈಸ್ತು ಸಿಂಹರೂಪೈರ್ಮಹಾಬಲೈಃ ।
ನಿಯಮ್ಯ ಚ ಸ್ವಕಂ ತೇಜಃ ಪ್ರೀತ್ಯರ್ಥಂ ತೇಧುನಾಗತಃ ॥ ೩೩ ॥

---

೨೯. ಮುಂಭಾಗದಲ್ಲಿ ಮೇರು ಪರ್ವತದಂತೆ ಕಾಲಾಗ್ನಿಯು ನಿಂತಿದ್ದನು ಅನಂತರ ನಂದೀಶ್ವರನು ಭಗವಂತನಾದ ಪರಮೇಶ್ವರನನ್ನು ಕುರಿತು ಹೀಗೆ ಹೇಳಿದನು.

೩೦. "ಸ್ವಾಮಿಯೇ, ನರಕಗಳ ಕೆಳಭಾಗದಲ್ಲಿ ಮೂರು ಊರುಗಳಿವೆಯಷ್ಟೇ. ಅವುಗಳು ಸರ್ವಲಕ್ಷಣಸಂಪನ್ನಗಳಾಗಿ ಕೇಳಿದಇಷ್ಟಾರ್ಥಗಳನ್ನು ಕೊಡತಕ್ಕವುಗಳಾಗಿವೆ.

೩೧. ಆ ಊರುಗಳ ಆಧಾರರಹಿತಗಳಾಗಿವೆ. ನೂರುಯೋಜನದ ವಿಸ್ತಾರ ವುಳ್ಳದ್ದಾಗಿ, ಜ್ವಾಲಾಮಾಲೆಗಳಿಂದಾವೃತವಾಗಿ ಸರ್ವಲೋಕ ಭಯಂಕರವಾಗಿವೆ.

೩೨. ಆ ಊರುಗಳು ಸುತ್ತಲೂ ಕೋಟೆ ಗೋಡೆಗಳೂ, ಅವುಗಳ ಮೇಲೆ ಗೋಪುರಗಳೂ, ಅವುಗಳಲ್ಲಿ ಕೆಂಪು, ನೀಲಿ ಮೊದಲಾದ ಬಣ್ಣದ ತೋರಣಗಳೂ, ಅವುಗಳ ಹತ್ತಿರ ವೀರಭಟರ ಜಯಶಬ್ದಗಳೂ ವಿಶೇಷವಾಗಿವೆ.

೩೩. ಅಲ್ಲಿ ಈ ಕಾಲಾಗ್ನಿಯು ಅನೇಕ ಜನ ರುದ್ರರಿಂದ ಕೂಡಿ, ಸಿಂಹಾ ಕಾರದ ಬಲಿಷ್ಠವಾದ ಭಟರೊಡನೆ ವಿಶೇಷ ತೇಜಸ್ವಿಯಾಗಿದ್ದು, ಈಗ ನಿನ್ನ ಪ್ರೀತಿ ಗಾಗಿ ಇಲ್ಲಿಗೆ ಬಂದಿರುವನು.

ಧ್ಮಾಂತಚಾಮೀಕರಾಭಾಸಶ್ಚಂದನಾಗರುಗಂಧಯುಕ್ ।
ನೀಲಕಂಠಸ್ತ್ರಿನೇತ್ರಶ್ಚ ವೃಷಕೇತುರ್ಮಹಾಬಲಃ ॥ ೩೪ ॥

ದ್ವೀಪಿಚರ್ಮಪರೀಧಾನಃ ಪಂಚವಕ್ತ್ರೇಂದುಭೂಷಣಃ ।
ಅನಂತಮೇಖಲಾಧಾರೀ ಕುಂಡಲೀಕೃತತಕ್ಷಕಃ ॥ ೩೫ ॥

ದಶಬಾಹುರ್ಮಹಾತೇಜಾಃ ಪೀನವಕ್ಷಾ ಮಹಾಭುಜಃ ।
ಪ್ರಲಯೋದಧಿಘೋಷೋ ರಕ್ತನೀಲಮಹಾತನುಃ ॥ ೩೬ ॥

ಆಗತಃ ಸೌಮ್ಯರೂಪೇಣ ತವ ದೇವ ಸಮೀಪತಃ ।
ಪಶ್ಯತಾಂ ಮೃದುಭಾವೇನ ದೇವದೇವ ಜಗತ್ಪತೇ ॥ ೩೭ ॥

ಏಕೇ ಚೈವ ಮಹಾವೀರ್ಯಾಃ ಕಾಲಾಗ್ನೇಸ್ತು ಸಮೀಪತಃ ।
ತಿಷ್ಠಂತಿ ಜ್ವಲನಾಭಾಸಾ ರುದ್ರಾಶ್ಚ ಶತಕೋಟಯಃ ॥ ೩೮ ॥

---

೩೪. ಕಾಲಾಗ್ನಿಯು, ಸುವರ್ಣದ ಬಣ್ಣವುಳ್ಳವನಾಗಿ, ಚಂದನ, ಅಗರು, ಗಂಧ ಇವುಗಳಿಂದ ಕೂಡಿ, ನೀಲಕಂಠನಾಗಿಯೂ, ಮುಕ್ಕಣ್ಣನಾಗಿಯೂ, ಮಹಾ ಬಲಿಷ್ಠನಾಗಿಯೂ ಇರುವನು.

೩೫. ಹುಲಿಯಚರ್ಮವನ್ನು ಹೊದ್ದು, ಪಂಚಮುಖವುಳ್ಳವನಾಗಿ, ಹಾವನ್ನೇ ಒಡ್ಯಾಣವನ್ನಾಗಿಯೂ, ಕರ್ಣಾಭರಣವನ್ನಾಗಿಯೂ ಮಾಡಿಕೊಂಡಿರುವನು.

೩೬. ಹತ್ತುತೋಳುಗಳು, ವಿಶಾಲವಾದ ಎದೆ, ದೊಡ್ಡಹೆಗಲು, ಪ್ರಳಯ ಕಾಲದಸಮುದ್ರದಂತೆಗರ್ಜಿಸುವ ಗಂಟಲು, ಕೆಂಪಾದ ಮತ್ತು ನೀಲಿಯ ದೇಹ ಇವುಗಳಿಂದ ಹೆಚ್ಚು ತೇಜಸ್ವಿಯಾಗಿ ವಿರಾಜಿಸುತ್ತಿರುವನು.

೩೭ ಎಲೈ ಪರಮೇಶ್ವರನೇ, ಇಂತಹ ಕಾಲಾಗ್ನಿಯು ನಿನ್ನ ಮುಂದೆ ಈಗ ಸೌಮ್ಯರೂಪದಿಂದ ನಿಂತಿರುವನು. ನೋಡುವವರಿಗೂ ಮೃದುಭಾವವನ್ನು ತೋರಿಸುತ್ತಿರುವನು.

೩೮. ಈ ಕಾಲಾಗ್ನಿಯ ಸಮೀಪದಲ್ಲಿ ಮಹಾಬಲಿಷ್ಠರಾದ ನೂರು ಕೋಟಿ ಜನ ಅಗ್ನಿ ಸಮಾನರಾದ ದೇವತೆಗಳಿರುವರು.

ಶೃಣ್ವಂತಿ ಯೋಗಾನ್ಮಹಾದೇವ ಕಾಲಾಗ್ನ್ಯಾದೇಶಕಾರಿಣಃ ।
ತಿಷ್ಠಂತಿ ಸ್ವಪುರೇ ರಮ್ಯೇ ಕ್ರೀಡಮಾನಾ ಮನೋರಮೇ ॥ ೩೯ ॥

ತವಾನುಜ್ಞಾಗತಾಶ್ಚೈತೇ ಶಶಾಂಕಮೌಲಿನೋಽಮಲಾಃ ।
ಶುದ್ಧಸ್ಫಟಿಕಸಂಕಾಶಾಃ ಪದ್ಮರಾಗಸಮಪ್ರಭಾಃ ॥ ೪೦ ॥

ತಟಿದ್ಭ್ರಮರಸಂಕಾಶಾ ವಜ್ರಶೂಲಧನುರ್ಧರಾಃ ।
ನೀಲಕಂಠಸ್ತ್ರಿನೇತ್ರಾಶ್ಚ ಸುಖದುಃಖವಿವರ್ಜಿತಾಃ ॥ ೪೧ ॥

ಸರ್ವಾಭರಣಸಂಪನ್ನಾ ಅನಂತಬಲವಿಕ್ರಮಾಃ ।
ಜರಾಮರಣನಿರ್ಮುಕ್ತಾಃ ಶಾರ್ದೂಲಚರ್ಮವಾಸಸಃ ॥ ೪೨ ॥

ಇಮಾನಪಿ ಮಹಾದೇವ ಪಶ್ಯನ್ ಪ್ರೀತಿಕರೋ ಭವ ।
ಹರಿಚಂದನಲಿಪ್ತಾಂಗಾನಶೋಕಕಮಲಾರ್ಚಿತಾನ್ ॥ ೪೩ ॥

---

೩೯. ಮಹಾದೇವನೇ, ಕಾಲಾಗ್ನಿಯ ಅಪ್ಪಣೆಯನ್ನು ಪರಿಪಾಲಿಸುವಂತಹ ಸೇವಕರು ನಿನ್ನ ಅಪ್ಪಣೆಯಂತೆ ಸುಂದರವಾದ ಈ ನಿನ್ನ ನಗರದಲ್ಲಿ ಕ್ರೀಡಿಸುತ್ತಿರುವರು.

೪೦-೪೧. ಪರಮೇಶ್ವರನೇ, ಈ ರುದ್ರಗಣಗಳು ನಿನ್ನ ಅಪ್ಪಣೆಯಂತೆ ಚಂದ್ರ ಮೌಳಿಗಳಾಗಿ ಶುದ್ಧವಾದ ಸ್ಫಟಿಕದಂತೆ ಶುಭ್ರದೇಹವುಳ್ಳವರಾಗಿದ್ದಾರೆ. ಅವರ ದೇಹವು ಮಿಂಚಿನಂತೆ ಹೊಳೆಯುತ್ತಿದೆ. ಕೈಗಳಲ್ಲಿ ವಜ್ರಾಯುಧ, ತ್ರಿಶೂಲ, ಧನುಸ್ಸು ಮೊದಲಾದುವುಗಳನ್ನು ಹಿಡಿದಿದ್ದಾರೆ. ನೀಲಕಂಠರಾಗಿ, ತ್ರಿಣೇತ್ರರಾಗಿ, ಸುಖದುಃಖ ವಿವರ್ಜಿತರಾಗಿರುವರು.

೪೨. ಸಮಸ್ತಾಭರಣಗಳಿಂದಲಂಕೃತರಾಗಿ, ಅತಿಶಯವಾದ ಬಲದಿಂದ ಕೂಡಿ ಜರಾಮರಣಗಳಿಂದ ಬಿಡುಗಡೆಹೊಂದಿ, ಹುಲಿಯ ಚರ್ಮವನ್ನು ಧರಿಸಿದವರಾಗಿದ್ದಾರೆ

೪೩. ಮಹಾದೇವನೇ, ಹರಿಚಂದನವನ್ನು ಶರೀರಕ್ಕೆ ಬಳಿದುಕೊಂಡು, ಅಶೋಕಪುಷ್ಪ ಮತ್ತು ಕಮಲ ಪುಷ್ಪಗಳಿಂದಲಂಕೃತರಾಗಿರುವ, ಈ ರುದ್ರಗಣ ಗಳನ್ನು ನೋಡಿ ಸಂತೋಷಪಡು.

ದೈತ್ಯಾಧಿಪತಯಶ್ಚೈವ ಪ್ರಹ್ಲಾದಾದ್ಯಾ ಮಹಾಬಲಾಃ ।
ಸಮಾಗತಾ ಮಹಾದೇವ ನಾಗಾಶ್ಶೇಷಾದಯಃ ಶಿವ ॥ ೪೪ ॥

ಸರ್ವಾಃ ಪಾತಾಳವಾಸಿನ್ಯೋ ರೂಪಯೌವನಗರ್ವಿತಾಃ ।
ಆಗತಾ ದೇವದೇವೇಶ ದಿವ್ಯೈಶ್ಚ ಸಹ ಸಾಗರಾಃ ॥ ೪೫ ॥

ಗಂಧರ್ವಾಃ ಕಿನ್ನರಾ ಯಕ್ಷಾ ಸಿದ್ಧವಿದ್ಯಾಧರಾಶ್ಶಿವಾಃ ।
ಉರ್ವಶ್ಯಾದ್ಯಾಶ್ಚಾಪ್ಸರಸೋ ನದ್ಯಃ ಪಾಪಹರಾಃ ಶುಭಾಃ ॥ ೪೭ ॥

ಏತೇ ಚ ಮುನಯೋ ದೇವ ಭೃಗ್ವಾದ್ಯಾಃ ಪ್ರಥಿತೌಜಸಃ ।
ಸಂಪ್ರಾಪ್ತಾನಿ ಪುರಾಣೀಹ ಶಕ್ರಾದೀನಾಂ ಮಹಾತ್ಮನಾಂ ॥ ೪೭ ॥

ಏತೇ ಲೋಕಾಃ ಸಮಾಯಾತಾಃ ಸತ್ಯಾಂತಾಃ ಸಪ್ತ ಶಂಕರ ।
ಮೂರ್ತಯಸ್ತವ ದೇವೇಶ ಭವಾದ್ಯಾಶ್ಚ ಸಮಾಗತಾಃ ॥ ೪೮ ॥

---

೪೪. ಪರಮೇಶ್ವರನೇ, ಇನ್ನೂ ಪ್ರಹ್ಲಾದನೇ ಮೊದಲಾದ ದೈತ್ಯವರ್ಯರೂ, ನಾಗಗಳೂ, ಶೇಷರೂ, ಒಟ್ಟಾಗಿ ಬಂದು ನೆರೆದಿರುವರು.

೪೫. ದೇವದೇವನೇ, ಪಾತಾಳವಾಸಿಗಳಾಗಿ, ರೂಪಯೌವನಗಳಿಂದಲಂಕೃತೆರಾದ ಸಾಗರ, ದ್ವೀಪ ಇವುಗಳ ಅಭಿಮಾನಿದೇವತೆಗಳೂ ಬಂದು ಸೇರಿರುವರು.

೪೬. ಗಂಧರ್ವರೂ, ಕಿನ್ನರರು, ಯಕ್ಷರು, ಸಿದ್ಧವಿದ್ಯಾಧರರು, ಉರ್ವಶಿಯೇ ಮೊದಲಾದ ಅಪ್ಸರಸ್ತ್ರೀಯರು, ಪಾಪನಾಶಕಗಳಾದ ನದಿಗಳೂ ಇಲ್ಲಿಗೆ ಬಂದು ನೆರೆದಿವೆ.

೪೭. ಭೃಗುವೇ ಮೊದಲಾದ ತೇಜಶ್ಶಾಲಿಗಳಾದ ಮಹರ್ಷಿಗಳು ಬಂದು ಸೇರಿದ್ದಾರೆ. ಅಮರಾವತಿಯೇ ಮೊದಲಾದ ಸ್ವರ್ಗದನಗರಗಳೆಲ್ಲವೂ ಬಂದು ನೆಲೆಸಿವೆ.

೪೮. ಸತ್ಯಲೋಕವೇ ಕೊನೆಯಾಗಿಯುಳ್ಳ ಸಪ್ತಲೋಕಗಳೂ, ನಿನ್ನ ಮೂರ್ತಿಗಳಾದ ಭವಾದಿಯಾದ ಏಕಾದಶರುದ್ರರೂ ಬಂದು ನಿಂತಿರುವರು.

ಆದಿತ್ಯಾ ವಸವೋ ರುದ್ರಾಃ ಸಾಧ್ಯಾಶ್ಚೈವ ಮರುದ್ಗಣಾಃ ।
ಸನಕಾದ್ಯಾ ಮಹಾತ್ಮಾನಃ ಸತ್ಯಲೋಕನಿವಾಸಿನಃ ॥ ೪೯ ॥

ಪದ್ಮರಾಗನಿಭೋ ದೇವೋ ಬಂಧೂಕಕುಸುಮದ್ಯುತಿಃ ।
ಜಟಾಭಿಸ್ತು ಶಿರೋನದ್ಧೋ ರತ್ನಮಾಲಾವಿಭೂಷಿತಃ ॥ ೫೦ ॥

ಕಮಂಡಲುಧರಃ ಶ್ರೀಮಾನ್ ದಂಡಹಸ್ತಃ ಸುಲೋಚನಃ ।
ಕೃಷ್ಣಾಜಿನೋತ್ತರೀಯೇಣ ರಕ್ತಮಾಲ್ಯಾಂಬರೇಣ ಚ ॥ ೫೧ ॥

ಸುವರ್ಣಮೇಖಲಾಧಾರೀ ರೌಕ್ಮಕುಂಡಲಮಂಡಲೀ ।
ಹಂಸಧ್ವಜಶ್ಚತುರ್ಬಾಹುಃ ಸುರಾಸುರನಮಸ್ಕೃತಃ ॥ ೫೨ ॥

ಸಾವಿತ್ರ್ಯಾ ಸಹಿತೋ ದೇವಃ ಪದ್ಮಯೋನಿರಿಹಾಗತಃ ।
ಅತಸೀಪುಷ್ಪಸಂಕಾಶಸ್ತಮಾಲದಲವರ್ಚಸಃ ॥ ೫೩ ॥

---

೪೯. ದ್ವಾದಶಾದಿತ್ಯರು, ಅಷ್ಟವಸುಗಳು, ಏಕಾದಶರುದ್ರರೂ, ಸಾಧ್ಯರು, ಮರುದ್ಗಣಗಳು, ಸನಕಾದಿಮಹರ್ಷಿಗಳು ಇನ್ನೂ ಸತ್ಯಲೋಕವಾಸಿಗಳು ಎಲ್ಲರೂ ಬಂದು ನೆರೆದಿರುವರು.

೫೦. ಪದ್ಮರಾಗಗಳಿಗೆ ಸಮನಾಗಿ, ಬಂಧೂಕಪುಷ್ಪದಂತೆ ಕಾಂತಿಯುಳ್ಳ ಜಟೆಗಳಿಂದ ಕೂಡಿ, ರತ್ನಮಾಲಾದಿಗಳಿಂದಲಂಕೃತನಾಗಿ ಬ್ರಹ್ಮನು ಬಂದಿರುವನು.

೫೧. ಅವನು ಕೈಯ್ಯಲ್ಲಿ ಕಮಂಡಲು, ದಂಡ, ಇವುಗಳನ್ನು ಹಿಡಿದು ಕೃಷ್ಣಾಜಿನಧಾರಣೆಮಾಡಿ, ರಕ್ತವಸ್ತ್ರವನ್ನುಟ್ಟು ಬಂದಿರುವನು.

೫೨. ಚಿನ್ನದ ಸೊಂಟಪಟ್ಟಿಯನ್ನು ಧರಿಸಿರುವನು. ಸುವರ್ಣಮಯವಾದ ಕುಂಡಲಗಳುಳ್ಳವನಾಗಿ ಕಾಣುವನು. ಹಂಸಧ್ವಜನಾಗಿ ದೇವಾಸುರರಿಂದ ನಮಸ್ಕರಿಸಲ್ಪಡುತ್ತಲಿರುವನು.

೫೩. ಸಾವಿತ್ರೀದೇವಿಯೂ ಬ್ರಹ್ಮನೊಡನೆಯೇ ಬಂದಿರುವಳು. ಹಾಗೆಯೇ ಅಗಸೇಹೂವಿನಂತೆ ಶುಭ್ರನಾಗಿ, ಹೊಂಗೆಯ ಎಲೆಯಂತೆ ಕಾಂತಿಯುಳ್ಳವನಾಗಿರುವನು. ಮಹಾವಿಷ್ಣುವೂ ಇಲ್ಲಿಗೆ ಬಂದಿರುವನು.

ಪೀತಾಂಬರಧರಃ ಶ್ಯಾಮಃ ಪೀತಗಂಧಾನುಲೇಪನಃ ।
ಶಂಖಚಕ್ರಗದಾಧಾರೀ ಶಾರ್ಙ್ಗೀ ಗರುಡವಾಹನಃ ॥ ೫೪ ॥

ಕಿರೀಟೀ ಕುಂಡಲೀ ಹಾರೀ ಕೌಸ್ತುಭಾಭರಣಾನ್ವಿತಃ ।
ಕೇಯೂರವಲಯಾಪೀಡಃ ಪೀನವಕ್ಷಾ ಗದಾನ್ವಿತಃ ॥ ೫೫ ॥

ಚಾಮೀಕರಸುಮಾಲಾಭಿರ್ದೀಪ್ಯಮಾನೋ ವಿರಾಜತೇ ।
ಸೂರ್ಯಾಯುತಪ್ರತೀಕಾಶೋ ನೀಲೋತ್ಪಲದಲೇಕ್ಷಣಃ ॥ ೫೬ ॥

ಕ್ಷೀರೋದಾರ್ಣವಶಾಯೀ ಚ ನೀಲಜೀಮೂತನಿಃಸ್ವನಃ ।
ರಮಾಮರ್ದಿತಸರ್ವಾಂಗಃ ಶೇಷಪರ್ಯಂಕಲಾಲಸಃ ॥ ೫೭ ॥

ಗುರುಣಾಂ ಚ ಗುರುರ್ದೇವ ಈಶ್ವರಾಣಾಮಪೀಶ್ವರಃ ।
ವರದೋ ಭವ ವಾತ್ಸಲ್ಯೋ ದೈತ್ಯಕೋಟಿಭಯಂಕರಃ ॥ ೫೮ ॥

---

೫೪. ಮಹಾವಿಷ್ಣುವು ಪೀತಾಂಬರವನ್ನುಟ್ಟಿರುವನು. ಪೀತವರ್ಣದ ಗಂಧವನ್ನು ಬಳಿದುಕೊಂಡಿರುವನು.ಶಂಖ ಚಕ್ರ ಗದೆಗಳನ್ನು ಧರಿಸಿ, ಗರುಡವಾಹನನಾಗಿ ಕಾದಿರುವನು.

೫೫. ಕಿರೀಟ, ಕುಂಡಲ, ಹಾರ, ಕೌಸ್ತುಭವೆಂಬ ರತ್ನ, ಕೈಬಳೆ, ಇವೇ ಮೊದಲಾದ ಆಭರಣಗಳಿಂದ ಕೂಡಿ ಗದಾಧಾರಿಯಾಗಿ ವಿಶಾಲೋರಸ್ಕನಾಗಿ ನಿಂತಿರುವನು.

೫೬. ಸುವರ್ಣದ ಹಾರಗಳಿಂದ ಕೂಡಿ, ನೀಲೋತ್ಪಲದಂತಿರುವ ಕಣ್ಣುಗಳಿಂದ ಸುಂದರನಾಗಿರುವ ವಿಷ್ಣುವು ಹತ್ತು ಸಾವಿರ ಸೂರ್ಯರಂತೆ ಹೊಳೆಯುತ್ತಿರುವನು.

೫೭. ಕ್ಷೀರಸಮುದ್ರಶಾಯಿಯೂ, ನೀಲಮೇಘಶ್ಯಾಮಲನೂ, ಲಕ್ಷ್ಮಿಯಿಂದ ಆಲಿಂಗಿತವಾದ ದೇಹವುಳ್ಳವನೂ, ಶೇಷಶಾಯಿಯೂ ಆದ ವಿಷ್ಣುವು ಕಾದು ನಿಂತಿರುವನು.

೫೮ ಗುರುಗಳಿಗೆ ಗುರುವಾಗಿ, ಈಶ್ವರರಿಗೆ ಈಶ್ವರನಾಗಿ, ದೈತ್ಯರಿಗೆ ಭಯಂಕರನಾಗಿ ವರದನಾಗಿರುವ ವಿಷ್ಣುವು ನಿನಗಾಗಿ ಬಂದಿರುವನು.

ಆಗತೋಽಯಂ ಮಹಾದೇವ ವಿಷ್ಣುಃ ಪ್ರಿಯತರಸ್ತವ ।
ತಪ್ತಚಾಮೀಕರಪ್ರಖ್ಯೋ ವಜ್ರಹಸ್ತೋ ಮಹಾಬಲಃ ।
ಪಟ್ಟಾಂಶುಕಪರೀಧಾನೋ ಹೇಮಮಾಲಾವಿಭೂಷಿತಃ ॥ ೫೯ ॥

ಪ್ರಖ್ಯಾತವೀರ್ಯೋ ಬಲವೃತ್ರಹಂತಾ ।
ಬಾಲಾರ್ಕಭಾಸೋ ಹರಿಚಂದನಾಂಕಃ ।
ಪುನ್ನಾಗನಾಗೈರ್ವಕುಲೈಶ್ಚ ಜುಷ್ಟೋ ।
ಮುಕ್ತಾಫಲಾಲಂಕೃತಕಂಠದೇಶಃ ॥ ೬೦ ॥

ಅಯಂ ಸಮಾಗತಃ ಶಕ್ರೋ ವಹ್ನಿರ್ವೈವಸ್ವತಸ್ತಥಾ ।
ನಿಋತಿರ್ವರುಣೋ ವಾಯುಃ ಕುಬೇರಶ್ಚ ಸಮಾಗತಃ ॥ ೬೧ ॥

ಈಶಾನಶ್ಚ ಮಹಾಭಾಗಸ್ತ್ರಿಂಶತ್ಕೋಟಿಗಣೈರ್ವೃತಃ ।
ಆಗತಸ್ತ್ರಿಜಗದ್ಯೋನೇ ಪಿನಾಕೀ ಚ ಗಣೇಶ್ವರಃ ॥ ೬೨ ॥

---

೫೯. ಮಹಾದೇವನೇ, ನಿನಗೆ ಅತ್ಯಂತ ಪ್ರಿಯನಾದ ಮಹಾವಿಷ್ಣುವು ಇಲ್ಲಿಗೆ ಬಂದು ನಿಂತಿರುವನು. ಹಾಗೆಯೇ, ಕಾದಸುವರ್ಣದಂತೆ ಕಾಂತಿಯುಳ್ಳ ವಜ್ರಾಯುಧಧಾರಿಯಾದ, ಮಹಾಬಲಿಷ್ಠನಾದ, ಪಟ್ಟಾಂಶುಕಧಾರಿಯಾದ ಇಂದ್ರನು ಸುವರ್ಣಮಾಲಾಧಾರಿಯಾಗಿ ಇಲ್ಲಿಗೆ ಬಂದಿರುವನು.

೬೦. ಬಲಿಷ್ಠನೂ, ವೃತ್ರಾರಿಯೂ, ಸೂರ್ಯನಂತೆ ತೇಜಸ್ಸುಳ್ಳವನೂ ಆಗಿ, ಪುನ್ನಾಗ, ನಾಗ, ವಕುಲ, ಮೊದಲಾದ ಪುಷ್ಪಗಳಿಂದ ಅಲಂಕೃತನಾಗಿ, ಮುತ್ತಿನ ಕಂಠಹಾರವನ್ನು ಹಾಕಿಕೊಂಡು ಇಂದ್ರನು ಶೋಭಿಸುತ್ತಿರುವನು.

೬೧-೬೨. ಪರಮೇಶ್ವರನೇ, ಅಂಥ ಇಂದ್ರನು ಈಗ ಅಗ್ನಿ, ಯಮ, ನಿಋತಿ, ವರುಣ, ವಾಯು, ಕುಬೇರ, ಈಶಾನ, ಇವರೊಡನೆಯೂ, ಮೂವತ್ತು ಕೋಟಿ ದೇವಸೈನ್ಯಗಳಿಂದಲೂ, ಕೂಡಿ ಬಂದಿರುವನು.

ದಶಕೋಟಿಗಣೈರ್ಯುಕ್ತಃ ಕಾಲಕಂಠಸ್ತಥೈವ ಚ ।
ಸಪ್ತಕೋಟಿಗಣೈರ್ಯುಕ್ತೋ ಘಂಟಾಕರ್ಣೋ ಮಹಾಬಲಃ ॥ ೬೩ ॥

ದಶಕೋಟಿಗಣೈರ್ಯುಕ್ತೋ ವಸುಘೋಷೋ ಮಹಾಬಲಃ ।
ಚತುಷ್ಕೋಟಿಗಣೈರ್ದಂಡೀ ಶಿಖಂಡೀ ದಶಕೋಟಿಭಿಃ ॥ ೬೪ ॥

ಷಡ್ಭಿರ್ಮಯೂರವದನಃ ಸಿಂಹಾಸ್ಯೋ ದಶಕೋಟಿಭಿಃ ।
ಸಪ್ತಕೋಟಿಗಣೈರ್ಯುಕ್ತಃ ಕಿರೀಟೀ ಚ ಸಮಾಗತಃ ॥ ೬೫ ॥

ಕಾಲಾಂತಕಸ್ತು ದಶಭಿರ್ನಕುಲೀ ದಶಕೋಟಿಭಿಃ ।
ಷಡ್ಭಿಸ್ತು ಮುಂಡಮಾಲೀ ಚ ತ್ರಿಶೂಲೀ ಪಂಚಕೋಟಿಭಿಃ ॥ ೬೬ ॥

ಅಷ್ಟಾಭಿರ್ವಿಶ್ವಮಾಲೀ ಚ ತ್ರಿಮೂರ್ತಿರ್ನವಕೋಟಿಭಿಃ ।
ಏತೇ ಗಣೇಶ್ವರಾಸ್ಸರ್ವೇ ತಥಾ ಚಾನ್ಯೇ ಗಣೇಶ್ವರಾಃ ॥ ೬೭ ॥

---

೬೩. ಪಿನಾಕಪಾಣಿಯಾದ ಗಣಪತಿಯು ಹತ್ತುಕೋಟಿ ಸೈನ್ಯದೊಡಗೂಡಿ ಬಂದಿರುವನು. ಕಾಲಕಂಠನೂ, ಘಂಟಾಕರ್ಣನೂ, ಏಳು ಕೋಟಿ ಸೈನಿಕರಿಂದ ಸೇರಿ ಬಂದಿರುವರು.

೬೪. ವಸುಘೋಷನು ಹತ್ತುಕೋಟಿ ಗಣಗಳಿಂದಲೂ, ದಂಡಿಯು ನಾಲ್ಕು ಕೋಟಿಗಳಿಂದಲೂ, ಶಿಖಂಡಿಯು ಹತ್ತುಕೋಟಿಗಣಗಳಿಂದಲೂ, ಬಂದು ನಿಂತಿರುವನು.

೬೫-೬೬. ಮಯೂರವದನನು ಆರುಕೋಟಿ ಸೈನ್ಯವನ್ನೂ, ಸಿಂಹಾಸ್ಯನು ಹತ್ತುಕೋಟಿ ಸೈನ್ಯವನ್ನೂ, ಕಿರೀಟಿಯು ಏಳುಕೋಟಿಯನ್ನೂ, ಕಾಲಾಂತಕನು ಹತ್ತುಕೋಟಿಯನ್ನೂ, ನಕುಲಿಯು ಹತ್ತುಕೋಟಿಯನ್ನೂ, ಮುಂಡಮಾಲಿಯು ಆರುಕೋಟಿಯನ್ನೂ, ತ್ರಿಶೂಲಿಯು ಐದುಕೋಟಿ ಸಂಖ್ಯೆಯ ಸೈನ್ಯಗಳನ್ನೂ ತಂದಿರುವರು.

೬೭. ವಿಶ್ವಮಾಲಿಯು ಎಂಟುಕೋಟಿ ಸೈನ್ಯದಿಂದಲೂ, ತ್ರಿಮೂರ್ತಿಯು ಒಂಭತ್ತುಕೋಟಿ ಸೈನ್ಯದಿಂದಲೂ ಕೂಡಿ ಈ ಗಣನಾಯಕರೆಲ್ಲಾ ಬಂದಿರುವರು. ಇವರಲ್ಲದೆ ಇನ್ನೂ ಅನೇಕ ಜನ ಗಣನಾಯಕರು, ಅಸಂಖ್ಯಾತವಾದ ಸೈನ್ಯದೊಡನೆ ಬಿಜಯಮಾಡಿಸಿರುವರು

ಯೇಷಾಂ ಸಂಖ್ಯಾ ನ ಜಾನಂತಿ ಬ್ರಹ್ಮಾದ್ಯಾ ದೇವತಾಗಣಾಃ ।
ಆಗತಾನಾಂ ಮಹಾದೇವ ಶೃಣು ಕೋಲಾಹಲಂ ವಿಭೋ ॥ ೬೮ ॥

ಅಮರೇಶಃ ಪ್ರಭಾಸಶ್ಚ ಪುಷ್ಕರೋ ನೈಮಿಶಸ್ತಥಾ ।
ಆಷಾಢೀ ದಂಡೀ ಮುಂಡೀ ಚ ಭಾರಭೂತಿಸ್ತಥಾಕುಲೀ ॥ ೬೯ ॥

ತೀರ್ಥಾಧಿಪತಯೋ ದೇವಾ ಆಗತಾ ದಿವ್ಯಮೂರ್ತಯಃ ।
ಏತೇ ಗುಹ್ಯಾಷ್ಟಕಾ ದೇವ ಕಾಮರೂಪಾ ಮಹಾಬಲಾಃ ॥ ೭೦ ॥

ತವಾಜ್ಞಯಾಗತಾ ದೇವ ಬ್ರಹ್ಮಾಂಡಾಂತರವಾಸಿನಃ ।
ಕೋಟಿಕೋಟಿಗಣೈರ್ಯುಕ್ತಾ ದೇವದೇವ ಮಹೇಶ್ವರ ॥ ೭೧ ॥

ವಿಶ್ವೇಶ್ವರಜಟೋದ್ಭೂತಾ ಸಿಂಧುಶ್ಚೈವ ಸರಸ್ವತೀ ।
ಯಮುನಾ ಗಂಡಕೀ ನಾಗಾ ವಿಪಾಶಾ ನರ್ಮದಾ ಶಿವಾ ॥ ೭೨ ॥

---

೬೮. ಮಹೇಶ್ವರನೇ, ಈಗ ಬಂದಿರುವ ಸೈನಿಕರ ಸಂಖ್ಯೆಯನ್ನು ಎಣಿಸಿ ಹೇಳಲು ಬ್ರಹ್ಮಾದಿಗಳಿಗೂ ಸಾಧ್ಯವಿಲ್ಲವಾಗಿದೆ. ಮಹಾದೇವನೇ, ಸೈನಿಕರ ಕೋಲಾಹಲ ಧ್ವನಿಯನ್ನು ಕೇಳು.

೬೯-೭೦. ಅಮರೇಶ, ಪ್ರಭಾಸ, ಪುಷ್ಕರ, ನೈಮಿಶ, ಆಷಾಢೀ, ದಂಡೀ, ಮುಂಡೀ, ಭಾರಭೂತಿ, ಕುಲೀ ಇವರೇ ಮೊದಲಾದ ತೀರ್ಥಾಧಿಪತಿಗಳೂ, ಎಂಟು ಜನ ಗುಹ್ಯಕರೂ, ಕಾಮರೂಪಿಗಳೂ ಇವರೆಲ್ಲರೂ ಬಂದಿರುವರು.

೭೧. ಬ್ರಹ್ಮಾಂಡದೊಳಗೆ ಅಡಗಿರುವ ಕೋಟಿ ಸಂಖ್ಯೆಯ ಸೈನಿಕರಿಂದ ಕೂಡಿ ಸಮಸ್ತ ಸೇನಾಪತಿಗಳೂ ಆಗಮಿಸಿರುವರು.

೭೨-೭೭. ಅಲ್ಲದೆ ವಿಶ್ವೇಶ್ವರನ ಜಟಾಜೂಟದಿಂದ ಉದ್ಭವಿಸಿದ, ಸಿಂಧು, ಸರಸ್ವತಿ, ಯಮುನಾ, ಗಂಡಕೀ, ನಾಗ, ವಿಪಾಶಾ, ನರ್ಮದಾ, ಶಿವಾ, ರುಕ್ಮಾ, ಘಂಟಾ, ನಿರ್ವಿಂಧ್ಯಾ, ದೇವಿಕಾ, ದೃಷದ್ವತೀ, ಶತದ್ರು, ಪಯೋಷ್ಣೀ, ಚಂದ್ರಭಾಗಾ, ಗೋಮತೀ, ಚರ್ಮಣ್ವತೀ, ಕಾವೇರೀ, ಸರಯೂ, ಪರಾವತೀ, ಧೂತಪಾಪಾ, ಸಾರಥ್ಯಾ, ಮೋಣಾ, ಮಾಲಾ, ಸುಗಂಧಿಕಾ, ಜಂಬೂ, ತಾಪೀ, ವನೀ,

ರುಕ್ಮಾ ಘಂಟಾ ಚ ನಿರ್ವಿಂಧ್ಯಾ ದೇವಿಕಾ ಚ ದೃಷದ್ವತೀ ।
ಶತದ್ರುಶ್ಚ ಪಯೋಷ್ಣೀ ಚ ಚಂದ್ರಭಾಗಾ ಚ ಗೋಮತೀ ॥ ೭೩ ॥

ಚರ್ಮಣ್ವತೀ ಚ ಕಾವೇರೀ ಸರಯೂಶ್ಚ ಪರಾವತೀ ।
ಧೂತಪಾಪಾ ಚ ಸಾರಥ್ಯಾ ಮಾಣಾ ಮಾಲಾ ಸುಗಂಧಿಕಾ ॥ ೭೪ ॥

ಜಂಬೂ ತಾಪೀ ವನೀ ಶೂರಾ ಕೌಶಿಕೀ ಕುಮುದಾ ಕರಾ ।
ಮಂದಾಕಿನೀ ಚಂದ್ರಲೇಖಾ ಚಂಪಕಾಮೋದವಾಹಿನೀ ॥ ೭೫ ॥

ಐರಾವತೀ ಕಾಮವೇಗಾ ಪ್ರೇಂಖಲಾ ಕಾಮಚಾರಿಣೀ ।
ಪೂರ್ಣಭದ್ರಾ ಮಹಾಮೋದಾ ಗಂಭೀರಾವರ್ತನೀ ಸ್ಮೃತಾ ॥ ೭೬ ॥

ಮೇಘಮಾಲಾ ಮೇಘವರ್ಣಾ ಸದಾನೀರಾ ಚ ನಂದಿನೀ ।
ವೇದಾ ವೇದವತೀ ವೀಣಾ ಸಿತಾ ಚಿತ್ರೋತ್ಪಲಾ ತಥಾ ॥ ೭೭ ॥

ವೇತ್ರವತೀ ಚ ವೃತ್ರಘ್ನೀ ಪಿಪ್ಪಲಾ ಜಂಜಲೀ ತಥಾ ।
ಖರಜಾ ಕುಮುದಾ ಶಿಕ್ಷಾ ಕೌಶಿಕೀ ನಿಷಧಾ ಸಿತಾ ॥ ೭೮ ॥

ಶೂರಾ, ಕೌಶಿಕೀ, ಕುಮುದಾ, ಕರಾ, ಮಂದಾಕಿನೀ, ಚಂದ್ರಲೇಖಾ, ಚಂಪಕಾ, ಆಮೋದವಾಹಿನೀ, ಐರಾವತೀ, ಕಾಮವೇಗಾ, ಪ್ರೇಂಖಲಾ, ಕಾಮಚಾರಿಣೀ, ಪೂರ್ಣಭದ್ರಾ, ಮಹಾಮೋದಾ, ಗಂಭೀರಾವರ್ತಿನೀ, ಮೇಘಮಾಲಾ, ಮೇಘವರ್ಣಾ, ಸದಾನೀರಾ, ನಂದಿನೀ, ವೇದಾ, ವೇದವತೀ, ವೀಣಾ, ಸಿತಾ, ಚಿತ್ರೋತ್ಪಲಾ, ಮುಂತಾದ ನದಿಗಳೂ ಸಹ ಇಲ್ಲಿಗೆ ಬಂದಿರುವುವು.

೭೮-೮೧. ವೇತ್ರವತೀ, ವೃತ್ರಘ್ನೀ, ಪಿಪ್ಪಲಾ, ಜಂಜಲೀ, ಖರಜಾ, ಕುಮುದಾ, ಶಿಕ್ಷಾ, ಕೌಶಿಕೀ, ನಿಷಧಾ, ಸಿತಾ, ವೈತರಣೀ, ಸಿನೀವಾಲೀ, ವೇಗವತೀ, ಗೌರೀ, ಕೃಷ್ಣಾ ದುರ್ಗಾ, ತುಂಗಭದ್ರಾ, ಉತ್ಪಲಾವತೀ, ಸ್ವರ್ಣಾ, ಭೀಮರಥೀ, ಶುದ್ಧಾ, ಕೃತಮಾಲಾ, ತರಂಗಿಣೀ ಇವೇ ಮೊದಲಾದ ಮಹಾನದಿಗಳೂ ಪಾಪಪರಿ

ವೈತರಿಣೀ ಸಿನೀವಾಲೀ ವೇಗವತೀ ಪುನಃ ಪುನಃ ।
ಗೌರೀ ಕೃಷ್ಣಾ ತಥಾ ದುರ್ಗಾ ತುಂಗಭದ್ರೋತ್ಪಲಾವತೀ ॥ ೭೯ ॥

ಸ್ವರ್ಣಾ ಭೀಮರಥೀ ತುದ್ಧಾ ಕೃತಮಾಲಾ ತರಂಗಿಣೀ ।
ಏತಾ ದೇವ ಮಹಾನದ್ಯಃ ಪಾವನಾಃ ಕಲ್ಮಷಾಪಹಾಃ ॥ ೮೦ ॥

ಮೂರ್ತಿಮತ್ಯಸ್ತ್ರವೇಶಾನ ಉತ್ಸವೇ ತ್ವಿಹ ಆಗತಾಃ ।
ಸರ್ವಾ ಏತಾ ಮಹಾದೇವ ಪಶ್ಯ ಕಾರುಣ್ಯವಾರಿಧೇ ॥ ೮೧ ॥

ಭವಂತಿ ಕೃತಿನ ಸ್ಸರ್ವೇ ತ್ವಯಿ ದೃಷ್ಟೇ ಮಹೇಶ್ವರ ।
ಏವಮುಕ್ತ್ವಾ ತದಾ ನಂದೀ ದೇವದೇವಸ್ಯ ಜಾಗ್ರತಃ ॥ ೮೨ ॥

ಪಪಾತ ದಂಡವದ್ಭೂಮೌ ಭಕ್ತ್ಯಾ ಪರಮಯಾ ಯುತಃ ।
ನಂದಿನಂ ತಂ ಮಹಾತ್ಮಾನಂ ದೃಷ್ಟ್ವಾ ವಿಶ್ವೇಶ್ವರಃ ಪ್ರಭುಃ ॥ ೮೩ ॥
ಪ್ರೀತೋ ಭೂತ್ವಾಹ ಕಾಲಾರಿರ್ಮಂದರೇ ಚಾರುಕಂದರೆ ॥ ೮೪ ॥

ಹಾರಕಗಳಾಗಿ ಇಲ್ಲಿಗೆ ಬಂದು ನೆರೆದಿದೆ. ಪರಶಿವನೇ, ಈ ನದಿಗಳೆಲ್ಲಾ ಮೂರ್ತಿಮತ್ತಾಗಿ ಬಂದು ಕಾರುಣ್ಯವಾರಿಧಿಯಾದ ನಿನ್ನ ಎದುರಿನಲ್ಲಿ ನಿಂತಿವೆ.

೮೨. ಮಹೇಶ್ವರನೇ, ಈಗ ಬಂದಿರುವವರೆಲ್ಲರೂ ನಿನ್ನನ್ನು ನೋಡಿ ಧನ್ಯರಾಗಬೇಕೆಂದಿರುವರು, ಎಂದು ಹೇಳುತ್ತಾ ನಂದೀಶ್ವರನು ಮಹೇಶ್ವರನ ಎದುರಿನಲ್ಲಿ ಸುಮ್ಮನೇ ನಿಂತನು.

೮೩–೮೪. ಮತ್ತೆ ದೇವದೇವನಾದ ಶಂಕರನಿಗೆ ನಂದಿಯು ಸಾಷ್ಟಾಂಗ ನಮಸ್ಕಾರವೆಸಗಿ ಅವನ ಅಪ್ಪಣೆಯನ್ನೇ ಎದುರು ನೋಡುತ್ತಿದ್ದನು. ಅವನನ್ನು ನೋಡಿ ಕಾಲಾರಿಯಾದ ಸ್ವಾಮಿಯು ಹೀಗೆ ಹೇಳಲಾರಂಭಿಸಿದನು.

ಇದಂ ಯಃ ಪಠತೇ ನಿತ್ಯಂ ಶೃಣುಯಾದ್ವಾಪಿ ಭಕ್ತಿತಃ ।
ಪ್ರೀತಾಸ್ಸ್ಯುರ್ದೇವತಾಸ್ಸರ್ವಾ ಸ್ತಸ್ಯಾಭೀಷ್ಟಫಲಪ್ರದಾಃ ॥ ೮೫ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಕಾಲಾಗ್ನ್ಯಾದ್ಯಾಗಮನ ಕಥನಂ ನಾಮ
ಸಪ್ತಪಂಚಾಶೋಽಧ್ಯಾಯಃ.

---

೮೫. ಈ ಅಧ್ಯಾಯವನ್ನು ಯಾರು ನಿತ್ಯವೂ ಭಕ್ತಿಯಿಂದ ಪಠಿಸುವರೋ, ಅವರು ಸಮಸ್ತ ದೇವತೆಗಳ ಪ್ರೀತಿಗೂ ಪಾತ್ರರಾಗುವರು. ಅಲ್ಲದೆ ತಮ್ಮ ಎಲ್ಲಾ ಇಷ್ಟಾರ್ಥಗಳನ್ನೂ ಪಡೆದು ಸುಖಿಗಳಾಗುವರು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕಸಂವಾದ
ರೂಪವಾಗಿ ಕಾಲಾಗ್ನಿ, ಇವರೇ ಮೊದಲಾದ ಶಿವಗಣಗಳ ಆಗಮನ ವೃತ್ತಾಂತ
ವನ್ನು ಪ್ರತಿಪಾದಿಸುವ ಐವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಅಷ್ಟಪಂಚಾಶೋಽಧ್ಯಾಯಃ

॥ ಸೂತ ಉವಾಚ ॥

ಅಥಾಸೌ ಹಿಮವಾನ್ ವಿಪ್ರಾ ದೇವೀಮಾತ್ಮಸುತಾಮುಮಾಂ ।
ಪ್ರದಾನಾರ್ಥಂ ಮಹೇಶಾಯ ಸಂಪ್ರಾಪ್ತೋ ಮಂದರಂ ಕ್ಷಣಾತ್ ॥ ೧ ॥

ಆಹ ದೃಷ್ಟ್ವಾ ಗಿರಿಂ ನಂದೀ ದೇವದೇವಂ ಪಿನಾಕಿನಂ ।
ವಕ್ತುಕಾಮಸ್ಸಮಾಯಾತೋ ಭಗವಾನ್ ಪರ್ವತೇಶ್ವರಃ ॥ ೨ ॥

ಶ್ರುತ್ವಾ ತು ವಚನಂ ಶ್ಲಕ್ಷ್ಣಂ ವ್ಯಕ್ತಂ ನಂದೀಮುಖಾತ್ತದಾ ।
ಮೇಘಗಂಭೀರಯಾ ವಾಚಾ ಮಹಾದೇವೋಽಬ್ರವೀದಿದಂ ॥ ೩ ॥

ಐವತ್ತೆಂಟನೆಯ ಅಧ್ಯಾಯ.

೧. ಅನಂತರ ಹಿಮವಂತನು ತನ್ನ ಮಗಳಾದ ಉಮೆಯನ್ನು ಪರಮೇಶ್ವರನಿಗೆ ಅರ್ಪಿಸುವ ಉದ್ದೇಶದಿಂದ ಶಂಕರನೊಡನೆ ಮಾತನಾಡಲು ಮಂದರ ಪರ್ವತಕ್ಕೆ ಬಂದನು.

೨. ಹಿಮವಂತನನ್ನು ಕಂಡು ನಂದಿಯು ಶಂಕರನ ಸಮೀಪಕ್ಕೆ ಹೋಗಿ, ಪರ್ವತರಾಜನು ಮಾತನಾಡಬೇಕೆಂದಿರುವುದನ್ನು ತಿಳಿಸಿದನು.

೩. ಈ ನಂದಿಯ ಮಾತನ್ನು ಕೇಳಿ, ಈಶ್ವರನು ಗಂಭೀರವಾದ ವಾಣಿಯಿಂದ ಹೀಗೆ ಹೇಳಿದನು.

ಪದತ್ವಯಂ ಗಿರಿಶ್ರೇಷ್ಠೋ ಹೃದಯೇ ಯತ್ಪ್ರತಿಷ್ಠಿತಂ ।
ಕಾಮಸ್ತಸ್ಯ ಚಿರಾದೇವ ಭವಿಷ್ಯತಿ ನ ಸಂಶಯಃ ॥ ೪ ॥

ಏವಮುಕ್ತಸ್ತದಾ ವಿಪ್ರಾ ದೇವದೇವೇನ ಶಂಭುನಾ ।
ಉವಾಚ ಗಿರಿಶಾರ್ದೂಲೋ ಭೂತ್ವಾಗ್ರೇಽವನತಾಂಜಲಿಃ ॥ ೫ ॥

॥ ಹಿಮವಾನುವಾಚ ॥

ಯಾಽಽಸೀತ್ಪೂರ್ವಂ ಚ ತೇ ಪತ್ನೀ ಸಾವತೀರ್ಣಾ ಗೃಹೇ ಮಮ ।
ತಾಮೇವ ತವ ದಾನಾರ್ಥಮಾಗತೋಽಸ್ಮಿ ಮಹೇಶ್ವರ ॥ ೬ ॥

ಅಮೀ ಬ್ರಹ್ಮಾದಯೋ ದೇವಾಸ್ತ್ವತ್ಸಮೀಪಮಿಹಾಗತಾಃ ।
ಕಿಂ ಗೋತ್ರಮಿತಿ ಪೃಚ್ಛಾಮಿ ಹ್ಯೇಷಾಮಗ್ರೇ ವಿಭೋ ವದ ॥ ೭ ॥

ಶ್ರುತ್ವಾ ತು ಭಾರತೀಂ ತಸ್ಯ ವಿಶ್ವೇಶೋ ವಿಶ್ವವಂದಿತಃ
ಕಿಂ ಗೋತ್ರಮಿತಿ ಸಂಚಿಂತ್ಯ ನೋತ್ತರಂ ಪ್ರಸಸರ್ಜ ಹ ॥ ೮ ॥

---

೪. " ನಂದಿಯೇ, ಈಗ ಬಂದಿರುವ ನಗರಾಜನ ಮನಸ್ಸಿನಲ್ಲಿರುವುದನ್ನು, ಜಾಗ್ರತೆಯಾಗಿ ಹೇಳು. ಅದು ಜಾಗ್ರತೆಯಾಗಿಯೇ ಸಿದ್ಧಿಸುವುದು. ಸಂಶಯವಿಲ್ಲ.

೫. ಹೀಗೆ ಹೇಳಲ್ಪಟ್ಟ ಶಂಭುವಿನ ಮಾತುಗಳನ್ನು ಕೇಳಿ ಗಿರಿರಾಜನು ವಿನೀತನಾಗಿ ಕೈಜೋಡಿಸಿ ನಿಂತು ಹೀಗೆ ಹೇಳಲಾರಂಭಿಸಿದನು.

೬. " ಶಂಕರನೇ, ಹಿಂದೆ ನಿನ್ನ ಪತ್ನಿಯಾಗಿದ್ದ ದೇವಿಯೇ ಈಗ ನನ್ನ ಮನೆಯಲ್ಲಿ ಅವತರಿಸಿರುವಳು. ಈಗ ಪುನಃ ಆ ದೇವಿಯನ್ನೇ ನಿನಗೆ ಅರ್ಪಿಸಲು ಇಲ್ಲಿಗೆ ಬಂದಿರುವೆನು.

೭ ಪ್ರಕೃತ ನಿಮ್ಮ ಗೋತ್ರವಾವುದು? ಎಂದು ಇಲ್ಲಿ ನೆರೆದಿರುವ ಬ್ರಹ್ಮಾದಿಗಳ ಎದುರಿನಲ್ಲಿ ಕೇಳಲು ಇಷ್ಟಪಡುವೆನು.".

೮. ಎಂಬೀ ಪರ್ವತರಾಜನ ಪ್ರಶ್ನೆಗೆ ಶಂಕರನು ಯಾವ ಉತ್ತರವನ್ನೂ ಹೇಳದೆ ತನ್ನ ಗೋತ್ರವನ್ನು ಯೋಚಿಸಲಾರಂಭಿಸಿದನು.

ದೃಷ್ಟ್ವಾ ನಿರುತ್ತರಂ ಶಂಭುಂ ಜಹಸುರ್ದೇವದಾನವಾಃ ।
ಏಷ ಏವ ಜಗದ್ಯೋನಿರ್ಗೋತ್ರಮಸ್ಯ ಕಥಂ ಭವೇತ್ ॥ ೯ ॥

ಇತ್ಯೂಚುರ್ವಿಬುಧಾಃ ಸರ್ವೇ ಹಿಮವಂತಂ ನಗೋತ್ತಮಂ ।
ದೇವಾನಾಂ ಚ ವಚಃ ಶ್ರುತ್ವಾ ಗಿರಿರಾಜೋಽಬ್ರವೀದಿದಂ ॥ ೧೦ ॥

ವಿಶ್ವೇಶ್ವರಂ ಪರಂ ಧಾಮ ಪರಮಾತ್ಮಾನಮವ್ಯಯಂ ।
ಶಾಶ್ವತಂ ಗಿರಿಶಂ ಸ್ಥಾಣುಂ ವಿಶ್ವಾಕಾರಂ ಸನಾತನಂ ॥ ೧೧ ॥

ದತ್ತಾ ದತ್ತಾ ಪುನರ್ದತ್ತಾ ಉಮಾ ಸತ್ಯೇನ ತೇ ಪ್ರಭೋ ।
ತತೋ ಮಹಾನ್ ರವೋ ವಿಪ್ರಾ ಜಯಶಬ್ದಾದಿಮಂಗಲೈಃ ॥ ೧೨ ॥

ದುಂದುಭೀನಾಂ ಚ ವಾದ್ಯಾನಾಮಭವತ್ಸಾಗರೋಪಮಃ ।
ಗೃಹೀತೇತಿ ಶಿವಃ ಪ್ರಾಹ ಪಾರ್ವತೀ ಪರ್ವತೇಶ್ವರಂ ॥ ೧೩ ॥
ತದ್ಧಸ್ತೇ ಭಗವಾನ್ ಶಂಭುರಂಗುಲೀಯಂ ಪ್ರವೇಶಯತ್ ।

೯-೧೦. ಇದನ್ನು ನೋಡಿ ದೇವರಾಕ್ಷಸರೆಲ್ಲರೂ ನಕ್ಕರು. ಅಲ್ಲದೆ ಲೋಕದ ಸೃಷ್ಟಿಗೆ ಇವನೇ ಮೂಲಭೂತನಾದುದರಿಂದ ಈ ಶಂಕರನಿಗೆ ಗೋತ್ರವೆಲ್ಲಿ ಬಂತು? ಎಂದು ದೇವತೆಗಳು ಪರ್ವತರಾಜನಿಗೆ ಹೇಳಲು, ನಗರಾಜನು,

೧೧-೧೨. "ಪರಮೇಶ್ವರನು, ತೇಜೋರೂಪಿಯು, ಜಗದೊಡೆಯನು, ನಾಶ ರಹಿತನು, ಸ್ಥಾಣುವು, ಗಿರೀಶನು, ಪ್ರಪಂಚರೂಪಿಯು, ಸನಾತನನು, ಇಂತಹ ಲೋಕೇಶ್ವರನಿಗೆ ನನ್ನ ಮಗಳಾದ ಪಾರ್ವತಿಯನ್ನು ಸತ್ಯವಾಗಿಯೂ ಅರ್ಪಿಸಿರುವೆನು. ಒಪ್ಪಿಸಿರುವೆನು." ಎಂದು ಘೋಷಿಸಲು, ಅಲ್ಲಿ ನೆರೆದಿದ್ದವರೆಲ್ಲರೂ ಜಯ ಜಯ ಶಬ್ದಮಾಡಿದರು.

೧೩. ಆಗಲೇ ದುಂದುಭಿಗಳ ವಾದ್ಯವು ಭೋರ್ಗರೆಯಿತು. ಪಾರ್ವತಿಯನ್ನು ನಾನು ಪರಿಗ್ರಹಿಸಿರುವೆನು ಎಂದು ಶಂಕರನು ನಗರಾಜನಿಗೆ ಭರವಸೆಕೊಟ್ಟು, ಒಂದು ಉಂಗುರವನ್ನು ಪರ್ವತರಾಜನಿಗೆ ಅನುಗ್ರಹಿಸಿದನು.

ಇಮಂ ಚ ಕಲಶಂ ಹೈಮಮಾದಾಯ ತ್ವಂ ನಗೋತ್ತಮ ।
ಯಾಹಿ ಗತ್ವಾ ತ್ವನೇನೈವ ತಾಮುಮಾಂ ಸ್ನಾಪಯ ತ್ವರಾ । ॥ ೧೪ ॥

ಅನ್ಯೇಷಾಂ ಪರಿಹಾರಾರ್ಥಮೇಷ ಏವ ವಿಧಿಃ ಸದಾ ।
ಜಗತ್ತ್ರಯೇಽಪಿ ನೂನಂ ಸ್ಯಾದ್ವ್ರಜ ತೂರ್ಣಂ ನರಾಧಿಪ ॥ ೧೫ ॥

ತತಸ್ತುಷ್ಟೋ ಮಹಾಶೈಲೋಽಭೋಜಯತ್ಸುಸಮಾಹಿತಃ ।
ಏವಂ ಯಜ್ಞರತೋ ವಿಪ್ರಾಃ ತರ್ಪಣಾಯ ಚರಾಚರಾನ್ ।
ಅಭವದ್ದೇವಮುದ್ದಿಶ್ಯ ಶಂಕರಂ ಸ ಗಿರಿಸ್ತದಾ ॥ ೧೭ ॥

ತಥಾಸ್ಮಿನ್ನಂತರೇ ದೇವೋ ಧರ್ಮಕೇತುರ್ಮಹೇಶ್ವರಃ ।
ಉತ್ಥಿತೋ ಮುನಿಶಾರ್ದೂಲಾಃ ಸಮಾಲೋಕ್ಯ ಚ ಶಾರ್ಙ್ಗಿಣಂ ॥ ೧೮ ॥

ಅಭವಜ್ಜಯಶಬ್ದಾನಾಂ ತುಮುಲೋ ಹಿ ಮಹಾಂಸ್ತದಾ ।
ಪುಷ್ಪವೃಷ್ಟಿರ್ನಿಪಾತಶ್ಚ ಸತ್ಯಲೋಕಾದ್ದ್ವಿಜೋತ್ತಮಾಃ ॥ ೧೯ ॥

---

೧೪. ಅಲ್ಲದೆ ಒಂದು ಚಿನ್ನದ ಕಲಶವನ್ನು ಪರ್ವತರಾಜನಿಗೆ ಕೊಟ್ಟು, ಅದನ್ನು ತೆಗೆದುಕೊಂಡು ಹೋಗಿ ಆ ಕಲಶೋದಕದಿಂದ ಪಾರ್ವತಿಗೆ ಸ್ನಾನಮಾಡಿಸು ಎಂತೆ ಹೇಳಿದನು.

೧೫. ಈ ರೀತಿ ಸ್ನಾನಮಾಡಿಸುವುದು, ಸಮಸ್ತ ದೋಷಗಳ ನಿವೃತ್ತಿಗಾಗಿ. ಮೂರು ಲೋಕಗಳಲ್ಲಿಯೂ ಈ ಪದ್ಧತಿಯುಂಟು, ಎಂದು ಸ್ವಾಮಿಯು ಹೇಳಿ ಗಿರಿರಾಜನನ್ನು ಕಳುಹಿಸಿದನು.

೧೬-೧೭. ಇದರಿಂದ ತುಷ್ಟನಾದ ಗಿರಿರಾಜನು ಎಲ್ಲರಿಗೂ ತೃಪ್ತಿಕರವಾಗಿ ಭೋಜನಮಾಡಿಸಿದನು. ಅಲ್ಲಿಂದ ಚರಾಚರವಸ್ತುಗಳನ್ನೂ ಈ ವಿವಾಹಯಜ್ಞದ ಸಮಾರಂಭದಲ್ಲಿ ತೃಪ್ತಿಗೊಳಿಸಲು ಪ್ರಯತ್ನಿಸಿದನು.

೧೮-೧೯. ಆಗ ಮಹಾದೇವನು ಎದ್ದು ಮಹಾವಿಷ್ಣುವಿನೊಡನೆ ಹೀಗೆ ಹೇಳಿದನು ಆಗಲೇ ಸತ್ಯಲೋಕದಿಂದ ಪುಷ್ಪವೃಷ್ಟಿಯೂ, ಜಯಜಯ ಶಬ್ದವೂ ಅಧಿಕವಾಗಿ ವಿಜೃಂಭಿಸಿತು

ನಾನಾವನಾಧಿಪಾಶ್ಚೈವ ಕ್ರತವಶ್ಚ ಮುದಾನ್ವಿತಾಃ ।
ಕುಸುಮೈರ್ದಿವ್ಯಗಂಧಾಢ್ಯೈರ್ವವೃಷುರ್ಮೇಘವೃಂದವತ್ ॥ ೨೦ ॥

ವೀಣಾವೇಣುಮೃದಂಗಾನಾಂ ದುಂದುಭಿನಾಂ ತಥಾ ರವಃ ।
ಹರಿರ್ವಿರಂಚಿಶಕ್ರಾದ್ಯಾಃ ಪೂರಯಂತಿ ಸುರಾಸ್ತದಾ ॥ ೨೧ ॥

ವಿಪ್ರಾಸ್ತ್ರೈಲೋಕ್ಯನಾದೇನ ವೇದಘೋಷಂ ಪ್ರಚಕ್ರಿರೇ ।
ಗಾಯತ್ರೀ ಚೈವ ಸಾವಿತ್ರೀ ರುದ್ರಕನ್ಯಾಸ್ತಥೈವ ಚ ॥ ೨೨ ॥

ವಿದ್ಯಾಧರ್ಯೋಽಥ ನಾಗಿನ್ಯೋ ದೇವಾನಾಂ ಚ ತಥಾಂಗನಾಃ ।
ಸಿದ್ಧಕನ್ಯಾಮನೋಹಾರ್ಯಾ ಯಕ್ಷಕನ್ಯಾಸ್ತಥೈವ ಚ ॥ ೨೩ ॥

ಮಾತರಃ ಸಪ್ತ ಯಾಶ್ಚೈವ ಯಾಶ್ಚ ನಕ್ಷತ್ರಮಾತರಃ ।
ಗಿರೀಣಾಂ ಚ ತಥಾ ನಾರ್ಯಃ ಸಮುದ್ರಾಶ್ಚ ಸರಾಂಸಿ ಚ ॥ ೨೪ ॥

ಮಂಗಳಂ ಗಾಯಮಾನಾಶ್ಚ ಅರ್ಘ್ಯಮಷ್ಟಾಂಗಸಂಯುತಂ ।
ಸಂಪ್ರಹೃಷ್ಟಾ ದದುಃ ಸರ್ವಾ ದೇವದೇವಸ್ಯ ಪಾದಯೋಃ ॥ ೨೫ ॥

---

೨೦. ಒಡನೆಯೇ ಸಮಸ್ತವನಾಧಿಪತಿಗಳೂ, ಯಾಗಪುರುಷರೂ ತೃಪ್ತರಾಗಿ ದಿವ್ಯಗಂಧ ಹೂವು ಇವುಗಳಿಂದ ಮೇಘಗಳು ಮಳೆ ಸುರಿಸುವಂತೆ ಮಳೆ ಸುರಿಸಿದರು.

೨೧. ದೇವತೆಗಳೂ, ಹರಿ, ಬ್ರಹ್ಮ, ಇಂದ್ರ ಇವರೇ ಮೊದಲಾದವರು ವೀಣಾ, ವೇಣು, ದುಂದುಭಿ ಮೊದಲಾದ ವಾದ್ಯಗಳನ್ನು ಬಾರಿಸಿದರು.

೨೨-೨೩. ಬ್ರಾಹ್ಮಣರು ವೇದಘೋಷಮಾಡಿದರು. ಹಾಗೆಯೇ ಗಾಯತ್ರೀ, ಸಾವಿತ್ರೀ, ರುದ್ರಕನ್ಯೆಯರು. ವಿದ್ಯಾಧರಿಯರು, ನಾಗಸ್ತ್ರೀಯರು, ಇನ್ನೂ ಇತರ ಸ್ತ್ರೀಯರು, ಯಕ್ಷಸ್ತ್ರೀಯರು ಇವರೆಲ್ಲರೂ ಒಟ್ಟಾಗಿ ಮಂಗಳಕರವಾಗಿ ಹಾಡಿದರು.

೨೪-೨೫. ಸಪ್ತಮಾತೃಕೆಯರು, ನಕ್ಷತ್ರಮಾತೃಗಳು, ಗಿರಿಸ್ತ್ರೀಯರು, ಸಮುದ್ರ ಸರೋವರ ಇವರೆಲ್ಲರೂ, ಮಂಗಳವಾದ್ಯಗಳನ್ನು ಬಾರಿಸುತ್ತಾ ಪರಮೇಶ್ವರನ ಪಾದಾರವಿಂದಗಳನ್ನು ಅರ್ಚನೆಮಾಡಿದರು.

ಏತಸ್ಮಿನ್ನಂತರೇ ವಿಪ್ರಾ ಹಿಮವತ್ಸಂಪ್ರಣೋದಿತಃ ।
ಮೈನಾಕಸ್ತತ್ರ ಸಂಪ್ರಾಪ್ತೋ ಹೇಮಕುಂಭಕರಃ ಸುಧೀಃ ॥ ೨೬ ॥

ಸಾಲಂಕಾಯನಪೌತ್ರಸ್ಯ ಗತ್ವಾ ತಸ್ಯಾಗ್ರತಃ ಸ್ಥಿತಃ ।
ತೇನಾಪಿ ದೇವದೇವಸ್ಯ ಜ್ಞಾಪಿತೋ ಗಿರಿರಗ್ರತಃ ॥ ೨೭ ॥

ಅಥಾಸೌ ಭಗವಾನ್ ದೇವೋ ಮಂಡಲೇಶೋ ಜಲಾಶಯಃ ।
ಸ್ನಾಪಯದ್ವೇಧಸಾ ಯುಕ್ತೈಃ ಸಮುದ್ರೈಃ ಶೂಲಪಾಣಿನಂ ॥ ೨೮ ॥

ಸ್ನಾಪ್ಯಮಾನೇ ತದಾ ದೇವೇ ನದ್ಯೋ ವೈ ಸಾಗರಾ ದ್ವಿಜಾಃ ।
ಬಭೂವುಃ ಸಲಿಲೈ ರ್ಯುಕ್ತಾಃ ಕೃಶಾಂಗಾಃ ಸ್ವೇದಸಂಯುತಾಃ ॥ ೨೯ ॥

ಅಥ ತೇ ತ್ರಿದಶಾಃ ಸರ್ವೇ ಸನಾರಾಯಣಕಾ ದ್ವಿಜಾಃ ।
ಪರಂ ವಿಸ್ಮಯಮಾಪನ್ನಾ ಭವಂ ಪಶ್ಯಂತಿ ಚಾದ್ಭುತಂ ॥ ೩೦ ॥

೨೬-೨೭. ಅಷ್ಟರಲ್ಲಿ ಗಿರಿರಾಜನ ಪ್ರೇರಣೆಯಂತೆ ಮೈನಾಕಪರ್ವತವು ಚಿನ್ನದ ಕಲಶವನ್ನು ಹಿಡಿದು, ದೇವದೇವನಾದ ಪರಮೇಶ್ವರನ ಎದುರಿನಲ್ಲಿ ಬಂದು ನಿಂತನು.

೨೮. ಅನಂತರ ಬ್ರಹ್ಮನೊಡನೆ ಮೈನಾಕನು ಸಮಸ್ತ ಸಮುದ್ರಗಳ ತೀರ್ಥಗಳಿಂದ ಶಂಕರನಿಗೆ ಅಭಿಷೇಕಮಾಡಿದನು.

೨೯. ಸ್ವಾಮಿಗೆ ಅಭಿಷೇಕಮಾಡುತ್ತಿರುವಾಗಲೇ ಸಮಸ್ತ ಸಾಗರಗಳೂ, ನದಿಗಳೂ ಕೃಶವಾಗಿ ಅವುಗಳಲ್ಲಿನ ನೀರೆಲ್ಲವೂ ಶಂಕರನ ದೇಹದಲ್ಲಿ ಅಡಗಿಹೋಯಿತು. ಸಾಗರನದಿಗಳು ಬೆವರಿಹೋದುವು.

೩೦. ಅನಂತರ ಸಮಸ್ತ ದೇವತೆಗಳೂ, ವಿಷ್ಣುವೂ, ಆಶ್ಚರ್ಯಪಡುತ್ತಾ ಶಂಕರನನ್ನೇ ನೋಡುತ್ತಲಿದ್ದರು.

ತತೋ ನಿಲೀಯಮಾನಾಸ್ತು ಶರೀರೇ ಶಂಕರಸ್ಯ ತು ।
ನದ್ಯಃ ಸರ್ವಾಃ ಸಮುದ್ರಾಶ್ಚ ಪ್ರಪಶ್ಯಂತಿ ಸುವಿಸ್ಮಿತಾಃ ॥ ೩೧ ॥

ಯೋಗಮಾಯಾಹತಂ ವೀಕ್ಷ್ಯ ತತ್ತೋಯಂ ಜಗತಿ ಸ್ಥಿತಂ ।
ಅಸ್ತುವನ್ ಪಶುಭರ್ತಾರಂ ಬ್ರಹ್ಮಾದ್ಯಾ ದೇವತಾಗಣಾಃ ॥ ೩೨ ॥

ತತಸ್ತೈಸ್ತು ಸ್ತುತೋ ದೇವಃ ಪ್ರಹಸ್ಯ ಭಗವಾನ್ ಭವಃ ।
ವಿಸೃಜ್ಯ ಚ ತದಾ ತೋಯಮಭವತ್ಪೂರ್ವರೂಪಧೃತ್ ॥ ೩೩ ॥

ಏವಂ ಸಾಮ್ಯೇ ಸ್ಥಿತೇ ತಸ್ಮಿನ್ ದೇವದೇವೇ ಪಿನಾಕಿನಿ ।
ಸ್ನಾಪಿತೋಽಸೌ ವಿರಂಚಾದ್ಯೈಸ್ತ್ರಿಮೂರ್ತಿಭಗವಾನ್ ಭವಃ ॥ ೩೪ ॥

ಮೈನಾಕೋಽಪ್ಯಂಜಲಿಂ ಕೃತ್ವಾ ದೇವದೇವಸ್ಯ ಚಾಗ್ರತಃ ।
ಸಂಸ್ಥಿತೋ ಹರ್ಷಸಂಯುಕ್ತೋ ನಿಧಿಂ ಲಬ್ಧ್ವಾ ಯಥಾಽಧನಃ ॥ ೩೫ ॥

---

೩೧. ಆಮೇಲೆ ಶಂಕರನ ದೇಹದಲ್ಲಿ ಸಕಲ ಸಮುದ್ರಗಳ ಮತ್ತು ನದಿಗಳ ನೀರೆಲ್ಲವೂ ಅಡಗಿಹೋಯಿತು. ಇದನ್ನು ಸರ್ವರೂ ನೋಡುತ್ತಲೇ ಇದ್ದರು.

೩೨. ಯೋಗಮಾಯೆಯಿಂದ ಅಡಗಿದ ಜಲರಾಶಿಯನ್ನು ನೋಡಿ ಬ್ರಹ್ಮಾದಿ ದೇವತೆಗಳು ಪಶುಪತಿಯನ್ನು ಬಹುವಾಗಿ ಸ್ತುತಿಸಲಾರಂಭಿಸಿದರು.

೩೩. ಆಮೇಲೆ ಶಂಕರನು ನಗುತ್ತಾ ತನ್ನಲ್ಲಿ ಅಡಗಿದ್ದ ಜಲರಾಶಿಯನ್ನು ಹಿಂದಿನಂತೆ ಸಾಗರಾದಿಗಳಿಗೆ ಬಿಟ್ಟು ಪೂರ್ವರೂಪವನ್ನು ತಾಳಿದನು.

೩೪. ಹೀಗೆ ಶಾಂತನಾದ ಮೇಲೆ ಬ್ರಹ್ಮಾದಿಗಳು ಪುನಃ ಮೂರ್ತಿತ್ರಯಾತ್ಮಕನಾದ ಪರಶಿವನಿಗೆ ಅಭಿಷೇಕಮಾಡಿದರು.

೩೫. ಆಗ ಮೈನಾಕನು ಪರಮೇಶ್ವರನ ಮುಂದೆ ಸಂತೋಷದಿಂದ ಕೈಜೋಡಿಸಿ ನಿಂತು, ನಿಧಿಯನ್ನು ಕಂಡ ಬಡವನಂತೆ ಹಿಗ್ಗಿಹೋದನು.

ವಿಸರ್ಜಿತಸ್ತತಸ್ತೇನ ದೇವದೇವೇನ ಶಂಭುನಾ ।
ತ್ರೈಲೋಕ್ಯತಿಲಕೇ ತಸ್ಮಿನ್ ಯಯೌ ತೂರ್ಣಂ ನಗಾತ್ಮಜಃ ॥ ೩೬ ॥

ತದಂಶುಕಂ ಪರೀಧಾಪ್ಯ ದೇವಿಂ ತಾಮರಸೇಕ್ಷಣಾಂ ।
ಸ್ನಾಪಯಂಸ್ತೇನ ಕುಂಭೇನ ಹರಾಂಘ್ರಿಪತಿತೇನ ಚ ॥ ೩೭ ॥

ನೀರಪಾತಂ ದ್ವಿಜಶ್ರೇಷ್ಠಾಃ ಕೃತಮೇತತ್ಕಪರ್ದಿನಾ ।
ಪಾರ್ವತೇಯವಿಧಿರ್ನೂನಂ ಕುಲಜಾನಾಂ ಸದಾಽನಘಾಃ ॥ ೩೮ ॥

ತತೋ ಭಗವತೀ ದೇವೀ ಹೃಷ್ಟಪುಷ್ಟಾ ತಪೋಮಯೀ ।
ಪಿತುರಭ್ಯಾಶಗಾ ಭೂತ್ವಾ ವಿವೇಶ ಪರಮಾಸನೇ ॥ ೩೯ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಸಾಂಬವಿವಾಹವರ್ಣನಂ ನಾಮಾಷ್ಟ
ಪಂಚಾಶೋಽಧ್ಯಾಯಃ.

---

೩೬. ನಗರಾಜ ಪುತ್ರನಾದ ಮೈನಾಕನು ದೇವದೇವನಾದ ಶಂಭುವಿನಿಂದ ಬೀಳ್ಕೊಂಡು, ಜಾಗ್ರತೆಯಾಗಿ ಹಿಮಾಲಯಪರ್ವತಕ್ಕೆ ಬಂದು ಸೇರಿದನು.

೩೭. ಅಲ್ಲಿ ಕಮಲೇಕ್ಷಣೆಯಾದ ಪಾರ್ವತಿಗೆ ಪರಮೇಶ್ವರನು ಕೊಟ್ಟಿದ್ದ ವಸ್ತ್ರವನ್ನು ಹೊದಿಸಿ, ಪರಮೇಶ್ವರನ ಪಾದೋದಕದಿಂದ ಸ್ನಾನಮಾಡಿಸಿದರು.

೩೮. ಹೀಗೆ ಈಶ್ವರನ ಪಾದದಿಂದ ಬಿದ್ದ ನೀರನ್ನು ಪಾರ್ವತಿಗೆ ಅಭಿಷೇಕ ಮಾಡಿಸಿದುದು ಪಾರ್ವತೇಯರ ಒಂದು ಕುಲಪರಂಪರೆಯಾಗಿ ಬಂದ ಸದಾಚಾರ.

೩೯. ಆಮೇಲೆ ತಪಸ್ವಿನಿಯಾದ ದೇವಿಯು ಸಂತುಷ್ಟಳಾಗಿ, ತಂದೆಯ ಪಕ್ಕದಲ್ಲಿ ಉತ್ಕೃಷ್ಟವಾದ ಆಸನದಲ್ಲಿ ಮಂಡಿಸಿದಳು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತ ಶೌನಕ
ಸಂವಾದ ರೂಪವಾಗಿ ಸಾಂಬವಿವಾಹ ವರ್ಣನೆಯನ್ನು ಪ್ರತಿ
ಪಾದಿಸುವ ಐವತ್ತೆಂಟನೆಯ ಅಧ್ಯಾಯವು
ಮುಗಿದುದು.

॥ ಶ್ರೀ ॥

ಶ್ರೀ ಶಿವಾಯನಮಃ

ಅಥ ಶ್ರೀ ಸೌರಪುರಾಣೇ ಏಕೋನಷಷ್ಟಿತಮೋಽಧ್ಯಾಯಃ.

॥ ಸೂತ ಉವಾಚ ॥

ಅಥಾಯಾಂತಂ ಶಿವಂ ದೃಷ್ಟ್ವಾ ಹಿಮವಾನ್ ಪರ್ವತೇಶ್ವರಃ ।
ಮೇರುಶ್ಚೈವ ಯಥಾಸಂಖ್ಯಂ ರವಿಚಂದ್ರದಿವಾಕರೈಃ ॥ ೧ ॥

ತಥಾ ದೇವೈಃ ಸ ವೇಧಾದ್ಯೈರ್ವೃತಂ (?) ಛತ್ರೇಣ ಸಂಯುತಂ ।
ಜಯೇತ್ಯುಕ್ತ್ವಾ ನಗೇಂದ್ರಸ್ತು ಹ್ಯಾತ್ತಮಾಲ್ಯಾಂಬರಸ್ತದಾ ॥ ೨ ॥

ಉತ್ಥಿತಃ ಸಹಸಾ ವಿಪ್ರಾಃ ಪುಷ್ಪಹಸ್ತೋ ಮಹೇಶ್ವರಃ ।
ಮುದಾ ಪರಮಯಾ ಯುಕ್ತೋ ಭಕ್ತ್ಯಾ ಚಾನನ್ಯಯಾ ದ್ವಿಜಾಃ ॥ ೩ ॥

ವಸ್ತ್ರೈರ್ನಾನಾವಿಧೈಶ್ಚಕ್ರೇ ಮಾರ್ಗಭೂಷಾಂ ತದಾ ಗಿರಿಃ ।
ಪತಾಕಾಭಿರ್ಜಯಂತೀಭಿಃ ಸ್ರಗ್ದಾಮ್ನೈಃ ದಿವ್ಯಗಂಧಿಭಿಃ ॥ ೪ ॥

ಐವತ್ತೊಂಭತ್ತನೆಯ ಅಧ್ಯಾಯ.

೧-೨. ವಿವಾಹಾರ್ಥವಾಗಿ ಸೂರ್ಯ, ಚಂದ್ರರೇ ಮೊದಲಾದ ದೇವತೆಗಳೊಡಗೂಡಿ ಛತ್ರಚಾಮರಾದಿಗಳಿಂದ ಶೋಭಿತನಾಗಿ ಬರುವ ಪರಶಿವನನ್ನು ಎದುರುಗೊಳ್ಳಲು, ಪರ್ವತರಾಜನು ದಿವ್ಯಮಾಲ್ಯಾಂಬರಧಾರಿಯಾಗಿ ಮಾರ್ಗವನ್ನು ಅಲಂಕರಿಸಲು ಅಪ್ಪಣೆಮಾಡಿದನು.

೩. ಒಡನೆಯೇ ಪುಷ್ಪಗಳನ್ನು ಕೈಯ್ಯಲ್ಲಿ ಹಿಡಿದು ಪರಮೇಶ್ವರನಲ್ಲಿ ಅತಿಶಯವಾದ ಭಕ್ತಿಯಿಟ್ಟು, ಮಾರ್ಗಶೋಭಾರಚನೆಗೆ ಪರ್ವತರಾಜನೇ ನಿಂತನು.

೪. ದಾರಿಯುದ್ದಕ್ಕೂ ನಾನಾಜಾತಿಯ ಬಟ್ಟೆಗಳನ್ನೂ, ಧ್ವಜಪತಾಕೆಗಳನ್ನೂ ಕಟ್ಟಿಸಿ, ಸುವಾಸನೆಯುಳ್ಳ ಪುಷ್ಪಮಾಲೆಗಳಿಂದ ಅವುಗಳನ್ನು ಅಲಂಕರಿಸಿದನು.

ಧ್ವಜೈಶ್ಚ ವಿವಿಧಾಕಾರೈಃ ಪಂಚವರ್ಣಮನೋರಮೈಃ ।
ಚಾಮರೈಶ್ಚಂದ್ರವರ್ಣೈಸ್ತು ಲಂಬಕೈಶ್ಚ ಸಮಂತತಃ ॥ ೫ ॥

ಮುಕ್ತಾನಾಂ ಪ್ರಕರೈಶ್ಚೈವ ಪುಷ್ಪಾಣಾಂ ತು ತಥೈವ ಚ ।
ಏವಮಾದ್ಯೈರನೇಕೈಶ್ಚ ಶೋಭಾಂ ಕೃತ್ವಾ ನಗೋತ್ತಮಃ ॥ ೬ ॥

ಸ್ಥಿತಸ್ತು ವೀಕ್ಷ್ಯಮಾಣೋಽಸೌ ವಿಶ್ವವ್ಯಾಪಿನಮೀಶ್ವರಂ ।
ಸಂಪೂರ್ಣಚಂದ್ರವದನಾ ಮದನಾನಲದೀಪಿತಾಃ ॥ ೭ ॥

ಶತಕೋಟ್ಯೋಽಪ್ಸರಾಣಾಂ ತು ನಿರ್ಯಯುಃ ಸಂಮುಖಾಸ್ತು ತಂ ।
ಹೇಮಪಾತ್ರಕರಾಸಕ್ತಾಃ ಪದ್ಮೇಂದೀವರಹಸ್ತಕಾಃ ॥ ೮ ॥

ಮಣಿಪಾತ್ರಾಣಿ ಪೂರ್ಣಾನಿ ದೂರ್ವಾಸಿದ್ಧಾರ್ಥಕಾಂಕ್ಷತೈಃ ।
ದಧಿರೋಚನಮಾದಾಯ ವ್ರೀಹಿಭಿಶ್ಚಾಪಕ್ವೈರ್ಯವೈಃ ॥ ೯ ॥

ಹರಿಚಂದನಲಿಪ್ತಾಂಗಾ ಹರಿಚಂದನಹಸ್ತಕಾಃ ।
ವಿದ್ರುಮಾಂಕುರಹಸ್ತಾಶ್ಚ ತಥೈವೋತ್ಪಲಶೇಖರಾಃ ॥ ೧೦ ॥

---

೫. ಐದುಬಣ್ಣಗಳಿಂದ ಕೂಡಿದ ಧ್ವಜಗಳೂ, ಚಂದ್ರನಂತೆ ಹೊಳೆಯುವ ದೊಡ್ಡ ಚಾಮರಗಳೂ ದಾರಿಯುದ್ದಕ್ಕೂ ಕಟ್ಟಲ್ಪಟ್ಟವು.

೬. ಪರ್ವತರಾಜನು ಮುತ್ತುಗಳ ಮತ್ತು ಹೂಗಳ ಸರಗಳಿಂದಲೂ, ಇನ್ನೂ ವಿಧವಿಧವಾದ ಅಲಂಕಾರ ಸಾಮಗ್ರಿಗಳಿಂದಲೂ ದಾರಿಯನ್ನು ಅಲಂಕರಿಸಿದನು.

೭-೮. ಅಲ್ಲಿ ಪರಮೇಶ್ವರನ ದರ್ಶನ ಮಾಡಲುತ್ಸುಕರಾಗಿ, ಚಂದ್ರಮುಖಿಯರೂ, ಕಾಮಮೋಹಿತರೂ ಆದ ಮೂರುಕೋಟಿ ಅಪ್ಸರಸ್ತ್ರೀಯರು ಚಿನ್ನದ ಕಲಶಗಳನ್ನು ಕೈಯಲ್ಲಿಧರಿಸಿ ಕಮಲ ಹಸ್ತವುಳ್ಳವರಾಗಿ ನಿಂತಿದ್ದರು.

೯-೧೦. ಕೆಲವರು ರತ್ನದ ಪಾತ್ರೆಗಳಲ್ಲಿ, ದಧಿದೂರ್ವೆಗಳನ್ನು ಹಿಡಿದು ನಿಂತಿದ್ದರು. ಮತ್ತೆ ಕೆಲವರು ಭತ್ತ, ಅಕ್ಕಿ, ಹೂವು, ಹರಿಚಂದನ, ಹವಳ, ಮುತ್ತು ಇವುಗಳನ್ನು ಹಿಡಿದು, ಹರಿಚಂದನದಿಂದ ತಮ್ಮ ದೇಹವನ್ನು ಅಲಂಕರಿಸಿಕೊಂಡು ನಿಂತಿದ್ದರು.

ಚೂತಮಂಜರಿಹಸ್ತಾಶ್ಚ ಪಾರಿಜಾತಕರಾಃ ಪರಾಃ ।
ಸ್ವಾದೂದಕೇನ ಸಂಪೂರ್ಣಭೃಂಗಾರಕರಪಲ್ಲವಾಃ ॥ ೧೧ ॥

ಹಾವಭಾವವಿಲಾಸಿನ್ಯೋ ಮದನಾತುರವಿಹ್ವಲಾಃ ।
ಮದನಾರಿಂ ಪ್ರಣೇಮುಸ್ತಾ ಗಾಯಮಾನಾಸ್ತ್ರಿಲೋಚನಂ ॥ ೧೨ ॥

ಅಥಾಸೌ ಭಗವಾನ್ ಶೂಲೀ ಚಾಂತರ್ಯಾಮೀ ಮಹೇಶ್ವರಃ ।
ತ್ರೈಲೋಕ್ಯತಿಲಕೇ ತಸ್ಮಿನ್ ಕ್ಷಣಾದಾವಿರ್ಬಭೂವ ಹ ॥ ೧೩ ॥

ತತೋ ಧನ್ಯೈರ್ಬಹುವಿಧೈಃ ಪೂಜಯಾಮಾಸ ಪರ್ವತಃ ।
ಸ್ತುತ್ವಾ ಚ ಪೂಜಯಿತ್ವಾ ಚ ನನಾಮ ಚ ಪುನಃ ಪುನಃ ॥ ೧೪ ॥

ಗೀತೈಶ್ಚ ವಿವಿಧೈರ್ವಾಕ್ಯೈಃ ಪ್ರವಿವೇಶ ಹರಸ್ತದಾ ।
ಭವೋಽಭವತ್ತದಾ ಬಾಲೋ ಹ್ಯಷ್ಟವರ್ಷಾಕೃತಿಃ ಸ್ವಯಂ ॥ ೧೫ ॥

---

೧೧. ಕೆಲವರು ಮಾವಿನ ಚಿಗುರನ್ನೂ, ಹಲವರು ಪಾರಿಜಾತಕುಸುಮಗಳನ್ನೂ ಅನೇಕರು ಪಲ್ಲವ ಕಲಶಗಳನ್ನೂ ಹಿಡಿದು ನಿಂತಿದ್ದರು.

೧೨. ಹಾವಭಾವವಿಲಾಸಗಳಿಂದಕೂಡಿ, ಕಾಮಾತುರರಾದ ಅಪ್ಸರಸ್ತ್ರೀಯರು ಗಾನಮಾಡುತ್ತಾ ಕಾಮಾರಿಯನ್ನು ಶಿರಸಾ ವಂದಿಸಿದರು.

೧೩. ಪರಮೇಶ್ವರನು ಸರ್ವಾಂತರ್ಯಾಮಿಯಾಗಿದ್ದರೂ, ವ್ಯವಹಾರವನ್ನನುಸರಿಸಿ ತ್ರೈಲೋಕತಿಲಕನಾದ ಪರ್ವತರಾಜನ ಸಮೀಪಕ್ಕೆ ಬಂದನು.

೧೪ ಒಡನೆಯೇ ಪರ್ವತರಾಜನು ನಾನಾವಿಧವಾದ ಧನಕನಕಗಳಿಂದಲೂ, ಸಾಷ್ಟಾಂಗನಮಸ್ಕಾರಗಳಿಂದಲೂ, ವಿಧವಿಧವಾಗಿಸ್ತುತಿಸಿ, ಪುನಃ ಪುನಃ ನಮಸ್ಕರಿಸುತ್ತಿದ್ದನು.

೧೫ ನಾನಾವಿಧವಾದ ಗೀತವಾದ್ಯಗಳು ಮೊಳಗುತ್ತಿರುವಾಗಲೇ, ಪರಮೇಶ್ವರನು ಎಂಟುವರ್ಷದ ಹುಡುಗನ ಆಕಾರವನ್ನು ತಳೆದನು.

ಹೇಮಾಂಗೋ ಭಗವಾನ್ ಶಂಭುಃ ಕಿರೀಟೀ ಕುಂಡಲೀ ಹರಃ ।
ಸುರಾಸುರಾಶ್ಚ ವಿಪ್ರೇಂದ್ರಾ ದೃಷ್ಟ್ವಾ ರೂಪಂ ಪಿನಾಕಿನಃ ॥ ೧೬ ॥

ಅವಲೋಕ್ಯ ಮುಖಾನ್ಯೋನ್ಯಂ ಜಹಸುಸ್ತೇ ಮುದಾನ್ವಿತಾಃ ।
ಆಸನೇ ಹೇಮಭೇ ವಿಪ್ರಾ ನಾನಾರತ್ನೈಶ್ಚ ಭೂಷಿತೇ ॥ ೧೭ ॥

ನಿವೇಶ ಭಗವಾನ್ ಶೂಲೀ ಮಹಾದೇವೋ ಜಗತ್ಪತಿಃ ।
ಹರಸ್ಯ ದಕ್ಷಿಣೇ ವೇಧಾ ವಾಮಭಾಗೇ ಜನಾರ್ದನಃ ॥ ೧೮ ॥

ಶೈಲಾದಿರಗ್ರತಃ ಶಂಭೋಃ ಕಾಲರುದ್ರಶ್ಚ ಸುವ್ರತಾಃ ।
ರುದ್ರೈರ್ಗಣೇಶ್ವರೈರ್ದೇವೈಃ ಸಿದ್ಧೈಶ್ಚ ಮುನಿಭಿಸ್ತಥಾ ॥ ೧೯ ॥

ಉಪವಿಷ್ಟೇಷು ಸರ್ವೇಷು ಗಂಧರ್ವಾದ್ಯಾಃ ಸಮಂತತಃ ।
ಜಗುರ್ಗೀತಂ ಚ ಹಿಂದೋಲಂ ತುಂಬುರುರ್ನಾರದಾದಯಃ ॥ ೨೦ ॥

---

೧೬. ಭಗವಂತನಾದ ಶಂಕರನು ಸುವರ್ಣದಂತೆ ಹೊಳೆಯುತ್ತಾ, ಕಿರೀಟ, ಹಾರ, ಕುಂಡಲಗಳನ್ನು ಧರಿಸಿ ಕಂಗೊಳಿಸಿದನು. ಇಂತಹರೂಪವನ್ನು ದೇವತೆಗಳು ನೋಡಿ,

೧೭-೧೮. ತಮ್ಮ ತಮ್ಮಲ್ಲಿಯೇ ನಗುತ್ತಾ ಶಂಕರನನ್ನೇ ನೋಡುತ್ತಿದ್ದರು. ಆಗ ಶಂಭುವು ಸುವರ್ಣನಿರ್ಮಿತವಾದ ರತ್ನಾಸನದಲ್ಲಿ ಕುಳಿತುಕೊಂಡನು. ಅವನ ಬಲಭಾಗದಲ್ಲಿ ಬ್ರಹ್ಮನೂ, ಎಡಭಾಗದಲ್ಲಿ ವಿಷ್ಣುವೂ ಕುಳಿತುಕೊಂಡರು.

೧೯. ಮುಂಭಾಗದಲ್ಲಿ ನಂದಿಯೂ, ಇನ್ನೂ ಇತರ ಕಾಲರುದ್ರನೇ ಮೊದಲಾದ ರುದ್ರಗಣಗಳೂ, ಸಿದ್ಧವಿದ್ಯಾಧರರೂ, ಮುನಿಗಳೂ ಬಂದು ಕುಳಿತರು.

೨೦. ಎಲ್ಲರೂ ಅವರವರ ಉಚಿತಾಸನಗಳಲ್ಲಿ ಕುಳಿತಮೇಲೆ ತುಂಬುರು, ನಾರದರೇ ಮೊದಲಾದವರು ಹಿಂದೋಲರಾಗದಲ್ಲಿ ಸೊಂಪಾಗಿ ಹಾಡಲಾರಂಭಿಸಿದರು.

ಮತ್ತಮಾತಂಗಗಾಮಿನ್ಯೋ ಗೇಯಂ ತಾಲಲಯಾನ್ವಿತಂ ।
ರಂಭಾದ್ಯಾಪ್ಸರಸಃ ಸರ್ವಾಃ ಕಿಂನರ್ಯೋ ನನೃತುರ್ದ್ವಿಜಾಃ ॥ ೨೧ ॥

ವೀಣಾವಲ್ಲಕಿವೇಣೂನಾಂ ಮೃದಂಗಾನಾಂ ವಿಶೇಷತಃ ।
ಧ್ವನಿಭಿರ್ಮನಸಸ್ತುಷ್ಟಿರ್ಜಜ್ಞೇ ಸುಮನಸಾಂ ತದಾ ॥ ೨೨ ॥

ಅಥ ವಿಶ್ವೇಶ್ವರಃ ಶಂಭುರ್ಭೂಷಣಂ ನಭಸಿ ಸ್ಥಿತಂ ।
ಪ್ರಾಯಚ್ಛದ್ಗಿರಿಜಾಯೈ ತದಾಹ್ಲಾದಜನಕಂ ಮುದಾ ॥ ೨೩ ॥

ಅನೇನಾಲಂಕೃತಾ ದೇವಿ ಮಮ ಯೋಗ್ಯಾ ಭವಿಷ್ಯಸಿ ।
ಪಿತುರ್ದಕ್ಷಸ್ಯ ಯಃ ಕೋಪಃ ಪೂರ್ವಜಸ್ಯ ವರಾನನೇ ॥ ೨೪ ॥

ಪ್ರಹಾಸ್ಯಸಿ ತಮೇವಾಶು ಭಾವಂ ಚೈವ ತು ತಾಮಸಂ ।
ತತಸ್ಸಾ ಪಾರ್ವತೀ ದೇವೀ ಗೃಹೀತ್ವಾಕಾಶಮಂಡಲಾತ್ ॥ ೨೫ ॥

---

೨೧. ಮತ್ತಮಾತಂಗದಂತೆ ಮಂದಗಮನೆಯರಾದ ರಂಭೆಯೇ ಮೊದಲಾದ ದೇವಕನ್ಯೆಯರೂ, ಕಿನ್ನರಿಯರೂ ಕಾಲವನ್ನನುಸರಿಸಿ ನರ್ತನ ಮಾಡಲಾರಂಭಿಸಿದರು.

೨೨. ವೇಣು, ವೀಣಾ, ಮೃದಂಗ, ಇವುಗಳ ರಸಭರಿತವಾದ ಧ್ವನಿಯಿಂದ ದೇವತೆಗಳ ಮನಸ್ಸು ಬಹಳವಾಗಿ ತೃಪ್ತಿಪಟ್ಟಿತು.

೨೩. ಅನಂತರ ಶಂಕರನು ಅಂತರಿಕ್ಷದಲ್ಲಿ ಪ್ರತ್ಯೇಕವಾಗಿಟ್ಟಿದ್ದ ಒಡವೆಗಳನ್ನು ತರಿಸಿ ಪಾರ್ವತಿಯ ಅಲಂಕಾರಕ್ಕಾಗಿ ಕಳುಹಿಸಿದನು. ಇದನ್ನು ನೋಡಿ ಸರ್ವರೂ ಆಶ್ಚರ್ಯಪಟ್ಟರು.

೨೪. ಆಗ ಶಂಕರನು ದೇವಿಯನ್ನು ನೋಡಿ, " ಮಂಗಳಮುಖಿಯೇ, ಈ ಆಭರಣವನ್ನು ಧರಿಸಿ ನನಗೆ ಪ್ರಿಯಳಾಗು ಹಿಂದಿನ ಜನ್ಮದಲ್ಲಿ ನೀನು ನಿಮ್ಮ ತಂದೆ ಯಾದ ದಕ್ಷನ ಕೋಪಕ್ಕೆ ಪಾತ್ರಳಾಗಿದ್ದೆ.

೨೫. ಈಗ ಆ ದಕ್ಷಬ್ರಹ್ಮನ ತಾಮಸಗುಣವನ್ನು ಹಾಸ್ಯಮಾಡುತ್ತಿದ್ದೀಯೆ " ಎಂದು ಹೇಳಲು ಪಾರ್ವತಿಯು ಅದನ್ನು ಕೇಳುತ್ತಾ ಆಕಾಶಮಂಡಲದಲ್ಲಿದ್ದ ಒಡವೆ ಗಳನ್ನು ತೆಗೆದುಕೊಂಡಳು.

ಪಿತುಸ್ಸಮೀಪಮಗಮದ್ವಸ್ತ್ರಾಭರಣಮುತ್ತಮಂ ।
ಮಹತಾ ಹ್ಯುತ್ಸವೇನಾಶು ಭೂಷಯಿತ್ವಾ ಶಿವಾಂ ನಗಃ ॥ ೨೬ ॥

ವಸ್ತ್ರೈರಾಭರಣೈರ್ದೇವೀಂ ದಿವ್ಯೈರ್ವೈ ಸಿಂಹವಾಹಿನೀಂ ।
ಮೇನೋತ್ಸಂಗಗತಾಂ ಭೂಯಶ್ಚಂದ್ರಲೇಖೇವ ತೋಯದೇ ॥ ೨೭ ॥

ದಧತೀ ನಿರ್ವೃತಾ ದೇವೀ ಬಭೌ ತಾಮರಸೇಕ್ಷಣಾ ।
ಅಥ ದೇವ್ಯೈಃ ಪರಿವೃತೋ ವಿಷ್ಣ್ವಾದ್ಯೈಸ್ತ್ರಿಪುರಾಂತಕಃ ॥ ೨೮ ॥

ಬಭ್ರಾಮ ಮುನಿಶಾರ್ದೂಲಾಃ ಕ್ರೀಡಾಸ್ಥಾನಾನಿ ಕೃತ್ಸ್ನಶಃ ।
ಭಗವನ್ ದೇವದೇವೇಶ ವಿಶ್ವೇಶಾಂಧಕಸೂದನ ॥ ೨೯ ॥
ಪ್ರಣಮ್ಯ ಪರಯಾ ಭಕ್ತ್ಯಾ ಶೈಲಾದಿರಿದಮಬ್ರವೀತ್ ॥ ೩೦ ॥

---

೨೬. ಆ ಮೇಲೆ ದೇವಿಯು ಉತ್ತಮವಾದ ವಸ್ತ್ರಾಭರಣಗಳನ್ನು ತೆಗೆದು ಕೊಂಡು, ಹೆಚ್ಚಿನ ಸಂತೋಷದಿಂದ ತಂದೆಯ ಸಮೀಪಕ್ಕೆ ಹೋದಳು.

೨೭. ತಾಯಿಯಾದ ಮೇನೆಯು ಪಾರ್ವತಿಯನ್ನು ತೊಡೆಯಮೇಲೆ ಕೂರಿಸಿ ಕೊಂಡು ಆ ಒಡವೆಗಳಿಂದ ದೇವಿಯನ್ನು ಅಲಂಕರಿಸಿದಳು. ಚಂದ್ರನಿಂದ ಅಲಂಕೃತ ವಾದ ಮೇಘರಾಜಿಯಂತೆ ದೇವಿಯು ಕಂಗೊಳಿಸಿದಳು.

೨೮. ಈ ರೀತಿ ದೇವಿಯು ಅಲಂಕೃತಳಾಗಿರುವಾಗ, ಇತ್ತ ಪರಮೇಶ್ವರನು ವಿಷ್ಣುವೇ ಮೊದಲಾದವರಿಂದ ಕೂಡಿ ದೇವತೆಗಳಿಂದ ಸುತ್ತುವರಿಯಲ್ಪಟ್ಟು,

೨೯-೩೦. ಅಲ್ಲಲ್ಲಿ ಕಂಡುಬರುವ ಕ್ರೀಡಾಸ್ಥಾನಗಳನ್ನು ನೋಡುತ್ತಾ ಸುತ್ತಾ ಡುತ್ತಿದ್ದನು ಆಗ ನಂದೀಶ್ವರನು ಶಂಕರನನ್ನು ಸ್ತುತಿಸುತ್ತಾ ಅತಿಯಾದ ಭಕ್ತಿಯಿಂದ ಈ ರೀತಿ ಹೇಳಲಾರಂಭಿಸಿದನು.

॥ ನಂದಿಕೇಶ್ವರ ಉವಾಚ ॥

ವೇದೀಯಮಿಂದ್ರನೀಲಾಭಾ ಭಾತಿ ವಿಶ್ವಂಭರಾ ಶಿವ ।
ಸೇಯಂ ಜಲಮಯೀ ನಾಥ ನಿರ್ಮಿತಾ ವಿಶ್ವಕರ್ಮಣಾ ॥ ೩೧ ॥

ಯಾ ಚೇಯಂ ಪರಮಾ ರಮ್ಯಾ ತೋಯಾನಾಂ ಭ್ರಾಂತಿಕಾರಿಣೀ ।
ಸೇಯಂ ಭಾತಿ ಮಹಾದೇವ ರತ್ನಾನಾಮೀದೃಶೀ ಪ್ರಭಾ ॥ ೩೨ ॥

ಇದಂ ಚ ದ್ವಾರಸಂಸ್ಥಾನಂ ದೃಶ್ಯತೇ ಲಂಬಕೈರ್ವೃತಂ ।
ಕುಡ್ಯಸ್ಯ ರತ್ನವಿನ್ಯಾಸೇ ಲಕ್ಷ್ಯತೇ ದ್ವಾರರೂಪತಾ ॥ ೩೩ ॥

ಇದಂ ಚಿತ್ರರಥಾಕಾರಂ ದೃಶ್ಯತೇ ವನಮುತ್ತಮಂ ।
ಪ್ರತಿಬಿಂಬಂ ಮಹಾದೇವ ರತ್ನಭೂಮೇರ್ನ ಸಂಶಯಃ ॥ ೩೪ ॥

ಇದಂ ಚ ಮಂದಿರಾಕಾರಂ ಸೋಪಾನಚಯಮಂಡಿತಂ ।
ಪ್ರತಿಬಿಂಬಮಿದಂ ಚೈವ ದೃಶ್ಯತೇ ನವಮಂಡಿತಂ ॥ ೩೫ ॥

---

೩೧. "ಓ ಮಹೇಶ್ವರನೇ, ಇಂದ್ರನೀಲಮಣಿಯಂತೆ ಹೊಳೆಯುವ ಈ ವೇದಿಕೆಯು ಜಲಮಯವಾದದ್ದು, ನೋಡಲು ಹೀಗೆ ಕಾಣುತ್ತಿದೆ. ಇದು ವಿಶ್ವಕರ್ಮ ನಿರ್ಮಾಣ.

೩೨. ಸ್ವಾಮಿಯೇ, ಈ ಪ್ರದೇಶವು ಜಲಮಯವಾದದ್ದೆಂಬ ಭ್ರಾಂತಿಯನ್ನುಂಟುಮಾಡುತ್ತಿದೆ. ನಿಜವಾಗಿ ಇದು ರತ್ನದ ಕಾಂತಿಯು.

೩೩. ಈ ಬಾಗಿಲನ್ನು ನೋಡು. ಇದರಲ್ಲಿ ರತ್ನದಹಾರಗಳು ಹೊಳೆಯುತ್ತಿವೆ. ರತ್ನದ ಗೋಡೆಗಳಲ್ಲಿ ಬಾಗಿಲುಗಳ ಕಾಂತಿಯು ಪ್ರತಿಫಲಿತವಾಗುತ್ತಿದೆ.

೩೪. ಚಿತ್ರರಥಾಕಾರವಾದ ಈ ವನದ ದೃಶ್ಯವು ರತ್ನಖಚಿತವಾದ ಭೂಮಿಯ ಪ್ರತಿಬಿಂಬವೇ ಹೊರತು ನಿಜವಾದ ಉದ್ಯಾನವಲ್ಲ.

೩೫. ಮೆಟ್ಟಲುಗಳಿಂದ ಸುಂದರವಾಗಿ ಕಾಣುವ ಈ ಮನೆಯ ಆಕಾರವು ಬೇರೊಂದು ಮನೆಯ ಪ್ರತಿಬಿಂಬವೇ ಹೊರತು ನಿಜವಾದ ಮನೆಯಲ್ಲ.

ಯಾ ಚೇಯಂ ಸಾಗರಾಕಾರಾ ದೃಶ್ಯತೇ ತೋಯರೂಪಿಣೀ ।
ಏಷಾಪಿ ಪರಮೇಶಾನ ರತ್ನಭೂಮಿರ್ಜಲೋಷಿತಾ ॥ ೩೬ ॥

ಯದಿದಂ ಗಗನಾಭಾಸಂ ಮೂರ್ತಿದ್ರವ್ಯೈರಿವೋಜ್ಝಿತಂ ।
ಕ್ರೀಡಾಮಂಡಪಮೇತಸ್ಮಿನ್ ಪ್ರದೇಶೇ ದೇವ ತಿಷ್ಠತಿ ॥ ೩೭ ॥

ಅಂಬರಾಭೈರ್ಮಹಾರತ್ನೈ ರ್ಬಾಹ್ಯದೇಶೇ ವಿನಿರ್ಮಿತಂ ।
ಅನೇಕವಾದ್ಯಸಂಯುಕ್ತಂ ರಮಣೀಯಂ ಯಯೌ ಹರಃ ॥ ೩೮ ॥

ಏವಂ ಕ್ರೀಡತಿ ದೇವೇಶೇ ಸುರಾಸುರಮಹೋರಗಾಃ ।
ವಿದ್ಯಾಧರಾಸ್ತಥಾ ಯಕ್ಷಾ ಗಂಧರ್ವಾಪ್ಸರಸಾದಯಃ ॥ ೩೯ ॥

ದೀರ್ಘಿಕಾಸು ತಡಾಗೇಷು ನದೀಷು ಚ ಹ್ರದೇಷು ಚ ।
ಕ್ರೀಡಾವಾಪಿಷು ತೇ ರಮ್ಯೈರ್ಯಂತ್ರೈರ್ನಾನಾವಿಧೈರ್ಭೃಶಂ ॥ ೪೦ ॥

---

೩೬. ಇಲ್ಲಿ ಸಮುದ್ರದಂತೆ ಕಾಣುತ್ತಿರುವ ಜಲಭಾಗವು, ನೀರಿನೊಳಗೆ ನಿರ್ಮಿತವಾಗಿರುವ ಭೂಭಾಗವು. ಅದು ಹಾಗೆ ಹೊಳೆಯುತ್ತಿದೆ.

೩೭. ಮೂರ್ತಿಮತ್ತಾದ ದ್ರವ್ಯಗಳಾದ ನಿರ್ಮಿತವಾಗಿದ್ದರೂ, ಏನೂ ಇಲ್ಲದ ಆಕಾರದಂತೆ ಕಾಣುತ್ತಿರುವ ಈ ಸ್ಥಳದಲ್ಲಿ ಕ್ರೀಡಾಮಂಟಪವೆಂಬುದೊಂದಿರುವುದು." ಎಂದು ನಂದಿಯು ವಿವರಿಸಲು,

೩೮. ಆ ಕ್ರೀಡಾವನವು, ಆಕಾಶದಂತೆ ಹೊಳೆಯುತ್ತಾ, ವಿಧವಿಧವಾದ ನೀಲ ರತ್ನಗಳಿಂದ ಕೂಡಿ, ಅನೇಕ ವಾದ್ಯಗಳ ಧ್ವನಿಯಿಂದ ಅತ್ಯಂತ ರಮಣೀಯ ವಾಗಿತ್ತು. ಇಂತಹ ಕ್ರೀಡೋದ್ಯಾನಕ್ಕೆ ಶಂಕರನು ಪ್ರವೇಶಿಸಿದನು.

೩೯. ಹೀಗೆ ಉದ್ಯಾನದಲ್ಲಿ ಶಂಭುವು ವಿಹರಿಸುತ್ತಿರುವಾಗ, ಸುರಾಸುರರೂ, ಗಂಧರ್ವಾಪ್ಸರಸ್ಸುಗಳೂ, ವಿದ್ಯಾಧರಾದಿಗಳೂ ಕ್ರೀಡೋದ್ಯಾನವನ್ನು ಹೊಕ್ಕರು.

೪೦. ಅಲ್ಲಿರುವ ಕೊಳ, ಕೆರೆ, ನದಿ, ಹಳ್ಳ, ಬಾವಿ ಮುಂತಾದ ವಿಧವಿಧವಾದ ಜಲಯಂತ್ರಗಳಲ್ಲಿ ವಿಹರಿಸಲಾರಂಭಿಸಿದರು.

ಬಭೂವುರ್ದೇವತಾಸ್ಸರ್ವಾಃ ಕ್ರೀಡಾರತಿಷು ಲಾಲಸಾಃ ।
ಅಥ ಸಂಕ್ರೀಡ್ಯ ವಿಶ್ವಾತ್ಮಾ ನಿವೃತ್ತಸ್ತತ್ಪ್ರದೇಶತಃ ।
ವೇದ್ಯಾಸ್ಸಮೀಪಮಗಮತ್ ಸ್ತೂಯಮಾನೋ ಮುನೀಶ್ವರೈಃ ॥ ೪೧ ॥

ಪ್ರಾಪ್ಯಾರುರೋಹ ಪ್ರಸಭಂ ಸುರೇಶ ।
ಸ್ತದಿಂದ್ರನೀಲಾಮಲವೇದಿಕಾಂತಂ ।
ಸಹಸ್ರಪತ್ರೈರ್ಬಕುಲೈಶ್ಚ ನಾಗೈಃ ।
ಕೀರ್ಣಂ ಹಿ ಯತ್ಕಾಂಚನಪಾರಿಜಾತೈಃ ॥ ೪೨ ॥

ತತಃ ಪ್ರವಿಷ್ಟೋ ಹರಿಣಾಂಕಚಿಹ್ನಃ ।
ಸರಶ್ಮಿಜಾಲಾಕುಲವೇದಿಕಾಂತಂ ।
ವಿವೇಶ ಸೂರ್ಯಾಯುತಸುಪ್ರಭಾಸೋ ।
ವೃತೋ ವಿರಂಚ್ಯಾದಿಸುರೈಃ ಸಮಂತಾತ್ ॥ ೪೩ ॥

ಅಥೋಪವಿಷ್ಟಂ ಸಂವೀಕ್ಷ್ಯ ವಿಶ್ವೇಶಂ ಪರ್ವತೇಶ್ವರಃ ।
ತಸ್ಯ ಸಂಸ್ಥಾಪ್ಯ ಪುರತೋ ದೇವೇಶೀಮಬ್ರವೀದಿದಂ ॥ ೪೪ ॥

---

೪೧. ಇದರಿಂದ ದೇವತೆಗಳೆಲ್ಲರೂ ಹರ್ಷಗೊಂಡರು. ಅನಂತರ ಶಂಕರನು ಆ ಸ್ಥಳದಿಂದ ಹೊರಟು ಋಷಿಜನರಿಂದ ಸ್ತುತಿಸಲ್ಪಡುವವನಾಗಿ ವಿವಾಹವೇದಿಕೆಯ ಸಮೀಪಕ್ಕೆ ಬಂದನು.

೪೧. ಆ ವೇದಿಕೆಯು ಅನೇಕ ಕಮಲಗಳಿಂದಲೂ, ಪುನ್ನಾಗಗಳಿಂದಲೂ, ಚಿನ್ನದ ಪಾರಿಜಾತ ಕುಸುಮಗಳಿಂದಲೂ ವ್ಯಾಪ್ತವಾದದ್ದಾಗಿ, ನೀಲರತ್ನಗಳಿಂದ ಕೆತ್ತಲ್ಪಟ್ಟಿದ್ದಾಗಿತ್ತು. ಇಂತಹ ಪೀಠವನ್ನು ಈಶ್ವರನು ಹತ್ತಿದನು.

೪೩. ಚಂದ್ರಚೂಡನಾದ ಶಂಕರನು ಸುಂದರವಾದ ವೇದಿಕೆಯಲ್ಲಿ ಮಂಡಿಸಿ ಹತ್ತುಸಾವಿರ ಸೂರ್ಯರ ತೇಜಸ್ಸನ್ನು ಹಿಯ್ಯಾಳಿಸುತ್ತಾ ಬ್ರಹ್ಮಾದಿಗಳೊಡನೆ ಪ್ರಕಾಶಿಸಿದನು.

೪೪. ಹೀಗೆ ಈಶ್ವರನು ವೇದಿಕೆಯಲ್ಲಿ ಕುಳಿತಿದ್ದುದನ್ನು ಪರ್ವತರಾಜನು ನೋಡಿ, ಅವನ ಮುಂದೆ ತನ್ನ ಪುತ್ರಿಯನ್ನು ಕುಳ್ಳಿರಿಸಿ ಹೀಗೆ ಕೇಳಿಕೊಂಡನು.

॥ ಹಿಮವಾನುವಾಚ ॥

ತ್ವಮೇವೈಕಃ ಪರಂ ಧಾಮ ಅರ್ಧನಾರೀಶ್ವರಸ್ತತಃ ।
ದೇವತಾನಾಂ ಹಿತಾರ್ಥಾಯ ಜಾತೋಽಹ್ಯರ್ಧತನುಃ ಪೃಥಕ್ ॥ ೪೫ ॥

ದಕ್ಷಸ್ಯ ದುಹಿತಾ ದೇವೀ ಜಗದ್ಧಾತ್ರೀ ಹ್ಯುಮಾ ಸತೀ ।
ವಿನಿಂದ್ಯ ಚ ತತೋ ದಕ್ಷಂ ತ್ಯಕ್ತ್ವಾ ದೇಹಂ ನಿಜಂ ಪುನಃ ॥ ೪೬ ॥

ತವೈವ ಪತ್ನೀ ದೇವೇಶ ಜಾತಾ ಮಮ ಸುತಾ ಸತೀ ।
ತತಃ ಶ್ರುತ್ವಾ ಗಿರೀಂದ್ರಸ್ಯ ವಚಸ್ತ್ರಿಭುವನೇಶ್ವರಃ ।
ಪ್ರಸನ್ನೋ ವರದಃ ಶಂಭುರಬ್ರವೀತ್ಪರ್ವತೇಶ್ವರಂ ॥ ೪೭ ॥

॥ ಈಶ್ವರ ಉವಾಚ ॥

ಜಾನಾಮ್ಯಹಂ ಯೇನ ಮಮೈವ ಮಾಯಾ ।
ಶಕ್ತಿರ್ವರೈಷಾ ನಗರಾಜಸಿಂಹ ।
ಸಂತ್ಯಜ್ಯ ದೇಹಂ ತವ ಧಾಮ್ನಿ ಜಾತಾ ।
ಯೋಗಾತ್ಸ್ವಯಂ ಚಾರುಶಶಾಂಕವಕ್ತ್ರಾ ॥ ೪೮ ॥

---

೪೫. "ಎಲೈ ಪರಶಿವನೇ, ನೀನು ಅರ್ಧನಾರೀಶ್ವರನು. ನಿನ್ನಲ್ಲಿಯೇ ಈ ಪಾರ್ವತಿಯು ಅಂತರ್ಭಾವಳಾಗಿರುವಳು. ಆದರೂ ದೇವತೆಗಳ ಹಿತಕ್ಕಾಗಿ ಅರ್ಧ ಶರೀರದಿಂದ ಬೇರೆಯಾಗಿದ್ದೀಯೆ.

೪೬ ಈ ನನ್ನ ಪುತ್ರಿಯು ಹಿಂದೆ ದಕ್ಷನ ಮಗಳಾಗಿದ್ದಳು. ಈಕೆಯೇ ಜಗನ್ಮಾತೆಯು. ಆದರೂ ದಕ್ಷನ ದೋಷಗಳಿಗಾಗಿ ಆತನನ್ನು ನಿಂದಿಸಿ, ನನ್ನ ಪುತ್ರಿಯಾಗಿ ಈಗ ತೋರುತ್ತಿರುವಳು.

೪೭. ನಿನ್ನ ಹೆಂಡತಿಯಾಗಿದ್ದ ಈ ಸತೀದೇವಿಯು, ಈಗ ನನ್ನ ಪುತ್ರಿಯಾಗಿರುವಳು, ಎಂದು ಹೇಳಿದ ಗಿರಿರಾಜನ ಮಾತುಗಳನ್ನು ಸ್ವಾಮಿಯು ಕೇಳಿ, ಹರ್ಷಚಿತ್ತನಾಗಿ ಹೀಗೆ ಹೇಳಿದನು.

೪೮. "ಎಲೈ ಪರ್ವತರಾಜನೇ, ಇವಳು ನನ್ನ ಶಕ್ತಿಎಂಬುದನ್ನು ನಾನು ತಿಳಿದಿರುವೆನು. ಈಕೆಯು ಹಿಂದಿನ ದೇಹವನ್ನು ಬಿಟ್ಟು ತನ್ನ ಯೋಗಮಾಯೆಯಿಂದ ನಿನ್ನ ಮನೆಯಲ್ಲಿ ಚಂದ್ರಮುಖಿಯಾಗಿ ಜನಿಸಿರುವುದನ್ನು ನಾನು ಬಲ್ಲೆನು.

ಆಚಾರಾರ್ಥಂ ಗಿರಿಶ್ರೇಷ್ಠ ದತ್ತಾಂ ಗೃಹ್ಣಾಮಿ ಪಾರ್ವತೀಂ ।
ಅದತ್ತಾಂ ಯದಿ ಗೃಹ್ಣಾಮಿ ತಥಾ ಲೋಕೇಽಪಿ ವರ್ತತೇ ॥ ೪೯ ॥

ಅಥ ದಿವ್ಯೋದಕೈಃ ಪೂರ್ಣಮಾದಾಯ ಕಲಶಂ ಗಿರಿಃ ।
ಪರಿಪೂರ್ಣಸ್ಯ ನಿತ್ಯಸ್ಯ ನಿತ್ಯಾನುಗ್ರಹಕಾರಿಣಃ ॥ ೫೦ ॥

ಪ್ರಕ್ಷಾಳ್ಯ ಪಾದೌ ಶಿರಸಾ ಪ್ರಣಮ್ಯ ।
ಭೃಂಗಾರಮಾದಾಯ ಸಶೈಲರಾಜಃ ।
ಮುಮೋಚ ತೋಯಂ ಭವಪಾಣಿಪದ್ಮೇ ।
ದತ್ತೇತಿ ದತ್ತೇತಿ ತದಾ ಪ್ರಜಲ್ಪನ್ ॥ ೫೧ ॥

ತತೋ ಮಂಗಲನಿರ್ಘೋಷಃ ಸಮುಭೂತ್ತ್ರಿದಿವೌಕಸಾಂ ।
ವೀಣಾವೇಣುಮೃದಂಗಾನಾಂ ಕಾಹಳಾನಾಂ ಚ ನಿಸ್ವನಃ ॥ ೫೨ ॥

---

೪೯. ನಗರಾಜನೇ, ಈಗ ಸಂಪ್ರದಾಯದಂತೆ ನನಗೆ ನಿನ್ನ ಮಗಳನ್ನು ಕೊಡುತ್ತಿರುವೆ; ನಾನು ಸ್ವೀಕರಿಸುತ್ತಿರುವೆನು. ಇದು ಲೋಕಮರ್ಯಾದೆ. ಲೋಕ ರೂಢಿಯಂತೆ ನೀನು ಅರ್ಪಿಸದೆ ನಾನು ಸ್ವೀಕರಿಸುವುದು ಉಚಿತವಲ್ಲ"

೫೦. ಹೀಗೆಂದೊಡನೆಯೇ ಗಿರಿರಾಜನು ತುಂಬಿದ ಉದಕುಂಭದಿಂದ ನಿತ್ಯಾನುಗ್ರಹಕಾರಿಯಾದ ಪರಶಿವನ ಕಾಲುಗಳನ್ನು ತೊಳೆದನು.

೫೧. ಭಕ್ತಿಯಿಂದ ಶಂಕರನನ್ನು ವಂದಿಸಿ ಪರ್ವತರಾಜನು " ಇಗೋ ನನ್ನ ಪುತ್ರಿಯನ್ನು ನಿನಗೆ ಒಪ್ಪಿಸಿರುವೆನು.ಅರ್ಪಿಸಿರುವೆನು " ಎಂದು ಹೇಳುತ್ತಾ ಈಶ್ವರನ ಕೈಗೆ ನೀರನ್ನೆರೆದನು.

೫೨. ಆಗ ದೇವತೆಗಳು ವೀಣಾ, ಕೊಳಲು, ಮೃದಂಗ, ತುತ್ತೂರಿ ಇವೇ ಮೊದಲಾದ ಮಂಗಳ ವಾದ್ಯಗಳನ್ನು ಬಾರಿಸಿದರು.

ಸಾ ಹಾರಕಂಠೀ ಕಟಿಸೂತ್ರದಾಮಾ ।
ಸುಭ್ರೂಲತಾ ಚಾರುವಿಲೋಲನೇತ್ರಾ ।
ಮೇರೋರ್ಯಥೈವೋಪರಿ ಚಂದ್ರಲೇಖಾ ।
ತಥಾ ಬಭೌ ಪರ್ವತರಾಜಪುತ್ರೀ ॥ ೫೩ ॥

ಅಥ ವೇದ್ಯಾಂ ಗತೋ ಬ್ರಹ್ಮಾ ವಿಶ್ವಮಾಯಾಂ ಸ್ಮರಾರಣಿಂ ।
ದದರ್ಶೋದಕಪಾತ್ರೇಣ ವಿಭಾವಸುಪುರಸ್ಥಿತಃ ॥ ೫೪ ॥

ಮಾಹೇಶ್ವರೀಂ ಕಾಮಮಯೀಂ ದೃಷ್ಟ್ವಾ ತಾಂ ತು ಪಿತಾಮಹಃ ।
ಅಕ್ಷರತ್ಸಹಸಾ ಶುಕ್ರಂ ಭಗ್ನಕುಂಭಾದಿವೋದಕಂ ॥ ೫೫ ॥

ಪಾದೇನ ತನ್ಮಮರ್ದಾಶು ಶುಕ್ರಂ ತತ್ಪದ್ಮಸಂಭವಃ ।
ಪದ್ಮಜೋಽಪಿ ಮಹಾತೇಜಾ ದೇವದೇವಸ್ಯ ಪಶ್ಯತಃ ॥ ೫೬ ॥

---

೫೩. ಪರಶಿವನು ದೇವಿಯ ಕತ್ತಿಗೆ, ಮಂಗಳ ಸೂತ್ರದ ಹಾರವನ್ನು ಹಾಕಿದನು. ಭ್ರೂಲತೆಯಿಂದಲೂ, ಚಂಚಲನೇತ್ರದಿಂದಲೂ, ದೇವಿಯು ಆಗ ಚಂದ್ರಲೇಖೆಯುಳ್ಳ ಮೇರುಪರ್ವತದಂತೆ ಪ್ರಕಾಶಿಸಲಾರಂಭಿಸಿದಳು.

೫೪. ಆಗಲೇ ಬ್ರಹ್ಮನು ಕೈಯಲ್ಲಿ ನೀರಿನ ಕುಂಭವನ್ನು ಹಿಡಿದು ವಿವಾಹ ವೇದಿಕೆಗೆ ಬಂದು ನಿಂತನು. ಅಲ್ಲಿ ದೇವಿಯು ಅತಿ ಸುಂದರಿಯಾಗಿ ವಿಶ್ವಮಾಯಾ ರೂಪಳಾಗಿ ನಿಂತಿರುವುದನ್ನು ನೋಡಿದನು. ಆಗ ಸೂರ್ಯನೂ ಅವನ ಮುಂದೆಯೇ ಇದ್ದನು.

೫೫. ಕಾಮೋದ್ದೀಪಕಳಾದ ಪಾರ್ವತಿಯನ್ನು ನೋಡಿದೊಡನೆಯೇ ಬ್ರಹ್ಮನಿಗೆ ಒಡೆದ ಮಡಕೆಯಿಂದ ನೀರು ಸುರಿದು ಹೋಗುವಂತೆ, ರೇತಸ್ಸು ಸ್ಖಲನವಾಯಿತು.

೫೬. ಆ ಶುಕ್ರವನ್ನು ಬ್ರಹ್ಮನು ತನ್ನ ಕಾಲಿನಿಂದ ಸವರಲು ಪ್ರಯತ್ನಿಸಿದನು. ಇದನ್ನು ಶಂಕರನು ಕೂಡಲೇ ನೋಡಿದನು.

ನ್ಯೈವಂ ಮರ್ದೇತಿ ತಂ ದೃಷ್ಟ್ವಾ ತ್ರಿಪುರಾರಿಃ ಪಿತಾಮಹಂ ।
ಕುರುಷ್ವೇತೀತಿ ಹೋವಾಚ ಭಗವಾನ್ನೀಲಲೋಹಿತಃ ॥ ೫೭ ॥

ಅಮೋಘಂ ತತ್ತದಾ ವಿಪ್ರಾಃ ಶುಕ್ರಮಗ್ನೌ ಪ್ರಜಾಪತಿಃ ।
ಜುಹೋತಿ ವಚನಾಚ್ಛಂಭೋರ್ವಾಮೇನಾದಾಯ ಪಾಣಿನಾ ॥ ೫೮ ॥

ಹವನಾಚ್ಚ ತತಃ ಪ್ರಾಪ್ತಾಃ ಸವಿಕಾರಂ ವಿಯದ್ಗತಂ ।
ತೇಜೋಮಯಾಶ್ಚ ತೇ ಸರ್ವೇ ತಪೋನಿಷ್ಠಾಃ ಸಮಂತತಃ ॥ ೫೯ ॥

ಅಷ್ಟಾಶೀತಿಸಹಸ್ರಾಣಿ ಮುನಯಸ್ತೂರ್ಧ್ವರೇತಸಃ ।
ಮಾನೇ ತ್ವಂಗುಷ್ಠಮಾತ್ರಾಸ್ತು ಜಾತಾಹ್ಯಥ ಸುವರ್ಚಸಃ ॥ ೬೦ ॥

ಬಭೂವುಸ್ತೇ ಮಹಾತ್ಮಾನಃ ಪತಂಗಸಹಚಾರಿಣಃ ।
ನಿಃಸ್ಪೃಹಾ ರಶ್ಮಿಪಾಃ ಸರ್ವೇ ಸರ್ವೇ ಜ್ವಲನಸನ್ನಿಭಾಃ ॥ ೬೧ ॥

---

೫೭. "ಬ್ರಹ್ಮನೇ ಅದನ್ನು ಹಾಗೆ ಮರ್ದನಮಾಡಬೇಡ-ಒಳ್ಳೆಯ ದಾರಿಗೆ ಬರುವಂತೆ ಕ್ರಮಪಡಿಸು" ಎಂದು ಈಶ್ವರನು ಅಪ್ಪಣೆಮಾಡಿದನು.

೫೮. ಅವನ ಅಪ್ಪಣೆಯಂತೆ ಬ್ರಹ್ಮನು ಆ ವೀರ್ಯವನ್ನು ಎಡಗೈಯ್ಯಲ್ಲಿ ತೆಗೆದು ಕೊಂಡು ಅಗ್ನಿಯಲ್ಲಿ ಹೋಮಮಾಡಿದನು.

೫೯-೬೦. ಹಾಗೆ ಸೂರ್ಯನನ್ನು ಕುರಿತು ಹೋಮಮಾಡಲಾಗಿ, ಆ ವೀರ್ಯವು ಎಂಭತ್ತೆಂಟು ಸಹಸ್ರಸಂಖ್ಯೆಯ ಅಂಗುಷ್ಠಮಾತ್ರದ ದೇಹವುಳ್ಳದ್ದಾಗಿ ಊರ್ಧ್ವರೇತಸ್ಸಿನಿಂದ ಕೂಡಿಡಎಂಭತ್ತೆಂಟುಸಾವಿರ ಋಷಿಗಳ ಆಕಾರವನ್ನು ಪಡೆಯಿತು

೬೧. ಆಮೇಲೆ ಅವರೆಲ್ಲರೂ ಮಹಾತ್ಮರಾಗಿ ಸೂರ್ಯಸದೃಶರಾಗಿ ವೈರಾಗ್ಯ ದಿಂದ ಕಾಂತಿಯನ್ನು ಪಡೆದು ಅಗ್ನಿಯಂತೆ ಜ್ವಲಿಸಲಾರಂಭಿಸಿದರು.

ತತೋ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಮುನಯಸ್ತಥಾ ।
ಪಿಶಾಚಾ ದಾನವಾ ದೈತ್ಯಾಃ ಕಿಂನರಾಶ್ಚ ಮಹೋರಗಾಃ ॥ ೬೨ ॥

ವಿದ್ಯಾಧರಾಶ್ಚಾಪ್ಸರಸಸ್ತಥಾ ಚಾನ್ಯೇ ಸುರಾಸುರಾಃ ।
ಪ್ರಹೃಷ್ಟಾಃ ಸರ್ವಏವೈತೇ ಪಾರ್ವತ್ಯಾ ಪರಸಂಗಮಾತ್ ॥ ೬೩ ॥

ಮುಮೋಚ ವೃಷ್ಟಿಂ ಕ್ರತುರಾಟ್ಸುತುಷ್ಟಃ ।
ಪುಷ್ಪೈರನೇಕೈರ್ಭ್ರಮರಾಕುಲೈಶ್ಚ ।
ವಾದ್ಯೈರ್ವಿಶೇಷೈರ್ವರಶಂಖನಾದ್ಯೈಃ ।
ಸುಗೀತಗಾನೈರ್ವರಮಂಗಲೈಶ್ಚ ॥ ೬೪ ॥

ವೀಣಾರವೈರ್ದುಂದುಭಿವೇಣುನಾದ್ಯೈಃ ।
ಸಮಂತತಃ ಕರ್ಣಸುಖಂ ಪ್ರಜಜ್ಞೇ ।
ಅನೃತ್ಯತೀಭಿಃ ಸುರಸುಂದರೀಭಿ ।
ರ್ಜಗೀಯತೀಭಿ ರ್ವರಕಿನ್ನರೀಭಿಃ ॥ ೬೫ ॥

೬೨-೬೩. ಇತ್ತ ಪಾರ್ವತಿಯು ಪರಮೇಶ್ವರನನ್ನು ವಿವಾಹವಾದದ್ದಕ್ಕಾಗಿ, ಗಂಧರ್ವರೂ, ಸಿದ್ಧಸಾಧ್ಯರೂ, ಋಷಿಗಳೂ, ಪಿಶಾಚರೂ, ಕಿನ್ನರರೂ ಮಹೋರಗ ಗಳೂ ಸಮಸ್ತ ದೇವತೆಗಳೂ ಸಂತೋಷದಿಂದ ಹಿಗ್ಗುತ್ತಿದ್ದರು.

೬೪. ಇಂದ್ರನು ಅನೇಕ ದುಂಬಿಗಳಿಂದ ಆವೃತವಾದ ಸುಗಂಧಮಯಪುಷ್ಪ ಗಳನ್ನು ಮಳೆಗರೆಸಿದನು. ಶಂಖವೇ ಮೊದಲಾದ ಸಂಗೀತ ಕಲೆಯುಳ್ಳ ವಾದ್ಯ ಗಳನ್ನು ಮಂಗಳಕರವಾಗಿ ಬಾರಿಸಿದನು.

೬೫. ವೀಣಾಧ್ವನಿ, ವೇಣುನಾದ, ದುಂದುಭಿತಾಡನಧ್ವನಿ ಇವು ಸರ್ವರ ಕಿವಿಗಳಿಗೂ ಇಂಪನ್ನುಂಟುಮಾಡಿದುವು. ಹಾಗೆಯೇ ಸುರಸುಂದರಿಯರೂ, ಕಿನ್ನರಿ ಯರೂ ಸಂಗೀತಕಲೆಯೊಡನೆ ನಾಟ್ಯಕಲೆಯನ್ನೂ ತೋರ್ಪಡಿಸಿ, ಸರ್ವರ ನೇತ್ರಾ ನಂದಕ್ಕೂ ಕಾರಣರಾದರು.

ದೈತ್ಯಾಂಗನಾಭಿಶ್ಚ ವಸೀದತೀಭಿಃ ।
ಕಾಮಾಯತೇತೀವ ತದುತ್ಸವಂ ಚ ।
ಕಾಂಚೀರವೇಣಾಥ ನಿತಂಬಿನೀನಾಂ ।
ಮನೋಭಿರಾಮೇಣ ಚ ನೂಪುರಾಣಾಂ ॥ ೬೬ ॥

ತಾಸಾಂ ಸ್ಮಿತೇನಾಥ ಮುನೀಂದ್ರವರ್ಯಾ ।
ಬಭೂವ ಕಾಮಾನಲದೀಪಚರ್ಯಾ ।
ಹೋಮಾವಸಾನೇ ಮಧುಪರ್ಕಯುಕ್ತಂ ।
ದೇವಾಯ ತಸ್ಮೈ ಮಧುಭಾಜನಂ ಚ ॥ ೬೭ ॥

ತತೋ ನಿವೇದ್ಯ ಪ್ರಮಥಾಧಿಪಾಯ ।
ಚಕಾರ ತುಷ್ಟಿಂ ಪರಮಾಂ ವಿರಂಚಿಃ ॥ ೬೮ ॥

---

೬೬. ಹಾಗೆಯೇ ಸುಂದರಿಯರಾದ ದೈತ್ಯಸ್ತ್ರೀಯರು ಸಹ ನರ್ತನಮಾಡಿ ಸಭಿಕರನ್ನು ಮೋಹಗೊಳಿಸುತ್ತಿದ್ದರು. ಆ ಸುಂದರಿಯರ ಒಡ್ಯಾಣದ ಗೆಜ್ಜೆಯ ಧ್ವನಿಯೂ, ಕಾಲುಕಡಗಗಳ ಇಂಪಾದ ಗಾನವೂ ಸರ್ವರಿಗೂ ಆನಂದದಾಯಕ ವಾಗಿತ್ತು.

೬೭. ಆ ಹೆಂಗಸರ ಸೌಂದರ್ಯಕ್ಕೆ ಮೋಹಗೊಂಡು ಋಷಿಶ್ರೇಷ್ಠರೂ ಸಹ ಕಾಮಾಸಕ್ತರಾದರು. ಹೀಗೆ ವಿವಾಹಮಹೋತ್ಸವವು ಜರುಗುತ್ತಿರುವಾಗ ಹೋಮಾಂತ್ಯದಲ್ಲಿ ಪರಮೇಶ್ವರನಿಗೆ ಪರ್ವತರಾಜನು ಮಧುಪರ್ಕಯುಕ್ತವಾದ ಸತ್ಕಾರವನ್ನು ನೆರವೇರಿಸಿದನು.

೬೮-೬೯. ಅನಂತರ ಬ್ರಹ್ಮನು ಪ್ರಮಥಾಧಿಪನಾದ ಪರಶಿವನಿಗೆ ನೈವೇದ್ಯಾದಿ ಗಳಿಂದ ತೃಪ್ತಿಯನ್ನುಂಟುಮಾಡಿದನು. ಇದರಿಂದ ತುಷ್ಟನಾದ ಪರಶಿವನು

ಅಥ ದೇವೇಷು ವಿಶ್ವೇಶೋ ವರದೋಽಭೂದ್ದ್ವಿಜೋತ್ತಮಾಃ ।
ವರಾಂಶ್ಚ ವಿವಿಧಾನ್ ದತ್ವಾ ಬ್ರಹ್ಮಾದಿಭ್ಯೋ ಮಹೇಶ್ವರಃ ॥ ೭೯ ॥

ವ್ಯಸರ್ಜಯತ್ತತಃ ಸರ್ವಾಂಸ್ಥಾವರಾನ್ ಜಂಗಮಾಂಸ್ತಥಾ ।
ವಿಸರ್ಜಿತಾಃ ಪ್ರಣಮ್ಯೇಶಂ ಪ್ರೀತಿಂ ತೇ ಪರಮಾಂ ಗತಾಃ ॥ ೮೦ ॥

ಏವಂ ಸಂಕ್ಷೇಪತೋ ವಿಪ್ರಾ ವಿವಾಹೋ ಗಿರಿಜಾಪತೇಃ ।
ಕಥಿತೋ ರವಿಣಾ ಪೂರ್ವಂ ಯಥಾವತ್ಸಮುದೀರಿತಃ ॥ ೮೧ ॥

ಶೃಣೋತಿ ಶ್ರದ್ಧಯಾ ಯಸ್ತು ಪಠೇದ್ವಾ ಪ್ರಯತಾತ್ಮವಾನ್ ।
ಸರ್ವಾನ್ ಕಾಮಾನವಾಪ್ನೋತಿ ವರ್ಷಾದರ್ವಾಙ್ನಸಂಶಯಃ ॥ ೮೨ ॥

ಸರ್ವಪಾಪವಿನಿರ್ಮುಕ್ತಸ್ತೇಜಸ್ವೀ ಪ್ರಿಯದರ್ಶನಃ ।
ಜೀವೇದ್ವರ್ಷಶತಂ ಸಾಗ್ರಂ ಗಚ್ಛೇದ್ಬ್ರಹ್ಮಪದಂ ತತಃ ॥ ೮೩ ॥

ಬ್ರಹ್ಮಾದಿಗಳಾದ ದೇವತೆಗಳೆಲ್ಲರಿಗೂ ನಾನಾವಿಧವಾದ ವರಗಳನ್ನು ಅನುಗ್ರಹಿಸಿದನು.

೮೦. ಹೀಗೆ ವರಪ್ರದಾನಮಾಡಿ ವಿವಾಹಕ್ಕೆ ಬಂದಿದ್ದ ಸ್ಥಾವರಜಂಗಮ ವಸ್ತುಗಳನ್ನೆಲ್ಲಾ ಕಳುಹಿಸಿದನು. ಅವರೆಲ್ಲರೂ ಈಶ್ವರನಿಗೆ ಭಕ್ತಿಯಿಂದ ವಂದಿಸಿ ಹಿಂದಿರುಗಿದರು.

೮೧. ಎಲೈ ಮಹರ್ಷಿಗಳೇ, ಹೀಗೆ ಪಾರ್ವತೀವಿವಾಹದ ವಿಷಯವನ್ನು ಸೂರ್ಯದೇವನು ಮನುವಿಗೆ ಸಂಕ್ಷೇಪವಾಗಿ ತಿಳಿಸಿದನು.

೮೨. ಯಾರು ಈ ವಿವಾಹ ವಿಜೃಂಭಣೆಯನ್ನು ಶ್ರದ್ಧೆಯಿಂದ ಕೇಳುವರೋ, ಅವರು ಒಂದುವರ್ಷದ ಒಳಗೆ ಎಲ್ಲಾ ಇಷ್ಟಾರ್ಥಗಳನ್ನು ಪಡೆಯುವರು.

೮೩. ಅಲ್ಲದೆ ಸಮಸ್ತ ಪಾಪಗಳಿಂದ ಬಿಡಲ್ಪಟ್ಟವರಾಗಿ ತೇಜಸ್ಸಿನಿಂದ ಮೆರೆಯುತ್ತಾ ಅವರು ಶತಾಯುಗಳಾಗಿ ಕೊನೆಗೆ ಮೋಕ್ಷವನ್ನು ಪಡೆಯುವರೆಂಬುದರಲ್ಲಿ ಸಂಶಯವೇ ಇಲ್ಲ.

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಸಾಂಬವಿವಾಹವರ್ಣನಂ ನಾಮೈಕೋನ ಷಷ್ಟಿತಮೋಽಧ್ಯಾಯಃ.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದರೂಪವಾಗಿ ಸಾಂಬವಿವಾಹವರ್ಣನೆಯೆಂಬ ಐವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಷಷ್ಟಿತಮೋಽಧ್ಯಾಯಃ

॥ ಸೂತ ಉವಾಚ ॥

ವಿವಾಹ್ಯಾದ್ರಿಸುತಾಂ ಶಂಭುರ್ಯಯೌ ಕೈಲಾಸಪರ್ವತಂ ।
ಕ್ರೀಡಾಂ ವೈ ವರ್ಷಸಾಹಸ್ರೀಮಕರೋತ್ತತ್ರ ಶಂಕರಃ ॥ ೧ ॥

ಗಣೈರ್ನಾನಾವಿಧೈಶ್ಚೈವ ಸಿಂಹಾಸ್ಯೈಃ ಶರಭಾನನೈಃ ।
ಕೈಶ್ಚಿದ್ವ್ಯಾಘ್ರಮುಖೈರ್ಭೀಮೈಃ ಕೈಶ್ಚಿತ್ ಗೃಧ್ರಮುಖೈರಪಿ ॥ ೨ ॥

ಕೈಶ್ಚಿದ್ಗಜಮುಖೈರನ್ಯೈಃ ಕೈಶ್ಚಿನ್ಮೃಗಮುಖೈರಪಿ ।
ಕೈಶ್ಚಿದುಷ್ಟ್ರಮುಖೈರ್ದೀರ್ಘೈಃ ಕೈಶ್ಚಿದ್ಧಯಮುಖೈರಪಿ ॥ ೩ ॥

ಅರುವತ್ತನೆಯ ಅಧ್ಯಾಯ.

೧. ಪರಮೇಶ್ವರನು ಪಾರ್ವತಿಯನ್ನು ಪರಿಗ್ರಹಿಸಿ ಕೈಲಾಸಪರ್ವತಕ್ಕೆ ಪ್ರಯಾಣಮಾಡಿದನು. ಅಲ್ಲಿ ಪಾರ್ವತಿಯೊಡನೆ ಸಹಸ್ರ ವರ್ಷ ಪರ್ಯಂತ ಸಂತೋಷದಿಂದ ಕಾಲಕಳೆದನು.

೨-೫. ಶಿವನೊಡನೆ ವಿಹಾರಕ್ಕೆ ಸೇರಿದ್ದವರು ಕೆಲವರು ಸಿಂಹಮುಖದವರು, ಕೆಲವರು ಶರಭಮುಖದವರು, ಹೀಗೆಯೇ, ಹುಲಿ, ಹದ್ದು, ಆನೆ, ಜಿಂಕೆ ಒಂಟೆ, ಕುದುರೆ,

ಕೈಶ್ಚಿಚ್ಚಿತ್ರಮುಖೈರನ್ಯೈಃ ಕೈಶ್ಚಿದ್ವೃಕಮುಖೈರಪಿ ।
ಮೂಷಕಾಸ್ಯೈಸ್ತಥಾ ಚಾನ್ಯೈರ್ಮಾರ್ಜಾರವದನೈರಪಿ ॥ ೪ ॥

ಸರ್ಪಾಸ್ಯೈರ್ನಕುಲಾಸ್ಯೈಶ್ಚ ಜಂಬುಕಾಸ್ಯೈಸ್ತಥಾಪರೈಃ ।
ಶಿಂಶುಮಾರಮುಖೈಶ್ಚಾನ್ಯೈ ಋಕ್ಷವಕ್ತ್ರೈಸ್ತಥಾಪರೈಃ ॥ ೫ ॥

ಮಯೂರವದನೈರನ್ಯೈರ್ಬಕವಕ್ತ್ರೈಸ್ತಥಾಪರೈಃ ।
ಶಾಖಾಮೃಗಮುಖೈಶ್ಚಾನ್ಯೈ ಖರಾದ್ಯೈಶ್ಚ ತಥಾ ಪರೈಃ ॥ ೬ ॥

ಅನ್ಯೈರಸಂಖ್ಯೈಃ ಪ್ರಮಥೈರ್ಜರಾಮರಣವರ್ಜಿತೈಃ ।
ನಿತ್ಯತೃಪ್ತೈರ್ನಿರಾತಂಕೈಃ ಕಾಲಸಂಹರಣಕ್ಷಮೈಃ ॥ ೭ ॥

ಸಹಸ್ರಕೋಟಿಸಂಖ್ಯಾಕೈಃ ಸ್ವಚ್ಛಂದಗತಿಚಾರಿಭಿಃ ।
ಕ್ರೀಡಾಂ ವಿಧಾಯ ಭಗವಾನ್ ಕೈಲಾಸೇ ಪರ್ವತೋತ್ತಮೇ ॥ ೮ ॥

ತಪಸಾ ಮಹತಾ ಶಂಭುರನುಗೃಹ್ಯ ಚ ಮಂದರಂ ।
ಕೈಲಾಸಂ ಸಂಪರಿತ್ಯಜ್ಯ ಮಂದರೇ ಚಾರುಕಂದರೇ ॥ ೯ ॥

ತೋಳ, ಇಲಿ, ಬೆಕ್ಕು, ಸರ್ಪ, ಮುಂಗಸಿ, ನರಿ, ಮೊಲ. ಕರಡಿ, ಇವೇ ಮೊದಲಾದ ಪ್ರಾಣಿಗಳ ಮುಖದಂತಿರುವ ಪ್ರಮಥಗಣಗಳೆಲ್ಲರೂ ಶಂಕರನ ಸಂತೋಷಕ್ಕಾಗಿ ಕ್ರೀಡಿಸುತ್ತಿದ್ದುವು.

೬. ನವಿಲಿನಂತೆ. ಬಕದಂತೆ, ಕಪಿಗಳಂತೆ, ಕತ್ತೆಯಂತೆ, ಮುಖಮಾಡಿಕೊಂಡಿರುವ ಇನ್ನೂ ಅನೇಕ ಪ್ರಮಥಗಣಗಳು ಈಶ್ವರನ ಲೀಲಾಕ್ರೀಡೆಗೆ ಸೇರಿದ್ದರು.

೭. ಮುಪ್ಪು, ಸಾವು ಇವುಗಳಿಗೆ ಸಿಕ್ಕದೆ ನಿತ್ಯತೃಪ್ತರಾಗಿದ್ದ, ನಿರಾತಂಕರಾಗಿದ್ದ, ಯಮನನ್ನು ಸಹ ಯುದ್ಧದಲ್ಲಿ ಸೋಲಿಸುವ ಇನ್ನೂ ವಿಧವಿಧವಾದ ಪ್ರಮಥಗಣಗಳು ಅಲ್ಲಿ ನೆರೆದಿದ್ದರು.

೮, ಇನ್ನೂ ಅನೇಕ ಕೋಟಿಸಂಖ್ಯೆಯ ಸ್ವೇಚ್ಛಾಚಾರಿಗಳಾದ ಪ್ರಮಥಗಣಗಳೊಡನೆ ಶಂಕರನು ಪರ್ವತಶ್ರೇಷ್ಠವಾದ ಕೈಲಾಸಪರ್ವತದಲ್ಲಿ ಕ್ರೀಡೆಯನ್ನು ಮುಗಿಸಿದನು.

೯. ಅಲ್ಲಿಂದ ಮುಂದೆ ಪರಮೇಶ್ವರನು ಕೈಲಾಸಪರ್ವತವನ್ನು ಬಿಟ್ಟು ತಪಸ್ಸಿಗೆ ಅತ್ಯಂತ ಯೋಗ್ಯವಾದ ಮಂದರಪರ್ವತವನ್ನು ಪ್ರವೇಶಿಸಿದನು.

ತತ್ರಾಪಿ ರಮಮಾಣಸ್ಯ ಗತೇ ವರ್ಷಸಹಸ್ರಕೇ ।
ದೇವತಾನಾಂ ಹಿತಾರ್ಥಾಯ ಪ್ರಕೃತ್ಯಾ ಸಹ ಶೂಲಭೃತ್ ॥ ೧೦ ॥

ಪ್ರಕ್ರೀಡತೀಹ ವಿಶ್ವಾತ್ಮಾ ಕಾಮಾಸಕ್ತಶ್ಚ ಸರ್ವಥಾ ।
ಪ್ರಾರ್ಥಿತೋಽಹಂ ಸುರೈಃ ಪೂರ್ವಂ ತಾರಕಸ್ಯ ವಧೇಪ್ಸಯಾ ॥ ೧೧ ॥

ಮದ್ರೇತಸಃ ಸಮುತ್ಪನ್ನಸ್ತಾರಕಂ ಸ ಹನಿಷ್ಯತಿ ।
ಇತಿ ಮತ್ವಾ ಮಹಾದೇವೇ ರಮಮಾಣೇ ಸಹೋಮಯಾ ॥ ೧೨ ॥

ಉತ್ಪಾತಾಶ್ಚ ಮಹಾಘೋರಾಃ ಸಂಪ್ರವೃತ್ತಾಃ ಸುದಾರುಣಾಃ ।
ರುಧಿರಾಸ್ಥೀನಿ ವರ್ಷಂತಿ ನದಂತೋ ಮೇಘಸಂಕುಲಾಃ ॥ ೧೩ ॥

ವಾಯವಶ್ಚ ಮಹಾವೇಗಾಃ ಪರ್ವತಾಂಶ್ಚಾಲಯಂತಿ ತೇ ।
ವಿಮಾನಾನಿ ಸುರಾಣಾಂ ಚ ನಿಪೇತುರ್ವಸುಧಾತಲೇ ॥ ೧೪ ॥

---

೧೦. ಅಲ್ಲಿಯೂ ಪಾರ್ವತಿಯೊಡನೆ ಪರಶಿವನು ಸಹಸ್ರಾರುವರ್ಷಪರ್ಯಂತ ದೇವತೆಗಳ ಹಿತಕ್ಕಾಗಿ ಸಂತೋಷದಿಂದ ಕಾಲಕಳೆದನು.

೧೧-೧೨. ಹೀಗೆ ಕಾಲಕಳೆಯುತ್ತಿರುವಾಗ ಒಂದು ದಿನ ಶಂಕರನು ಹಿಂದೆ ತಾರಕಾಸುರನ ಬಾಧೆಯನ್ನು ತಾಳಲಾರದೆ ದೇವತೆಗಳು ಬಂದು ತನ್ನನ್ನು ಮೊರೆ ಹೊಕ್ಕಿದ್ದನ್ನು ಜ್ಞಾಪಿಸಿಕೊಂಡು, "ನನ್ನ ತೇಜಸ್ಸಿನಿಂದ ಜನಿಸಿದವನು ಮುಂದೆ ತಾರಕನನ್ನು ಕೊಲ್ಲುವನು" ಎಂದು ತಿಳಿದು ಪಾರ್ವತಿಯೊಡನೆ ಕ್ರೀಡಿಸಲು ಆರಂಭಿಸಿದನು.

೧೩, ಆಗ ಲೋಕದಲ್ಲಿ ಭಯಂಕರವಾದ ಉತ್ಪಾತಗಳು ಪ್ರಾರಂಭವಾದುವು. ಮೇಘಗಳು ರಕ್ತ ಮೂಳೆ ಇವುಗಳ ಮಳೆಯನ್ನು ಸುರಿಸಿದುವು.

೧೪. ಬಿರುಗಾಳಿಗಳು ಪರ್ವತಗಳನ್ನು ಅಲ್ಲಾಡಿಸಿದುವು. ಅಂತರಿಕ್ಷದಲ್ಲಿ ಹೋಗುತ್ತಿದ್ದ ದೇವವಿಮಾನಗಳನ್ನೆಲ್ಲಾ ಉರುಳಿಸಿದುವು.

ಉಲ್ಕಾಭಿರ್ಗಗನಂ ವ್ಯಾಪ್ತಂ ಪತಂತೀಭಿರ್ದ್ವಿಜೋತ್ತಮಾಃ ।
ಕೇತವಶ್ಚೋದಿತಾಸ್ಸರ್ವೇ ಜೃಂಭಂತ ಇವ ಪಾವಕಾಃ ॥ ೧೫ ॥

ದಿಗ್ದಾಹಾಶ್ಚ ಮಹಾಘೋರಾ ದಾವಾಗ್ನಿರಿವ ಸಂಕ್ಷಯೇ ।
ಮೃತ್ಯುಕಾಲೇ ಯಥಾ ಜಂತುರ್ನೈವ ಸೌಖ್ಯಮವಾಪ್ನುಯಾತ್ ॥ ೧೬ ॥

ಜಗತ್ತ್ರಯಮಿದಂ ಕೃತ್ಸ್ನಂ ನ ಲಭೇತ ತಥಾ ಸುಖಂ ।
ನ ವೇದಾಃ ಪಠಿತಾಸ್ತಸ್ಮಿನ್ ನ ವಿಪ್ರಾ ಜಜಪುರ್ಜಪಂ ॥ ೧೭ ॥

ಪಾರ್ವತ್ಯಾಂ ಕಂಪಮಾನಾಯಾಂ ಕಂಪಮಾನೇ ಚ ಶಂಕರೇ ।
ತ್ರೈಲೋಕ್ಯಮಭವತ್ಸರ್ವಂ ಕಂಪಮಾನಂ ಭಯಾತುರಂ ॥ ೧೮ ॥

ಕಾಲಾಗ್ನಿಕಂಪಿತೋ ದೇವೋ ವಿರಂಚಿರ್ಮುನಿಭಿಸ್ಸಹ ।
ಚಕ್ರಾಯುಧೋಽಪಿ ಚಾತ್ಯರ್ಥಮಿಂದ್ರಾದ್ಯೈಃ ಪರಿವಾರಿತಃ ॥ ೧೯ ॥

---

೧೫. ಉಲ್ಕಾಪಾತ, ಶಿಲಾಪಾತ, ಧೂಮಕೇತು ಇವುಗಳ ನೆಪದಿಂದ ಅಗ್ನಿಯು ಲೋಕದಲ್ಲಿ ಪ್ರಜ್ವಲಿಸಲಾರಂಭಿಸಿತು.

೧೬. ಪ್ರಳಯಕಾಲದ ಅಗ್ನಿಯಂತೆ, ಆಗ ದಾವಾಗ್ನಿಯು ದಿಕ್ಕುಗಳನ್ನೆಲ್ಲಾ ಸುಡಲಾರಂಭಿಸಿತು. ಯಾವಪ್ರಾಣಿಗೂ ಆಗ ಸುಖವಿರಲಿಲ್ಲ.

೧೭. ಮೂರು ಲೋಕದವರೂ ಬಹುಭಯಗ್ರಸ್ತರಾದರು. ವೇದಪಾಠಕರು ವೇದಗಳನ್ನೇ ಪಠಿಸಲಿಲ್ಲ. ಜಪಗಳನ್ನು ಯಾರೂ ಜಪಿಸಲಿಲ್ಲ.

೧೮. ಅದನ್ನು ನೋಡಿ, ಪಾರ್ವತೀ ಪರಮೇಶ್ವರರು ಸಹ ಬೆದರಿದರು. ನಿಜವಾಗಿಯೂ ಮೂರು ಲೋಕವೇ ನಡುಗುತ್ತಾ ಹೆದರಿತು.

೧೯. ಈ ಅಗ್ನಿಯಿಂದ ಭಯಪಟ್ಟ ಬ್ರಹ್ಮನೂ, ವಿಷ್ಣುವೂ ಇಂದ್ರಾದಿಗಳೊಂದಿಗೆ ಕೂಡಿ ಬಹುವಾಗಿ ಹೆದರಿದರು.

ಯೇ ಕೇಚಿದ್ದೇವಗಂಧರ್ವಾಃ ಸಿದ್ಧಾ ಗಗನಚಾರಿಣಃ ।
ವಿದ್ಯಾಧರಾಶ್ಚ ಯಕ್ಷಾಶ್ಚ ಸಂಪ್ರಾಪ್ತಾಶ್ಚ ವಸುಂಧರಾಂ ॥ ೨೦ ॥

ಏತಸ್ಮಿನ್ನಂತರೇ ಪ್ರಾಪ್ತಃ ಶಕ್ರಂ ದೇವರ್ಷಿಸತ್ತಮಃ ।
ಯಥಾವನ್ಮಧುಪರ್ಕಾದ್ಯೈಃ ಶಕ್ರಸ್ತಮಭ್ಯಪೂಜಯತ್ ॥ ೨೧ ॥

ಅಬ್ರವೀದ್ದೇವರಾಜಸ್ತಮುಪವಿಷ್ಟಂ ಮಹಾಮುನಿಂ ।
ತ್ರಿಕಾಲದರ್ಶಿನಂ ಶಾಂತಮಾತ್ಮನಿಷ್ಠಂ ತಪೋನಿಧಿಂ ॥ ೨೨ ॥

॥ ಶಕ್ರ ಉವಾಚ ॥

ಉತ್ಪಾತಾಶ್ಚ ಮಹಾಘೋರಾಃ ಸಂಪ್ರವೃತ್ತಾಃ ಸುದಾರುಣಾಃ ।
ಕಾರಣಂ ವದ ಮೇ ಸರ್ವಂ ಶಾಂತಿಶ್ಚೈವ ಯಥಾ ಭವೇತ್ ॥ ೨೩ ॥

---

೨೦. ದೇವತೆಗಳು, ಗಂಧರ್ವರೂ, ಸಿದ್ಧರೂ, ಖೇಚರರೂ, ವಿದ್ಯಾಧರರೂ, ಯಕ್ಷರೂ, ಇವರಲ್ಲಿ ಕೆಲವರೂ ಭೂಮಿಯನ್ನು ಕುರಿತು ಓಡಿ ಬಂದರು.

೨೧. ಇದೇ ಸಮಯಕ್ಕೆ ಸರಿಯಾಗಿ ದೇವರ್ಷಿಯಾದ ನಾರದನು ಇಂದ್ರನನ್ನು ನೋಡಲು ಬಂದನು. ಬಂದ ಮಹರ್ಷಿಯನ್ನು ದೇವೇಂದ್ರನ ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿದನು.

೨೨. ಉಚಿತಾಸನದಲ್ಲಿ ಕುಳ್ಳಿರಿಸಿ, ತ್ರಿಕಾಲಜ್ಞನಾದ ನಾರದಮಹರ್ಷಿಯನ್ನು ಕುರಿತು ಹೀಗೆ ಕೇಳಿಕೊಂಡನು.

೨೩. "ಮಹರ್ಷಿಯೇ, ಲೋಕಗಳಲ್ಲಿ ಇಷ್ಟು ಭಯಂಕರವಾದ ಉತ್ಪಾತಗಳು ನಡೆಯುತ್ತಿವೆಯಲ್ಲಾ ! ಇದಕ್ಕೆ ಕಾರಣವೇನು ? ಇದರ ಪರಿಹಾರವೇನಾದರೂ ಇದೆಯೆ ?" ಎಂದು ಇಂದ್ರನು ಪ್ರಶ್ನಿಸಲು

॥ ನಾರದ ಉವಾಚ ॥

ಉಮಯಾ ಸಹ ವಿಶ್ವೇಶಃ ಪರಂ ಜ್ಯೋತಿರ್ಮಹೇಶ್ವರಃ ।
ಅಹರ್ನಿಶಮವಿಶ್ರಾಂತಂ ಯುಕ್ತ ಏವ ಪ್ರವರ್ತತೇ ॥ ೨೪ ॥

ತಸ್ಮಾದ್ಧೇತೋಃ ಪ್ರವರ್ತಂತ ಉತ್ಪಾತಾ ವೃತ್ರಹನ್ ಕಿಲ ।
ವಿಘ್ನಂ ತಸ್ಯ ಪ್ರಕರ್ತವ್ಯಂ ಯದೀಚ್ಛಸಿ ಪರಂ ಸುಖಂ ॥ ೨೫ ॥

ಉಮಾಗರ್ಭಸಮುತ್ಪನ್ನಃ ಸರ್ವಸ್ಮಾದಧಿಕೋ ಹಿ ಸಃ ।
ಕಥಂ ಧಾರಯಿತುಂ ಶಕ್ತಾ ಬ್ರಹ್ಮಾದ್ಯಾಃ ಸಸುರಾಸುರಾಃ ॥ ೨೬ ॥

ಜಗತ್ತ್ರಯಮಿದಂ ಕೃತ್ಸ್ನಂ ಧರಣೀ ಧಾರಯಿಷ್ಯತಿ ।
ನಾಪತ್ಯಧಾರಣೇ ಶಕ್ತಾ ಸಂಜಾತಂ ಶಿವಯೋಃ ಖಲು ॥ ೨೭ ॥

ನಾರದಸ್ಯ ವಚಃ ಶ್ರುತ್ವಾ ಶಕ್ರೋ ವಿಸ್ಮಯತಾಂ ಗತಃ ।
ತದಾ ಚಿಂತಾರ್ಣವೇ ಮಗ್ನೋ ದೇವೈಸ್ಸಹ ಪುರಂದರಃ ॥ ೨೮ ॥

---

೨೪. ಅದಕ್ಕೆ ನಾರದನು "ಅಯ್ಯಾ ಇಂದ್ರನೇ, ಜ್ಯೋತೀರೂಪನಾದ ವಿಶ್ವೇಶ್ವರನು ಸರ್ವದಾ ಪಾರ್ವತಿಯೊಡನೆ ವಿಶ್ರಾಂತಿಯಿಲ್ಲದೆ ಅಹರ್ನಿಶಿಯೂ ಕೂಡಿಯೇ ಇರುವನು.

೨೫. ಅದರಿಂದಲೇ ಈಗ ಇಷ್ಟು ಉತ್ಪಾತಗಳಾಗುತ್ತಿರುವುದು. ನೀವು ಸುಖವನ್ನು ಪಡೆಯಬೇಕಾದರೆ ಆ ಈಶ್ವರನ ರತಿಕ್ರೀಡೆಗೆ ವಿಘ್ನವನ್ನು ತರಬೇಕು.

೨೬. ಪಾರ್ವತಿಯ ಉದರದಲ್ಲಿ ಹುಟ್ಟುವವನು ಎಲ್ಲರಿಗಿಂತಲೂ ಶೂರನಾಗುವನು. ಇಂತಹವನನ್ನು ತಡೆಯಲು ಬ್ರಹ್ಮಾದಿದೇವತೆಗಳಿಗೂ ಸಹ ಸಾಧ್ಯವಾಗಲಾರದು.

೨೭. ಮೂರು ಲೋಕದ ಜನರನ್ನು ಧರಿಸಲು ಶಕ್ತಿಯುಳ್ಳದ್ದಾದರೂ ಭೂಮಿಯು, ಶಿವಾಗರ್ಭಸಂಭೂತವಾದ ಈ ಶಿವವೀರ್ಯವನ್ನು ಧರಿಸಲು ಶಕ್ತವಾಗಲಾರದು." ಎಂದು ನಾರದನು ಹೇಳಲು

೨೮. ನಾರದನ ಮಾತನ್ನು ಕೇಳಿ ಇಂದ್ರನು ಆಶ್ಚರ್ಯಪಟ್ಟು ಚಿಂತಾಸಮುದ್ರದಲ್ಲಿ ಮುಳುಗಿದವನಾದನು. ಇದರಿಂದ ದೇವತೆಗಳಿಗೂ ಆಲೋಚನೆಯುಂಟಾಯಿತು.

ಪಂಕೇ ಗಾರಿವ ಸೀದತ್ಸು ದೇವೇಷ್ವಥ ಜನಾರ್ದನಃ ।
ಉವಾಚ ಶ್ಲಕ್ಷ್ಣಯಾ ವಾಚಾ ದೇವಾನಾಂ ಹಿತಕಾಮ್ಯಯಾ ॥ ೨೯ ॥

॥ ಶ್ರೀ ವಿಷ್ಣುರುವಾಚ ॥

ಶೃಣುಧ್ವಂ ದೇವತಾಃ ಸರ್ವಾಃ ಕಾಮಾಸಕ್ತೋ ನ ಶಂಕರಃ ।
ಯುಷ್ಮಾಕಂ ಹಿತಕಾಮಾಯ ಭೋಗಯುಕ್ತೋಽಭವಚ್ಛಿವಃ ॥ ೩೦ ॥

ಸ್ವತಂತ್ರಶಕ್ತಿರ್ವಿಶ್ವಾತ್ಮಾ ಜಿತಕಾಮಃ ಸ್ವಭಾವತಃ ।
ಸಂಪೂರ್ಣಕಾಮಃ ಸ ವಿಭುಃ ಕಥಂ ಕಾಮೇನ ಬಾಧ್ಯತೇ ॥ ೩೧ ॥

ತದ್ರೇತಸಾ ಸಮುತ್ಪನ್ನಸ್ತಾರಕಂ ಸ ವಧಿಷ್ಯತಿ ।
ಏತಸ್ಮಾತ್ಕಾರಣಾದ್ದೇವೋ ದೇವ್ಯಾ ಯುಕ್ತೋಽಭವತ್ಸುರಾಃ ॥ ೩೨ ॥

ಕಿಂತು ತತ್ಕೇವಲೋತ್ಪನ್ನಂ ಸೇಂದ್ರೈರಪಿ ಸುರಾಸುರೈಃ ।
ತೇಜೋ ಧಾರಯಿತುಂ ತಸ್ಯ ನ ಶಕ್ಯಮಿತಿ ನಿಶ್ಚಿತಂ ॥ ೩೩ ॥

---

೨೯. ಸಮಸ್ತದೇವತೆಗಳೂ ಇದನ್ನು ಕೇಳಿ ಕೆಸರಿನಲ್ಲಿ ಬಿದ್ದ ಎತ್ತುಗಳ ಹಾಗೆ ದುಃಖಿಸಿದರು. ಅವರನ್ನು ನೋಡಿ ಮಹಾವಿಷ್ಣುವು ಮೃದುವಾದ ಮಾತುಗಳಿಂದ ಅವರನ್ನು ಹೀಗೆ ಸಂತೈಸಿದನು.

೩೦. "ಎಲೈ ದೇವತೆಗಳೇ, ಏಕೆ ಹೆದರುತ್ತೀರಿ? ಈಗ ಶಂಕರನು ಬಹು ವಾಗಿ ಕಾಮಾಸಕ್ತನಾಗಿರುವುದು ನಿಮಗೆ ಹಿತವಾದದ್ದೇ. ನಿಮ್ಮ ಕ್ಷೇಮಕ್ಕಾಗಿ ಶಂಕರನು ಹಾಗಿರುವನು.

೩೧. ಶಂಕರನು ಸ್ವತಂತ್ರವಾದ ಶಕ್ತಿಯುಳ್ಳವನು. ಕಾಮನನ್ನು ಜಯಿಸಿದವನು. ನಿತ್ಯತೃಪ್ತನು. ಅಂಥ ಪರಮಾತ್ಮನು ಕಾಮಪರವಶನಾಗುವುದು ಹೇಗೆ?

೩೨. ನಿಮ್ಮ ಹಿತಕ್ಕಾಗಿ ತಾರಕನನ್ನು ಕೊಲ್ಲುವಂತಹ ಪುತ್ರನನ್ನು ಸೃಷ್ಟಿಸುವುದಕ್ಕಾಗಿ ಪರಶಿವನು ಹೀಗೆ ದೇವಿಯಿಂದ ಕೂಡಿರುವನು.

೩೩. ಆದರೆ ಶಿವವೀರ್ಯವನ್ನು ಮಾತ್ರ ಇಂದ್ರಾದಿ ದೇವತೆಗಳು ಯಾರೂ ತಡೆಯಲಾರರೆಂಬುದು ಮಾತ್ರ ನಿಜ.

ಇದಂ ಯತ್ಕಾರ್ಯಮುತ್ಪನ್ನಂ ವ್ಯಾಧಿರೂಪಂ ದಿವೌಕಸಾಂ ।
ಉಪೇಕ್ಷಿತಂ ನ ಸಂದೇಹೋ ಹಸ್ಯಾನ್ನಾಸಂ ಜಗತ್ತ್ರಯಂ ॥ ೩೪ ॥

ಯದಿ ತತ್ಕೇವಲೋ ಜಾತೋ ಭವಿಷ್ಯತಿ ಸುರಾಸ್ತದಾ ।
ಅಸಹ್ಯೋ ದುರ್ಧರೋ ಘೋರ ಇತಿ ತಥ್ಯಂ ನ ಸಂಶಯಃ ॥ ೩೫ ॥

ಸ ಏವ ವಿಷ್ಣುರ್ಬಲವಾನಿಂದ್ರಶ್ಚೈವ ಪ್ರಜಾಪತಿಃ ।
ಸಚಾದಿತ್ಯಃ ಕುಬೇರಶ್ಚ ಈಶಾನೋ ವರುಣಸ್ತಥಾ ॥ ೩೬ ॥

ಸ ಯಮಃ ಸ ಚ ಸೋಮಶ್ಚ ಸ ವಾಯುಃ ಸ್ವರ್ಗವಾಸಿನಃ ।
ಸ ಏವ ಸರ್ವಂ ಭವಿತಾ ಭವದ್ಭಿಶ್ಚೇದುಪೇಕ್ಷಿತಃ ॥ ೩೭ ॥

ದೃಶ್ಯತೇಽತ್ರಾಪ್ಯುಪಾಯಶ್ಚ ಕಾರ್ಯಸ್ಯಾಸ್ಯ ಸುರೋತ್ತಮಾಃ ।
ಯಸ್ಮಾದಗ್ನಿಮುಖಾ ಯೂಯಂ ತಸ್ಮಾದಗ್ನಿರ್ಹಿ ನಾನ್ಯಥಾ ॥ ೩೮ ॥

---

೩೪. ಈಗ ಬಂದಿರುವ ಉತ್ಪಾತಗಳು ಮಾತ್ರ ದೇವತೆಗಳಿಗೆ ಕಷ್ಟಕರವಾದಷ್ಟೇ ಆಗಿದೆ. ಇದನ್ನು ಉಪೇಕ್ಷೆಮಾಡುವಂತಿಲ್ಲ. ಇದು ತ್ರಿಲೋಕಗಳನ್ನು ನಾಶ ಮಾಡುವುದು.

೩೫. ಆದರೆ ಈಗ ಉಮಾಗರ್ಭದಲ್ಲಿ ಜನಿಸುವವನು ಮಾತ್ರ ಯಾವ ದೇವತೆಗಳಿಗಾಗಲಿ, ಎಂಥ ಮಹಾಮಹಿಮನಿಗೇ ಆಗಲಿ ಬಗ್ಗತಕ್ಕವನಲ್ಲವೆಂಬುದು ನಿಜ.

೩೬-೩೭. ಅವನನ್ನು ನೀವೇನಾದರೂ ಉಪೇಕ್ಷೆಮಾಡಿ ಬಿಟ್ಟದ್ದೇ ಆದರೆ, ಎಲ್ಲರಿಗೂ ಆತನು ಭಯಂಕರನೇ ಆಗುವನು ವಿಷ್ಣು, ಇಂದ್ರ, ಬ್ರಹ್ಮ, ಸೂರ್ಯ, ಕುಬೇರ, ಈಶಾನ, ವರುಣ, ಯಮ, ಸೋಮ, ವಾಯು, ಇನ್ನೂ ಸಮಸ್ತ ದೇವತೆಗಳು, ಇವರೆಲ್ಲರ ಕಾರ್ಯಗಳನ್ನೂ ತಾನೊಬ್ಬನೇ ಮಾಡಲು ಯತ್ನಿಸುವನು.

೩೮. ಈಗಲೂ ಈ ಕಾರ್ಯಸಾಧನೆಗೆ ಒಂದುಪಾಯವಿದೆ. ನೀವೆಲ್ಲರೂ ಅಗ್ನಿಯನ್ನೇ ಮುಂದಾಳಾಗಿ ಮಾಡಿಕೊಂಡಿದ್ದೀರಿ ಅಲ್ಲವೇ ? ಈಗ ನಿಮಗೆ ಅಗ್ನಿಯೇ ಗತಿ.

ಯದುಗ್ರಂ ಗಹನಂ ಘೋರಮಪ್ರದೃಷ್ಯಮಗೋಚರಂ ।
ಹೃದಿ ಯದ್ಭವತಾಂ ಕಾರ್ಯಮಗ್ನಿಸ್ತತ್ಸಾಧಯಿಷ್ಯತಿ ॥ ೩೯ ॥

ಏವಮುಕ್ತ್ವಾಥ ವಿಶ್ವಾದಿಃ ಶಂಖಚಕ್ರಗದಾಧರಃ ।
ಅಬ್ರವೀತ್ಕೃಷ್ಣವರ್ತ್ಮಾನಂ ದೇವಾನಾಂ ಸದಸಿ ಸ್ಥಿತಂ ॥ ೪೦ ॥

॥ ಶ್ರೀ ವಿಷ್ಣುರುವಾಚ ॥

ಶೃಣು ಮದ್ವಚನಂ ವಹ್ನೇ ದೇವಾನಾಂ ಯದುಪಸ್ಥಿತಂ ।
ತ್ವಯಾ ತತ್ಸಾಧನೀಯಂ ಹಿ ಹಿತಾರ್ಥಂ ತ್ರಿದಿವೌಕಸಾಂ ॥ ೪೧॥

ಯೋಽಸೌ ದೇವಃ ಪರಂ ಜ್ಯೋತಿರ್ನೀಲಗ್ರೀವೋ ವಿಲೋಹಿತಃ ।
ರಮತೇ ಚೋಮಯಾ ಸಾರ್ಧಂ ಚರಾಚರಪತಿಃ ಶಿವಃ ॥ ೪೨ ॥

ಭಯಂ ತಸ್ಮಾತ್ಸಮುತ್ಪನ್ನಂ ಕಾರಣಾದ್ಧಿ ದಿವೌಕಸಾಂ ।
ತಸ್ಮಾದ್ಧಿತಾಯ ಗಚ್ಛ ತ್ವಂ ಮಹಾದೇವಸ್ಯ ಸನ್ನಿಧೌ ॥ ೪೩ ॥

---

೩೯. ನಿಮ್ಮ ಮನಸ್ಸಿನಲ್ಲಿರುವ, ಭಯಂಕರವಾದ ಮತ್ತು ಅತ್ಯಸಾಧ್ಯವಾದ, ಕಣ್ಣಿಗೆ ಕಾಣದಿರುವ ಕಾರ್ಯವನ್ನು ನಿರ್ವಹಿಸಲು ಅಗ್ನಿಯೇ ಸಮರ್ಥನು.''

೪೦. ಎಂದು ಹೇಳಿ, ದೇವದೇವನೂ ಶಂಖಚಕ್ರಗದಾಧಾರಿಯೂ ಆದ ವಿಷ್ಣುವು ದೇವಸಭೆಯಲ್ಲಿದ್ದ ಅಗ್ನಿಯನ್ನು ಕುರಿತು ಹೀಗೆ ಹೇಳಿದನು.

೪೧. "ಅಗ್ನಿದೇವನೇ, ಈಗ ನನ್ನದೊಂದು ಮಾತನ್ನು ಲಾಲಿಸು. ದೇವತೆಗಳಿಗೆ ಒದಗಿರುವ ವಿಪತ್ತನ್ನು ನೀನು ಪಾರುಮಾಡಬೇಕು. ಅದರಿಂದ ದೇವತೆಗಳಿಗೆ ನೀನು ಹಿತವನ್ನುಂಟುಮಾಡಿದಂತಾಗುತ್ತದೆ.

೪೨. ಈಗ ಜ್ಯೋತಿಸ್ವರೂಪನೂ, ನೀಲಗ್ರೀವನೂ ಆದ ಪರಮೇಶ್ವರನು ಬಹುಕಾಲದಿಂದ ಉಮಾದೇವಿಯೊಡನೆ ಕ್ರೀಡಿಸುತ್ತಿರುವನು.

೪೩. ಆ ಕಾರಣದಿಂದ ದೇವತೆಗಳಿಗೆ ಬಹಳವಾದ ಭಯವು ಬಂದೊದಗಿದೆ. ಇದನ್ನು ಪರಿಹರಿಸಲು ನೀನು ಈಗ ಶಿವನ ಸಮೀಪಕ್ಕೆ ಹೋಗು.

ಮುಖಂ ತ್ವಮೇವ ಸರ್ವೇಷಾಂ ಕಾರ್ಯಾಣಾಂ ಚೈವ ಸಾಧಕಃ ।
ಇತ್ಯೇವಂ ವಚನಂ ಶ್ರುತ್ವಾ ಪಾವಕಃ ಕೇಶವಾತ್ತದಾ ।
ಉವಾಚೇದಂ ಮುನಿಶ್ರೇಷ್ಠಾಃ ಶ್ರೀವತ್ಸಾಂಕಿತವಕ್ಷಸಂ ॥ ೪೪ ॥

॥ ಅಗ್ನಿರುವಾಚ ॥

ಯದುಕ್ತಂ ಭವತಾ ದೇವ ಕಿಂ ತ್ವಯುಕ್ತಂ ಸನಾತನ ।
ಮಹೇಶಸ್ಯ ರಹಃಸ್ಥಸ್ಯ ಪ್ರವೇಷ್ಟುಂ ನೈವ ಸಾಂಪ್ರತಂ ॥ ೪೫ ॥

ಧ್ಯಾನಯುಕ್ತೋ ಜನಃ ಕಶ್ಚಿನ್ಮಂತ್ರಭೋಜನತತ್ಪರಃ ।
ರಹಸಿಸ್ಥೋಽಥ ದಾನಸ್ಥಸ್ತದಯುಕ್ತಂ ಪ್ರವೇಶನಂ ॥ ೪೬ ॥

ಜಾಪ್ಯೋಪಹಾರಯುಕ್ತೋ ವಾ ಹೋಮಯುಕ್ತೋಥವಾ ಭವೇತ್ ।
ಅರ್ಚನಾಭಿರತಃ ಕಶ್ಚಿತ್ತದಯುಕ್ತಂ ಪ್ರವೇಶನಂ ॥ ೪೭ ॥

---

೪೪. ನೀನೇ ಸಮಸ್ತ ದೇವತೆಗಳಿಗೂ ಮುಖಸ್ವರೂಪನು. ನಿನ್ನಿಂದಲೇ ಸಕಲ ಕಾರ್ಯಗಳೂ ದೇವತೆಗಳಿಗೆ ಸಿದ್ಧಿಸಬೇಕು." ಎಂದು ಹೇಳಿದ ವಿಷ್ಣುವಿನ ಮಾತನ್ನು ಕೇಳಿ, ಶ್ರೀವತ್ಸಾಂಕಿತನಾದ ಮಹಾವಿಷ್ಣುವನ್ನು ಕುರಿತು ಹೀಗೆ ಹೇಳಿದನು.

೪೫. 'ಓ ಸನಾತನರೂಪಿಯಾದ ವಿಷ್ಣುವೇ, ನೀನು ಹೇಳುವುದೇನು? ಏಕಾಂತದಲ್ಲಿರುವ ಈಶ್ವರನಲ್ಲಿಗೆ ಹೋಗುವುದು ಯುಕ್ತವೇ ?

೪೬. ಜನರು ಧ್ಯಾನಾಸಕ್ತರಾಗಿರುವಾಗಲೂ, ಮಂತ್ರ, ಭೋಜನ, ಏಕಾಂತ ವಾಸ, ದಾನಸಮಯ, ಇಂತಹ ಕಾಲಗಳಲ್ಲಿ ನಿರತರಾಗಿರುವಾಗಲೂ ನಾವು ಪ್ರವೇಶಿಸುವುದು ದುತಪ್ಪು.

೪೭. ಜಪ, ಉಪಹಾರ, ಹೋಮ, ಅರ್ಚನೆ, ಈ ಕಾರ್ಯಗಳಲ್ಲಿ ಒಬ್ಬನು ತೊಡಗಿರುವಾಗ ನಾವು ಅಲ್ಲಿಗೆ ಪ್ರವೇಶಿಸಬಾರದು.

ಪ್ರಾಕೃತಸ್ಯಾಪಿ ದೇವೇನ ರಹಃಸ್ಥಸ್ಯ ರಮಾಪತೇ ।
ತಸ್ಮಿನ್ ಕಾಲೇ ಸುರೇಶಾನ ಗರ್ಹಿತಂ ತು ಪ್ರವೇಶನಂ ॥ ೪೮ ॥

ಕಿಂ ಪುನರ್ಭಗವಾನ್ ಭೀಮಸ್ತಿಗ್ಮರಶ್ಮಿರ್ಮಹೇಶ್ವರಃ ।
ದೇವಾನಾಂ ಚ ಹಿತಾರ್ಥಾಯ ಪ್ರಕೃತ್ಯಾ ಸಹ ಸಂಗತಃ ॥ ೪೯ ॥

ನಾಹಂ ತತ್ರ ವಿಶೇ ನೂನಂ ಬಿಭೇಮಿ ಮಧುಸೂದನ ।
ಆಗತಂ ಮಾಂ ಸಮಾಲೋಕ್ಯ ಕ್ಷಣಾಚ್ಛಂಭುರ್ಹನಿಷ್ಯತಿ ॥ ೫೦ ॥

ಜುಗುಪ್ಸಿತಮಿದಂ ಕಾರ್ಯಮಿತಿ ಕಷ್ಟಂ ಭಯಾವಹಂ ।
ವಿವಸ್ತ್ರಾಂ ಜನನೀಂ ದೇವೀಂ ಕಥಂ ದ್ರಕ್ಷ್ಯಾಮಿ ಕೇಶವ ॥ ೫೧ ॥

ಕಿಂ ವಕ್ಷ್ಯತಿ ಪ್ರವಿಷ್ಟಸ್ಯ ವಕ್ಷ್ಯಾಮಿ ಕಿಮಹಂ ವಿಭೋ ।
ಜಲ್ಪಯಿಷ್ಯತಿ ಮಾಂ ದೇವೋ ಧಿಙ್ಮೂರ್ಖೋಯಮಿತಿ ಧ್ರುವಂ ॥ ೫೨ ॥

---

೪೮. ಏನೂ ಅರಿಯದ ಸಾಮಾನ್ಯನೊಬ್ಬನು ಏಕಾಂತವಾಸದಲ್ಲಿರುವಾಗಲೂ, ಹಠಾತ್ತಾಗಿ ಪ್ರವೇಶಿಸುವುದು ಯುಕ್ತವಲ್ಲ. ಮಹಾವಿಷ್ಣುವೇ, ಹಾಗಿರುವಾಗ ಈ ಪರಮಾತ್ಮನ ಏಕಾಂತಗೃಹವನ್ನು ಪ್ರವೇಶಿಸುವುದು ಹೇಗೆ?

೪೯. ಪರಮೇಶ್ವರನು ತೀಕ್ಷ್ಣಕಿರಣವುಳ್ಳವನು, ದೇವದೇವನು, ದೇವತೆಗಳ ಹಿತಕ್ಕಾಗಿ ಪಾರ್ವತಿಯೊಡನೆ ಕೂಡಿರುವನು.

೫೦. ಅಲ್ಲಿಗೆ ನಾನು ಒಬ್ಬನೇ ಹೋಗಲು ಹೆದರುವೆನು. ಮಧುಸೂದನನೇ! ಅಲ್ಲಿಗೆ ನಾನು ಹೋದರೆ, ಕ್ಷಣಕಾಲದಲ್ಲಿ ನನ್ನನ್ನು ಶಂಕರನು ಕೊಲ್ಲಬಹುದು.

೫೧. ವಿಷ್ಣುವೇ, ಈ ಕೆಲಸವು ಅತಿ ಹೇಯವಾದದ್ದು. ನಗ್ನಳಾಗಿರುವ ಜಗನ್ಮಾತೆಯನ್ನು ನಾನು ಹೇಗೆ ನೋಡಲಿ.

೫೨. ಆ ಸಮಯದಲ್ಲಿ ಪ್ರವೇಶಿಸಿದವನಿಗೆ ಆಗುವ ಫಲವನ್ನು ಏನೆಂದು ಹೇಳಲಿ. ನನ್ನನ್ನು ನೋಡಿ ಪರಶಿವನು ಮೂರ್ಖನೆಂದು ನಿಂದಿಸಲಾರನೇ?

ಯದ್ಭಾವ್ಯಂ ತದ್ಭವತ್ವದ್ಯ ನ ಕರೋಮಿ ಚ ನಿಂದಿತಂ ।
ಅಗ್ನಿನಾ ಚೈವಮುಕ್ತಸ್ತು ವಿಷ್ಣುರ್ದಾನವಸೂದನಃ ॥ ೫೩ ॥

ಭಯದಂ ಮೋಹದಂ ಶ್ರುತ್ವಾ ವಾಕ್ಯಂ ಹೃದಯಕಂಪನಂ ।
ಉವಾಚ ಭಗವಾನ್ ವಿಷ್ಣುಃ ಪುನರ್ವಹ್ನಿಮಿತಿ ಸ್ತುವನ್ ॥ ೫೪ ॥
ತ್ರೈಲೋಕ್ಯರಕ್ಷಣಾರ್ಥಾಯ ಶಕ್ರಾದೀನಾಂ ಚ ಸನ್ನಿಧೌ ॥ ೫೫ ॥

॥ ವಿಷ್ಣುರುವಾಚ ॥

ಯದುಕ್ತಂ ಭವತಾ ವಹ್ನೇ ಸತ್ಯಮೇತನ್ನ ಸಂಶಯಃ ।
ಆತ್ಮಹೇತೋರ್ವಿರುದ್ಧಂ ಸ್ಯಾತ್ಪರಾರ್ಥಂ ನೈವ ದುಷ್ಯತಿ ॥ ೫೬ ॥

ಪ್ರವಿಶ ತ್ವಮಣೋರೂಪಮಾದಾಯ ನ ಹಿ ದುಷ್ಯತಿ ।
ಪ್ರದಿಷ್ಟೋ ದೇವದೇವೇನ ಸಂಹಾರಾರ್ಥಂ ಕಪರ್ದಿನಾ ॥ ೫೭ ॥

---

೫೩. ಮಹಾವಿಷ್ಣುವೇ, ನೀನು ಅಪ್ಪಣೆಯಿತ್ತಂತೆ ನಾನು ಅಲ್ಲಿಗೆ ಹೋಗುವೆನು. ಆಗುವ ಶಿಕ್ಷೆಯೆಲ್ಲವೂ ನನಗೆ ಆಗಲಿ" ಎಂದು ಹೇಳಿದ ಅಗ್ನಿಯ ಮಾತನ್ನು ವಿಷ್ಣುವು ಕೇಳಿ,

೫೪-೫೫. ಭಯಂಕರವೂ, ಅಜ್ಞಾನಪ್ರತಿಪಾದಕವೂ ಆದ ಅಗ್ನಿಯಮಾತನ್ನು ಮನ್ನಿಸುತ್ತಾ ಪುನಃ ಅಗ್ನಿಯೊಡನೆ ತ್ರಿಲೋಕರಕ್ಷಣಾರ್ಥವಾಗಿ ಇಂದ್ರಾದಿಗಳ ಸಮ್ಮುಖದಲ್ಲಿ ಹೇಳಲಾರಂಭಿಸಿದನು.

೫೬. "ಅಗ್ನಿದೇವನೇ ನೀನು ಹೇಳುವುದು ಸಹಜ. ಆದರೆ ತನಗೆ ಅದು ವಿರುದ್ಧಕಾರ್ಯವೆನಿಸಿದರೂ ಪರೋಪಕಾರವು ಅದರಿಂದ ನಡೆಯುವುದಾದರೆ ಅದು ದುಷ್ಟವೆನಿಸುವುದಿಲ್ಲ.

೫೭. ದೇವದೇವನಾದ ಪರಶಿವನು ದುಷ್ಟಸಂಹಾರಕ್ಕಾಗಿಯೇ ಈಗ ಈ ಕಾರ್ಯಕ್ಕೆ ಪ್ರವರ್ತಿಸಿರುವನು. ಆದ್ದರಿಂದ ನೀನು ಅಣುರೂಪವನ್ನು ಪಡೆದು ಅಲ್ಲಿಗೆ ಹೋಗು. ಅದು ಅನ್ಯಾಯವಲ್ಲ.

ಪ್ರಸ್ತುತಾಪ್ರಸ್ತುತಂ ನಾಸ್ತಿ ತೇಜೋಮೂರ್ತೇಸ್ತವಾನಘ ।
ಸರ್ವದಾ ಸರ್ವಗಸ್ತ್ವಂ ಹಿ ನ ಕ್ವಚಿತ್ಪ್ರತಿಹನ್ಯಸೇ ॥ ೫೮ ॥

ಭೂತಗ್ರಾಮಂ ಸಮಸ್ತಂ ವೈ ತ್ವಮೇಕೋ ವ್ಯಾಪ್ಯ ತಿಷ್ಠಸಿ ।
ಉದರಸ್ಥಃ ಪಚಸ್ಯನ್ನಂ ಪ್ರಾಣಿನಾಂ ಮೇಷವಾಹನ ॥ ೫೯ ॥

ತ್ವಯ್ಯೇಕೇನ ಜಗತ್ಕೃತ್ಸ್ನಂ ಗೋಪ್ಯತೇ ಯದಿ ಪಾವಕ ।
ಕಿಂ ನ ಪ್ರಾಪ್ತಂ ತ್ವಯಾ ಬ್ರೂಹಿ ದೋಷಃ ಕಃ ಸ್ಯಾದ್ಧುತಾಶನ ॥ ೬೦ ॥

ಜುಗುಪ್ಸಾಸ್ಮಿನ್ನ ಕರ್ತವ್ಯಾ ತ್ವಯಾ ವೈ ಹವ್ಯವಾಹನ ।
ಉತ್ಪನ್ನಸ್ಯಾಸ್ಯ ಕಾರ್ಯಸ್ಯ ಕಾಲ ಏಷ ತವಾನಘ ॥ ೬೧ ॥

ತ್ರಿದಶಾಃ ಶರಣಂ ಪ್ರಾಪ್ತಾ ಹುತಭುಕ್ತ್ವಾಂ ವಿಭಾವಸೋ ।
ಅಹೋ ಧನ್ಯತರಶ್ಚಾಸಿ ಶ್ಲಾಘ್ಯೋ ಯದಿ ಕರಿಷ್ಯಸಿ ॥ ೬೨ ॥

---

೫೮. ಎಲೈ ಪವಿತ್ರಮೂರ್ತಿಯೇ, ನೀನು ಎಲ್ಲಿ ಬೇಕಾದರೂ ಸಂಚರಿಸಬಹುದು. ನೀನು ಸರ್ವವ್ಯಾಪಿಯು. ನಿನಗೆ ಪ್ರಸ್ತುತ, ಅಪ್ರಸ್ತುತವೆಂಬ ಕಾರ್ಯವಿವೇಕವು ಏನೂ ಕಾಣುವುದಿಲ್ಲ.

೫೯. ನೀನು ಸಮಸ್ತ ಭೂತದ್ರವ್ಯಗಳಲ್ಲಿಯೂ ವ್ಯಾಪಿಸಿರುವೆ. ಸಮಸ್ತ ಪ್ರಾಣಿಗಳ ಹೃದಯದಲ್ಲಿ ಅಡಗಿದ್ದು ಅವರು ಭಕ್ಷಿಸಿದ ಆಹಾರವನ್ನೆಲ್ಲಾ ಅರಗಿಸುವೆ.

೬೦. ಜಗತ್ತೆಲ್ಲವೂ ನಿನ್ನಿಂದ ಆಚ್ಛಾದಿಸಲ್ಪಟ್ಟಿರುವಾಗ, ನೀನು ಹೋಗದಿರುವ ಸ್ಥಳವಾವುದು ? ನೀನು ಅಲ್ಲಿಗೆ ಪ್ರವೇಶಿಸುವುದಾದರೆ ತಪ್ಪೇನು ?

೬೧. ಈ ಕಾರ್ಯನಿರ್ವಹಣದಲ್ಲಿ ನೀನು ಮಾತ್ರ ಜುಗುಪ್ಸೆಹೊಂದಬೇಡ. ನೀನು ದೇವತೆಗಳಿಗೆ ಉಪಕಾರಮಾಡುವ ಕಾಲವು ಇದೇ ಆಗಿರುವುದು.

೬೨. ಎಲೈ ಅಗ್ನಿಯೇ, ಈಗ ಸಮಸ್ತ ದೇವತೆಗಳೂ ನಿನ್ನನ್ನೇ ಮರೆಹೊಕ್ಕಿರುವರು. ನೀನೇ ಧನ್ಯನು, ನೀನೇ ಶ್ಲಾಘ್ಯನು, ಈ ಕೆಲಸವು ನಿನ್ನಿಂದಲೇ ಆಗಬೇಕು.

ಕುರು ಕಾರ್ಯಂ ಸುರಾಣಾಂ ತ್ವಂ ಮಗ್ನಾನಾಂ ಕರುಣಾಂ ಕುರು ।
ಸರ್ವಕಾಲೇ ಯಥಾ ಮರ್ತ್ಯಾ ವೀಕ್ಷಮಾಣಾಸ್ತು ಭಾಸ್ಕರಂ ॥ ೬೩ ॥

ತಥಾ ತವಾನನಂ ವಹ್ನೇ ಪಶ್ಯಂತಿ ಸುರಸತ್ತಮಾಃ ।
ಚಾರುಚಂದ್ರಪ್ರತೀಕಾಶಂ ಕುಂಡಲಾಭ್ಯಾಮಲಂಕೃತಂ ॥ ೬೪ ॥

ಅನೇನ ಕಿಂ ನ ಪರ್ಯಾಪ್ತಂ ವದ ನೂನಂ ವಿಭಾವಸೋ ।
ಏವಂ ಸಂಬೋಧ್ಯಮಾನೋಽಗ್ನಿರ್ವಿಷ್ಣುನಾ ದ್ವಿಜಸತ್ತಮಾಃ ॥ ೬೫ ॥

ಹೃದಯೇ ಚಿಂತಿತಂ ತೇನ ಯಾಸ್ಯಾಮಿ ಹರಸಂನಿಧೌ ।
ತತೋ ಮನೋಗತಂ ಜ್ಞಾತ್ವಾ ಅಗ್ನೇರ್ದೇವಾಸ್ತದಾನಘಾಃ ॥ ೬೬ ॥

ಸೇಂದ್ರಾಸ್ಸವರುಣಾದಿತ್ಯಾಃ ಸಯಕ್ಷೋರಗರಾಕ್ಷಸಾಃ ।
ತುಷ್ಟುವುಸ್ತೇ ಶುಭೈರ್ವಾಕ್ಯೈಃ ಪಾವಕಂ ದ್ವಿಜಸತ್ತಮಾಃ ॥ ೬೭ ॥

೬೩-೬೪. ಯಜ್ಞಪುರುಷನೇ. ಈಗ ದೇವತೆಗಳೆಲ್ಲರೂ ವಿಪತ್ಸಮುದ್ರದಲ್ಲಿ ಮುಳುಗಿರುವರು. ಅವರಲ್ಲಿ ದಯೆಯಿಡು. ಮನುಷ್ಯರು ಹೇಗೆ ಯಾವಾಗಲೂ ಸೂರ್ಯನಿಂದಲೇ ಪಾರಾಗುವರೋ, ಹಾಗೆಯೇ ಕುಂಡಲಗಳಿಂದ ಅಲಂಕೃತನಾಗಿ ಚಾರುಚಂದ್ರನಂತೆ ಹೊಳೆಯುವ ನಿನ್ನನ್ನೇ ಸರ್ವದಾ ದೇವತೆಗಳು ನೋಡುತ್ತಿರುವರು.

೬೫. ಇಷ್ಟರಿಂದಲೇ ನೀನು ದೇವತೆಗಳ ಹಿತಕ್ಕಾಗಿ ಈ ಕಾರ್ಯವನ್ನು ನಿರ್ವಹಿಸಬಾರದೆ?'', ಎಂದು ವಿಷ್ಣುವು ಬಗೆಬಗೆಯಾಗಿ ಹೊಗಳಲು,

೬೬. ಅಗ್ನಿದೇವನು ಹರನ ಸಮೀಪಕ್ಕೆ ಹೋಗಲು ಮನಸ್ಸಿನಲ್ಲಿ ನಿರ್ಧರಿಸಿದನು. ಇದನ್ನರಿತು ಸಮಸ್ತ ದೇವತೆಗಳೂ ಅಗ್ನಿಯನ್ನು ಬಹುವಾಗಿ ಶ್ಲಾಘಿಸಲಾರಂಭಿಸಿದರು.

೬೭. ಇಂದ್ರ ವರುಣ, ಆದಿತ್ಯ, ಯಕ್ಷ, ರಾಕ್ಷಸ, ಉರಗ, ಮೊದಲಾದ ದೇವತೆಗಳೆಲ್ಲಾ ಒಟ್ಟಾಗಿಸೇರಿ ಶುಭಕರಗಳಾದ ವಾಕ್ಯಗಳಿಂದ ಅಗ್ನಿಯನ್ನು ಬಹುವಾಗಿ ಹೊಗಳಿದರು.

**ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಸಾಂಬಕ್ರೀಡಾದಿವರ್ಣನಂ ನಾಮ
ಷಷ್ಟಿತಮೋಽಧ್ಯಾಯಃ**

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತ ಶೌನಕ
ಸಂವಾದ ರೂಪವಾಗಿ ಸಾಂಬಕ್ರೀಡಾವರ್ಣನೆಯೆಂಬ
ಅರುವತ್ತನೆಯ ಅಧ್ಯಾಯವು
ಮುಗಿದುದು.

|| ಶ್ರೀ ||

ಶ್ರೀ ಶಿವಾಯನಮಃ

ಅಥ ಶ್ರೀ ಸೌರಪುರಾಣೇ ಏಕಷಷ್ಟಿತಮೋಽಧ್ಯಾಯಃ.

|| ದೇವಾ ಊಚುಃ ||

ಜಲಭೀರೋ ಜಲೋತ್ಪನ್ನ ಜಲಾಜಲ ಜಲೇಚರ ।
ಜಲಜಾಮಲಪತ್ರಾಕ್ಷ ಯಜ್ಞದೇವ ಹುತಾಶನ ॥ ೧ ॥

ಕೃಷ್ಣಕೇತೋ ಕೃಷ್ಣವರ್ತ್ಮನ್ ಸ್ವರ್ಗಮಾರ್ಗಪ್ರದೀಪಕ ।
ಯಜ್ಞಾಹುತಿಹುತಾಹಾರ ಯಜ್ಞಾಹಾರ ಹರಾಕೃತೇ ॥ ೨ ॥

ಪೂರ್ಣಗರ್ಭ ಗವಾಂ ಗರ್ಭ ಜಯ ದೇವ ಮಹಾಶನ ।
ತಮೋಹರ ಮಹಾಹಾರ ಸ್ವಾಹಾಭರ್ತರ್ನಮೋಽಸ್ತು ತೇ ॥ ೩ ॥

ಅರುವತ್ತೊಂದನೆಯ ಅಧ್ಯಾಯ.

೧. ಸಮಸ್ತ ದೇವತೆಗಳೂ ಅಗ್ನಿ ಪುರುಷನನ್ನು ಹೀಗೆಪ್ರಾರ್ಥಿಸತೊಡಗಿದರು. "ಎಲೈ ಜಲಭೀರುವೇ, ಎಲೈ ಜಲೋತ್ಪನ್ನನೇ, ನೀರಿನಲ್ಲಿ ಸಂಚರಿಸುವವನೇ. ನೀರನ್ನು ಶೋಷಿಸುವವನೇ, ಯಜ್ಞಪುರುಷನಾದ ಪುಂಡರೀಕಾಕ್ಷನೇ, ನಿನಗೆ ನಮಸ್ಕಾರವು.

೨. ಕಪ್ಪುಬಣ್ಣದ ಧ್ವಜವುಳ್ಳವನೇ, ಕಪ್ಪಾದ ದಾರಿಯಲ್ಲಿ ಕಂಡುಬರುವವನೇ ಸ್ವರ್ಗಮಾರ್ಗವನ್ನು ಬೆಳಗಿಸುವವನೇ, ಯಜ್ಞಗಳ ಆಹುತಿಯಿಂದ ತೃಪ್ತನಾಗಿ ಪರಮೇಶ್ವರರೂಪಿಯಾದವನೇ ನಿನಗೆ ವಂದನೆಯು.

೩. ಸ್ವಾಹಾಪತಿಯೇ, ನೀನು ಗರ್ಭದಲ್ಲಿ ಸರ್ವವನ್ನೂ ಅಡಗಿಸಿರುವೆ. ಗೋಗರ್ಭದಲ್ಲಿ ನೀನೇ ಮುಖ್ಯಾಧಿದೇವತೆಯಾಗಿರುವೆ. ಕತ್ತಲೆಯನ್ನು ಹೋಗ ಲಾಡಿಸಿ, ಸಮಸ್ತವನ್ನೂ ಬೆಳಗಿಸುವ ನಿನಗೆ ಜಯವಾಗಲಿ.

ಹವ್ಯವಾಹನ ಸಪ್ತಾರ್ಚೇ ಚಿತ್ರಭಾನೋ ಮಹಾದ್ಯುತೇ ।
ಅನಲಾಗ್ನೇ ಯಜ್ಞಮುಖ ಜಯ ಪಾವಕ ಸರ್ವಗ ॥ ೪ ॥

ವಿಭಾವಸೋ ಮಹಾಭಾಗ ವೇದಭಾಷಾರ್ಥಭಾಷಣ ।
ಕೃಶಾನೋ ಕ್ರತುಸಂಭಾರಪ್ರಿಯ ವಿಶ್ವಸ್ರಭಾವನ ॥ ೫ ॥

ಸಾಗರಾಂಬುಘೃತಂ ದೇವ ತ್ವಮಶ್ವಮುಖಸಂಶ್ರಿತಃ ।
ಪಿಬಂಶ್ಚೈವೋದ್ಗಿರಂಶ್ಚೈವ ನ ತೃಪ್ತಿಮಧಿಗಚ್ಛಸಿ ॥ ೬ ॥

ತ್ವಂ ವಾಕ್ಯೇಷ್ವನುವಾಕ್ಯೇಷು ನಿಷತ್ಸೂಪನಿಷತ್ಸು ಚ ।
ಬ್ರಾಹ್ಮಣಾ ಬ್ರಹ್ಮಯೋನಿಂ ತ್ವಾಂ ಸ್ತುವಂತಿ ತ್ವತ್ಪರಾಯಣಾಃ ॥ ೭ ॥

೪-೫. ಹವ್ಯವನ್ನು ಹೊತ್ತು ದೇವತೆಗಳಿಗೆ ತಲಪಿಸುತ್ತಾ, ಏಳು ವಿಧವಾದ ಜ್ವಾಲೆಗಳಿಂದ ಪ್ರಕಾಶಿಸುತ್ತಾ, ಚಿತ್ರಭಾನು, ಕೃಶಾನು ಎಂಬ ವಿಶೇಷ ವಚನಗಳಿಂದ ಹೊಗಳಿಸಿಕೊಂಡು, ಯಜ್ಞಗಳಿಗೆ ಅಭಿಮಾನಿಯಾಗಿರುವ ನೀನು ಜಯಶೀಲನಾಗು. ನೀನು ಮಹಾ ಅದೃಷ್ಟಶಾಲಿಯು. ವೇದಾರ್ಥಪ್ರತಿಪಾದ್ಯನು. ಯಜ್ಞಪುರುಷನು. ನಿನಗಿಂತ ಶ್ರೇಷ್ಠನಾದವನು ಯಾರಿರುವರು ?

೬. ಅಗ್ನಿದೇವನೇ, ನೀನು ಬಡಬಾಗ್ನಿಯೆನಿಸಿ ಕುದುರೆಯ ಮುಖದಿಂದ ಸಮುದ್ರದ ನೀರೆಂಬ ತುಪ್ಪವನ್ನು ಎಷ್ಟು ಕುಡಿದರೂ, ಎಷ್ಟನ್ನು ಉಗುಳಿದರೂ ನಿನಗೆ ತೃಪ್ತಿಯಾಗಿಲ್ಲವಲ್ಲಾ!

೭. ನೀನು ಉಪವಾಕ್ಯ, ಮಹಾವಾಕ್ಯಗಳಲ್ಲಿಯೂ, ಉಪನಿಷತ್ತು ವೇದ ಮೊದಲಾದುವುಗಳಲ್ಲಿಯೂ, ಪ್ರತಿಪಾದಿತನಾಗಿರುವೆ. ನಿನ್ನನ್ನು ಸಮಸ್ತ ಬ್ರಾಹ್ಮಣರೂ ಭಕ್ತಿಯಿಂದ ಸ್ತುತಿಸುತ್ತಿರುವರು.

ತುಭ್ಯಂ ಕೃತ್ವಾ ನಮೋ ವಿಪ್ರಾಃ ಸ್ವಕರ್ಮವಿಹಿತಾಂ ಗತಿಂ ।
ಬ್ರಹ್ಮೇಂದ್ರವಿಷ್ಣುರುದ್ರಾಣಾಂ ಲೋಕಾನ್ ಸಂಪ್ರಾಪ್ನುವಂತಿ ಚ ॥ ೮ ॥

ತ್ವಮಂತಃ ಸರ್ವಭೂತಾನಾಂ ಭುಕ್ತಂ ಭೋಕ್ತಾ ಜಗತ್ಪತೇ ।
ಪಚಸೇ ಪಚತಾಂ ಶ್ರೇಷ್ಠ ತ್ರಿಲೋಕಾನ್ ಸಂಕ್ಷಯಿಷ್ಯಸಿ ॥ ೯ ॥

ಸಾಕ್ಷೀ ಲೋಕತ್ರಯಸ್ಯಾಸ್ಯ ತ್ವಯಾ ತುಲ್ಯೋ ನ ವಿದ್ಯತೇ ।
ಶರಣಂ ಭವ ದೇವಾನಾಂ ವಿಶ್ವತ್ರಯ ಮಹೇಶ್ವರ ॥ ೧೦ ॥

ಇತ್ಯೇವಂ ಸ್ತೂಯಮಾನೋಽಸಾವುತ್ಥಾಯ ಜ್ವಲನಸ್ತದಾ ।
ದೇವಾನ್ ಪ್ರದಕ್ಷಿಣೀಕೃತ್ಯ ಯಯೌ ಶಂಭುಗೃಹಂ ದ್ವಿಜಾಃ ॥ ೧೧ ॥

---

೮. ಸಮಸ್ತಜನರೂ ನಿನ್ನನ್ನು ಹೊಗಳಿ, ನಿನ್ನಿಂದ ಕರ್ಮಗಳನ್ನು ಮುಗಿಸಿ ಬ್ರಹ್ಮ, ಇಂದ್ರ, ವಿಷ್ಣು, ರುದ್ರ ಇಂತಹವರ ಲೋಕಗಳನ್ನು ಪಡೆಯುತ್ತಿರುವರು.

೯. ಜಗತ್ಪತಿಯೇ, ನೀನು ಸಮಸ್ತ ಪ್ರಾಣಿಗಳಲ್ಲಿಯೂ ಅಡಗಿರುತ್ತೀಯೆ· ಮೂರು ಲೋಕಗಳ ನಾಶಕನೂ ನೀನೇ ಆಗುವೆ. ಊಟಮಾಡುವವನೂ, ಊಟಮಾಡುವ ವಸ್ತುವೂ, ಊಟಮಾಡಿದ್ದನ್ನು ಅರಗಿಸುವವನೂ ನೀನೇ ಆಗಿರುವೆ.

೧೦. ಮೂರು ಲೋಕದ ಕರ್ಮಗಳಿಗೂ ನೀನು ಸಾಕ್ಷೀಭೂತನಾಗಿರುವೆ. ನಿನಗೆ ಸರಿಸಮನು ಬೇರೊಬ್ಬನಿಲ್ಲ. ಮೂರು ಲೋಕದ ಒಡೆಯನೇ, ನೀನು ದೇವತೆಗಳಿಗೆ ರಕ್ಷಕನಾಗು.''

೧೧. ಎಂದು ಪ್ರಾರ್ಥನೆಮಾಡುತ್ತಿದ್ದ ದೇವತೆಗಳನ್ನು ನೋಡಿ ಅಗ್ನಿಯು ಎದ್ದು ದೃಢಮನಸ್ಸಿನಿಂದ ದೇವತೆಗಳಿಗೆ ವಂದಿಸಿ ಶಿವಾಲಯವನ್ನು ಕುರಿತು ತೆರಳಿದನು.

ತತ್ರಾಪಶ್ಯತ್ಪ್ರತೀಹಾರಂ ಮಹಾದೇವಸಮಂ ಬಲೀ ।
ಪೂಜಿತಂ ಸೇಂದ್ರಕೈರ್ದೇವೈರ್ಮಹಾದೇವದಿದೃಕ್ಷುಭಿಃ ॥ ೧೨ ॥

ಕಪೀಂದ್ರವದನಂ ದೇವಂ ಕುಲಿಶೋದ್ಯತಪಾಣಿನಂ ।
ಶೂಲಹಸ್ತಂ ಮಹಾವೀರ್ಯಂ ಸೂರ್ಯಾಯುತಮಿವೋದಿತಂ ॥ ೧೩ ॥

ನಂದಿನಂ ಚ ತದಾ ದೃಷ್ಟ್ವಾ ಪಾವಕಸ್ತು ದ್ವಿಜೋತ್ತಮಾಃ ।
ವೇಗಸ್ತಸ್ಯಾತುಲಸ್ತೀಕ್ಷ್ಣಃ ಸಹಸೈವ ವ್ಯಹನ್ಯತ ॥ ೧೪ ॥

ತತ್ರಸ್ಥಶ್ಚಿಂತಯಾಮಾಸ ಪಶ್ಯಾಮೀತಿ ಕಥಂ ಹರಂ ।
ನಂದಿನಾ ದ್ವಾರಸಂಸ್ಥೇನ ಪುಮಾನ್ನ ಪ್ರವಿಶೇದ್ಗೃಹಂ ॥ ೧೫ ॥

ಪಶ್ಯಮಾನಸ್ಯ ಶೈಲಾದೇಃ ಪ್ರವಿಶೇ ಯದ್ಯಹಂ ಗೃಹಂ
ಫಲಸಿದ್ಧಿಂ ನ ಗಚ್ಛೇತ(?)ನಂದಿನಾ ಕುಪಿತೇನ ಚ ॥ ೧೬ ॥

---

೧೨. ಅಲ್ಲಿ ಪರಶಿವನಷ್ಟೇ ಬಲಿಷ್ಠನಾದ ಒಬ್ಬ ದ್ವಾರಪಾಲಕನು ನಿಂತಿದ್ದನು. ಅವನನ್ನು ಇಂದ್ರಾದಿದೇವತೆಗಳೂ, ಶಿವದರ್ಶನಾಕಾಂಕ್ಷಿಗಳೂ ಭಕ್ತಿಯಿಂದ ಅರ್ಚಿಸುತ್ತಿದ್ದರು.

೧೩. ಆತನೇ ನಂದಿಯು. ಅವನ ಮುಖವು ಕಪಿಶ್ರೇಷ್ಠನ ಮುಖದಂತಿತ್ತು. ಕೈಯ್ಯಲ್ಲಿ ವಜ್ರಾಯುಧವನ್ನು ಹಿಡಿದಿದ್ದನು. ಹತ್ತುಸಾವಿರ ಸೂರ್ಯರಂತೆ ಹೊಳೆಯುತ್ತಾ ಮಹಾವೀರನಾಗಿ ಬಾಗಿಲಿನಲ್ಲಿ ನಿಂತಿದ್ದನು.

೧೪. ಅಂತಹ ನಂದೀಶ್ವರನನ್ನು ನೋಡಿಮೊಡನೆಯೇ ಅಗ್ನಿಯ ವೇಗವೆಲ್ಲವೂ ಅಲ್ಲಿಯೇ ಅಡಗಿಹೋಯಿತು.

೧೫. ಈ ನಂದಿಯು ಯಾವ ಪುರುಷನನ್ನೂ ಒಳಗೆ ಬಿಡುವಂತಿರಲಿಲ್ಲ. ಅಂತಹವನ ಎದುರಿನಲ್ಲಿ ನಾನು ಒಳಗೆ ಪ್ರವೇಶಿಸಿ ಶಂಕರನನ್ನು ನೋಡುವುದು ಹೇಗೆ ?ಎಂದು ಅಗ್ನಿಯು ಯೋಚಿಸಲಾರಂಭಿಸಿದನು.

೧೬. ಅಲ್ಲದೆ ಈಗ ಒಳಗೆ ಪ್ರವೇಶಿಸಿದುದನ್ನು ನಂದೀಶ್ವರನು ನೋಡಿದ್ದೇ ಆದರೆ ನನ್ನ ಕಾರ್ಯವು ಸಿದ್ಧಿಸಲಾರದು. ನಂದೀಶ್ವರನ ಕೋಪಕ್ಕೆ ಪಾತ್ರನಾಗಬೇಕಾಗುತ್ತದೆ.

ಏವಂ ಚಿಂತಾರ್ಣವೇ ಮಗ್ನೋ ಯಾವತ್ತಿಷ್ಠತ್ಯಸೌ ಕವಿಃ ।
ದ್ವಿಜಾನ್ನಾನಾವಿಧಾಂಸ್ತಾವದ್ಭ್ರಮಮಾಣಾಂಶ್ಚ ದೃಷ್ಟವಾನ್ ॥ ೧೭ ॥

ತಾನ್‌ದೃಷ್ಟ್ವಾ ಚಿಂತಯಾಮಾಸ ಹಂಸಸ್ಯ ಹರಸನ್ನಿಧೌ ।
ರೂಪಂ ಕೃತ್ವಾ ಪ್ರವೇಕ್ಷ್ಯಾಮಿ ಇತ್ಯುಪಾಯಮಚಿಂತಯತ್ ॥ ೧೮ ॥

ಆದಾಯ ಹಂಸರೂಪಂ ತು ಪ್ರವಿಷ್ಟಃ ಪಾವಕಸ್ತದಾ ।
ಪ್ರವಿಶ್ಯ ಶಂಕಾರಹಿತಃ ಸೂಕ್ಷ್ಮರೂಪೋ ವ್ಯವಸ್ಥಿತಃ ॥ ೧೯ ॥

ಪಾರ್ವತ್ಯಾ ವಾಹನಂ ಸಿಂಹಮಪಶ್ಯಚ್ಚ ವಿಭಾವಸುಃ ।
ಗೋಕ್ಷೀರಧವಳಾಭಾಸಂ ಮಹಾಲಾಂಗೂಲಶೋಭಿತಂ ॥ ೨೦ ॥

ಜಾಜ್ವಲ್ಯಮಾನನಯನಂ ಚಂದ್ರಕೋಟಿಸಮಪ್ರಭಂ ।
ಪ್ರಸಾರಿತಚ್ಛಟಾಟೋಪಂ ಹುಂಕಾರಕೃತಭೂಷಣಂ ॥ ೨೧ ॥

---

೧೭. ಎಂದು ಯೋಚಿಸುತ್ತಾ ಅಗ್ನಿಯು ನಿಂತಿರಲು, ಅಲ್ಲಿ ಅನೇಕ ಪಕ್ಷಿಗಳು ಓಡಾಡುತ್ತಿರುವುದನ್ನು ಕಂಡನು.

೧೮. ಅವುಗಳನ್ನು ನೋಡಿ, ತಾನೂ ಹಂಸದ ವೇಷವನ್ನು ಧರಿಸಿ ಅವುಗಳ ಮಧ್ಯದಲ್ಲಿದ್ದು ಒಳಗೆ ಪ್ರವೇಶಿಸುವುದೇ ನ್ಯಾಯವೆಂಬುದನ್ನು ದೃಢಮಾಡಿದನು.

೧೯. ಅದರಂತೆಯೇ ಅಗ್ನಿಯು ಹಂಸದ ವೇಷವನ್ನು ಧರಿಸಿ ಸೂಕ್ಷ್ಮರೂಪದಿಂದ ಒಳಕ್ಕೆ ಪ್ರವೇಶಿಸಿದನು.

೨೦. ಅಲ್ಲಿ ಪಾರ್ವತಿಯ ವಾಹನವಾದ ಸಿಂಹವು ನಿಂತಿತ್ತು. ಅದು ಹಸುವಿನ ಹಾಲಿನಂತೆ ಶುಭ್ರವಾಗಿಯೂ ದೊಡ್ಡ ಬಾಲದಿಂದ ಕೂಡಿದ್ದಾಗಿಯೂ ಇತ್ತು.

೨೧. ಅದರ ಕಣ್ಣುಗಳು ಕೆಂಡದಂತೆ ಉರಿಯುತ್ತಿದ್ದುವು. ಅದರ ಕೇಸರಗಳು ಸುತ್ತಲೂ ವ್ಯಾಪಿಸಿದ್ದುವು. ಹುಂಕಾರದಿಂದ ಭಯವನ್ನು ಹುಟ್ಟಿಸುವುದಾಗಿತ್ತು.

ದಾನವಾನಾಂ ಕ್ಷಯಕರಂ ದೇವಾನಾಮಭಯಪ್ರದಂ ।
ಹುಂಕಾರೇಣ ತತಸ್ತಸ್ಯ ಜ್ವಲನೋ ಬಧಿರೀಕೃತಃ ॥ ೨೨ ॥

ಅಹೋ ದುಃಖಮಿದಂ ಪ್ರಾಪ್ತಮಿತಿ ಸಂಚಿಂತ್ಯ ಚೇತಸಾ ।
ಯದಿ ಜೀವನ್ ಗಮಿಷ್ಯಾಮಿ ಸಿಂಹಾದಸ್ಮಾದಹಂ ತದಾ ॥ ೨೩ ॥

ತೇನ ಪರ್ಯಾಪ್ತಕಾಮೋಽಹಮಿತಿ ಸಂಚಿಂತ್ಯ ನಿರ್ಗತಃ ।
ಯತ್ರ ದೇವಾ ಮಹೇಂದ್ರಾದ್ಯಾಃ ಸಂಸ್ಥಿತಾಃ ಮೇರುಮೂರ್ಧನಿ ।
ದೇವಾಃ ಸರ್ವೇ ಸುಸಂಹೃಷ್ಟಾ ಊಚುಸ್ತಂ ಜಾತವೇದಸಂ ॥ ೨೪ ॥

॥ ದೇವಾ ಊಚುಃ ॥

ಅಸ್ಮತ್ಕಾರ್ಯಂ ತ್ವಯಾ ವಹ್ನೇ ಗತ್ವಾ ತತ್ರ ಯಥಾ ಕೃತಂ ।
ತತ್ಸರ್ವಂ ಬ್ರೂಹಿ ನಃ ಕ್ಷಿಪ್ರಂ ಶರ್ಮಾಸ್ಮಾಕಂ ಯಥಾ ಭವೇತ್ ॥ ೨೫ ॥

---

೨೨. ದಾನವರನ್ನು ನಾಶಮಾಡಿ, ದೇವತೆಗಳಿಗೆ ಧೈರ್ಯವನ್ನುಂಟುಮಾಡುವಂತಹ ಆ ಸಿಂಹವು ಒಂದು ಸಾರಿ ಗರ್ಜಿಸಿದೊಡನೆಯೇ ಅಗ್ನಿಯ ಕಿವಿಯು ಕಿವುಡಾಯಿತು.

೨೩. ಅಯ್ಯೋ, ನನಗೆ ಎಂತಹ ದುಃಖವು ಪ್ರಾಪ್ತವಾಯಿತು. ಈ ಸಿಂಹದಿಂದ ನಾನು ಬದುಕುವುದು ಹೇಗೆ ?

೨೪. ಇಷ್ಟೇ ಸಾಕು, ಎಂದು ಹೇಳುತ್ತಾ ಅಗ್ನಿಯು ಅಲ್ಲಿಂದ ಹಿಂದಿರುಗಿ ದೇವತೆಗಳಿದ್ದ ಸ್ಥಳಕ್ಕೆ ಬಂದನು. ದೇವತೆಗಳೆಲ್ಲರೂ ಅಗ್ನಿಯನ್ನು ನೋಡಿ,

೨೫. "ಅಗ್ನಿದೇವನೇ, ನಮ್ಮ ಕೆಲಸವೇನಾಯಿತು. ನೀನು ಅಲ್ಲಿ ನಡೆಸಿದುದು ಏನು? ನಮಗೆ ಸಂತೋಷವನ್ನುಂಟುಮಾಡುವಂತಹ ಆ ವಿಷಯವನ್ನು ನಮಗೆ ತಿಳಿಸು" ಎನ್ನಲು,

॥ ಅಗ್ನಿರುವಾಚ ॥

ಗತೋಽಹಂ ತಸ್ಯ ಭವನಂ ದೇವದೇವಸ್ಯ ಶೂಲಿನಃ ।
ಮಯಾ ನಂದೀಶ್ವರೋ ದೃಷ್ಟೋ ದ್ವಾರದೇಶ ಉಪಸ್ಥಿತಃ ॥ ೨೬ ॥

ಹಂಸರೂಪಂ ತತಃ ಕೃತ್ವಾ ಪ್ರವಿಶ್ಯಾಂತಃಪುರಂ ಸುರಾಃ ।
ತತ್ರ ಸೂಕ್ಷ್ಮವಪುರ್ಭೂತ್ವಾ ಯಾವತ್ಕ್ಷಣಮಹಂ ಸ್ಥಿತಃ ॥ ೨೭ ॥

ತಾವತ್ಪಂಚಾನನೋ ದೃಷ್ಟೋ ಗಿರಿಜಾಯಾಸ್ತು ವಾಹನಂ ।
ಅತಿರೌದ್ರೋ ಮಹಾಕಾಯಃ ಪ್ರಲಯಾಂತಕಸನ್ನಿಭಃ ॥ ೨೮ ॥

ಭೀತೋಽಹಂ ನಿರ್ಗತಸ್ತಸ್ಮಾದದೃಷ್ಟ್ವೈವ ಪಿನಾಕಿನಂ ।
ಯುಷ್ಮತ್ಕಾರ್ಯಮಕೃತ್ವೈವ ಸಂಪ್ರಾಪ್ತ ಇಹ ಭೋ ಸುರಾಃ ॥ ೨೯ ॥

ಪುನರ್ವಿಚಿಂತ್ಯತಾಂ ಕಾರ್ಯಂ ಸರ್ವೇಷಾಂ ವೋ ಯಥಾ ಸುಖಂ ।
ಏವಂ ವಹ್ನೇರ್ವಚಃ ಶ್ರುತ್ವಾ ದೇವಾ ವಿಷ್ಣುಪುರೋಗಮಾಃ ॥ ೩೦ ॥

---

೨೬. ಆಗ ಅಗ್ನಿಯು, ತಾನು ನಡೆಸಿದ ಕಾರ್ಯಗಳನ್ನೆಲ್ಲಾ ವಿವರಿಸಲಾರಂಭಿಸಿದನು. " ಎಲೈ ದೇವತೆಗಳೇ, ನಾನು ಶಿವಾಲಯದ ಸಮೀಪಕ್ಕೆ ಹೋದೆನು. ಅಲ್ಲಿ ಬಾಗಿಲಿನಲ್ಲಿಯೇ ನಂದೀಶ್ವರನು ನಿಂತಿದ್ದನ್ನು ನೋಡಿದೆನು.

೨೭. ಆ ಮೇಲೆ ಹಂಸದ ವೇಷವನ್ನು ಧರಿಸಿ, ಅಂತಃಪುರವನ್ನು ಹೊಕ್ಕು ಸೂಕ್ಷ್ಮರೂಪದಿಂದ ಸ್ವಲ್ಪಹೊತ್ತು ನಿಂತಿದ್ದೆನು.

೨೮. ಆಗಲೇ ಪಾರ್ವತಿಯ ವಾಹನವಾದ ಸಿಂಹವು ಭಯಂಕರವಾದ ಪ್ರಲಯದ ಯಮನಂತೆ ಉಗ್ರವಾಗಿರುವುದನ್ನು ನೋಡಿದೆನು.

೨೯. ಅದರಿಂದ ನನಗೆ ಬಹಳವಾಗಿ ಭಯವುಂಟಾಯಿತು. ನಿಮ್ಮ ಕಾರ್ಯಕ್ಕೆ ಗಮನಕೊಡದೆ ಅಲ್ಲಿಂದ ಓಡಿ ಇಲ್ಲಿಗೆ ಬಂದಿರುವೆನು.

೩೦. ಎಲೈ ಸುರೋತ್ತಮರೇ, ಈಗ ಕೆಲಸವು ವ್ಯರ್ಥವಾಯಿತು. ಮತ್ತೇ ನನ್ನಾದರೂ ಉಪಾಯವನ್ನು ಹುಡುಕಿರಿ " ಎಂದು ಹೇಳಲು ಅಗ್ನಿಯ ಮಾತನ್ನು ವಿಷ್ಣುವೇ ಮೊದಲಾದವರು ಕೇಳಿ,

ಯಯುಮರ್ುನಿಗಣ್ಯೈಃ ಸಾರ್ಧಂ ಮಂದರಂ ಚಾರುಕಂದರಂ ।
ತಮಾಸಾದ್ಯ ಗಿರಿಶ್ರೇಷ್ಠಂ ಪ್ರಿಯಂ ದೇವಸ್ಯ ಶೂಲಿನಃ ॥ ೩೧ ॥
ಕೃತಾಂಜಲಿಪುಟಾಃ ಸರ್ವೇ ಹ್ಯಸ್ತುವನ್ ವೃಷಭಧ್ವಜಂ ॥ ೩೨ ॥

॥ ದೇವಾ ಊಚುಃ ॥

ಓಂ ನಮಃ ಪರಮೇಶಾಯ ತ್ರಿನೇತ್ರಾಯ ತ್ರಿಶೂಲಿನೇ ।
ವಿರೂಪಾಯ ಸುರೂಪಾಯ ಪಂಚಾಸ್ಯಾಯ ತ್ರಿಮೂರ್ತಯೇ ॥ ೩೩ ॥

ವರದಾಯ ವರಾರ್ಹಾಯ ಕೂರ್ಮಾಯ ಚ ಮೃಗಾಯ ಚ ।
ನೀಲಾಲಕಶಿಖಂಡಾಯ ಮಂಡಲೇಶಾಯ ತೇ ನಮಃ ॥ ೩೪ ॥

ವಿಶ್ವಮಾನಾಯ ವಿಶ್ವಾಯ ವಿಶ್ವೇಶಾಯಾತ್ಮರೂಪಿಣೇ ।
ಕಾಲಘ್ನಾಯ ಮಖಘ್ನಾಯ ಅಂಧಕಘ್ನಾಯ ವೈ ನಮಃ ॥ ೩೫ ॥

೩೧-೩೨. ಸಮಸ್ತ ಮಹರ್ಷಿಗಳೊಡನೆ ತಾವೇ ಮಂದರಪರ್ವತದ ಸಮೀಪಕ್ಕೆ ಹೋದರು. ಅಲ್ಲಿ ಅಂಜಲಿಬದ್ಧರಾಗಿ ನಿಂತಿದ್ದು ವೃಷಭಧ್ವಜನಾದ ಪರಶಿವನನ್ನು ಹೀಗೆ ಪ್ರಾರ್ಥಿಸತೊಡಗಿದರು.

೩೩-೩೪. "ಓ ಪರಶಿವನೇ, ನೀನು ತ್ರಿನೇತ್ರನು, ತ್ರಿಶೂಲಧಾರಿಯು, ರೂಪ ಮತ್ತು ವಿರೂಪವನ್ನು ಪಡೆದು, ಐದು ಮುಖಗಳಿಂದ ತ್ರಿಮೂರ್ತ್ಯಾತ್ಮಕನಾಗಿರುವೆ. ವರದನೂ, ವರಕ್ಕೆ ಯೋಗ್ಯನೂ, ಕೂರ್ಮ, ಜಿಂಕೆ ಮುಂತಾದ ಪ್ರಾಣಿರೂಪನೂ ಆಗಿರುವೆ. ನೀಲವಾದ ಮುಂಗುರುಳೂ, ಜಟಾಜೂಟವೂ ನಿನ್ನನ್ನು ಬಹುವಾಗಿ ಅಲಂಕರಿಸುತ್ತಿವೆ.

೩೫. ನೀನು ಪ್ರಪಂಚವನ್ನೇ ಅಳೆಯುವವನು. ಲೋಕಕ್ಕೆ ಒಡೆಯನು. ಯಮ, ದಕ್ಷಯಜ್ಞ, ಅಂಧಕಾಸುರ ಇವರನ್ನೆಲ್ಲಾ ಧ್ವಂಸಮಾಡಿದವನೂ ನೀನಲ್ಲವೇ ?

ನಮೋ ಮಂತ್ರಾಯ ಜಪ್ಯಾಯ ಕೋಟಿಜಾಪ್ಯಾಯ ತೇ ನಮಃ ।
ಧ್ಯಾನಾಯ ಧ್ಯೇಯರೂಪಾಯ ಧ್ಯೇಯಧ್ಯಾನಾತ್ಮನೇ ನಮಃ ॥ ೩೬ ॥

ಈಶೋಽನೀಶಸ್ತ್ವಮೇವೇಶ ಅಂತಾನಂತಸ್ತ್ವಮೇವ ಚ ।
ಅವ್ಯಯಸ್ತ್ವಂ ವ್ಯಯಶ್ಚೈವ ಜನ್ಮಾಜನ್ಮ ತ್ವಮೇವ ಚ ॥ ೩೭ ॥

ನಿತ್ಯಾನಿತ್ಯಸ್ತ್ವಮೇವೇಶ ಧರ್ಮಾಧರ್ಮಸ್ತ್ವಮೇವ ಚ ।
ಗುರುಸ್ತ್ವಮಗುರುರ್ದೇವ ಬೀಜಂ ವಾऽಬೀಜಮೇವ ಚ ॥ ೩೮ ॥

ಕಾಲಸ್ತ್ವಮಸಿ ಲೋಕಾನಾಮಕಾಲಃ ಪರಿಗೀಯಸೇ ।
ಬಲಸ್ತ್ವಮಬಲಶ್ಚೈವ ಪ್ರಾಣಶ್ಚಾಪ್ರಾಣ ಏವ ಚ ॥ ೩೯ ॥

ಸಾಕ್ಷೀ ತ್ವಂ ಕರ್ಮಣಾಂ ದೇವ ತಥಾऽಸಾಕ್ಷೀ ಮಹೇಶ್ವರ ।
ಶಾಸ್ತಾऽಶಾಸ್ತಾ ವಿರೂಪಾಕ್ಷ ಧ್ರುವಶ್ಚಾಧ್ರುವ ಏವ ಚ ॥ ೪೦ ॥

---

೩೬. ಮಂತ್ರಸ್ವರೂಪಿಯೂ, ಜಪಕ್ಕೆ ಯೋಗ್ಯನೂ, ಕೋಟಿಜಪಕ್ಕೆ ವಿಷಯನೂ ನೀನೇ ಆಗಿರುವೆ. ಧ್ಯಾನರೂಪನೂ, ಧ್ಯಾನಕ್ಕೆ ವಿಷಯನೂ ಆದ ನಿನಗೆ ವಂದನೆ.

೩೭. ಪರಶಿವನೇ, ನೀನೇ ಒಡೆಯನು, ನಿನಗೆ ಯಾರೂ ಒಡೆಯರಿಲ್ಲ. ನೀನು ಅಂತರಹಿತನೂ, ಅನಂತಾತ್ಮಕನೂ, ನಾಶರಹಿತನೂ, ಜನ್ಮಾಜನ್ಮವಿರಹಿತನೂ ಆಗಿರುವೆ.

೩೮. ಈಶ್ವರನೇ, ನೀನು ನಿತ್ಯಾನಿತ್ಯನು, ಧರ್ಮ, ಅಧರ್ಮ, ಗುರು, ಶಿಷ್ಯ, ಬೀಜರಹಿತ ಈ ವಸ್ತುಗಳೆಲ್ಲವೂ ನೀನೇ ಆಗಿರುವೆ.

೩೯. ಲೋಕಕ್ಕೆ ಕಾಲಸ್ವರೂಪನಾಗಿರುವೆ. ಆದರೆ ನೀನು ಮಾತ್ರ ಕಾಲನಿಗೆ ಸಿಕ್ಕಿದವನಲ್ಲ. ಬಲ, ಅಬಲ, ಪ್ರಾಣ ಅಪ್ರಾಣ, ಇವೆಲ್ಲವೂ ನಿನ್ನ ವಿಕಾರಗಳಲ್ಲವೇ ?

೪೦. ನೀನು ಸರ್ವಕರ್ಮ ಸಾಕ್ಷಿಯು. ಆದರೆ ಏನನ್ನೂ ಕಾಣದವನಂತೆ ಇರುವೆ. ಶಿಕ್ಷೆಮಾಡುವವನೂ, ಶಿಕ್ಷೆಗೆ ಸಿಲುಕದವನೂ ಧ್ರುವಸ್ವರೂಪನೂ, ಮಿಥ್ಯಾಭೂತನೂ ಆಗಿ ಕಾಣುವೆ.

ಸಂಸಾರೀ ತ್ವಂ ಹಿ ಭೂತಾನಾಮಸಂಸಾರೀ ತ್ವಮೇವ ಚ ।
ಗೋಪ್ತಾ ತ್ವಂ ಸರ್ವಜಂತೂನಾಂ ನಾಸ್ತಿ ಗೋಪ್ತಾ ತವೇಶ್ವರಃ ॥ ೪೧ ॥

ಜೀವಸ್ತ್ವಂ ಜೀವಲೋಕಸ್ಯ ಜೀವಸ್ತ್ವೇಽನ್ಯೋ ನ ವಿದ್ಯತೇ ।
ನ್ಯೂನಾತಿರಿಕ್ತಭಾವೇನ ತ್ವಮಾಯುಶ್ಚ ಶರೀರಿಣಾಂ ॥ ೪೨ ॥

ದೇಹಿನಾಂ ಶಂಕರಸ್ತ್ವಂ ಹಿ ನ ಚಾನ್ಯಸ್ತವ ಶಂಕರ ।
ಅರುದ್ರಸ್ತ್ವಂ ಮಹಾದೇವ ರುದ್ರಸ್ತ್ವಂ ಘೋರಕರ್ಮಣಾಂ ॥ ೪೩ ॥

ದೇವಾನಾಂ ಚ ಮಹಾದೇವೋ ಮಹಾಂಸ್ತ್ವತ್ತೋ ನ ವಿದ್ಯತೇ ।
ಕಾಮಸ್ತ್ವಂ ಭವಿನಾಂ ಸರ್ವಕಾಮದಸ್ತ್ವಂ ಜಗತ್ಪತೇ ॥ ೪೪ ॥

---

೪೧. ನೀನು ಪ್ರಾಣಿಗಳಿಗೆ ಸಂಸಾರವನ್ನು ಕಟ್ಟುವೆ. ನೀನು ಮಾತ್ರ ಸಂಸಾರಕ್ಕೆ ಸಿಕ್ಕುವನಲ್ಲ. ಸಮಸ್ತ ಲೋಕವನ್ನು ಕಾಪಾಡುವವನು ನೀನಾದರೂ, ನಿನ್ನನ್ನು ರಕ್ಷಿಸುವವರು ಮಾತ್ರ ಯಾರೂ ಇಲ್ಲ.

೪೨. ನೀನೇ ಜೀವನು,ಜೀವಲೋಕಕ್ಕೆ ಜೀವನವನ್ನು ಕೊಡುವವನು ನೀನೇ ಹೆಚ್ಚು, ಕಮ್ಮಿಯ ಪ್ರಮಾಣದಲ್ಲಿ ಜನರಿಗೆ ಆಯುಸ್ಸನ್ನು ಕೊಡುತ್ತಾ ನೀನೇ ಆಯು ರೂಪದಿಂದಿರುವೆ.

೪೩. ಸ್ವಾಮಿಯೇ, ದೇಹಿಗಳಿಗೆ ನೀನು ಸುಖಪ್ರದನು. ಭಯಂಕರನಲ್ಲದವನು. ಪಾಪಿಗಳಿಗೆ ಮಾತ್ರ ಹೆಚ್ಚು ಭಯಜನಕನಾಗಿ ರೌದ್ರಭಾವದಿಂದ ತೋರುತ್ತಲಿರುವೆ.

೪೪. ಮಹೇಶ್ವರನೇ, ದೇವತೆಗಳಿಗೆಲ್ಲಾ ನೀನೇ ದೊಡ್ಡವನು. ನಿನಗಿಂತ ದೊಡ್ಡವನು ಮತ್ತೆ ಯಾರಿರುವರು? ಸಂಸಾರಿಗಳಿಗೆ ಆಸೆಯನ್ನು ಕೊಡುವವನೂ ಆಸೆಯನ್ನು ಪೂರ್ತಿಮಾಡುವವನೂ ನೀನೇ ಆಗಿದ್ದೀಯೆ.

ಅಜೇಯೋ ಜಯಿನಾಂ ಶ್ರೇಷ್ಠೋ ಜಯರೂಪಸ್ತ್ವಮೇವ ಹಿ ।
ಪುರಾಣಪುರುಷಸ್ತ್ವಂ ಹಿ ಪುರಾಣೋನ್ಯೋ ನ ವಿದ್ಯತೇ ॥ ೪೫ ॥

ವ್ಯಾಲಯಜ್ಞೋಪವೀತಾಯ ಸರೋಜಾಂಕಾಯ ತೇ ನಮಃ ।
ನಮೋಽಸ್ತು ನೀಲಗ್ರೀವಾಯ ಶಿತಿಕಂಠಾಯ ಮೀಢುಷೇ ॥ ೪೬ ॥

ನಮಃ ಕಪಾಲಹಸ್ತಾಯ ಪಾಶಹಸ್ತಾಯ ದಂಡಿನೇ ।
ನಮೋ ದೇವಾಧಿದೇವಾಯ ನಮೋ ನಾರಾಯಣಾಯ ಚ ॥ ೪೭ ॥

ಊರ್ಧ್ವಮಾರ್ಗಪ್ರಣೇತ್ರೇ ಚ ನಮಸ್ತೇ ಹ್ಯೂರ್ಧ್ವರೇತಸೇ ।
ಕ್ರೋಧಿನೇ ವೀತರಾಗಾಯ ಗಜಚರ್ಮಾವಗುಂಠಿನೇ ॥ ೪೮ ॥

ನಮೋ ಬ್ರಹ್ಮಶಿರೋಘ್ನಾಯ ನಮಸ್ತೇ ರುಕ್ಮರೇತಸೇ ।
ನಮಶ್ಚಂಡಾಯ ಧೀರಾಯ ಕಮಂಡಲುನಿಷಂಗಿಣೇ ॥ ೪೯ ॥

---

೪೫. ಜಯಶೀಲನಾಗಿ, ಜಯಪ್ರದನಾಗಿ, ಜಯರೂಪಿಯಾಗಿರುವ ನೀನು ಪುರಾಣಪುರುಷನು. ನಿನಗೆ ಆದ್ಯಂತಗಳಿಲ್ಲ. ನಿನಗಿಂತ ಹಿಂದಿನ ವಸ್ತುವು ಬೇರೊಂದಿಲ್ಲ.

೪೬. ಸರ್ಪವನ್ನೇ ಯಜ್ಞೋಪವೀತವನ್ನಾಗಿಮಾಡಿಕೊಂಡು ಕಮಲವನ್ನು ಹೃದಯದಲ್ಲಿಟ್ಟು, ನೀಲಗ್ರೀವನೂ, ವಿಷಕಂಠನೂ, ಮೇಘರೂಪದಿಂದ ವೃಷ್ಟಿಪ್ರದನೂ ಆಗಿರುವ ನಿನಗೆ ನಮಸ್ಕಾರವು.

೪೭. ಪರಶಿವನೇ, ನಿನ್ನ ಕೈಯ್ಯಲ್ಲಿ ಕಪಾಲವಿದೆ. ಪಾಶವನ್ನೂ ಹಿಡಿದಿರುವೆ. ಜನರ ಪಾಪನಿವಾರಕನಾಗಿ ದೇವಾಧಿದೇವನಾಗಿರುವ ನಿನಗೆ ವಂದನೆಯು.

೪೮. ಪರಮೇಶ್ವರನೇ, ನಿನ್ನ ದೃಷ್ಟಿಯು ಊರ್ಧ್ವಮಾರ್ಗದಲ್ಲಿ ಹೋಗುತ್ತಿದೆ. ನಿನ್ನ ರೇತಸ್ಸೂ ಊರ್ಧ್ವರೂಪವಾಗಿದೆ. ನೀನು ಪರಮಕ್ರೋಧವುಳ್ಳವನು, ರಾಗಗಳನ್ನು ತ್ಯಜಿಸಿರುವವನು, ಗಜಚರ್ಮವನ್ನು ಹೊದ್ದಿರುವವನು.

೪೯. ಬ್ರಹ್ಮನ ಶಿರಸ್ಸನ್ನು ಛೇದಿಸಿ, ಸುವರ್ಣರೇತಸ್ಕನಾಗಿ ಹೊಳೆಯುತ್ತಾ, ಅತ್ಯುಗ್ರನೂ, ಧೀರನೂ, ಕಮಂಡಲುಧಾರಿಯೂ ಆದ ನಿನಗೆ ನಮಸ್ಕಾರವು.

ನಮಃ ಪ್ರಚಂಡವೇಗಾಯ ಕ್ರೋಧಚಂಡಾಯ ತೇ ನಮಃ ।
ವರೇಣ್ಯಾಯ ಶರಣ್ಯಾಯ ಬ್ರಹ್ಮಣ್ಯಾಯಾಂಬಿಕಾಪತೇ ॥ ೫೦ ॥

ಸರ್ವಾನುಗ್ರಹಕರ್ತಾ ತ್ವಂ ಧನದಾಯ ನಮೋ ನಮಃ ।
ನಮಃ ಸಂಸಾರಪೋತಾಯ ಅಣಿಮಾದಿಪ್ರದಾಯಿನೇ ॥ ೫೧ ॥

ಜ್ಯೇಷ್ಠಸಾಮಾದಿಸಂಸ್ಥಾಯ ರಥಂತರಾಯ ತೇ ನಮಃ ।
ತ್ರಿಗಾಥಾಯ ತ್ರಿಮಾತ್ರಾಯ ತ್ರಿಮೂರ್ತೇ ತ್ರಿಗುಣಾತ್ಮನೇ ॥ ೫೨ ॥

ತ್ರಿವೇದಿನೇ ತ್ರಿಸಂಧ್ಯಾಯ ತ್ರಿಶೂನ್ಯಾಯ ತ್ರಿವರ್ಮಣೇ ।
ತ್ರಿದೇಹಾಯ ತ್ರಿಕಾಲಾಯ ತ್ರಿಶಕ್ತಿವ್ಯಾಪಿನೇ ನಮಃ ॥ ೫೩ ॥

---

೫೦. ನೀನು ಪ್ರಚಂಡವೇಗವುಳ್ಳವನು. ಬಹು ಕೋಪಿಯು. ಸರ್ವ ಶ್ರೇಷ್ಠನು. ರಕ್ಷಕನು. ಬ್ರಹ್ಮಜ್ಞಾನಪ್ರದಾಯಕನು. ಅಂಬಿಕಾಪತಿಯಾದ ಶಂಕರನೇ, ನಿನಗೆ ವಂದನೆ.

೫೧. ಭಕ್ತರನ್ನು ಉದ್ಧರಿಸುತ್ತಾ, ಕುಬೇರನಿಗೆ ನಿಧಿಪತ್ವವನ್ನು ಕೊಟ್ಟು ಅಣಿಮಾದಿ ಅಷ್ಟಸಿದ್ಧಿಗಳನ್ನೂ ಅನುಗ್ರಹಿಸುವಂತಹವನು ನೀನು. ಸಂಸಾರದ ಕಷ್ಟ ಪರಂಪರೆಗಳಿಂದ ಸಂಪೂರ್ಣವಾಗಿ ಉದ್ಧರಿಸುವ ನಿನಗೆ ನಮಸ್ಕಾರವು.

೫೨. ಸಾಮವೇದಕ್ಕೆ ಅಧಿದೇವನಾಗಿ, ರಥಂತರಾದಿಸಾಮಲೋಲುಪನಾಗಿ, ಗಾಥಾತ್ರಯವಿಶಿಷ್ಟನಾಗಿ ತ್ರಿಮೂರ್ತ್ಯಾತ್ಮಕನಾಗಿ, ತ್ರಿಗುಣಾತ್ಮನಾಗಿರುವ ನಿನಗೆ ನಮಸ್ಕಾರವು.

೫೩. ಮೂರುವೇದಗಳನ್ನೂ ತಿಳಿದವನಾಗಿ, ತ್ರಿಸ್ಥಳಾತ್ಮಕನಾಗಿ, ಶೂನ್ಯ ರೂಪನಾಗಿ, ತ್ರಿಕಾಲದಲ್ಲಿಯೂ ದೇಹತ್ರಯವಿಶಿಷ್ಟನಾಗಿರುವ, ಶಕ್ತಿತ್ರಯವುಳ್ಳ, ಪರಶಿವನೇ ನಿನಗೆ ನಮಸ್ಕಾರವು.

ಶಕ್ತಿತ್ರಯವಿಹೀನಾಯ ಶಕ್ತಿತ್ರಯಯುತಾಯ ಚ ।
ಶಕ್ತಿತ್ರಯಾತ್ಮರೂಪಾಯ ಶಕ್ತಿತ್ರಯಧರಾಯ ಚ ॥ ೫೪ ॥

ಯೋಗೀಶಾಯ ವಿಷಘ್ನಾಯ ವಿಜಯಾಯ ನಮೋನಮಃ ।
ನಮಸ್ತೇ ಹರಿಕೇಶಾಯ ಲೋಕಪಾಲಾಯ ದಂಡಿನೇ ॥ ೫೫ ॥

ಹಲೀಶಾಯ ಪ್ರಮೇಯಾಯ ಕುಲೀಶಾಯ ತು ಚಕ್ರಿಣೇ ।
ನಮೋ ಬಿಂದುವಿಸರ್ಗಾಯ ನಾದಾಯಾನಾದಧಾರಿಣೇ ॥ ೫೬ ॥

ನಾಡೀಸ್ಥಾಯ ಚ ನಾಡ್ಯಾಯ ನಾಡೀವಾಹಾಯ ವೈ ನಮಃ ।
ನಮೋ ಗಾಯತ್ರೀನಾಥಾಯ ಗಾಯತ್ರೀಹೃದಯಾಯ ತೇ ॥ ೫೭ ॥

ನಮೋ ಗಾಯತ್ರೀಗೋಪ್ತ್ರೇ ಚ ಗಾಯತ್ರ್ಯಾಯ ನಮೋನಮಃ ।
ಯ ಇದಂ ಪಠತೇ ಸ್ತೋತ್ರಂ ಗೀರ್ವಾಣೈಃ ಸಮುದೀರಿತಂ ॥ ೫೮ ॥

---

೫೪. ಪರಶಿವನೇ, ನೀನು ಸ್ವಸ್ವರೂಪದಲ್ಲಿ ಶಕ್ತಿತ್ರಯಗಳಿಂದ ದೂರನಾಗಿದ್ದರೂ ಸೃಷ್ಟಿಕಾರ್ಯದಲ್ಲಿ ಮೂರು ಶಕ್ತಿಗಳಿಂದ ಕೂಡಿ. ಮಹಾಶಕ್ತಿಯಿಂದಾವೃತನಾಗಿರುವೆ. ಆ ಶಕ್ತಿಸ್ವರೂಪನೂ ನೀನೇ ಅಲ್ಲವೇ ?

೫೫. ಯೋಗಿಗಳಿಗೆ ಒಡೆಯನಾಗಿ, ವಿಷನಿವಾರಕನಾಗಿ, ಲೋಕಪಾಲನಾಗಿ ವ್ಯೋಮಕೇಶನಾಗಿರುವ ಸರ್ವವ್ಯಾಪಿಯೇ, ನಿನಗೆ ವಂದನೆ.

೫೬. ಹಲಾಯುಧಧಾರಿಯೂ, ಜ್ಞಾನವಿಷಯನೂ, ಕುಲೀಶನೂ, ಚಕ್ರಧಾರಿಯೂ ಆದ ನಾದಬಿಂದುಸ್ವರೂಪನೇ ನಿನಗೆ ವಂದನೆ.

೫೭. ತ್ರಿನಾಡೀಸ್ಥನಾಗಿ, ನಾಡೀಶನಾಗಿ, ಗಾಯತ್ರೀಮಂತ್ರದ ಅಧಿದೇವತೆಯಾಗಿ ಗಾಯತ್ರೀಹೃದಯನಾಗಿರುವ ಕರುಣಾಶಾಲಿಯೇ, ನಿನಗೆ ವಂದನೆ.

೫೮. ಗಾಯತ್ರೀಮಂತ್ರದ ರಕ್ಷಕನಾಗಿಯೂ, ಗಾಯತ್ರೀರೂಪನಾಗಿಯೂ ಇರುವ ಸ್ವಾಮಿಯೇ ನಿನಗೆ ಪ್ರಣಾಮವು.'' ಹೀಗೆಂದು ಸಮಸ್ತ ದೇವತೆಗಳೂ ಪರಶಿವನನ್ನು ಬಹುವಾಗಿ ಸ್ತುತಿಸಿದರು. ಈ ಅಧ್ಯಾಯವನ್ನು ಯಾರು ಭಕ್ತಿಯಿಂದ ಪಠಿಸುವರೋ,

ಯಾವಜ್ಜೀವಕೃತೈಃ ಪಾಪೈರ್ಮುಕ್ತೋ ಯಾತಿ ಪರಾಂ ಗತಿಂ ।
ಏವಂ ಸ್ತುತಃ ಸುರೈಃ ಶಂಭುಃ ಪ್ರಸನ್ನೋ ವರದೋಽಭವತ್ ॥ ೫೯ ॥

ವರಂ ವೃಣೀಧ್ವಂ ಹೇ ದೇವಾ ಇತ್ಯುವಾಚ ಮಹೇಶ್ವರಃ ।
ಅಥ ತಂ ವರದಂ ಜ್ಞಾತ್ವಾ ಶಂಭುಮಗ್ನಿಮುಖಾಃ ಸುರಾಃ ॥ ೬೦ ॥
ಊಚುಃ ಪ್ರಾಂಜಲಯಃ ಸರ್ವೇ ಭಯಂ ತ್ಯಕ್ತ್ವಾ ದ್ವಿಜೋತ್ತಮಾಃ ।

॥ ದೇವಾ ಊಚುಃ ॥

ಯದಿ ತುಷ್ಟೋಽಸಿ ವಿಶ್ವೇಶ ದೇಹೀಮಂ ವರಮುತ್ತಮಂ ॥ ೬೧ ॥
ಗಿರಿಜಾಕುಕ್ಷಿಸಂಭೂತಃ ಪುತ್ರೋ ಮಾಭೂತ್ತವಾನಘ ।
ಏವಮುಸ್ತ್ವಿತ್ಯಸೌ ಶಂಭುಃ ಪುನರುಕ್ತ್ವಾ ತತೋ ವಚಃ ॥ ೬೨ ॥

ನಾಹಂ ರೇತೋ ವೃಥಾ ಸ್ಕಂದೇ ತ್ರೈಲೋಕ್ಯಕ್ಷಣಕಾರಕಂ ।
ವೃಥಾ ಶುಕ್ರೇ ಮದೀಯೇ ತು ತ್ರೈಲೋಕ್ಯಂ ಭಸ್ಮಸಾದ್ಭವೇತ್ ॥ ೬೩ ॥

---

೫೯. ಅವರು ಯಾವಜ್ಜೀವವೂ ಮಾಡಿದ ಪಾಪದಿಂದ ಮುಕ್ತರಾಗುವರು. ಅಲ್ಲದೆ ಉತ್ತಮವಾದ ಗತಿಯನ್ನು ಪಡೆಯುವರು.” ಈ ವಿಧವಾದ ಸ್ತುತಿವಚನಕ್ಕೆ ತೃಪ್ತಿಪಟ್ಟು ಈಶ್ವರನು ಅವರಿಗೆ ಪ್ರಸನ್ನನಾದನು.

೬೦. ಕೊನೆಗೆ ಮಹೇಶ್ವರನು ದೇವತೆಗಳನ್ನು ಕುರಿತು “ಎಲೈ ದೇವತೆಗಳಿರಾ, ನಾನು ತೃಪ್ತನಾಗಿದ್ದೇನೆ. ವರವನ್ನು ಕೇಳಿರಿ.” ಎಂದು ಹೇಳಲು, ಅಗ್ನಿಯೇ ಮೊದಲಾದ ದೇವತೆಗಳೆಲ್ಲರೂ ಕೈಜೋಡಿಸಿ ನಿಂತು ಧೈರ್ಯವಾಗಿ ಹೀಗೆ ಕೇಳಿಕೊಂಡರು.

೬೧-೬೨. “ಓ ದೇವದೇವನೇ, ನೀನು ನಮ್ಮಲ್ಲಿ ಅನುಗ್ರಹವಿಡುವುದಾದರೆ ನಿನ್ನಿಂದ ಪಾರ್ವತಿಯ ಗರ್ಭದಲ್ಲಿ ಪುತ್ರೋತ್ಪತ್ತಿಯಾಗದಂತೆ ಅನುಗ್ರಹಿಸು” ಎಂದು ಪ್ರಾರ್ಥಿಸಲು, ಶಂಕರನು ಹಾಗೆಯೇ ಆಗಲೆಂದು ವರವಿತ್ತನು.

೬೩. ಅಲ್ಲದೆ ನನ್ನ ರೇತಸ್ಸು ವ್ಯರ್ಥವಾಗಬಾರದು. ಅದು ವ್ಯರ್ಥವಾಗುವುದಾದರೇ ಮೂರು ಲೋಕವೂ ಭಸ್ಮವಾದೀತು.

ಹಿತಾಯ ತಸ್ಮಾಲ್ಲೋಕಾನಾಂ ಮಮ ರೇತೋ ದಿವೌಕಸಃ ।
ಶಾಂತ್ಯರ್ಥಂ ಚೈವ ಯುಷ್ಮಾಭಿಃ ಶೀಘ್ರಮೇವ ಪ್ರಯುಜ್ಯತಾಂ ॥ ೬೪ ॥

ಏವಂ ಶಂಭೋರ್ವಚಃ ಶ್ರುತ್ವಾ ದೇವಾಸ್ತೇ ಭಯವಿಹ್ವಲಾಃ ।
ಸಲೋಕೇಶಾಃ ಸಗೋವಿಂದಾ ನ ಕಿಂಚಿದಬ್ರುವನ್ ದ್ವಿಜಾಃ ॥ ೬೫ ॥

ಅಥ ದೇವೇಷು ಸೀದತ್ಸು ವಹ್ನಿರ್ಗೌರಿವ ಕರ್ದಮೇ ।
ಪ್ರಸಾರ್ಯ ಸ್ವಾಂಜಲಿಂ ಶಂಭುಂ ರೇತೋ ಮುಂಚೇತಿ ಚಾಬ್ರವೀತ್ ॥ ೬೬ ॥

ದೇವದೇವಾಮೃತಂ ದಿವ್ಯಂ ಹಸ್ತಾಭ್ಯಾಂ ಮಮ ಶಂಕರ ।
ಶೀಘ್ರಮೇವ ಪ್ರಯಚ್ಛಸ್ವ ಪಿಬಂತು ಸುರಪುಂಗವಾಃ ॥ ೬೭ ॥

ತತೋ ಲಿಂಗಾದ್ವಿನಿಷ್ಕ್ರಾಂತಂ ಚಂದ್ರಬಿಂಬಾತ್ಸುನಿರ್ಮಲಂ ।
ಜಾತೀನೀಲೋತ್ಪಲಾಮೋದಂ ಪಾಣೌ ವಹ್ನೇರ್ದದೌ ಶಿವಃ ॥ ೬೮ ॥

---

೬೪. ಆದ್ದರಿಂದ ಲೋಕವು ಉಳಿಯುವಂತೆಯೂ, ನನ್ನ ರೇತಸ್ಸು ವ್ಯರ್ಥ ವಾಗದಂತೆಯೂ ಏನಾದರೊಂದು ಉಪಾಯವನ್ನು ಹೂಡಿರಿ.

೬೫. ಹೀಗೆ ಶಂಕರನ ಮಾತುಗಳನ್ನು ಕೇಳಿ ಭಯವಿಹ್ವಲರಾದ ವಿಷ್ಣು, ಮತ್ತು ಸಮಸ್ತಲೋಕಪಾಲಕರೂ ಏನನ್ನೂ ಹೇಳದೆ ಸುಮ್ಮನೆ ನಿಂತಿದ್ದರು.

೬೬. ಆಗ ಅಗ್ನಿಯು ಕೆಸರಿನಲ್ಲಿ ಬಿದ್ದ ಎತ್ತಿನಂತೆ ನಿಂತಿದ್ದ ದೇವತೆಗಳನ್ನು ನೋಡಿ, ತಾನು ಮುಂದೆ ಹೋಗಿ ಶಿವನ ಎದುರಿನಲ್ಲಿ ನಿಂತು ವೀರ್ಯವನ್ನು ತನಗೆ ಕೊಡುವಂತೆ ಕೇಳಿಕೊಂಡನು.

೬೭. "ದೇವದೇವನೇ, ದೇವತೆಗಳಿಗೆ ಅಮೃತದಂತಿರುವ ನಿನ್ನ ರೇತಸ್ಸನ್ನು ನನ್ನ ಕೈಗೆ ಕೊಡು. ಅದನ್ನು ಆ ದೇವತೆಗಳೆಲ್ಲರೂ ಕುಡಿದು ತೃಪ್ತರಾಗಲಿ."

೬೮. ಎಂದು ಪ್ರಾರ್ಥಿಸಿದೊಡನೆಯೇ ಶಂಕರನು ತನ್ನ ಲಿಂಗದಿಂದ ವೀರ್ಯ ವನ್ನು ಹೊರಕ್ಕೆ ಬಿಟ್ಟನು. ಅದು ಚಂದ್ರಬಿಂಬದಂತೆ ಶುಭ್ರವಾಗಿಯೂ, ಜಾತೀ ನೀಲೋತ್ಪಲ ಪುಷ್ಪಗಳಂತೆ ಸುವಾಸನೆಯಾಗಿಯೂ ಇತ್ತು. ಅದನ್ನು ಅಗ್ನಿಯು ಪಾಣಿಯಿಂದ ಪರಿಗ್ರಹಿಸಿದನು.

ಕರಾಭ್ಯಾಂ ಪತಿತಂ ರೇತಸ್ತದಾಭೂತ್ಪಾವಕಸ್ಯ ವೈ ।
ಪಪೌ ವಹ್ನಿಸ್ತತಶ್ಶುಕ್ರಂ ಜ್ವಲಂತಂ ಭಾಸ್ಕರಪ್ರಭಂ ॥ ೬೯ ॥

ಸುಧೇತಿ ಮನಸಾ ಮತ್ವಾ ಹೃಷ್ಟಾತ್ಮಾ ಮುದಯಾನ್ವಿತಃ ।
ಅಥ ಪೀತೇ ತಥಾ ಶುಕ್ರೇ ವಹ್ನಿನಾ ಮುನಿಪುಂಗವಾಃ ॥ ೭೦ ॥

ರೇತಃ ಪಾತೇನ ಸಂತರ್ಪ್ಯ ಸ ದೇವಾಸುರಪೂಜಿತಃ ।
ವಿಸೃಜ್ಯ ತಾಂಸ್ತು ಭಗವಾಂಸ್ತತ್ರೈವಾಂತರಧೀಯತ ॥ ೭೧ ॥

ತದಾ ಹವಿರ್ಭುಜಂ ದೇವಂ ಸೇಂದ್ರಾ ಬ್ರಹ್ಮಪುರೋಗಮಾಃ ।
ಯಥಾಗತಾ ಯಯುಸ್ತತ್ರ ಪೂಜಯಿತ್ವಾ ದಿವೌಕಸಃ ॥ ೭೨ ॥

ರೇತಸಾ ದಹ್ಯಮಾನೋಽಗ್ನಿಃ ಪಾತಾಲಾತ್ಸುತಲಂ ಗತಃ ।
ತತೋ ವಿವೇಶ ಗಿರಿಶೋ ಯತ್ರಾಽಽಸ್ತೇ ಪಾರ್ವತೀ ಶಿವಾ ॥ ೭೩ ॥
ಉವಾಚ ಪಾರ್ವತೀಂ ಶಂಭುಃ ಪ್ರಹಸನ್ ಕಮಲೇಕ್ಷಣಾಂ ।

---

೬೯. ಆ ವೀರ್ಯವು ಅಲ್ಲಿ ಸೂರ್ಯನಂತೆ ಉರಿಯಲಾರಂಭಿಸಿತು. ಅಂತಹ ವೀರ್ಯವನ್ನು ಒಡನೆಯೇ ಅಗ್ನಿಯು ಪಾನಮಾಡಿದನು.

೭೦. ಪಾನಮಾಡುವಾಗ ಅಗ್ನಿಯು ಅದು ಅಮೃತವೆಂಬ ಭಾವನೆಯನ್ನು ಹೊಂದಿದ್ದನು. ಹೀಗೆ ಅಗ್ನಿಯು ವೀರ್ಯಪಾನಮಾಡಿದಮೇಲೆ,

೭೧. ಪರಮೇಶ್ವರನು ತನ್ನ ರೇತಃ ಪಾತದಿಂದ ದೇವಾದಿಗಳನ್ನು ತೃಪ್ತಿಗೊಳಿಸಿದವನಾಗಿ ಅಲ್ಲಿಯೇ ಅಂತರ್ಧಾನನಾದನು.

೭೨. ಆಮೇಲೆ ದೇವತೆಗಳೆಲ್ಲರೂ ಅಗ್ನಿಯನ್ನು ಬಹುವಾಗಿ ಸ್ತುತಿಸಿ ತಾವು ಬಂದ ದಾರಿಯನ್ನು ಕುರಿತು ಪ್ರಯಾಣಮಾಡಿದರು.

೭೩. ಇತ್ತ ಅಗ್ನಿಯು ಶಿವವೀರ್ಯದಿಂದ ಸುಡಲ್ಪಟ್ಟವನಾಗಿ, ಪಾತಾಳಕ್ಕೆ ಹೋಗಿ ಅಲ್ಲಿಂದ ಸಕಲ ಲೋಕವನ್ನು ಸೇರಿದನು. ಆಮೇಲೆ ಪರಮೇಶ್ವರನು ಕಮಲೇಕ್ಷಣೆಯಾದ ಪಾರ್ವತಿಯಲ್ಲಿಗೆ ಹೋಗಿ ನಗುತ್ತಾ ಹೀಗೆ ಹೇಳಿಕೊಂಡನು.

॥ ಈಶ್ವರ ಉವಾಚ ॥

ಶೃಣು ದೇವಿ ಮಹಾಭಾಗೇ ಯದ್ವೃತ್ತಂ ತದ್ಬ್ರವೀಮ್ಯಹಂ ॥ ೭೪ ॥
ಸ್ವತಂತ್ರಕಾಮಾಸಿ ಶಿವೇ ಯಥಾಽಹಂ ವರವರ್ಣಿನೀ ।
ದೇವಾ ಮಚ್ಛರಣಂ ಪ್ರಾಪ್ತಾ ನ ಚಾಹಂ ಶರಣಂ ತ್ಯಜೇ ॥ ೭೫ ॥

ಗೋಪ್ಯಾ ಮಯಾ ಸದಾ ಕಾಂತೇ ಮಹಾದೇವೋ ಯತಃ ಸ್ಮೃತಃ ।
ಭವಿಷ್ಯತಿ ಮಹಾಭಾಗೇ ಪುತ್ರಸ್ತವ ಷಡಾನನಃ ॥ ೭೬ ॥

ಕಿಂ ತ್ವೌರಸಸ್ತು ಸುಶ್ರೋಣಿ ದೇವೈರ್ನೇಷ್ಟಸ್ತವಾಂಶತಃ ।
ತಸ್ಮಾಚ್ಛುದ್ಧಂ ಮಯಾ ರೇತೋ ಮುಖೇ ಸ್ಯೈ ಜಾತವೇದಸಃ ॥ ೭೭ ॥

ವಹ್ನಿಕುಕ್ಷಿಗತಂ ರೇತೋ ಗತಂ ದೇವಾನ್ವಿಭಾಗಶಃ ।
ಯಚ್ಛೇಷಮುದರೇ ವಹ್ನಿಸ್ತದ್ಗಂಗಾಯಾಂ ಪ್ರದಾಸ್ಯತಿ ॥ ೭೮ ॥

೭೪-೭೫. “ದೇವಿಯೇ ಕೇಳು. ಈಗ ನಡೆದ ಒಂದು ಸಮಾಚಾರವನ್ನು ನಿನಗೆ ತಿಳಿಸುವೆನು. ನನ್ನ ಹಾಗೆಯೇ ನೀನು ಸ್ವೇಚ್ಛಾಫಲವನ್ನು ಪಡೆಯುವವ ಳಷ್ಟೆ. ನೋಡು. ದೇವತೆಗಳೆಲ್ಲರೂ ಬಂದು ನನ್ನನ್ನು ಮೊರೆಹೊಕ್ಕರು. ಶರಣಾಗತ ರನ್ನು ರಕ್ಷಿಸುವುದು ನನ್ನ ಧರ್ಮವಷ್ಟೆ.

೭೬. ಅವರೆಲ್ಲರನ್ನೂ ನಾನು ರಕ್ಷಿಸಲೇಬೇಕು. ಏಕೆಂದರೆ ನಾನು ಮಹಾ ದೇವನೆಂದು ಪ್ರಸಿದ್ಧನಾಗಿದ್ದೇನೆ. ನಿನಗೆ ಆರು ಮುಖವುಳ್ಳ ಪುತ್ರನೊಬ್ಬನು ಜನಿಸುವನು.

೭೭. ಆದರೆ ಸಾಕ್ಷಾತ್ತಾಗಿ ನಿನ್ನಲ್ಲಿ ಜನಿಸುವುದು ದೇವತೆಗಳಿಗೆ ಇಷ್ಟವಾಗ ಲಿಲ್ಲ. ಆದ್ದರಿಂದ ಈಗ ನನ್ನ ರೇತಸ್ಸನ್ನು ಅಗ್ನಿಯ ಮುಖದಲ್ಲಿ ಹಾಕಿರುವೆನು.

೭೮. ಅಗ್ನಿಯ ಉದರಕ್ಕೆ ಪ್ರವೇಶಿಸಿದ ವೀರ್ಯವು ದೇವತೆಗಳಿಗೆ ಸ್ವಲ್ಪ ಸ್ವಲ್ಪ ಹಂಚಲ್ಪಟ್ಟಿದೆ. ಅಗ್ನಿಯ ಉದರದಲ್ಲಿ ಉಳಿದ ರೇತಸ್ಸು ಮಾತ್ರ ಗಂಗಾದೇವಿಗೆ ಸೇರಿತು.

ತತಃ ಸಾಽ ವಿದಹ್ಯಂತೀ ಮಮ ತೇಜಃ ಪ್ರತಾಪವತ್ ।
ಕೃತ್ತಿಕಾಃ ಷಟ್ ಸಮಾಖ್ಯಾತಾ ಗಂಗಾಯಾಂ ಸ್ನಾತುಮಾಗತಾಃ ॥ ೭೯ ॥

ತಾಸು ಗಂಗಾವಿನಿಕ್ಷಿಪ್ತಂ ಮಮ ರೇತಸ್ತದದ್ಭುತಂ ।
ತತಸ್ತಾಃ ಕೃತ್ತಿಕಾಸ್ತಬ್ಧಾ ದೇವಿ ಮಾಂ ಶರಣಂ ಗತಾಃ ॥ ೮೦ ॥

ಅನುಗ್ರಹಾನ್ಮಯಾ ತಾಸಾಮಿದಮುಕ್ತಂ ತಥಾ ಶಿವೇ ।
ಮಮಾದೇಶಾದ್ಗತಾಃ ಸರ್ವಾಃ ಶರಧಾನವನಂ ಶುಭಂ ॥ ೮೧ ॥

ಮೋಚಯಿಷ್ಯಂತಿ ತಾ ಗರ್ಭಂ ದೇವಾಶ್ಚ ಕಮಲೇಕ್ಷಣೇ ।
ವಚನಾನ್ಮಮ ಸುಶ್ರೋಣಿ ಗರ್ಭಶಲ್ಯಂ ವರಾನನೇ ॥ ೮೨ ॥

ತತಸ್ತೇ ಭವಿತಾ ಪುತ್ರ ಏಕೀಭೂತ್ವಾ ಸ್ವತೇಜಸಃ ।
ಬಾಲಸೂರ್ಯಾಯುತಃ ಪ್ರಖ್ಯೋ ಬಾಲೇಂದುಭ್ರೂಲತಾಂಕಿತಃ ॥ ೮೩ ॥

---

೭೯. ಆ ಉಗ್ರವಾದ ನನ್ನ ವೀರ್ಯವು ಗಂಗಾದೇವಿಯನ್ನು ದಹಿಸಲಾರಂಭಿಸಿತು. ಆಗ ಆ ನದಿಯಲ್ಲಿ ಸ್ನಾನಮಾಡಲು ಆರು ಜನ ಕೃತ್ತಿಕಾದೇವಿಯರು ಬಂದಿದ್ದರು

೮೦. ಗಂಗಾದೇವಿಯು ಆ ಆರು ಜನರಲ್ಲಿ ತನ್ನ ವೀರ್ಯವನ್ನಿಟ್ಟಳು. ಅವರೂ ಸಹ ಅದನ್ನು ತಡೆಯಲು ಅಸಾಧ್ಯರಾಗಿ ಕೊನೆಗೆ ನನ್ನ ಮೊರೆ ಹೊಕ್ಕರು.

೮೧. ಪಾರ್ವತಿಯೇ, ಅವರನ್ನು ನೋಡಿ ನನಗೆ ಕನಿಕರವಾಯಿತು. ಒಡನೆಯೇ ಅವರು ಶರಧಾನವನಕ್ಕೆ ಹೋಗುವಂತೆ ನಾನು ಅಪ್ಪಣೆಮಾಡಿದೆನು.

೮೨-೮೩. ಈಗ ಅದರಂತೆ ಅಲ್ಲಿಗೆ ಅವರು ಹೋಗುವರು. ಅಲ್ಲಿನ ದೇವತೆಗಳು ಅವರ ಗರ್ಭವನ್ನು ಪ್ರತ್ಯೇಕಿಸಿಡುವರು. ಅದು ಒಂದು ಶಿಶುವಾಗುವುದು. ಆ ಶಿಶುವೇ ನಿನ್ನ ಪುತ್ರನೆನಿಸಿ, ಕೋಟಿ ಸೂರ್ಯರಂತೆ ತೇಜಸ್ಸುಳ್ಳದ್ದಾಗಿ ಬಾಲಚಂದ್ರನಂತೆ ವಕ್ರಗಳಾದ ಹುಬ್ಬುಗಳುಳ್ಳದ್ದಾಗಿ ಶೋಭಿಸುವುದು.

ಆಗ್ನೇಯೋ ವಹ್ನಿಜೋ ದೇವೋ ಗಾಂಗೇಯಃ ಕೃತ್ತಿಕಾಸುತಃ ।
ಸ್ಕಂದೋ ಗುಹಸ್ತಥಾ ಪುತ್ರೋ ನಾಮಭಿಸ್ತೇ ಭವಿಷ್ಯತಿ ॥ ೮೪ ॥

ಏವಂ ಶಂಭೋರ್ವಚಃ ಶ್ರುತ್ವಾ ಪ್ರಾಹ ದೇವೀ ಗಿರೀಂದ್ರಜಾ ।
ಮಮ ಕುಕ್ಷಿಸಮುತ್ಪನ್ನಂ ಯತೋ ನೇಚ್ಛಂತಿ ಪುತ್ರಕಂ ॥ ೮೫ ॥

ಅತಃ ಪುತ್ರವಿಹಿನಾಸ್ತೇ ಭವಿಷ್ಯಂತಿ ಸುರಾದಯಃ ।
ಯೋ ಹಿ ನಂದೀ ಮಹಾವೀರ್ಯಃ ಸುರಾಸುರಮಹೋರಗೈಃ ॥ ೮೬ ॥

ದುರ್ಜಯಃ ಸರ್ವಭೂತಾನಾಂ ಯೋಗೀ ಯೋಗಬಲಾನ್ವಿತಃ ।
ಪ್ರವಿಶ್ಯಾಂತಃಪುರೇ ವಹ್ನಿರ್ದೃಷ್ಟ್ವಾ ಮಾಂ ವಸ್ತ್ರವರ್ಜಿತಾಂ ॥ ೮೭ ॥

ಯಸ್ಮಾದುಪೇಕ್ಷಿತಸ್ತಸ್ಮಾನ್ಮನುಷ್ಯತ್ವಂ ಪ್ರಯಾತು ಸಃ ।
ಶಾಪಂ ಶ್ರುತ್ವಾಽಥ ಶೈಲಾದಿರ್ವಜ್ರೇಣೇವ ಹತೋ ಗಿರಿಃ ॥ ೮೮ ॥

---

೮೪. ಅವನೇ ನಿನ್ನ ಮಗನೆನಿಸುವನು. ಆದರೆ ಅವನಿಗೆ ಅಗ್ನಿಪುತ್ರ, ಗಂಗಾ ಪುತ್ರ, ಕೃತ್ತಿಕಾಸುತ, ಸ್ಕಂದ ಗುಹ, ಎಂಬ ಹೆಸರುಗಳು ಪ್ರಸಿದ್ಧವಾಗುವುವು.

೮೫. ಹೀಗೆ ಹೇಳಿದ ಶಂಕರನ ಮಾತುಗಳನ್ನು ಕೇಳಿ ದೇವಿಯು ಕೋಪದಿಂದ ದೇವತೆಗಳನ್ನು ಹೀಗೆ ಶಪಿಸಿದಳು. "ನನ್ನಲ್ಲಿ ಆಗುವ ಪುತ್ರೋತ್ಪತ್ತಿಯನ್ನು ತಪ್ಪಿಸಿದ ದೇವತೆಗಳು ಮಕ್ಕಳಿಲ್ಲದವರಾಗಲಿ" ಎಂದು ದೇವತೆಗಳಿಗೆ ಶಾಪವನ್ನಿತ್ತಳು.

೮೬-೮೮. ಪುನಃ ದೇವಿಯು ನಂದಿಯ ಕಡೆಗೆ ತಿರುಗಿ "ಈ ನಂದೀಶ್ವರನು ಮಹಾಬಲಿಷ್ಠನಾಗಿದ್ದರೂ, ಯೋಗಬಲದಿಂದ ಸರ್ವವನ್ನೂ ತಿಳಿದವನಾಗಿದ್ದರೂ, ದೇವರಾಕ್ಷಸರಿಗೆ ದುರ್ಜಯನಾಗಿದ್ದರೂ, ಅಗ್ನಿಯು ಒಳಕ್ಕೆ ಪ್ರವೇಶಿಸುವುದನ್ನು ತಿಳಿಯಲಾರದೆ ಉಪೇಕ್ಷಿಸಿರುವನು. ವಸ್ತ್ರವಿವರ್ಜಿತಳಾಗಿದ್ದ ನನ್ನನ್ನು ಅಗ್ನಿಯು ನೋಡಲು ಅವಕಾಶಕೊಟ್ಟವನು ಈ ನಂದಿಯು. ಆದ್ದರಿಂದ ಈ ನಂದಿಯು ಭೂಲೋಕದಲ್ಲಿ ಮನುಷ್ಯನಾಗಿ ಹುಟ್ಟಲಿ." ಎಂದು ನಂದೀಶ್ವರನನ್ನು ಶಪಿಸಿದಳು. ಅದನ್ನು ಕೇಳಿ ನಂದೀಶ್ವರನು ವಜ್ರಾಯುಧದಿಂದ ಹೊಡೆಯಲ್ಪಟ್ಟ ಪರ್ವತದಂತೆ ಕೆಳಕ್ಕೆ ಬಿದ್ದನು.

ನ್ಯಪತದ್ಯೋಗಿನಾಮಗ್ರ್ಯೋ ಜ್ಞಾನಮೂರ್ತಿಧರೋ ದ್ವಿಜಾಃ ।
ಪುನಶ್ಚ ಶಂಭೋರ್ವಚನಾತ್ ಶೈಲಾದಿಮನುಗೃಹ್ಯ ಚ ।
ಸಮಾಲಿಂಗ್ಯ ಮಹಾದೇವಂ ಸ್ಥಿತಾ ದೇವೀತಿ ನಃ ಶ್ರುತಂ ॥ ೮೯ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಪಾವಕಸ್ತುತ್ಯಾದಿ ಕಥನಂ ನಾಮೈಕ ಷಷ್ಟಿತಮೋಽಧ್ಯಾಯಃ

---

೮೯. ಆಗ ಪಾರ್ವತಿಯ ಶಾಪದಂತೆ ಯೋಗಿಶ್ರೇಷ್ಠನಾದ, ಮತ್ತು ಜ್ಞಾನಮೂರ್ತಿಯಾದ ತಪಸ್ವಿಯಂತೆ ನಂದೀಶ್ವರನು ಜನ್ಮವನ್ನು ಪಡೆದನು. ಪಾರ್ವತಿಯ ಶಾಪವನ್ನು ಕೇಳಿದ ಪರಶಿವನು ದೇವಿಯುನ್ನು ಸಮಾಧಾನಗೊಳಿಸಿ, ಆವಳಿಂದ ನಂದೀಶ್ವರನಿಗೆ ಶಾಪವಿಮೋಚನೆಯನ್ನು ಕೊಡಿಸಿದನು. ಅನಂತರ ದೇವಿಯು ಸಂತುಷ್ಟಳಾಗಿ ಪರಮೇಶ್ವರನನ್ನು ಆಲಿಂಗಿಸಿ, ಸುಖಸಲ್ಲಾಪಗಳಿಂದ ಸುಖವಾಗಿದ್ದಳು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರದಲ್ಲಿ ಸೂತಶೌನಕ ಸಂವಾದ ರೂಪವಾಗಿ, ಅಗ್ನಿಸ್ತುತಿಯೇ ಮೊದಲಾದ ಕಥಾಭಾಗಗಳನ್ನೊಳಗೊಂಡ ಅರುವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ದ್ವಿಷಷ್ಟಿತಮೋಽಧ್ಯಾಯಃ

॥ ಋಷಯ ಊಚುಃ ॥

ವಹ್ನೌ ಸಂತರ್ಪಿತೇ ಸೂತ ರೇತಸಾ ತ್ರಿದಿವೌಕಸಃ ।
ಸಗರ್ಭಾಃ ಖಲು ಸಂಜಾತಾ ದೇವದೇವೇನ ಶಂಭುನಾ ॥ ೧ ॥

ಸೌಖ್ಯಂ ಕಥಮವಾಪುಸ್ತ ಉದರಸ್ಥೇನ ರೇತಸಾ ।
ಕಿಮಕುರ್ವಂಸ್ತದಾ ಸರ್ವೇ ನಾರಾಯಣಪುರೋಗಮಾಃ ॥ ೨ ॥

ಗರ್ಭನಿಷ್ಕ್ರಮಣಂ ತೇಷಾಮುತ್ಪನ್ನೇನ ಚ ಕಿಂ ಕೃತಂ ।
ಏತತ್ಸರ್ವಂ ಸಮಾಸೇನ ಬ್ರೂಹಿ ನಃ ಸೂತ ಪೃಚ್ಛತಾಂ ॥ ೩ ॥

ಅರುವತ್ತೆರಡನೆಯ ಅಧ್ಯಾಯ.

೧-೩. ಪುನಃ ಶೌನಕಾದಿ ಋಷಿಗಳು ಸೂತಮಹರ್ಷಿಗಳನ್ನು ಕುರಿತು "ಎಲೈ ಸೂತಮಹರ್ಷಿಯೇ, ಪರಶಿವನ ವೀರ್ಯಾಂಶಪಾನದಿಂದ ದೇವತೆಗಳೆಲ್ಲರೂ ಗರ್ಭವನ್ನು ತಾಳಿದರಷ್ಟೆ. ಅವರೆಲ್ಲರೂ ಆ ಗರ್ಭವನ್ನು ಹೇಗೆ ನಿವೃತ್ತಿ ಮಾಡಿಕೊಂಡರು? ಅವರಿಗೆ ಸಂತೋಷವಾದದ್ದು ಹೇಗೆ? ನಾರಾಯಣಾದಿಗಳು ಇದಕ್ಕೆ ಮಾಡಿದ ಪ್ರತಿಕ್ರಿಯೆ ಯೇನು? ಇವೆಲ್ಲವನ್ನೂ ನಮಗೆ ಸಂಕ್ಷೇಪವಾಗಿ ತಿಳಿಸಬೇಕು" ಎಂದು ಕೇಳಿಕೊಂಡರು.

॥ ಸೂತ ಉವಾಚ ॥

ವಹ್ನೌ(?)ಸಂತರ್ಪಿತಾಸ್ತೇನ ರೇತಸಾ ತ್ರಿದಿವೌಕಸಃ ।
ರೇತಸಾ ಚೋದರಸ್ಥೇನ ಸಂತಪ್ತಾಸ್ತೇ ಸುರಾದಯಃ ॥ ೪ ॥

ದಶ ಪಂಚಸಹಸ್ರಾಣಾಮತೀತೇಷು ದ್ವಿಜೋತ್ತಮಾಃ ।
ವರ್ಷಾಣಾಂ ಚ ತಥಾಷ್ಟೌ ಚ ಗೂಢಗರ್ಭಾ ದಿವೌಕಸಃ ॥ ೫ ॥

ದುಃಖಿತಾಃ ಪಾರ್ವತೀಕಾಂತಂ ಶಂಕರಂ ಶರಣಂ ಯಯುಃ ।
ಊಚುಃ ಪ್ರಾಂಜಲಯಸ್ಸರ್ವೇ ಸೂರ್ಯಕೋಟಿಸಮಪ್ರಭಂ ॥ ೬ ॥

॥ ದೇವಾ ಊಚುಃ ॥

ಭಗವನ್ನಿದಂ ದುಃಖಂ ಗರ್ಭಜಂ ದೇಹಶೋಷಣಂ ।
ಯಥಾ ನಶ್ಯತಿ ದೇವೇಶ ತದುಪಾಯಂ ಕುರು ಪ್ರಭೋ ॥ ೭ ॥

---

೪. ಆಗ ಸೂತರು ಮುಂದಿನ ಕಥೆಯನ್ನು ವಿವರಿಸಲಾರಂಭಿಸಿದರು. “ಅಗ್ನಿಯಲ್ಲಿ ಶಿವನು ತನ್ನ ವೀರ್ಯವನ್ನಿಟ್ಟಿದ್ದರಿಂದ ಅದು ಎಲ್ಲಾ ದೇವತೆಗಳ ಉದರದಲ್ಲಿಯೂ ಅಲ್ಪಾಂಶವು ಸೇರಿದಂತಾಯಿತು. ಅದು ಅವರ ಹೊಟ್ಟೆಯನ್ನೆಲ್ಲಾ ಸುಡಲಾರಂಭಿಸಿತು.

೫. ಆ ರೇತಸ್ಸು ದೇವತೆಗಳ ಹೃದಯದಲ್ಲಿ ನೂರಿಪ್ಪತ್ತು ಸಹಸ್ರವರ್ಷಪರ್ಯಂತವಾಗಿ ನೆಲಸಿತ್ತು. ಅಲ್ಲಿನವರೆಗೂ ಅದು ಪ್ರಕಾಶಕ್ಕೆ ಬರದೇ ಇದ್ದುದನ್ನು ಕಂಡು ದೇವತೆಗಳು,

೬. ದುಃಖಿತರಾಗಿ ಪಾರ್ವತೀಪತಿಯಾದ ಶಂಕರನಲ್ಲಿಗೆ ಹೋಗಿ ಕೈಜೋಡಿಸಿ ನಿಂತು, ಸೂರ್ಯಕೋಟಿಪ್ರಕಾಶದಿಂದ ಕುಳಿತಿರುವ ಪರಮೇಶ್ವರನನ್ನು ಪ್ರಾರ್ಥಿಸತೊಡಗಿದರು.

೭. “ಓ ಸ್ವಾಮಿಯೇ, ನಮ್ಮ ಗರ್ಭದಲ್ಲಿ ಅಡಗಿ ಈ ನಮ್ಮ ದೇಹವನ್ನೇ ಒಣಗಿಸುತ್ತಿರುವ ಈ ನಿನ್ನ ವೀರ್ಯತಾಪವು ಕಮ್ಮಿಯಾಗುವಂತೆ ಉಪಾಯವನ್ನು ಅನುಗ್ರಹಿಸು

ವಹ್ನಿನಾ ಪೀತಮಾತ್ರೇಣ ರೇತಸಾ ತವ ಶಂಕರ ।
ವಯಂ ಸಗರ್ಭಾಸ್ಸಂಜಾತಾ ಗರ್ಭಕಾಲೇ ಚ ತೋಯದಾಃ ॥ ೮ ॥

ಉಪಹಾಸ್ಯಮಿದಂ ದೇವ ಪುಂಸಾಂ ಯದ್ಗರ್ಭಸಂಭವಃ ।
ಸರ್ವೇ ವೈ ಭೃಶಮುದ್ವಿಗ್ನಾಸ್ತವ ತೇಜೋವಶಾದ್ವಿಭೋ ॥ ೯ ॥

ದಹ್ಯಮಾನಾ ಮಹಾದೇವ ನರಕೇ ಪಾಪಿನೋ ಯಥಾ ।
ಶರಣಂ ಭವ ದೇವಾನಾಂ ಕರಾಲಂಬಂ ದದಸ್ವ ನಃ ॥ ೧೦ ॥

ದುಃಖೋದಧೌ ಪ್ರದುಸ್ತಾರೇ ಪ್ರಣತಾರ್ತಿವಿನಾಶನ ।
ಏವಂ ಶ್ರುತ್ವಾ ತು ವಚನಂ ದೇವಾನಾಂ ಪಾರ್ವತೀಪತಿಃ ॥ ೧೧ ॥
ಈಶದ್ವಿಹಸ್ಯ ಭಗವಾನುವಾಚೇದಂ ಸುರೇಶ್ವರಃ ॥ ೧೨ ॥

॥ ಈಶ್ವರ ಉವಾಚ ॥

ಭವದ್ಭಿರೀದೃಶಂ ಕಾರ್ಯಂ ಇಷ್ಟಂ ವೈ ಸುರಪುಂಗವಾಃ ।
ನೇಷ್ಟಂ ದೇವ್ಯೋದರಸ್ಥಂ ಹಿ ತಸ್ಮಾದ್ಗರ್ಭದಶಾಂ ಗತಾಃ ॥ ೧೩ ॥

---

೮. ಅಗ್ನಿಯು ನಿನ್ನ ವೀರ್ಯಪಾನಮಾಡಿದೊಡನೆಯೇ, ಮೇಘಗಳು ಗರ್ಭವಂತಗಳಾಗುವಂತೆ ನಾವು ಸಗರ್ಭರಾಗಿರುವೆವು.

೯. ಸ್ವಾಮಿಯೇ, ಗಂಡುಸರು ಗರ್ಭಧಾರಣೆ ಮಾಡುವುದು ಹಾಸ್ಯವಲ್ಲವೇ ? ನಿನ್ನ ತೇಜಸ್ಸಿನಿಂದ ನಾವೆಲ್ಲರೂ ಈಗ ಮಂಕಾಗಿರುವೆವು.

೧೦. ಎಲೈ ಮಹಾದೇವನೇ, ನರಕದಲ್ಲಿ ಪಾಪಿಗಳು ಕಷ್ಟಪಡುವಂತೆ ನಾವು ಈಗ ವ್ಯಥೆಪಡುತ್ತಿದ್ದೇವೆ. ಸ್ವಾಮಿಯೇ ನಮ್ಮನ್ನು ಈಗ ಕೈಬಿಡದೆ ಕಾಪಾಡು.

೧೧-೧೨ ಈಗ ನಾವು ದುಃಖಸಮುದ್ರದಲ್ಲಿ ಮುಳುಗಿರುವೆವು. ಭಕ್ತರಕ್ಷಕನೇ, ನಮ್ಮನ್ನು ಉದ್ಧರಿಸು''. ಎಂದು ಹೇಳಿದ ದೇವತೆಗಳ ಮಾತನ್ನು ಕೇಳಿ ಭಗವಂತನು ನಗುತ್ತಾ ಹೀಗೆ ಹೇಳಿದನು.

೧೩. ''ನಿಮಗೆ ದೇವಿಯು ಗರ್ಭವತಿಯಾಗುವುದು ಇಷ್ಟವಾಗಲಿಲ್ಲ. ಆದರಿಂದ ನೀವು ಶಾಪಗ್ರಸ್ತರಾಗಿ ನಿಮ್ಮ ಗರ್ಭವು ಹೃದಯದಲ್ಲಿಯೇ ಅಡಗಿ ನಿಮಗೆ ಈ ಕಷ್ಟ ಬಂದಿದೆ.

ಇದಾನೀಂ ಯತ್ಪ್ರಕರ್ತವ್ಯಂ ಶೃಣುಧ್ವಂ ತತ್ಸುರೋತ್ತಮಾಃ ।
ವಹ್ನಿಂ ಯೂಯಂ ಪುರಸ್ಕೃತ್ಯ ಮೇರುಂ ವ್ರಜತ ಮಂದರಾತ್ ॥ ೧೪ ॥

ಶರಧಾನವನೇ ಯೂಯಂ ಹ್ರದೋತ್ಸಂಗೇ ಪ್ರಸೂಯತ ।
ನಿಃಸರಿಷ್ಯತ್ಯಸಂದೇಹಂ ತತಃ ಸೌಖ್ಯಮವಾಪ್ಸ್ಯಥ ॥ ೧೫ ॥

ತತಶ್ಶಂಭೋರ್ವಚಃ ಶ್ರುತ್ವಾ ನಾರಾಯಣಪುರೋಗಮಾಃ ।
ಅಗ್ನಿಮನ್ವಿಷ್ಯ ಚ ಯಯುರ್ಮೇರುಂ ಗಿರಿವರೋತ್ತಮಂ ॥ ೧೬ ॥

ತಸ್ಯ ಚೋತ್ತರದಿಗ್ಭಾಗೇ ಶರಧಾನವನೇ ಶುಭೇ ।
ಉಪವಿಶ್ಯ ಮಹಾತ್ಮಾನೋ ಮಧ್ಯೇ ಸಂಸ್ಥಾಪ್ಯ ವೇಧಸಂ ॥ ೧೭ ॥

ನಾರಾಯಣಂ ಪುರಸ್ಕೃತ್ಯ ಪ್ರಸೂತಾಃ ಸರ್ವದೇವತಾಃ ।
ಗರ್ಭಶಲ್ಯವಿನಿರ್ಮುಕ್ತಾ ಜಾತಾಸ್ತೇ ಸುಖಿನೋ ದ್ವಿಜಾಃ ॥ ೧೮ ॥

---

೧೪. ಈಗ ನೀವು ಅಗ್ನಿಯನ್ನು ಕರೆದುಕೊಂಡು ಮೊದಲು ಮಂದರಪರ್ವತವನ್ನು ಬಿಟ್ಟು ಮೇರುಪರ್ವತಕ್ಕೆ ಹೋಗಿರಿ.

೧೫. ಅಲ್ಲಿ ಶರಧಾನವನವಿದೆ. ಅಲ್ಲಿರುವ ಒಂದು ಕೊಳದ ಪಕ್ಕದಲ್ಲಿ ನಿಜವಾಗಿಯೂ ನಿಮ್ಮ ಗರ್ಭವು ಜಾರಿಹೋಗುವುದು. ಅಲ್ಲಿಂದ ಮುಂದೆ ನಿಮಗೆ ಸುಖವುಂಟಾಗುವುದು."

೧೬. ಎಂದು ಹೇಳಿದ ಶಂಕರನ ಮಾತುಗಳನ್ನು ಕೇಳಿ ನಾರಾಯಣನೇ ಮೊದಲಾದವರು ಅಗ್ನಿಯನ್ನು ಹುಡುಕಿ ಕರೆದುಕೊಂಡು ಶ್ರೇಷ್ಠವಾದ ಮೇರುಪರ್ವತಕ್ಕೆ ಹೋದರು.

೧೭. ಆ ಪರ್ವತದ ಉತ್ತರಭಾಗದ ಶರಧಾನವನದಲ್ಲಿ ಮಧ್ಯೆ ಬ್ರಹ್ಮನನ್ನು ಕೂರಿಸಿಕೊಂಡು ಸಮಸ್ತ ದೇವತೆಗಳೂ ಕುಳಿತುಕೊಂಡರು.

೧೮. ಆಗ ನಾರಾಯಣನೇ ಮೊದಲಾದ ದೇವತೆಗಳ ಹೃದಯದಿಂದ ಶಿವರೇತಸ್ಸು ಜಾರಿ ಬಿದ್ದುಹೋಯಿತು. ದೇವತೆಗಳೆಲ್ಲರೂ ಅದರಿಂದ ಸುಖಿಗಳಾದರು.

ಶಾರ್ವೇಣ ತೇಜಸಾ ತೇನ ರಂಜಿತೋ ಮೇರುಪರ್ವತಃ ।
ತತಃ ಕಾಂಚನತಾಂ ಪ್ರಾಪ್ತಃ ಸಶೈಲವನಕಾನನಃ　　॥ ೧೯ ॥

ಶಾರ್ವಂ ತೇಜೋ ಧೃತಂ ಯಸ್ಮಾದ್ದೇವೈರ್ವಹ್ನಿಪುರೋಗವೈಃ ।
ತಸ್ಮಾಜ್ಜರಾದಿಭಿರ್ಮುಕ್ತಾ ಅಮರಾಶ್ಚ ಸುರೋತ್ತಮಾಃ　　॥ ೨೦ ॥

ಸಿದ್ಧಾಶ್ಚ ಮುನಯಶ್ಚೈವ ಯೇ ಕೇಚಿತ್ತತ್ರ ಸಂಸ್ಥಿತಾಃ ।
ತೃಣಗುಲ್ಮಲತಾಶ್ಚೈವ ಜಲಸ್ಥಲರುಹಾಶ್ಚ ಯೇ　　॥ ೨೧ ॥

ಸರ್ವೇ ಕಾಂಚನಸಂಕಾಶಾಃ ಸಂಜಾತಾಸ್ತತ್ಪ್ರಭಾವತಃ ।
ಪಾರ್ಶ್ವಂ ಮೇರೋರ್ವಿನಿರ್ಭಿದ್ಯ ಶಂಭೋಸ್ತೇಜೋ ವಿನಿರ್ಗತಂ　　॥ ೨೨ ॥

ಗಂಗಾಯಾಂ ನಿಹಿತಂ ಯಚ್ಚ ತದೇಕಸ್ಥಮಭೂದ್ದ್ವಿಜಾಃ ।
ಅಥ ದೇವೋ ಮಹಾದೇವಸ್ತೇಜೋರಾಶಿರುಮಾಪತಿಃ　　॥ ೨೩ ॥

---

೧೯. ಶಿವತೇಜಸ್ಸಿನಿಂದ ಸಂಪರ್ಕಹೊಂದಿದ ಆ ಮೇರುಪರ್ವತವು ಅಲ್ಲಿದ್ದ ವನ, ಕಾಡು ಇವುಗಳೊಡನೆ ಸುವರ್ಣಮಯವಾಯಿತು.

೨೦. ಅಲ್ಲಿನವರೆಗೂ ಅಗ್ನಿಯೇ ಮೊದಲಾದ ಸಕಲ ದೇವತೆಗಳೂ ಶಿವ ತೇಜಸ್ಸನ್ನು ಧರಿಸಿದ್ದರಾದ್ದರಿಂದ ಅವರೆಲ್ಲರೂ ಮರಣರಹಿತರಾಗಿ ಅಮರರೆನಿಸಿ ಕೊಂಡರು.

೨೧-೨೨. ಅಷ್ಟೇ ಅಲ್ಲ. ಅಲ್ಲಿ ನೆಲಸಿದ್ದ ಸಿದ್ಧರೂ ಮಹರ್ಷಿಗಳೂ ಇನ್ನೂ ಇತರರು ಅಮರರೆನಿಸಿಕೊಂಡರು. ಅಲ್ಲಿ ಹುಟ್ಟಿದ್ದ ತರುಗುಲ್ಮಲತೆಗಳೆಲ್ಲವೂ ಕಾಂಚನ ಮಯವಾದವು. ಅಷ್ಟಾದರೂ ಶಂಭುವಿನ ತೇಜಸ್ಸು ಆ ಸ್ಥಳದಿಂದ ಹೊರಟು ಮೇರು ವನ್ನು ಭೇದಿಸಿ ಮುನ್ನುಗ್ಗಿತು.

೨೩-೨೫. ಆದರೆ ಗಂಗೆಯಲ್ಲಿ ನಿಂತ ರುದ್ರವೀರ್ಯವು ಮಾತ್ರ ಒಂದು ಕಡೆ ಸ್ಥಿರವಾಗಿ ನಿಂತಿತು. ಅದನ್ನು ತೇಜಸ್ವಿಯಾದ ಶಂಕರನು ಒಂದು ಸ್ಥಳದಲ್ಲಿ ಸಂರಕ್ಷಿ ಸಿದನು. ಅದು ಪಿಂಗಲವರ್ಣದಿಂದ ಸಹಸ್ರ ಸೂರ್ಯರಂತೆ ಕಾಂತಿಮತ್ತಾಗಿತ್ತು.

ಗೋಪಯಾಮಾಸ ತತ್ತೇಜಃ ಪಿಂಗಲಂ ಪ್ರೇಕ್ಷ್ಯ ಶಂಕರಃ ।
ಗೋಪ್ಯಮಾನೇ ತು ತಸ್ಮಿಂಶ್ಚ ಘೋರೌ ಸೂರ್ಯಾಯುತಪ್ರಭಃ ॥ ೨೪ ॥

ವರ್ಷಾಣಾಂ ತು ಸಹಸ್ರೇಣ ಕಠಿಣಂ ಸ್ಕಂದತಾಂ ಗತಃ ।
ಸ್ಕಂದ ಇತ್ಯುಚ್ಯತೇ ತೇನ ತದಾ ಪ್ರಭೃತಿ ಸುವ್ರತಾಃ ॥ ೨೫ ॥

ಹರಾಜ್ಜಾತೋ ಯತಸ್ತೇನ ಕುಮಾರ ಇತಿ ಕಥ್ಯತೇ ।
ಸ್ಕಂದಃ ಕುಮಾರಃ ಷಡ್ವಕ್ತ್ರಸ್ತಥಾ ದ್ವಾದಶಲೋಚನಃ ॥ ೨೬ ॥

ಭುಜೈರ್ದ್ವಾದಶಭಿಶ್ಚೈವ ಶೋಭಮಾನೋಽಭವತ್ತದಾ ।
ಈಶಾದೇಶಾತ್ಪುನಃ ಸ್ನಾತುಂ ಕೃತ್ತಿಕಾಃ ಪರಮೋಜ್ಜ್ವಲಾಃ ॥ ೨೭ ॥

ತಾಭಿಃ ಕ್ಷೀರಂ ಯತೋದತ್ತಂ ಕಾರ್ತಿಕೇಯ ಇತಿ ಸ್ಮೃತಃ ।
ಗರ್ಭಪಂಕವಿಲಿಪ್ತಾಂಗೋ ಗಂಗಾಯಾಂ ಸ್ನಾಪಿತಃ ಪ್ರಭುಃ ॥ ೨೮ ॥

ಹೀಗೆ ಒಂದು ಸಹಸ್ರ ವರ್ಷಗಳಾದಮೇಲೆ ಆ ವೀರ್ಯವು ಕಠಿಣವಾಗಿ ಕವಲುಗಳಿಂದ ಕೂಡಿದ್ದಾಯಿತು. ಅಂದಿನಿಂದ ಆ ಶಿಶುವಿಗೆ ಸ್ಕಂದನೆಂದು ಹೆಸರು ಬಂದಿತು.

೨೬. ಹರನ ಪುತ್ರನಾದುದರಿಂದ ಕುಮಾರನೆಂದೂ ಹೆಸರಾಯಿತು. ಅಂತೂ ಸ್ಕಂದ, ಕುಮಾರ, ಷಣ್ಮುಖ, ದ್ವಾದಶನೇತ್ರ ಎಂಬ ಹೆಸರುಗಳು ಸ್ಕಂದನಿಗೆ ಅಂದಿನಿಂದ ಉಂಟಾದುವು.

೨೭. ಸ್ಕಂದನಿಗೆ ಹನ್ನೆರಡು ಭುಜಗಳಾದುವು. ಈಶ್ವರನ ಅಪ್ಪಣೆಯಂತೆ ಕೃತ್ತಿಕಾದೇವಿಯರು ಕ್ಷೀರಪಾನಮಾಡಿಸಿದರು. ಅದರಿಂದಲೇ ಕಾರ್ತಿಕೇಯನೆಂಬ ಹೆಸರೂ ಪ್ರಸಿದ್ಧಿಗೊಂಡಿತು.

೨೮-೨೯. ಗರ್ಭದ ಮಲದಿಂದ ಕೂಡಿದ್ದ ಆ ಶಿಶುವನ್ನು ಶಂಕರನು ಗಂಗೋದಕದಿಂದ ಸ್ನಾನಮಾಡಿಸಿದನು. ಆಗ ಆ ಮಗುವು ಪುಟವಿಟ್ಟ ಚಿನ್ನದಂತೆ

ತಪ್ತಚಾಮೀಕರಾಭಾಸಃ ಶರಧಾನವನೇ ತದಾ ।
ನಾಮ್ನಾಂ ಸಹಸ್ರೇಣ ತದಾ ಕುಮಾರೋ ವೇಧಸಾ ಸ್ತುತಃ ॥ ೨೯ ॥

ಮುಮೋಚ ನಾದಮುತ್ಥಾಯ ಸರ್ವಭೂತಭಯಂಕರಂ ।
ಪಾತಾಲಂ ಭೇದಯಿತ್ವಾ ತು ತಚ್ಛೃಂಗಂ ಶತಧಾ ಕೃತಂ ॥ ೩೦ ॥

ಸಿಂಹಾದಯೋಪಿ ತತ್ರಸ್ಥಾಸ್ತೇನ ನಾದೇನ ಸೂದಿತಾಃ ।
ತತಸ್ತಂ ಕ್ರೀಡಮಾನಂ ತು ದೃಷ್ಟ್ವಾ ದೇವಂ ಶಿವಾತ್ಮಜಂ ॥ ೩೧ ॥

ಪಿಂಗಲೋ ದೇವದೇವೇಶಂ ಜ್ಞಾಪಯಾಮಾಸ ಶಂಕರಂ ।
ಪಶ್ಯ ತ್ವಂ ದೇವದೇವೇಶ ಕ್ರೀಡಮಾನಂ ಕುಮಾರಕಂ ॥ ೩೨ ॥

ಹೊಳೆಯಲಾರಂಭಿಸಿತು. ಅಂತಹ ಕುಮಾರಸ್ವಾಮಿಯನ್ನು ಬ್ರಹ್ಮನು ಒಡನೆಯೇ ಸಹಸ್ರನಾಮಗಳಿಂದ ಸ್ತುತಿಸಲಾರಂಭಿಸಿದನು.

೩೦. ಒಡನೆಯೇ ಗುಹನು ಸರ್ವರಿಗೂ ಭಯಂಕರವಾದ ಒಂದು ದೊಡ್ಡ ಧ್ವನಿಯನ್ನು ಮಾಡಿದನು. ಆ ಧ್ವನಿಯು ಮೇರುಪರ್ವತದ ಶಿಖರಗಳನ್ನು ಭೇದಿಸಿತು.

೩೧. ಅಲ್ಲಿದ್ದ ಸಿಂಹವೇ ಮೊದಲಾದ ಘೋರಪ್ರಾಣಿಗಳು ಸಹ ಈ ಶಬ್ದವನ್ನು ಕೇಳಿ ಹೆದರಿದುವು. ಹಾಗೆಯೇ ಆ ಕಾಡಿನಲ್ಲಿ ಆಟವಾಡುತ್ತಾ ಕುಮಾರಸ್ವಾಮಿಯು ಬೆಳೆಯಲಾರಂಭಿಸಿವನು.

೩೨. ಆಗ ಶಿವಸೇವಕನಾದ ಪಿಂಗಳನು ಕಾಡಿನಲ್ಲಿ ಆಟವಾಡುತ್ತಿದ್ದ ಕುಮಾರ ಸ್ವಾಮಿಯನ್ನು ಹೊಗಳುತ್ತಾ ಮಹೇಶ್ವರನಿಗೆ ಎಲ್ಲವನ್ನೂ ತಿಳಿಸಿದನು.

ಸೂರ್ಯಾಯುತಪ್ರತೀಕಾಶಮಾತ್ಮಸೂನುಂ ಷಡಾನನಂ ।
ಜ್ಞಾಪಿತಃ ಪಿಂಗಲೇನೇಶೋ ವಾಕ್ಯಂ ದೇವ್ಯೈ ಮುದಾವಹಂ ।
ವರೋ ವರೇಣ್ಯೋ ವರದೋ ವಿಶ್ವಾಕಾರ ಉವಾಚ ಹ ॥ ೩೩ ॥

॥ ಈಶ್ವರ ಉವಾಚ ॥

ಗಚ್ಛಾವ ಏಹಿ ದೇವೇಶಿ ಮೇರೌ ಯತ್ರ ಸುತಸ್ತವ ।
ಪಶ್ಯಾವಸ್ತಂ ವರಾರೋಹೇ ಕುಮಾರಂ ತು ಷಡಾನನಂ ॥ ೩೪ ॥

ಪುರಾ ತ್ವಯೇಷ್ಟಂ ಕನಕಾವಭಾಸಂ ।
ಪಶ್ಯಾದ್ರಿಜೇ ಮಾನಸರಾಜಹಂಸಂ ।
ಪ್ರಧಾವಮಾನಂ ಶತಸೂರ್ಯಕಲ್ಪಂ ।
ಷಡಾನನಂ ಕಾರ್ಮುಕಪಾಣಿಮುಗ್ರೇ ॥ ೩೫

---

೩೩. ಮಹೇಶ್ವರನು ಷಡಾನನನಾದ ತನ್ನ ಮಗನು ಸಹಸ್ರ ಸೂರ್ಯರಂತೆ ಹೊಳೆಯುತ್ತಿರುವುದನ್ನು ನೋಡಿ, ಪಿಂಗಳನ ಮಾತುಗಳಿಗೆ ಮೆಚ್ಚಿ, ವಿಶ್ವೇಶ್ವರನಾದ ಸ್ವಾಮಿಯು ಪಾರ್ವತಿಗೆ ಹೀಗೆ ಹೇಳಲಾರಂಭಿಸಿದನು.

೩೪. "ಎಲೈ ದೇವಿಯೇ, ಮೇರುಪರ್ವತದಲ್ಲಿರುವ ನಿನ್ನ ಮಗನನ್ನು ನೋಡಿ ಸಂತೋಷಪಡು. ನಡೆ ಅಲ್ಲಿಗೆ ಹೋಗೋಣ.

೩೫. ಎಲೈ ದೇವಿಯೇ, ನೀನು ಹಿಂದೆ ಇಷ್ಟಪಟ್ಟಿದ್ದಂತೆ ರಾಜಹಂಸದಂತೆಯೂ, ಸುವರ್ಣವರ್ಣವಿಶಿಷ್ಟನಾಗಿಯೂ ಇರುವ ನಿನ್ನ ಮಗನನ್ನು ನೋಡು. ಕೈಯ್ಯಲ್ಲಿ ಬಿಲ್ಲನ್ನು ಹಿಡಿದು ನೂರು ಸೂರ್ಯರಂತೆ ಹೊಳೆಯುತ್ತಾ ಓಡುತ್ತಿರುವ ಷಡಾನನನನ್ನು ನೋಡಿ ಸಂತೋಷಪಡು.

ಸಮಾಗತೌ ಸ ಜ್ವಲನೋಽಥ ದೃಷ್ಟ್ವಾ ।
ತ್ರಿಲೋಕನಾಥೌ ಜಗತಃ ಪ್ರದೀಪೌ ।
ಉವಾಚ ವಹ್ನಿರ್ವರದಂ ಕುಮಾರಂ ।
ಹರಾಂಬಿಕೇ ದ್ವೌ ಪಿತರಾ ತವೈತೌ ॥ ೩೬ ॥

ತ್ವಾಮಾಗತೌ ದ್ರಷ್ಟುಮನಂತವೀರ್ಯಂ ।
ಪ್ರಜಾಶ್ರಯೇತಿ ಪ್ರಮಥಾಧಿನಾಥೌ ।
ಗತೋಽಥ ವಹ್ನೇರ್ವಚನಂ ನಿಶಮ್ಯ ।
ತತಃ ಸುತಸ್ತ್ವಾದ್ಗಿರಿಜಾಂಕಗೋಽಭೂತ್ ॥ ೩೭ ॥

ತಂ ಸಾ ಪಿಬಂತಂ ಮುಹುರಂಕಸಂಸ್ಥಂ ।
ಮತೃಪ್ಯಮಾನಂ ಕಲಹಂಸನಾದಿನೀ ।
ಉಮಾಂಕಸಂಸ್ಥೋ ಮದನಾರಿಸೂನುಃ ।
ಕರೇಣ ತಸ್ಯಾಸ್ತಿಲಕಾಲಕೌ ತು ॥ ೩೮ ॥

---

೩೬. ಎಂದು ಹೇಳಿ ಪಾರ್ವತಿಯೊಡನೆ ಪರಮೇಶ್ವರನು ಗುಹನಿದ್ದ ಪ್ರದೇಶಕ್ಕೆ ಹೋಗಲು, ಅಲ್ಲಿದ್ದ ಅಗ್ನಿಯು ಕುಮಾರಸ್ವಾಮಿಯನ್ನು ಕರೆದು ನುಗುವೇ, "ಈ ತ್ರಿಲೋಕಕ್ಕೆ ತಂದೆತಾಯಿಗಳಾದ ಪಾರ್ವತೀಪರಮೇಶ್ವರರು ನಿನಗೂ ಮಾತಾಪಿತೃಗಳಾಗಿರುವರು ಎಂದು ತಿಳಿಸಿದನು.

೩೭. ಕುಮಾರನೇ, ಈಗ ಈ ಶಿವದಂಪತಿಗಳು ನಿನ್ನನ್ನು ನೋಡಲು ಇಲ್ಲಿಗೆ ಬಂದಿರುವರು. ಅವರನ್ನು ಆಶ್ರಯಿಸಿಬಾಳು" ಎಂದು ಹೇಳಿದ ಅಗ್ನಿಯ ಮಾತನ್ನು ಕೇಳಿ ಗುಹನು ಒಡನೆಯೇ ಪಾರ್ವತಿಯ ತೊಡೆಯಮೇಲೆ ಹೋಗಿ ಕುಳಿತನು.

೩೮. ಗುಹನು ಪಾರ್ವತಿಯ ತೊಡೆಯಮೇಲೆ ಕುಳಿತು ಎಷ್ಟು ಸ್ತನ್ಯ ಪಾನ ಮಾಡಿದರೂ ತೃಪ್ತಿಹೊಂದುತ್ತಿರಲಿಲ್ಲ. ಕೊನೆಗೆ ಪಾರ್ವತಿಯ ತಿಲಕದಿಂದ ಕೂಡಿದ ಮುಂಗುರುಳುಗಳನ್ನು ಕೈಯ್ಯಿಂದ ಎಳೆಯಲಾರಂಭಿಸಿದನು.

ಮುಮುರ್ದ ಶಂಭೋಶ್ಚ ಭುಜಂಗಹಾರಂ ।
ಜಗ್ರಾಹ ಚಂದ್ರಂ ಸ ಕಪರ್ದಸಂಸ್ಥಂ ॥ ೩೯ ॥

ಪಂಚಮ್ಯಾಂ ಸ್ಥಾಪಿತಸ್ಸೋಽಥ ಷಷ್ಠ್ಯಾಂ ಷಷ್ಠೀಪ್ರಿಯೋ ಗುಹಃ ।
ಚತುಷ್ಪಾದವತೀಂ ತ್ಯಕ್ತ್ವಾ ತ್ರೈಲೋಕ್ಯಂ ಹಂತುಮುದ್ಯತಃ ॥ ೪೦ ॥

ಅಬೋಧಯುತ್ತದಾ ಬಾಲೋ ಜಂತೂನ್ ಸ್ಥಾವರಜಂಗಮಾನ್ ।
ಕ್ವಚಿಚ್ಛೃಂಗಂ ಗಿರೇಃ ಶೌರ್ಯಾನ್ನಯತ್ಯಾಶು ಸಮಾನತಾಂ ॥ ೪೧ ॥

ಕ್ವಚಿತ್ಸಿಂಹಾನ್ ಸಮಾಕೃಷ್ಯ ಪಾತಯಾಮಾಸ ಭೂತಲೇ ।
ಆರುಹ್ಯಾಭ್ಯಹನತ್ಪೃಷ್ಠೇ ತಾನೇವ ಭ್ರಾಮಯನ್ ಪುನಃ ॥ ೪೨ ॥

---

೩೯. ಶಂಕರನ ಸರ್ವಾಭರಣವನ್ನೂ, ಜಟಾಜೂಟದಲ್ಲಿದ್ದ ಚಂದ್ರನನ್ನೂ ಹಿಡಿದು ಎಳೆಯಲಾರಂಭಿಸಿದನು.

೪೦. ಗುಹನು ಪಂಚಮಿಯದಿನ ಒಂದು ಆಕಾರವನ್ನು ಪಡೆದು ಷಷ್ಠಿಯದಿನ ಷಣ್ಮುಖನ ಆಕಾರವನ್ನು ಪಡೆದನು. ನಾಲ್ಕು ಕಾಲಿನ ಮೃಗದ ವೇಷವು ತಪ್ಪಿ, ಗುಹನು ಷಣ್ಮುಖನಾದದ್ದು ಷಷ್ಠಿಯದಿನವಾದ್ದರಿಂದ ಆ ತಿಥಿಯು ಷಣ್ಮುಖನಿಗೆ ಪ್ರಿಯವಾಯಿತು.

೪೧. ಅಲ್ಲಿಂದ ಅವನು ಹುಡುಗನಾಗಿದ್ದಾಗಲೇ, ಸ್ಥಾವರ ಜಂಗಮ ವಸ್ತುಗಳನ್ನೂ, ಬೆಟ್ಟದ ಶಿಖರಗಳನ್ನೂ ಕಿತ್ತು, ಪುನಃ ಇಟ್ಟು, ತನ್ಮೂಲಕ ತನ್ನ ಶೌರ್ಯವನ್ನು ಪ್ರಚಾರಪಡಿಸಿದನು.

೪೨. ಕೆಲವು ಸಿಂಹಗಳನ್ನು ಎಳೆದು ಭೂಮಿಯಲ್ಲಿ ಉರುಳಿಸಿ ಓಡಾಡಿಸಿದನು. ಅವುಗಳ ಬೆನ್ನಿನ ಮೇಲೆ ಹತ್ತಿ ಸವಾರಿಮಾಡುತ್ತಿದ್ದನು.

ಕ್ವಚಿನ್ನಾಸೌ ಗೃಹೀತ್ವಾ ತು ಕರಾಭ್ಯಾಂ ಸಮ್ಮುಖಾವುಭೌ ।
ಆಸ್ಫೋಟಯತ್ತದಾऽನ್ಯೋನ್ಯಂ ಕುಂಭಾಭ್ಯಾಂ ಸಚಲೀಲಯಾ　　॥ ೪೩ ॥

ಸಮುತ್ಪತ್ಯ ಸಮಾದಾಯ ಖೇಚರಾಣಾಮುಮಾಸುತಃ ।
ಚಿಕ್ಷೇಪ ಸಹಸಾ ಬಾಲೋ ವಿಮಾನಾನ್ಯವನೀತಲೇ　　॥ ೪೪ ॥

ಪುನರುತ್ಪತ್ಯ ವೇಗೇನ ಪ್ರೇಕ್ಷ್ಯಮಾಣಃ ಖಮಂಡಲೇ ।
ಮಾರ್ಗಂ ರುರೋಧ ಸೂರ್ಯೇಂದ್ವೋರ್ಗ್ರಹಾಣಾಂ ಚ ತಥೈವ ಸಃ ॥ ೪೫ ॥

ಉತ್ಪಾಟ್ಯ ಮೇರುಶೃಂಗಾಣಿ ಇತಶ್ಚೇತಶ್ಚ ಸೋऽಕ್ಷಿಪತ್ ।
ಪರ್ವತಾಂಶ್ಚ ವಿಶೇಷೇಣ ನದ್ಯಶ್ಚಾನ್ಯಾರ್ಗತೋऽನಯತ್　　॥ ೪೬ ॥

ತ್ರಾಸಿತಂ ತು ಜಗತ್ಸರ್ವಂ ದಾಮೋದರಪದತ್ರಯೇ ।
ತತಸ್ತೇ ಭೃಶಮುದ್ವಿಗ್ನಾಃ ಶಕ್ರಂ ಶತ್ರುಪ್ರತಾಪನಂ　　॥ ೪೭ ॥

---

೪೩. ಒಂದುಸಾರಿ ಗುಹನು ತನ್ನ ಎರಡು ಕೈಗಳಿಂದಲೂ ಆನೆಯ ಕುಂಭ ಸ್ಥಳವನ್ನು ಹಿಡಿದು ಎಳೆದು ಒಂದಾನೆಯಿಂದ ಮತ್ತೊಂದಾನೆಯನ್ನು ಡಿಕ್ಕಿ ಹೊಡೆಸಿದನು.

೪೪. ಆಕಾಶದಲ್ಲಿ ಹಾರಾಡುತ್ತಿದ್ದ ದೇವತೆಗಳ ವಿಮಾನಗಳನ್ನು ಎಳೆದು ನೆಲಕ್ಕೆ ಬಡಿಯುತ್ತಿದ್ದನು.

೪೫. ಆಕಾಶಕ್ಕೆ ಹಾರಿ ಅಲ್ಲಿ ನಕ್ಷತ್ರಮಂಡಲದಲ್ಲೆಲ್ಲಾ ಸಂಚರಿಸಿ, ಸೂರ್ಯ ಚಂದ್ರರ ಮತ್ತು ಇತರ ಗ್ರಹಗಳ ಮಾರ್ಗವನ್ನೆಲ್ಲಾ ತಡೆಗಟ್ಟಿದನು.

೪೬. ಮೇರುಪರ್ವತದ ಶಿಖರಗಳನ್ನು ಕಿತ್ತು ಆಚೆ ಈಚೆ ಎಸೆದಾಡಿದನು. ಪರ್ವತಗಳನ್ನು ಕಿತ್ತೊಗೆದನು. ನದಿಗಳು ವ್ಯತ್ಕ್ರಮವಾಗಿ ಹರಿಯುವಂತೆಮಾಡಿದನು

೪೭. ವಿಷ್ಣುಪದವಾದ ಆಕಾಶದಲ್ಲಿರುವ ಸಮಸ್ತ ಲೋಕಗಳೂ ಈ ಕುಮಾರ ಸ್ವಾಮಿಯ ಆರ್ಭಟಕ್ಕೆ ಹೆದರಿ ನಿಂತಿತು. ಇದನ್ನು ನೋಡಿ ಆ ಲೋಕನಿವಾಸಿ. ಗಳೆಲ್ಲರೂ ಇಂದ್ರನಲ್ಲಿಗೆ ಹೋಗಿ,

ಊಚುರ್ಗತ್ವಾ ದ್ವಿಜಶ್ರೇಷ್ಠಾ ಭೂತಾ ವಾಕ್ಯಮಿದಂ ತದಾ ।
ಅಯಮರ್ಕಾಯುತಪ್ರಖ್ಯೋ ಬಾಲೋ ನೋ ಹಂತಿ ವೃತ್ರಹನ್ ॥ ೪೮ ॥

ತವೈಷರಾಜ್ಯಹರ್ತಾ ವೈ ಭವಿಷ್ಯತಿ ನ ಸಂಶಯಃ ।
ಪರಾಕ್ರಮಾದ್ಬಲಾಚ್ಚಕ್ರ ತಥೋತ್ಸಾಹಾಚ್ಚ ತೇಜಸಃ ॥ ೪೯ ॥

ನೂನಂ ಶತಗುಣೇನಾಯಮಧಿಕಶ್ಚೇಹ ದೃಶ್ಯತೇ ।
ಯದಿ ಸೂದಯಸೇ ನಾಥ ತತ್ತ್ವಂ ಸುಖಮವಾಪ್ಸ್ಯಸಿ ॥ ೫೦ ॥

ಕರಿಷ್ಯಸಿ ವಚೋಽಸ್ಮಾಕಂ ತವ ರಾಜ್ಯಂ ಭವಿಷ್ಯತಿ ।
ಉಪೇಕ್ಷಾ ನೈವ ಕರ್ತವ್ಯಾ ಶಿಶುಂ ಮತ್ವಾ ಪುರಂದರ ॥ ೫೧ ॥

ಏತದ್ವಿಚಾರ್ಯ ಯತ್ನೇನ ತತೋ ಬಾಲಂ ನಿಷೂದಥ ।
ಏವಮುಕ್ತಸ್ತತಸ್ತೈಸ್ತು ಭೂತವ್ರಾತೈಃ ಪುರಂದರಃ ॥ ೫೨ ॥
ಉವಾಚ ವಚನಂ ಶ್ಲಕ್ಷ್ಣಂ ತೇಷಾಂ ಧರ್ಮಪರಾಯಣಂ ।

---

೪೮. "ಈ ಸೂರ್ಯಕೋಟಿ ಸಮಾನನಾದ ಹುಡುಗನು ನಮ್ಮೆಲ್ಲರನ್ನೂ ಹಿಂಸಿಸುತ್ತಿರುವನು.

೪೯. ಎಲೈ ಇಂದ್ರನೇ, ನಿನ್ನ ರಾಜ್ಯವನ್ನು ಸಹ ಈತನು ತನ್ನ ಪರಾಕ್ರಮದಿಂದಲೂ ಉತ್ಸಾಹದಿಂದಲೂ ಅಪಹರಿಸಲು ಸಿದ್ಧನಾಗಿರುವನು.

೫೦. ವೀರ್ಯೋತ್ಸಾಹಗಳಲ್ಲಿ ಅವನು ನಿನಗಿಂತ ನೂರರಷ್ಟು ಅಧಿಕನಾಗಿರುವನು. ಅವನನ್ನು ನಾಶಪಡಿಸದೇ ಹೋದರೆ ನಿನಗೆ ಸುಖವು ದೊರಕಲಾರದು.

೫೧. ನಮ್ಮವರನ್ನು ನಂಬಿ ಅದಕ್ಕೆ ಪ್ರತಿಕ್ರಿಯೆ ಮಾಡಿದರೆ ನಿನಗೆ ರಾಜ್ಯವು ಉಳಿಯುವುದು. ಹುಡುಗನೆಂದು ತಿಳಿದು ಉದಾಸೀನ ಮಾಡಿದರೆ ನಿನಗೆ ಒಳ್ಳೆಯದಾಗದು.

೫೨. ಇದನ್ನು ಮುಂದಿಟ್ಟುಮಾಡಿಕೊಂಡು ಆ ಹುಡುಗನನ್ನು ನಾಶಮಾಡು." ಎಂದು ಆ ಭೂತಗಳ ಗುಂಪು ಇಂದ್ರನನ್ನು ಪ್ರಾರ್ಥಿಸಲು, ಆಗ ಇಂದ್ರನು ಧರ್ಮಸಂಬಂಧವಾದ ಕೆಲವು ಮೃದುಮಾತುಗಳಿಂದ ಅವರನ್ನು ಸಂತೈಸಿದನು.

॥ ಇಂದ್ರ ಉವಾಚ ॥

ಕಥಮುಕ್ತಮಿದಂ ಭೂತಾ ಬಾಲಸ್ಯ ಹನನಂ ಪ್ರತಿ ।
ಧರ್ಮಘ್ನಂ ಪಾಪಸಂಘಾತಂ ಕೀರ್ತಿಘ್ನಂ ವೈ ಚರಾಚರೇ ॥ ೫೩ ॥

ಶ್ರೂಯತಾಮಭಿಧಾಸ್ಯಾಮಿ ಧರ್ಮಶಾಸ್ತ್ರಸ್ಯ ನಿಶ್ಚಿತಂ ।
ಋಷಿಭಿಶ್ಚ ಪುರಾಽಽಖ್ಯಾತಂ ಪುರಾಣೇಷು ಚರಾಚರಾಃ ॥ ೫೪ ॥

ಆತುರಂ ಭೀರುಮುದ್ವಿಗ್ನಮೇಕಸ್ಥಂ ಶರಣಾಗತಂ ।
ಸ್ತ್ರಿಯಮಪ್ಯಥವಾ ಬಾಲಮಂಧಂ ಪಂಗುಂ ತಪಸ್ವಿನಂ ॥ ೫೫ ॥

ವಿಲಪಂತಂ ತಥೋನ್ಮತ್ತಂ ವಿಶ್ವಸ್ತಂ ಬ್ರಾಹ್ಮಣಂ ತಥಾ ।
ಪತಿತಂ ಪ್ರಪಲಾಯಂತಂ ಕಾಮಾಸಕ್ತಂ ನಿರಾಯುಧಂ ॥ ೫೬ ॥

ನಗ್ನಂ ದೀನಂ ತಥಾ ವೃದ್ಧಂ ನಖರೋಮಸಮನ್ವಿತಂ ।
ಮುಕ್ತಕೇಶಂ ತಥಾ ಮತ್ತಂ ಸುಪ್ತಂ ಚ ಭುವನೌಕಸಃ ॥ ೫೭ ॥

---

೫೩. "ಎಲೈ ಭೂತಗಳೇ, ಬಾಲಕನನ್ನು ಕೊಲ್ಲುವುದು ಧರ್ಮವಿರುದ್ಧವಾದುದು. ಪಾಪಕರವು. ಅಲ್ಲದೆ ನಾವು ಸಂಪಾದಿಸಿರುವ ಕೀರ್ತಿಯು ಕೂಡ ಇದರಿಂದ ನಾಶವಾಗುವುದು.

೫೪. ಹಿಂದೆ ಮಹರ್ಷಿಗಳು ಈ ವಿಷಯವಾಗಿ ಧರ್ಮಶಾಸ್ತ್ರಾದಿಗಳಲ್ಲಿ ಹೇಳಿರುವ ವಿಷಯವನ್ನು ಕೇಳಿರಿ.

೫೫-೫೮. ಕಾಯಿಲೆಯವನು, ಹೆದರಿರುವವನು, ದುಃಖಿತನಾಗಿರುವವನು, ಒಬ್ಬಂಟಿಗನು. ಶರಣಾಗತನು, ಸ್ತ್ರೀ, ಹುಡುಗ, ಕುರುಡ, ಕುಂಟ, ತಪಸ್ವೀ, ರೋದಿಸುವವನು, ಹುಚ್ಚನು, ನಂಬಿದವನು, ಬ್ರಾಹ್ಮಣನು, ಜಾತಿಭ್ರಷ್ಟ, ಓಡುವವನು, ಕಾಮಾಸಕ್ತನು, ಆಯುಧವಿರಹಿತನು, ನಗ್ನನು, ಬಡವನು, ವೃದ್ಧನು, ನಖ, ರೋಮ ಇವುಗಳಿಂದ ಕೂಡಿ ತಲೆಕೆದರಿಕೊಂಡಿರುವವನು, ಮದಿಸಿದವನು,

ಸೂದಯಿಷ್ಯಂತಿ ಯೇ ನೂನಂ ಮೂಢಾಸ್ತೇ ನರಕಾರ್ಣವಾತ್ ।
ಅನುತ್ಥಾನಾ ಭವಿಷ್ಯಂತಿ ಗರ್ತಸ್ಥಃ ಕುಂಜರೋ ಯಥಾ ॥ ೫೮ ॥

ತಸ್ಮಾದ್ವ್ರಜಧ್ವಂ ಶರಣಂ ಯತ್ರ ಶಂಭುಸುತೋ ಗುಹಃ ।
ನಾಹಂ ಬಾಲವಧಂ ಕರ್ತುಮುತ್ಸಹೇ ಸ ಚರಾಚರೇ ॥ ೫೯ ॥

ಏವಮುಕ್ತೇ ತು ಶಕ್ರೇಣ ಭೂತಾಸ್ತೇ ಭೃಶದುಃಖಿತಾಃ ।
ಕ್ರೋಧಸಂದೀಪನಂ ವಾಕ್ಯಂ ಪುನರೂಚುಶ್ಚರಾಚರಾಃ ॥ ೬೦ ॥

॥ ಭೂತಾ ಊಚುಃ ॥

ಗರ್ಭೋ ದಿತೇರ್ಯಥಾ ಶಕ್ರ ಸಂರಂಭಾತ್ಸೂದಿತಸ್ತ್ವಯಾ ।
ತದಾ ನೀತಿರ್ಗತಾ ಕುತ್ರ ದಾರುಣೇ ಗರ್ಭಪಾತನೇ ॥ ೬೧ ॥

ನಿದ್ರಿಸಿದವನು, ಪಾತಾಳವಾಸಿ, ಇವರುಗಳನ್ನು ಕೊಲ್ಲಕೂಡದು. ಹಾಗೆ ಕೊಂದರೆ ನರಕದಲ್ಲಿ ಅವನು ಸ್ಥಿರವಾಗಿ ನಿಲ್ಲುವನು. ಹಳ್ಳದಲ್ಲಿ ಬಿದ್ದ ಆನೆಯಂತೆ ಅವನ ವಾಸವು ಕೇವಲ ನರಕದಲ್ಲೇ ನಡೆಯಬೇಕಾಗುವುದು.

೫೯. ಆದರಿಂದ ಶಂಭುವಿನ ಪುತ್ರನಾದ ಷಣ್ಮುಖನು ಇರುವ ಸ್ಥಳಕ್ಕೆ ಹೋಗಿ ಅವನನ್ನು ಮೊರೆಹೋಗಿರಿ. ನಾನಂತೂ ಈಗ ಬಾಲವಧೆಯನ್ನು ಮಾಡಲು ಇಷ್ಟಪಡುವಂತಿಲ್ಲ.

೬೦. ಹೀಗೆ ಇಂದ್ರನು ಹೇಳಲಾ ಭೂತಗಳು ಬಹಳ ದುಃಖಿತರಾಗಿ ಕೋಪದಿಂದ ಪುನಃ ಕೆಲವು ಮಾತುಗಳನ್ನಾಡಿದರು.

೬೧. ಎಲೈ ಇಂದ್ರ, ನೀನು ಹಿಂದೆ ದಿತೀದೇವಿಯ ಗರ್ಭವನ್ನು ಭೇದನ ಮಾಡಿದೆಯಲ್ಲಾ! ಆಗ ಈ ಭ್ರೂಣಹತ್ ದೋಷವು ಎಲ್ಲಿ ಹೋಗಿತ್ತು?

ಅಶಕ್ಯಮಿತಿ ಮತ್ವೈವ ನೀತಿಮಾನಸಿ ಮಾನದ ।
ಅಶಕ್ಯಕರ್ಮಣಿ ವಿಭೋ ನೀತಿಮಾನ್ ಪೂರುಷೋ ಭವೇತ್ ॥ ೬೨ ॥

ಕಶ್ಚ ನಾಮ ನರಶ್ಶೂರೋ ಯೋ ಬಾಲಂ ಯೋಧಯೇದ್ರಣೇ ।
ಅಪಿ ಶಕ್ರಶತೈಸ್ತಸ್ಯ ವಜ್ರಕೋಟಿನಿಪಾತನೈಃ ॥ ೬೩ ॥

ಅಪ್ಯೇಕಮಪಿ ರೋಮಾಗ್ರಂ ಪಾತಿತುಂ ನೈವ ಶಕ್ಯತೇ ।
ಏವಮುಕ್ತಸ್ತತಸ್ತೈಸ್ತು ಭೂತವ್ರಾತೈಃ ಪುರಂದರಃ ॥ ೬೪ ॥

ಆಜ್ಯಧಾರಾಭಿಷಿಕ್ತೋಽಗ್ನಿರ್ಯಥೈವ ಪ್ರಜ್ವಲಂಸ್ತಥಾ ।
ಉವಾಚೇದಂ ವಚಸ್ತಾನ್ ಸ ಕ್ರೋಧವಹ್ನಿಪ್ರದೀಪಿತಃ ೬೫ ॥
ವಜ್ರಮುದ್ಯಮ್ಯ ಹಸ್ತೇನ ವೃತ್ರಹಾ ಕುಲಿಶಾಯುಧಃ ॥ ೬೬ ॥

---

೬೨. ಈಗ ಆ ಹುಡುಗನನ್ನು ಕೊಲ್ಲುವುದು ಅಸಾಧ್ಯವಾಗಿರುವುದರಿಂದ ನೀನು ಈ ನೀತಿಯನ್ನು ಅನುಸರಿಸುತ್ತಿದ್ದೀಯೆ. ಕೈಯ್ಯಲ್ಲಾಗದ ಕೆಲಸದಲ್ಲಿ ಎಲ್ಲರೂ ನೀತಿವಂತರೇ ಅಲ್ಲವೇ ?

೬೩-೬೪. ಎಲೈ ಇಂದ್ರನೇ, ಆ ಹುಡುಗನನ್ನು ಯಾವನು ಯುದ್ಧದಲ್ಲಿ ಸೋಲಿಸುವನು ? ಅವನನ್ನು ನೂರು ಜನ ಇಂದ್ರರು ತಮ್ಮ ತಮ್ಮ ಆಯುಧಗಳಿಂದ ಪ್ರತಿಭಟಿಸಿದರೂ, ಆತನ ರೋಮವೊಂದನ್ನು ಅಲ್ಲಾಡಿಸಲಾರರು" ಎಂದು ಭೂತವ್ರಾತವು ಇಂದ್ರನನ್ನು ಮೂದಲಿಸಲು,

೬೫-೬೬. ತುಪ್ಪದ ಧಾರೆಯಿಂದ ಉರಿಯೇಳುವ ಅಗ್ನಿಯಂತೆ, ಇಂದ್ರನು ಆ ಮಾತುಗಳನ್ನು ಉರಿದೆದ್ದನು. ಒಡನೆಯೇ ಇಂದ್ರನು ವಜ್ರಾಯುಧವನ್ನು ಕೈಯ್ಯಲ್ಲಿ ಹಿಡಿದು ಹೀಗೆ ಹೇಳಿದನು.

॥ ಇಂದ್ರ ಉವಾಚ ॥

ಪುರಾ ಮಯಾ ಯಥಾ ಗರ್ಭೋ ಘಾತಿತಶ್ಚ ಚರಾಚರಾಃ ।
ದಿತೇಃ ಕಾಯಂ ಸಮಾವಿಶ್ಯ ತಥೇದಾನೀಂ ನಿಹನ್ಯತೇ ॥ ೬೭ ॥

ಅಥ ಗತ್ವಾ ಹನಿಷ್ಯಾಮಿ ಪತಂಗಮಿವ ವಹ್ನಿನಾ ।
ವಜ್ರಂ ಹಸ್ತೇ ಸಮಾದಾಯ ಆಹವೇ ಪ್ರಸಹೇತ ಕಃ ॥ ೬೮ ॥

ಏವಮುಕ್ತ್ವಾ ತತಶ್ಶಕ್ರಃ ಕ್ರೋಧಾನಲಸಮನ್ವಿತಃ ।
ಆಜ್ಞಾಪಯತ್ತದಾ ವಿಪ್ರಾಃ ಸಾಧ್ಯಾನ್ ದೇವಾನ್ ದಿವಾಕರಾನ್ ॥ ೬೯ ॥

ಶರಧಾನಂ ಗಮಿಷ್ಯಾಮಿ ವಧಾರ್ಥಂ ಬಾಲಕಸ್ಯ ಚ ।
ಹಂಸಕುಂದೇಂದುವರ್ಣಾಭಂ ಚತುರ್ದಂತಂ ಮಹಾಗಜಂ ॥ ೭೦ ॥

ಆನಯಧ್ವಂ ಮಮಾಗ್ರೇ ತು ಕರೀಂದ್ರಂ ಮಮ ವಲ್ಲಭಂ ।
ಜಲಧೇರಿವ ಗಂಭೀರಂ ದೀರ್ಘಹಸ್ತಂ ಘನಸ್ವನಂ ॥ ೭೧ ॥

---

೬೭. "ಎಲೈ ಚರಾಚರರಾದ ಭೂತಗಳೇ, ಹಿಂದೆ ನಾನು ದಿತಿಯ ಗರ್ಭವನ್ನು ಹೊಕ್ಕು ಆಕೆಯ ಗರ್ಭನಿರ್ಭೇದಮಾಡಿದ ಹಾಗೆ ಈಗ ಆ ಹುಡುಗನನ್ನು ನಾಶಪಡಿಸುವೆನು.

೬೮. ನಾನು ವಜ್ರಾಯುಧವನ್ನು ಹಿಡಿದು ಯುದ್ಧಕ್ಕೆ ನಿಂತರೆ, ಬೆಂಕಿಯು ಪತಂಗದ ಹುಳುವನ್ನು ಸುಡುವಂತೆ ಎಂತಹ ಶತ್ರುವನ್ನಾದರೂ ಧ್ವಂಸಮಾಡಿಬಿಡುವೆನು."

೬೯. ಹೀಗೆಂದು ಹೇಳಿ ಇಂದ್ರನು ಕೋಪದಿಂದ ಉರಿಯುತ್ತಾ ಸಿದ್ಧಸಾಧ್ಯರನ್ನೂ ದ್ವಾದಶಾದಿತ್ಯರನ್ನೂ ಕರೆಸಿ ಹೀಗೆ ಅಪ್ಪಣೆಮಾಡಿದನು.

೭೦-೭೧. ಎಲೈ ದೇವತೆಗಳಿರಾ, ಈಗ ನಾನು ಆ ಬಾಲಕನ ವಧಾರ್ಥವಾಗಿ ಶರಧಾನವನಕ್ಕೆ ಹೋಗುವೆನು. ಈಗಲೇ, ಹಂಸ, ಕುಂದ ಪುಷ್ಪ, ಚಂದ್ರ ಇವರುಗಳಂತೆ ಶುಭ್ರವರ್ಣವಾಗಿರುವ, ನಾಲ್ಕು ದಂತಗಳಿಂದ ಕೂಡಿರುವ ದೀರ್ಘವಾದ ಸೊಂಡಲುಳ್ಳ ಐರಾವತವೆಂಬ ನನ್ನ ಮದ್ದಾನೆಯು ಈಗಲೇ ಬರಲಿ. ಅದು ಸಮುದ್ರದಂತೆ ಗಂಭೀರವಾದ ಧ್ವನಿಯುಳ್ಳದ್ದಾಗಿದೆಯಷ್ಟೆ.

ದೈತ್ಯದಾನವರಕ್ತೇನ ಕ್ಲಿನ್ನದಂಷ್ಟ್ರಂ ಭಯಾವಹಂ ।
ತದಾದೇಶಾತ್ಸುರೈಸ್ತೂರ್ಣಂ ಸರ್ವಾಯುಧಸಮನ್ವಿತಃ ॥ ೭೨ ॥

ನಿವೇದಿತಃ ಸ ಶಕ್ರಾಯ ತಮಾರುಹ್ಯ ಪುರಂದರಃ ।
ವಿಶ್ವೈರ್ದೇವೈಶ್ಚ ಸಾಧ್ಯೈಶ್ಚ ವಸುಭಿಶ್ಚ ಮರುದ್ಗಣೈಃ ॥ ೭೩ ॥

ಆದಿತ್ಯೈರಶ್ವಿನೀಭ್ಯಾಂ ಚ ಯಯೌ ಸ್ಕಂದವಧಾಯ ಸಃ ।
ವಿಯನ್ಮಂಡಲಮಾಸ್ಥಾಯ ಸ್ತೂಯಮಾನಶ್ಚರಾಚರೈಃ ॥ ೭೪ ॥

ನೃತ್ಯಮಾನಾಪ್ಸರೋಭಿಶ್ಚ ವಾದ್ಯಮಾನೈಶ್ಚ ಕಿಂನರೈಃ ।
ಗೀಯಮಾನಶ್ಚ ಗಂಧರ್ವೈಃ ಸುಗೀತೈರ್ಗೀತಶಾಲಿಭಿಃ ॥ ೭೫ ॥

ನದದ್ಭಿಶ್ಚ ಮಹಾಸಿಂಹೈರ್ಗರ್ಜದ್ಭಿಶ್ಚ ಗಜೋತ್ತಮೈಃ ।
ಹರಿಭಿರ್ಹೇಷಮಾಣೈಶ್ಚ ವಾಯುವೇಗೈರ್ಮಹಾರಥೈಃ ॥ ೭೬ ॥

---

೭೨. ದೈತ್ಯದಾನವರ ರಕ್ತದಿಂದ ಕೂಡಿರುವ ದಂತಗಳಿಂದ ಆ ಆನೆಯು ಅತಿ ಭಯಂಕರವಾಗಿ ತೋರುತ್ತಿದೆ. ಅಂಥ ಆನೆಯನ್ನು ಬರಮಾಡಿ" ಎಂದು ಆಜ್ಞಾಪಿಸಲು ದೇವತೆಗಳು ಸರ್ವಾಯುಧಗಳಿಂದ ಕೂಡಿ ದೇವೇಂದ್ರನ ಅಪ್ಪಣೆಯಂತೆ ಅಲ್ಲಿಗೆ ಬಂದರು.

೭೩-೭೪. ಇಂದ್ರನು ದ್ವಾದಶಾದಿತ್ಯರಿಂದಲೂ, ಅಶ್ವಿನೀದೇವತೆಗಳಿಂದಲೂ ಕೂಡಿ ಸ್ಕಂದಸ್ವಾಮಿಯನ್ನು ಕೊಲ್ಲಲು ಪ್ರಯಾಣಮಾಡಿದನು. ಆಗ ಚರಾಚರ ಭೂತಗಳೆಲ್ಲವೂ ಅಂತರಿಕ್ಷದಲ್ಲಿ ನಿಂತು ಇಂದ್ರನನ್ನು ಸ್ತುತಿಸುತ್ತಿದ್ದರು.

೭೫. ಅಪ್ಸರಸ್ತ್ರೀಯರು ಸಂತೋಷದಿಂದ ನರ್ತನಮಾಡಿದರು. ಕಿನ್ನರರು ವಾದ್ಯವನ್ನು ಬಾರಿಸಿದರು. ಗಂಧರ್ವರು ಶ್ರಾವ್ಯವಾಗಿ ಹಾಡಿದರು.

೭೬. ಮಹಾಸಿಂಹಗಳು ಗರ್ಜಿಸಿದುವು. ಆನೆಗಳು ಘೀಂಕಾರಮಾಡಿದುವು. ಕುದುರೆಗಳು ಕೆನೆದುವು. ರಥಗಳು ವಾಯುವೇಗದಿಂದ ಚಲಿಸಲಾರಂಭಿಸಿದುವು.

ಪತಾಕಾಭಿರ್ಜಯಂತೀಭಿರ್ಧ್ವಜೈಶ್ಛತ್ರೈಶ್ಚ ಚಾಮರೈಃ ।
ಏವಮಾದ್ಯೈರನೇಕೈಶ್ಚ ನಂದೀಶ್ವರ ಇವಾಪರಃ ॥ ೭೭ ॥

ದೋಧೂಯಮಾನಶ್ಚಮರೈಶ್ಚ ದಿವ್ಯೈಃ ।
ಜೇಗೀಯಮಾನಃ ಸುರಕಿನ್ನರೀಭಿಃ ।
ಪೇಪೀಯಮಾನಃ ಸುರಸುಂದರೀಭಿಃ ।
ಕಾಮಾತುರಾಭಿರ್ನಯನೈರಜಸ್ರಂ ॥ ೭೮ ॥

ಸಂಪೂಜ್ಯಮಾನೋಮುನಿಸಿದ್ಧಸಂಘೈಃ ।
ಮುದಾನ್ವಿತೋ ವಜ್ರಧರಃ ಕಿರೀಟೀ ।
ಕುಮಾರಮುದ್ದಿಶ್ಯ ಗತೋಽಥ ವೇಗಾತ್ ।
ಹರಿರ್ಹರಿರ್ವ್ರೈ ಮನುಜಾನ್ಯಥೇವ ॥ ೭೯ ॥

---

೭೭. ಅನೇಕ ಪತಾಕೆಗಳು, ಪುಷ್ಪಮಾಲೆಗಳು, ಧ್ವಜಗಳು, ಛತ್ರಿಗಳು, ಚಾಮರಗಳು ಇವೇ ಮೊದಲಾದ ಸಂಭಾರಗಳಿಂದೊಡಗೂಡಿ, ಎರಡನೆಯ ನಂದೀಶ್ವರನೋ ಎಂಬಂತೆ ಇಂದ್ರನು ಪ್ರಯಾಣಬೆಳೆಸಿದನು.

೭೮. ದೇವತಾಸ್ತ್ರೀಯರು ಜಯಶಬ್ದಗಳನ್ನು ಹೇಳುತ್ತಾ ದಿವ್ಯವಾದ ಚಾಮರಗಳನ್ನು ಬೀಸುತ್ತಲಿದ್ದರು. ಸುರಸುಂದರಿಯರು ತಮ್ಮ ಕಾಮೋದ್ರೇಕಗಳಾದ ಕಣ್ಣುಗಳಿಂದ ದೇವೇಂದ್ರನನ್ನೇ ನೋಡುತ್ತಾ ಅವನನ್ನು ಸಂತೋಷಗೊಳಿಸುತ್ತಿದ್ದರು.

೭೯. ಹೀಗೆ ಸಕಲ ಮಹರ್ಷಿಗಳಿಂದಲೂ ವಂದಿತನಾಗಿ ಇಂದ್ರನು ಸಂತೋಷದಿಂದ ಕೂಡಿ, ವಜ್ರಾಯುಧವನ್ನು ಹಿಡಿದು, ಸಿಂಹವು ಮನುಷ್ಯರನ್ನು ಅಟ್ಟಿಸಿಕೊಂಡು, ಬರುವಂತೆ ಕುಮಾರಸ್ವಾಮಿಯನ್ನು ಹುಡುಕಿಕೊಂಡು ಯುದ್ಧಕ್ಕೆ ಹೊರಟನು.

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಪರಮೇಶ್ವರ ಸುರಸಂವಾದಾದಿ ಕಥನಂ ನಾಮ ದ್ವಿಷಷ್ಟಿತಮೋಽಧ್ಯಾಯಃ.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಸೌರಪುರಾಣದಲ್ಲಿ ಸೂತ ಶೌನಕ ಸಂವಾದ ರೂಪವಾಗಿ ಶಿವ ಮತ್ತು ದೇವತೆಗಳಿಗೆ ನಡೆದ ಸಂಭಾಷಣೆಯನ್ನು ವಿವರಿಸುವ ಅರುವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ಶಿವಾಯನಮಃ

ಅಥ ಶ್ರೀ ಸೌರಪುರಾಣೇ ತ್ರಿಷಷ್ಟಿತಮೋऽಧ್ಯಾಯಃ.

॥ ಸೂತ ಉವಾಚ ॥

ಏವಂ ಗತ್ವಾ ಸಹಸ್ರಾಕ್ಷೋ ಯತ್ರಾऽऽಸ್ತೇ ಪಾರ್ವತೀಸುತಃ ।
ಬಾಲಂ ಸೂರ್ಯಾಯುತಪ್ರಖ್ಯಂ ತಮಪಶ್ಯಚ್ಛಚೀಪತಿಃ ।
ಪ್ರಲಯಾಗ್ನಿಚಯಾಕಾರಂ ದೃಷ್ಟ್ವಾ ನಾರದಮಬ್ರವೀತ್ ॥ ೧ ॥

॥ ಇಂದ್ರ ಉವಾಚ ॥

ಇದಂ ಕಿಂ ಭಾತಿ ದೇವರ್ಷೇ ಮೇರೋಃ ಶತಗುಣೋಚ್ಛ್ರಯಂ ।
ತೇಜಸಾ ವ್ಯಾಪ್ತಭುವನಂ ಸರ್ವಭೂತಭಯಂಕರಂ ॥ ೨ ॥

ಏವಂ ಶಕ್ರವಚಃ ಶ್ರುತ್ವಾ ಭಗವಾನ್ ಪದ್ಮಭೂಸುತಃ ।
ಐರಾವತಗಜಾರೂಢಂ ಶಚೀಪತಿಮಥಾಬ್ರವೀತ್ ॥ ೩ ॥

ಅರುವತ್ತುಮೂರನೆಯ ಅಧ್ಯಾಯ.

೧. ದೇವೇಂದ್ರನು ಹಾಗೆ ಯುದ್ಧಸನ್ನದ್ಧನಾಗಿ ಪಾರ್ವತೀಪುತ್ರನಿರುವ ಪ್ರದೇಶವನ್ನು ತಲಪಿದನು. ಅಲ್ಲಿ ಕೋಟಿಸೂರ್ಯಪ್ರಕಾಶಮಾನನಾಗಿ ಪ್ರಲಯಾಗ್ನಿಯಂತಿದ್ದ ಕುಮಾರಸ್ವಾಮಿಯನ್ನು ನೋಡಿದರು. ಅಷ್ಟರಲ್ಲಿ ಅಲ್ಲಿಯೇ ನಿಂತಿದ್ದ ನಾರದಮಹರ್ಷಿಯನ್ನು ಕಂಡು ದೇವೇಂದ್ರನು ಹೀಗೆ ಪ್ರಶ್ನೆಮಾಡಿದನು.

೨-೩. "ಮಹರ್ಷಿಯೇ, ನನ್ನ ಎದುರಿಗೆ ಮೇರುಪರ್ವತಕ್ಕಿಂತ ನೂರರಷ್ಟು ದೊಡ್ಡದಾಗಿ ತೇಜೋಮಯನಾಗಿ ಕಾಣುತ್ತಿರುವ ವಸ್ತುವಾವುದು? ಅದು ಬಹಳ ಭಯಂಕರವಾಗಿದೆಯಲ್ಲವೆ?" ಎಂದು ಕೇಳಿದ ಗಜಾರೂಢನಾದ ಇಂದ್ರನನ್ನು ನೋಡಿ, ನಾರದರು ಹೀಗೆ ಹೇಳಲಾರಂಭಿಸಿದರು.

॥ ನಾರದ ಉವಾಚ ॥

ಯೋಽಸೌ ದೇವ ತ್ವಯಾ ನ್ಯಸ್ತೋ ಗರ್ಭಶ್ಚೈವ ಸಹಾಮರೈಃ ।
ತಸ್ಯೈವೇಷ ಪ್ರಭಾವೋಽಯಂ ನೂನಂ ದೇವ ಶತಕ್ರತೋ ॥ ೪ ॥

ಭಾಸ್ಕರಾಣಾಂ ನ ಪುಂಜೋಽಯಂ ನೈವ ಪರ್ವತಸಂಚಯಃ ।
ಬಾಲೇನೋತ್ಪಾದ್ಯಮಾನೇನ ಸಹ ದೇವ್ಯೈಶ್ಚ ರಂಜಿತಃ ॥ ೫ ॥

ಅಧೋ ಯೋಜನಸಂಖ್ಯಾಭಿಃ ಸಹಸ್ರಾಣ್ಯೇವ ಷೋಡಶ ।
ಚತುರಶೀತಿರುತ್ಸೇಧೋ ದ್ವಾತ್ರಿಂಶದ್ವಿಸ್ತರಃ ಸ್ಮೃತಃ ॥ ೬ ॥

ಯದ್ಗಿರಿಃ ಸಕಲೋಽಯಂ ತು ಮೇರುಃ ಕಾಂಚನತಾಂ ಗತಃ ।
ತತ್ತೇಜಃ ಸ್ಕಂದತಾಂ ಯಾತಂ ಸಹಸ್ರಾಬ್ದೈರ್ಗತೈಸ್ತಥಾ ॥ ೭ ॥

---

೪. ಎಲೈ ಶತಕ್ರತುವೇ, ನೀವೆಲ್ಲರೂ ಹಿಂದೆ ನಿಮ್ಮ ಗರ್ಭದಲ್ಲಿದ್ದ ಶಿವ ವೀರ್ಯಾಂಶವನ್ನು ಒಂದೆಡೆಯಲ್ಲಿ ಇಟ್ಟಿರಲಿಲ್ಲವೇ ? ಆ ವೀರ್ಯಪ್ರಭಾವವೇ ಈಗ ಮೂರ್ತಿಮತ್ತಾಗಿದೆ.

೫. ಇಲ್ಲಿ ಕಾಣುವುದು ಸೂರ್ಯರ ಸಮೂಹವಲ್ಲ. ಪರ್ವತಗಳ ರಾಶಿಯಲ್ಲಿ ಈ ಹುಡುಗನು ಹುಟ್ಟಿದಾಗಲೇ ದೇವತೆಗಳೆಲ್ಲರೂ ಅತ್ಯಂತ ತೇಜಸ್ವಿಗಳಾದರು.

೬-೭. ಈ ಮೇರುಪರ್ವತವು ಹದಿನಾರು ಸಾವಿರ ಯೋಜನಗಳವರೆಗೂ ಪಾತಾಳಲೋಕದಲ್ಲಿ ವ್ಯಾಪಿಸಿರುವುದು. ಎಂಭತ್ತುನಾಲ್ಕುಸಾವಿರ ಯೋಜನ ಎತ್ತರವಾಗಿಯೂ, ಮೂವತ್ತೆರಡುಸಾವಿರ ಯೋಜನ ವಿಸ್ತಾರವಾಗಿಯೂ ಇದೆ. ಇಂತಹ ಮೇರುಪರ್ವತವೆಲ್ಲಾ ಆ ಶಿವತೇಜಸ್ಸಿನ ಸಂಸ್ಪರ್ಶದಿಂದ ಕಾಂಚನಮಯವಾಯಿತು. ಇದು ನಡೆದದ್ದು ಸಾವಿರವರ್ಷಗಳ ಹಿಂದೆ. ಆಗಲೇ ಶಿವತೇಜಸ್ಸು ಕವಲುಕವಲಾಗಿ ಒಂದು ಆಕಾರವನ್ನು ಪಡೆಯಿತು.

ಚತುರ್ಥ್ಯಾಂ ಸಾಕೃತಿರ್ದೇವ ಪಂಚಮ್ಯಾಮುಂಗವಾಂಸ್ತತಃ ।
ಷಷ್ಠ್ಯಾಂ ಪದ್ಭ್ಯಾಂ ಯಥಾ ವೃಷ ತ್ರೈಲೋಕ್ಯಂ ವಿಜಯಿಷ್ಯತಿ ॥ ೮ ॥

ತ್ವಯಾ ಸಹಾಯಂ ಸಪ್ತಮ್ಯಾಂ ಪಾಲಯಿಷ್ಯತಿ ವಾ ಪುನಃ ।
ತ್ವಂ ತು ನೂನಂ ನ ಶಕ್ನೋಸಿ ಜೇತುಂ ವರ್ಷಶತೈರಪಿ ॥ ೯ ॥

ಕುಮಾರಂ ವರದಂ ದೇವಂ ಪಾರ್ವತ್ಯಾನಂದವರ್ಧನಂ ।
ನಾನಾಪ್ರಹರಣೋಪೇತಂ ನಾನಾಭರಣಭೂಷಿತಂ ॥ ೧೦ ॥

ಮಾತೃಭಿರ್ಗಣವೃಂದೈಶ್ಚ ಸೇವ್ಯಮಾನಮುಮಾಸುತಂ ।
ಏವಂ ಸಂಜಲ್ಪಮಾನೋಽಸೌ ಜಂಭಾರಿರ್ಬಾಲಕಂ ಪ್ರತಿ ॥ ೧೧ ॥

---

೮. ಆರೀತಿ ಆಕಾರವು ಕಂಡದ್ದು ಚತುರ್ಥಿಯಲ್ಲಿ. ಲಿಂಗೋತ್ಪತ್ತಿಯು ಪಂಚಮಿಯಲ್ಲಿ. ಷಷ್ಠಿಯ ದಿನ ಕಾಲುಗಳು ಉತ್ಪತ್ತಿಯಾಗಿ ಸಂಚಾರವು ಆರಂಭವಾಯಿತು. ಈ ಮೂರು ತಿಥಿಗಳಲ್ಲಿಯೂ, ಈತನ ಉತ್ಪತ್ತಿಯು ಕಂಡುಬಂದಿರುವುದರಿಂದ ಮೂರು ಲೋಕಗಳನ್ನೂ ಈತನು ಜಯಿಸುತ್ತಾನೆಂಬುದರಲ್ಲಿ ಅನುಮಾನವೇ ಇಲ್ಲ.

೯. ಸಪ್ತಮಿಯದಿನ ನಿನಗೆ ಸಹಾಯಕನಾಗಿ ನಿಂತು ನಿಮ್ಮನ್ನು ಉದ್ಧರಿಸುವನು. ಹಾಗಿರುವಾಗ ನೀನು ನೂರುವರ್ಷಗಳು ಪೂರ್ತಿ ಯುದ್ಧಮಾಡಿದರೂ ಅವನನ್ನು ಮಾತ್ರ ಗೆಲ್ಲಲಾರೆ."

೧೦-೧೧. ಎಂದು ನಾರದನು ಹೇಳುತ್ತಿರುವಾಗಲೇ ಇಂದ್ರನು ಅದನ್ನು ಲಕ್ಷಿಸದೆ ಕುಮಾರನಾಗಿಯೂ, ವರದನಾಗಿಯೂ, ಪಾರ್ವತಿಯ ಆನಂದವನ್ನು ಹೆಚ್ಚಿಸುವವನಾಗಿಯೂ, ಅನೇಕ ಆಯುಧಗಳಿಂದಲೂ, ಆಭರಣಗಳಿಂದಲೂ ವಿರಾಜಮಾನನಾಗಿಯೂ ಇರುವ ಸ್ಕಂದನನ್ನು ವಜ್ರಾಯುಧದಿಂದ ಹೊಡೆದನು.

ವಜ್ರಂ ಮುಮೋಚ ವೃತ್ರಾರಿಃ ಸ್ಫುಲಿಂಗೋದ್ಗಾರಿಭೀಷಣಂ ।
ತೃಣವನ್ಮನ್ಯಮಾನೋಽಸೌ ವಜ್ರಂ ತತ್ಪಾರ್ವತೀಸುತಃ ॥ ೧೨ ॥

ಶರೇಣೈಕೇನ ವಿವ್ಯಾಧ ಪಪಾತ ಚ ಸಮೂರ್ಛಿತಃ ।
ಪುನರನ್ಯಂ ಸಮಾದಾಯ ಶರಂ ಜ್ವಲನಸಂನಿಭಂ ॥ ೧೩ ॥

ಛತ್ರಂ ಧ್ವಜಂ ಪತಾಕಾಶ್ಚ ಹರೇಶ್ಚಿಚ್ಛೇದ ಷಣ್ಮುಖಃ ।
ಬಿಭೇದಾನ್ಯೇನ ತೀಕ್ಷ್ಣೇನ ಹಸ್ತಂ ವೈ ವಜ್ರಿಣೋ ಗುಹಃ ॥ ೧೪ ॥

ಶರೇಣಾದಿತ್ಯತುಲ್ಯೇನ ರುರುಂ ಶಂಭುರ್ಯಥಾಽಽಹವೇ ।
ಪುನರ್ಬಾಣಂ ಸಮಾದಾಯ ತಂ ಜಘಾನ ಶತಕ್ರತುಂ ॥ ೧೫ ॥

ಅಪರೇಣ ತು ತೀಕ್ಷ್ಣೇನ ಮುಕುಟಂ ತು ತಥಾ ಹರೇಃ ।
ಶರೇಣ ವಹ್ನಿತುಲ್ಯೇನ ಚಿಚ್ಛೇದ ಚ ಸ ಲೀಲಯಾ ॥ ೧೬ ॥

---

೧೨. ಆ ವಜ್ರಾಯುಧವು ಕೆಂಡಗಳನ್ನು ಕಕ್ಕುತ್ತಾ ಭಯಂಕರವಾಗಿ ಕುಮಾರ ಸ್ವಾಮಿಯನ್ನು ತಾಗಿತು. ಪಾರ್ವತೀನಂದನನಾದ ಕುಮಾರನು ಅದನ್ನು ಹುಲ್ಲು ಕಡ್ಡಿಯಂತೆ ಮುರಿದುಹಾಕಿದನು.

೧೩-೧೪. ಅನಂತರ ತಾನು ಅಗ್ನಿಸದೃಶವಾದ ಒಂದು ಬಾಣದಿಂದ ಇಂದ್ರನನ್ನು ಮೂರ್ಛೆಗೊಳಿಸಿದನು. ಮತ್ತೊಂದು ಉರಿಯುತ್ತಿರುವ ಬಾಣವನ್ನು ಹೂಡಿ ಇಂದ್ರನ ಛತ್ರಿ, ಚಾಮರ, ಧ್ವಜಪತಾಕಾದಿಗಳನ್ನು ಚೂರುಚೂರಾಗಿ ಕತ್ತರಿಸಿದನು.

೧೫. ಹಿಂದೆ ಈಶ್ವರನು ಜಿಂಕೆಯವೇಷತಾಳಿದ್ದ ರುರುರಾಕ್ಷಸನನ್ನು ಕೊಂದಂತೆ ಸೂರ್ಯಸದೃಶವಾದ ಬಾಣದಿಂದ ಇಂದ್ರನನ್ನು ಬಹುವಾಗಿ ನೋಯಿಸಿದನು.

೧೬. ಮತ್ತೊಂದು ಕ್ರೂರವಾದ ಮತ್ತು ಅಗ್ನಿಸದೃಶವಾದ ಬಾಣದಿಂದ ಇಂದ್ರನ ಕಿರೀಟವನ್ನು ಲೀಲಾಜಾಲವಾಗಿ ಕತ್ತರಿಸಿದನು.

ಯಮಾ ಚ ಪಂಚಭಿರ್ಬಾಣೈಃ ನಿಋತಿಂ ದಶಭಿರ್ಗುಹಃ ।
ದಶಪಂಚಶರೈರಾಶು ವರುಣಂ ಚ ಬಿಭೇದ ಸಃ ॥ ೧೭ ॥

ವಿಂಶತ್ಯಾ ವಾಯುದೇವಂ ಚ ರವಿಂ ಚ ದಶಪಂಚಭಿಃ ।
ತ್ರಿಂಶದ್ಭಿಃ ಸೋಮರಾಜಾನಂ ತಾಡಯಿತ್ವಾ ರಣೇ ಪುನಃ ॥ ೧೮ ॥

ಶಕ್ರಂ ಪಂಚಶತೈರಾಶು ಶರೈಶ್ಚ ಪ್ರಾಣಹಾರಿಭಿಃ ।
ಅನ್ಯಾನಪಿ ಸುರಾನ್ ಸ್ಕಂದಸ್ತ್ರಿಭಿರ್ದ್ವಿಃಪಂಚಭಿಃ ಶರೈಃ ॥ ೧೯ ॥

ಶೂರೋ ನಾದಂ ಪ್ರಮುಂಚನ್ವೈ ಶಕ್ರಂ ದುದ್ರಾವ ಶಂಭುಜಃ ।
ವಸುಭಿಶ್ಚ ತಥಾದಿತ್ಯೈರ್ಮರುದ್ಭಿಶ್ಚ ಮಹಾಬಲೈಃ ॥ ೨೦ ॥

ವೃತಃ ಶಸ್ತ್ರಕರೈರ್ಬಾಲಃ ಸಿಂಹೈಶ್ಶರಭರಾಡಿವ ।
ತತಸ್ತಾನಾಗತಾನ್ ದೃಷ್ಟ್ವಾ ದೇವಾನ್ ಶಂಕರವಲ್ಲಭಃ ॥ ೨೧ ॥

---

೧೭. ಐದು ಬಾಣಗಳಿಂದ ಯಮನನ್ನೂ, ಹತ್ತು ಬಾಣಗಳಿಂದ ನಿಋತಿಯನ್ನೂ, ಹದಿನೈದು ಬಾಣಗಳಿಂದ ವರುಣನನ್ನೂ ನೋಯಿಸಿದನು.

೧೮. ವಾಯುವಿಗೆ ಇಪ್ಪತ್ತು, ಸೂರ್ಯನಿಗೆ ಹದಿನೈದು, ಈಶಾನನಿಗೆ ಮೂವತ್ತು, ಹೀಗೆ ಬಾಣಗಳನ್ನು ಪ್ರಯೋಗಿಸಿ ಅವರನ್ನು ನೋಯಿಸಿದನು.

೧೯. ಐವತ್ತು ಬಾಣಗಳಿಂದ ಇಂದ್ರನನ್ನೂ, ಪ್ರಾಣಾಪಹಾರಿಗಳಾದ ಬಾಣ ಸಮೂಹದಿಂದ, ಅವರವರ ಶಕ್ತ್ಯಾನುಸಾರ ಎರಡು. ಮೂರು, ಐದು ಈ ಸಂಖ್ಯೆಯ ಬಾಣಗಳನ್ನು ಹೊಡೆದು ಇತರ ದೇವತೆಗಳನ್ನೂ ಬಹುವಾಗಿ ನೋಯಿಸಿದನು.

೨೦. ಶೂರನಾದ ಗುಹನು ಹೀಗೆ ಎಲ್ಲರನ್ನೂ ನೋಯಿಸಿ, ಗರ್ಜಿಸುತ್ತಾ ಇನ್ನೂ ಬಾಣಪ್ರಯೋಗಮಾಡಿ, ಅಷ್ಟವಸುಗಳು, ಆದಿತ್ಯರು, ಮರುದ್ಗಣಗಳು, ಇವರ ಜೊತೆಯಲ್ಲಿ ಇಂದ್ರಾದಿಗಳನ್ನೆಲ್ಲಾ ಓಡಿಸಿದನು.

೨೧. ಆದರೂ ಪುನಃ ಆ ದೇವತೆಗಳು ಆಯುಧಪಾಣಿಗಳಾಗಿ ಬಂದು, ಸಿಂಹಗಳು ಶರಭವನ್ನು ಎದುರಿಸುವಂತೆ ಕುಮಾರ ಸ್ವಾಮಿಯನ್ನು ಸುತ್ತುಗಟ್ಟಿದರು.

ಕೇಸರೀವ ಮೃಗಾನ್ ಕ್ಷುದ್ರಾನ್ ದುದ್ರಾವ ಚ ದಿವೌಕಸಃ ।
ಪುನಃ ಸ್ಕಂದಂ ಸಹಸ್ರಾಕ್ಷೋ ವಜ್ರೇಣ ತಮ ತಾಡಯತ್ ॥ ೨೨ ॥

ತಾಡಿತೇ ತು ತತಸ್ತಸ್ಮಾದುತ್ಪನ್ನಾಶ್ಚಾರುಮೂರ್ತಯಃ ।
ತ್ರಯೋ ದೇವಾಶ್ಚ ವೇದಾಶ್ಚ ಲೋಕಾಶ್ಚಾಗ್ನಿದಿವಾಕರಾಃ ॥ ೨೩ ॥

ತತಶ್ಚೇದಂ ಸಹಸ್ರಾಕ್ಷಂ ಬೃಹದ್ಗುರುಬೃಹಸ್ಪತಿಃ ।
ದೇವಮಂತ್ರೀ ಮಹಾಪ್ರಾಜ್ಞೋ ಬೃಹಸ್ಪತಿರಥಾಬ್ರವೀತ್ ॥ ೨೪ ॥

ಅಲಂ ಯುದ್ಧೇನ ದೇವೇಶ ಮಹಾದೇವಸ್ಯ ಸೂನುನಾ ।
ಹಿತಂ ತವೋಪದೇಕ್ಷ್ಯೇಽಹಂ ಸಹಸ್ರಾಕ್ಷ ಶೃಣುಷ್ವ ತತ್ ॥ ೨೫ ॥

ಯದೀಚ್ಛಸಿ ಸುಖಂ ಭೋಕ್ತುಂ ಕುರುಷ್ವ ವಚನಂ ಮಮ ।
ಅನೇನ ಸಹ ಸಂಪ್ರೀತಿಂ ಕೃತ್ವಾ ರಾಜ್ಯಮಕಂಟಕಂ ॥ ೨೬ ॥

---

೨೨. ಅವರೆಲ್ಲರನ್ನೂ ಸ್ಕಂದನು, ಕ್ಷುದ್ರಪ್ರಾಣಿಗಳನ್ನು ಸಿಂಹವು ಓಡಿಸುವಂತೆ ದಿಕ್ಕಾಪಾಲಾಗಿ ಚದುರಿಸಿದನು. ಅನಂತರ ಇಂದ್ರನು ಕೋಪದಿಂದ ಪುನಃ ವಜ್ರಾಯುಧವನ್ನು ಪ್ರಯೋಗಿಸಿದನು.

೨೩. ಆ ವಜ್ರಾಯುಧದ ಏಟು ಸ್ಕಂದನಿಗೆ ತಾಕಿದೊಡನೆಯೇ, ಆತನ ದೇಹದಿಂದ ಸುಂದರಪುರುಷರೂ ತ್ರಿಮೂರ್ತಿಗಳೂ, ವೇದತ್ರಯಗಳೂ, ಮೂರುಲೋಕಗಳೂ, ಸೂರ್ಯಾಗ್ನಿಗಳೂ ಉತ್ಪನ್ನವಾದುವು.

೨೪. ಇದನ್ನು ನೋಡಿ, ದೇವಮಂತ್ರಿಯೂ, ಹೆಚ್ಚುತಿಳಿದವನೂ ಆದ ಬೃಹಸ್ಪತ್ಯಾಚಾರ್ಯನು ಇಂದ್ರನನ್ನು ಕುರಿತು ಹೀಗೆ ಹೇಳಿದನು.

೨೫. ಎಲೈ ದೇವಶ್ರೇಷ್ಠನೇ, ಈಗ ಈಶ್ವರಪುತ್ರನಾದ ಇವನೊಡನೆ ಯುದ್ಧವನ್ನು ನಿಲ್ಲಿಸು. ನಿನಗೆ ಹಿತವಾಗುವಂತೆ ಈಗ ನಾನು ಮಾತನಾಡುತ್ತಿರುವೆನು.

೨೬-೨೮. ನೀನು ಸುಖವಾಗಿರಬೇಕಾದರೆ ಈಗ ನನ್ನ ಮಾತುಗಳನ್ನು ಕೇಳು. ಮೊದಲು ಇವನೊಡನೆ ಸ್ನೇಹಮಾಡಿಕೋ. ನಿನ್ನ ಶತ್ರುಗಳಾದ ರಾಕ್ಷಸರನ್ನೆಲ್ಲಾ ಇವನ ಸಹಾಯದಿಂದ ನಾಶಮಾಡು. ಆದರಿಂದ ನೀನು ಸ್ಥಿರವಾಗಿ ರಾಜ್ಯಪರಿಪಾಲನೆ

ಘಂಂಕ್ಷ್ವ ತ್ವಂ ನಿಶ್ಚಲಂ ಕೃತ್ವಾ ದಾನವಾಂಶ್ಚ ನಿಷೂದಯ ।
ಯಸ್ಯ ವಜ್ರಾಭಿಘಾತೇನ ನಾರ್ತಿಃ ಸ್ವಲ್ಪಾಪಿ ಜಾಯತೇ ॥ ೨೭ ॥

ಹಂತವ್ಯಃ ಸ ಕಥಂ ಶಕ್ರ ಶತಸಂಖ್ಯೈರ್ಭವಾದೃಶೈಃ ॥ ೨೮ ॥

॥ ಸೂತ ಉವಾಚ ॥

ಶ್ರುತ್ವಾ ತಸ್ಯ ವಚಃ ಶಕ್ರಸ್ತದಾ ಸುರಗುರೋರ್ದ್ವಿಜಾಃ ।
ತಮೇವ ಶರಣಂ ಪ್ರಾಯಾತ್ಕುಮಾರಂ ಪಾರ್ವತೀಸುತಂ ॥ ೨೯ ॥

॥ ಇಂದ್ರ ಉವಾಚ ॥

ಪ್ರಸೀದ ಮೇ ತ್ವಂ ಶರಣಾಗತಸ್ಯ ।
ಪಾದೌ ತವಾಹಂ ಶಿರಸಾ ವಹಾಮಿ ।
ಸುರಾಧಿಪಸ್ತ್ವಂ ಭವ ಶರ್ವಸೂನೋ ।
ಗೃಹಾಣ ರಾಜ್ಯಂ ಮಮ ಶಂಭುಕಲ್ಪ ॥ ೩೦ ॥

ಮಾಡುತ್ತಾ ಇರಬಹುದು. ನಿನ್ನ ವಜ್ರಾಯುಧದ ಏಟಿಗೆ ಸ್ವಲ್ಪವೂ ಕುಂದದಿರುವ ಈ ವೀರನನ್ನು, ನಿನ್ನಂತಹ ಐವತ್ತು ಜನ ಇಂದ್ರರು ಸೇರಿದರೆ ತಾನೆ ಕೊಲ್ಲಲಾದೀತೆ?" ಎಂದು ಬೃಹಸ್ಪತ್ಯಾಚಾರ್ಯನು ಇಂದ್ರನಿಗೆ ಬುದ್ಧಿ ಹೇಳಿದನು.

೨೯. ಆ ದೇವಮಂತ್ರಿಯ ಮಾತನ್ನು ಕೇಳಿ ಇಂದ್ರನು ಸಂತುಷ್ಟನಾಗಿ ಪಾರ್ವತೀಪುತ್ರನಾದ ಕುಮಾರಸ್ವಾಮಿಯನ್ನು ಮೊರೆಹೊಕ್ಕನು.

೩೦. "ಎಲೈ ಕುಮಾರಸ್ವಾಮಿಯೇ, ಶರಣಾಗತನಾಗಿ ಬಂದಿರುವ ನನ್ನನ್ನು ಕಾಪಾಡು. ಇಗೋ ನಿನ್ನ ಪಾದಗಳಿಗೆ ಎರಗುವೆನು. ನೀನೇ ಮುಂದೆ ನನ್ನ ದೇವ ರಾಜ್ಯಕ್ಕೆ ಒಡೆಯನು. ರಾಜ್ಯವನ್ನು ಸ್ವೀಕರಿಸು. ಶಿವಸದೃಶನಾದ ಸ್ವಾಮಿಯೇ, ನನಗೆ ಪ್ರಸನ್ನನಾಗು.

ಏಷೋಽಂಜಲಿಃ ಪಂಕಜಚಾರುನೇತ್ರ ।
ಕೃತೋತ್ತಮಾಂಗೇ ಜಹಿ ಮನ್ಯುಮುಗ್ರಂ ।
ಸತಾಂ ಹಿ ಕೋಪಃ ಪ್ರಣತೇಷು ನಿತ್ಯಂ ।
ಶಮಿನಾಮೇತ್ಯಾರ್ಯಮನಃ ಸುಸಿದ್ಧಂ ॥ ೩೧ ॥

ಅಥೇಂದ್ರವಚನಂ ಶ್ರುತ್ವಾ ಭಗವಾನ್ ಷಣ್ಮುಖಸ್ತದಾ ।
ಅಬ್ರವೀತ್ಕರುಣಾವಿಷ್ಟಃ ಶಕ್ರಂ ಪ್ರತಿ ಮುನೀಶ್ವರಾಃ ॥ ೩೨ ॥

॥ ಸ್ಕಂದ ಉವಾಚ ॥

ಕರೋಮಿ ಕಿಮಹಂ ರಾಜ್ಯಂ ಭೋಗೈಶ್ಚ ಪ್ರಾಕೃತೈರಲಂ ।
ಅಪರ್ಯಾಪ್ತಂ ನ ಮೇ ಕಿಂಚಿದಸ್ತಿ ಪಿತ್ರೋಃ ಪ್ರಸಾದತಃ ॥ ೩೩ ॥

ನಿಷ್ಕಂಟಕಂ ತ್ವಮೇವೇಹ ರಾಜ್ಯಂ ಕುರು ಶಚೀಪತೇ ।
ಮಮ ಸಖ್ಯೇನ ಸಕಲಾನ್ ಶತ್ರೂನ್ ಜಹಿ ಪುರಂದರ ॥ ೩೪ ॥

---

೩೧. ಎಲೈ ಕಮಲನೇತ್ರನೇ, ಭಕ್ತಿಯಿಂದ ನಾನು ಈಗ ವಂದಿಸುತ್ತಿರುವೆನು. ಕೋಪವನ್ನು ಬಿಡು. ಸತ್ಪುರುಷರ ಕೋಪವು ಭಕ್ತರಲ್ಲಿ ನಾಶವಾಗತಕ್ಕದ್ದಷ್ಟೇ. ಸತ್ಪುರುಷರ ಮನಸ್ಸು ಅಷ್ಟು ಮೃದುವಾದದ್ದಲ್ಲವೇ?''

೩೨. ಎಂದು ಭಕ್ತಿಯಿಂದ ಪ್ರಾರ್ಥಿಸಿದ ಇಂದ್ರನ ಮಾತುಗಳನ್ನು ಕೇಳಿ ಪೂಜ್ಯನಾದ ಷಣ್ಮುಖನು ಕರುಣೆಯಿಂದ ಇಂದ್ರನೊಡನೆ ಹೀಗೆ ಹೇಳಲಾರಂಭಿಸಿದನು.

೩೩. "ಎಲೈ ಇಂದ್ರನೇ, ನನಗೆ ನಿನ್ನ ರಾಜ್ಯವು ಏತಕ್ಕೆ? ಸಮಸ್ತ ಭೋಗಗಳೂ ನನಗಿರುವಾಗ ನನ್ನ ರಾಜ್ಯಭೋಗವು ಏತಕ್ಕೆ? ನಮ್ಮ ಮಾತಾಪಿತೃಗಳ ದಯೆಯಿಂದ ಎಲ್ಲವೂ ನನಗೆ ತೃಪ್ತಿಯಾಗಿದೆ.''

೩೪. ನಿನ್ನ ರಾಜ್ಯವನ್ನು ನೀನೇ ಆಳು. ನನ್ನ ಸಹಾಯದಿಂದ ನೀನು ನಿನ್ನ ಶತ್ರುಗಳನ್ನೆಲ್ಲಾ ಗೆದ್ದು ರಾಜ್ಯವನ್ನು ನಿಷ್ಕಂಟಕವನ್ನಾಗಿಮಾಡಿಕೊ.''

ಏವಂ ಸ್ಕಂದವಚಃ ಶ್ರುತ್ವಾ ಪುನರಾಹ ಶಚೀಪತಿಃ ।
ಭಗವನ್ನಾಪರಃ ಕಶ್ಚಿದ್ದೇವಾನಾಂ ವಿದಿತೋ ಬಲೀ ॥ ೩೫ ॥

ತಸ್ಮಾತ್ಕುರು ತ್ವಮೇವೇಹ ರಾಜ್ಯಮೀಶ್ವರನಂದನ ।
ಕ್ವ ಬಾಲಃ ಕ್ವ ಚ ಸಂಗ್ರಾಮಃ ಕ್ವ ಚ ನೀತಿಃ ಕ್ವ ಪರಾಕ್ರಮಃ ॥ ೩೬ ॥

ಕ್ವ ಜ್ಞಾನಮತುಲಂ ದೇವ ಕ್ವ ಮತಿಃ ಕ್ವ ಚ ಸೌಮ್ಯತಾ ।
ಕ್ವ ಮಾಯಾ ಕ್ವ ಚ ದಾಕ್ಷಿಣ್ಯಂ ಕ್ವ ಕ್ಷಾಂತಿಃ ಕ್ವ ಪ್ರಸಾದತಾ ॥ ೩೭ ॥

ಅಲಂ ತ್ವಮೇವ ರಾಜ್ಯಸ್ಯ ಗುಣೈರೇಭಿರುದೀರಿತಃ ।
ಸ್ವರೂಪೈಃ ಸುಗುಣೈಸ್ತ್ವಂ ಹಿ ಬಂದಿಭಿಶ್ಚಾರಣೈಸ್ತಥಾ ॥ ೩೮ ॥

ವಿದ್ಯಾಧರೈಶ್ಚ ಯಕ್ಷೈಶ್ಚ ವಿವಿಧೈರ್ಗುಣಕೋಟಿಭಿಃ ।
ಸ್ತೂಯಮಾನೋಽಮರೈಃ ಸಿದ್ಧೈರ್ಗಂಧರ್ವಾಪ್ಸರಸಾಂ ಗಣೈಃ ॥ ೩೯ ॥

---

೩೫. ಹೀಗೆಂದ ಸ್ಕಂದಸ್ವಾಮಿಯ ಮಾತುಗಳನ್ನು ಕೇಳಿ ಇಂದ್ರನು "ಸ್ವಾಮಿಯೇ, ದೇವತೆಗಳಲ್ಲಿ ನಿನ್ನಷ್ಟು ಬಲಿಷ್ಠರಾದವರು ಯಾರೂ ಇಲ್ಲವೆಂದು ಪ್ರಸಿದ್ಧವಾಗಿದೆ.

೩೬-೩೭. 'ಈಶ್ವರ ಪುತ್ರನೇ, ಆದ್ದರಿಂದ ನೀನೇ ಈ ರಾಜ್ಯಕ್ಕೆ ರಾಜನಾಗಿರು. ಬಾಲಕನಾಗಿದ್ದರೂ, ನಿನ್ನಲ್ಲಿ ಕಂಡುಬರುವ, ಯುದ್ಧವೀರತ್ವವೂ, ನೀತಿಯೂ, ಪರಾಕ್ರಮವೂ, ಸಂಪೂರ್ಣಜ್ಞಾನವೂ, ಸದ್ಬುದ್ಧಿಯೂ, ತಾಳ್ಮೆಯೂ, ಮಾಯೆಯೂ, ದಾಕ್ಷಿಣ್ಯಸ್ವಭಾವವೂ, ಶಾಂತಿಯೂ ನೈರ್ಮಲ್ಯವೂ ಮತ್ತೆ ಯಾರಲ್ಲಿ ತೋರೀತು ?

೩೮-೩೯. ಇಷ್ಟು ಗುಣಗಳಿಂದ ಕೂಡಿರುವ ನೀನೇ ಈ ರಾಜ್ಯಪದವಿಗೆ ಅರ್ಹನು. ನಿನಗೆ ತಕ್ಕವರಾದ, ಗುಣಾಢ್ಯರಾದ ಈ ವಿದ್ಯಾಧರರಿಂದ, ಮತ್ತು ಹೊಗಳುಭಟರಿಂದ, ವಿವಿಧರಾದ ಯಕ್ಷರಿಂದ ಕೂಡಿ, ಅಪ್ಸರರು, ಗಂಧರ್ವರು ಇವರಿಂದ ಹೊಗಳಿಸಿಕೊಳ್ಳುತ್ತಾ ರಾಜನಾಗಿರು.

ಅಹಂ ಸೇನಾಪತಿರ್ದೇವ ಭವಾಮಿ ಭವನಂದನ ।
ತಿಷ್ಠಸ್ವೋಪರಿ ಕೃತ್ಸ್ನಸ್ಯ ತ್ರೈಲೋಕ್ಯಂ ಭುಂಕ್ಷ್ವ ಷಣ್ಮುಖ ॥ ೪೦ ॥

ಸರ್ವಗಃ ಸರ್ವಭೂತಸ್ತ್ವಂ ಯಥಾ ದೇವೋ ಮಹೇಶ್ವರಃ ।
ಏವಂ ಶಕ್ರವಚಃ ಶ್ರುತ್ವಾ ಪುನಃ ಪ್ರಾಹಾಂಬಿಕಾಸುತಃ ॥ ೪೧ ॥

॥ ಸ್ಕಂದ ಉವಾಚ ॥

ಅಭಯಂ ಶಕ್ರ ಮಾಭೈಷೀಃ ಕುರು ರಾಜ್ಯಮಕಂಟಕಂ ।
ಇಂದ್ರಸ್ತ್ವಂ ದೇವರಾಜಸ್ತ್ವಂ ತ್ವಮೇವ ಜಗತಃ ಪ್ರಭುಃ ॥ ೪೨ ॥

ದರ್ಪಗರ್ವಬಲೋದೀರ್ಣಾ ದಾನವಾ ಯೇ ಚ ತಾಂಸ್ತದಾ ।
ಯೈಃ ಪರಾಜೀಯಸೇಽತ್ಯರ್ಥಂ ಸೂದಯೇಽಹಂ ತ್ವಯಾ ಸ್ಮೃತಃ ॥ ೪೩ ॥

ಬಹ್ವಾಲಪ್ತೈರಲಂ ಶಕ್ರ ಗದಿತೇನ ಪುನಃ ಪುನಃ ।
ನಿಶ್ಚಯೇನ ಸಖಾಹಂ ತೇ ಭವಾಮ್ಯಸುರಸೂದನ ॥ ೪೪ ॥

---

೪೦. ನಾನು ನಿನಗೆ ಸೇನಾಪತಿಯಾಗುವೆನು. ಮೂರುಲೋಕಕ್ಕೂ ಒಡೆಯ ನೆನಿಸಿ ಸಕಲ ಭೋಗಭಾಗ್ಯಗಳನ್ನೂ ಅನುಭವಿಸು.

೪೧. ಸ್ವಾಮಿಯೇ, ನೀನು ಮಹೇಶ್ವರನಂತೆ ಸರ್ವವ್ಯಾಪಿಯು. ಸರ್ವಾಂತರ್ಯಾಮಿಯು.'' ಎಂದು ಹೇಳಿದ ಇಂದ್ರನ ಮಾತುಗಳಿಗೆ ಉತ್ತರವಾಗಿ ಷಣ್ಮುಖನು ಪುನಃ ಹೀಗೆ ಹೇಳಲಾರಂಭಿಸಿದನು.

೪೨. ಎಲೈ ಇಂದ್ರನೇ, ನೀನು ಹೆದರಬೇಡ. ತೊಂದರೆಯಿಲ್ಲದೆ ರಾಜ್ಯವನ್ನಾಳು. ನೀನು ಇಂದ್ರನು, ದೇವರಾಜನಾಗಿರುವೆ. ನೀನೇ ಲೋಕಕ್ಕೆ ಒಡೆಯನಾಗಿರು.

೪೩. ದರ್ಪದಿಂದಲೂ, ಶೌರ್ಯದಿಂದಲೂ ಕೊಬ್ಬಿರುವ ದಾನವರ ಸಂಹಾರಕ್ಕಾಗಿ ನೀನು ನನ್ನನ್ನು ಯಾವಾಗ ಸ್ಮರಿಸುವೆಯೋ, ಆಗ ನಾನು ಬಂದು ಅವರನ್ನೆಲ್ಲಾ ಧ್ವಂಸಮಾಡಿ, ನಿನ್ನನ್ನು ಗೆಲ್ಲಿಸುವೆನು.

೪೪. ಇಂದ್ರನೇ, ಹೆಚ್ಚೇನು? ನಿನಗೆ ನಿಜವಾಗಿಯೂ ನಾನು ಈಗ ಸ್ನೇಹಿತನಾಗಿರುವೆನು. ಹೆದರಬೇಡ.''

ಅಥೋವಾಚ ಮಹಾದೇವಪುತ್ರಂ ಸಂವೀಕ್ಷ್ಯ ನಿಃಸ್ಪೃಹಂ ।
ನೇಷ್ಟಂ ತ್ವಯಾಪಿ ಹೀಂದ್ರತ್ವಂ ಭವ ಸೇನಾಪತಿರ್ಗುಹ ॥ ೪೫ ॥

ಏವಮುಕ್ತ್ವೇತಿ ತಂ ಪ್ರಾಹ ಕಾರ್ತಿಕೇಯಃ ಶಚೀಪತಿಂ ।
ತತಸ್ಸರ್ವೈಸ್ಸುರೈರ್ವಿಪ್ರಾ ಆದೇಶಾತ್ಪರಮೇಷ್ಠಿನಃ ॥ ೪೬ ॥

ಅಭಿಷಿಕ್ತೋಽಥ ವಿಧಿನಾ ಸೇನಾಪತ್ಯೇ ತದಾ ಗುಹಃ ।
ಯಾವದ್ದತ್ತಂ ಕುಮಾರಾಯ ಸೇನಾಪತ್ಯಂ ಹರಾಜ್ಞಯಾ ॥ ೪೭ ॥
ಹಂತುಮಭ್ಯಾಗತಸ್ತೂರ್ಣಂ ಕುಮಾರಂ ತಾರಕಸ್ತದಾ ।

ಆಗತಂ ತಂ ತದಾ ವೀಕ್ಷ್ಯ ಲೀಲಯಾ ಪಾರ್ವತೀಸುತಃ ।
ದದಾಹಾಶು ಮಹಾದೈತ್ಯಂ ತೂಲಂ ವಹ್ನಿರಿವಾಹವೇ ॥ ೪೮ ॥

---

೪೫. ಎಂದು ಅಭಯಪ್ರದಾನಮಾಡಿದ ಗುಹಸ್ವಾಮಿಯನ್ನು ನೋಡಿ ಮಹೇಂದ್ರನು "ಪ್ರಭುವೇ, ನಿನಗೆ ಇಂದ್ರಪದವಿಯಲ್ಲಿ ಇಷ್ಟವಿಲ್ಲದಿದ್ದರೆ ದೇವ ಸೇನಾಪತಿಯ ಪದವಿಯನ್ನಾದರೂ ಸ್ವೀಕರಿಸಬೇಕು" ಎಂದು ಕೇಳಿಕೊಳ್ಳಲು,

೪೬. ಹಾಗೆಯೇ ಆಗಲೆಂದು ಷಣ್ಮುಖಸ್ವಾಮಿಯು ಒಪ್ಪಿಕೊಳ್ಳಲು, ಒಡನೆಯೇ ಬ್ರಹ್ಮನು ಸಮಸ್ತ ದೇವತೆಗಳನ್ನೂ, ಬ್ರಾಹ್ಮಣರನ್ನೂ ಕರೆಸಿ ವಿಧಿವತ್ತಾಗಿ,

೪೭. ಈಶ್ವರನ ಅಪ್ಪಣೆಯಂತೆ ಸರ್ವರೂ ಸೇನಾಧಿಪತ್ಯವನ್ನಿತ್ತು ಅಭಿಷೇಕ ಮಾಡಿದರು. ಇದನ್ನು ಕೇಳಿದ ತಾರಕಾಸುರನು ವೇಗವಾಗಿ ಕೋಪದಿಂದ ಕುಮಾರ ಸ್ವಾಮಿಯನ್ನು ಕೊಲ್ಲಲು ದಂಡೆತ್ತಿಬಂದನು.

೪೮. ಹಾಗೆ ಬಂದ ತಾರಕನನ್ನು ನೋಡಿ, ಬೆಂಕಿಯು ಹತ್ತಿಯನ್ನು ದಹಿಸು ವಂತೆ ತಾರಕನನ್ನು ಗುಹನು ಧ್ವಂಸಮಾಡಿದನು.

ದಗ್ಧ್ವಾ ತು ತಾರಕಂ ಘೋರಂ ಪತಂಗಮಿವ ಪಾವಕಃ ।
ತತಃ ಪ್ರೀತಮನಾಃ ಸ್ಕಂದೋ ಮಾತುರಂಕಮುಪಾವಿಶತ್ ॥ ೪೯ ॥

ಮಹಾದೇವೋಽಪಿ ಭಗವಾನ್ ವೇಧಾದೀನ್ವಿಷ್ಣುನಾ ಸಹ ।
ವಿಸೃಜ್ಯ ಗಣಪೈಃ ಸಾರ್ಧಂ ಕ್ಷಣಾದಂತರ್ಹಿತೋಽಭವತ್ ॥ ೫೦ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ -ಶ್ರೀ ಸೌರೇ ಸೂತಶೌನಕ
ಸಂವಾದೇ ನಾರದೇಂದ್ರ ಸಂವಾದಾದಿ ಕಥನಂ ನಾಮ
ತ್ರಿಷಷ್ಟಿತಮೋಽಧ್ಯಾಯಃ.

---

೪೯. ಅಗ್ನಿಯು ಪತಂಗಹುಳುವನ್ನು ಸುಡುವಂತೆ ತಾರಕನನ್ನು ಸಹ ಮೂಲನಾಗಿ ಸುಟ್ಟು ಸಂತುಷ್ಟನಾಗಿ ಕುಮಾರಸ್ವಾಮಿಯು ತಾಯಿಯ ಸಮೀಪಕ್ಕೆ ಬಂದು ಸೇರಿದನು.

೫೦. ಪರಮೇಶ್ವರನಾದರೋ ಇದೆಲ್ಲವನ್ನು ನೋಡಿ, ಬ್ರಹ್ಮನೇ ಮೊದಲಾದವರನ್ನು ವಿಷ್ಣುವಿನೊಡನೆ ಕಳುಹಿಸಿ, ಗಣಾಧಿಪತಿಗಳನ್ನು ಅನುಗ್ರಹಿಸಿ ತಾನು ಅಲ್ಲಿಯೇ ಅಂತರ್ಧಾನನಾದನು.

ಹೀಗೆ ಬ್ರಹ್ಮಪುರಾಣೋಪಪುರಾಣವಾದ ಸೌರದಲ್ಲಿ ಸೂತಶೌನಕ, ಸಂವಾದ
ರೂಪವಾಗಿ, ನಾರದ, ಇಂದ್ರ, ಇವರ ಸಂಭಾಷಣಾದಿಗಳನ್ನು
ವಿವರಿಸುವ ಅರುವತ್ತುಮೂರನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಚತುಷ್ಷಷ್ಟಿತಮೋಽಧ್ಯಾಯಃ

॥ ಋಷಯ ಊಚುಃ ॥

ಕಥಿತೋ ಭವತಾ ಸೂತ ವಿವಾಹಃ ಪರಮೇಷ್ಠಿನಃ ।
ಉತ್ಪತ್ತಿಃ ಕಾರ್ತಿಕೇಯಸ್ಯ ತಸ್ಯ ಚೈವ ಪರಾಕ್ರಮಃ ॥ ೧ ॥

ಸೇನಾಪತ್ಯಂ ಯಥಾ ದತ್ತಂ ಶ್ರುತಂ ಸರ್ವಮಶೇಷತಃ ।
ಭಕ್ತಿಯೋಗಮಥೇದಾನೀಂ ವದ ಸೂತ ಮಹಾಮತೇ ॥ ೨ ॥

ತೃಪ್ತಿರ್ನಾಸ್ತ್ಯಾಪ್ಯಭೂದ್ಯಸ್ಮಾಚ್ಛ್ರುತ್ವಾ ಚೈವ ಪುನಃ ಪುನಃ ।
ಜಾನಾಸಿ ತ್ವಂ ಭಗವತಃ ಮಾಹಾತ್ಮ್ಯಂ ತ್ರಿಪುರದ್ವಿಷಃ ॥ ೩ ॥

ಅರುವತ್ತುನಾಲ್ಕನೆಯ ಅಧ್ಯಾಯ.

೧. ಶೌನಕಾದಿಗಳು ಸೂತಮಹರ್ಷಿಯನ್ನು ಕುರಿತು, "ಎಲೈ ಸೂತನೇ, ನೀನು ಇದುವರೆವಿಗೆ ಶಂಕರನ ವಿವಾಹಸಂಭ್ರಮವನ್ನು ಹೇಳಿದೆ. ಹಾಗೆಯೇ ಕಾರ್ತಿಕೇಯನ ಹುಟ್ಟುವಿಕೆಯನ್ನೂ, ಮತ್ತು ಅವನ ಪರಾಕ್ರಮವನ್ನು ತಿಳಿಸಿರುವೆ.

೨. ಮಹಾಮತಿಯುಳ್ಳ ಸೂತನೇ, ಕುಮಾರಸ್ವಾಮಿಯು ಸೇನಾಪತಿಯಾದದ್ದು, ನಮಗೆ ತಿಳಿದಂತಾಯಿತು. ಈಗ ಭಕ್ತಿಯೋಗವನ್ನು ಕೇಳಲು ಬಯಸುತ್ತೇವೆ.

೩. ತ್ರಿಪುರಾಸುರ ಸಂಹಾರಕನಾದ ಈಶ್ವರನ ಮಹತ್ವವನ್ನು ನೀನು ಚೆನ್ನಾಗಿ ತಿಳಿದಿದ್ದೀಯೆ. ಎಷ್ಟು ಕೇಳಿದರೂ ಈ ಪರ್ಯಂತ ನಮಗೆ ಅದರಲ್ಲಿ ತೃಪ್ತಿಯುಂಟಾಗಿರುವುದಿಲ್ಲ.

ಉಪಾಸಿತೋ ಯತಃ ಸಮ್ಯಗ್ ಭಗವಾನ್ ಬಾದರಾಯಣಿಃ ।
ತತ್ಪ್ರಸಾದಾತ್ ತ್ವಯಾ ಲಬ್ಧಂ ಜ್ಞಾನಂ ತತ್ ಪಾರಮೇಶ್ವರಂ ॥ ೪ ॥

ದುರ್ಲಭಂ ಸರ್ವಶಾಸ್ತ್ರೇಷು ಮುನೀನಾಂ ಚ ಮಹಾತ್ಮನಾಂ ॥ ೫ ॥

॥ ಸೂತ ಉವಾಚ ॥

ಯದುಕ್ತಂ ಬ್ರಹ್ಮಣಾ ಪೂರ್ವಂ ನಾರದಾಯ ಮಹಾತ್ಮನೇ ।
ಪ್ರೀತೇನ ಮನಸಾ ತೇನ ತಚ್ಛೃಣುಧ್ವಂ ದ್ವಿಜೋತ್ತಮಾಃ ॥ ೬ ॥

ಸತ್ಯಲೋಕೇ ಸುಖಾಸೀನಂ ಬ್ರಹ್ಮಾಣಂ ತೇಜಸಾಂ ನಿಧಿಂ ।
ಋಷಿಭಿರ್ಮುನಿಭಿಃ ಸಿದ್ಧೈರ್ವೇದೈಃ ಸಾಂಗೈರುಪಾಸಿತಂ ॥ ೭ ॥

ಸಂಗೀಯಮಾನಂ ಗಂಧರ್ವೈಃ ಸ್ತೂಯಮಾನಂ ಮರುದ್ಗಣೈಃ ।
ದೃಷ್ಟ್ವಾ ಪ್ರಣಮ್ಯ ವಿಧಿವನ್ನಾರದಸ್ತಮಥಾಬ್ರವೀತ್ ॥ ೮ ॥

---

೪. ಮಹಾತ್ಮನಾದ ಬಾದರಾಯಣಿಯು (ಶುಕನು) ಚೆನ್ನಾಗಿ ಈಶ್ವರನನ್ನು ಉಪಾಸನೆಮಾಡಿ ಜ್ಞಾನಿಯಾಗಿರುವವನು. ಆವನ ಅನುಗ್ರಹದಿಂದ ಈಶ್ವರಸಂಬಂಧಿಯಾದ ತತ್ತ್ವವು ನಿನಗೆ ಸಂಪೂರ್ಣವಾಗಿ ತಿಳಿದಿರುತ್ತದೆ.

೫. ಸರ್ವ ಶಾಸ್ತ್ರಗಳಲ್ಲಿಯೂ ಅದು ದೊರೆಯುವುದಿಲ್ಲ. ಮಹಾತ್ಮರಾದ ಮುನಿಗಳಿಗೂ ತಿಳಿಯುವುದು ಕಷ್ಟ '' ಎಂದು ಹೇಳಿಕೊಂಡರು.

೬. ಮಹಾತ್ಮನಾದ ನಾರದನಿಗೆ ಬ್ರಹ್ಮನು ಹಿಂದೆ ಏನು ಹೇಳಿದನೋ ಅದನ್ನು ಪ್ರೀತಿಯಿಂದ ಹೇಳುತ್ತೇನೆ. ಎಲೈ ಬ್ರಾಹ್ಮಣರೇ! ಕೇಳಿರಿ, ಎಂದು ಸೂತನು ಭಕ್ತಿಯೋಗವನ್ನು ವಿವರಿಸಲು ಆರಂಭಿಸಿದನು.

೭. "ಒಂದು ಸಾರಿ ಸತ್ಯಲೋಕದಲ್ಲಿ ಬ್ರಹ್ಮನು ತೇಜೋರಾಶಿಯಾಗಿ ಸುಖವಾಗಿ ಕುಳಿತಿದ್ದನು. ಆಗ ಋಷಿಗಳೂ, ಮುನಿಗಳೂ, ಸಿದ್ಧರೂ, ಅಂಗಸಹಿತವಾದ ವೇದಗಳಿಂದ ಸ್ತುತಿಸಿದರು.

೮. ಗಂಧರ್ವರು ಗಾನದಿಂದ ಸಂತೋಷಗೊಳಿಸುತ್ತಿದ್ದರು. ಮರುದ್ಗಣಗಳು ಹೊಗಳುತ್ತಿದ್ದರು. ಇದನ್ನು ನೋಡಿ ನಾರದನು ವಿಧ್ಯುಕ್ತವಾಗಿ ನಮಸ್ಕಾರಮಾಡಿ ಹೀಗೆ ಕೇಳಿಕೊಂಡನು.

॥ ನಾರದ ಉವಾಚ ॥

ದೇವದೇವ ಜಗನ್ನಾಥ ಚತುರ್ಮುಖ ಸುರೋತ್ತಮ ।
ಭಕ್ತಿಯೋಗಸ್ಯ ಮಾಹಾತ್ಮ್ಯಂ ದೇವದೇವಸ್ಯ ಶೂಲಿನಃ ॥ ೯ ॥

॥ ಬ್ರಹ್ಮೋವಾಚ ॥

ಪ್ರಣಮ್ಯ ಶಂಕರಂ ಶಾಂತಮಪ್ರಮೇಯಮನಾಮಯಂ ।
ಪರಂಜ್ಯೋತಿರನಾದ್ಯಂತಂ ನಿರ್ಗುಣಂ ತಮಸಃ ಪರಮ್ ॥ ೧೦ ॥

ಭಕ್ತಿಯೋಗಂ ಪ್ರವಕ್ಷ್ಯಾಮಿ ಶೃಣು ನಾರದ ಸುವ್ರತ ।
ಭಕ್ತಿಯೋಗಸ್ಯ ಮಾಹಾತ್ಮ್ಯಂ ಯಥಾ ಶಂಭೋರ್ಮಯಾ ಶ್ರುತಂ ॥ ೧೧ ॥

ಭಕ್ತಿರ್ಭಗವತಃ ಶಂಭೋರ್ದುರ್ಲಭಾ ಖಲು ದೇಹಿನಾಮ್ ।
ಕಥಂಚಿದ್ಯದಿ ಸಾ ಲಬ್ಧಾ ತೇಷಾಂ ನೈವಾಸ್ತಿ ದುರ್ಲಭಮ್ ॥ ೧೨ ॥

---

೯. " ಎಲೈ ದೇವದೇವನೇ, ಜಗತ್ತಿಗೆಲ್ಲಾ ಒಡೆಯನೇ, ಚತುರ್ಮುಖನೇ, ಸುರೋತ್ತಮನೇ, ದೇವದೇವನಾದ ಪರಮೇಶ್ವರನ ಭಕ್ತಿಯೋಗದ ಮಹತ್ವವನ್ನು ನನಗೆ ಈಗ ಹೇಳುವವನಾಗು."

೧೦. ಎಂದು ನಾರದನು ಕೇಳಿಕೊಳ್ಳಲು, ಆಗ ಬ್ರಹ್ಮನು ಶಾಂತಸ್ವರೂಪನೂ, ವೇದಸ್ವರೂಪನೂ, ಉತ್ತಮಜ್ಯೋತೀರೂಪನೂ ಆದ್ಯಂತರಹಿತನೂ ನಿರ್ಗುಣನೂ, ಅಜ್ಞಾನನಾಶಕನೂ ಆದ ಶಂಕರನನ್ನು ಮೊದಲು ಧ್ಯಾನಿಸಿ ಅವನಿಗೆ ನಮಿಸಿದನು.

೧೧. ಸುವ್ರತಿಯಾದ ನಾರದನೇ ಕೇಳು. ಈಶ್ವರನು ನನಗೆ ಹಿಂದೆ ಹೇಗೆ ಭಕ್ತಿಯೋಗದ ಮಹತ್ವವನ್ನು ಹೇಳಿದ್ದನೋ, ಅದನ್ನು ಈಗ ನಿನಗೆ ತಿಳಿಯ ಹೇಳುವೆನು.

೧೨. ಮಹಾತ್ಮನಾದ ಈಶ್ವರನ ಭಕ್ತಿಯು ಜೀವಿಗಳಿಗೆ ದೊರೆಯುವುದು ದುರ್ಲಭ. ಅದು ಹೇಗಾದರೂ ದೊರೆತರೆ ಅವರಿಗೆ ದುರ್ಲಭವಾದದ್ದು ಮತ್ತಾವುದೂ ಇರಲಾರದು.

ಭಕ್ತ್ಯೈವ ಪ್ರಾಪ್ಯತೇ ರಾಜ್ಯಮಿಂದ್ರತ್ವಂ ಮತ್ಪದಂ ಚ ಯತ್ ।
ವಿಷ್ಣುತ್ವಮಪಿ ಮುಕ್ತಿಂ ಚ ನೂನಂ ಪ್ರಾಪ್ನೋತಿ ನಾರದ ॥ ೧೩ ॥

ಶುಭಾನಾಮಶುಭಾನಾಂ ಚ ಕರ್ಮಣಾಂ ರಾಶಿಸಂಚಯಂ ।
ಕರೋತಿ ಭಸ್ಮಸಾದ್ಭಕ್ತಿರ್ಭವಸ್ಯಾಗ್ನಿರ್ಯಥೇಂಧನಂ ॥ ೧೪ ॥

ಮ್ಲೇಚ್ಛೋಽಪಿ ವಾ ಯದಿ ಭವೇದ್ಭವಭಕ್ತಿಸಮನ್ವಿತಃ ।
ನ ತತ್ಸಮಶ್ಚತುರ್ವೇದೀ ನಾಗ್ನಿಷ್ಟೋಮಾದಿಯಜ್ಞಕೃತ್ ॥ ೧೫ ॥

ಅಪಿ ಪಾಪಾನಿ ಘೋರಾಣಿ ಸದಾ ಕುರ್ವನ್ನರೋ ಯದಿ ।
ಲಿಪ್ಯತೇ ನೈವ ಪಾಪೈಸ್ತು ಭಕ್ತೋ ಭವತಿ ಚೇಚ್ಛಿವೇ ॥ ೧೬ ॥

---

೧೩. ಎಲೈ ನಾರದನೇ, ಮನುಷ್ಯನು ಶಿವಭಕ್ತಿಯಿಂದ ಇಂದ್ರನ ಮತ್ತು ವಿಷ್ಣುವಿನ ಸ್ಥಾನವನ್ನು ಪಡೆಯುವನು. ನನ್ನ ಸ್ಥಾನವು ದೊರೆಯಬೇಕಾದರೂ ಅವನ ಭಕ್ತಿಯೇ ಕಾರಣವಾಗುವುದು. ಮುಕ್ತಿಯಂತೂ ಶಿವಾನುಗ್ರಹದಿಂದಲೇ ಲಭಿಸುವುದು.

೧೪. ಹರಭಕ್ತಿಯು, ಶುಭಾಶುಭ ಕರ್ಮಗಳ ಪುಣ್ಯಪಾಪಗಳನ್ನೆಲ್ಲಾ ಅಗ್ನಿಯು ಸೌದೆಯನ್ನು ಸುಡುವಂತೆ ಸುಟ್ಟುಬಿಡುವುದು.

೧೫. ಈಶ್ವರನಲ್ಲಿ ಭಕ್ತಿಯಿಟ್ಟು ನಡೆದ ಶೂದ್ರನಿಗೆ ಭಕ್ತಿಯಿಲ್ಲದ ಚತುರ್ವೇದಿಯಾಗಲೀ, ಅಗ್ನಿಷ್ಟೋಮಯಜ್ಞವನ್ನು ಮಾಡಿದವನಾಗಲಿ, ಸರಿಸಮನಾಗಲಾರನು.

೧೬. ಮನುಷ್ಯನು ಕಠಿಣವಾದ ಎಂತಹ ಪಾಪಕಾರ್ಯಗಳನ್ನಾಚರಿಸಿದರೂ, ಈಶ್ವರನಲ್ಲಿ ಭಕ್ತಿಯುಳ್ಳವನಾದ ಅವನು ಯಾವ ಪಾಪಗಳಿಂದಲೂ ಪೀಡಿತನಾಗುವುದಿಲ್ಲ.

ಶಿವಭಕ್ತಾ ಮಹಾತ್ಮಾನೋ ಮುಚ್ಯಂತೇ ತೇ ನ ಸಂಶಯಃ ।
ಅಪಿ ದುಷ್ಕೃತಕರ್ಮಾಣಃ ಪ್ರಸಾದಾಚ್ಛೂಲಿನೋ ಮುನೇ ॥ ೧೭ ॥

ಸಕೃತ್ ಪೂಜಯತೇ ಯಸ್ತು ಭಗವಂತಮುಮಾಪತಿಂ ।
ಅಶ್ವಮೇಧಾದಧಿಕಂ ಫಲಂ ಭವತಿ ನಾರದ ॥ ೧೮ ॥

ಜೀವಿತಂ ಚಂಚಲಂ ಜ್ಞಾತ್ವಾ ಪದ್ಮಪತ್ರ ಇವೋದಕಂ ।
ಮೃತೈರ್ದುರಂತಾನ್ನರಕಾಂಸ್ತತಃ ಕುರ್ಯಾಚ್ಛಿವೇ ಮತಿಂ ॥ ೧೯ ॥

ಶಿವೇ ಮತಿಂ ಪ್ರಕುರ್ವಾಣಃ ಸಂಸಾರಾದತಿಭೀಷಣಾತ್ ।
ಮುಚ್ಯತೇ ಮುನಿಶಾರ್ದೂಲ ಮತಿಃ ಶರ್ವೇಽತಿದುರ್ಲಭಾ ॥ ೨೦ ॥

ಭವವ್ಯಾಲಮುಖಸ್ಥಾನಾಂ ಭೀರೂಣಾಂ ದೇಹಿನಾಂ ಮುನೇ ।
ತಸ್ಮಾದ್ವಿಮೋಚಕಸ್ತೇಷಾಂ ಮಹಾದೇವ ಇತಿ ಶ್ರುತಿಃ ॥ ೨೧ ॥

---

೧೭. ಎಲೈ ಮುನಿಯೇ, ಮನುಷ್ಯರು ಪಾಪಕರ್ಮವನ್ನು ಮಾಡಿದರೂ ಈಶ್ವರನಲ್ಲಿ ಭಕ್ತಿಯುಳ್ಳವರಾದರೆ, ಅವರು ಈಶ್ವರನ ಅನುಗ್ರಹದಿಂದ ಪಾಪ ಮುಕ್ತರಾಗುವರು.

೧೮. ಉಮಾಪತಿಯನ್ನು ಯಾವನು ಒಂದು ಬಾರಿ ಭಕ್ತಿಯಿಂದ ಪೂಜಿಸುವನೋ ಅವನು ಅಶ್ವಮೇಧಯಾಗದ ಫಲಕ್ಕಿಂತಲೂ ಹೆಚ್ಚಿನಫಲವನ್ನು ಹೊಂದುತ್ತಾನೆ

೧೯. ಕಮಲದ ಎಲೆಯ ಮೇಲಿನ ನೀರಿನಂತೆ ಜೀವವನ್ನು ಚಂಚಲವೆಂದು ತಿಳಿಯಬೇಕು. ಸತ್ತನಂತರ ದುರಂತವಾದ ನರಕವು ಒದಗುವುದು. ಅದರಿಂದ ತಪ್ಪಿಸಿಕೊಳ್ಳಲು ಈಶ್ವರನಲ್ಲಿ ಭಕ್ತಿಯಿಡಬೇಕು.

೨೦. ಎಲೈ ಮುನಿಯೇ, ಅತಿಭಯಂಕರವಾದ ಸಂಸಾರದಿಂದ ಮುಕ್ತಿಗೊಳ್ಳುವವನು ಈಶ್ವರನಲ್ಲಿ ಬುದ್ಧಿಯನ್ನು ಇಡಬೇಕು. ಈಶ್ವರನಲ್ಲಿ ಭಕ್ತಿಯು ದುರ್ಲಭವಾದದ್ದು. ಸುಲಭವಾಗಿ ಬರತಕ್ಕದಲ್ಲ.

೨೧. ಎಲೈ ಮುನಿಯೇ, ಸಂಸಾರವೆಂಬ ಹಾವಿನ ಮುಖದಲ್ಲಿರುವ ಜೀವಿಗಳಿಗೆ ಭಯವೆಂಬುದು ಯಾವಾಗಲೂ ಸಿದ್ಧ. ಅದರಿಂದ ವಿಮೋಚನೆಯು ದೊರಕಬೇಕಾದರೆ ಮಹಾದೇವನ ಸ್ಮರಣೆ ಆವಶ್ಯಕ.

ಭಕ್ತಿಃ ಶಿವೇ ಯದಿ ಭವೇನ್ನ ಕಸ್ಮಾತ್ ಕಸ್ಯಚಿದ್ಭಯಮ್ ।
ಭವಾರ್ಣವಂ ತರತ್ಯೇವ ಪ್ರಸಾದಾತ್ ಪರಮೇಷ್ಠಿನಃ ॥ ೨೨ ॥

ಸ್ವರ್ಗಾರ್ಥಿನಾಂ ಮುಮುಕ್ಷೂಣಾಂ ಬ್ರಹ್ಮತ್ವಮಪಿ ಕಾಂಕ್ಷಿಣಾಂ ।
ಭಕ್ತಿರೇವ ವಿರೂಪಾಕ್ಷೇ ನಾನ್ಯಃ ಪಂಥಾ ಇತಿ ಶ್ರುತಿಃ ॥ ೨೩ ॥

ಆದಿಮಧ್ಯಾಂತರಹಿತೇ ಪಿನಾಕಿನಿ ಜಗತ್ಪತೌ ।
ಸದಾ ಮನೀಷಿಭಿಃ ಕಾರ್ಯಾ ಭಕ್ತಿರೇವ ಹಿ ನಾರದ ॥ ೨೪ ॥

ಸರ್ವಮನ್ಯತ್ಪರಿತ್ಯಜ್ಯ ಭಕ್ತೋ ಭವ ಹರೇ ಮುನೇ ।
ಮುಕ್ತೋ ಭವಿಷ್ಯಸಿ ಕ್ಷಿಪ್ರಂ ತಸ್ಯ ಶಂಭೋರನುಗ್ರಹಾತ್ ॥ ೨೫ ॥

ಯಸ್ಯ ಪ್ರಸಾದಲೇಶೇನ ಬ್ರಹ್ಮತ್ವಂ ಪ್ರಾಪ್ತವಾನಹಮ್ ।
ವಿಷ್ಣುತ್ವಮಪಿ ವಿಷ್ಣುಶ್ಚ ಸ ಶಿವಃ ಕೈರ್ನ ಸೇವ್ಯತೇ ॥ ೨೬ ॥

---

೨೨. ಈಶ್ವರನಲ್ಲಿ ಭಕ್ತಿ ಇದ್ದುದೇ ಆದರೆ, ಯಾರಿಂದಲೂ ಯಾವಾಗಲೂ ಭಯವಿಲ್ಲ. ಪರಮಾತ್ಮನ ಅನುಗ್ರಹದಿಂದ ಸಂಸಾರವೆಂಬ ಸಮುದ್ರವನ್ನು ಖಂಡಿತವಾಗಿ ದಾಟುತ್ತಾನೆ.

೨೩. ಸ್ವರ್ಗವನ್ನು ಇಚ್ಛಿಸುವವರಿಗೆ, ಮೋಕ್ಷಾರ್ಥಿಗಳಿಗೆ, ಬ್ರಹ್ಮಸ್ಥಾನವನ್ನಿಚ್ಛಿಸುವವರಿಗೆ, ಈಶ್ವರನಲ್ಲಿ ಭಕ್ತಿಯೇ ಮುಖ್ಯಸಾಧನವಾದದ್ದು. ಅವರಿಗೆ ಬೇರೆಯ ಮಾರ್ಗವೇ ಇರುವುದಿಲ್ಲ.

೨೪. ಎಲೈ ನಾರದನೇ, ಆದಿಮಧ್ಯಾಂತರಹಿತನೂ, ಜಗತ್ಪತಿಯೂ, ಪಿನಾಕಧಾರಿಯೂ ಆದ ಈಶ್ವರನಲ್ಲಿ ಸದಾ ಭಕ್ತಿಯನ್ನು ಇಡುವುದು ಒಳ್ಳೆಯದು.

೨೫. ಎಲೈ ಮುನಿಯೇ, ಈಗಲೂ ನೀನು ಎಲ್ಲವನ್ನು ಬಿಟ್ಟು ಈಶ್ವರನಲ್ಲಿ ವಿಶೇಷಭಕ್ತಿಯನ್ನಿಡುವವನಾಗು. ಈಶ್ವರನ ಅನುಗ್ರಹದಿಂದ ಜಾಗ್ರತೆಯಾಗಿ ಮುಕ್ತಿಯನ್ನು ಹೊಂದುತ್ತೀಯೆ.

೨೬. ಆ ಈಶ್ವರನ ಅನುಗ್ರಹ ಮಾತ್ರದಿಂದಲೇ ನಾನು ಬ್ರಹ್ಮತ್ವವನ್ನು ಈಗ ಪಡೆದಿರುವೆನು. ವಿಷ್ಣುವೂ ಈಶ್ವರನ ಪ್ರಸಾದದಿಂದಲೇ ವಿಷ್ಣುತ್ವವನ್ನು ಹೊಂದಿರುವನು. ಆದರೆ ಈಶ್ವರನನ್ನು ಸೇವಿಸದಿದ್ದವರು ಯಾರು?

ಶಿವೇ ದಾನಂ ಶಿವೇ ಹೋಮಃ ಶಿವೇ ಸ್ನಾನಂ ಶಿವೇ ಜಪಃ ।
ಅಕ್ಷಯಾಣಿ ಫಲಾನ್ಯೆಷಾಮಿತ್ಯಾಹ ಭಗವಾನ್ ಶಿವಃ ॥ ೨೭ ॥

ಕುರುಕ್ಷೇತ್ರೇ ನಿವಸತಾಂ ಯತ್ಫಲಂ ನೈಮಿಷೇ ತಥಾ ।
ಪ್ರಯಾಗೇ ಚ ಪ್ರಭಾಸೇ ಚ ಗಂಗಾಸಾಗರಸಂಗಮೇ ॥ ೨೮ ॥

ರುದ್ರಕೋಟ್ಯಾಂ ಗಯಾಯಾಂ ಚ ಶಾಲಿಗ್ರಾಮೇಽಮರೇಶ್ವರ ।
ಪುಷ್ಕರೇ ಭಾರಭೂತೇಶೇ ಗೋಕರ್ಣೇ ಮಂಡಲೇಶ್ವರ ॥ ೨೯ ॥

ತತ್ಫಲಂ ದಿವಸೇನೈವ ಭಕ್ತ್ಯಾ ಭರ್ಗಾರ್ಚನಾದ್ಭವೇತ್ ।
ನಾಸ್ತಿ ಲಿಂಗಾರ್ಚನಾತ್ಪುಣ್ಯಮಧಿಕಂ ಭುವನತ್ರಯೇ ॥ ೩೦ ॥

ಲಿಂಗೇಽರ್ಚಿತೇಽಖಿಲಂ ವಿಶ್ವಮರ್ಚಿತಂ ಸ್ಯಾನ್ನ ಸಂಶಯಃ ।
ಮಾಯಯಾ ಮೋಹಿತಾತ್ಮಾನೋ ನ ಜಾನಂತಿ ಮಹೇಶ್ವರಮ್ ॥ ೩೧ ॥

---

೨೭ ಶಿವೋದ್ದೇಶಕವಾಗಿ ಮಾಡಿದ ದಾನ, ಹೋಮ, ಸ್ನಾನ, ಜಪ ಮುಂತಾದವುಗಳು ವಿಶೇಷ ಫಲಪ್ರದಗಳು ಎಂಬುದರಲ್ಲಿ ಸಂದೇಹವಿಲ್ಲ ಎಂದು ಶಂಕರನೇ ಹೇಳಿರುವನು.

೨೮-೩೦ ಉತ್ತಮ ಕ್ಷೇತ್ರಗಳೆನಿಸಿದ, ಕುರುಕ್ಷೇತ್ರ, ಪ್ರಯಾಗ, ಪ್ರಭಾಸ ಕ್ಷೇತ್ರ, ಗಂಗಾಸಾಗರಸಂಗಮ, ರುದ್ರಕೋಟಿ, ಗಯಾ, ಶಾಲಿಗ್ರಾಮ, ಅಮರ ಪುಷ್ಕರಣೀ, ಗೋಕರ್ಣ, ಇಂತಹ ಕ್ಷೇತ್ರಗಳ ವಾಸದಿಂದ ಎಷ್ಟು ಪುಣ್ಯಸಂಪಾದನೆ ಯಾಗುವುದೋ, ಅಷ್ಟು ಸುಕೃತವನ್ನೂ, ಒಂದು ದಿನ ಭಕ್ತಿಯಿಂದ ಶಿವಾರ್ಚನೆ ಮಾಡುವುದರಿಂದಲೇ ಪಡೆಯಬಹುದು. ಲಿಂಗಾರ್ಚನೆಗಿಂತ ದೊಡ್ಡ ಪುಣ್ಯಕಾರ್ಯವು ತ್ರಿಲೋಕದಲ್ಲಿ ಯಾವುದೂ ಇಲ್ಲ.

೩೧. ಲಿಂಗವನ್ನು ಪೂಜೆಮಾಡಿದರೆ ಸಮಸ್ತ ಪ್ರಪಂಚವನ್ನು ಪೂಜಿಸಿದ ಹಾಗೆಯೇ ಆಗುವುದು. ಮಾಯೆಯಿಂದ ಅಜ್ಞಾನವುಳ್ಳವರಾಗಿರುವವರು ಮಹೇಶ್ವರನ ಸ್ವರೂಪವನ್ನು ತಿಳಿಯಲಾರರು

ಅನುಗ್ರಹಾದ್ಭಗವತೋ ಜಾನಂತ್ಯೇವ ಹಿ ನಾರದ ।
ಯಃ ಪೂಜಿತಂ ಶಿವಂ ದೃಷ್ಟ್ವಾ ಪ್ರಣಮೇದ್ಭಕ್ತಿಭಾವತಃ ॥ ೩೨ ॥

ಪುಂಡರೀಕಸ್ಯ ಯಜ್ಞಸ್ಯ ಫಲಂ ಭವತಿ ನಿಶ್ಚಿತಂ ।
ಯೇ ಪುನಃ ಶಾಂತಮನಸಃ ಶಿವಭಕ್ತಾ ಜಿತೇಂದ್ರಿಯಾಃ ॥ ೩೩ ॥

ಮರ್ತ್ಯಸ್ಯ ವದನಂ ತೇಽಪಿ ನೈವ ಪಶ್ಯಂತಿ ನಾರದ ।
ಪೃಥಿವ್ಯಾಂ ಯಾನಿ ತೀರ್ಥಾನಿ ಪುಣ್ಯಾನ್ಯಾಯತನಾನಿ ಚ ॥ ೩೪ ॥

ಶಿವಲಿಂಗೇ ವಸಂತ್ಯೇವ ತಾನಿ ಸರ್ವಾಣಿ ನಾರದ ।
ತಸ್ಮಾಲ್ಲಿಂಗಂ ಸದಾ ಪುಣ್ಯಂ ಭಕ್ತಿಭಾವೇನ ನಿತ್ಯಶಃ ॥ ೩೫ ॥

---

೩೨. ಎಲೈ ನಾರದನೇ, ಆ ಪರಮಾತ್ಮನ ಪ್ರಸಾದದಿಂದಲೇ ಅವನ ಸ್ವರೂಪವನ್ನು ತಿಳಿಯಬೇಕು. ಯಾವನು ಒಂದು ಸಾರಿಯಾದರೂ ಭಕ್ತಿಯಿಂದ ಈಶ್ವರನನ್ನು ಪೂಜಿಸಿ ಸಂತೋಷದಿಂದ ದರ್ಶನಮಾಡುವನೋ,

೩೩. ಯಾರು ಶಾಂತಮನಸ್ಕರಾಗಿಯೂ, ಜಿತೇಂದ್ರಿಯರಾಗಿಯೂ, ಶಿವಭಕ್ತರಾಗಿಯೂ ಇರುವರೋ, ಅವರು ಪುಂಡರೀಕ ಯಜ್ಞದ ಫಲವನ್ನು ಹೊಂದುವರು. ಇದು ನಿಶ್ಚಯ.

೩೪. ಅವರು ಮತ್ತೆ ಮನುಷ್ಯನ ಮುಖವನ್ನು ಸಹ ನೋಡುವುದಿಲ್ಲ. ಅಂದರೆ ಅವರು ಮುಕ್ತರಾಗುವರು. ನಾರದನೇ, ಪೃಥಿವಿಯಲ್ಲಿ ಎಷ್ಟು ತೀರ್ಥಗಳುಂಟೋ ಎಷ್ಟು ಪುಣ್ಯಗೃಹಗಳುಂಟೋ,

೩೫. ಅವುಗಳೆಲ್ಲವೂ ಈಶ್ವರಲಿಂಗದಲ್ಲಿಯೇ ಇರುತ್ತವೆಂದು ತಿಳಿ. ಆದುದರಿಂದ ನಾರದನೇ, ಲಿಂಗವು ಮಹಾಪುಣ್ಯಕರವಾದದ್ದು. ಭಕ್ತಿಭಾವದಿಂದ ನಿತ್ಯವೂ ಅದನ್ನು ಪೂಜಿಸಬೇಕು.

ಸ ಸ್ನಾತಃ ಸರ್ವತೀರ್ಥೇಷು ಸರ್ವಸ್ಮಾದಧಿಕಶ್ಚ ಸಃ ।
ಯಸ್ತು ಲಿಂಗಾರ್ಚನಂ ತ್ಯಕ್ತ್ವಾ ದೇವಾನನ್ಯಾಂಶ್ಚ ಪೂಜಯೇತ್ ॥ ೩೬ ॥

ರತ್ನಂ ವಿಹಾಯ ಮೂಢಾತ್ಮಾ ಯಥಾ ಕಾಚಮುಪೇಕ್ಷತೇ ।
ಚತುರ್ದಶ್ಯಾಮಥಾಷ್ಟಮ್ಯಾಂ ಪೌರ್ಣಮಾಸ್ಯಾಂ ತಥೈವ ಚ ॥ ೩೭ ॥

ಅಮಾವಾಸ್ಯಾಂ ತ್ರಯೋದಶ್ಯಾಂ ಪೂಜಯೇದಿಂದುಶೇಖರಂ ।
ಸ ಸ್ನಾತಃ ಸರ್ವತೀರ್ಥೇಷು ಸರ್ವಯಜ್ಞೇಷು ದೀಕ್ಷಿತಃ ॥ ೩೮ ॥

ಶಿವಲೋಕಮವಾಪ್ನೋತಿ ದೇಹಾಂತೇ ದುರ್ಲಭಂ ಮುನೇ ।
ಶಿವಾರ್ಚನರತೋ ನಿತ್ಯಂ ಮಹಾಪಾತಕಸಂಭವೈಃ ॥ ೩೯ ॥

ದೋಷೈಃ ಕೃತೈರ್ನ ಲಿಪ್ಯೇತ ಪದ್ಮಪತ್ರಮಿವಾಂಭಸಾ ।
ದರ್ಶನಾಚ್ಛಿವಭಕ್ತಾನಾಂ ಸಕೃತ್ಸಂಭಾಷಣಾದಪಿ ॥ ೪೦ ॥

---

೩೬. ಹಾಗೆ ಲಿಂಗಾರ್ಚನೆ ಮಾಡಿದವನು ಎಲ್ಲಾ ತೀರ್ಥಗಳಲ್ಲಿಯೂ ಸ್ನಾನ ಮಾಡಿದವನಂತೆ ಪವಿತ್ರನಾಗುವನು. ಯಾವನು ಲಿಂಗಪೂಜೆಯನ್ನು ಬಿಟ್ಟು ಬೇರೆಯ ದೇವರುಗಳನ್ನು ಭಜಿಸುವನೋ ಅವನು,

೩೭. ರತ್ನವನ್ನು ಬಿಟ್ಟು ಅಜ್ಞಾನದಿಂದ ಗಾಜನ್ನು ಅಪೇಕ್ಷಿಸಿದವನಂತಾಗುತ್ತಾನೆ. ಚತುರ್ದಶೀ, ಅಷ್ಟಮೀ, ಹಾಗೆಯೇ ಪೂರ್ಣಿಮಾ,

೩೮. ಅಮಾವಾಸ್ಯೆ, ತ್ರಯೋದಶಿ, ಈ ತಿಥಿಗಳಲ್ಲಿ ಈಶ್ವರನನ್ನು ಪೂಜಿಸಬೇಕು. ಹಾಗೆ ಪೂಜಿಸಿದವನು ಎಲ್ಲಾ ತೀರ್ಥಗಳಲ್ಲಿಯೂ ಸ್ನಾನ ಮಾಡಿದವನೂ ಯಜ್ಞಗಳಲ್ಲಿ ದೀಕ್ಷಿತನೂ ಆಗುವನು.

೩೯. ಅಲ್ಲದೆ ಆತನು ಕೊನೆಯಲ್ಲಿ ದುರ್ಲಭವಾದ ಶಿವಲೋಕವನ್ನು ಪಡೆಯುತ್ತಾನೆ. ಶಿವಾರ್ಚಕನಿಗೆ ಮಹಾಪಾಪಗಳಿಂದ ಒದಗುವ ದೋಷಗಳು ಸೇರಲಾರವು.

೪೦. ಕಮಲದ ಎಲೆಯ ನೀರು ಹೇಗೆ ನಿಲ್ಲಲಾರದೋ, ಹಾಗೆ ಅವನು ಯಾವ ದೋಷಗಳಿಗೂ ಒಳಗಾಗುವುದಿಲ್ಲ. ಶಿವಭಕ್ತರ ದರ್ಶನದಿಂದಲೂ ಅವರೊಡನೆ ಮಾತನಾಡುವುದರಿಂದಲೂ,

ಅತಿರಾತ್ರಸ್ಯ ಯಜ್ಞಸ್ಯ ಫಲಂ ಭವತಿ ನಾರದ ।
ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ಶೂದ್ರೋ ವಾಽಂತ್ಯಜಜಾತಿಜಃ ॥ ೪೧ ॥

ಶಿವಭಕ್ತಃ ಸದಾ ಪೂಜ್ಯಃ ಸರ್ವಾವಸ್ಥಾಂಗತೋಽಪಿ ವಾ ।
ನಾಸ್ಯಾಚಾರಂ ಪರೀಕ್ಷೇತ ನ ಕುಲಂ ನ ವ್ರತಂ ತಥಾ ॥ ೪೨ ॥

ತ್ರಿಪುಂಡ್ರಾಂಕಿತಭಾಲೇನ ಪೂಜ್ಯ ಏವ ಹಿ ನಾರದ ।
ಕರ್ಮಣಾ ಮನಸಾ ವಾಚಾ ಯಸ್ತು ಭಕ್ತಾನ್ ವಿನಿಂದತಿ ॥ ೪೩ ॥

ನಿರಯಾನ್ನಿಷ್ಕೃತಿರ್ನಾಸ್ತಿ ತಸ್ಯ ಮೂಢಾತ್ಮನೋ ಮುನೇ ।
ಶಿವಭಕ್ತಾನ್ ವರ್ಜಯಿತ್ವಾ ಸರ್ವೇಷಾಂ ಶಾಸಕೋ ಯಮಃ ॥ ೪೪ ॥

೪೧-೪೨. ಅತಿ ರಾತ್ರಯಜ್ಞದ ಫಲವು ಬರುತ್ತದೆ. ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯನಾಗಲಿ, ಅಂತ್ಯಜನಾಗಲಿ, ಶಿವಾರ್ಚನೆಯನ್ನು ಮಾಡ ಬಹುದು. ಶಿವಪೂಜೆಗೆ ಕಾಲವಾಗಲಿ, ಕುಲವಾಗಲಿ ನಿಯತವಾಗಿಲ್ಲ. ಯಾವ ನಿಯಮವೂ ಶಿವಾರ್ಚನೆಗೆ ಸೇರುವುದಿಲ್ಲ. ಯಾವಸ್ಥಿತಿಯಲ್ಲಿದ್ದರೂ ಶಿವಪೂಜಕನು ಪೂಜ್ಯನೇ.

೪೩. ಎಲೈ ನಾರದನೇ, ಹಣೆಯಲ್ಲಿ ತಿರ್ಯಕ್‌ಪುಂಡ್ರವನ್ನು ಧರಿಸಿರುವವನು ಸದಾ ಪೂಜ್ಯನು. ಕರ್ಮದಲ್ಲಿಯಾಗಲಿ, ಮನಸ್ಸಿನಲ್ಲಿಯಾಗಲಿ, ಮಾತಿನಲ್ಲಾಗಲಿ ಯಾವನು ಶಂಕರನನ್ನು ನಿಂದಿಸುವನೋ,

೪೪. ಆ ಅಜ್ಞಾನಿಗೆ ಸಾವಿಗಿಂತಲೂ ಬೇರೆಯ ಶಿಕ್ಷೆಯಿರುವುದಿಲ್ಲ. ಅವನಿಗೆ ನರಕದ ಭಯವು ಎಂದೂ ತಪ್ಪುವುದಿಲ್ಲ. ಶಿವಭಕ್ತರನ್ನು ಬಿಟ್ಟು ಎಲ್ಲರಿಗೂ ಯಮನು ಅಧಿಕಾರಿಯಾಗುವನು.

ಯಃ ಪುನಃ ಶಿವಭಕ್ತಾನಾಂ ಶಿವ ಏವ ನ ಚಾಪರಃ ।
ನ ಶಿವಾಶ್ರಯಿಣೋ ಮೌಂಜೀ ನ ದಂಡೋ ನ ಚ ಕುಂಡಲೀ ॥ ೪೫ ॥

ನೈವ ಕಾಷಾಯವಾಸಾಂಸಿ ಭಕ್ತಿರೇವಾತ್ರ ಕಾರಣಮ್ ।
ಯದಿ ಭಕ್ತಾಃ ಪಶುಪತೌ ಪಾಪಕರ್ಮಸು ಯೇ ರತಾಃ ॥ ೪೬ ॥

ಯಮಸ್ಯ ವದನಂ ತೇಽಪಿ ನೈವ ಪಶ್ಯಂತಿ ನಾರದ ।
ಯೇ ಪುನಃ ಶಾಂತಮನಸಃ ಶಿವಭಕ್ತಾಃ ಜಿತೇಂದ್ರಿಯಾಃ ॥ ೪೭ ॥

ಮರ್ತ್ಯಧರ್ಮಂ ಸಮಾಸಾದ್ಯ ಜ್ಞೇಯಾಸ್ತೇ ಗಣೇಶ್ವರಾಃ ।
ಮೃತಸ್ಯ ಜೀವತೋವಾಽಪಿ ಶಿವಭಕ್ತಸ್ಯ ನಾರದ ॥ ೪೮ ॥

ಯಮಾದ್ಭಯಂ ನ ತಸ್ಯಾಽಸ್ತಿರಾಜ್ಞಶ್ಚೈವ ತು ಕಾ ಕಥಾ ।
ಆಶ್ಚರ್ಯಂ ಕಥಯಿಷ್ಯಾಮಿ ಶೃಣು ನಾರದ ಯತ್ಪುರಾ ॥ ೪೯ ॥

---

೪೫. ಶಿವಭಕ್ತರಲ್ಲಿ ಯಾವನು ಅನುರಾಗಿಯಾಗುವನೋ, ಅವನು ಶಿವನೇ ಹೊರತು ಬೇರೆಯಾಗುವುದಿಲ್ಲ. ಶಿವಾಶ್ರಯವನ್ನು ಪಡೆದವನಿಗೆ ದಂಡವೂ ಮೌಂಜಿಯೂ, ಕುಂಡಲವೂ ಬೇಕಾಗುವುದಿಲ್ಲ.

೪೬. ಅವನಿಗೆ ಕಾಷಾಯವಸ್ತ್ರಗಳು ಅನವಶ್ಯಕ. ಭಕ್ತಿಯೊಂದಿದ್ದರೆ ಸಾಕು. ಪಾಪಕರ್ಮಗಳಲ್ಲಿ ಆಸಕ್ತರಾಗಿದ್ದವರಿಗೂ, ಈಶ್ವರನಲ್ಲಿ ಸಂಪೂರ್ಣ ಭಕ್ತಿಯಿದ್ದ ಪಕ್ಷದಲ್ಲಿ,

೪೭-೪೮. ಅವರು ಯಮನ ಮುಖವನ್ನೇ ನೋಡಲಾರರು. ಎಲೈ ನಾರದನೇ, ಯಾರು ಶಾಂತಮನಸ್ಕರಾಗಿಯೂ ಶಿವಭಕ್ತರಾಗಿಯೂ ಜಿತೇಂದ್ರಿಯರಾಗಿಯೂ ಇರುವರೋ, ಅವರು ಮನುಷ್ಯತ್ವವನ್ನು ಹೊಂದಿಯೇ ಗಣಗಳಿಗೆ ಅಧಿಪತಿಗಳಾಗಿ ಶಿವಪ್ರೀತಿಗೆ ಪಾತ್ರರಾಗುವರು. ಎಲೈ ನಾರದನೇ, ಶಿವಭಕ್ತನು ಸಾಯಲಿ ಅಥವಾ ಜೀವಿಸಿರಲಿ ಅಂಥವನಿಗೆ,

೪೯. ಯಮನಿಂದ ಒದಗುವ ಭಯವು ಎಂದಿಗೂ ಇರುವುದಿಲ್ಲ. ಹೀಗಿರಲು ರಾಜಭಯವೆಲ್ಲಿಂದ ಬರಬೇಕು ? ಇಲ್ಲ. ಎಲೈ ನಾರದನೆ, ಈ ಸಂದರ್ಭದಲ್ಲಿ ಹಿಂದೆ ನಡೆದ ಒಂದು ಆಶ್ಚರ್ಯಕರವಾದ ವೃತ್ತಾಂತವನ್ನು ಹೇಳುವೆನು ಕೇಳು.

ಉಜ್ಜಯಿನ್ಯಾಂ ನೃಪೋಽಹ್ಯಾಸೀನ್ನಾಮ್ನಾ ಸತ್ಯಧ್ವಜೋ ಮುನೇ ।
ಧರ್ಮಾತ್ಮಾ ಸತ್ಯಸಂಕಲ್ಪಃ ಪ್ರಜಾಪಾಲನತತ್ಪರಃ ॥ ೫೦ ॥

ಭುಕ್ತ್ವಾ ಸಮಸ್ತಾಮವನಿಂ ಕಾಲೇನಾಥ ದಿವಂ ಗತಃ ।
ವಸುಶ್ರುತ ಇತಿ ಖ್ಯಾತಃ ಪುತ್ರಸ್ತಸ್ಯ ಮಹಾತ್ಮನಃ ॥ ೫೧ ॥

ಮಹಾಕಾಲಾರ್ಚನರತಸ್ತನ್ನಿಷ್ಠಸ್ತತ್ಪರಾಯಣಃ ।
ನ ಧರ್ಮೇಣ ಪ್ರಜಾಃ ಶಾಸ್ತಿ ರಾಜಧರ್ಮಬಹಿಷ್ಕೃತಃ ॥ ೫೨ ॥

ಅಸಾಧೂನ್ ಸಂಪರಿತ್ಯಜ್ಯ ಸಾಧೂನ್ ವೈ ಹಂತ್ಯಸೌ ನೃಪಃ ।
ಪ್ರಜಾನಾಂ ಕುಶಲಂ ನಾಸ್ತಿ ಸರ್ವತ್ರ ಪರಿಪಂಥಿನಃ ॥ ೫೩ ॥

---

೫೦. ಉಜ್ಜಯಿನಿಯಲ್ಲಿ ಹಿಂದೆ ಸತ್ಯಧ್ವಜನೆಂಬ ರಾಜನಿದ್ದನು. ಅವನು ಧರ್ಮಾತ್ಮನಾಗಿಯೂ, ಸತ್ಯವಂತನಾಗಿಯೂ, ಪ್ರಜಾಪಾಲನಾಸಕ್ತನಾಗಿಯೂ ಇದ್ದನು.

೫೧. ಸಮಸ್ತವಾದ ಭೂಮಂಡಲವನ್ನು ರಕ್ಷಿಸಿ, ರಾಜ್ಯಭೋಗಗಳನ್ನು ಅನುಭವಿಸಿ, ಕೊನೆಗೆ ಸ್ವರ್ಗವನ್ನು ತೆರಳಿದನು. ಆ ಮಹಾತ್ಮನಿಗೆ ವಸುಶ್ರುತನೆಂಬ ಪ್ರಸಿದ್ಧನಾದ ಮಗನಿದ್ದನು.

೫೨. ಅವನು ಯಾವಾಗಲೂ ಮಹೇಶ್ವರನನ್ನೇ ಪೂಜಿಸುತ್ತ, ಅವನ ಧ್ಯಾನದಲ್ಲಿಯೇ ಆಸಕ್ತನಾಗಿದ್ದನು. ಆದರೆ ರಾಜಧರ್ಮವನ್ನು ಮಾತ್ರ ಬಿಟ್ಟುಬಿಟ್ಟನು. ಧರ್ಮದಿಂದ ಪ್ರಜೆಗಳನ್ನು ರಕ್ಷಿಸುತ್ತಿರಲಿಲ್ಲ.

೫೩. ದುಷ್ಟರನ್ನು ಶಿಕ್ಷಿಸದೆ, ಶಿಷ್ಟರನ್ನೇ ಈ ರಾಜನು ಕೊಲ್ಲುತ್ತಿದ್ದನು. ಇವನ ರಾಜ್ಯದಲ್ಲಿ ಎಲ್ಲೂ ಪ್ರಜೆಗಳಿಗೆ ಕ್ಷೇಮವೇ ಇರುತ್ತಿರಲಿಲ್ಲ. ಎಲ್ಲೆಲ್ಲೂ ಶತ್ರುಗಳು ಹೆಚ್ಚಿಕೊಂಡರು.

ಯಜ್ಞಾಂಶ್ಚ ಯಜ್ವನಾಂ ದೃಷ್ಟ್ವಾ ಮ್ಲೇಚ್ಛಾ ವಿಧ್ವಂಸಯಂತಿ ತಾನ್ ।
ಗತೇ ವರ್ಷಸಹಸ್ರೇ ತು ರಾಜ್ಯೇ ತಸ್ಮಿನ್ ವಸುಶ್ರುತೌ ॥ ೩೪ ॥

ಮೃತ್ಯುಕಾಲೋಽಥ ಸಂಪ್ರಾಪ್ತೋ ದೇಹಿನಾಮತಿಭೀಷಣಃ ।
ಪಾಪಿಷ್ಠ ಇತಿ ತಂ ಮತ್ವಾ ಸಂಪ್ರಾಪ್ತಾ ಯಮಕಿಂಕರಾಃ ॥ ೩೫ ॥

ಶಿವಭಕ್ತ ಇತಿ ಪ್ರಾಪ್ತಾಸ್ತ್ರಿನೇತ್ರಾಃ ಶೂಲಧಾರಿಣಃ ।
ಶಿವದೂತೈಃ ಸಮಾನೀತಂ ವಿಮಾನಂ ಸಾರ್ವಕಾಮಿಕಮ್ ॥ ೩೬ ॥

ಯಮದೂತಾಸ್ತ್ವತಿಕ್ರೂರಾಃ ಪಾಶದಂಡಾಸಿಪಾಣಯಃ ।
ಆಹರ್ತುಮುದ್ಯತಾಃ ಸರ್ವೇ ನೃಪಂ ತಂ ಯಮಕಿಂಕರಾಃ ॥ ೩೭ ॥

ಗಣೇಶ್ವರಾಸ್ತತಃ ಕ್ರುದ್ಧಾ ದೃಷ್ಟ್ವಾ ತಾನ್ಯಮಕಿಂಕರಾನ್ ।
ತ್ರಿಶೂಲೈರ್ಮುದ್ಗರೈಶ್ಚಕ್ರೈರ್ಗದಾಭಿರ್ಮುಸಲೈಸ್ತಥಾ ॥ ೩೮ ॥

---

೩೪. ಯಜ್ಞಗಳನ್ನೂ, ಯಾಗಮಾಡುವವರನ್ನೂ ಮ್ಲೇಚ್ಛರು ಬಹುವಾಗಿ ಹಿಂಸಿಸಿ, ಅವರನ್ನು ನಾಶಮಾಡುತ್ತಿದ್ದರು. ವಸುಶ್ರುತನು ಹೀಗೆಯೇ ಸಾವಿರ ವರುಷಗಳು ರಾಜ್ಯವಾಳಿದನು.

೩೫. ಜೀವಿಗಳಿಗೆ ಅತಿಭಯಂಕರವಾದ ಮೃತ್ಯುಕಾಲವು ಅವನಿಗೂ ಒದಗಿತು. ಅವನು ಅತ್ಯಂತ ಪಾಪಿಷ್ಠನೆಂದು ತಿಳಿದು ಯಮಕಿಂಕರರು ಅವನನ್ನು ಸೆಳೆದೊಯ್ಯಲು ಬಂದರು.

೩೬. ಶಿವಭಕ್ತನೆಂದು ತಿಳಿದು ತ್ರಿನೇತ್ರಧಾರಿಗಳಾಗಿಯೂ, ಶೂಲಧಾರಿಗಳಾಗಿಯೂ ಇರುವ ಶಿವದೂತರು, ಸಮಸ್ತ ಕಾಮ್ಯವಸ್ತುಗಳನ್ನೀಯುವ ವಿಮಾನವನ್ನು ತಂದರು.

೩೭. ಯಮದೂತರು ನಿಷ್ಕರುಣಿಗಳಾಗಿ ಪಾಶ, ದಂಡ, ಭರ್ಜಿ ಇವುಗಳನ್ನು ಹಿಡಿದು ಬಂದಿದ್ದರು. ಆ ರೀತಿಯಿಂದಲೇ ಯಮದೂತರು ನೃಪನನ್ನು ಅಪಹರಿಸಲು ದೃಢಮನಸ್ಸುಳ್ಳವರಾದರು.

೩೮. ಯಮಕಿಂಕರರನ್ನು ನೋಡಿ ಪ್ರಮಥಗಣಾಧಿಪರು ಕೋಪಗೊಂಡು ತ್ರಿಶೂಲಗಳಿಂದಲೂ, ಚಕ್ರಗಳಿಂದಲೂ, ಗದೆಗಳಿಂದಲೂ, ಮುಸಲಗಳಿಂದಲೂ,

ತಾಡಯಿತ್ವಾ ಭೃಶಂ ದೂತಾನ್ಯಮಶಾಸನಪಾಲಕಾನ್ ।
ನೀತಃ ಶಿವಪುರಂ ದಿವ್ಯಂ ಪುನರಾವೃತ್ತಿದುರ್ಲಭಂ ॥ ೫೯ ॥

ಅಥ ತೇ ಕಿಂಕರಾಃ ಸರ್ವೇ ಯಮಂ ಗತ್ವೇದಮಬ್ರುವನ್ ।

ಶೃಣು ಧರ್ಮ ಯಥಾವೃತ್ತಮೀಶ್ವರಸ್ಯ ಗಣೇಶ್ವರಃ ।
ಸರ್ವಾನಸ್ಮಾಂಸ್ತಾಡಯಿತ್ವಾ ನೀತಃ ಪಾಪೋ ವಸುಶ್ರುತಃ ॥ ೬೦ ॥

ನ ಯಜ್ಞೈರ್ಯಜತೇ ದೇವಾನ್ನವಿಪ್ರಾನ್ನಾತಿಥೀನಪಿ ।
ನ ಧರ್ಮೇಣ ಪ್ರಜಾಃ ಪಾತಿ ಕಥಂ ಶಿವಪುರಂ ಗತಃ ॥ ೬೧ ॥

ತತ್ತ್ವಂ ಧರ್ಮಂ ವಿಜಾನಾಸಿ ಸರ್ವದಂಡಧರೋ ಭವಾನ್ ।
ತಸ್ಮಾದ್ಬ್ರೂಹಿ ಭಗವಂ ಸ್ತವಾಜ್ಞಾಕಾರಿಣೋ ವಯಂ ॥ ೬೨ ॥

---

೫೯. ಬಹಳವಾಗಿ ಹೊಡೆದರು. ಮತ್ತೆ ಬರಲು ದುಸ್ಸಾಧ್ಯವಾದ ಮತ್ತು ಮಹತ್ತರವಾದ ಕೈಲಾಸಕ್ಕೆ, ರಾಜನನ್ನು ಕರೆದೊಯ್ದರು.

ಇತ್ತಲಾಗಿ ಆ ಯಮದೂತರೆಲ್ಲರೂ ಯಮನನ್ನು ಕುರಿತು ಹೀಗೆ ಹೇಳಿದರು.

೬೦. "ಯಮಧರ್ಮನೇ, ಈಗ ಈಶ್ವರನ ಗಣನಾಯಕರು ಮಾಡಿದ ವಿಷಯವನ್ನು ತಿಳಿಸುವೆವು. ಸ್ವಾಮಿಯೇ, ಅವರು ನಮ್ಮೆಲ್ಲರನ್ನೂ ಹೊಡೆದು ಪಾಪಿಯಾದ ವಸುಶ್ರುತನನ್ನು ಶಿವಪುರಕ್ಕೆ ಕರೆದೊಯ್ದರು.

೬೧. ಅವನು ಎಂದೂ ಯಜ್ಞಗಳನ್ನು ಮಾಡಿ ದೇವತೆಗಳನ್ನು ತೃಪ್ತಿಗೊಳಿಸಲಿಲ್ಲ. ಬ್ರಾಹ್ಮಣರಿಗೂ, ಅತಿಥಿಗಳಿಗೂ ಯಾವ ಸತ್ಕಾರವನ್ನು ಮಾಡಿದವನಲ್ಲ. ಧರ್ಮದಿಂದ ಪ್ರಜೆಗಳನ್ನು ಕಾಪಾಡಲಿಲ್ಲ. ಅವನು ಶಿವಪುರಕ್ಕೆ ಹೋದುದು ಹೇಗೆ?

೬೨. ಸರ್ವದಂಡಧಾರಿಯಾದ ನೀನು ಅವನ ವಿಷಯವನ್ನೂ ಧರ್ಮವನ್ನೂ ತಿಳಿದಿರುತ್ತೀಯೆ. ನಿನ್ನ ಆಜ್ಞಾಧಾರಿಗಳಾದ ನಾವು ಮುಂದೇನು ಮಾಡಬೇಕೆಂಬುದನ್ನು ತಿಳಿಸು."

ಏವಂ ತೇಷಾಂ ವಚಃ ಶ್ರುತ್ವಾ ಧರ್ಮರಾಟ್ ಸೂರ್ಯನಂದನಃ ।
ವಚಃ ಪ್ರೋವಾಚ ಗಂಭೀರಂ ಕಿಂಕರಾನ್ಪ್ರತಿ ನಾರದ ॥ ೬೩ ॥

॥ ಯಮ ಉವಾಚ ॥

ದೇವಾಸುರಮನುಷ್ಯಾಣಾಂ ಸರ್ವೇಷಾಂ ಪ್ರಾಣಿನಾಮಪಿ ।
ಶಾಸ್ತಾಽಹಂ ನಾಸ್ತಿ ಸಂದೇಹಃ ಶಿವಭಕ್ತಾನ್ಮೃತೇ ಕಿಲ ॥ ೬೪ ॥

ಮಾಹಾತ್ಮ್ಯಂ ಶಿವಭಕ್ತಾನಾಂ ಕೋ ವಾ ವಿಂದತಿ ತತ್ತ್ವತಃ ।
ತೇಷಾಂ ನಿಯಂತಾ ಭಗವಾನ್ ಮಹಾದೇವೋ ನ ಚಾಪರಃ ॥ ೬೫ ॥

ಶಿವಭಕ್ತಾ ಮಹಾತ್ಮಾನಃ ಸದಾ ಸರ್ವಾರ್ಚನೇ ರತಾಃ ।
ಅಪ್ಯಾಶ್ರಮಾಚಾರಹೀನಾನ್ ತ್ಯಜಧ್ವಂ ತಾನ್ ಪ್ರಯತ್ನತಃ ॥ ೬೬ ॥

---

೬೩. ಎಂದು ಹೇಳಿದ ಕಿಂಕರರ ಮಾತುಗಳನ್ನು ಕೇಳಿ ಧರ್ಮರಾಜನು ಯಮದೂತರನ್ನು ಕುರಿತು ಗಾಂಭೀರ್ಯದಿಂದ ಈ ಮಾತುಗಳನ್ನು ಹೇಳಿದನು.

೬೪. "ದೇವರಾಕ್ಷಸರನ್ನೂ, ಮನುಷ್ಯರನ್ನೂ, ಸಮಸ್ತವಾದ ಪ್ರಾಣಿಗಳನ್ನೂ, ನಾನು ಶಿಕ್ಷಿಸುವುದು ನಿಜ. ಅದರಲ್ಲಿ ಸಂದೇಹವಿಲ್ಲ. ಆದರೆ ಶಂಕರನ ಭಕ್ತರಿಗೆ ಮಾತ್ರ ನಾನು ಶಾಸನಮಾಡಲು ಅರ್ಹನಲ್ಲ.

೬೫. ಪರಶಿವನ ಭಕ್ತರ ಮಹಿಮೆಯನ್ನು ಅರಿಯುವುದು ಸುಲಭವಲ್ಲ. ಆದ್ದರಿಂದ ಅವರನ್ನು ಶಿಕ್ಷಿಸುವುದೂ, ರಕ್ಷಿಸುವುದೂ ಮಹೇಶ್ವರನ ಕರ್ತವ್ಯವೇ ಹೊರತು, ಮತ್ತೆ ಯಾರಿಗೂ ಸಾಧ್ಯವಿಲ್ಲ.

೬೬. ಶಂಕರನ ಭಕ್ತರು ಯಾವಾಗಲೂ ಮಹಾತ್ಮರೇ, ಆದ್ದರಿಂದ ಶಿವಪೂಜೆಯಲ್ಲಿ ನಿರತರಾದವರು ಆಶ್ರಮಾಚಾರ ಹೀನರಾಗಿದ್ದರೂ ಅವರನ್ನು ಹಿಡಿಯಬೇಡಿರಿ. ಬಿಟ್ಟುಬಿಡಿ.

ವರ್ಣಾಶ್ರಮಾಣಾಮಾಚಾರಾ ಅಪಿ ತೇನ ವಿವರ್ಜಿತಾಃ ।
ಶಂಕರೇ ಯದಿ ಭಕ್ತಿಃ ಸ್ಯಾನ್ನ ಶಾಸ್ಯಃ ಪೂಜ್ಯ ಏವ ಹಿ ॥ ೬೭ ॥

ಭವದ್ಭಿಃ ಪರಿಹರ್ತವ್ಯಾಃ ಶಿವಭಕ್ತಾ ಪ್ರಯತ್ನತಃ ।
ಪಾಪಕರ್ಮಸ್ವಪಿ ರತಾಸ್ತೇಷಾಮೇನೋ ನ ವಿದ್ಯತೇ ॥ ೬೮ ॥

ಬಿಭೇಮಿ ಯದಿ ಭಕ್ತೇಭ್ಯಃ ಸಿಂಹಾದಿವ ಯಥಾ ಮೃಗಾಃ ।
ಶ್ವೇತಸ್ಯಾಹರಣೇ ಪೂರ್ವಂ ಅಹಂ ದೇವೇನ ಘಾತಿತಃ ॥ ೬೯ ॥

ತತಃ ಪ್ರಭೃತ್ಯಹಂ ಶಾಸ್ತಾ ತದ್ಭಕ್ತಾನಾಂ ನ ಕಿಂಕರಾಃ ।
ಯೋಽಸೌ ವಸುಶ್ರುತೋ ರಾಜಾ ನ ಪ್ರಜಾಃ ಪಾಲಯನ್ ಯದಿ ॥ ೭೦ ॥

ತಥಾಽಪಿ ಶಂಕರೇ ಭಕ್ತೋ ಮನೋವಾಕ್ಕಾಯಕರ್ಮಭಿಃ ।
ಪ್ರಸಾದಾತ್ತಸ್ಯ ದೇವಸ್ಯ ಪಾಪಂ ಸ್ಪೃಶತಿ ತಂ ಕಥಮ್ ॥ ೭೧ ॥

---

೬೭. ಅವನು ವರ್ಣಾಶ್ರಮಧರ್ಮಗಳನ್ನು ಬಿಟ್ಟಿದ್ದರೂ ಶಂಕರನಲ್ಲಿ ಭಕ್ತಿಯಿಟ್ಟಿದ್ದ ಪಕ್ಷದಲ್ಲಿ ಅವನನ್ನು ಪೂಜಿಸಲೇಬೇಕು, ದಂಡಿಸಬಾರದು.

೬೮. ಇನ್ನು ಮೇಲೆ, ಮಹೇಶ್ವರಭಕ್ತರನ್ನು ನೀವು ಎಂದಿಗೂ ಹಿಡಿಯಬೇಡಿರಿ. ಅವರು ಪಾಪಕೆಲಸಗಳಲ್ಲಿ ನಿರತರಾಗಿದ್ದರೂ ಅವರಿಗೆ ಪಾಪಸಂಘಟನೆಯಿರುವುದಿಲ್ಲ.

೬೯. ಶಂಕರನ ಭಕ್ತರನ್ನು ನೋಡಿದರೆ ನಾನು ಸಿಂಹವನ್ನು ನೋಡಿದ ಮೃಗಗಳಂತೆ ಹೆದರಿಹೋಗುವೆನು. ಹಿಂದೆ ಶ್ವೇತಮಹಾರಾಜನನ್ನು ಎಳೆದು ತರಲು ಹೋದಾಗ ಮಹಾದೇವನು ನನ್ನನ್ನು ಶಿಕ್ಷಿಸಿದನು.

೭೦. ಎಲೈ ದೂತರೇ, ಅದು ಮೊದಲುಗೊಂಡು ಶಿವನ ಭಕ್ತರಿಗೆ ನಾನು ಶಿಕ್ಷಕನಾಗುವುದಿಲ್ಲ. ವಸುಶ್ರುತನೆಂಬ ರಾಜನು ಪ್ರಜೆಗಳನ್ನು ಕಾಪಾಡದಿದ್ದರೂ,

೭೧. ಮನಸ್ಸು, ವಾಕ್, ಕರ್ಮಗಳಲ್ಲಿ ಅವನಿಗೆ ಶಂಕರನಲ್ಲಿ ಭಕ್ತಿಯಿದ್ದದ್ದರಿಂದ ಅವನು ಈಶ್ವರನ ಅನುಗ್ರಹವನ್ನು ಪಡೆದು ಶುದ್ಧನಾಗಿರುವನು. ಎಂದಿಗೂ ಪಾಪವು ಅವನನ್ನು ಸೇರಲಾರದು.

ಸಕೃತ್ ಪಶ್ಯತಿ ಭೋ ದೇವಂ ಮಹಾಕಾಲಂ ತ್ರಿಲೋಚನಂ ।
ಸರ್ವಪಾಪವಿನಿರ್ಮುಕ್ತೋ ಯಾತಿ ಶೈವಂ ಪರಂ ಪದಂ ॥ ೭೨ ॥

ಯಂ ಸದಾಽರ್ಚಯತೇ ದೇವಂ ಮಹಾಕಾಲಂ ತಮೀಶ್ವರಮ್ ।
ಗಣೇಶ್ವರಃ ಸ ಮಂತವ್ಯೋ ಭವದ್ಭಿರಿತಿ ಕಿಂಕರಾಃ ॥ ೭೩ ॥

ಏವಂ ಯಮಸ್ಯ ವಚನಂ ಶ್ರುತ್ವಾ ತೇ ಯಮಕಿಂಕರಾಃ ।
ತೂಷ್ಣೀಮಾಸಾದ್ಯ ತೇ ಸರ್ವೇ ಬಭೂವುರ್ವಿಗತಜ್ವರಾಃ । ॥ ೭೪

ತಸ್ಮಾತ್ಪೂಜ್ಯೋ ಮಹಾದೇವಸ್ತದ್ಭಕ್ತಶ್ಚ ವಿಶೇಷತಃ ।
ಭಕ್ತಾನಾಂ ಪೂಜನಾಚ್ಛಂಭುಃ ಪ್ರೀತೋ ಭವತಿ ನಾರದ ॥ ೭೫ ॥

ಶಿವಸ್ಯ ನಿತ್ಯತೃಪ್ತಸ್ಯ ಕಿಂ ನಾಮ ಕ್ರಿಯತೇ ಜನೈಃ ।
ಯತ್ಕೃತಂ ಶಿವಭಕ್ತಾನಾಂ ತೇನ ಪ್ರೀತೋ ಭವೇಚ್ಛಿವಃ ॥ ೭೬ ॥

---

೭೨. ತ್ರಿಲೋಚನನಾದ ಮಹಾಕಾಲನನ್ನು ಯಾವನು ಒಂದು ಬಾರಿ ಭಕ್ತಿಯಿಂದ ನೋಡುವನೋ, ಅವನು ಸಮಸ್ತ ಪಾಪಗಳಿಂದ ಬಿಡಲ್ಪಟ್ಟವನಾಗಿ ಈಶ್ವರನ ಸ್ಥಾನವನ್ನು ಪಡೆಯುತ್ತಾನೆ.

೭೩. ಮಹಾಕಾಲನಾದ ಆ ಈಶ್ವರನನ್ನು ಯಾವನು ಯಾವಾಗಲೂ ಪೂಜಿಸುವನೋ. ಅವನನ್ನು ನೀವು ಇನ್ನುಮುಂದೆ ಮಹೇಶ್ವರನ ಗಣಗಳಿಗೆ ಒಡೆಯನೆಂದು ತಿಳಿಯಿರಿ."

೭೪. ಈ ರೀತಿಯಾಗಿ ಯಮನ ಮಾತನ್ನು ಕೇಳಿ ಆ ಯಮದೂತರು ಕೋಪತಾಪಗಳಿಂದ ಬಿಡಲ್ಪಟ್ಟವರಾಗಿ, ಸುಮ್ಮನೇ ಕುಳಿತುಕೊಂಡರು.

೭೫. ಎಲೈ ನಾರದನೇ:– ಆದಕಾರಣ ಮಹಾದೇವನನ್ನೂ, ಅವನ ಭಕ್ತರನ್ನೂ ಯಾವಾಗಲೂ ಪೂಜಿಸಬೇಕು. ಭಕ್ತರ ಪೂಜೆಯಿಂದ ಈಶ್ವರನು ಪ್ರೀತನಾಗುತ್ತಾನೆ.

೭೬. ನಿತ್ಯತೃಪ್ತನಾದ ಈಶ್ವರನನ್ನು ಜನಗಳು ಹೇಗೆ ತಾನೆ ತೃಪ್ತಿಪಡಿಸಬಹುದು? ಆದರೂ ಈಶ್ವರನ ಭಕ್ತರು ಯಾವರೀತಿಯಾಗಿ ಸೇವಿಸಿದರೂ ಅದರಿಂದ ಶಿವನು ಪ್ರೀತನಾಗುತ್ತಾನೆ.

ದೇವಾನ್ ಸರ್ವಾನ್ ಪರಿತ್ಯಜ್ಯ ಭಜ ನಾರದ ಶಂಕರಂ ।   ॥ ೭೭ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ
ಸಂವಾದೇ ಬ್ರಹ್ಮನಾರದ ಸಂವಾದಾದಿ ಕಥನಂ ನಾಮ
ಚತುಃಷಷ್ಟಿತಮೋಽಧ್ಯಾಯಃ.

---

೭೭. ಆದ್ದರಿಂದ ಎಲೈ ನಾರದನೇ, ಸಮಸ್ತ ದೇವತೆಗಳನ್ನು ಬಿಟ್ಟು ಈಶ್ವರನನ್ನು ಸೇವಿಸು" ಎಂದು ಬ್ರಹ್ಮನು ಹೇಳಿದನು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಶ್ರೀಸೌರಪುರಾಣದಲ್ಲಿ ಸೂತಶೌನಕ
ಸಂವಾದರೂಪವಾಗಿ, ಬ್ರಹ್ಮನಾರದ ಸಂವಾದದ ಅರುವತ್ತುನಾಲ್ಕನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಪಂಚಷಷ್ಟಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಪಂಚಾಕ್ಷರೇಣ ಮಂತ್ರೇಣ ಪತ್ರಂ ಪುಷ್ಪಮಥಾಪಿ ವಾ ।
ಯಃ ಪ್ರಯಚ್ಛತಿ ಶರ್ವಾಯ ತದನಂತಫಲಂ ಸಕೃತ್ ॥ ೧ ॥

ಸಪ್ತಕೋಟಿಮಹಾಮಂತ್ರಾಃ ಶಿವವಕ್ತ್ರಾದ್ವಿನಿರ್ಗತಾಃ ।
ಪಂಚಾಕ್ಷರಸ್ಯ ಮಂತ್ರಸ್ಯ ಕಲಾಂ ನಾರ್ಹಂತಿ ಷೋಡಶೀಂ ॥ ೨ ॥

ದೀಕ್ಷಿತೋಽದೀಕ್ಷಿತೋ ವಾಽಪಿ ವಿಧಾನಾದನ್ಯಥಾಪಿ ವಾ ।
ಪಂಚಾಕ್ಷರಂ ಜಪೇದ್ಯಸ್ತು ಶಿವಸ್ಯಾನುಚರೋ ಭವೇತ್ ॥ ೩ ॥

ಅರುವತ್ತೈದನೆಯ ಅಧ್ಯಾಯ.

೧. ಶಿವಪಂಚಾಕ್ಷರ ಮಂತ್ರದಿಂದ ಈಶ್ವರನಿಗೆ ಪತ್ರವನ್ನಾಗಲಿ ಪುಷ್ಪವನ್ನಾಗಲಿ ಒಂದು ಸಲ ಯಾವನು ಪೂಜಿಸುತ್ತಾನೆಯೋ, ಅವನಿಗೆ ಅಪರಿಮಿತವಾದ ಫಲವು ದೊರಕುತ್ತದೆ.

೨. ಈಶ್ವರನ ಬಾಯಿಯಿಂದ ಏಳು ಕೋಟಿ ಮಹಾಮಂತ್ರಗಳು ಹೊರಟಿವೆ. ಶಿವಪಂಚಾಕ್ಷರಿಯ ಮಂತ್ರದ ಷೋಡಶಾಂಶ ಮಹಿಮೆಯನ್ನೂ ಅವು ಹೊಂದಲಾರವು.

೩. ಕರ್ಮದೀಕ್ಷಿತನಾಗಲೀ, ಕರ್ಮಬಾಹಿರನಾಗಲೀ, ವಿಧ್ಯುಕ್ತವಾಗಿಯೋ ಅಥವಾ ವಿಧಿರಹಿತವಾಗಿಯೋ, ಯಾವನು ಶಿವಪಂಚಾಕ್ಷರೀಮಂತ್ರವನ್ನು ಜಪಿಸುತ್ತಾನೋ ಅವನು ಈಶ್ವರನ ಭಕ್ತನೆನಿಸುವನು.

ಅಪಿ ಕೃತ್ವಾ ಭ್ರೂಣಹತ್ಯಾಂ ಪಾಪಾನಿ ಸುಬಹೂನ್ಯಪಿ ।
ಪಂಚಾಕ್ಷರಜಪಾತ್ಸದ್ಯೋ ಮುಚ್ಯತೇ ನಾತ್ರ ಸಂಶಯಃ ॥ ೪ ॥

ನ ಹಿ ಪಂಚಾಕ್ಷರಜಪಾಚ್ಛ್ರೇಯೋಽಸ್ತಿ ಭುವನತ್ರಯೇ ।
ಏವಂ ಜ್ಞಾತ್ವಾ ಜಪೇದ್ವಿದ್ವಾನ್ವಿದ್ಯಾಂ ಪಂಚಾಕ್ಷರೀಂ ಶುಭಾಂ ॥ ೫ ॥

ಪಂಚಾಕ್ಷರೇಣ ಮಂತ್ರೇಣ ಬಿಲ್ವಪತ್ರೈಃ ಶಿವಾರ್ಚನಂ ।
ಕರೋತಿ ಶ್ರದ್ಧಯಾ ಯಸ್ತು ಸ ಗಚ್ಛೇದೈಶ್ವರಂ ಪದಂ ॥ ೬ ॥

ದರ್ಶನಾದ್ಬಿಲ್ವವೃಕ್ಷಸ್ಯ ಸ್ಪರ್ಶನಾದ್ವಂದನಾದಪಿ ।
ಅಹೋರಾತ್ರಕೃತಂ ಪಾಪಂ ನಶ್ಯತೇ ಋಷಿಸತ್ತಮ ॥ ೭ ॥

ಅಂತಕಾಲೇ ನರೋ ಯಸ್ತು ಬಿಲ್ವಮೂಲಸ್ಯ ಮೃತ್ತಿಕಾಂ ।
ಆಲಿಂಪೇತ್ಸರ್ವಗಾತ್ರಾಣಿ ಮೃತೋ ಯಾತಿ ಪರಾಂ ಗತಿಂ ॥ ೮ ॥

---

೪. ಶಿವಪಂಚಾಕ್ಷರಿಯನ್ನು ಜಪಿಸುವವನು, ಭ್ರೂಣಹತ್ಯವನ್ನು ಮಾಡಿರಲಿ, ಅನೇಕ ಪಾಪಗಳನ್ನು ಮಾಡಿರಲಿ. ಅವನು ಶಿವಪಂಚಾಕ್ಷರೀ ಜಪದಿಂದ ನಿಶ್ಚಯ ವಾಗಿಯೂ ಮೋಕ್ಷ ಪಡೆಯುತ್ತಾನೆ.

೫. ಮೂರು ಲೋಕದಲ್ಲಿಯೂ ಪಂಚಾಕ್ಷರಿಯ ಮಂತ್ರಜಪಕ್ಕಿಂತ ಹೆಚ್ಚು ಫಲಪ್ರದವಾದದ್ದು ಮತ್ತೊಂದಿಲ್ಲ. ಎಂದು ತಿಳಿದು ಪಂಡಿತನಾದವನು ಶುಭವಾದ ಪಂಚಾಕ್ಷರಿಯನ್ನೇ ಜಪಿಸಬೇಕು.

೬. ಶಿವಪಂಚಾಕ್ಷರೀ ಮಂತ್ರಪುರಸ್ಸರವಾಗಿ ಬಿಲ್ವಪತ್ರೆಗಳಿಂದ ಶ್ರದ್ಧಾಯುಕ್ತ ನಾಗಿ ಯಾವನು ಈಶ್ವರನನ್ನು ಪೂಜಿಸುತ್ತಾನೆಯೋ, ಅವನು ಈಶ್ವರನ ಸ್ಥಾನವನ್ನು ಹೊಂದುತ್ತಾನೆ.

೭. ಎಲೈ ಋಷಿಶ್ರೇಷ್ಠನೇ, ಬಿಲ್ವವೃಕ್ಷದರ್ಶನದಿಂದಲೂ, ಸ್ಪರ್ಶನದಿಂದಲೂ ನಮಸ್ಕಾರದಿಂದಲೂ, ಅಹೋರಾತ್ರ ಕೃತವಾದ ಪಾಪವೆಲ್ಲವೂ ಮಾಯವಾಗುತ್ತದೆ.

೮. ಯಾವನು ತನ್ನ ಕೊನೆಗಾಲದಲ್ಲಿ ಬಿಲ್ವಮರದ ಬುಡದ ಮಣ್ಣನ್ನು ಎಲ್ಲಾ ಅವಯವಗಳಿಗೂ ಹಚ್ಚಿಕೊಳ್ಳುತ್ತಾನೋ, ಅವನು ಮರಣಾನಂತರ ಶ್ರೇಷ್ಠ ವಾದ ಗತಿಯನ್ನು ಹೊಂದುತ್ತಾನೆ.

ಬಿಲ್ವವೃಕ್ಷಂ ಸಮಾಶ್ರಿತ್ಯ ದ್ವಾದಶಾಹಮಭೋಜನಂ ।
ಯಃ ಕುರ್ಯಾದ್ಭ್ರೂಣಹಾ ಪಾಪಾನ್ ಮುಕ್ತೋ ಭವತಿ ನಾರದ ॥ ೯ ॥

ಬಿಲ್ವವೃಕ್ಷಂ ಸಮಾಶ್ರಿತ್ಯ ತ್ರಿರಾತ್ರೋಪೋಷಿತಃ ಶುಚಿಃ ।
ಹರನಾಮ ಜಪನ್ ಲಕ್ಷಂ ಭ್ರೂಣಹತ್ಯಾಂ ವ್ಯಪೋಹತಿ ॥ ೧೦ ॥

ಮಾತೃಹಾ ಪಿತೃಹಾ ವಾಽಪಿ ಯುಕ್ತೋ ವಾ ಸರ್ವಪಾತಕೈಃ ।
ಮಾಘೇ ಕೃಷ್ಣಚತುರ್ದಶ್ಯಾಂ ಪೂಜಯೇದಿಂದುಶೇಖರಂ ॥ ೧೧ ॥

ಭಕ್ತ್ಯಾ ಬಿಲ್ವದಲೈರ್ಮೌನೀ ಹರನಾಮ ಜಪನ್ನಿಶಿ ।
ಸರ್ವಪಾಪವಿನಿರ್ಮುಕ್ತೋ ಯಾತಿ ಶೈವಂ ಪರಂ ಪದಂ ॥ ೧೨ ॥

ಶುಷ್ಕೈಃ ಪರ್ಯುಷಿತೈಃ ಪತ್ರೈರಪಿ ಬಿಲ್ವಸ್ಯ ನಾರದ ।
ಪೂಜಯೇದ್ಗಿರಿಜಾನಾಥಂ ಮುಚ್ಯತೇ ಸರ್ವಪಾತಕೈಃ ॥ ೧೩ ॥

---

೯. ಎಲೈ ನಾರದನೇ, ಯಾವನು ಬಿಲ್ವವೃಕ್ಷವನ್ನಾಶ್ರಯಿಸಿ ಹನ್ನೆರಡು ದಿವಸ ಉಪವಾಸವಿರುತ್ತಾನೆಯೋ, ಅವನು ಭ್ರೂಣಹತ್ಯವೇ ಮೊದಲಾದ ಪಾಪಗಳಿಂದ ಮುಕ್ತನಾಗುತ್ತಾನೆ.

೧೦. ಬಿಲ್ವವೃಕ್ಷವನ್ನು ಆಶ್ರಯಿಸಿ ಮೂರು ರಾತ್ರಿಗಳು ಲಕ್ಷಶಿವನಾಮವನ್ನು ಜಪಿಸಿದರೆ, ಅವರು ಭ್ರೂಣಹತ್ಯಾ ಪಾಪವನ್ನು ಸಹ ಕಳೆದುಕೊಳ್ಳುವರು.

೧೧. ತಾಯಿಯನ್ನು ಕೊಂದವನಾಗಲಿ, ತಂದೆಯನ್ನು ಕೊಂದವನಾಗಲಿ, ಅನೇಕ ಪಾಪಗಳಿಂದ ಕೂಡಿದವನಾಗಲಿ, ಮಾಘಮಾಸದ ಕೃಷ್ಣಚತುರ್ದಶಿಯಲ್ಲಿ ಈಶ್ವರನನ್ನು ಪೂಜಿಸಿ ತನ್ಮೂಲಕ ಪಾಪವನ್ನು ಕಳೆದುಕೊಳ್ಳಬೇಕು.

೧೨. ಯಾವನು ಭಕ್ತಿಯಿಂದ ಬಿಲ್ವದಲಗಳನ್ನು ಹಿಡಿದು, ಮೌನಿಯಾಗಿ ಈಶ್ವರನಾಮವನ್ನು ರಾತ್ರಿಯಲ್ಲಿ ಜಪಿಸುತ್ತಾ, ಶಂಕರನನ್ನು ಅರ್ಚಿಸುವನೋ, ಅವನು ಸರ್ವಪಾಪಗಳಿಂದ ಮುಕ್ತನಾಗಿ ಈಶ್ವರನ ಸಾನ್ನಿಧ್ಯವನ್ನು ಹೊಂದುತ್ತಾನೆ.

೧೩. ಎಲೈ ನಾರದನೇ, ಒಣಗಿದ ಅಥವಾ ಹಿಂದಿನಿಂದ ಕೊಯ್ದ ಬಿಲ್ವದಲ ಗಳಿಂದಲೂ ಪಾರ್ವತೀ ಪತಿಯನ್ನು ಪೂಜಿಸಬಹುದು. ಅದರಿಂದ ಆತನ ಸಮಸ್ತ ಪಾಪ ಗಳೂ ನಿವೃತ್ತಿಯಾಗುವುವು.

ಅರ್ಘ್ಯಂ ಪುಷ್ಪಫಲೋಪೇತಂ ಯಃ ಶಿವಾಯ ನಿವೇದಯೇತ್ ।
ಯುಗಾನಾಮಯುತಂ ಸಾಗ್ರಂ ಶಿವಲೋಕೇ ವಸೇನ್ನರಃ ॥ ೧೪ ॥

ಆಪಃ ಕ್ಷೀರಂ ಕುಶಾಗ್ರಾಣಿ ಸಘೃತಂ ದಧಿ ತಂಡುಲಾಃ ।
ತಿಲೈಶ್ಚ ಸರ್ಷಪೈಃ ಸಾರ್ಧಮರ್ಘ್ಯೋಽಷ್ಟಾಂಗ ಇತಿ ಸ್ಮೃತಃ ॥ ೧೫ ॥

ಪಲಕೋಟಿಂ ಸುವರ್ಣಸ್ಯ ಯೋ ದದ್ಯಾದ್ವೇದಪಾರಗೇ ।
ಶಿವಾಯ ರಕ್ತಿಕಾಮಾತ್ರಂ ಪ್ರದತ್ವಾ ವಾಽಧಿಕಂ ಭವೇತ್ ॥ ೧೬ ॥

ತಸ್ಮಾತ್ಪತ್ರೈಃ ಫಲೈಃ ಪುಷ್ಪೈಃ ತೋಯೈರಪಿ ಯಜೇಚ್ಛಿವಂ ।
ತದನಂತಫಲಂ ಪ್ರೋಕ್ತಂ ಭಕ್ತಿರೇವಾತ್ರ ಕಾರಣಮ್ ॥ ೧೭ ॥

---

೧೪. ಹೂವು ಮತ್ತು ಹಣ್ಣುಗಳಿಂದ ಕೂಡಿರುವ ಅರ್ಘ್ಯವನ್ನು ಈಶ್ವರನಿಗೆ ಭಕ್ತಿಯಿಂದ ಸಮರ್ಪಿಸಬೇಕು. ಹಾಗೆ ಸಮರ್ಪಣೆ ಮಾಡಿದವರು ಹತ್ತುಸಾವಿರ ಯುಗಗಳು ಶಿವಲೋಕದಲ್ಲಿಯೇ ವಾಸವಾಗಿರುತ್ತಾರೆ.

೧೫. ನೀರು, ಹಾಲು, ದರ್ಭೆಯ ಅಗ್ರಗಳು, ತುಪ್ಪ, ಮೊಸರು, ಅಕ್ಕಿ, ಎಳ್ಳು, ಸಾಸವೆ, ಇವುಗಳು ಅರ್ಘ್ಯದ ಅಷ್ಟಾಂಗಗಳು ಎನ್ನಿಸುತ್ತವೆ.

೧೬. ವೇದಪಾಠಕನಿಗೆ ಒಂದು ಕೋಟಿಪಲ ಸುವರ್ಣವನ್ನು ಕೊಟ್ಟರೆ ಯಾವ ಪುಣ್ಯವೋ ,ಆದಕ್ಕಿಂತಲೂ ಹೆಚ್ಚಾಗಿ ಈಶ್ವರನಿಗೆ ಅತ್ಯಲ್ಪವಾದ ಸುವರ್ಣಾರ್ಪಣದಿಂದ ಸುಕೃತವು ಲಭಿಸುವುದು.

೧೭. ಆದುದರಿಂದ ಪತ್ರ, ಫಲ, ಹೂವು, ಮತ್ತು ನೀರು ಇವುಗಳಿಂದ ಈಶ್ವರನನ್ನು ಪೂಜಿಸಬಹುದು. ಇದರಿಂದ ಅನಂತ ಸುಕೃತವು ಲಭಿಸುವುದು. ಇದಕ್ಕೆ ಭಕ್ತಿಯೇ ಮುಖ್ಯ ಕಾರಣವು.

ಲಿಂಗಸ್ಯ ಲೇಪನಂ ಕುರ್ಯಾದ್ದಿವ್ಯೈರ್ಗಂಧೈರ್ಮನೋಹರೈಃ ।
ವರ್ಷಕೋಟಿಶತಂ ದಿವ್ಯಂ ಶಿವಲೋಕೇ ಮಹೀಯತೇ ॥ ೧೮ ॥

ಸುಗಂಧಲೇಪನಾತ್ಪುಣ್ಯಂ ದ್ವಿಗುಣಂ ಚಂದನಸ್ಯ ತು ।
ಚಂದನಾಚ್ಚಾಗರೋರ್ಜ್ಞೇಯಂ ಪುಣ್ಯಮಷ್ಟಗುಣಾಧಿಕಂ ॥ ೧೯ ॥

ಕೃಷ್ಣಾಗರೋರ್ವಿಶೇಷೇಣ ದ್ವಿಗುಣಂ ಫಲಮಿಷ್ಯತೇ ।
ತಸ್ಮಾಚ್ಛತಗುಣಂ ಪುಣ್ಯಂ ಕುಂಕುಮಸ್ಯ ವಿಧೀಯತೇ ॥ ೨೦ ॥

ಚಂದನಾಗರುಕರ್ಪೂರೈರ್ನಾಭಿರೋಚನಕುಂಕುಮೈಃ ।
ಲಿಂಗಮೇತೈಃ ಸಮಾಲಿಪ್ಯ ಗಾಣಪತ್ಯಮವಾಪ್ನುಯಾತ್ ॥ ೨೧ ॥

ಸಂವೀಜ್ಯ ತಾಲವೃಂತೇನ ಲಿಂಗಂ ಗಂಧೈಃ ಸುಲೇಪಿತಂ ।
ದಶವರ್ಷಸಹಸ್ರಾಣಿ ಶಿವಲೋಕೇ ಮಹೀಯತೇ ॥ ೨೨ ॥

---

೧೮. ಮನೋಹರವಾದ ಮತ್ತು ಉತ್ತಮವಾದ ಗಂಧಗಳಿಂದ ಲಿಂಗವನ್ನು ಲೇಪನಮಾಡಬೇಕು. ಇದರಿಂದ ಉತ್ತಮವಾದ ಶಿವಲೋಕದಲ್ಲಿ ನೂರುಕೋಟಿ ವರುಷಗಳ ಪರ್ಯಂತ ಜೀವಿಸಬಹುದು.

೧೯. ಶ್ರೀಗಂಧಲೇಪನದ ಎರಡರಷ್ಟು ಪುಣ್ಯವು ಚಂದನಲೇಪನಕ್ಕೂ, ಚಂದನದ ಎಂಟರಷ್ಟು ಅಧಿಕಪುಣ್ಯವು ಅಗರುವಿನ ಲೇಪನಕ್ಕೂ ಹೇಳಲ್ಪಟ್ಟಿದೆ.

೨೦. ಶುದ್ಧ ಅಗರುವಿಗಿಂತಲೂ, ಕೃಷ್ಣಾಗರುವಿನ ಲೇಪನದಿಂದ ಎರಡರಷ್ಟು ಫಲವು ದೊರಕುವುದು. ಅದಕ್ಕಿಂತಲೂ ನೂರರಷ್ಟು ಹೆಚ್ಚಿನ ಗುಣವು ಕುಂಕುಮ ಕೇಸರಿಗೆ ವಿಹಿತವಾಗಿದೆ.

೨೧. ಆದ್ದರಿಂದ ಚಂದನ, ಅಗರು, ಕರ್ಪೂರ, ಕಸ್ತೂರಿ, ಕುಂಕುಮ, ಕೇಸರಿ ಇವುಗಳಿಂದ ನಿರ್ಮಿತವಾದ ಗಂಧವನ್ನು ಈಶ್ವರನ ಲಿಂಗಕ್ಕೆ ಲೇಪನ ಮಾಡುವವನು, ಗಾಣಪತ್ಯವನ್ನು ಹೊಂದುವನು.

೨೨. ಈಶ್ವರಲಿಂಗವನ್ನು ಗಂಧದಿಂದ ಲೇಪಿಸಿ, ಬೀಸಣಿಗೆಯಿಂದ ಚೆನ್ನಾಗಿ ಬೀಸಿದರೆ, ಹತ್ತುಸಹಸ್ರವರುಷಗಳು ಶಿವಲೋಕದಲ್ಲಿ ವಾಸಮಾಡುವರು.

ಮಯೂರವ್ಯಜನಂ ದದ್ಯಾಚ್ಛಿವಾಯಾತೀವ ಶೋಭನಂ ।
ಶರ್ಕಕೋಟಿಶತಂ ದಿವ್ಯಂ ಶಿವಲೋಕೇ ಮಹೀಯತೇ ॥ ೨೩ ॥

ಚಾಮರಂ ಯಃ ಶಿವೇ ದದ್ಯಾತ್ ಮಣಿರತ್ನವಿಭೂಷಿತಂ ।
ಹೇಮರೂಪ್ಯಾದಿದಂಡಂ ವಾ ತಸ್ಯ ಪುಣ್ಯಫಲಂ ಶೃಣು ॥ ೨೪ ॥

ಚಾಮರಾಸಕ್ತಹಸ್ತಾಭಿಃ ದಿವ್ಯಸ್ತ್ರೀಪರಿವಾರಿತಃ ।
ವಿಮಾನಂ ವರಮಾರುಹ್ಯ ಗಣೈರ್ಯಾತಿ ಶಿವಂ ಪದಂ ॥ ೨೫ ॥

ಅರಣ್ಯಸಂಭವೈಃ ಪುಷ್ಪೈಃ ಪತ್ರೈರ್ವಾ ಗಿರಿಸಂಭವೈಃ ।
ಅಪರ್ಯುಷಿತನಿಶ್ಛಿದ್ರೈಃ ಅರಕ್ತೈರ್ಜಂತುವರ್ಜಿತೈಃ ॥ ೨೬ ॥

---

೨೩. ನವಿಲುಗರಿಯ ಬೀಸಣಿಗೆಯಿಂದ ಬೀಸಿದರೆ ಈಶ್ವರನಿಗೆ ಬಹಳ ಪ್ರೀತಿ. ಆದರಿಂದ ಭಕ್ತನು ನೂರುಕೋಟಿವರುಷ ಪರ್ಯಂತ ಶಿವಲೋಕದಲ್ಲಿ ವಾಸಿಸುವನು.

೨೪. ಉತ್ತಮವಾದ ರತ್ನಗಳಿಂದ ಅಲಂಕೃತವಾದ ಚಾಮರವನ್ನು ಯಾವನು ಶಿವನ ಸೇವೆಗೆ ಬಳಸುವನೋ, ಯಾವನು ಚಿನ್ನ ಅಥವಾ ಬೆಳ್ಳಿಯಿಂದ ನಿರ್ಮಿತವಾದ ದಂಡವನ್ನು ಶಂಕರನಿಗೆ ಸಮರ್ಪಿಸುವನೋ, ಅಂತಹವರಿಗೆ ಬರುವಂತಹ ಪುಣ್ಯಫಲ ವನ್ನು ವಿವರಿಸುವೆನು.

೨೫. ಅಂತಹವನು ಚಾಮರದಿಂದ ಕೂಡಿರುವ ಕೈಗಳುಳ್ಳ ಸುಂದರಸ್ತ್ರೀಯ ರಿಂದ ಸುತ್ತಲ್ಪಟ್ಟವನಾಗಿ ದಿವ್ಯವಿಮಾನಾರೂಢನಾಗಿ ಪ್ರಮಥಗಣಗಳೊಡನೆ ಶಿವ ಲೋಕವನ್ನು ಹೊಂದುವನು.

೨೬. ಅರಣ್ಯದಲ್ಲಿ ಉತ್ಪತ್ತಿಯಾದ ಹೂವುಗಳಿಂದ, ಪರ್ವತದಲ್ಲಿ ಸಿಗುವ ಪತ್ರ ಗಳಿಂದ ಸ್ವಾಮಿಯನ್ನು ಪೂಜಿಸಬಹುದು. ಉತ್ತಮವಾಗಿ ಆ ಪತ್ರಪುಷ್ಪಗಳು ಛಿದ್ರ ವಿಲ್ಲದೆ, ಹುಳುಗಳಿಂದ ಕೂಡಿದರೆ ಬಿಳುಪಾಗಿರಬೇಕು.

ಆತ್ಮಾರಾಮೋದ್ಭವೈರ್ವಾಽಪಿ ಪುಷ್ಪೈಃ ಸಂಪೂಜಯೇಚ್ಛಿವಂ ।
ಪುಷ್ಪಜಾತಿವಿಶೇಷೇಣ ಭವೇತ್ ಪುಣ್ಯಮಥೋತ್ತರಂ ॥ ೨೭ ॥

ತಪಃ ಶೀಲಗುಣಾಢ್ಯಾಯ ವೇದವೇದಾಂಗಗಾಮಿನೇ ।
ದಶ ದತ್ವಾ ಸುವರ್ಣಸ್ಯ ಫಲಂ ಹಿ ತದವಾಪ್ನುಯಾತ್ ॥ ೨೮ ॥

ಅರ್ಕಪುಷ್ಪೈಃ ಕೃತಾ ಪೂಜಾ ಯದಿ ದೇವಾಯ ಶಂಭವೇ ।
ಅರ್ಕಪುಷ್ಪಸಹಸ್ರೇಭ್ಯಃ ಕರವೀರಂ ಪ್ರಶಸ್ಯತೇ ॥ ೨೯ ॥

ಕರವೀರಸಹಸ್ರೇಭ್ಯೋ ಬಿಲ್ವಪತ್ರಂ ವಿಶಿಷ್ಯತೇ ।
ಬಿಲ್ವಪತ್ರಸಹಸ್ರೇಭ್ಯಃ ಶಮೀಪತ್ರಂ ವಿಶಿಷ್ಯತೇ ॥ ೩೦ ॥

ಅರ್ಕಪುಷ್ಪಸಹಸ್ರೇಭ್ಯಃ ಶಮೀಪುಷ್ಪಂ ವಿಶಿಷ್ಯತೇ ।
ಶಮೀಪುಷ್ಪಸಹಸ್ರೇಭ್ಯಃ ಕುಶಪುಷ್ಪಂ ವಿಶಿಷ್ಯತೇ ॥ ೩೧ ॥

---

೨೭. ತನ್ನ ಉದ್ಯಾನದಲ್ಲಿ ಉತ್ಪತ್ತಿಯಾದ ಹೂವುಗಳಿಂದಾಗಲೀ, ವಿಶೇಷ ಜಾತಿಯ ಪುಷ್ಪಗಳಿಂದಾಗಲೀ ಈಶ್ವರನನ್ನು ಪೂಜಿಸಿದರೆ ಉತ್ತರೋತ್ತರವಾದ ಪುಣ್ಯವು ಲಭಿಸುವುದು.

೨೮. ತಪಸ್ಸು, ಶೀಲ, ಗುಣ ಇವುಗಳಿಂದ ಕೂಡಿದವನಾಗಿಯೂ, ವೇದ ವೇದಾಂಗಪಾರಗನಾಗಿಯೂ ಇರುವವನಿಗೆ ಹತ್ತು ಸುವರ್ಣವನ್ನು ಕೊಟ್ಟರೆ ಬರುವ ಫಲವು ಈಶ್ವರಪೂಜೆಯಿಂದಲೇ ಲಭಿಸುವುದು.

೨೯. ಎಕ್ಕದ ಹೂವುಗಳಿಂದ ಈಶ್ವರನಿಗೆ ಪೂಜೆಯನ್ನು ಮಾಡಬಹುದು. ಆ ಎಕ್ಕದ ಹೂವುಗಳ ಸಾವಿರದಿಂದ ಮಾಡಿದ ಪೂಜಾ ಫಲವು ಒಂದು ಕರವೀರಪುಷ್ಪದ ಅರ್ಚನೆಯಿಂದ ಲಭಿಸುತ್ತದೆ.

೩೦. ಸಾವಿರಕಣಗಿಲು ಹೂವುಗಳ ಪೂಜೆಗಿಂತ ಒಂದು ಬಿಲ್ವಪತ್ರದ ಅರ್ಚನೆಯು ಶ್ರೇಷ್ಠವಾದದ್ದು. ಬಿಲ್ವಪತ್ರಗಳ ಸಾವಿರ ದಳಗಳ ಅರ್ಚನೆಗಿಂತ ಹೆಚ್ಚಾಗಿ ಒಂದು ಬನ್ನೀಪತ್ರಾರ್ಚನೆಯು ಫಲಕೊಡುವುದು.

೩೧. ಸಾವಿರ ಎಕ್ಕದಹೂಗಳ ಅರ್ಚನೆಯ ಫಲವು ಬನ್ನಿಮರದ ಒಂದು ಹೂವಿಗೂ, ಸಾವಿರ ಬನ್ನೀಹೂಗಳ ಶ್ರೇಷ್ಠತೆಯು ಒಂದು ದರ್ಭೆಯ ಹೂವಿಗೂ ಒದಗುತ್ತದೆ.

ಕುಶಪುಷ್ಪಸಹಸ್ರೇಭ್ಯಃ ಪದ್ಮಪುಷ್ಪಂ ವಿಶಿಷ್ಯತೇ ।
ಪದ್ಮಪುಷ್ಪಸಹಸ್ರೇಭ್ಯೋ ಬಕಪುಷ್ಪಂ ವಿಶಿಷ್ಯತೇ || ೩೨ ||

ಬಕಪುಷ್ಪಸಹಸ್ರೇಭ್ಯಃ ಏಕಂಧತ್ತೂರಕಂ ತಥಾ ।
ಧತ್ತೂರಕಸಹಸ್ರೇಭ್ಯೋ ಬೃಹತ್ಪುಷ್ಪಂ ವಿಶಿಷ್ಯತೇ || ೩೩ ||

ಬೃಹತ್ಪುಷ್ಪಸಹಸ್ರೇಭ್ಯೋ ದ್ರೋಣಪುಷ್ಪಂ ವಿಶಿಷ್ಯತೇ ।
ದ್ರೋಣಪುಷ್ಪಸಹಸ್ರೇಭ್ಯೋ ಅಪಾಮಾರ್ಗಂ ವಿಶಿಷ್ಯತೇ || ೩೪ ||

ಅಪಾಮಾರ್ಗಸಹಸ್ರೇಭ್ಯೋ ಶ್ರೀಮನ್ನೀಲೋತ್ಪಲಂ ವರಂ ।
ನೀಲೋತ್ಪಲಸಹಸ್ರೇಣ ಯೋ ಮಾಲಾಂ ಸಂಪ್ರಯಚ್ಛತಿ || ೩೫ ||

ಶಿವಾಯ ವಿಧಿವದ್ಭಕ್ತ್ಯಾ ತಸ್ಯ ಪುಣ್ಯಫಲಂ ಶೃಣು ।
ಕಲ್ಪಕೋಟಿಸಹಸ್ರಾಣಿ ಕಲ್ಪಕೋಟಿಶತಾನಿ ಚ । || ೩೬ ||

---

೩೨. ಸಾವಿರ ಕುಶಪುಷ್ಪಗಳಿಗಿಂತ ಒಂದು ಕಮಲಪುಷ್ಪವು ಶಿವನಿಗೆ ಪ್ರೀತಿಕರವಾದದ್ದು. ಹಾಗೆಯೇ ಒಂದು ಶಿವಮಲ್ಲೀಹೂವಿನ ಅರ್ಚನೆಯು ಸಾವಿರ ಕಮಲಗಳ ಅರ್ಚನೆಗೆ ಸಮನಾಗುವುದು.

೩೩. ಸಾವಿರ ಶಿವಮಲ್ಲೀಪುಷ್ಪಕ್ಕೆ ಒಂದು ಧತ್ತೂರಿಹೂವೂ, ಸಾವಿರ ಧತ್ತೂರಿಹೂವುಗಳಿಗೆ ಒಂದು ಬೃಹತ್ಪುಷ್ಪವೂ ಸಮವಾಗಿರುತ್ತದೆ.

೩೪. ಸಾವಿರ ಬೃಹತ್ಪುಷ್ಪಗಳಿಗೆ ಒಂದು ತುಂಬೇಹೂವೂ, ಸಾವಿರ ತುಂಬೇಹೂವುಗಳಿಗೆ ಒಂದು ಉತ್ತರಣೆಯಹೂವೂ,

೩೫. ಸಾವಿರ ಉತ್ತರಣೆಹೂವುಗಳಿಗಿಂತ ಒಂದು ಕನ್ನೈದಿಲೆಯೂ ಶ್ರೇಷ್ಠವೆನಿಸುವುದು. ಅಂತಹ ಸಾವಿರ ಕನ್ನೈದಿಲೆಯಮಾಲೆಯನ್ನು ಯಾವನು ಈಶ್ವರನಿಗೆ ಅರ್ಪಿಸುವನೋ, ಅವನು ಪುಣ್ಯಶರೀರಿಯಾಗುವನು.

೩೬-೩೭. ವಿಧಿವತ್ತಾಗಿ, ಭಕ್ತಿಪೂರ್ವಕವಾಗಿ, ಪುಷ್ಪಮಾಲೆಯನ್ನು ಶಿವನಿಗೆ ಅರ್ಪಿಸೋಣದರಿಂದ ಆತನು ಸಾವಿರಾರು ಕಲ್ಪಪರ್ಯಂತವಾಗಿ, ಶಿವಲೋಕದಲ್ಲಿ ವಾಸಿಸುತ್ತಾ

ವಸೇಚ್ಛಿವಪುರೇ ಶ್ರೀಮಾನ್ ಶಿವತುಲ್ಯಪರಾಕ್ರಮಃ ।
ಕರವೀರಸಮಾ ಜ್ಞೇಯಾ ಜಾತೀವಿಜಯಪಾಟಲಾ ॥ ೩೭ ॥

ಶ್ವೇತಮಂದಾರಕುಸುಮಂ ಸಿತಪದ್ಮಂ ಚ ತತ್ಸಮಂ ।
ನಾಗಚಂಪಕಪುನ್ನಾಗಾ ಧತ್ತೂರಕಸಮಾಃ ಸ್ಮೃತಾಃ ॥ ೩೮ ॥

ಬಂಧೂಕಂ ಕೇತಕೀಪುಷ್ಪಂ ಕುಂದಯೂಥೀಮದಂತಿಕಾಃ ।
ಶಿರೀಷಂ ಚಾರ್ಜುನಂ ಪುಷ್ಪಂ ಪ್ರಯತ್ನೇನ ವಿವರ್ಜಯೇತ್ ॥ ೩೯ ॥

ಕನಕಾನಿ ಕದಂಬಾನಿ ರಾತ್ರೌ ದೇಯಾನಿ ಶಂಕರೇ ।
ದಿವಾ ಶೇಷಾಣಿ ಪುಷ್ಪಾಣಿ ದಿವಾರಾತ್ರೌ ಚ ಮಲ್ಲಿಕಾ ॥ ೪೦ ॥

ಪ್ರಹರಂ ತಿಷ್ಠತೇ ಜಾತೀ ಕರವೀರಮಹರ್ನಿಶಂ ।
ಕೇಶಕೀಟಾಪವಿದ್ಧಾನಿ ಶೀರ್ಣಪರ್ಯುಷಿತಾನಿ ಚ ॥ ೪೧ ॥

ಈಶ್ವರನಿಗೆ ಸಮಾನವಾದ ಪರಾಕ್ರಮವುಳ್ಳವನಾಗಿ ಪ್ರಕಾಶಿಸುವನು. ವಿಜಯಪಾದರೀ ಹೂವು ಕಣಿಗಲ ಹೂವಿಗೆ ಸಮಾನವಾಗುತ್ತದೆ.

೩೮. ಬಿಳಿಯ ಮಂದಾರದ ಹೂವು, ಬಿಳಿಯಪದ್ಮವು, ವಿಜಯಪಾಟಲಕ್ಕೆ ಸಮಾನ. ನಾಗಸಂಪಿಗೆ, ಸಂಪಿಗೆ, ಪುನ್ನಾಗ, ಇವುಗಳು ಧತ್ತೂರ ಪುಷ್ಪಕ್ಕೆ ಸದೃಶವಾದವುಗಳು.

೩೯. ಕೆಂಪುರೋಜಾಹೂವು, ತಾಳೇ ಹೂವು, ಕೋಲು ಮಲ್ಲಿಗೆ, ಕಾಡು ಮಲ್ಲಿಗೆ ನುಗ್ಗೀ ಹೂವು, ಬಾಗೇಹೂವು, ಬಿಳೀಮತ್ತೀಹೂವು, ಇವುಗಳು ಶಿವಾರ್ಚನೆಗೆ ಶ್ರೇಷ್ಠವಲ್ಲ.

೪೦. ಕನಕ, ಮತ್ತು ಈಚಲಹೂವುಗಳನ್ನು ರಾತ್ರಿಕಾಲದಲ್ಲಿಯೂ, ಉಳಿದ ಪುಷ್ಪಗಳನ್ನು ಹಗಲಿನಲ್ಲಿಯೂ ಮಲ್ಲಿಗೆಯ ಹೂವನ್ನು ಮಾತ್ರ ಹಗಲುರಾತ್ರೆ ಎರಡು ಕಾಲಗಳಲ್ಲಿಯೂ ಶಿವನಿಗೆ ಅರ್ಪಿಸಬಹುದು.

೪೧. ಜಾತಿಯ ಪುಷ್ಪವು ಒಂದುಜಾವವಿರುತ್ತದೆ. ಕಣಿಗಲು ಒಂದುದಿನ ಇರುತ್ತದೆ. ಕೂದಲು ಮತ್ತು ಹುಳುಗಳಿಂದ ಕೂಡಿರುವ ಅಥವಾ ಒಣಗಿದ ಮತ್ತು ಹಳೆಯ ಹೂವುಗಳನ್ನು,

ಸ್ವಯಂ ಪತಿತಪುಷ್ಪಾಣಿ ತ್ಯಜೇದುಪಹತಾನಿ ಚ ।
ಮುಕುಲೈರ್ನಾರ್ಚಯೇದೀಶಂ ಯಸ್ಯ ಕಸ್ಯಾಪಿ ನಾರದ ॥ ೪೨ ॥

ಕಲಿಕೈರ್ನಾರ್ಚಯೇದ್ದೇವಂ ಚಂಪಕೈರ್ಜಲಜೈರ್ವಿನಾ ।
ನ ಪರ್ಯುಷಿತದೋಷೋಽಸ್ತಿ ಜಲಜೋತ್ಪಲಚಂಪಕೈಃ ॥ ೪೩ ॥

ಪುಷ್ಪಾಣಾಮಪ್ಯಲಾಭೇ ತು ಪತ್ರಾಣ್ಯಪಿ ನಿವೇದಯೇತ್ ।
ಫಲಾನಾಮಪ್ಯಲಾಭೇ ತು ತೃಣಗುಲ್ಮೌಷಧೈರಪಿ ॥ ೪೪ ॥

ಔಷಧಾನಾಮಭಾವೇ ತು ಭಕ್ತ್ಯಾ ಭವತಿ ಪೂಜಿತಃ ।
ಬಿಲ್ವಪತ್ರೈರಖಂಡೈಸ್ತು ಸಕೃತ್ಪೂಜಯತೇ ಶಿವಂ ॥ ೪೫ ॥

ಸರ್ವಪಾಪವಿನಿರ್ಮುಕ್ತೋ ರುದ್ರಲೋಕೇ ಮಹೀಯತೇ ।
ಧತ್ತೂರಕೈಸ್ತು ಯೋ ಲಿಂಗಂ ಸಕೃತ್ಪೂಜಯತೇ ನರಃ ॥ ೪೬ ॥

---

೪೨. ತಾನಾಗಿಯೇ ಬಿದ್ದ ಹೂವುಗಳನ್ನೂ, ಕೆಟ್ಟುಹೋದ ಹೂವುಗಳನ್ನೂ ದೇವರಿಗೆ ಸಮರ್ಪಿಸಬಾರದು. ಯಾವ ಸಂದರ್ಭದಲ್ಲಿಯೂ, ಮೊಗ್ಗುಗಳಿಂದ ಈಶ್ವರನನ್ನಾಗಲೀ, ಯಾವ ದೇವರನ್ನೇ ಆಗಲಿ ಪೂಜಿಸಬಾರದು.

೪೩. ಆದರೆ ಸಂಪಿಗೆ, ಕಮಲ ಇವುಗಳ ಮೊಗ್ಗುಗಳು ಪೂಜೆಗೆ ನಿಂದ್ಯವಲ್ಲ. ಹಾಗೆಯೇ ಹಿಂದಿನ ದಿವಸ ಕೊಯ್ದು, ಕಮಲ, ನೈದಿಲೆಗಳು ಪೂಜೆಗೆ ಶ್ರೇಷ್ಠವಾದವು. ಅವುಗಳಿಗೆ ಪರ್ಯುಷಿತ ದೋಷವಿಲ್ಲ.

೪೪-೪೬. ಪುಷ್ಪಗಳಿಲ್ಲದಿದ್ದರೆ ಪತ್ರಗಳನ್ನಾದರೂ ಈಶ್ವರನಿಗೆ ಅರ್ಪಿಸಬೇಕು. ಹಣ್ಣುಗಳು ದೊರೆಯದಿದ್ದರೆ ಹುಲ್ಲು, ಪೊದೆ (ಲತೆ), ಮೂಲಿಕೆಗಳನ್ನು ಅರ್ಪಿಸಬಹುದು. ಔಷಧಗಳು ಇಲ್ಲದಿದ್ದಲ್ಲಿ ಭಕ್ತಿಯಿಂದಲೇ ಈಶ್ವರನನ್ನು ಪೂಜಿಸಬಹುದು ಚೂರು ಚೂರಾಗದ ಬಿಲ್ವಪತ್ರಗಳಿಂದ ಒಂದು ಬಾರಿ ಈಶ್ವರನನ್ನು ಪೂಜಿಸಿದರೆ, ಆತನು ಸಮಸ್ತವಾದ ಪಾಪಗಳಿಂದ ಮುಕ್ತನಾಗಿ ರುದ್ರಲೋಕದಲ್ಲಿ ಪೂಜ್ಯನೆನಿಸುವನು.

ಗೋಲಕ್ಷಸ್ಯ ಫಲಂ ಪ್ರಾಪ್ಯ ಶಿವಲೋಕೇ ಮಹೀಯತೇ ।
ಬೃಹತೀಕುಸುಮೈರ್ಭಕ್ತ್ಯಾ ಯೋ ಲಿಂಗಂ ಸಕೃದರ್ಚಯೇತ್ ॥ ೪೭ ॥

ಗವಾಮಯುತದಾನಸ್ಯ ಫಲಂ ಪ್ರಾಪ್ಯ ಶಿವಂ ವ್ರಜೇತ್ ।
ಮಲ್ಲಿಕೋತ್ಪಲಪುಷ್ಪಾಣಿ ನಾಗಪುಂನಾಗಚಂಪಕೈಃ ॥ ೪೮ ॥

ಅಶೋಕಶ್ವೇತಮಂದಾರಕರ್ಣಿಕಾರಬಕಾನಿ ಚ ।
ಕರವೀರಾರ್ಕಮಂದಾರಶಮೀತಗರಕೇಸರಂ ॥ ೪೯ ॥

ಕುಶಾಪಾಮಾರ್ಗಕುಮುದಕದಂಬಕುರಬ್ಧೈರಪಿ ।
ಪುಷ್ಪೈರೇತೈರ್ಯಥಾಲಾಭಂ ಯೋ ನರಃ ಪೂಜಯೇಚ್ಛಿವಂ ॥ ೫೦ ॥

ಸ ಯತ್ಫಲಮವಾಪ್ನೋತಿ ತದೇಕಾಗ್ರಮನಾಃ ಶೃಣು ।
ಸೂರ್ಯಕೋಟಿಪ್ರತೀಕಾಶೈಃ ವಿಮಾನೈಃ ಸಾರ್ವಕಾಲಿಕೈಃ ॥ ೫೧ ॥

ಧತ್ತೂರ ಪುಷ್ಪದಿಂದ ಯಾವನು ಈಶ್ವರನನ್ನು ಒಂದು ಸಲ ಪೂಜಿಸುವನೋ ಅವನು ಲಕ್ಷಗೋದಾನಗಳ ಫಲವನ್ನು ಹೊಂದಿ ಶಿವಲೋಕದಲ್ಲಿ ಪೂಜಿಸಲ್ಪಡುತ್ತಾನೆ. ಭಕ್ತಿಯುಕ್ತನಾಗಿ ಹೆಗ್ಗುಳ್ಳದ ಹೂವುಗಳಿಂದ ಯಾವನು ಲಿಂಗವನ್ನು ಪೂಜಿಸುವನೋ,

೪೮. ಅವನು ಹತ್ತುಸಾವಿರ ಹಸುಗಳ ದಾನಫಲವನ್ನು ಹೊಂದಿ ಈಶ್ವರನ ಸಾನ್ನಿಧ್ಯವನ್ನು ಹೊಂದುತ್ತಾನೆ. ಮಲ್ಲಿಗೆ, ಕನ್ನೈದಿಲೆ, ನಾಗ, ಪುನ್ನಾಗ, ಸಂಪಿಗೆ. ಈ ಹೂವುಗಳಿಂದಲೂ,

೪೯-೫೦. ಅಶೋಕ, ಬಿಳಿಯಮಂದಾರ, ಬೆಟ್ಟದಾವರೆ, ಶಿವಮಲ್ಲಿಪುಷ್ಪಗಳು, ಕಣಿಗಲು, ಎಕ್ಕ, ಮಂದಾರ, ಬನ್ನಿ, ಪುಷ್ಪಗಳು. ದರ್ಭಪುಷ್ಪ, ಉತ್ತರಣಿ, ಬಿಳಿಯ ಕನ್ನೈದಿಲೆ, ಈಚಲಹೂವು ಮತ್ತು ಹಸುರುಗೋರಂಟೀ ಪುಷ್ಪಗಳು, ಈ ಎಲ್ಲಾ ಹೂವುಗಳಿಂದಾಗಲೀ, ಅಥವಾ ಯಾವುದು ದೊರೆತರೂ, ಅವುಗಳಿಂದಾಗಲೀ, ಯಾವನು ಈಶ್ವರನನ್ನು ಪೂಜಿಸುವನೋ,

೫೧-೫೩. ಅವನು ಯಾವ ಫಲವನ್ನು ಹೊಂದುತ್ತಾನೆಂಬುದನ್ನು ಸಾವಧಾನವಾಗಿ ಕೇಳು. ಕೋಟಿಸೂರ್ಯಪ್ರಕಾಶಮಾನವಾದ, ಸಾರ್ವಕಾಲಿಕವಾದ ವಿಮಾನಗಳಲ್ಲಿ ಕುಳಿತು, ಪುಷ್ಪಮಾಲೆಗಳಿಂದ ಅಲಂಕೃತನಾಗಿ ಗೀತ, ನೃತ್ಯಗಳ ಧ್ವನಿ

ಪುಷ್ಪಮಾಲಾಪರಿಕ್ಷಿಪ್ತೈರ್ಗೀತವಾದಿತ್ರನಿಸ್ವನೈಃ ।
ತಂತ್ರೀಮಧುರನಾದೈಶ್ಚ ಸ್ವಚ್ಛಂದಗಮನೈಸ್ತಥಾ ॥ ೫೨ ॥

ರುದ್ರಕನ್ಯಾಸಮಾಕೀರ್ಣೈಸ್ಸಮಂತಾದುಪಶೋಭಿತೈಃ ।
ದೋಧೂಯಮಾನಶ್ಚಮರೈಃ ಶಿವಲೋಕೇ ಮಹೀಯತೇ ॥ ೫೩ ॥

ಅನೇಕಾಕಾರವಿನ್ಯಾಸೈಃ ಕುಸುಮೈಶ್ಚ ಶಿವಂ ಗೃಹಂ ।
ಯಃ ಕುರ್ಯಾತ್ ಪರ್ವಕಾಲೇಷು ವಿಚಿತ್ರಕುಸುಮೋಜ್ವಲಂ ॥ ೫೪ ॥

ಸ ಪುಷ್ಪಕವಿಮಾನೇನ ಸಹಸ್ರಪರಿವಾರಿತಃ ।
ದಿವ್ಯಸ್ತ್ರೀಸುಖಸೌಭಾಗ್ಯಕ್ರೀಡಾರತಿಸಮನ್ವಿತಃ ॥ ೫೫ ॥

ಅಕ್ಷಯಾಲ್ಲಭತೇ ಲೋಕಾನತಿರಸ್ಕೃತಶಾಸನಃ ।
ಶಿವಾಯ ಸರ್ವಲೋಕೇಷು ಯತ್ರೇಷ್ಟಂ ತತ್ರ · ಯಾತಿ ಸಃ ॥ ೫೬ ॥

ಗಳಿಂದಲೂ ವೀಣೆಗಳ ಮಧುರಗಾನಗಳಿಂದಲೂ, ಸ್ವಚ್ಛಂದ ಸಂಚಾರದಿಂದಲೂ, ಸುಂದರಿಯರಾಗಿರುವ ಶಿವಕನ್ಯೆಯರಿಂದ ಸುತ್ತಲ್ಪಟ್ಟವನಾಗಿ, ಪ್ರಕಾಶವಾದ ಚಾಮರಗಳಿಂದ ಸೇವಿಸಲ್ಪಡುತ್ತಾ ಶಿವಲೋಕದಲ್ಲಿ ಮಹತ್ವವನ್ನು ಪಡೆದು ವಾಸಿಸುವನು.

೫೪-೫೬. ಯಾವನು ಈಶ್ವರನ ಮನೆಯನ್ನು ಕನ್ನೈದಿಲೆಗಳಿಂದಲೂ ನಾನಾ ಹೂವುಗಳಿಂದಲೂ ಅನೇಕ ರೀತಿಯಲ್ಲಿ ಅಲಂಕಾರಮಾಡುತ್ತಾನೆಯೋ, ಅಂಥವನು ಸಹಸ್ರ ಜನ ಪರಿವಾರವುಳ್ಳವನಾಗಿ ಪುಷ್ಪಕವಿಮಾನವನ್ನೇರಿ ಉತ್ತಮಸ್ತ್ರೀಯರ ಸುಖ ಸೌಭಾಗ್ಯ ಕ್ರೀಡಾಸುಖಗಳನ್ನು ಅನುಭವಿಸುತ್ತಾ,ಅಕ್ಷಯವಾದ ಸಮಸ್ತಲೋಕಗಳನ್ನು ತನ್ನ ಆಜ್ಞಾನುಸಾರವಾಗಿ ಇಟ್ಟುಕೊಂಡವನಾಗಿ, ಶಿವಲೋಕವೇ ಮೊದಲಾದ ಎಲ್ಲಾ ಲೋಕಗಳಲ್ಲಿಯೂ ತನ್ನ ಮನಬಂದಂತೆ ಸಂಚರಿಸುವನು.

ಪೂಜಾದಿಭಕ್ತಿವಿನ್ಯಾಸೈರರ್ಚನಾದಿಷು ಸರ್ವತಃ ।
ಫಲಮೇಕಂ ಸಮಂ ಜ್ಞೇಯಂ ಫಲಂ ವಿತ್ತಾನುಸಾರತಃ ॥ ೫೭ ॥

ಸ್ವಯಮುತ್ಪಾದ್ಯ ಪುಷ್ಪಾಣಿ ಯಃ ಸ್ವಯಂ ಪೂಜಯೇಚ್ಛಿವಂ ।
ತಾನಿ ಸಾಕ್ಷಾತ್ ಪ್ರಗೃಹ್ಣಾತಿ ದೇವದೇವೋ ಮಹೇಶ್ವರಃ ॥ ೫೮ ॥

ಕೃಷ್ಣಾಗರೋಃ ಸಕರ್ಪೂರಧೂಪಂ ದದ್ಯಾಚ್ಛಿವಾಯ ವೈ ।
ನೈರಂತರ್ಯೇಣ ಮಾಸಾರ್ಧಂ ತಸ್ಯ ಪುಣ್ಯಫಲಂ ಶೃಣು ॥ ೫೯ ॥

ಕಲ್ಪಕೋಟಿಸಹಸ್ರಾಣಿ ಕಲ್ಪಕೋಟಿಶತಾನಿ ಚ ।
ಭುಕ್ತ್ವಾ ಶಿವಪುರೇ ಭೋಗಾನ್ ತದಂತೇ ಪೃಥಿವೀಪತಿಃ ॥ ೬೦ ॥

ಗುಗ್ಗುಲಂ ಘೃತಸಂಯುಕ್ತಂ ಸಾಕ್ಷಾದ್ಗೃಹ್ಣಾತಿ ಶಂಕರಃ ।
ಮಾಸಾರ್ಧಂ ಧೂಪದಾನೇನ ಶಿವಲೋಕೇ ಮಹೀಯತೇ ॥ ೬೧ ॥

---

೫೭. ಪೂಜಾ, ಭಕ್ತಿ, ಅಲಂಕಾರ, ಅರ್ಚನೆ, ಇವೇ ಮೊದಲಾದುವುಗಳಿಂದ ಮಾಡಿದ ಶಿವಸೇವೆಯು ಒಂದೇ ಸಮವಾದ ಫಲವನ್ನು ಕೊಡುವುದು. ಹಾಗೆಯೇ ತನ್ನ ವಿತ್ತಾನುಸಾರವಾಗಿ ಸೇವಿಸಿ ಫಲವನ್ನು ಪಡೆಯುತ್ತಾನೆ.

೫೮. ಯಾವನು ತಾನು ಬೆಳೆದ ಹೂವನ್ನು ತಾನೇ ಶಿವನಿಗೆ ಪೂಜಿಸುತ್ತಾನೆಯೋ, ಅಂತಹ ಪುಷ್ಪವನ್ನು ದೇವದೇವನಾದ ಮಹೇಶ್ವರನು ಪ್ರೀತಿಯಿಂದ ಸ್ವೀಕರಿಸುವನು.

೫೯-೬೦. ಕರ್ಪೂರದಿಂದ ಕೂಡಿರುವ ಕೃಷ್ಣಾಗರು ಧೂಪವನ್ನು ಅರ್ಧ ತಿಂಗಳು ಎಡೆಬಿಡದೆ ಯಾವನು ಈಶ್ವರನಿಗರ್ಪಿಸುವನೋ, ಆವನು ಸಾವಿರಕೋಟಿ ಕಲ್ಪ ಪರ್ಯಂತವಾಗಿ, ನೂರು ಕೋಟಿ ವರುಷಗಳು ಭೂಮಂಡಲಾಧಿಪತಿಯಾಗಿ ಅನೇಕ ಸುಖಗಳನ್ನು ಅನುಭವಿಸುತ್ತಾ ಈಶ್ವರನ ಹತ್ತಿರದಲ್ಲಿರುತ್ತಾನೆ.

೬೧. ತುಪ್ಪದಿಂದ ಕೂಡಿರುವ ಗುಗ್ಗುಲಧೂಪವು ಪರಮೇಶ್ವರನಿಗೆ ಅತಿ ಪ್ರಿಯವಾದದ್ದು. ಅಂತಹ ಧೂಪವನ್ನು ಅರ್ಪಿಸಿದವನು ಈಶ್ವರನ ಅನುಗ್ರಹವನ್ನು ಪಡೆದು ಶಿವಲೋಕವನ್ನು ಹೊಂದುವನು.

ಕೃಷ್ಣಪಕ್ಷೇ ಚತುರ್ದಶ್ಯಾಂ ಯಃ ಸಾಜ್ಯಂ ಗುಗ್ಗುಲಂ ದಹೇತ್ ।
ಸ ಯಾತಿ ಪರಮಂ ಸ್ಥಾನಂ ಯತ್ರ ದೇವಃ ಪಿನಾಕಧೃತ್ ॥ ೬೨ ॥

ಶ್ರೀಫಲಂ ಚಾಜ್ಯಸಂಮಿಶ್ರಂ ದತ್ವಾಽಪ್ನೋತಿ ಪರಾಂ ಗತಿಂ ।
ಏಭಿಃ ಸುಗಂಧಿತೋ ಧೂಪಃ ಷಟ್‌ಸಹಸ್ರಗುಣೋತ್ತರಂ ॥ ೬೩ ॥

ಯಸ್ತ್ವರ್ಕಸಂಪುಟೇ ಕೃತ್ವಾ ಮಧು ಚಾರ್ಘ್ಯಸ್ಯ ಮಂತ್ರತಃ ।
ನಿವೇದಯತಿ ಶರ್ವಾಯ ಸೋಽಶ್ವಮೇಧಫಲಂ ಲಭೇತ್ ॥ ೬೪ ॥

ಶಾಲಿತಂಡುಲಪ್ರಸ್ಥೇನ ಕುರ್ಯಾದನ್ನಂ ಸುಸಂಸ್ಕೃತಂ ।
ಶಿವಾಯ ತಚ್ಚರುಂ ದತ್ವಾ ಚತುರ್ದಶ್ಯಾಂ ವಿಶೇಷತಃ ॥ ೬೫ ॥

ಯಾವಂತಸ್ತಂಡುಲಾಸ್ತಸ್ಮಿನ್ನೈವೇದ್ಯೇ ಪರಿಸಂಖ್ಯಯಾ ।
ತಾವದ್ವರ್ಷಸಹಸ್ರಾಣಿ ಶಿವಲೋಕೇ ಮಹೀಯತೇ ॥ ೬೬ ॥

---

೬೨. ಕೃಷ್ಣಪಕ್ಷದ ಚತುರ್ದಶೀ ತಿಥಿಯಲ್ಲಿ ತುಪ್ಪ ಸಹಿತವಾದ ಗುಗ್ಗುಲವನ್ನು ಹತ್ತಿಸಿದವರು, ಈಶ್ವರನ ಪವಿತ್ರವಾದ ಸ್ಥಾನವನ್ನು ಹೊಂದುತ್ತಾರೆ.

೬೩. ತುಪ್ಪ ಮಿಶ್ರಿತವಾದ ಬಿಲ್ವಫಲವನ್ನು ಈಶ್ವರನಿಗರ್ಪಿಸಿದಲ್ಲಿ ಉತ್ತಮ ಗತಿಯನ್ನು ಪಡೆಯುತ್ತಾನೆ. ಈ ಬಿಲ್ವಫಲಾದಿಗಳಿಂದ ನಿರ್ಮಿತವಾದ ಸುಗಂಧವಾದ ಧೂಪವು ಸಾವಿರಪಾಲು ಗುಣವುಳ್ಳದ್ದೆಂದು ಹೇಳಲ್ಪಟ್ಟಿದೆ.

೬೪. ಯಾವನು ಅರ್ಕಸಂಪುಟದಲ್ಲಿ ಮಧುವನ್ನಿಟ್ಟು ಮಂತ್ರಸಹಿತವಾಗಿ ಅರ್ಘ್ಯಕೊಡುತ್ತಾನೆಯೋ, ಅವನು ಅಶ್ವಮೇಧಯಾಗದ ಫಲವನ್ನು ಹೊಂದುತ್ತಾನೆ.

೬೫-೬೬. ಶಾಲಿ ಎಂಬ ಬತ್ತ ವಿಶೇಷದಿಂದ ಉಂಟಾದ ಒಂದು ಸೇರು (ಬಳ್ಳ) ಅಕ್ಕಿಯನ್ನು ಅನ್ನಮಾಡಿ ಕೃಷ್ಣಚತುರ್ದಶಿಯಲ್ಲಿ ಈಶ್ವರನಿಗೆ ನಿವೇದನವಮಾಡಿದರೆ ಆ ಅನ್ನದಲ್ಲಿ ಎಷ್ಟು ಅಕ್ಕಿ ಇರುತ್ತದೆಯೋ ಅಷ್ಟು ಸಹಸ್ರವರುಷ ಪರ್ಯಂತ ಶಿವಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಗುಡಖಂಡಘೃತಾನಾಂ ಚ ಭಕ್ಷ್ಯಾಣಾಂ ಚ ನಿವೇದನಾತ್ ।
ಘೃತೇನ ಪಾಚಿತಾನಾಂ ತು ದತ್ವಾ ಶತಗುಣಂ ಭವೇತ್ ॥ ೧೭ ॥

ಘೃತದೀಪಪ್ರದಾನೇನ ಶಿವಾಯ ಶತಯೋಜನಂ ।
ವಿಮಾನಂ ಲಭತೇ ದಿವ್ಯಂ ಸೂರ್ಯಕೋಟಿಸಮಪ್ರಭಂ ॥ ೧೮ ॥

ಯಃ ಕುರ್ಯಾತ್ ಕಾರ್ತಿಕೇ ಮಾಸಿ ಶೋಭನಾಂ ದೀಪಮಾಲಿಕಾಂ ।
ಘೃತೇನ ಚ ಚತುರ್ದಶ್ಯಾಂ ಚಾಮಾವಾಸ್ಯಾಂ ವಿಶೇಷತಃ ॥ ೧೯ ॥

ಸೂರ್ಯಾಯುತಪ್ರತೀಕಾಶಸ್ತೇಜಸಾ ಭಾಸಯನ್ ದಿಶಃ ।
ತೇಜೋರಾಶಿವಿಮಾನಸ್ಥಃ ಸೂರ್ಯವದ್ದ್ಯೋತತೇ ಸದಾ ॥ ೨೦ ॥

---

೧೭. ಬೆಲ್ಲ, ಕಬ್ಬು, ತುಪ್ಪ ಇವುಗಳೊಡಗೂಡಿದ ಭಕ್ಷ್ಯಗಳನ್ನು ನಿವೇದನೆ ಮಾಡಿದರೆ, ಮತ್ತು ತುಪ್ಪದಿಂದ ಪಾಚಿತವಾದ ಭಕ್ಷ್ಯಗಳನ್ನು ಸಮರ್ಪಿಸಿದರೆ, ನೂರರಷ್ಟು ಸುಕೃತ ಲಭಿಸುವುದು.

೧೮. ಈಶ್ವರನಿಗೆ ತುಪ್ಪದ ದೀಪವನ್ನು ಹೊತ್ತಿಸಿ, ಅರ್ಚಿಸಿದರೆ ನೂರು ಯೋಜನ ವಿಸ್ತೀರ್ಣವೂ, ಮಹತ್ತರವೂ ಸೂರ್ಯಕೋಟಿಸಮಾನವೂ ಆದ ವಿಮಾನವನ್ನು ಹೊಂದಬಹುದು.

೧೯-೨೦. ಯಾವನು ಕಾರ್ತಿಕಮಾಸದಲ್ಲಿ ಮನೋಹರವಾದ ದೀಪಮಾಲೆಯನ್ನು ಹೊತ್ತಿಸುವನೋ, ಅದರಲ್ಲೂ ವಿಶೇಷವಾಗಿ ಕೃಷ್ಣಚತುರ್ದಶಿಯಲ್ಲಿಯೂ ಅಮಾವಾಸ್ಯೆಯಲ್ಲಿಯೂ ದೀಪೋತ್ಸವಮಾಡುವನೋ, ಅವನು ಅನೇಕಸೂರ್ಯಸಮಾನವಾದ ತೇಜಸ್ಸಿನಿಂದ ದಿಕ್ಪ್ರಕಾಶಮಾನನಾಗಿ, ತೇಜೋರೂಪವಾದ ವಿಮಾನದಲ್ಲಿ ಕುಳಿತು ಸೂರ್ಯನಂತೆ ಯಾವಾಗಲೂ ಪ್ರಕಾಶಿಸುತ್ತಾನೆ.

ಶಿಖಾಸು ಧಾರಯೇದ್ದೀಪಂ ‡ಶರ್ವರಾತ್ರ್ಯಾಂ ವಿಶೇಷತಃ ।
ಲಲಾಟೇ ವಾಽಥ ಹಸ್ತಾಭ್ಯಾಂ ಶಿರಸಾ ವಾಽಥ ನಾರದ ॥ ೨೦ ॥

ಸೂರ್ಯಾಯುತಪ್ರತೀಕಾಶೈರ್ವಿಮಾನೈಸ್ಸಾರ್ವಕಾಮಿಕೈಃ ।
ಕಲ್ಪಾಯುತಶತಂ ದಿವ್ಯಂ ಶಿವಲೋಕೇ ಮಹೀಯತೇ ॥ ೨೧ ॥

ಶಿವಸ್ಯ ಪುರತೋ ದತ್ವಾ ದರ್ಪಣಂ ಚ ಸುನಿರ್ಮಲಂ ।
ಚಂದ್ರಾಂಶುನಿರ್ಮಲಃ ಶ್ರೀಮಾನ್ ಸುಭಗಃ ಕಾಮರೂಪಧೃತ್ ॥ ೨೩ ॥
ಕಲ್ಪಾಯುತಸಹಸ್ರಂ ತು ಶಿವಲೋಕೇ ಮಹೀಯತೇ ।
ಕೃತ್ವಾ ಪ್ರದಕ್ಷಿಣಂ ಭಕ್ತ್ಯಾ ಶಿವಸ್ಯಾಯತನಂ ನರಃ । ॥ ೨೪ ॥

ಅಶ್ವಮೇಧಸಹಸ್ರಸ್ಯ ಫಲಮಾಪ್ನೋತಿ ನಾರದ
ಕೂಪಾರಾಮಪ್ರಪಾದ್ಯೈಸ್ತು ಶಿವಾಯತನಕರ್ಮಣಿ ॥ ೨೫ ॥
ಉಪಯುಕ್ತಾನಿ ಭೂತಾನಿ ಖನನೋತ್ಪಾತನಾದಿಷು ।

---

೨೧. ಎಲೈ ನಾರದನೇ, ಶಿವರಾತ್ರಿಯಲ್ಲಿ ಯಾವನು ದೀಪವನ್ನು ತಲೆಯಲ್ಲಿ. ಹಣೆಯಲ್ಲಿ ಕೈಗಳಲ್ಲಿ ಧರಿಸಿ ನಿಂತು, ಶಂಕರನನ್ನು ಸೇವಿಸುವನೋ ಅವನು ಸಮಸ್ತ ಇಷ್ಟಾರ್ಥಗಳಿಂದ ಕೂಡಿ, ಅನೇಕಸೂರ್ಯಪ್ರಕಾಶಮಾನವಾದ ವಿಮಾನಗಳಲ್ಲಿ ಕುಳಿತು, ನೂರುಕೋಟಿ ಕಲ್ಪಗಳ ಪರ್ಯಂತ ಶಿವಲೋಕದಲ್ಲಿ ವಾಸಮಾಡುತ್ತಾನೆ.

೨೩. ಯಾವನು ಈಶ್ವರನ ಮುಂಭಾಗದಲ್ಲಿ ಸ್ವಚ್ಛವಾದ ಕನ್ನಡಿಯನ್ನು ಇಡುವನೋ, ಅವನು ಚಂದ್ರಕಿರಣಗಳಂತೆ ಸ್ವಚ್ಛನಾಗಿ, ಸಂಪದ್ಯುಕ್ತನಾಗಿ ಸ್ವೇಚ್ಛಾ ರೂಪಗಳಿಂದ ಸಂಚರಿಸುತ್ತಾ, ಸಾವಿರಾರು ಕಲ್ಪಗಳು ಶಿವಲೋಕದಲ್ಲಿ ವಾಸಿಸುತ್ತಾನೆ.

೨೪. ಎಲೈ ನಾರದನೇ, ಯಾವನು ಭಕ್ತಿಯಿಂದ ಈಶ್ವರನ ದೇವಾಲಯವನ್ನು ಪ್ರದಕ್ಷಿಣೆಮಾಡುತ್ತಾನೋ, ಆತನು ಸಾವಿರ ಅಶ್ವಮೇಧಯಾಗಗಳ ಫಲವನ್ನು ಪಡೆಯುತ್ತಾನೆ.

೨೫-೨೯. ಈಶ್ವರನ ದೇವಾಲಯಕ್ಕೆ ಸಂಬಂಧಿಸಿದ ಬಾವಿ, ತೋಟ. ಅರವಟ್ಟಿಗೆ ಇವುಗಳನ್ನು ನಿರ್ಮಿಸುವ ಕಾರ್ಯಗಳಲ್ಲಿ ತೊಡಗಿದ, ಜೀವಿಗಳೂ, ಅವುಗಳಿಗೆ

---

‡ 'ಸರ್ವರಾತ್ರ್ಯಾಂ' ಎಂಬ ಪಾಠಾಂತರವಿದೆ.

ಕಾಮತೋऽಕಾಮತೋ ವಾऽಪಿ ಸ್ಥಾವರಾಣಿ ಚರಾಣಿ ಚ ॥ ೭೬ ॥
ಶಿವಂ ಯಾಂತಿ ನ ಸಂದೇಹಃ ಪ್ರಸಾದಾತ್ ಪರಮೇಷ್ಠಿನಃ ।

ಕ್ರೋಶಮಾತ್ರಂ ಶಿವಕ್ಷೇತ್ರಂ ಸಮಂತಾತ್ ಪರಮೇಷ್ಠಿನಃ ॥ ೭೭ ॥
ದೇಹಿನಾಂ ತತ್ರ ಪಂಚತ್ವಂ ಶಿವಸಾಯುಜ್ಯಕಾರಣಂ ।

ಮನುಷ್ಯಸ್ಥಾಪಿತೇ ಲಿಂಗೇ ಕ್ಷೇತ್ರಮಾನಮಿದಂ ಸ್ಮೃತಂ ॥ ೭೮ ॥
ಸ್ವಯಂಭುವೇ ಯೋಜನಂ ಸ್ಯಾದಾರ್ಷೇ ಚೈವ ತದರ್ಧಕಂ ।
ಪಾಪಾಚಾರೋऽಪಿ ಯಸ್ತತ್ರ ಪಂಚತ್ವಂ ಯಾತಿ ನಾರದ ॥ ೭೯ ॥

ಸೋऽಪಿ ಯಾತಿ ಶಿವಸ್ಥಾನಂ ಯದ್ದೇವೈರಪಿ ದುರ್ಲಭಂ ।
ತಸ್ಮಾತ್ಸರ್ವಪ್ರಯತ್ನೇನ ತತ್ರ ಸ್ನಾನಾದಿಕಂ ಚರೇತ್ ॥ ೮೦ ॥

ಸಂಬಂಧಪಟ್ಟ ಅಚರವಾದ ಶಿಲಾದಿವಸ್ತುಗಳೂ,ಸಹಶಿವಸಾನ್ನಿಧ್ಯವನ್ನು ಪಡೆಯುವುವು. ತನ್ನ ಇಷ್ಟದಿಂದಾಗಲಿ, ಪರಪ್ರೇರಣೆಯಿಂದಾಗಲಿ, ಇಷ್ಟವಿಲ್ಲದೆಯಾಗಲಿ ಆ ಶಿವಾಲಯ ಕಾರ್ಯಗಳಿಗೆ ನೆರವಾದ ಚರಾಚರ ವಸ್ತುಗಳೆಲ್ಲಾ ಮೋಕ್ಷವನ್ನು ಪಡೆಯುವುವು. ಈಶ್ವರಲಿಂಗದ ಸುತ್ತಲೂ ಇರುವ ಒಂದು ಮೈಲಿ ಪ್ರದೇಶವೆಲ್ಲಾ ಶಿವಕ್ಷೇತ್ರವೇ. ಅಲ್ಲಿ ಪ್ರಾಣಿಗಳಿಗೆ ಒದಗುವ ಮರಣವು ಶಿವಸಾಯುಜ್ಯಕ್ಕೆ ಕಾರಣವಾಗುತ್ತದೆ. ಮನುಷ್ಯರಿಂದ ಪ್ರತಿಷ್ಠಿತವಾದ ಲಿಂಗದ ಕ್ಷೇತ್ರಮಾನವು ಈ ರೀತಿಯಾಗಿರುತ್ತದೆ. ಸ್ವಯಂ ಉದ್ಭವವಾದ ಲಿಂಗದ ಸುತ್ತ ಇರುವ ಒಂದು ಯೋಜನವು ಶಿವಕ್ಷೇತ್ರವೆನಿಸುವುದು. ಋಷಿಪ್ರತಿಷ್ಠಿತವಾದ ಲಿಂಗದ ಸುತ್ತಲೂ ಅರ್ಧಯೋಜನದಷ್ಟು ಸ್ಥಳವು,ಪವಿತ್ರ ಕ್ಷೇತ್ರವಾಗುವುದು. ಈ ಕ್ಷೇತ್ರಸ್ಥಳದಲ್ಲಿ ಎಂತಹ ಪಾಪಿಯು ಮೃತನಾದರೂ ಅವನಿಗೆ ಶಿವಸಾನ್ನಿಧ್ಯವು ಸಿಕ್ಕುವುದು.

೮೦-೮೨. ಅವನು ದೇವತೆಗಳಿಗೂ ದುರ್ಲಭವಾದ ಈಶ್ವರನ ಸ್ಥಾನವನ್ನು ಹೊಂದುತ್ತಾನೆ. ಆದುದರಿಂದ ಸಮಸ್ತ ಪ್ರಯತ್ನದಿಂದಲೂ ಅಲ್ಲಿ ಸ್ನಾನಾದಿಗಳನ್ನು ಮಾಡಬೇಕು. ಅಲ್ಲದೆ ಶಿವಕ್ಷೇತ್ರಸಮೀಪದಲ್ಲಿಯೇ ಮನೆಯನ್ನು ಮಾಡಿಕೊಳ್ಳುವುದು ಒಳ್ಳೆಯದು. ಈಶ್ವರ ಲಿಂಗದ ಸಮೀಪದಲ್ಲಿ ಈಶ್ವರನ ಮುಂದಿರುವ ನೀರನ್ನು

ಸೋಽಪಿ ಯಾತಿ ಶಿವಸ್ಥಾನಂ ಯದ್ದೇವೈರಪಿ ದುರ್ಲಭಂ ।

ತಸ್ಮಾದಾವಸಥಂ ಕುರ್ಯಾಚ್ಛಿವಕ್ಷೇತ್ರಸಮೀಪತಃ ।
ಶಿವಲಿಂಗಸಮೀಪಸ್ಥಂ ಯತ್ತೋಯಂ ಪುರತಃ ಸ್ಥಿತಂ ॥ ೮೧ ॥

ಶಿವಗಂಗೇತಿ ಸಂಜ್ಞೇಯಂ ತತ್ರ ಸ್ನಾನಾದಿನಾ ವ್ರಜೇತ್ ।
ಯಃ ಕುರ್ಯಾದ್ದೀರ್ಘಿಕಾಂ ವಾಽಪಿ ಕೂಪಂ ವಾಽಪಿ ಶಿವಾಶ್ರಮೇ ।
ತ್ರಿಃಸಪ್ತಕುಲಸಂಯುಕ್ತಃ ಶಿವಲೋಕೇ ಮಹೀಯತೇ ॥ ೮೨ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಪಂಚಾಕ್ಷರ ಮಂತ್ರಪ್ರಭಾವಾದಿ ಕಥನಂ ನಾಮ ಷಂಚಷಷ್ಟಿತಮೋಽಧ್ಯಾಯಃ.

ಶಿವಗಂಗೆಯೆಂಬುದಾಗಿ ಹೇಳುವರು. ಆದುದರಿಂದ ಅಲ್ಲಿ ಸ್ನಾನಾದಿಗಳನ್ನು ಮಾಡಬೇಕು. ಯಾವನು ಶಿವಾಶ್ರಯದಲ್ಲಿ ತಟಾಕ, ಬಾವಿ ಮೊದಲಾದುವುಗಳನ್ನು ಮಾಡಿಸುವನೋ, ಅವನು ಹತ್ತು ತಲೆಯಿಂದ ಬಂದ ಪಿತೃಗಳೊಡನೆ ಈಶ್ವರಲೋಕದಲ್ಲಿ ವಾಸಮಾಡುವವನಾಗುವನು.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ, ಸೌರಪುರಾಣದಲ್ಲಿ ಸೂತಶೌನಕ ಸಂವಾದ ರೂಪವಾಗಿ ಶಿವಪಂಚಾಕ್ಷರೀಮಂತ್ರಮಹಿಮೆಯನ್ನು ವಿವರಿಸುವ ಅರುವತ್ತೈದನೆಯ ಅಧ್ಯಾಯವು ಮುಗಿದುದು.

|| ॐ: ||

ಶ್ರೀ ಶಿವಾಯನಮಃ

ಅಥ ಶ್ರೀ ಸೌರಪುರಾಣೇ ಷಟ್‌ಷಷ್ಟಿತಮೋಽಧ್ಯಾಯಃ.

|| ಬ್ರಹ್ಮೋವಾಚ ||

ಪುಷ್ಪಂ ವಾ ಯದಿ ವಾ ಪತ್ರಂ ಸಕೃಲ್ಲಿಂಗೇ ಸಮರ್ಪಿತಂ ।
ತದನಂತಫಲಂ ಪ್ರೋಕ್ತಂ ಹೇತುರ್ಭವತಿ ಮುಕ್ತಯೇ || ೧ ||

ತುಷ್ಟೇ ಶಿವೇ ಪದಾರ್ಥಃ ಕೋ ದುರ್ಲಭೋ ಹ ನೃಣಾಂ ಪ್ರಭೋ ।
ತಸ್ಮಾತ್ಸರ್ವಪ್ರಯತ್ನೇನ ಶಿವಪ್ರೀತ್ಯರ್ಥಮಾಚರೇತ್ || ೨ ||

ಯಾವದ್ದಾತುಂ ಶಿವಃ ಶಕ್ತಸ್ತಾವಚ್ಚಿಂತಯಿತುಂ ಪ್ರಭುಃ ।
ತತ್ಸರ್ವಂ ನ ನರಃ ಸೌಖ್ಯಂ ಶಿವಪ್ರೀತ್ಯರ್ಥಮಾಚರೇತ್ || ೩ ||

ಅರುವತ್ತಾರನೆಯ ಅಧ್ಯಾಯ.

೧. ಮತ್ತೆ ಬ್ರಹ್ಮನು ಶಿವಪೂಜಾಫಲವನ್ನು ವಿವರಿಸಲಾರಂಭಿಸಿದನು. ಶಿವಲಿಂಗವನ್ನು ಒಂದು ಸಾರಿ ಭಕ್ತಿಯಿಂದ ಪುಷ್ಪದಿಂದಾಗಲಿ ಪತ್ರೆಯಿಂದಾಗಲಿ ಪೂಜಿಸಿದರೆ ಆ ಪೂಜಕರಿಗೆ ಅನಂತ ಪುಣ್ಯವು ಲಭಿಸುವುದು. ಅಲ್ಲದೆ ಅದೇ ಮುಕ್ತಿಗೆ ಸಾಧಕವಾಗುವುದು.

೨. ಈಶ್ವರನು ತೃಪ್ತನಾದರೆ ಮನುಷ್ಯರಿಗೆ ಕಷ್ಟಸಾಧ್ಯವಾದ ಪದಾರ್ಥಗಳಿರುವುದಿಲ್ಲ. ಆದುದರಿಂದ ಸರ್ವ ಪ್ರಯತ್ನದಿಂದಲೂ ಈಶ್ವರನ ಪ್ರೀತ್ಯರ್ಥವಾಗಿ ಪ್ರಯತ್ನಿಸಬೇಕು.

೩. ಶಂಕರನು ತುಷ್ಟನಾಗಿ ಭಕ್ತರಿಗೆ ವರಗಳನ್ನು ಕೊಡಲು ಪ್ರಾರಂಭಿಸಿದರೆ, ವರಗಳನ್ನು ಕೇಳುವುದೇ ಕಷ್ಟವಾದೀತು. ಸರ್ವ ಸೌಖ್ಯವನ್ನು ಹೊಂದಲು ಮೊದಲು ಶಂಕರನ ಪ್ರೀತಿಯನ್ನು ಸಂಪಾದಿಸಬೇಕು.

ಋದ್ಧಿಸಿದ್ಧೀ ನ ದೂರಸ್ಥೇ ಶಿವಪ್ರೀತ್ಯರ್ಥಕರ್ಮಣಾಂ ।
ನರಾಣಾಂ ನರನಾಥೇ ಕಿಂ ಪ್ರೀತೇ ತು ದುರ್ಲಭಂ ಭವೇತ್ ॥ ೪ ॥

ವಿಶ್ವೇಶ್ವರಂ ಸದಾ ಪ್ರೇಮ್ಣಾ ಯೇ ಭಜಂತಿ ನರೋತ್ತಮಾಃ ।
ಇಹ ಸೌಖ್ಯಂ ಚಿರಂ ಭುಕ್ತ್ವಾ ಹ್ಯಂತೇ ಮೋಕ್ಷಮವಾಪ್ನುಯುಃ ॥ ೫ ॥

ಶ್ರೀಶಂಭುನಾಥಂ ಭುವಿ ಮಾನವಾ ಯೇ ಭಜಂತಿ ಭಕ್ತ್ಯಾ ನರಲೋಕ ವಂದ್ಯಾಃ ।
ಭವಂತಿ ತೇ ಹಾಟಕಪೂರ್ಣಗೇಹಾ ದೇಹಾವಸಾನೇ ಶಿವಲೋಕಭಾಜಃ ॥

ಬ್ರಹ್ಮಹಾ ವಾ ಸುರಾಪೋ ವಾ ಸ್ತೇಯೀ ವಾ ಗುರುತಲ್ಪಗಃ ।
ಯೋಂತಕಾಲೇ ಶಿವಂ ಸ್ಮರ್ಯಾಚ್ಛಿವಸಾಯುಜ್ಯಮಾಪ್ನುಯಾತ್ ॥ ೭ ॥

---

೪. ಈಶ್ವರನಿಗೆ ಪ್ರೀತಿಯನ್ನುಂಟುಮಾಡುವ ಕಾರ್ಯಗಳಿಗೆ, ಸಂಪತ್ತುಗಳೂ, ಸಿದ್ಧಿಗಳು ಬಹಳ ಹತ್ತಿರದಲ್ಲಿರುವುವು. ಮನುಷ್ಯರೆಲ್ಲರಿಗೂ ಒಡೆಯನಾದ ಈಶ್ವರನು ತೃಪ್ತಿಪಟ್ಟರೆ, ಮನುಷ್ಯರಿಗೆ ಯಾವುದು ತಾನೆ ದುರ್ಲಭವು?

೫. ಪ್ರಪಂಚಕ್ಕೆ ಅಧಿಪತಿಯಾದ ಮಹೇಶ್ವರನನ್ನು ಪ್ರೀತಿಯಿಂದ ಯಾವಾಗಲೂ ಯಾವ ಪುರುಷೋತ್ತಮರು ಸೇವಿಸುತ್ತಾರೆಯೋ, ಅವರು ಈ ಲೋಕದಲ್ಲಿ ಬಹಳ ಕಾಲ ಸೌಖ್ಯವನ್ನು ಅನುಭವಿಸಿ, ಕೊನೆಯಲ್ಲಿ ಮೋಕ್ಷವನ್ನು ಹೊಂದುವರು.

೬. ಶ್ರೀಮಹೇಶ್ವರನನ್ನು ಭೂಲೋಕದಲ್ಲಿ ಯಾರು ಭಕ್ತಿಯಿಂದ ಸೇವಿಸುತ್ತಾರೆಯೋ, ಅವರು ಎಲ್ಲರಿಂದಲೂ ಪೂಜಿಸಲ್ಪಡುತ್ತಾರೆ. ಐಹಿಕದಲ್ಲಿ ಚಿನ್ನದಿಂದ ತುಂಬಿದ ಮನೆಯುಳ್ಳವರಾಗಿ ಸುಖದಿಂದಿದ್ದು, ಕೊನೆಯಲ್ಲಿ ಶಿವಲೋಕವನ್ನು ಪಡೆಯುತ್ತಾರೆ

೭. ಬ್ರಹ್ಮಹತ್ಯೆಯನ್ನು ಮಾಡಿದವನಾಗಲಿ, ಸುರಾಪಾನವನ್ನು ಮಾಡಿದವನಾಗಲಿ, ಕಳ್ಳನಾಗಲಿ, ಗುರುಪತ್ನೀಗಾಮಿಯಾಗಲಿ, ಮರಣಕಾಲದಲ್ಲಿ ಶಿವನನ್ನು ಸ್ಮರಿಸಿದ್ದೇ ಆದರೆ, ಅವರು ಶಿವಲೋಕವನ್ನು ಹೊಂದುವರು.

ನಿರ್ಮಾಲ್ಯಂ ಧಾರಯೇದ್ಭಕ್ತ್ಯಾ ಶಿರಸಾ ಪಾರ್ವತೀಪತೇಃ ।
ರಾಜಸೂಯಸ್ಯ ಯಜ್ಞಸ್ಯ ಫಲಮಾಪ್ನೋತ್ಯನುತ್ತಮಂ ॥ ೮ ॥

ಶಿರಸಾ ಶಿವನಿರ್ಮಾಲ್ಯಂ ಭಕ್ತ್ಯಾ ಯೋ ಧಾರಯಿಷ್ಯತಿ ।
ಅಶುಚಿರ್ಭಿನ್ನಮರ್ಯಾದಃ ಸರ್ವಾವಸ್ಥಾಂಗತೋಽಪಿ ವಾ ॥ ೯ ॥

ಸ್ವೈರೀ ಚೈವಾ ಪ್ರಯುಕ್ತಾತ್ಮಾ ನಿಯಮೈಶ್ಚ ಬಹಿಷ್ಕೃತಃ ।
ತಸ್ಯ ಪಾಪಾನಿ ನಶ್ಯಂತಿ ನಾತ್ರ ಕಾರ್ಯಾ ವಿಚಾರಣಾ ॥ ೧೦ ॥

ಮೋಹಾನ್ನ ಧಾರಯೇತ್ ಶಂಭೋರ್ನಿರ್ಮಾಲ್ಯಂ ನ ಚ ಭಕ್ಷಯೇತ್ ।
ನ ಸ್ಪೃಶೇದಪಿ ಪಾದೇನ ಲಂಘಯೇನ್ನಾಪಿ ನಾರದ ॥ ೧೧ ॥

ನಿರ್ಮಾಲ್ಯಲಂಘನಾಚ್ಛಂಭೋಶ್ಚಾಂಡಾಲಃ ಸೋಽಭಿಜಾಯತೇ ।
ಪೃಥೂದಕಂ ಮಹತ್ತೀರ್ಥಂ ಗಂಗಾ ಚ ಯಮುನಾ ತಥಾ ॥ ೧೨ ॥

---

೮. ಪಾರ್ವತೀಪತಿಯ ನಿರ್ಮಾಲ್ಯವನ್ನು ಭಕ್ತಿಯಿಂದ ಯಾವನು ತಲೆಯಲ್ಲಿ ಧರಿಸುತ್ತಾನೋ, ಅವನು ಅತ್ಯುತ್ತಮವಾದ ರಾಜಸೂಯಯಾಗದ ಫಲವನ್ನು ಹೊಂದುತ್ತಾನೆ.

೯-೧೦. ಈಶ್ವರನ ನಿರ್ಮಾಲ್ಯವನ್ನು ಯಾವನು ಭಕ್ತಿಯಿಂದ ತಲೆಯಲ್ಲಿ ಧರಿಸುತ್ತಾನೆಯೋ ಅವನು ಅಶುಚಿಯಿಂದ ಕೂಡಿದ್ದರೂ, ಮರ್ಯಾದೆ ಬಿಟ್ಟವನಾದರೂ ಯಾವ ಅವಸ್ಥೆಯನ್ನು ಹೊಂದಿದವನಾದರೂ, ಯಥೇಷ್ಟಚಾರಿಯಾಗಲೀ, ಆತ್ಮಜ್ಞಾನವನ್ನರಿಯದವನಾಗಲೀ ನಿಯಮಗಳನ್ನು ಬಿಟ್ಟವನಾಗಲಿ ಅಂಥವನ ಪಾಪಗಳೆಲ್ಲವೂ ನಾಶವಾಗುತ್ತವೆ. ಈ ವಿಷಯದಲ್ಲಿ ವಿಚಾರಣೆಯೇ ಇರುವುದಿಲ್ಲ.

೧೧. ಭಕ್ತಿಯಿಲ್ಲದೆ ಈಶ್ವರನ ನಿರ್ಮಾಲ್ಯವನ್ನು ಧರಿಸಬಾರದು. ಭಕ್ತಿಶೂನ್ಯನಾಗಿ ನಿರ್ಮಾಲ್ಯವನ್ನೂ ಭಕ್ಷಿಸಬಾರದು. ಪ್ರಸಾದವನ್ನು ಕಾಲಿನಿಂದ ಮುಟ್ಟಬಾರದು. ಕಾಲಿನಿಂದ ದಾಟಲೂಬಾರದು.

೧೨-೧೩. ಎಲೈ ನಾರದನೇ, ಈಶ್ವರನ ನಿರ್ಮಾಲ್ಯವನ್ನು ದಾಟಿದವನು ಚಂಡಾಲನಾಗಿ ಹುಟ್ಟುತ್ತಾನೆ. ಶಂಕರನ ಸ್ನಾನತೀರ್ಥದಲ್ಲಿ ಯಾವಾಗಲೂ ಮಹಾ

ನರ್ಮದಾ ಸರಯೂ ಕ್ಷಿಪ್ರಾ ತಥಾ ಗೋದಾವರೀ ನದೀ ।
ಸದಾ ಸಂನಿಹಿತಾಸ್ತ್ವೇವಂ ಶಂಭೋಃ ಸ್ನಾನೋದಕೈರ್ನನೇ ॥ ೧೩ ॥

ಶಂಭೋಃ ಸ್ನಾನೋದಕಂ ಸೇವ್ಯಂ ಸರ್ವತೀರ್ಥಮಯಂ ಹಿ ತತ್ ।
ಧಾರಣಾತ್ಪಾಪಸಂಘಾತೈಸ್ತತ್ಕ್ಷಣಾದೇವ ಮುಚ್ಯತೇ ॥ ೧೪ ॥

ಲಿಂಗೇ ಸ್ವಾಯಂಭುವೇ ಬಾಣೇ ರತ್ನಜೇ ರಸನಿರ್ಮಿತೇ ।
ಸಿದ್ಧಪ್ರತಿಷ್ಠಿತೇ ಲಿಂಗೇ ನ ಚಂಡೋಽಧಿಕೃತೋ ಭವೇತ್ ॥ ೧೫ ॥

ಪಾದೋದಕಂ ಚ ನಿರ್ಮಾಲ್ಯಂ ಭಕ್ತೈರ್ಧಾರ್ಯಂ ಪ್ರಯತ್ನತಃ ।
ನ ತಾನ್ ಸ್ಪೃಶಂತಿ ಪಾಪಾನಿ ಮನೋವಾಕ್ಕಾಯಜಾನ್ಯಪಿ ॥ ೧೬ ॥

॥ ನಾರದ ಉವಾಚ ॥

ಕಿಂ ಲಿಂಗಂ ಪ್ರೋಚ್ಯತೇ ತಾತ ಕೇನ ವಾ ತದಧಿಷ್ಠಿತಂ
ಭಗವನ್ ಬ್ರೂಹಿ ಮೇ ಸರ್ವಮಾಶ್ಚರ್ಯಂ ಹ್ಯೇತದುತ್ತಮಂ ॥ ೧೭ ॥

ತೀರ್ಥಗಳೂ ಗಂಗಾ, ಮತ್ತು ಯಮುನಾನದಿಗಳೂ, ಹಾಗೆಯೇ ನರ್ಮದಾ, ಸರಯೂ, ಕ್ಷಿಪ್ರಾ, ಗೋದಾವರೀ ನದಿಗಳೂ, ಯಾವಾಗಲೂ ಸನ್ನಿಹಿತವಾಗಿರುತ್ತವೆ.

೧೪. ಸರ್ವತೀರ್ಥರೂಪವಾದ ಈಶ್ವರನ ಸ್ನಾನೋದಕವನ್ನು ಸೇವಿಸಬೇಕು. ಸ್ನಾನೋದಕವನ್ನು ಧರಿಸುವುದರಿಂದ ಅನೇಕ ಪಾಪಗಳೂ ನಿವೃತ್ತಿಯಾಗಿ ಕೂಡಲೇ ಮುಕ್ತನಾಗುತ್ತಾನೆ.

೧೫-೧೬. ಉದ್ಭವಲಿಂಗದಲ್ಲಿಯೂ ಬಾಣನಿರ್ಮಿತವಾದ ಬಾಣಲಿಂಗದಲ್ಲಿಯೂ, ರತ್ನಲಿಂಗದಲ್ಲಿಯೂ, ರಸನಿರ್ಮಿತವಾದುದರಲ್ಲಿಯೂ, ಸಿದ್ಧರಿಂದ ಸ್ಥಾಪಿತವಾದ ಲಿಂಗದಲ್ಲಿಯೂ, ಪಾಪಿಯಾದವನು ಅಧಿಕಾರಿಯಾಗಲಾರನು. ಶಿವಭಕ್ತರು ಈಶ್ವರನ ಪಾದೋದಕವನ್ನೂ, ನಿರ್ಮಾಲ್ಯವನ್ನೂ ಪ್ರಯತ್ನಪಟ್ಟು ಧರಿಸಬೇಕು. ಮನಸ್ಸು, ವಾಕ್, ಶರೀರ, ಇವುಗಳಿಂದ ಉಂಟಾದ ಪಾಪಗಳು ಅಂತಹವರನ್ನು ಮುಟ್ಟುವುದಿಲ್ಲ.'' ಎಂದು ಬ್ರಹ್ಮನು ಹೇಳಲು,

೧೭. ಅದಕ್ಕೆ ನಾರದನು ಮತ್ತೆ, ಯಾವುದನ್ನು ಲಿಂಗವೆನ್ನುವರು ? ಯಾರು ಅದನ್ನು ಸ್ಥಾಪಿಸಿದವರು ? ಅದರಲ್ಲಿ ಅಧಿಷ್ಠಾತೃವಾಗಿರುವವನು ಯಾರು ? ಎಲೈ ಭಗವಂತನೇ, ಎಲ್ಲರಿಗೂ ಆಶ್ಚರ್ಯಕರವಾದ ಮತ್ತು ಉತ್ತಮವಾದ ಈ ವಿಷಯವನ್ನು ನನಗೆ ಹೇಳು ಎಂದು ಕೇಳಿಕೊಂಡನು.

॥ ಬ್ರಹ್ಮೋವಾಚ ॥

ಅವ್ಯಕ್ತಂ ಲಿಂಗಮಿತ್ಯುಕ್ತಂ ಆನಂದಂ ತಮಸಃ ಪರಂ ।
ಮಹಾದೇವಸ್ಯ ಯತ್ತೇನ ಲಿಂಗೀಸ್ಯಾತ್ತೇನ ಶಂಕರಃ ॥ ೧೮ ॥

ಏಕಾರ್ಣವೇ ಪುರಾ ಘೋರೇ ನಷ್ಟೇ ಸ್ಥಾವರಜಂಗಮೇ ।
ಮಮ ವಿಷ್ಣೋಃ ಪ್ರಬೋಧಾರ್ಥಮಾವಿರ್ಭೂತಂ ಶಿವಾತ್ಮಕಂ ॥ ೧೯ ॥

ತದಾ ಪ್ರಭೃತ್ಯಹಂ ವಿಷ್ಣುರ್ಭಕ್ತ್ಯಾ ಪರಮಯಾ ಮುದಾ ।
ಲಿಂಗಮೂರ್ತಿಧರಂ ಶಾಂತಂ ಪೂಜಯಾವೋ ವೃಷಧ್ವಜಂ ॥ ೨೦ ॥

॥ ನಾರದ ಉವಾಚ ॥

ಲಿಂಗಂ ಕಥಮಭೂತ್ಪೂರ್ವಮಾನಂದಮಜರಂ ಧ್ರುವಂ ।
ಪ್ರಬೋಧಾರ್ಥಂ ಚ ಯುವಯೋರ್ವಕ್ತುಮರ್ಹಸಿ ಪದ್ಮಜ ॥ ೨೧ ॥

॥ ಬ್ರಹ್ಮೋವಾಚ ॥

ಆಸೀದೇಕಾರ್ಣವೇ ಘೋರೇ ನಿರ್ವಿಭಾಗೇ ತಮೋಮಯೇ ।

೧೮-೨೦. ಅಜ್ಞಾನವನ್ನು ಹೋಗಲಾಡಿಸಿ ಉತ್ತಮವಾದ ಆನಂದಸ್ವರೂಪದಿಂದಿರುವ ಮಹಾದೇವನ ಅವ್ಯಕ್ತಾಂಶವನ್ನೇ ಲಿಂಗವೆನ್ನುವರು. ಇದರಿಂದಲೇ ಶಂಕರನು ಲಿಂಗಿಯೆನಿಸಿಕೊಂಡಿರುವನು. ಸ್ಥಾವರಜಂಗಮಪ್ರಾಣಿಗಳೆಲ್ಲವೂ ನಷ್ಟವಾಗಿ ಜಗತ್ತು, ಎಲ್ಲೆಲ್ಲಿಯೂ ಸಮುದ್ರರೂಪವಾಗಲು ನನ್ನ ಮತ್ತು ವಿಷ್ಣುವಿನ ಎಚ್ಚರಿಕೆಗೋಸ್ಕರ ಶಿವಾತ್ಮಕಲಿಂಗವು ಉತ್ಪತ್ತಿಯಾಯಿತು. ಅದು ಮೊದಲುಗೊಂಡು ನಾನು ಮತ್ತು ವಿಷ್ಣುವು ಬಹಳ ಸಂತೋಷಗೊಂಡು ಭಕ್ತಿಯಿಂದ ಲಿಂಗಾಕಾರವನ್ನು ಧರಿಸಿರುವ ವೃಷಧ್ವಜವುಳ್ಳ ಶಾಂತಸ್ವರೂಪನನ್ನು ಪೂಜಿಸುತ್ತಿರುವೆವು, ಎಂದು ಬ್ರಹ್ಮನು ಹೇಳಿದನು.

೨೧. ಎಲೈ ಪದ್ಮಸಂಭವನೇ, ಪೂರ್ವದಲ್ಲಿ ಆನಂದಮಯವೂ, ನಾಶರಹಿತವೂ ಆದ ಲಿಂಗವು ಹೇಗೆ ಉಂಟಾಯಿತು? ನಿಮ್ಮನ್ನು ಎಚ್ಚರಗೊಳಿಸಲು ಅದು ಸಮರ್ಥವಾದುದು ಹೇಗೆ? ಎಂಬುದನ್ನು ನೀನು ಈಗ ವಿವರಿಸಬೇಕು. ಎಂದು ನಾರದನು ಕೇಳಿಕೊಂಡನು.

೨೨. ಆಗ ಬ್ರಹ್ಮನು ಲಿಂಗೋತ್ಪತ್ತಿಯ ವಿಷಯವನ್ನು ಹೇಳುತ್ತಾ " ಹಿಂದೆ

ಶೇತೇ ಚ ಭಗವಾನ್ ವಿಷ್ಣುಸ್ತಪ್ತಜಾಂಬೂನದಪ್ರಭಃ ॥ ೨೨ ॥

ತತ್ಸಮೀಪಮಹಂ ಗತ್ವಾ ಸಂರಂಭಾದಿದಮುಕ್ತವಾನ್ ।
ಕಸ್ತ್ವಂ ಕಿಮರ್ಥಂ ವಾ ಶೇಷೇ ಶೀಘ್ರಮುತ್ತಿಷ್ಠ ದುರ್ಮತೇ ॥ ೨೩ ॥

ಕುರು ಯುದ್ಧಂ ಮಯಾ ಸಾರ್ಧಮಹಮೇವ ಜಗತ್ಪತಿಃ ।
ಅಥವಾ ಭಜ ಮಾಂ ದೇವಂ ತ್ರೈಲೋಕ್ಯಸ್ಯಾಭಯಪ್ರದಂ ॥ ೨೪ ॥

ಏವಂ ಮದ್ವಚನಂ ಶ್ರುತ್ವಾ ಪ್ರಹಸನ್ ಮಧುಸೂದನಃ ।
ಮಾಮಬ್ರವೀದಮೇಯಾತ್ಮಾ ಕಥಂ ಗರ್ವಾಯಸೇ ಮುಧಾ ॥ ೨೫ ॥

ಕರ್ತಾಽಹಂ ಸರ್ವಲೋಕಾನಾಂ ಪಾಲಕೋಽಹಂ ನ ಸಂಶಯಃ ।
ಸಂಹರ್ತಾಽಹಂ ಪುನಶ್ಚಾಂತೇ ನಾನ್ಯೋಽಸ್ತಿ ಸದೃಶೋ ಮಯಾ ॥ ೨೬ ॥

ಜಲಪ್ರಲಯವಾಗಿದ್ದ ಕಾಲದಲ್ಲಿ ಮಹಾವಿಷ್ಣುವು, ಸುವರ್ಣಕಾಂತಿವಿಶಿಷ್ಟನಾಗಿ ತಮೋಮಯವಾದ ಜಲರಾಶಿಯಲ್ಲಿ ಮಲಗಿದ್ದನು.

೨೩. ಅಂತಹ ವಿಷ್ಣುವಿನ ಹತ್ತಿರಕ್ಕೆ ನಾನು ಹೋಗಿ ಸಡಗರದಿಂದ ಇದನ್ನು ಕೇಳಿದೆನು. ನೀನು ಯಾರು ? ಏತಕ್ಕೋಸ್ಕರ ಇಲ್ಲಿ ಮಲಗಿರುವೆ ? ಎಲೈ ಮಂದ ಬುದ್ಧಿಯೇ, ಜಾಗ್ರತೆ ಏಳು.

೨೪. ಈಗ ನನ್ನ ಜೊತೆಯಲ್ಲಿ ಯುದ್ಧಮಾಡು. ನಾನೇ ಲೋಕಗಳಿಗೆಲ್ಲಾ ಒಡೆಯನು. ಹಾಗಿಲ್ಲದಿದ್ದರೆ ದೇವದೇವನಾದ ನನ್ನನ್ನು ಸೇವಿಸು. ನಾನು ತ್ರೈಲೋಕ್ಯಕ್ಕೆ ಅಭಯಪ್ರದನು.

೨೫. ಈ ರೀತಿಯಾಗಿ ಹೇಳಲು ವಿಷ್ಣುವು ನನ್ನ ಮಾತನ್ನು ಕೇಳಿ ನಗುತ್ತಾ ನನ್ನನ್ನು ಕುರಿತು ಹೀಗೆ ಹೇಳಿದನು. " ಎಲೈ, ಏತಕ್ಕೋಸ್ಕರ ಅಜ್ಞಾನದಿಂದ ಗರ್ವ ಪಡುತ್ತೀಯೆ?

೨೬. ಸಮಸ್ತ ಲೋಕಗಳಿಗೂ ನಾನು ಕರ್ತನು. ಪಾಲಕನು ನಾನು. ಈ ವಿಷಯದಲ್ಲಿ ಸಂಶಯಪಡಬೇಡ. ಮತ್ತು ಕೊನೆಯಲ್ಲಿ ನಾನೇ ನಾಶಕನಾಗುವೆನು. ನನಗೆ ಸಮನಾದವನು ಇನ್ನೊಬ್ಬನು ಯಾರಿರುವನು ?

ಏವಂ ವಿವಾದೇ ಸಂಜಾತೇ ಮಮ ದೇವೇನ ಶಾರ್ಙ್ಗಿಣಾ ।
ಪ್ರಾದುರ್ಭೂತಂ ತದಾ ಲಿಂಗಂ ಆವಯೋರ್ದರ್ಪಹಾರಿ ತತ್ ॥ ೨೭ ॥

ಕಾಲಾಗ್ನಿ ಪ್ರಯುತಪ್ರಖ್ಯಂ ಜ್ವಾಲಮಾಲಾಸಮಾಕುಲಂ ।
ಆದಿಮಧ್ಯಾಂತರಹಿತಂ ಕ್ಷಯವೃದ್ಧಿವಿವರ್ಜಿತಂ ॥ ೨೮ ॥

ತಸ್ಮಿಲ್ಲಿಂಗೇ ಮಹಾದೇವಃ ಸ್ವಯಂಜ್ಯೋತಿಃ ಸನಾತನಃ ।
ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ॥ ೨೯ ॥

ಅರ್ಧನಾರೀಶ್ವರೋನಂತಸ್ತೇಜೋರಾಶಿರ್ದುರಾಸದಃ ।
ಜ್ಯೇಷ್ಠತ್ವಂ ಯುವಯೋಸ್ತಾವದಾಸ್ತಾಂ ಕಿಂಚಿದ್ಬ್ರವೀಮ್ಯಹಂ ॥ ೩೦ ॥

---

೨೭. ಈ ರೀತಿಯಾಗಿ ಸ್ವಾಮಿಯಾದ ವಿಷ್ಣುವಿಗೂ ನನಗೂ ಜಗಳವುಂಟಾಯಿತು. ಆಗ ನಮ್ಮಿಬ್ಬರ ಗರ್ವವನ್ನು ನಾಶಮಾಡಲು ಒಂದು ಲಿಂಗವು ಆವಿರ್ಭವಿಸಿತು.

೨೮. ಆ ಲಿಂಗವು ಕಾಲಾಗ್ನಿಯಂತೆ ಉರಿಯುತ್ತಿತ್ತು. ಜ್ವಾಲಮಾಲೆಗಳಿಂದ ಕೂಡಿ, ಆದಿ, ಮಧ್ಯ, ಕೊನೆಯಿಲ್ಲದ್ದಾಗಿ, ವೃದ್ಧಿಹ್ರಾಸಗಳಿಲ್ಲದೆ ಶೋಭಿಸುತ್ತಿತ್ತು.

೨೯. ಆ ಲಿಂಗದಲ್ಲಿ ಮಹಾದೇವನು ಸ್ವಯಂಪ್ರಕಾಶಕನಾಗಿದ್ದನು. ಸನಾತನನಾಗಿ, ಸಾವಿರಶಿರಸ್ಸುಳ್ಳವನಾಗಿದ್ದನು. ಸಾವಿರ ಕಣ್ಣುಗಳೂ, ಸಹಸ್ರ ಕಾಲುಗಳೂ ಕಾಣುತ್ತಿದ್ದುವು.

೩೦. ಅರ್ಧನಾರೀಶ್ವರನಾಗಿದ್ದನು. ಅಂತ್ಯವಿಲ್ಲದವನಾಗಿದ್ದನು. ಆದರಿಂದಲೇ ಯಾರಿಗೂ ಸುಲಭಸಾಧ್ಯನಾಗಿರಲಿಲ್ಲ. ಈಶ್ವರನು ಇಬ್ಬರನ್ನೂ ಕುರಿತು ಹೀಗೆ ಹೇಳಿದನು. "ನಿಮ್ಮಿಬ್ಬರ ಹಿರಿಯತನವೂ ಇರಲಿ. ನಾನು ಸ್ವಲ್ಪ ಹೇಳುವೆನು ಕೇಳಿರಿ.

ಮೂಲನಂ ಮಮಾಸ್ಯ ಲಿಂಗಸ್ಯ ಯದಿ ಪಶ್ಯತಿ ಮಾಧವಃ ।
ನೂನಂ ಭವಿಷ್ಯತಿ ಜ್ಯೇಷ್ಠ ಇತಿ ದೇವೇನ ಭಾಷಿತಂ ॥ ೩೦ ॥

ಮೂರ್ಧಾನಮಸ್ಯ ಲಿಂಗಸ್ಯ ಯದಿ ಪಶ್ಯತಿ ಪದ್ಮಜಃ ।
ಭವಿಷ್ಯತಿ ತತೋ ಜ್ಯೇಷ್ಠ ಇತಿ ದೇವೇನ ಭಾಷಿತಂ ॥ ೩೨ ॥

ಏವಂ ಶಂಭೋರ್ನಿಗದಿತಮುರರೀಕೃತ್ಯ ನಾರದ ।
ಗತೋಽಸ್ಮಿ ಮಸ್ತಕಂ ದ್ರಷ್ಟುಂ ತಸ್ಯ ಲಿಂಗಸ್ಯ ಪುತ್ರಕ ॥ ೩೩ ॥

ಆವಯೋರ್ವರ್ಷಸಾಹಸ್ರಂ ಗಚ್ಛತೋರ್ನೋಹಿತಾತ್ಮನೋಃ ।
ಗತಂ ದೇವಋಷೇ ನೂನಂ ವಿಸ್ಮಯಾವಿಷ್ಟಚಿತ್ತಯೋಃ ॥ ೩೪ ॥

ಹರಿರ್ಮೂಲಮದೃಷ್ಟ್ವೈವ ತಂ ದೇವಂ ಪುನರಾಗತಃ ।
ಯಥಾ ಹರಿಸ್ತಥೈವಾಹಮಾಗತೋ ವೈ ಮುನೇ ತದಾ ॥ ೩೫ ॥

೩೧-೩೨. ನನ್ನ ಈ ಲಿಂಗದ ಮೂಲವನ್ನು ವಿಷ್ಣುವು ಕಂಡುಹಿಡಿದದ್ದೇ ಆದರೆ ನಿಶ್ಚಯವಾಗಿಯೂ ಆಗ ವಿಷ್ಣುವು ಹಿರಿಯವನು. ನನ್ನ ಲಿಂಗದ ತುದಿಯ ಭಾಗವನ್ನು ಪದ್ಮಸಂಭವನು ನೋಡಿದ್ದೇ ಆದರೆ ಆಗ ಅವನೇ ಹಿರಿಯವನು, ಎಂಬುದಾಗಿ ಮಹಾದೇವನು ತೀರ್ಮಾನವನ್ನಾಗಿ ಹೇಳಿದನು.

೩೩. ನಾರದನೇ, ಈ ರೀತಿಯಾಗಿ ಶಂಕರನು ಹೇಳಿದಮೇಲೆ, ಅದನ್ನು ಕೇಳಿ, ನಾನು ಶಿವಲಿಂಗದ ಶಿರಸ್ಸನ್ನು ನೋಡಲು ಪ್ರಯಾಣಮಾಡಿದೆನು.

೩೪. ಹಾಗೆಯೇ ವಿಷ್ಣುವೂ ಲಿಂಗಮೂಲದರ್ಶನಾರ್ಥವಾಗಿ ಹೊರಟನು. ಈ ರೀತಿಯಾಗಿ ಅಜ್ಞಾನದಿಂದ ನಾವು ಇಬ್ಬರೂ ಸಾವಿರ ವರುಷ ಪರ್ಯಂತವಾಗಿ ಹುಡುಕಿ, ಕಡೆಗೆ ವಿಸ್ಮಯದಿಂದ ಕೂಡಿದ ಮನಸ್ಸುಳ್ಳವರಾದೆವು.

೩೫-೩೬. ವಿಷ್ಣುವು ಮೂಲವನ್ನು ಹುಡುಕಿದನು. ಅವನಿಗೆ ಸಿಕ್ಕಲಿಲ್ಲ. ಪುನಃ ಹೊರಟ ಸ್ಥಳಕ್ಕೆ ಬಂದನು. ಹೇಗೆ ಹರಿಯು ಬಂದನೋ, ಹಾಗೆಯೇ

ತಮೇವ ಶರಣಂ ಗತ್ವಾ ಸಂಸ್ತೂಯ ವಿವಿಧೈಸ್ತವೈಃ ।
ಪ್ರೀತೋ ಭೂತ್ವಾ ಮಹಾದೇವೋ ವಾಕ್ಯಮೇತದುವಾಚ ಹ ॥ ೩೬ ॥

॥ ಈಶ್ವರ ಉವಾಚ ॥

ಮತ್ಪ್ರಸಾದೇನ ಸರ್ವಸ್ಮಾದಧಿಕೋ ಭವ ಮಾಧವ ।
ಮದ್ಭಕ್ತಾನಾಂ ತ್ವಮೇವಾಗ್ರ್ಯಃ ಪೂಜ್ಯೋ ಮಾನ್ಯಸ್ತ್ವಮೇವ ಹಿ ॥ ೩೭ ॥

ಲಿಂಗೇ ಮಾಂ ಪೂಜಯ ಹರೇ ಲಿಂಗಮೂರ್ತಿಧರೋಹ್ಯಹಂ ।
ಅತ ಊರ್ಧ್ವಂ ನ ಸಂದೇಹಃ ಸರ್ವೇ ಚಾನ್ಯೇ ದಿವೌಕಸಃ ॥ ೩೮ ॥

ಲಿಂಗಾರಾಧನತಃ ಕ್ಷಿಪ್ರಂ ಅಜ್ಞಾನಂ ನಾಶಯಾಮ್ಯಹಂ ।
ಲಿಂಗಾರ್ಚನರತಾನಾಂ ಚ ನಾಸ್ತಿ ಸಂಸಾರಜಂ ಭಯಂ ॥ ೩೯ ॥

ನಾನೂ ವಿಫಲವಾಗಿ ಬಂದೆನು. ಕೊನೆಗೆ ಅವನನ್ನೇ ಮೊರೆಹೊಕ್ಕೆವು. ಅನೇಕ ಸ್ತೋತ್ರಗಳಿಂದ ಸ್ತುತಿಸಿದೆವು. ಅದರಿಂದ ಮಹಾದೇವನು ಸಂತುಷ್ಟನಾಗಿ ನಮ್ಮೊಡನೆ ಹೀಗೆ ಹೇಳಿದನು.

೩೭. "ಎಲೈ ವಿಷ್ಣುವೇ, ನನ್ನ ಅನುಗ್ರಹದಿಂದ ನೀನು ಈಗ ಎಲ್ಲರಿಗಿಂತಲೂ ದೊಡ್ಡವನೆನಿಸು. ನನ್ನ ಭಕ್ತರಲ್ಲಿ ನೀನೇ ಮೊದಲನೆಯವನು, ನೀನೇ ಪೂಜ್ಯನು, ನೀನೇ ಮಾನ್ಯನು.

೩೮. ಎಲೈ ವಿಷ್ಣುವೇ, ಲಿಂಗದಲ್ಲಿ ನನ್ನನ್ನು ಪೂಜಿಸು. ಏಕೆಂದರೆ ನಾನು ಸರ್ವದಾ ಲಿಂಗಾಕಾರವನ್ನೇ ಧರಿಸಿರುವವನು. ಇನ್ನುಮುಂದೆ ಈ ರೀತಿ ಸಂಶಯ ಪಡಬೇಡ. ಬಾಕಿಯವರೆಲ್ಲಾ ಸಾಮಾನ್ಯ ದೇವತೆಗಳು.

೩೯. ಲಿಂಗಾರಾಧನೆಯ ದೆಸೆಯಿಂದ ಜನರ ಅಜ್ಞಾನವೆಲ್ಲವೂ ಜಾಗ್ರತೆಯಾಗಿಯೇ ನಾಶವಾಗುವುದು. ಲಿಂಗಪೂಜೆಮಾಡುವವರಿಗೆ ಸಂಸಾರದ ಭಯವು ಎಂದಿಗೂ ಇರುವುದಿಲ್ಲ."

ಏವಂ ಹರೇರ್ವರಂ ದತ್ವಾ ಮಾಮುವಾಚ ಮಹೇಶ್ವರಃ ।
ವಿರಂಚೇ ತವ ದಾಸ್ಯಾಮಿ ಗೃಹಾಣ ವರಮುತ್ತಮಂ ॥ ೪೦ ॥

ಚರಾಚರಸ್ಯ ಜಗತೋ ಮಾನ್ಯೋ ಭವ ಪಿತಾಮಹ ।
ಗೃಹಾಣ ಚತುರೋ ವೇದಾನ್ ಚತುರ್ಭಿರ್ವದನೈರ್ವಿಧೇ ॥ ೪೧ ॥

ಇತ್ಯಾವಾಭ್ಯಾಂ ವರಂ ದತ್ವಾ ದೇವದೇವಃ ಪಿನಾಕಧೃತ್ ।
ವಿಶ್ವೇಶ್ವರಃ ಸ್ವಯಂಜ್ಯೋತಿಃ ಕ್ಷಣಾದಂತರ್ಹಿತೋಽಭವತ್ ॥ ೪೨ ॥

ತತಃ ಪ್ರಭೃತಿ ವಿಷ್ಣ್ವಾದ್ಯಾ ದೇವಾ ದೈತ್ಯಾಶ್ಚ ದಾನವಾಃ ।
ಗಂಧರ್ವಾ ಮುನಯಃ ಸಿದ್ಧಾ ಯಕ್ಷಾ ನಾಗಾಶ್ಚ ಕಿನ್ನರಾಃ । ॥ ೪೩ ॥

ಸಂಪೂಜ್ಯ ಪರಮಂ ಲಿಂಗಂ ಪರಾಂ ಸಿದ್ಧಿಂ ಗತಾ ಮುನೇ ।
ನಾಸ್ತಿ ಲಿಂಗಾರ್ಚನಾದನ್ಯಚ್ಛ್ರೇಯೋಽಸ್ಮಿನ್ ಭುವನತ್ರಯೇ ॥ ೪೪ ॥

---

೪೦. ಈ ರೀತಿಯಾಗಿ ಶಂಕರನು ವಿಷ್ಣುವಿಗೆ ವರಕೊಟ್ಟನು. ಆಮೇಲೆ ನನ್ನ ಕಡೆ ತಿರುಗಿ,

೪೧. "ಎಲೈ ಪಿತಾಮಹನೆ, ನೀನು ಸ್ಥಾವರಜಂಗಮಾತ್ಮಕವಾದ ಜಗತ್ತಿಗೆ ಮಾನ್ಯನು. ನೀನು ನಾಲ್ಕು ವೇದಗಳನ್ನು ತೆಗೆದುಕೊ. ನಾಲ್ಕು ಮುಖಗಳಿಂದಲೂ ಇವುಗಳನ್ನು ಪಠಿಸು. ಇದೇ ನಿನಗೆ ಶ್ರೇಯಸ್ಸು."

೪೨. ಈ ರೀತಿಯಾಗಿ ನಮ್ಮಿಬ್ಬರಿಗೂ ವರವನ್ನು ಕೊಟ್ಟು ಪಿನಾಕಧಾರಿಯೂ ಸ್ವಯಂಪ್ರಕಾಶಕನೂ ಆದ ಮಹೇಶ್ವರನು ಕ್ಷಣಕಾಲದಲ್ಲಿ ಅಂತರ್ಧಾನನಾದನು.

೪೩. ಅದು ಮೊದಲುಗೊಂಡು ವಿಷ್ಣುವೇ ಮೊದಲಾದ ದೇವತೆಗಳು, ರಾಕ್ಷಸರು, ದಾನವರೂ, ಗಂಧರ್ವರು, ಋಷಿಗಳೂ, ಸಿದ್ಧರೂ, ಯಕ್ಷರೂ, ನಾಗರೂ, ಕಿಂನರರು, ಇವರೇ ಮೊದಲಾದವರೆಲ್ಲರೂ ದಿವ್ಯವಾದ ಲಿಂಗವನ್ನು ಪೂಜಿಸಿ, ಶ್ರೇಷ್ಠವಾದ ಸಿದ್ಧಿಯನ್ನು ಹೊಂದಿದರು.

೪೪. ಎಲೈ ಋಷಿಶ್ರೇಷ್ಠನೇ, ಲಿಂಗಪೂಜೆಗಿಂತಲೂ ಶ್ರೇಷ್ಠವಾದುದು ಮೂರು ಲೋಕದಲ್ಲಿ ಯಾವುದೂ ಇಲ್ಲ. ಆದುದರಿಂದ ಇದನ್ನು ತಿಳಿದು ನೀನು ಲಿಂಗಾರ್ಚನೆಯಲ್ಲಿ ನಿರತನಾಗು.

ಜ್ಞಾತ್ವಾ ತ್ವಮೇವಂ ದೇವರ್ಷೇ ಲಿಂಗಾರ್ಚನರತೋ ಭವ ।
ಕ್ಷೇತ್ರೇಷು ಚೈವ ತೀರ್ಥೇಷು ವನೇಷೂಪವನೇಷು ಚ ॥ ೪೫ ॥

ಯಾನಿ ಲಿಂಗಾನಿ ದಿವ್ಯಾನಿ ಸ್ಥಾಪಿತಾನಿ ಸುರಾಸುರೈಃ ।
ದ್ರಷ್ಟವ್ಯಾನಿ ಬುಧೈಸ್ತಾನಿ ಶ್ರದ್ಧಯೈವ ಹಿ ನಾರದ ॥ ೪೬ ॥

ಮುಕ್ತಿಭಾಜೋ ಭವಂತ್ಯೇವಂ ತೇಽಪಿ ಶಂಭೋರನುಗ್ರಹಾತ್ ॥ ೪೭ ॥

॥ ನಾರದ ಉವಾಚ ॥

ತಾನಿ ಸ್ಥಾನಾನಿ ದಿವ್ಯಾನಿ ಯೇಷು ಸಂನಿಹಿತಃ ಶಿವಃ ।
ಆಚಕ್ಷ್ವ ತಾನಿ ಮೇ ಬ್ರಹ್ಮನ್ ಮಾಹಾತ್ಮ್ಯಂ ಚಾಽಪಿ ಕೃತ್ಸ್ನಶಃ ॥ ೪೮ ॥

॥ ಬ್ರಹ್ಮೋವಾಚ ॥

ಮಾಹಾತ್ಮ್ಯಂ ದಿವ್ಯಲಿಂಗಾನಾಂ ತೀರ್ಥಾನಾಮಪಿ ನಾರದ ।
ಅತ್ರ ತೇ ಕಥಯಿಷ್ಯಾಮಿ ಶ್ರೂಯತಾಮಘಶಾಸನಂ ॥ ೪೯ ॥

೪೫-೪೭. ನಾರದನೇ, ಕ್ಷೇತ್ರಗಳತೀರ್ಥಗಳಲ್ಲಿ ಉಪವನಗಳಲ್ಲಿ ದೇವರಾಕ್ಷಸರಿಂದ ಯಾವ ಉತ್ತಮಲಿಂಗಗಳು ಸ್ಥಾಪಿಸಲ್ಪಟ್ಟಿವೆಯೋ, ಅವುಗಳನ್ನು ಪಂಡಿತರು ಶ್ರದ್ಧೆಯಿಂದ ನೋಡಬೇಕು. ಅಂತಹ ಲಿಂಗದರ್ಶನಮಾಡಿದವರು ಈಶ್ವರಾನುಗ್ರಹದಿಂದ ಮುಕ್ತಿಹೊಂದುತ್ತಾರೆ ಎಂದು ಈಶ್ವರನೇ ಹೇಳಿರುವನು.

೪೮. "ಎಲೈ ಬ್ರಹ್ಮನೇ, ಎಲ್ಲಿ ಈಶ್ವರನು ಸದಾ ಸನ್ನಿಹಿತನಾಗಿರುತ್ತಾನೆಯೋ, ಆಯಾ ಸ್ಥಳಗಳನ್ನು ನನಗೆ ಹೇಳು. ಮತ್ತು ಸಮಗ್ರವಾಗಿ ಅವನ ಮಾಹಾತ್ಮ್ಯೆಯನ್ನು ಈಗ ತಿಳಿಸುವವನಾಗು" ಎಂದು ನಾರದನು ಪ್ರಾರ್ಥಿಸಲು,

೪೯. ಆದಕ್ಕೆ ಬ್ರಹ್ಮನು ಎಲೈ ನಾರದನೆ, ದಿವ್ಯಲಿಂಗಗಳ ಮಾಹಾತ್ಮ್ಯೆಯನ್ನು ತೀರ್ಥಗಳ ಪ್ರಭಾವವನ್ನೂ ಇಲ್ಲಿ ನಿನಗೆ ವಿವರಿಸುವೆನು. ಇದು ಪಾಪನಿವಾರಕವಾದದ್ದು. ಅಂತಹುದನ್ನು ಈಗಲೇ ಕೇಳುವವನಾಗು.

ಯಾ ಸಾ ಶೈವೀ ಪರಾ ಮೂರ್ತಿಃ ಶಿವಭಕ್ತ್ಯಾಹ್ಯಪಾಂ ಪತಿಃ ।
ನಾರಾಯಣಃ ಸ್ವಯಂ ಸಾಕ್ಷಾದಹಂ ಚಾನ್ಯಾಶ್ಚ ದೇವತಾಃ ॥ ೫೦ ॥

ವಸಂತಿ ಸಾಗರೇ ನೂನಂ ತೀರ್ಥರಾಜೇತಿ ಸ ಸ್ಮೃತಃ ।
ಜಂಬೂದ್ವೀಪಂ ಮಹಾಪುಣ್ಯಂ ತತ್ರಾಪಿ ಲವಣೋದಧಿಃ ॥ ೫೧ ॥

ಅಹೋರಾತ್ರಕೃತಂ ಪಾಪಂ ದರ್ಶನಾದೇವ ನಶ್ಯತಿ ॥
ಸ್ಪೃಷ್ಟ್ವಾ ತ್ರಿರಾತ್ರಕಂ ಪಾಪಂ ನಾಶಯತ್ಯೇವ ಸಾಗರಃ ॥ ೫೨ ॥

ಸಪ್ತರಾತ್ರಕೃತಂ ಪಾಪಂ ಪ್ರೋಕ್ಷಣಾದೇವ ನಶ್ಯತಿ ।
ಪಾನೇನ ಪಕ್ಷಜನಿತಂ ಸ್ನಾನಾತ್ ಪಕ್ಷದ್ವಯಸ್ಯ ಚ ॥ ೫೩ ॥

---

೫೦. ಈಶ್ವರನಿಗೆ ಸಂಬಂಧಪಟ್ಟ ಅತ್ಯುತ್ಕೃಷ್ಟವಾದ ಮೂರ್ತಿಗೆ ಆಶ್ರಯ ವಿತ್ತಿರುವವನು, ಸಮುದ್ರನು. ಅಂತಹ ಸಮುದ್ರದಲ್ಲಿ ನಾನು, ನಾರಾಯಣನು, ಉಳಿದ ದೇವತೆಗಳೂ,

೫೧. ವಾಸಮಾಡುತ್ತಿದ್ದೇವೆ. ಅದರಿಂದಲೇ ಸಮುದ್ರರಾಜನನ್ನು ತೀರ್ಥ ರಾಜನೆಂದು ಹೇಳುತ್ತಾರೆ. ಜಂಜೂದ್ವೀಪವು ಮಹಾಪುಣ್ಯಕರವು. ಅದರಲ್ಲಿಯೂ ಲವಣ ಸಮುದ್ರವಂತೂ ಪರಮಪವಿತ್ರವಾದುದು.

೫೨. ಅಹೋರಾತ್ರಿಯಲ್ಲಿ ಮಾಡಿದ ಪಾಪವು ಸಮುದ್ರದ ದರ್ಶನದಿಂದಲೇ, ನಾಶವಾಗುತ್ತದೆ. ಸಮುದ್ರಸ್ಪರ್ಶನ ಮಾತ್ರದಿಂದ, ಮೂರು ರಾತ್ರಿಮಾಡಿದ ಪಾಪವ ನಾಶವಾಗುತ್ತದೆ.

೫೩. ಏಳು ರಾತ್ರಿಗಳಲ್ಲಿ ಮಾಡಿದ ಪಾಪಗಳು ಪ್ರೋಕ್ಷಣಮಾತ್ರದಿಂದ ನಾಶ ವಾಗುತ್ತವೆ. ಸಮುದ್ರದ ಜಲಪ್ರಾಶನದಿಂದ, ಹದಿನೈದು ದಿನಗಳ ಪಾಪವು ಮಾಯ ವಾಗುತ್ತದೆ. ಸ್ನಾನದಿಂದ ಒಂದು ತಿಂಗಳ ಪಾಪ ನಿವಾರಣೆಯಾಗುತ್ತದೆ.

ಋತುದ್ವಯೇ ತಥಾಽಷ್ಟಮ್ಯಾಂ ಪರ್ವಸ್ನಾನಂ ಚ ವಾರ್ಷಿಕಂ ।
ಭಾನಾವನುದಿತೇ ನಿತ್ಯಂ ಯಃ ಸ್ನಾತಿ ಲವಣೋದಧೌ ॥ ೫೪ ॥

ಕಪಿಲಾಯಾಃ ಫಲಂ ತಸ್ಯ ದತ್ತಾಯಾಃ ಶ್ರೋತ್ರಿಯೇ ಧ್ರುವಂ ।
ಉಪೋಷ್ಯ ರಜನೀಮೇಕಾಂ ರವಿಸಂಕ್ರಮಣಂ ಪ್ರತಿ ॥ ೫೫ ॥

ಸ್ನಾತ್ವಾ ಶತಸುವರ್ಣಸ್ಯ ದತ್ತಸ್ಯ ಫಲಮಾಪ್ನುಯಾತ್ ।
ವ್ಯತೀಪಾತೇ ದಿನಚ್ಛಿದ್ರೇ ಅಯನೇ ವಿಷುವೇಷು ಚ ॥ ೫೬ ॥

ಯುಗಾದೌ ಚ ನರಃ ಸ್ನಾತ್ವಾ ವಿಧಿವಲ್ಲವಣೋದಧೌ ।
ಗೋಸಹಸ್ರಸ್ಯ ದತ್ತಸ್ಯ ಕುರುಕ್ಷೇತ್ರೇ ಫಲಂ ಹಿ ತತ್ ॥ ೫೭ ॥

---

೫೪. ಎರಡು ಋತುಗಳಲ್ಲಿ ಸಂಬಂಧಿಸಿದ ಅಷ್ಟಮಿಯಲ್ಲಿಯೂ, ಪರ್ವಕಾಲಗಳಲ್ಲಿಯೂ ಮಾಡುವ ಒಂದು ವರ್ಷ ಸ್ನಾನಕ್ಕೆ ಪರ್ವಸ್ನಾನವೆಂದು ಹೆಸರು. ಸೂರ್ಯನು ಹುಟ್ಟುವುದಕ್ಕಿಂತ ಮೊದಲು ನಿತ್ಯವೂ ಲವಣಸಮುದ್ರದಲ್ಲಿ ಯಾವನು ಸ್ನಾನಮಾಡುತ್ತಾನೆಯೋ,

೫೫. ಅವನು, ಶ್ರೋತ್ರಿಯನಿಗೆ ಕೊಟ್ಟ ಗೋದಾನದ ಮಹಾಪುಣ್ಯವನ್ನು ಸುಲಭವಾಗಿ ಸಂಪಾದಿಸುವನು. ಹಿಂದಿನ ರಾತ್ರಿ ಉಪವಾಸವಿದ್ದು ರವಿಸಂಕ್ರಮಣ ಕಾಲದಲ್ಲಿ ಯಾವನು ಸಮುದ್ರಸ್ನಾನಮಾಡುವನೋ,

೫೬-೫೭. ಹಾಗೆ ಸ್ನಾನಮಾಡಿದವನು ನೂರು ಸುವರ್ಣದಾನಮಾಡಿದ ಫಲವನ್ನು ಹೊಂದುತ್ತಾನೆ. ವ್ಯತೀಪಾತಪ್ರವೇಶದಲ್ಲಿಯೂ, ತಿಥಿಸಂಧಿಕಾಲದಲ್ಲಿಯೂ, ಉತ್ತರದಕ್ಷಿಣಾಯನಕಾಲಗಳಲ್ಲೂ, ಮೇಷ, ತುಲಾ ಸಂಕ್ರಮಣಕಾಲಗಳಲ್ಲಿಯೂ ಯುಗಾದಿಯ ದಿನಗಳಲ್ಲೂ, ಯಾವನು ವಿಧಿವತ್ತಾಗಿ ಲವಣಸಮುದ್ರದಲ್ಲಿ ಸ್ನಾನ ಮಾಡುವನೋ, ಅವನು ಸಾವಿರ ಗೋದಾನಮಾಡಿದ ಫಲವನ್ನು ಹೊಂದುತ್ತಾನೆ.

ತತ್ಫಲಂ ಲಭತೇ ಮರ್ತ್ಯೋ ಭೂಮಿದಾನಸ್ಯ ಚ ಧ್ರುವಂ ।
ದಾನಾನಿ ಯಾನಿ ಲೋಕೇಷು ವಿಖ್ಯಾತಾನಿ ಮನೀಷಿಭಿಃ ॥ ೫೮ ॥

ತೇಷಾಂ ಫಲಮವಾಪ್ನೋತಿ ಗ್ರಹಣೇ ಚಂದ್ರಸೂರ್ಯಯೋಃ ।
ಬಡವಾನಲಮುಕ್ತೋಽಸೌ ಪೂತೋ ಭವತಿ ನಾರದ ॥ ೫೯ ॥

ಅತೋಽಸ್ಮಾದ್ಧಿ ಪರಂ ನಾಸ್ತಿ ಸುತೀರ್ಥಮವನೀತಲೇ ।
ಗಂಗಾಗೋದಾವರೀ ರೇವಾ ಚಂದ್ರಭಾಗಾ ಚ ವೇದಿಕಾ ॥ ೬೦ ॥

ಏತಾಸಾಂ ಸಂಗಮೋ ಯತ್ರ ಸ್ನಾನಂ ಕುರ್ಯಾನ್ಮಹೋದಧೌ ।
ಯಾನಿ ಪಾಪಾನಿ ಘೋರಾಣಿ ಭ್ರೂಣಹತ್ಯಾದಿಕಾನಿ ಚ ॥ ೬೧ ॥

ನಾಶಯಂತಿ ಕ್ಷಣಾದೇವ ಸಂಗಮಸ್ಯ ಪ್ರಭಾವತಃ ।
ಅಶ್ವಮೇಧಸಹಸ್ರಸ್ಯ ಫಲಂ ಚ ಭವತಿ ಧ್ರುವಂ ॥ ೬೨ ॥

---

೫೮. ಅಲ್ಲದೆ ಅಂತಹ ದಿನಗಳಲ್ಲಿ ಸಮುದ್ರಸ್ನಾನಮಾಡಿದವನು ನಿಶ್ಚಯವಾಗಿಯೂ ಭೂದಾನದ ಫಲವನ್ನೂ ಇನ್ನೂ ಪ್ರಪಂಚದಲ್ಲಿ ಉತ್ತಮ ದಾನಗಳು ಎಷ್ಟು ಪ್ರಸಿದ್ಧಿಯಾಗಿರುವುವೋ ಅಷ್ಟು ದಾನಗಳ ಸುಕೃತವನ್ನೂ ಪಡೆಯುವನು. ಚಂದ್ರ ಮತ್ತು ಸೂರ್ಯಗ್ರಹಣಕಾಲದಲ್ಲಿ ಸ್ನಾನಮಾಡಿದವನೂ ಹಾಗೆಯೇ ಮೇಲೆ ಹೇಳಿದ ಸುಕೃತಗಳನ್ನು ಹೊಂದುವನು.

೫೯-೬೨. ಆದಕಾರಣ ಇದಕ್ಕಿಂತಲೂ ಶ್ರೇಷ್ಠತೀರ್ಥವು ಭೂಮಿಯಲ್ಲಿ ಯಾವುದೂ ಇಲ್ಲ. ಗಂಗೆ, ಗೋದಾವರಿ, ರೇವಾನದಿ, ಚಂದ್ರಭಾಗಾ ಮತ್ತು ವೇದಿಕಾನದಿಯು ಇವುಗಳು ಎಲ್ಲಿ ಸಮುದ್ರವನ್ನು ಸೇರುವುವೊ ,ಅಂಥ ಸಂಗಮ ಸ್ಥಳದಲ್ಲಿ ಸ್ನಾನವನ್ನು ಮಾಡಬೇಕು. ಲೋಕದಲ್ಲಿ ಘೋರವಾದ ಎಷ್ಟು ಪಾಪಗಳುಂಟೋ ಅವೆಲ್ಲವೂ ಈ ಸಮುದ್ರಸ್ನಾನದ ಪ್ರಭಾವದಿಂದ ಒಂದು ಕ್ಷಣದಲ್ಲಿಯೇ ನಾಶವಾಗುತ್ತವೆ. ನಿಶ್ಚಯವಾಗಿಯೂ ಸಾವಿರ ಅಶ್ವಮೇಧಯಾಗಗಳ ಫಲವು ಉಂಟಾಗುತ್ತದೆ.

ಸಮುದ್ರತೀರೇ ಪರಮಂ ತೇಜೋಲಿಂಗಂ ದುರಾಸದಂ ।
ಯತ್ರ ಸಿದ್ಧಾಃ ಪುರಾ ವತ್ಸ ಮುನಯಃ ಸಪ್ತಕೋಟಯಃ ॥ ೬೩

ಸಪ್ತಕೋಟೀಶ್ವರಂ ನಾಮ ತತಃಪ್ರಭೃತಿ ನಾರದ ।
ತಸ್ಯ ಲಿಂಗಸ್ಯ ಮಾಹಾತ್ಮ್ಯಂ ಮಯಾ ವಕ್ತುಂ ನ ಶಕ್ಯತೇ ॥ ೬೪ ॥

ಸ್ಮರಣಾದಸ್ಯ ಲಿಂಗಸ್ಯ ಗೋಸಹಸ್ರಫಲಂ ಲಭೇತ್ ।
ಸಮುದ್ರೇ ವಿಧಿವತ್ ಸ್ನಾತ್ವಾ ಸಪ್ತಕೋಟೀಶ್ವರಂ ಶಿವಂ ॥ ೬೫ ॥

ಯೇ ದ್ರಕ್ಷ್ಯಂತಿ ಮಹಾತ್ಮಾನೋ ಮುಕ್ತಿಭಾಜೋ ಭವಂತಿ ತೇ ।
ರಾಜಸೂಯಸ್ಯ ಯಜ್ಞಸ್ಯ ಸಹಸ್ರಗುಣಿತಂ ಫಲಂ ॥ ೬೬ ॥

---

೬೩. ಸಮುದ್ರತೀರದಲ್ಲಿ ಅತ್ಯುತ್ತಮವಾದ ಮತ್ತು ದುರ್ಲಭವಾದ ತೇಜೋಲಿಂಗವಿರುವುದು. ಅಲ್ಲಿ ಹಿಂದೆ ಅನೇಕ ಸಿದ್ಧರೂ, ಪುರುಷರೂ, ಏಳು ಕೋಟಿ ಮುನಿಗಳೂ ಅದನ್ನು ಸೇವಿಸಿದರು.

೬೪. ಎಲೈ ನಾರದನೇ—ಅದು ಮೊದಲು ಆ ಲಿಂಗವನ್ನು ಸಪ್ತಕೊಟೇಶ್ವರನೆಂದು ಕರೆಯುವರು. ಆ ಲಿಂಗದ ಮಾಹಾತ್ಮ್ಯೆಯನ್ನು ನನ್ನಿಂದ ಹೇಳುವುದಕ್ಕೆ ಸಾಧ್ಯವಿಲ್ಲ. ಕೋಟೀಶ್ವರಲಿಂಗದ ಸ್ಮರಣಮಾತ್ರದಿಂದ ಸಾವಿರ ಗೋದಾನ ಫಲವು ಲಭಿಸುತ್ತವೆ.

೬೫. ಸಮುದ್ರದಲ್ಲಿ ಸ್ನಾನಮಾಡಿ, ಸಪ್ತಕೋಟೀಶ್ವರನಾದ ಶಿವನನ್ನು ಯಾರು ನೋಡುವರೋ. ಆ ಮಹಾತ್ಮರು ಸುಲಭವಾಗಿ ಮುಕ್ತಿಯನ್ನು ಹೊಂದುವರು.

೬೬. ಆ ಲಿಂಗದ ದರ್ಶನದಿಂದ ಈ ಲೋಕದಲ್ಲಿ ರಾಜಸೂಯಯಜ್ಞದ ಸಾವಿರದಷ್ಟು ಫಲವೂ, ಹಾಗೆಯೇ ಗೋಮೇಧಯಾಗದ ಸಾವಿರದಷ್ಟು ಫಲವೂ ಲಭಿಸುವುದು.

ತಥಾ ಗೋಮೇಧಯಜ್ಞಸ್ಯ ದರ್ಶನಾತ್ತತ್ಫಲಂ ತ್ವಿಹ ।
ಸಪ್ತಕೋಟೀಶ್ವರೋ ದೇವೋ ದೃಷ್ಟಶ್ಚೇದ್ಭುವಿ ಮಾನವೈಃ ॥ ೬೭ ॥

ಧನ್ಯಾಸ್ತೇ ಯೇ ಚ ಲೋಕೇಽಸ್ಮಿನ್ ತೇಷಾಂ ಮುಕ್ತಿಃ ಕರೇ ಸ್ಥಿತಾ ।
ತತ್ರ ಸ್ನಾನಂ ಜಪೋ ಹೋಮೋ ದಾನಂ ಚ ಪಿತೃತರ್ಪಣಂ ॥ ೬೮ ॥

ಸರ್ವಂ ತದಕ್ಷಯಂ ಪ್ರೋಕ್ತಂ ಸಪ್ತಕೋಟೀಶ್ವರೇ ಶಿವೇ ।
ಸಪ್ತಕೋಟೀಶ್ವರಂ ಪ್ರಾಪ್ಯ ಕಥಂ ಶೋಚಂತಿ ಜಂತವಃ ॥ ೬೯ ॥

ಸರ್ವಾನುಗ್ರಾಹಕೋ ರುದ್ರಃ ತಸ್ಮಿನ್ ಲಿಂಗೇ ವ್ಯವಸ್ಥಿತಃ ।
ನ ತಚ್ಛೈಲಮಯಂ ಲಿಂಗಂ ನ ತದ್ಧೈಮಂ ನ ರಾಜತಂ ॥ ೭೦ ॥
ನ ತದ್ರತ್ನಮಯಂ ಲಿಂಗಂ ಜ್ಞಾತವ್ಯಮಿತಿ ನಾರದ ।

ಕಿಂ ತಜ್ಜ್ಯೋತಿರ್ಮಯಂ ಲಿಂಗಂ ಶೈವಂ ಪದಮನಾಮಯಂ ।
ಸಪ್ತಕೋಟೀಶ್ವರಂ ಲಿಂಗಂ ಪ್ರಾಹುರ್ವೇದವಿದೋ ಬುಧಾಃ ॥ ೭೧ ॥

೬೭-೬೮. ಭೂಲೋಕದಲ್ಲಿ ಯಾರು ಸಪ್ತಕೋಟೀಶ್ವರಲಿಂಗವನ್ನು ದರ್ಶನ ಮಾಡುವರೋ ಅವರೇ ಧನ್ಯರು. ಅವರ ಕೈಯಲ್ಲಿಯೇ ಮೋಕ್ಷವು ಇರುತ್ತದೆ. ಅಲ್ಲಿ ಸ್ನಾನವನ್ನು, ಜಪವನ್ನು, ಹೋಮವನ್ನು, ದಾನವನ್ನು, ಪಿತೃತರ್ಪಣವನ್ನು ಮಾಡಬೇಕು.

೬೯. ಸಪ್ತಕೋಟೀಶ್ವರನಾದ ಈಶ್ವರನಲ್ಲಿ ಎಲ್ಲವೂ ಅಕ್ಷಯವಾಗುವುದೆಂದು ಹೇಳುವರು. ಸಪ್ತಕೋಟೀಶ್ವರನನ್ನು ಸೇವಿಸಿದ ಮೇಲೆ ಮನುಷ್ಯರಿಗೆ ದುಃಖವೆಲ್ಲಿ ಬಂತು ?

೭೦. ಸರ್ವರಿಗೂ ಅನುಗ್ರಹವೀಯುವ ರುದ್ರನು ಆ ಲಿಂಗದಲ್ಲಿ ವಾಸಿಸುವನು. ಆ ಲಿಂಗವು ಕಲ್ಲಿನದಲ್ಲ. ಚಿನ್ನದ ವಿಕಾರವೂ ಅಲ್ಲ. ಬೆಳ್ಳಿಯಿಂದ ನಿರ್ಮಿತವೂ ಅಲ್ಲ.

೭೧. ಎಲೈ ನಾರದನೇ,—ಅದು ರತ್ನಕೃತವೂ ಅಲ್ಲ ಎಂಬುದಾಗಿ ತಿಳಿ ಆ ಸಪ್ತಕೋಟೀಶ್ವರಲಿಂಗವೇ ಜ್ಯೋತಿರ್ಲಿಂಗ, ಮಹಾಮಹಿಮೆಯುಳ್ಳ ಲಿಂಗವೆಂದು ಲೋಕದಲ್ಲಿ ಪ್ರಸಿದ್ಧವಾಗಿರುವುದೇ ಆ ಸಪ್ತಕೋಟೀಶ್ವರಲಿಂಗ ಎಂದು ವೇದಜ್ಞರು ತಿಳಿದಿರುವರು.

ಅಹಂ ನಾರಾಯಣೋ ದೇವಃ ಶಕ್ರಶ್ಚಂದ್ರೋ ದಿವಾಕರಃ ।
ಮರುತೋ ಮುನಯಃ ಸಿದ್ಧಾಃ ಖೇಚರಾ ಭೂಚರಾಶ್ಚ ಯೇ ॥ ೭೨ ॥

ಅರ್ಚಯಿತ್ವಾ ಪರಂ ಲಿಂಗಂ ಸಪ್ತಕೋಟೀಶ್ವರಂ ಶಿವಂ ।
ಪ್ರಾಪ್ತವಂತಃ ಪರಾಂ ಸಿದ್ಧಿಂ ತಸ್ಮಾಲ್ಲಿಂಗೇ ಚ ನಾರದ ॥ ೭೩ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಶಿವಾರ್ಚನಮಾಹಾತ್ಮ್ಯಾದಿ ಕಥನಂ ನಾಮ ಷಟ್ ಷಷ್ಟಿತಮೋಽಧ್ಯಾಯಃ.

---

೭೨. ನಾನು ನಾರಾಯಣ, ಇಂದ್ರ, ಚಂದ್ರ, ಸೂರ್ಯ, ಸಪ್ತಮರುತ್ತುಗಳು, ಋಷಿಗಳು, ಸಿದ್ಧರು, ದೇವತೆಗಳು, ಭೂಚರರು, ಖೇಚರರು ಎಲ್ಲರೂ ಅತ್ಯುತ್ತಮವಾದ ಆ ಲಿಂಗವನ್ನು ಪೂಜಿಸಿರುವೆವು. ಸಪ್ತಕೋಟೀಶ್ವರನಾದ ಈಶ್ವರನ ಅನುಗ್ರಹಕ್ಕೆ ಪಾತ್ರರಾಗಿ ಅತ್ಯುತ್ತಮವಾದ ಸಿದ್ಧಿಯನ್ನು ಹೊಂದಿದ್ದೇವೆ" ಎಂದು ಬ್ರಹ್ಮನು ಹೇಳಿದನು.

ಇಲ್ಲಿಗೆ ಬ್ರಹ್ಮಪುರಾಣಾಂತರ್ಗತವಾದ ಸೌರಪುರಾಣದಲ್ಲಿ ಸೂತಶೌನಕ ಸಂವಾದದಲ್ಲಿ ಶಿವಾರ್ಚನಮಾಹಾತ್ಮ್ಯೆಯ ಕಥಾವಿವರಣೆಯೆಂಬ ಅರುವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಶ್ರೀ ಶಿವಾಯನಮಃ ॥

ಅಥ ಶ್ರೀ ಸೌರಪುರಾಣೇ ಸಪ್ತಷಷ್ಟಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಉಜ್ಜಯಿನ್ಯಾಂ ಮಹಾಕಾಲಂ ಯೇ ವೈ ಪಶ್ಯಂತಿ ಮಾನವಾಃ ।
ಅವಾಪ್ನುಯುಃ ಪರಂ ಲೋಕಂ ಯತ್ರ ಗತ್ವಾ ನ ಶೋಚತಿ ॥ ೧ ॥

ಮಹಾಕಾಲಸ್ಯ ಲಿಂಗಸ್ಯ ದಿವ್ಯಲಿಂಗಂ ತದುಚ್ಯತೇ ।
ಸ್ಪರ್ಶನಾತ್ತಸ್ಯ ಲಿಂಗಸ್ಯ ಸಶರೀರಾಃ ಶಿವಂ ಯಯುಃ ॥ ೨ ॥

ತದ್ಜ್ಞಾತ್ವಾ ಚ ಮಯಾ ತತ್ರ ಪಾಷಾಣಃ ಕುಕ್ಕುಟಾಕೃತಿಃ ।
ನಿಕ್ಷಿಪ್ತಶ್ಚ ಮಹಾಕಾಲೇ ತತೋಽಭೂತ್ ಕುಕ್ಕುಟೇಶ್ವರಃ ॥ ೩ ॥

ಅರುವತ್ತೇಳನೆಯ ಅಧ್ಯಾಯ.

೧. ಮತ್ತೆ ಬ್ರಹ್ಮನು ನಾರದನನ್ನು ಕುರಿತು “ ಉಜ್ಜಯಿನಿ ಎಂಬ ನಗರದಲ್ಲಿ ಮಹಾಕಾಲವೆಂಬ ಈಶ್ವರಲಿಂಗವಿದೆ. ಅದನ್ನು ಯಾವ ಮನುಷ್ಯರು ಭಕ್ತಿಯಿಂದ ನೋಡುವರೋ, ಅವರು ಉತ್ತಮಲೋಕವನ್ನು ಹೊಂದುವರು. ಆ ಮಹಾ ಕಾಲೇಶ್ವರನ ಸೇವೆಯಿಂದ ದುಃಖವಿಲ್ಲದೆ ಇರುವವರಾಗುವರು.

೨. ಮಹಾಕಾಲೇಶ್ವರಲಿಂಗಕ್ಕೆ ದಿವ್ಯಲಿಂಗವೆಂದು ಹೆಸರು. ಆ ಲಿಂಗದ ಮುಟ್ಟುವಿಕೆಯಿಂದಲೇ ನಮ್ಮ ಶರೀರಗಳು ಈಶ್ವರನನ್ನು ಹೊಂದುವುವು.

೩. ಅದನ್ನು ತಿಳಿದು ನಾನು ಕೋಳಿಯ ಆಕಾರದಲ್ಲಿ ಒಂದು ಕಲ್ಲನ್ನು ಅಲ್ಲಿಟ್ಟೆನು. ಅಂದಿನಿಂದ ಅದು ಕುಕ್ಕುಟೇಶ್ವರನೆಂದು ಹೆಸರಾಯಿತು.

ತತ್ರೈವ ನಗರೇ ರಮ್ಯೇ ಶೂಲೇಶ್ವರ ಇತಿ ಸ್ಮೃತಃ ।
ತಸ್ಯ ದರ್ಶನಮಾತ್ರೇಣ ಹಯಮೇಧಫಲಂ ಲಭೇತ್ ॥ ೪ ॥

ಶೂಲೇಶ್ವರಸ್ಯ ಪೂರ್ವೇ ತು ಓಂಕಾರಂ ಲಿಂಗಮುತ್ತಮಂ ।
ತತ್ರ ಕುಂಡಂ ಮಹಾದಿವ್ಯಂ ಪೂರಿತಂ ಪುಣ್ಯವಾರಿಣಾ ॥ ೫ ॥

ಸ್ನಾನಂ ಸಮಾಚರನ್ ತತ್ರ ಪ್ರಯತಾತ್ಮಾ ಸಮಾಹಿತಃ ।
ದ್ವಿತೀಯೇಽಹ್ನಿ ತೃತೀಯೇಽಹ್ನಿ ದಶಮೇ ವಾಽಪಿ ನಾರದ ॥ ೬ ॥

ಪಕ್ಷೇ ಮಾಸೇಽಥ ಷಣ್ಮಾಸೇ ಸ್ವಪ್ನೇ ಪಶ್ಯತಿ ಶಂಕರಂ ।
ದಿವ್ಯಂ ಜ್ಞಾನಮವಾಪ್ನೋತಿ ದೇವಾನಾಮಪಿ ದುರ್ಲಭಂ ॥ ೭ ॥

ಯಃ ಪಶ್ಯೇಲ್ಲಿಂಗಮೋಂಕಾರಂ ಸ್ನಾತ್ವಾ ಕುಂಡೇ ಸಮಾಹಿತಃ ।
ದೀಕ್ಷಾಸಹಸ್ರಸ್ಯ ಫಲಂ ಪ್ರಾಪ್ಯ ಯಾತಿ ಪರಾಂ ಗತಿಂ ॥ ೮ ॥

---

೪. ಆ ಉಜ್ಜಯಿನೀ ನಗರದಲ್ಲಿ ಶೂಲೇಶ್ವರನೆಂಬ ಲಿಂಗವೊಂದಿದೆ. ಅದರ ದರ್ಶನಮಾತ್ರದಿಂದ ಅಶ್ವಮೇಧಯಾಗದ ಫಲವುಂಟಾಗುತ್ತದೆ.

೫. ಶೂಲೇಶ್ವರಲಿಂಗದ ಪೂರ್ವಭಾಗದಲ್ಲಿ ಓಂಕಾರವೆಂಬ ಉತ್ತಮವಾದ ಲಿಂಗವೊಂದಿರುವುದು. ಅಲ್ಲಿ ಪುಣ್ಯೋದಕದಿಂದ ತುಂಬಿದ ಅತ್ಯುತ್ತಮವಾದ ಒಂದು ಕೊಳವಿರುವುದು.

೬. ಎಲೈ ನಾರದನೇ, ಅಲ್ಲಿ ಜಿತೇಂದ್ರಿಯನಾಗಿ ಪ್ರಸನ್ನಾತ್ಮನಾಗಿ ಸ್ನಾನ ಮಾಡಿ, ದಾನಮಾಡಬೇಕು. ಹಾಗೆ ಅಲ್ಲಿದ್ದರೆ ಎರಡನೇ ದಿನದಲ್ಲಿಯಾಗಲೀ ಹತ್ತನೇ ದಿನದಲ್ಲಿಯಾಗಲೀ,

೭. ಪಕ್ಷದಲ್ಲಿಯಾಗಲಿ, ತಿಂಗಳಿನಲ್ಲಾಗಲಿ, ಆರನೇ ತಿಂಗಳಲ್ಲಿಯಾಗಲಿ ಸ್ವಪ್ನದಲ್ಲಿ ಶಂಕರನ ದರ್ಶನವಾಗುವುದು. ಅನಂತರ ಅವರು ದೇವತೆಗಳಿಗೂ ದುರ್ಲಭವಾದ ದಿವ್ಯಜ್ಞಾನವನ್ನು ಹೊಂದುವರು.

೮. ಶೂಲೇಶ್ವರಲಿಂಗದ ಹತ್ತಿರವಿರುವ ಓಂಕಾರಲಿಂಗವನ್ನು ಕೊಳದಲ್ಲಿ ಸ್ನಾನಮಾಡಿದಮೇಲೆ ದರ್ಶನಮಾಡಿದರೆ, ಅವನು ಸಾವಿರ ಯಜ್ಞದೀಕ್ಷೆಗಳ ಫಲವನ್ನು ಹೊಂದಿ ಶ್ರೇಷ್ಠವಾದ ಮೋಕ್ಷವನ್ನು ಪಡೆಯುತ್ತಾನೆ.

ತತ್ರೈವಾಗಸ್ತ್ಯಮುನಿನಾ ತಪಸಾSSರಾಧಿತಃ ಶಿವಃ ।
ಪ್ರಾದುರ್ಭೂತಶ್ಚ ಭಗವಾನಗಸ್ತ್ಯೇಶ್ವರನಾಮಕಃ ॥ ೯ ॥

ಪ್ರಸಿದ್ಧೋ ದರ್ಶನಾತ್ತಸ್ಯ ಬ್ರಹ್ಮಹತ್ಯಾಂ ವ್ಯಪೋಹತಿ ।
ತತ್ರೈವ ಶಕ್ತಿಭೇದಾಖ್ಯಂ ತೀರ್ಥಂ ಮುನಿನಿಷೇವಿತಂ ॥ ೧೦ ॥

ತತ್ರ ಸ್ನಾತ್ವಾ ಭದ್ರತಟಂ ಯಸ್ತು ಪಶ್ಯತಿ ಮಾನವಃ ।
ಸರ್ವಪಾಪವಿನಿರ್ಮುಕ್ತಃ ಸ್ಕಂದಲೋಕೇ ಮಹೀಯತೇ ॥ ೧೧ ॥

ತೀರ್ಥಾನಿ ಕೋಟಿಶಃ ಸಂತಿ ಉಜ್ಜಯಿನ್ಯಾಂ ಸಮಂತತಃ ।
ತೇಷಾಂ ಮಾಹಾತ್ಮ್ಯಮಖಿಲಂ ಸ್ಕಾಂದಂ ಸ್ಕಂದೇನ ಭಾಷಿತಂ ॥ ೧೨ ॥

ಕುರುಕ್ಷೇತ್ರೇ ತು ದೇವರ್ಷೇ ಸ್ಥಾಣುರ್ನಾಮ ಮಹೇಶ್ವರಃ ।
ತಪಸ್ತಪ್ತ್ವಾ ಮಯಾ ತತ್ರ ಪ್ರಾಪ್ತಂ ಬ್ರಹ್ಮತ್ವಮುತ್ತಮಂ ॥ ೧೩ ॥

---

೯. ಅದೇ ಸ್ಥಳದಲ್ಲಿಯೇ ಹಿಂದೆ ಅಗಸ್ತ್ಯಮುನಿಯು ಈಶ್ವರನನ್ನು ತಪಸ್ಸಿನಿಂದ ಮೆಚ್ಚಿಸಿ ಪೂಜಿಸಿದನು. ಅಲ್ಲದೆ ಭಗವಂತನಾದ ಶಿವನು ಅಗಸ್ತ್ಯೇಶ್ವರನೆಂಬ ಹೆಸರಿನಿಂದ ಅಲ್ಲಿ ಉದ್ಭವಿಸಿದನು.

೧೦–೧೧. ಅಗಸ್ತ್ಯೇಶ್ವರನ ದರ್ಶನಮಾತ್ರದಿಂದ ಬ್ರಹ್ಮಹತ್ಯದೋಷವು ನಿವೃತ್ತಿಯಾಗುವುದು. ಅಲ್ಲಿಯೇ ಮುನಿಯು ಸೇವಿಸುತ್ತಿದ್ದ ಶಕ್ತಿಭೇದವೆಂಬ ತೀರ್ಥವಿರುವುದು. ಅಲ್ಲಿ ಸ್ನಾನಮಾಡಿ ಯಾವ ಮನುಷ್ಯನು ಭದ್ರತಟವನ್ನು ನೋಡುವನೋ, ಅವನು ಸಮಸ್ತ ಪಾಪಗಳಿಂದ ಬಿಡಲ್ಪಡುತ್ತಾನೆ. ಮತ್ತು ಸ್ಕಂದ ಲೋಕವನ್ನು ಹೊಂದುವನು.

೧೨. ಉಜ್ಜಯಿನೀನಗರದಲ್ಲಿ ಸುತ್ತಲೂ ಕೋಟಿತೀರ್ಥಗಳಿರುವುವು. ಅವುಗಳ ಸಮಸ್ತವಾದ ಮಾಹಾತ್ಮ್ಯೆಯನ್ನು ಸ್ಕಂದನು ಸ್ಕಂದಪುರಾಣದಲ್ಲಿ ಹೇಳಿರುವನು.

೧೩. ಎಲೈ ದೇವಋಷಿಯೇ, ಕುರುಕ್ಷೇತ್ರದಲ್ಲಿ ಸ್ಥಾಣುವೆಂಬ ಹೆಸರುಳ್ಳ ಈಶ್ವರನಿರುವನು. ನಾನು ಅಲ್ಲಿ ತಪಸ್ಸುಮಾಡಿದೆನು. ಆದರಿಂದ ಉತ್ತಮವಾದ ಬ್ರಹ್ಮತ್ವವನ್ನು ಪಡೆದೆನು.

ವಾಲಖಿಲ್ಯಾದಯಸ್ತತ್ರ ಸಿದ್ಧಿಂ ಪ್ರಾಪ್ತಾಃ ಪುರಾಂ ದ್ವಿಜಾಃ ।
ತತ್ರಾಸೀತ್ ಪುಲಹಃ ಪೂರ್ವಂ ವಂಶಕಃ ಸ್ಥಾಣುಮಂದಿರೇ ॥ ೧೪ ॥

ಮೃತಸ್ತು ವಿವಿಧಾನ್ ಭೋಗಾನ್ ಭುಕ್ತ್ವಾ ದಿವ್ಯಮನೋರಥಾನ್ ।
ತದಂತೇ ಮತ್ಸುತೋ ಜಾತಃ ಸ್ಥಾಣುಮೂಢಪ್ರಭಾವತಃ ॥ ೧೫ ॥

ಸರ್ವದೇವಮಯೋ ಯತ್ರ ಸ್ಥಾಣುರ್ನಾಮ ಮಹೇಶ್ವರಃ ।
ಇಷ್ಟಃ ಸಕೃಚ್ಚ ಮನುಜಃ ಶೈವಂ ಪದಮವಾಪ್ನುಯಾತ್ ॥ ೧೬ ॥

ತೀರ್ಥರಾಜ ಇತಿ ಖ್ಯಾತಃ ಪ್ರಯಾಗೋ ಮುನಿಸತ್ತಮಾಃ ।
ಗಂಗಾಯಮುನಯೋಸ್ತತ್ರ ಸಂಗಮೋ ಲೋಕವಿಶ್ರುತಃ ॥ ೧೭ ॥

ತತ್ರ ಸ್ನಾತ್ವಾ ದಿವಂ ಗತ್ವಾ ಭೋಗಾನ್ ಭುಕ್ತ್ವಾ ಯಥೇಪ್ಸಯಾ ।
ಆಸ್ತೆ ಮಹೇಶ್ವರೋ ಯತ್ರ ಸರ್ವಾನುಗ್ರಾಹಕಃ ಪರಃ ॥ ೧೮ ॥

---

೧೪. ವಾಲಖಿಲ್ಯರೇ ಮೊದಲಾದವರು ಅಲ್ಲಿ ತಪಸ್ಸುಮಾಡಿ ಉತ್ತಮಸಿದ್ಧಿಯನ್ನು ಹೊಂದಿದರು. ಆ ಸ್ಥಾಣುವಿನ ಮನೆಯಲ್ಲಿ ಮೊದಲು ಪುಲಹನು ವಂಶಕ್ಕೆ ಮೂಲಪುರುಷನಾಗಿದ್ದನು.

೧೫. ಅಲ್ಲಿಯೇ ಮರಣಹೊಂದಿದವನು ಅನೇಕ ಅತ್ಯುತ್ತಮವಾದ ಸುಖಗಳನ್ನು ಅನುಭವಿಸಿ ಕೊನೆಯಲ್ಲಿ ಸ್ಥಾಣುವಿನ ಮಾಹಾತ್ಮ್ಯೆಯಿಂದ ನನ್ನ ಪುತ್ರನಾಗಿ ಹುಟ್ಟುವನು.

೧೬. ಸರ್ವದೇವಮಯನಾದ ಮಹೇಶ್ವರನು ಎಲ್ಲಿ ನೆಲಸಿರುವನೋ ಅಲ್ಲಿ ಒಂದು ಬಾರಿ ಯಾಗವನ್ನು ನೆರವೇರಿಸಿದ್ದೇ ಆದರೆ, ಆ ಮನುಜನು ಶೀಘ್ರದಲ್ಲಿ ಈಶ್ವರನ ಸ್ಥಾನವನ್ನು ಹೊಂದುವನು.

೧೭. ಎಲೈ ಋಷಿಶ್ರೇಷ್ಠರೇ, ಪ್ರಯಾಗಕ್ಷೇತ್ರವು ತೀರ್ಥರಾಜನೆಂದು ಪ್ರಸಿದ್ಧಿಯಾಗಿರುವುದು. ಅಲ್ಲಿ ಗಂಗಾಯಮುನಾನದಿಗಳ ಸಂಗಮವು ಲೋಕಪ್ರಸಿದ್ಧವಾದ ಕ್ಷೇತ್ರವೆನಿಸಿದೆ.

೧೮. ಅಲ್ಲಿ ಸ್ನಾನಮಾಡಿದವರು ಸ್ವರ್ಗಲೋಕವನ್ನು ಹೊಂದಿ ಯಥೇಷ್ಟವಾಗಿ ಸುಖಗಳನ್ನು ಅನುಭವಿಸಿ ಮುಕ್ತನಾಗುವನು. ಎಲ್ಲಿ ಮಹೇಶ್ವರನು ಸರ್ವರಿಗೂ ಅನುಗ್ರಹಮಾಡುತ್ತಾ ನೆಲಸಿರುವನೋ,

ದರ್ಶನಾದಕ್ಷಯಾಲ್ಲೋಕಾನ್ ಪ್ರಾಪ್ನೋತಿ ಮನುಜೋತ್ತಮಃ ।
ಅನ್ಯತೀರ್ಥಂ ಪರಂ ಗುಹ್ಯಂ ಗಯಾತೀರ್ಥಮಿತಿ ಸ್ಮೃತಂ ॥ ೧೯ ॥

ಯತ್ರ ಶಂಭೋರ್ಭಗವತಃ ಚರಣೌ ಸುಪ್ರತಿಷ್ಠಿತೌ ।
ಪಿತೄಣಾಮಕ್ಷಯೋ ತೃಪ್ತಿಸ್ತತ್ರ ಪಿಂಡಪ್ರದಾನತಃ ॥ ೨೦ ॥

ಮಹಾನದ್ಯಾಂ ನರಃ ಸ್ನಾತ್ವಾ ರುದ್ರಪಾದಂ ಸ್ಪೃಶೇದ್ಯದಿ ।
ಶಿವಲೋಕಮವಾಪ್ನೋತಿ ಪಿತೃಭಿಃ ಸಹ ಮೋದತೇ ॥ ೨೧ ॥

ಮಹಾಕಾಲಂ ಮಹಾತೀರ್ಥಂ ಕಾಲಕಾಲಸ್ಯ ವಲ್ಲಭಂ ।
ತತ್ರಾಪಿ ದೇವದೇವೇನ ವಿನ್ಯಸ್ತಶ್ಚರಣೋ ಭುವಿ ॥ ೨೨ ॥

---

೧೯. ಅಲ್ಲಿ ಮನುಜೋತ್ತಮನು ಈಶ್ವರನ ದರ್ಶನವನ್ನು ಮಾಡಿದರೆ, ಅಕ್ಷಯವಾದ ಲೋಕಗಳು ದೊರಕುತ್ತವೆ. ಇದಲ್ಲದೆ ಅತ್ಯುತ್ತಮವಾದ ಬೇರೆ ಒಂದು ತೀರ್ಥವಿರುವುದು. ಅದೇ ಗಯಾತೀರ್ಥ.

೨೦. ಆ ತೀರ್ಥದಲ್ಲಿ ಪೂಜ್ಯನಾದ ಪರಮೇಶ್ವರನ ಪಾದಗಳು ಪ್ರತಿಷ್ಠಿಸಲ್ಪಟ್ಟಿವೆ. ಅಲ್ಲಿ ಮಾಡುವ ಪಿಂಡಪ್ರದಾನದಿಂದ ಪಿತೃದೇವತೆಗಳಿಗೆ ಅಕ್ಷಯವಾದ ತೃಪ್ತಿಯು ದೊರಕುವುದು.

೨೧. ಮಹಾನದಿಯಲ್ಲಿ ಮನುಷ್ಯರು ಸ್ನಾನಮಾಡಿ ರುದ್ರಪಾದಗಳನ್ನು ಮುಟ್ಟಿದ್ದೇ ಆದರೆ ಅವರು ಪಿತೃದೇವತೆಗಳೊಡನೆ ಶಿವಲೋಕವನ್ನು ಹೊಂದುವರು. ಅಲ್ಲದೆ ಅಲ್ಲಿ ಸಂತೋಷದಿಂದಿರುವರು.

೨೨-೨೩. ಆ ತೀರ್ಥವು ಮಹಾತೀರ್ಥವೆನಿಸಿಕೊಂಡಿದೆ. ಅಲ್ಲದೆ ಕಾಲಕಾಲನಾದ ಶಂಕರನಿಗೆ ಅದು ಪ್ರಿಯವಾಗಿದೆ. ಮತ್ತು ದೇವದೇವನಾದ ಮಹೇಶ್ವರನು ತನ್ನ ಪಾದಗಳನ್ನು ಅಲ್ಲಿಟ್ಟಿರುವನು. ಅಲ್ಲಿ ಸ್ನಾನಮಾಡಿ ಪಾರ್ವತೀಪತಿಯ ಪಾದವನ್ನು

ತತ್ರ ಸ್ನಾತ್ವಾ ತು ಮೇಧಾವೀ ಚರಣಂ ಪಾರ್ವತೀಪತೇಃ ।
ಯಃ ಪಶ್ಯತಿ ನರೋ ಭಕ್ತ್ಯಾ ಶೈವಂ ಪದಮವಾಪ್ನುಯಾತ್ ॥ ೨೩ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಮಹಾಕಾಲಮಾಹಾತ್ಮ್ಯ ಕಥನಂ ನಾಮ ಸಪ್ತಷಷ್ಟಿತಮೋಽಧ್ಯಾಯಃ.

ಯಾವ ಮನುಷ್ಯನು ಭಕ್ತಿಯಿಂದ ದರ್ಶನಮಾಡುವನೋ, ಅವನು ಈಶ್ವರನ ಸಾನ್ನಿಧ್ಯವನ್ನು ಹೊಂದುವನು, ಹೀಗೆಂದು ಬ್ರಹ್ಮನು ಲಿಂಗಗಳ ಮಹಿಮೆಯನ್ನು ನಾರದನಿಗೆ ವಿವರಿಸಿದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣಾಂತರ್ಗತವಾದ ಶ್ರೀಸೌರಪುರಾಣದಲ್ಲಿ ಸೂತ ಶೌನಕರ ಸಂವಾದದಲ್ಲಿ ಮಹಾಕಾಲಮಾಹಾತ್ಮ್ಯೆಯೆಂಬ ಅರುವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ಶಿವಾಯನಮಃ

ಅಥ ಶ್ರೀ ಸೌರಪುರಾಣೇ ಅಷ್ಟಷಷ್ಟಿತಮೋಧ್ಯಾಯಃ.

ಪ್ರಾಯಃ ಪ್ರಾಂತಮುಪೋಷ್ಯಂ ಸ್ಯಾತ್ತೀರ್ಥೇ ದೇವಫಲೇಪ್ಸುಭಿಃ ।
ಮೂಲಂ ಹಿ ಪಿತೃತುಷ್ಟ್ಯರ್ಥಂ ಪಿತ್ರ್ಯಂ ಚೋಕ್ತಂ ಮಹರ್ಷಿಭಿಃ ॥ ೧ ॥

ಯಾಂ ಪ್ರಾಪ್ಯಾಸ್ತಮುಪೈತ್ಯರ್ಕಃ ಸಾ ಚೇತ್ಸ್ಯಾತ್ತ್ರಿಮುಹೂರ್ತಿಕಾ ।
ಧರ್ಮಕೃತ್ಯೇಷು ಸರ್ವೇಷು ಸಂಪೂರ್ಣಾಸ್ತಾಂ ವಿದುಸ್ತಿಥಿಂ ॥ ೨ ॥

ಅಷ್ಟಮ್ಯೇಕಾದಶೀ ಷಷ್ಠೀ ತೃತೀಯಾ ಚ ಚತುರ್ದಶೀ ।
ಕರ್ತವ್ಯಾ ಪರಸಂಯುಕ್ತಾ ಅಪರಾ ಪೂರ್ವಮಿಶ್ರಿತಾ ॥ ೩ ॥

---

೧. ಸೂತಮಹರ್ಷಿಗಳು ಮುಂದೆ ಶೌನಕಾದಿಗಳಿಗೆ ತಿಥಿನಿರ್ಣಯವನ್ನು ವಿವರಿಸಲಾರಂಭಿಸಿದರು· ದೇವಲೋಕದ ಸುಖಗಳನ್ನು ಇಚ್ಛಿಸುವವರು ಪ್ರತಿಕ್ಷೇತ್ರದಲ್ಲಿಯೂ ಹಿಂದಿನ ದಿವಸ ಉಪವಾಸಮಾಡಬೇಕು. ಇದರಿಂದ ಪಿತೃದೇವತೆಗಳು ತೃಪ್ತಿಹೊಂದುತ್ತಾರೆಂದು ಮಹರ್ಷಿಗಳು ಹೇಳಿರುವರು.

೨. ಸೂರ್ಯಾಸ್ತಕಾಲದಲ್ಲಿರುವ ತಿಥಿಯು ಆದಿನದಲ್ಲಿ ಮೂರು ಮುಹೂರ್ತಕಾಲ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನೇ ಪೂರ್ಣತಿಥಿಯೆನ್ನುವರು. ಸಕಲ ಧರ್ಮ ಕಾರ್ಯಗಳನ್ನು ಆ ತಿಥಿಯಲ್ಲಿ ಮಾಡಬಹುದು.

೩. ಅಷ್ಟಮಿ, ಏಕಾದಶೀ, ಷಷ್ಠೀ, ತೃತೀಯಾ ಮತ್ತು ಚತುರ್ದಶಿ ಈ ತಿಥಿಗಳು ಮುಂದಿನ ತಿಥಿಗಳ ಸಂಬಂಧಪಡೆದಿದ್ದರೆ, ತಿಥಿಪ್ರಯುಕ್ತವಾದ ಕರ್ಮಗಳಿಗೆ ಅವು ಶ್ರೇಷ್ಠವೆನಿಸಿಕೊಳ್ಳುವುವು. ಉಳಿದ ತಿಥಿಗಳಿಗೆ ಪೂರ್ವತಿಥಿಗಳ ಸಂಬಂಧವಿದ್ದರೆ ಶ್ರೇಷ್ಠವೆನಿಸುತ್ತವೆ.

ಬೃಹತ್ತ್ರಲ್ಪಾ ತಥಾ ರಂಭಾ ಸಾವಿತ್ರೀ ವಟಪೈತೃಕೀ ।
ಕೃಷ್ಣಾಷ್ಟಮೀ ಚ ಸಂಭೂತಾ ಕರ್ತವ್ಯಾ ಸಂಮುಖೀ ತಿಥಿಃ ॥ ೪ ॥

ಲಿಂಗೇ ಸ್ವಾಯಂಭುವೇ ಬಾಣೇ ರತ್ನೇ ಚ ರಸನಿರ್ಮಿತೇ ।
ಸಿದ್ಧಪ್ರತಿಷ್ಠಿತೇ ಲಿಂಗೇ ನ ಚಂಡಸ್ಯಾಧಿಕಾರತಃ ॥ ೫ ॥

ಬಾಣಲಿಂಗಂ ಸ್ವಯಂಭೂಮಿಶ್ಚಂದ್ರಕಾಂತಿಸ್ತಥೈವ ಚ ।
ಚಾಂದ್ರಾಯಣಸಮಂ ಪುಣ್ಯಂ ಶಂಭೋರ್ನೈವೇದ್ಯಭಕ್ಷಣಾತ್ ॥ ೬ ॥

ವೃಷಂ ಚಂಡಂ ವೃಷಂ ಚೈವ ಸೋಮಸೂತ್ರಂ ಪುನರ್ವೃಷಂ ।
ಚಂಡಂ ಚ ಸೋಮಸೂತ್ರಂ ಚ ಪುನಶ್ಚಂಡಂ ಪುನರ್ವೃಷಂ ॥ ೭ ॥

ಆರಂ ಚ ಆರನಾಲಂ ಚ ಕಾಂಸ್ಯಪಾತ್ರಂ ಮಸೂರಿಕಾ ।
ಚಣಕಾಸ್ತಿಲತೈಲಂ ಚ ಮಂತ್ರವೀರ್ಯಹರಾಣಿ ಷಟ್ ॥ ೮ ॥

---

೪. ಶಯನದ್ವಾದಶೀ, ಹಾಗೆಯೇ ರಂಭಾತೃತೀಯಾ, ವಟಸಾವಿತ್ರೀ, ಮತ್ತು ವಟಪಿತೃತಿಥಿ, ಕೃಷ್ಣಪಕ್ಷದ ಅಷ್ಟಮಿ ಇವುಗಳಿಗೆ ಪರತಿಥಿಗಳ ವೇಧೆಯಿದ್ದೇ ಇರಬೇಕು.

೫. ಉದ್ಭವಲಿಂಗದಲ್ಲಿ, ಬಾಣನಿರ್ಮಿತಲಿಂಗದಲ್ಲಿ, ರತ್ನಲಿಂಗದಲ್ಲಿ, ಸಿದ್ಧರು ಪ್ರತಿಷ್ಠೆಮಾಡಿರುವ ಲಿಂಗದಲ್ಲಿಯೂ ಚಂಡಾಲನಿಗೆ ಅಧಿಕಾರವಿರುವುದಿಲ್ಲ. ಅಂದರೆ ಚಂಡಾಲನಾದವನು ಮೇಲೆ ಹೇಳಿದ ಲಿಂಗಗಳನ್ನು ಪೂಜಿಸಬಾರದು.

೬. ಬಾಣಲಿಂಗ, ಸ್ವಯಂಭೂಲಿಂಗ, ಹಾಗೆಯೇ ಚಂದ್ರಕಾಂತಶಿಲಾ ಲಿಂಗ, ಇವುಗಳೂ ಶ್ರೇಷ್ಠವಾದ ಲಿಂಗಗಳು. ಇವುಗಳಿಗೆ ಮಾಡಿದ ನೈವೇದ್ಯವನ್ನು ಭಕ್ಷಣಮಾಡಿದರೆ ಚಾಂದ್ರಾಯಣವ್ರತದ ಫಲವು ಲಭಿಸುವುದು.

೭. ಬಸವ, ಚಂಡೀಶ್ವರ, ಬಸವ, ಸೋಮಸೂತ್ರ, ಬಸವ, ಚಂಡೀಶ್ವರ, ಸೋಮಸೂತ್ರ, ಮತ್ತೆ ಚಂಡಿಶ್ವರ ಮತ್ತೆ ಬಸವ. ಆಮೇಲೆ ಲಿಂಗ ಈ ರೀತಿ ಶಿವ ದರ್ಶನಕಾಲದಲ್ಲಿ ದರ್ಶನನಿಯಮವಿರಬೇಕು.

೮. ಕಬ್ಬಿಣ, ಅಂಬಲಿ, ಕಂಚಿನಪಾತ್ರೆ, ಮಸೂರಿಕಾಧಾನ್ಯ (ಚೆನ್ನಂಗಿಬೇಳೆ) ಕಡಲೆ, ಎಳ್ಳಿನಎಣ್ಣೆ ಇವು ಆರು ವಸ್ತುಗಳು ಮಂತ್ರದ ಶಕ್ತಿಯನ್ನು ಎಳೆಯುತ್ತವೆ.

ವಾಮಪಾರ್ಶ್ವೇ ವಿನಿಕ್ಷಿಪ್ಯ ಗೃಹೀತ್ವಾ ವಾಮಪಾಣಿನಾ ।
ಕೃತ್ವಾ ಚ ದಕ್ಷಿಣೇ ಪಾಣೌ ತೈಲೇ ದದ್ಯಾಜ್ಜಲಾಂಜಲಿಂ ॥ ೯ ॥

ಗುಶಬ್ದಸ್ತ್ವಂಧಕಾರಶ್ಚ ರುಶಬ್ದಸ್ತನ್ನಿರೋಧಕಃ ।
ಅಂಧಕಾರನಿರೋಧತ್ವಾದ್ಗುರುಶಬ್ದೋ ನಿಗದ್ಯತೇ ॥ ೧೦ ॥

ಗುರುತ್ಯಾಗೀ ಲಭೇನ್ಮೃತ್ಯುಂ ಮಂತ್ರತ್ಯಾಗೀ ದರಿದ್ರತಾಂ ।
ಗುರುಮಂತ್ರಪರಿತ್ಯಾಗಾತ್ ಸಿದ್ಧೋಽಪಿ ನರಕಂ ವ್ರಜೇತ್ ॥ ೧೧ ॥

ಏಕಮರ್ಘ್ಯಂ ಪ್ರದಾತವ್ಯಂ ಮಧ್ಯಾಹ್ನೇ ಭಾಸ್ಕರಂ ಪ್ರತಿ ।
ಉಭಯೋಃ ಸಂಧ್ಯಯೋರಾಪಸ್ತ್ರೀಃ ಕ್ಷಿಪೇದಸುರಕ್ಷಯಂ ॥ ೧೨ ॥

ಭ್ರಾತೃದ್ವಯಂ ನ ಕುರ್ವೀತ ನ ಕರ್ತವ್ಯಂ ಪಿತಾಸುತಂ ।
ಅನಗ್ನಿಕಂ ನ ಕರ್ತವ್ಯಂ ನ ಕುರ್ಯಾತ್ ಗರ್ಭಿಣೀಪತಿಂ ॥ ೧೩ ॥

---

೯. ಇವುಗಳನ್ನು ಎಡಭಾಗದಲ್ಲಿಟ್ಟುಕೊಂಡು ಎಡದ ಕೈಯಲ್ಲಿ ತೆಗೆದುಕೊಳ್ಳಬೇಕು. ಅನಂತರ ಬಲಗೈಯಲ್ಲಿ ಹಿಡಿದುಕೊಂಡು ಎಳ್ಳಿನಲ್ಲಿ ಜಲಾಂಜಲಿಯನ್ನು ಕೊಡಬೇಕು.

೧೦. ಗು, ಶಬ್ದಕ್ಕೆ ಅಜ್ಞಾನ ಎಂದರ್ಥ. ರು ಶಬ್ದವು ಅದನ್ನು ಹೋಗಲಾಡಿಸುವುದು ಎಂಬರ್ಥವನ್ನು ಕೊಡುವುದು. ಅದರಿಂದ ಅಜ್ಞಾನನಾಶಕವು ಎಂಬರ್ಥದಲ್ಲಿ, ಗುರುಶಬ್ದವು ಇಂದೂ ಪ್ರಸಿದ್ಧಿಪಡೆದಿದೆ.

೧೧. ಗುರುವನ್ನು ತ್ಯಜಿಸಿದವನು ಮರಣವನ್ನು ಹೊಂದುವನು. ಮಂತ್ರತ್ಯಾಗಿಯು ಬಡವನಾಗುವನು. ಗುರು ಮತ್ತು ಮಂತ್ರ ಇವೆರಡನ್ನೂ ತ್ಯಜಿಸಿದವನು ಸಿದ್ಧಪುರುಷನಾದರೂ ನರಕವನ್ನು ಹೊಂದುವನು.

೧೨. ಮಧ್ಯಾಹ್ನದಲ್ಲಿ ಸೂರ್ಯನಿಗೆ ಒಂದು ಅರ್ಘ್ಯವನ್ನು ಕೊಡಬೇಕು. ಎರಡು ಸಂಧ್ಯಾಕಾಲಗಳಲ್ಲಿಯೂ ರಾಕ್ಷಸರ ನಾಶಕ್ಕೋಸ್ಕರ ಮೂರು ಅರ್ಘ್ಯಗಳನ್ನು ಕೊಡಬೇಕು.

೧೩. ಅಣ್ಣತಮ್ಮಂದಿರು, ತಂದೆಮಕ್ಕಳು, ಭಾರ್ಯಾವಿಹೀನನಾದವನು, ಗರ್ಭಿಣೀಪತಿ, ಇವರು ನಿಮಂತ್ರಣ ಭೋಜನಕ್ಕೆ ಅನರ್ಹರಾದವರು.

ನಿರಗ್ನಿಕಃ ಸ್ಮೃತಸ್ತಾವತ್ ಯಾವದ್ಭಾರ್ಯಾಂ ನ ವಿಂದತಿ ।
ಸಾಗ್ನಿಕೋ ಭಾರ್ಯಯಾ ಯುಕ್ತ ಇತ್ಯೇವಂ ಮನುರಬ್ರವೀತ್ ॥ ೧೪ ॥

ಪ್ರಣಾಮಮೇಕಹಸ್ತೇನ ಏಕಂ ವಾಪಿ ಪ್ರದಕ್ಷಿಣಂ ।
ಕಾಲಸೇವಾ ತಥಾಽಕಾಲೇ ಅಬ್ದಪುಣ್ಯಂ ವಿನಶ್ಯತಿ ॥ ೧೫ ॥

ಸಭಾಯಾಂ ಯಜ್ಞಶಾಲಾಯಾಂ ದೇವತಾಯತನೇ ಗುರೌ ।
ಪ್ರತ್ಯೇಕಂ ಚ ನಮಸ್ಕಾರಂ ಹಂತಿ ಪುಣ್ಯಂ ಪುರಾಕೃತಂ ॥ ೧೬ ॥

ಗೋಕ್ಷೀರಂ ಗೋಘೃತಂ ಚೈವ ಮುದ್ಗಧಾನ್ಯತಿಲಾ ಯವಾಃ ।
ಏತೇ ಚೈವಾಕ್ಷಾರಗಣಾ ಅನ್ಯೇ ಕ್ಷಾರಗಣಾಃ ಸ್ಮೃತಾಃ ॥ ೧೭ ॥

---

೧೪. ನಿರಗ್ನಿಕನು ಎಲ್ಲಿಯವರೆವಿಗೆ ಭಾರ್ಯೆವನ್ನು ಹೊಂದುವುದಿಲ್ಲವೋ ಅಲ್ಲಿಯವರೆವಿಗೂ ನಿರಗ್ನಿಕನು ಶ್ರಾದ್ಧಾದಿಕರ್ಮಗಳಿಗೆ ನಿಷಿದ್ಧನು. ಭಾರ್ಯೆಯಿಂದ ಕೂಡಿದರೆ ಆಗ ಅವನು ಸಾಗ್ನಿಕನೆನಿಸಿಕೊಳ್ಳುವನು. ಸಕಲ ಕರ್ಮಕ್ಕೂ ಆಗ ಅವನು ಶುದ್ಧನೆನಿಸುವನು.

೧೫. ಒಂದು ಕೈಯಿಂದ ನಮಸ್ಕಾರಮಾಡಕೂಡದು. ಒಂದು ಪ್ರದಕ್ಷಿಣೆಯನ್ನೂ ಮಾಡಕೂಡದು. ಅಕಾಲದಲ್ಲಿ ಕಾಲೋಚಿತವಾದ ಕರ್ಮಗಳನ್ನು ಮಾಡಕೂಡದು. ಹಾಗೆ ಮಾಡಿದರೆ ಒಂದು ವರ್ಷದ ಪುಣ್ಯವು ನಾಶವಾಗುತ್ತದೆ.

೧೬. ಸಭೆಯಲ್ಲಿಯೂ, ಯಜ್ಞಶಾಲೆಯಲ್ಲಿಯೂ ದೇವಮಂದಿರದಲ್ಲಿಯೂ, ಗುರುವಿನ ಸನ್ನಿಧಿಯಲ್ಲಿಯೂ ಪ್ರತ್ಯೇಕ ಪ್ರತ್ಯೇಕವಾಗಿ ಬೇರೆ ಬೇರೆ ನಮಸ್ಕಾರಗಳನ್ನು ಮಾಡಬಾರದು. ಹಾಗೆ ಮಾಡಿದರೆ ಪೂರ್ವಪುಣ್ಯವು ನಾಶವಾಗುತ್ತದೆ.

೧೭. ಹಸುವಿನ ಹಾಲು, ಹಸುವಿನತುಪ್ಪ, ಹೆಸರು, ಧಾನ್ಯ, ಎಳ್ಳು, ಯವಧಾನ್ಯ, ಇವುಗಳು ಕ್ಷಾರಗುಣವಿಲ್ಲದೆ ಇರತಕ್ಕವುಗಳು. ಮಿಕ್ಕವುಗಳು ಕ್ಷಾರಗುಣವುಳ್ಳವುಗಳು.

ಮಕ್ಷಿಕಾ ಮಶಕಾ ವೇಶ್ಯಾ ಯಾಚಕಾಶ್ಚೈವ ಮೂಷಕಾಃ ।
ಗಣಕಾ ಗ್ರಾಮಣೀಶ್ಚೈವ ಸಪ್ತೈತೇ ಪರಭಕ್ಷಕಾಃ　　　　॥ ೧೮ ॥

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ತಿಥಿನಿರ್ಣಯಾದಿ ಕಥನಂ ನಾಮಾಷ್ಟ ಷಷ್ಟಿತಮೋಧ್ಯಾಯಃ.

---

೧೮. ನೊಣ, ಸೊಳ್ಳೆ, ಸೂಳೆ, ಯಾಚಕ, ಇಲಿ, ಲೆಕ್ಕಾಚಾರದಿಂದ ಜೀವಿಸುವವರು, ಶ್ಯಾನುಭೋಗರು ಈ ಏಳು ಜನರು ಇನ್ನೊಬ್ಬರ ಸ್ವತ್ತಿನಿಂದ ಜೀವಿಸುವವರು.

ಇಲ್ಲಿಗೆ ಬ್ರಹ್ಮಪುರಾಣಾಂತರ್ಗತವಾದ ಶ್ರೀಸೌರಪುರಾಣದಲ್ಲಿ ಸೂತಶೌನಕ ಸಂವಾದದಲ್ಲಿ ತಿಥಿನಿರ್ಣಯಕಥನವೆಂಬ ಅರುವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ಶಿವಾಯನಮಃ

ಅಥ ಶ್ರೀ ಸೌರಪುರಾಣೇ ಏಕೋನಸಪ್ತತಿತಮೋಽಧ್ಯಾಯಃ.

॥ ನಾರದ ಉವಾಚ ॥

ಹೇತುನಾ ಕೇನ ಭಗವಾನ್ ಕಾಲಕಾಲೋ ಮಹೇಶ್ವರಃ ।
ಶ್ರೋತುಮಿಚ್ಛಾಮಿ ಭಗವನ್ ಬ್ರೂಹಿ ಮೇ ಕಮಲೋದ್ಭವ ॥ ೧ ॥

॥ ಬ್ರಹ್ಮೋವಾಚ ॥

ಆಸೀನ್ಮುನಿವರಃ ಪೂರ್ವಂ ನಾಮ್ನಾ ಶ್ವೇತ ಇತಿ ಸ್ಮೃತಃ ।
ತೀರ್ಥೋದಕಾನಿ ಸೇವೇತ ಯಮಾಂಶ್ಚ ನಿಯಮಾನ್ ತಥಾ ॥ ೨ ॥

ಮಾಹೇಶ್ವರಾಗ್ರಣೀಃ ಶಾಂತೋ ಮಹಾದೇವಾರ್ಚನೇ ರತಃ ।
ತಂ ನೇತುಮಾಗತಃ ಕಾಲೋ ದಂಡಹಸ್ತೋ ಭಯಂಕರಃ ॥ ೩ ॥

ಅರವತ್ತೊಂಬತ್ತನೆಯ ಅಧ್ಯಾಯ.

೧. ಎಲೈ ಭಗವಂತನೇ, ಯಾವ ಕಾರಣದಿಂದ ಮಹೇಶ್ವರನು ಕಾಲಕಾಲನಾದನು ಎಂಬುದನ್ನು ದಯೆಯಿಂದ ಹೇಳುವನಾಗು. ಕೇಳಲು ಇಷ್ಟಪಡುತ್ತೇನೆ ಎಂದು ನಾರದನು ಕೇಳಿಕೊಳ್ಳಲು,

೨. ಆಗ ಬ್ರಹ್ಮನು ನಾರದನನ್ನು ಕುರಿತು, ಎಲೈ ನಾರದನೇ, ಪೂರ್ವದಲ್ಲಿ ಶ್ವೇತನೆಂಬ ಒಬ್ಬ ಮುನಿಶ್ರೇಷ್ಠನಿದ್ದನು. ಆತನು ಸದಾ ತೀರ್ಥೋದಕಗಳನ್ನು ಸೇವಿಸುತ್ತಾ ಯಮನಿಯಮಾದಿಗಳನ್ನು ತಪ್ಪದೆ ಅನುಷ್ಠಾನಮಾಡುತ್ತಿದ್ದನು.

೩. ವಿಶೇಷವಾಗಿ ಆತನು ಶಿವಭಕ್ತಾಗ್ರಗಣ್ಯನೆನಿಸಿಕೊಂಡಿದ್ದನು. ಸ್ವಭಾವದಿಂದ ಶಾಂತನಾಗಿಯೂ ಮಹಾದೇವನನ್ನು ಆಸಕ್ತಿಯಿಂದ ಪೂಜಿಸತಕ್ಕವನಾಗಿಯೂ ಇದ್ದನು. ಹೀಗಿರಲು ಒಂದು ದಿನ ಕಾಲನು ದಂಡಧಾರಿಯಾಗಿ ಭಯಂಕರವೇಷದಿಂದ ಅವನನ್ನು ಎಳೆದೊಯ್ಯಲು ಬಂದನು.

ದೃಷ್ಟ್ವಾ ಕಾಲಂ ಸ ವಿಪ್ರೇಂದ್ರೋ ಭಯವ್ಯಾಕುಲಿತೇಂದ್ರಿಯಃ ।
ಸ್ಪೃಷ್ಟ್ವಾ ಕರಾಭ್ಯಾಂ ತಲ್ಲಿಂಗಂ ಧ್ಯಾಯಮಾನೋ ಮಹೇಶ್ವರಂ ॥ ೪ ॥

ಪ್ರಹಸನ್ನಬ್ರವೀತ್ ಕಾಲಃ ಶ್ವೇತಂ ಮುನಿವರಂ ಮುನೇ ।
ಪ್ರಾಪ್ತೇ ಮಯಿ ಕಥಂ ಬ್ರಹ್ಮನ್ ಸ್ವಸ್ಥಾಸ್ತಿಷ್ಠಂತಿ ಜಂತವಃ ॥ ೫ ॥

ಚರಂತಿ ಮದ್ಭಯಾತ್ಸರ್ವೇ ಬ್ರಹ್ಮಚರ್ಯಂ ತಪಾಂಸಿ ಚ ।
ತೀರ್ಥಂ ದಾನಂ ಪ್ರಶಂಸಂತಿ ನಿರತಾಃ ಸ್ವೇಷು ಕರ್ಮಸು ॥ ೬ ॥

ಯಜಂತಿ ಮದ್ಭಯಾದ್ದೇವಾನ್ ಯಜ್ಞಾಂಶ್ಚ ವಿವಿಧಾನ್ ತಥಾ ।
ತಸ್ಮಾದುತ್ತಿಷ್ಠ ನೇಷ್ಯಾಮಿ ಮಮ ಪಾಶವಶಂ ಗತಃ ॥ ೭ ॥

---

೪. ಆ ಬ್ರಾಹ್ಮಣೋತ್ತಮನು ಕಾಲನನ್ನು ನೋಡಿ, ಭಯದಿಂದ ವ್ಯಾಕುಲನಾದನು. ಆಗ ಮತ್ತೇನನ್ನೂ ಮಾಡದೆ ಮಹೇಶ್ವರನನ್ನೇ ಧ್ಯಾನಮಾಡುತ್ತ ಶಿವಲಿಂಗವನ್ನು ಕೈಗಳಿಂದ ಬಲವಾಗಿ ಹಿಡಿದುಕೊಂಡು ಕುಳಿತನು.

೫. ಎಲೈ ಮುನಿಯೇ, ಆ ಕಾಲನು ನಗುತ್ತಾ ಮುನಿಶ್ರೇಷ್ಠನಾದ ಶ್ವೇತನನ್ನು ಕುರಿತು ಹೀಗೆ ಹೇಳಿದನು. “ ಎಲೈ ಬ್ರಾಹ್ಮಣನೇ, ನಾನೇ ಬಂದಿರುವಾಗ ಪ್ರಾಣಿಗಳು ಸುಖವಾಗಿ ನೆಮ್ಮದಿಯಿಂದ ಇರುವುದು ಹೇಗೆ?

೬. ನನ್ನ ಹೆದರಿಕೆಯಿಂದ ಎಲ್ಲರೂ ಬ್ರಹ್ಮಚರ್ಯವನ್ನು ಕಾಪಾಡಿಕೊಂಡು ತಪಸ್ಸನ್ನಾಚರಿಸುವರು. ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿ ತೀರ್ಥದಾನಗಳೆರಡನ್ನೂ ಹೊಗಳುತ್ತಾರೆ.

೭. ನನ್ನ ಹೆದರಿಕೆಯಿಂದ ದೇವತೆಗಳಿಗೆ ಯಜ್ಞದಲ್ಲಿ ಆಹುತಿಯನ್ನು ಕೊಡುತ್ತಾರೆ. ನಾನಾ ಯಜ್ಞಗಳನ್ನು ಮಾಡುತ್ತಾರೆ. ಆದುದರಿಂದ ಏಳು, ನನ್ನ ಪಾಶಕ್ಕೆ ಈಗ ನೀನು ವಶನಾಗಿರುವೆ. ನಿನ್ನನ್ನು ಕರೆದೊಯ್ಯುವೆನು.

ದಾತಾರಂ ನೈವ ಪಶ್ಯಂತಿ ತವಾದ್ಯ ಮುನಿಪುಂಗವಾಃ ।
ಏವಂ ನಿಶಮ್ಯ ವಚನಂ ಸ ವೈ ಕಾಲಸ್ಯ ನಾರದ ॥ ೮ ॥

ಅಥಾಬ್ರವೀದ್ಯಮಂ ಭೀತಃ ಪಾಶಹಸ್ತಂ ಕರಾಲಿನಂ ।
ಕಥಮೀಶಾರ್ಚನರತಂ ತ್ವಂ ಮಾಂ ನೇತುಮಿಹಾರ್ಹಸಿ ॥ ೯ ॥

ಶಿವಾರ್ಚನರತಾನಾಂ ಚ ತ್ವತ್ತಃ ಕಸ್ಮಾದ್ಭಯಂ ವದ ।
ಏವಮುಕ್ತೋ ಯಮಃ ಕೋಪಾದುದ್ಬಂಧ್ಯ ಮುನಿಪುಂಗವಂ ॥ ೧೦

ಪಾಶೈರ್ದೃಢತರೈಃ ಶೀಘ್ರಂ ಧ್ಯಾಯಮಾನಂ ಮಹೇಶ್ವರಂ

ಅಥ ದೇವೋ ಮಹಾದೇವಃ ಪ್ರಾದುರ್ಭೂತಸ್ತ್ರಿಲೋಕಭೃತ್ । ॥ ೧೧ ॥
ತಂ ದೃಷ್ಟ್ವಾ ದೇವದೇವೇಶಂ ಪ್ರಹೃಷ್ಟೋಽಭೂತ್ತದಾ ಮುನಿಃ
ಶಂಕರೋಽಥಾಬ್ರವೀತ್ ಕಾಲಂ ಮಮ ಭಕ್ತಂ ವಿಮೋಚಯ ॥ ೧೨ ॥

---

೮. ಎಲೈ ಮುನಿಯೇ, ಋಷಿಗಳು ಯಾವಾಗಲೂ ತಮ್ಮ ದಾತೃವನ್ನು ಸ್ಮರಿಸುವುದಿಲ್ಲ. ಎಂದು ಹೇಳಿದ ಈ ರೀತಿಯಾದ ಕಾಲನ ಮಾತನ್ನು ಕೇಳಿ,

೯. ಅನಂತರ ಭಯವುಳ್ಳವನಾಗಿ, ಪಾಶಹಸ್ತನಾಗಿ ಭಯಂಕರನಾದ ಯಮನನ್ನು ಕುರಿತು ಈಶ್ವರಪೂಜೆಯಲ್ಲಿ ಸದಾ ನಿರತನಾಗಿರುವ ನನ್ನನ್ನು ನೀನು ಹೇಗೆ ಒಯ್ಯಲು ಯೋಗ್ಯನಾಗುವೆ ?

೧೦-೧೧. ಈಶ್ವರನ ಪೂಜಾಸಕ್ತರಿಗೆ ನಿನ್ನ ದೆಸೆಯಿಂದ ಭಯವೆಲ್ಲಿ ಬಂತು ? ಈ ರೀತಿಯಾಗಿ ಬ್ರಾಹ್ಮಣನು ಕೇಳಲು, ಯಮನು ಕೋಪಗೊಂಡು ಮುನಿಶ್ರೇಷ್ಠನನ್ನು ದೃಢತರವಾದ ಪಾಶಗಳಿಂದ ಗಟ್ಟಿಯಾಗಿ ಕಟ್ಟಿ, ಈಶ್ವರನನ್ನು ಧ್ಯಾನ ಮಾಡುತ್ತಿರುವಾಗಲೇ ಬಂಧಿಸಿದನು.

೧೨. ಅನಂತರ ದೇವದೇವನಾಗಿ ತ್ರಿಲೋಕರಕ್ಷಕನಾದ ಮಹಾದೇವನು ಪ್ರತ್ಯಕ್ಷನಾದನು. ಅವನನ್ನು ನೋಡಿ ಆ ಮುನಿಯು ಸಂತೋಷಚಿತ್ತನಾದನು. ಒಡನೆಯೇ ಈಶ್ವರನು ಯಮನನ್ನು ಕುರಿತು ನನ್ನ ಭಕ್ತನನ್ನು ಬಿಡು ಎಂದಾಜ್ಞೆ ಮಾಡಿದನು

ಸ್ವತಂತ್ರ ಏವ ಮದ್ಭಕ್ತಃ ಸ ಕಥಂ ನೀಯತೇ ತ್ವಯಾ ।
ಯದುಕ್ತಂ ದೇವದೇವೇನ ತದತಿಕ್ರಮ್ಯ ಸೂರ್ಯಜಃ ॥ ೧೩ ॥

ಪುನರ್ಬಬಂಧ ನೃಪತಿಂ ಸ್ವಪುರೀಂ ಗಮನೋದ್ಯತಃ ।
ಅಥ ದೇವೋ ಮಹಾದೇವೋ ವಿಶ್ವೇಶ್ವರ ಉಮಾಪತಿಃ ॥ ೧೪ ॥

ಅಕರೋದ್ಭಸ್ಮಸಾತ್ಕಾಲಂ ಶ್ವೇತಃ ಪಾಶೈರ್ವಿನೋಚಿತಃ ।
ದತ್ತಂ ಭಗವತಾ ತಸ್ಮೈ ಗಾಣಪತ್ಯಂ ಚ ಶಾಶ್ವತಂ ॥ ೧೫ ॥

ದೇವ್ಯಾ ಸಹ ಮಹಾದೇವಃ ಕ್ಷಣಾದಂತರ್ಹಿತೋಽಭವತ್ ।
ಅನೇನ ಹೇತುನಾ ಶಂಭುಃ ಕಾಲಕಾಲ ಇತಿ ಸ್ಮೃತಃ ॥ ೧೬ ॥

ಅಹಂ ಚ ವಿಷ್ಣುನಾ ಸಾರ್ಧಂ ಸ್ತುತ್ವಾ ದೇವಂ ಮಹೇಶ್ವರಂ ।
ಪ್ರಸಾದ್ಯಾಥ ಪುನರ್ಜಾತಃ ಕಾಲಃ ಶಂಭೋರನುಗ್ರಹಾತ್ ॥ ೧೭ ॥

೧೩-೧೫. ಎಲೈ ಯಮನೇ. ನನ್ನ ಭಕ್ತನು ಸ್ವತಂತ್ರನು. ನೀನು ಹೇಗೆ ಅವನನ್ನು ಎಳೆಯುತ್ತೀಯೆ? ಎನ್ನಲು, ಆ ದೇವದೇವನಾದ ಮಹೇಶ್ವರನ ಮಾತನ್ನು ಲಕ್ಷ್ಯಮಾಡದೆ ಯಮನು ಮತ್ತೆ ಆ ಶ್ವೇತರಾಜನನ್ನು ತನ್ನ ಪುರಿಗೆ ಒಯ್ಯಲುದ್ಯುಕ್ತನಾದನು. ಅನಂತರ ದೇವದೇವನಾದ ವಿಶ್ವೇಶ್ವರನೂ, ಪಾರ್ವತೀಪತಿಯೂ ಆದ ಮಹಾದೇವನು, ಯಮನನ್ನು ಉರಿಗಣ್ಣಿನಿಂದ ಭಸ್ಮಮಾಡಿದನು. ಶ್ವೇತನನ್ನು ಪಾಶಗಳಿಂದ ಬಿಡಿಸಿದನು. ಮಹಾದೇವನು ಆ ಶ್ವೇತನಿಗೆ ಶಾಶ್ವತವಾದ ಗಾಣಪತ್ಯ ಪದವಿಯನ್ನು ಕೊಟ್ಟು,

೧೬. ಒಡನೆಯೇ ಪಾರ್ವತಿಯೊಡನೆ ಈಶ್ವರನು ಒಂದು ಕ್ಷಣದಲ್ಲಿ ಅಂತರ್ಧಾನನಾದನು. ಈ ಕಾರಣದಿಂದ ಶಂಕರನು ಕಾಲಕಾಲನೆನಿಸಿಕೊಂಡಿರುವನು.

೧೭. ನಾನೂ ವಿಷ್ಣುವೂ ಒಟ್ಟಾಗಿ ಸೇರಿ ದೇವದೇವನಾದ ಮಹೇಶ್ವರನನ್ನು ಸ್ತುತಿಸಲು ಆ ಮಹೇಶ್ವರನ ಅನುಗ್ರಹದಿಂದ ಯಮನು ಮತ್ತೆ ಹುಟ್ಟಿದನು.

ಅನ್ಯತ್ತೀರ್ಥಂ ಪುಣ್ಯತಮಂ ಜ್ವಾಲೇಶ್ವರಮಿತಿ ಸ್ಮೃತಂ ।
[illegible]ತೀರೆ ಮುನಿಶ್ರೇಷ್ಠ ಮಹಾಪಾತಕನಾಶನಂ ॥ ೧೮ ॥

ಕೋ[illegible]ಟಿಶ. ಸಂತಿ ತೀರ್ಥಾನಿ ತಸ್ಮಿನ್ ಜ್ವಾಲೇಶ್ವರೇ ಶಿವೇ ।
ತತ್ರ ಸ್ನಾತ್ವಾ ದೇವಋಷೇ ದೃಷ್ಟ್ವಾ ಜ್ವಾಲೇಶ್ವರಂ ಶಿವಂ ॥ ೧೯ ॥

ಕುಲೈಕವಿಂಶಮುದ್ಧೃತ್ಯ ಶಿವಲೋಕೇ ಮಹೀಯತೇ ।
ಅನ್ಯಂ ಶ್ರೀಪರ್ವತಂ ಶ್ರೇಷ್ಠಂ ಸಿದ್ಧಾನಾಮಾಲಯಂ ಶುಭಂ ॥ ೨೦ ॥

ತತ್ರ ಸಿದ್ಧಾಶ್ಚ ಮುನಯೋ ದೃಶ್ಯಂತೇ ಸರ್ವತೋ ಗಿರೌ ।
ಸದಾ ಸಂನಿಹಿತಃ ಶಂಭುರ್ಲಿಂಗೇ ಶ್ರೀಮಲ್ಲಿಕಾರ್ಜುನೇ ॥ ೨೧ ॥

ದೃಷ್ಟೇ ತಸ್ಮಿನ್ ಪರೇ ಲಿಂಗೇ ಜೀವನ್ಮುಕ್ತೋ ನರೋ ಭವೇತ್ ।
ಮನುಷ್ಯಾಃ ಪಶವಃ ಕೋಟಿಮೃಗಾಶ್ಚ ಮಶಕಾದಯಃ ॥ ೨೨ ॥

---

೧೮. ಜ್ವಾಲೇಶ್ವರವೆಂದು ರೇವಾನದಿಯ ದಡದಲ್ಲಿ ಬೇರೆಯಮೊಂದು ತೀರ್ಥವಿರುವುದು. ಅದು ಸಮಸ್ತ ಪಾಪಗಳನ್ನು ಪರಿಹರಿಸುವುದು.

೧೯. ಆ ಜ್ವಾಲೇಶ್ವರನ ಸನ್ನಿಧಿಯಲ್ಲಿ ಕೋಟಿ ತೀರ್ಥಗಳು ಇರುತ್ತವೆ. ಎಲೈ ದೇವಋಷಿಯೇ, ಅಲ್ಲಿ ಸ್ನಾನಮಾಡಿ, ಜ್ವಾಲೇಶ್ವರನಾದ ಈಶ್ವರನನ್ನು ದರ್ಶನ ಮಾಡಬೇಕು.

೨೦. ಹಾಗೆ ಮಾಡಿದವನು ತನ್ನ ಇಪ್ಪತ್ತು ವಂಶಗಳ ಪಿತೃಗಳನ್ನೂ ಉದ್ಧಾರ ಮಾಡಿ, ತಾನೂ ಈಶ್ವರಲೋಕದಲ್ಲಿ ಪ್ರಸಿದ್ಧನಾಗುತ್ತಾನೆ. ಹಾಗೆಯೇ ಒಂದೆಡೆ ಶ್ರೀ ಪರ್ವತವಿರುವುದು. ಅದನ್ನು ಸಿದ್ಧಾಲಯವೆಂದು ಹೇಳುವರು.

೨೧-೨೨. ಆ ಶ್ರೀಪರ್ವತದಲ್ಲಿ ಸಮಸ್ತ ಸಿದ್ಧರೂ, ಮುನಿಗಳೂ ಎಲ್ಲಾಕಡೆಯಲ್ಲಿಯೂ ವಾಸಮಾಡುತ್ತಿರುವರು ಶ್ರೀಮಲ್ಲಿಕಾರ್ಜುನೇಶ್ವರನೆಂಬ ಹೆಸರಿನ ಶಂಭುಲಿಂಗವು ಅಲ್ಲಿರುತ್ತದೆ. ಆ ಅತ್ಯುತ್ತಮವಾದ ಲಿಂಗದರ್ಶನದಿಂದ ಕೂಡಲೇ ಮನುಷ್ಯನು ಜೀವನ್ಮುಕ್ತನಾಗುತ್ತಾನೆ. ಅಷ್ಟಲ್ಲದೆ ಮನುಷ್ಯರು, ಪಶುಗಳು, ಮೃಗಗಳು, ಸೊಳ್ಳೆಗಳೇ ಮೊದಲಾದ ಕ್ರಿಮಿಗಳು,

ಶ್ರೀಪರ್ವತೇ ಮೃತಾಃ ಸರ್ವೇ ಯಾಂತಿ ಶಂಭೋಃ ಪರಂ ಪದಂ ।
ಕೇದಾರೇ ಪರಮಂ ತೀರ್ಥಂ ಪ್ರಿಯಂ ದೇವಸ್ಯ ಶೂಲಿನಃ　　॥ ೨೩ ॥

ತತ್ರ ಸ್ನಾತ್ವೋದಕಂ ಪೀತ್ವಾ ಸಂಪೂಜ್ಯ ಚ ಪಿನಾಕಿನಂ ।
ಗಾಣಪತ್ಯಮವಾಪ್ನೋತಿ ದೇವಾನಾಮಪಿ ದುರ್ಲಭಂ　　॥ ೨೪ ॥

ವೃಷಧ್ವಜೇ ಪರಂ ತೀರ್ಥಂ ದೇವಿಕಾಯಾಸ್ತಟೇ ಮುನೇ ।
ಯತ್ರ ಸ್ನಾತ್ವಾ ಶಿವಂ ದೃಷ್ಟ್ವಾ ಬ್ರಹ್ಮಹತ್ಯಾಂ ವ್ಯಪೋಹತಿ　　॥ ೨೫ ॥

ಗೋದಾವರೀ ನದೀ ಯತ್ರ ನಿರ್ಗತಾ ಪಾಪಹಾರಿಣೀ ।
ತತ್ರ ದೇವಾಧಿದೇವೇಶಸ್ತ್ರಿಯಂಬಕ ಇತಿ ಸ್ಮೃತಃ　　॥ ೨೬ ॥

ತತ್ರ ಸ್ನಾನಂ ಜಪೋ ದಾನಂ ಬ್ರಹ್ಮಯಜ್ಞಮುಖಃ ಕೃತಃ ।
ಸರ್ವಂ ತದಕ್ಷಯಂ ಪ್ರೋಕ್ತಂ ನೂನಂ ಬ್ರಹ್ಮಗಿರೌ ಮುನೇ　　॥ ೨೭ ॥

೨೩-೨೪. ಶ್ರೀಪರ್ವತದಲ್ಲಿ ಮೃತರಾದರೆ, ಅವರೆಲ್ಲರೂ ಈಶ್ವರನ ಪವಿತ್ರವಾದ ಸ್ಥಳವನ್ನು ಹೊಂದುವರು. ಕೇದಾರಕ್ಷೇತ್ರದಲ್ಲಿ ಈಶ್ವರನ ಸಂಬಂಧಿಯಾದ ಒಂದು ಪರಮತೀರ್ಥವಿರುವುದು. ಅಲ್ಲಿ ಸ್ನಾನಮಾಡಿ, ತೀರ್ಥಪ್ರಾಶನ ಮಾಡುವುದು ಪುಣ್ಯ ಕರ . ಹಾಗೆಮಾಡಿ, ಅಲ್ಲಿ ಶಿವಾರಾಧನೆ ಮಾಡಿದರೆ, ದೇವತೆಗಳಿಗೂ ದುರ್ಲಭ ವಾದ ಗಾಣಪತ್ಯವನ್ನು ಪಡೆಯಬಹುದು.

೨೫. ಎಲೈ ಮುನಿಯೇ, ದೇವಿಕಾನದಿಯ ತೀರದಲ್ಲಿ ವೃಷಧ್ವಜನೆಂಬ ಲಿಂಗದ ಸಮೀಪದಲ್ಲಿ ಉತ್ತಮವಾದ ತೀರ್ಥವೊಂದುಂಟು. ಅಲ್ಲಿ ಸ್ನಾನಮಾಡಿ ಈಶ್ವರನನ್ನು ನೋಡಿದರೆ ಬ್ರಹ್ಮಹತ್ಯಾದೋಷವು ನಿವೃತ್ತಿಯಾಗುತ್ತದೆ.

೨೬. ಗೋದಾವರೀ ನದಿಯು ಜನರ ಪಾಪಪರಿಹಾರಕ್ಕಾಗಿ ಎಲ್ಲಿ ಉದ್ಭವಿಸುವುದೋ, ಅಲ್ಲಿ ದೇವಾದಿದೇವನಾದ ತ್ರ್ಯಂಬಕೇಶ್ವರನು ನೆಲಸಿರುವನು.

೨೭. ಎಲೈ ಮುನಿಯೇ, ಆ ತ್ರ್ಯಂಬಕೇಶ್ವರಸನ್ನಿಧಿಯಲ್ಲಿ ಸ್ನಾನ, ಜಪ, ದಾನ, ಬ್ರಹ್ಮಯಜ್ಞ ಇವುಗಳನ್ನು ಮಾಡಿದರೆ ಅದು ನಿಶ್ಚಯವಾಗಿಯೂ ಅಕ್ಷಯ ಫಲಪ್ರದವಾಗುವುದು. ಹಾಗೆಯೇ ಬ್ರಹ್ಮಗಿರಿಯೆಂಬ ಮತ್ತೊಂದು ಕ್ಷೇತ್ರವಿದೆ.

ತತ್ರ ಸ್ನಾತ್ವಾ ಶಿವಂ ದೃಷ್ಟ್ವಾ ದೇವದೇವಂ ತ್ರಿಯಂಬಕಂ ।
ಸ್ಕಂದನಂದಿಸಮೋ ಭೂತ್ವಾ ಕ್ರೀಡತೇ ಶಿವಸಂನಿಧೌ ॥ ೨೮ ॥

ರೇವಾಯಾ ನಾಽತಿದೂರೇ ತು ಗೋಕರ್ಣ ಇತಿ ವಿಶ್ರುತಃ ।
ಅನುಗ್ರಹಾರ್ಥಂ ಲೋಕಾನಾಂ ತತ್ರ ಸಂನಿಹಿತಃ ಶಿವಃ ॥ ೨೯ ॥

ನಿಯತೋಽನಿಯತೋ ವಾಽಪಿ ಯೋ ವಾ ಕೋ ವಾಽಪಿ ಮಾನವಃ ।
ಯಸ್ತು ಪಶ್ಯತಿ ಗೋಕರ್ಣಂ ರುದ್ರಸ್ಯಾನುಚರೋ ಭವೇತ್ ॥ ೩೦ ॥

ದೇವಸ್ಯ ವಾಯುದಿಗ್ಭಾಗೇ ದೇವೇಶೀ ಭದ್ರಕಾಲಿಕಾ ।
ಯೋಗಸಿದ್ಧಿಪ್ರದಾ ನಿತ್ಯಂ ದರ್ಶನಾತ್ ಪ್ರಾಣಿನಾಂ ಮುನೇ ॥ ೩೧ ॥

---

೨೮. ಆ ಬ್ರಹ್ಮಗಿರಿಯಲ್ಲಿ ಸ್ನಾನಮಾಡಿ ದೇವದೇವನಾದ ಈಶ್ವರನನ್ನು ಸೇವಿಸಿದರೆ, ಸ್ಕಂದ, ನಂದಿ, ಇವರಿಗೆ ಸರಿಸಮನಾಗಿ, ಈಶ್ವರನ ಸನ್ನಿಧಿಯಲ್ಲಿ ವಿಹರಿಸುವನು.

೨೯. ರೇವಾನದಿಯ ಸಮೀಪದಲ್ಲಿ ಗೋಕರ್ಣವೆಂಬ ಮತ್ತೊಂದು ಪುಣ್ಯಸ್ಥಳವಿರುತ್ತದೆ. ಜನರನ್ನು ಅನುಗ್ರಹಿಸುವುದಕ್ಕೋಸ್ಕರ ಯಾವಾಗಲೂ ಅಲ್ಲಿ ಈಶ್ವರನು ನೆಲಸಿರುವನು.

೩೦. ನಿಯಮಬದ್ಧನಾಗಿಯಾಗಲಿ, ಅಥವಾ ಅನಿಯತನಾಗಿಯಾಗಲಿ, ಯಾವ ಮನುಷ್ಯನು ಗೋಕರ್ಣಕ್ಷೇತ್ರವನ್ನು ಹೊಂದಿ ಶಿವಾರಾಧನೆ ಮಾಡುವನೋ, ಅವನು ಈಶ್ವರನ ಸೇವಕನಾಗುವನು.

೩೧. ಗೋಕರ್ಣೇಶ್ವರನ ವಾಯವ್ಯದಿಕ್ಕಿನಲ್ಲಿ ಭದ್ರಕಾಳಿಕೆಯೆಂಬ ದೇವಿಯಿರುವಳು. ಆ ದೇವಿಯ ದರ್ಶನದಿಂದ ಪ್ರಾಣಿಗಳಿಗೆ ಯೋಗಸಿದ್ಧಿಯು ಲಭಿಸುವುದು.

ಮಹಾಬಲಶ್ಚ ಭಗವಾನ್ ಯತ್ರಾಽಸ್ತೇ ಗಿರಿಜಾಪತಿಃ ।
ತಸ್ಯ ದರ್ಶನಮಾತ್ರೇಣ ರಾಜಸೂಯಫಲಂ ಲಭೇತ್ ॥ ೩೨ ॥

ಅನ್ಯದ್ದಕ್ಷಿಣಗೋಕರ್ಣಂ ಸಿಂಧುತೀರ್ಥೇ ಮಹೇಶ್ವರಃ ।
ತಸ್ಯ ದರ್ಶನಮಾತ್ರೇಣ ಗೋಸಹಸ್ರಫಲಂ ಲಭೇತ್ ॥ ೩೩ ॥

ಅನ್ಯದ್ದಾರುವನಂ ಪುಣ್ಯಂ ಶಂಕರಸ್ಯಾತಿವಲ್ಲಭಂ ।
ಗಿರಿಜಾಪತಿನಾ ಯತ್ರ ಮೋಹಿತಾ ಮುನಿಪತ್ನಯಃ ॥ ೩೪ ॥

॥ ನಾರದ ಉವಾಚ ॥

ಕಥಂ ಭಗವತಾ ತಾತ ಮೋಹಿತಾ ಮುನಿಪತ್ನಯಃ
ಆಚಕ್ಷ್ವ ತತ್ಸಮಾಸೇನ ಕೌತುಕಂ ಹೃದಿ ವರ್ತತೇ ॥ ೩೫ ॥

---

೩೨ ಅಲ್ಲಿಯೇ ಪಾರ್ವತೀಪತಿಯಾದ ಪರಮೇಶ್ವರನು ಮಹಾಬಲೇಶ್ವರನೆಂಬ ಹೆಸರಿನಿಂದ ನೆಲಸಿರುವನು. ಆ ಮಹಾಬಲೇಶ್ವರನನ್ನು ನೋಡಿದ ಮಾತ್ರದಿಂದಲೇ ರಾಜಸೂಯಯಾಗದ ಫಲವು ಬರುತ್ತದೆ.

೩೩. ದಕ್ಷಿಣಗೋಕರ್ಣವೆಂದು ಪ್ರಸಿದ್ಧವಾದ ಕ್ಷೇತ್ರವೊಂದಿರುವುದು. ಅಲ್ಲಿ ಸಿಂಧುತೀರ್ಥವಿದೆ. ಆ ಕ್ಷೇತ್ರದ ಮತ್ತು ತೀರ್ಥದ ದರ್ಶನದಿಂದ ಸಹಸ್ರ ಗೋದಾನದ ಫಲವು ಲಭಿಸುವುದು.

೩೪. ಅದರಂತೆಯೇ ಪುಣ್ಯಕರವಾದ ದಾರುವನವೆಂಬ ಪುಣ್ಯಸ್ಥಳವಿರುವುದು. ಅಲ್ಲಿ ಗಿರಿಜಾಪತಿಯಾದ ಶಂಕರನು ನೆಲಸಿರುವನು? ಅಲ್ಲಿಯೇ ಋಷಿಪತ್ನಿಯರೆಲ್ಲರೂ ಒಂದು ಸಾರಿ ಮೋಹಾವಿಷ್ಟರಾದರು.

೩೫. ಹೀಗೆ ಹೇಳಿದ ಬ್ರಹ್ಮನ ಮಾತನ್ನು ಕೇಳಿ ನಾರದನು "ಹೇಗೆ ಮಹೇಶ್ವರನು ಮುನಿಪತ್ನಿಯರನ್ನು ಮೋಹಗೊಳಿಸಿದನು ? ಅದನ್ನು ಕೇಳಬೇಕೆಂದು ಮನಸ್ಸಿನಲ್ಲಿ ಕುತೂಹಲವಿರುತ್ತದೆ. ಅದನ್ನು ದಯವಿಟ್ಟು ನನಗೆ ಹೇಳು." ಎಂದು ಕೇಳಿದನು.

॥ ಬ್ರಹ್ಮೋವಾಚ ॥

ಶೃಣು ನಾರದ ವಕ್ಷ್ಯಾಮಿ ಭವಸ್ಯ ಚರಿತಂ ಶುಭಂ ।
ಶ್ರವಣಾದೇವ ಮನುಜಃ ಶಿವಸ್ಯ ದಯಿತೋ ಭವೇತ್ ॥ ೩೬ ॥

ಭೃಗುರತ್ರಿರ್ವಸಿಷ್ಠಶ್ಚ ಪುಲಸ್ತ್ಯಃ ಪುಲಹಃ ಕ್ರತುಃ ।
ಜಮದಗ್ನಿರ್ಭರದ್ವಾಜೋ ಗೌತಮೋ ಭಾಗುರಿಸ್ತಥಾ ॥ ೩೭ ॥

ವಾಮದೇವೋಽಙ್ಗಿರಾಃ ಶಂಖೋ ಲಿಖಿತಶ್ಚ ಬೃಹಚ್ಛ್ರವಾಃ ।
ವಿಶ್ವಾಮಿತ್ರೋಽಥ ಜಾಬಾಲಿರನ್ಯೇ ಚ ಮುನಯಸ್ತಥಾ ॥ ೩೮ ॥

ಯಜ್ಞೈರ್ಯಜಂತಿ ದೇವೇಶಂ ತಪಂತಿ ಚ ತಪಸ್ತಥಾ ।
ಅಜ್ಞಾತ್ವೈವ ಪರಂ ಭಾವಂ ದೇವದೇವಸ್ಯ ಶೂಲಿನಃ ॥ ೩೯ ॥

---

೩೬. ಅದಕ್ಕೆ ಬ್ರಹ್ಮನು ನಾರದನನ್ನು ಕುರಿತು "ಎಲೈ ನಾರದನೇ ಕೇಳು. ಈಗ ಈಶ್ವರನ ಪುಣ್ಯಚರಿತ್ರೆಯನ್ನು ಹೇಳುವೆನು. ಅದನ್ನು ಕೇಳಿದ ಮಾತ್ರದಿಂದಲೇ ಮನುಷ್ಯನು ಈಶ್ವರನಿಗೆ ಪ್ರೀತಿಪಾತ್ರನಾಗುವನು.

೩೭-೩೮. ಭೃಗು, ಅತ್ರಿ, ವಸಿಷ್ಠ, ಪುಲಸ್ತ್ಯ, ಪುಲಹ, ಕ್ರತು, ಜಮದಗ್ನಿ, ಭರದ್ವಾಜ, ಗೌತಮ, ಭಾಗುರಿ, ಹಾಗೆಯೇ ವಾಮದೇವ, ಅಂಗೀರಸ್ಸು, ಶಂಖ, ಲಿಖಿತ, ಬೃಹಚ್ಛ್ರವ, ವಿಶ್ವಾಮಿತ್ರ, ಜಾಬಾಲಿ, ಮತ್ತು ಉಳಿದ ಅನೇಕ ಮುನಿಗಳೂ,

೩೯. ಯಜ್ಞಗಳಿಂದ ದೇವೇಶನನ್ನು ತೃಪ್ತಿಗೊಳಿಸಿದರು. ಪರಶಿವನಿಗಾಗಿ ಘೋರವಾದ ತಪಸ್ಸನ್ನಾಚರಿಸಿದರು. ಆದರೆ ಅವನ ಮಹತ್ವವನ್ನು ಮಾತ್ರ ತಿಳಿಯಲಿಲ್ಲ.

ತೇಷಾಂ ಮೂರ್ಧೋತ್ಥಿತೋ ಧೂಮಸ್ತಪಸಾ ಕ್ಲೇಶಿತಾತ್ಮನಾಂ ।
ತೇನ ಧೂಮೇನ ಮಹತಾ ವ್ಯಾಪ್ತೋ ಬ್ರಹ್ಮಾಂಡಮಂಡಲಃ ॥ ೪೦ ॥

ಶಂಭೋರುತ್ಸಂಗಗಾ ದೇವೀ ಧೂಮವ್ಯಾಪ್ತಂ ಜಗತ್ತ್ರಯಂ ।
ದೃಷ್ಟ್ವಾ ಪಪ್ರಚ್ಛ ವಿಶ್ವೇಶಂ ಕೌತುಕಾದೀಶ್ವರೇಶ್ವರೀ ॥ ೪೧ ॥

ಆಶ್ಚರ್ಯಮಿವ ಮೇ ಭಾತಿ ಧೂಮವ್ಯಾಪ್ತಮಿದಂ ಜಗತ್ ।
ಧೂಮಸ್ಯ ಕಾರಣಂ ಬ್ರೂಹಿ ದೇವದೇವ ಮಹೇಶ್ವರ ॥ ೪೨ ॥

॥ ಈಶ್ವರ ಉವಾಚ ॥

ಯತ್ರ ದಾರುವನಂ ಪುಣ್ಯಂ ಮಮ ಚಾತೀವ ವಲ್ಲಭಂ ।
ತತ್ರ ತಿಷ್ಠಂತಿ ಮುನಯಸ್ತಪೋನಿಷ್ಠಾ ಜಿತೇಂದ್ರಿಯಾಃ ॥ ೪೩ ॥

---

೪೦. ಆದರೆ ಅವರ ಬ್ರಹ್ಮರಂಧ್ರದಿಂದ ತಪೋಜ್ವಾಲೆಯು ಧೂಮಾಕಾರವಾಗಿ ಹೊರಟಿತು. ಆ ಧೂಮದಿಂದ ಬ್ರಹ್ಮಾಂಡ ಮಂಡಲವೆಲ್ಲಾ ತುಂಬಿಹೋಯಿತು.

೪೧. ಈಶ್ವರನ ತೊಡೆಯ ಮೇಲೆ ಕುಳಿತಿದ್ದ ದೇವಿಗೂ ಆ ಹೊಗೆಯು ತಟ್ಟಿತು. ಮೂರು ಲೋಕಗಳು ಹೊಗೆಯಿಂದ ಸುತ್ತಿಕೊಂಡಿದ್ದುವು. ಅದನ್ನು ನೋಡಿ ಕುತೂಹಲದಿಂದ ಆ ಪಾರ್ವತಿಯು ವಿಶ್ವೇಶ್ವರನನ್ನು ಕುರಿತು ಹೀಗೆ ಪ್ರಶ್ನಿಸಿದಳು.

೪೨. "ಎಲೈ ಮಹೇಶ್ವರನೆ, ಈ ಜಗತ್ತು ಹೊಗೆಯಿಂದ ತುಂಬಿರುವುದು ಬಹಳ ಆಶ್ಚರ್ಯವಾಗಿದೆ. ಈ ಹೊಗೆಗೆ ಕಾರಣವನ್ನು ದಯೆಯಿಟ್ಟು ತಿಳಿಸು,"ಎಂದಳು.

೪೩-೪೪. ಆಗ ಶಂಕರನು ದೇವಿಯೊಡನೆ "ದೇವಿಯೇ, ಪುಣ್ಯತಮವಾದ ದಾರುವನವೆಂಬ ಕ್ಷೇತ್ರವಿದೆ. ಅದು ನನಗೆ ಬಹಳ ಪ್ರೀತಿಕರವಾದದ್ದು. ಅಲ್ಲಿ ಜಿತೇಂದ್ರಿಯರಾದ ಋಷಿಗಳು ತಪೋನಿಷ್ಠರಾಗಿ ತಪಸ್ಸು ಮಾಡುತ್ತಿದ್ದಾರೆ.

ಅವಿದಿತ್ವೈವ ಮಾಂ ದೇವಿ ಶರೀರಕ್ಲೇಶಕಾರಿಣಿ ।
ತೇಷಾಂ ಮೂರ್ಧ್ನಿ ಸ್ಥಿತೋ ಧೂಮೋ ವ್ಯಾಪ್ನೋತಿ ಸಚರಾಚರಂ ॥ ೪೪ ॥

ಕರ್ಮಾಣಿ ಯಾನಿ ಲೋಕೇಷು ಪುಷ್ಕಲಾನಿ ಬಹೂನಿ ಚ ।
ಸರ್ವಾಣಿ ನಿಷ್ಫಲಾನ್ಯೇವ ಮಾಮಜ್ಞಾತ್ವೈವ ಪಾರ್ವತಿ ॥ ೪೫ ॥

ಏವಂ ದೇವಸ್ಯ ವಚನಂ ಶ್ರುತ್ವಾ ಮರ್ಷಮಥಾಬ್ರವೀತ್ ॥ ೪೬ ॥

॥ ದೇವ್ಯುವಾಚ ॥

ದೇವದೇವ ಮಹಾದೇವ ಮುನೀನಾಂ ಭಾವಿತಾತ್ಮನಾಂ ।
ಅಜ್ಞಾನಸ್ಯ ಯಥಾ ವ್ಯಾಪ್ತಿಸ್ತಾಮಹಂ ದ್ರಷ್ಟುಮುತ್ಸಹೇ ॥ ೪೭ ॥

ಏವಂ ದೇವ್ಯಾಃ ವಚಃ ಶ್ರುತ್ವಾ ಭಗವಾನ್ನೀಲಲೋಹಿತಃ ।
ವಿಟವೇಷಾಮವಸ್ಥಾಯ ಯಯೌ ದಾರುವನಂ ಪ್ರತಿ ॥ ೪೮ ॥

ಆದರೆ ಮಾತ್ರ ಅವರು ನನ್ನ ನಿಜಸ್ವರೂಪವನ್ನು ಸರಿಯಾಗಿ ತಿಳಿದವರಾಗಿಲ್ಲ. ತಪೋಜ್ವಾಲೆಯಾದರೋ, ಶರೀರವನ್ನು ಶೋಷಿಸುತ್ತಾ ಚರಾಚರವನ್ನು ವ್ಯಾಪಿಸಿರುವುದು.

೪೫-೪೬. ಪ್ರಪಂಚದಲ್ಲಿ ಬಹಳವಾಗಿ ಕರ್ಮಗಳಿರುವುವು. ನನ್ನ ಸ್ವರೂಪವನ್ನು ತಿಳಿಯದೇ ಯಾವಕರ್ಮಗಳನ್ನು ಆಚರಿಸಿದರೂ, ಅವು ವ್ಯರ್ಥ." ಎಂದು ಹೇಳಿದ ದೇವದೇವನ ಮಾತನ್ನು ಕೇಳಿ, ಚಿಂತಿಸುತ್ತಾ ದೇವಿಯು ಹೀಗೆ ಹೇಳಿದಳು

೪೭. "ದೇವದೇವನಾದ ಮಹಾದೇವನೇ, ಉತ್ತಮಮನಸ್ಸುಳ್ಳ ಮುನಿಗಳಿಗೆ ಅಂಧಕಾರದ ವ್ಯಾಪ್ತಿಯು ಹೇಗಿರುವುದು? ಅದನ್ನು ಕೇಳಲು ಉತ್ಸಾಹವುಳ್ಳವಳಾಗಿದ್ದೇನೆ."

೪೮-೪೯. ಈರೀತಿಯಾದ ಮಾತನ್ನು ಕೇಳಿ, ಭಗವಂತನಾದ ನೀಲಲೋಹಿತನು ವಿಟವೇಷವನ್ನು ಧರಿಸಿದವನಾಗಿ ದಾರುವನವನ್ನು ಪ್ರವೇಶಿಸಿದನು. ವಿಷ್ಣುವು

ಸ್ತ್ರೀರೂಪಧಾರೀ ವಿಷ್ಣುಶ್ಚ ಶಂಕರೇಣ ಸಮಾಗತಃ ।
ವಿಷ್ಣುನಾ ಸಹ ವಿಶ್ವೇಶೋ ದೇವದಾರುವನೌಕಸಃ ॥ ೪೯ ॥

ಮೋಹಯನ್ ಮಾಯಯಾ ಶಂಭುರ್ವಿಚಚಾರ ವನೇ ತದಾ ।
ಮುನಿಸ್ತ್ರಿಯಃ ಶಿವಂ ದೃಷ್ಟ್ವಾ ಮದನಾನಲದೀಪಿತಾಃ ॥ ೫೦ ॥

ತ್ಯಕ್ತ್ವಲಜ್ಜಾ ವಿವಸ್ತ್ರಾಶ್ಚ ಯಯುಸ್ತಾ ಅನುಶಂಕರಂ ।
ಸ್ತ್ರೀರೂಪಧಾರಿಣಂ ವಿಷ್ಣುಂ ಸರ್ವೇ ಮುನಿಕುಮಾರಕಾಃ ॥ ೫೧ ॥

ಅನ್ವಗಚ್ಛಂತ ದೇವರ್ಷೇ ಕಾಮಬಾಣಪ್ರಪೀಡಿತಾಃ ।
ತದದ್ಭುತಂ ತಥಾ ಜ್ಞಾತ್ವಾ ಕುಪಿತಾ ಮುನಯಸ್ತದಾ ॥ ೫೨ ॥

ಲಿಂಗಹೀನಂ ಹರಂ ಕೃತ್ವಾ ಗೋಪವೇಷಧರಂ ಹರಿಂ ।
ತದಾ ಪ್ರಭೃತಿ ವಿಪ್ರೇಂದ್ರ ಶಿವಾ ಮೇಖಲಸಂಜ್ಞಿತಾ ॥ ೫೩ ॥

ಸ್ತ್ರೀರೂಪಧಾರಿಯಾಗಿ ಈಶ್ವರನೊಡನೆ ಬಂದನು. ವಿಷ್ಣುವಿನೊಡನೆ ಕೂಡಿ ವಿಶ್ವೇಶನು. ದೇವದಾರುವನದ ಋಷಿಗಳನ್ನೆಲ್ಲಾ,

೫೦ ಮಾಯಾ ಮೋಹಿತರನ್ನಾಗಿ ಮಾಡುತ್ತಾ ಆ ಕಾಡಿನಲ್ಲಿ ಅಲ್ಲಿಂದಲ್ಲಿ ಸಂಚರಿಸಿದನು. ಮುನಿಪತ್ನಿಯರು ಈಶ್ವರನನ್ನು ನೋಡಿ ಕಾಮಮೋಹಿತರಾದರು.

೫೧. ಆ ಮುನಿ ಪತ್ನಿಯರು ನಾಚಿಕೆಯನ್ನು ಬಿಟ್ಟರು ವಸ್ತ್ರಗಳನ್ನು ಬಿಸುಟರು. ಈಶ್ವರನನ್ನು ಅನುಸರಿಸಿ ಹೊರಟರು. ಸ್ತ್ರೀರೂಪಧಾರಿಯಾದ ವಿಷ್ಣುವನ್ನು ನೋಡಿ ಎಲ್ಲಾ ಮುನಿಕುಮಾರರೂ ಹಾಗೆಯೇ ಆದರು.

೫೨-೫೩. ಕಾಮಬಾಣದಿಂದ ಪೀಡಿತರಾಗಿ ಅವನನ್ನೇ ಅನುಸರಿಸಿ ಹೋದರು. ಆ ಆಶ್ಚರ್ಯವನ್ನು ಮುನಿಗಳು ನೋಡಿ ಕೋಪದಿಂದ ಹೀಗೆ ಶಪಿಸಿದರು. ಇನ್ನು ಮುಂದೆ ಈಶ್ವರನು ಲಿಂಗಹೀನನಾಗಲಿ. ವಿಷ್ಣುವು ಗೋಪಾಲಕನಾಗಲಿ. ಪಾರ್ವತಿಯು ಈಶ್ವರನಿಗೆ ಮೇಖಲೆಯಂತೆ ಸದಾ ಶಿವಹೃದಯದಲ್ಲಿ ನೆಲಸಿರಲಿ'' ಈ ಶಾಪದಿಂದ ನಾರದನೇ, ಇಂದಿಗೂ ಗೌರೀದೇವಿಗೆ ಮೇಖಲಾ ಎಂಬ ಹೆಸರಿದೆ.

ಉಭಯೋಶ್ಚೈವ ಸಂಯೋಗಃ ಸರ್ವಪಾಪಹರಃ ಶಿವಃ ।
ಇತಿ ಶ್ರುತ್ವಾ ತು ದೇವರ್ಷಿರ್ಬ್ರಹ್ಮಣೋ ವಚನಂ ತದಾ ॥ ೫೪ ॥

ಜಗಾಮ ಕರ್ತುಂ ತೀರ್ಥಾನಿ ಶಿವಭಕ್ತಿಪುರಸ್ಕೃತಃ ।
ಏತತ್ ಸೌರಪುರಾಣಾಂತೇ ಯಥಾವತ್ ಸಮುದೀರಿತಂ ॥ ೫೫ ॥

ಯಚ್ಛ್ರುತ್ವಾ ಮನುಜಃ ಸಮ್ಯಗ್ಗೋಸಹಸ್ರಫಲಂ ಲಭೇತ್ ।
ಕಿಂ ತೀರ್ಥೈಸ್ತುಪ್ರಯಾಗಾದ್ಯೈಃ ಕಿಂ ಯಜ್ಞೈರ್ಭೂರಿದಕ್ಷಿಣೈಃ ॥ ೫೬ ॥

ಯದಿ ಶ್ರುತಂ ಶ್ರದ್ಧಧಾನೈಃ ಪುರಾಣಮಿದಮುತ್ತಮಂ ।
ಯತ್ರ ದೇವಾಧಿದೇವಸ್ಯ ಮಾಹಾತ್ಮ್ಯಂ ಕಥ್ಯತೇ ವಿಭೋ ॥ ೫೭ ॥

---

೫೪. ಇವರಿಬ್ಬರ ಸಂಸರ್ಗದಿಂದಲೇ ಈಶ್ವರನು ಸರ್ವಪಾಪಗಳನ್ನು ಪರಿಹಾರಮಾಡುವವನಾಗುವನು ಎಂದು ಹೇಳಿದ ಬ್ರಹ್ಮನ ಮಾತುಗಳನ್ನು ನಾರದನು ಕೇಳಿ,

೫೫. ಶಿವಭಕ್ತಿ ಪುರಸ್ಸರವಾಗಿ ಆ ತೀರ್ಥಗಳನ್ನು ನೋಡಲು ಪ್ರಯಾಣ ಮಾಡಿದನು. ಈ ರೀತಿಯಾದ ಸೌರಪುರಾಣವನ್ನು ನಿಮಗೆ ಯಥಾವತ್ತಾಗಿ ಹೇಳಿರುತ್ತೇನೆ.

೫೬. ಈ ಸೌರಪುರಾಣವನ್ನು ಕೇಳಿದವರು ಸಾವಿರ ಗೋದಾನದ ಫಲವನ್ನು ಪಡೆಯುತ್ತಾರೆ. ಇದನ್ನು ಕೇಳಿದಮೇಲೆ ತೀರ್ಥಪ್ರಯಾಣಾದಿಗಳಿಂದಲೂ, ಬಹಳ ದಕ್ಷಿಣೆಯುಳ್ಳ ಯಜ್ಞಗಳಿಂದಲೂ, ಏನುಪ್ರಯೋಜನ ?

೫೭. ಉತ್ತಮವಾದ ಈ ಪುರಾಣವನ್ನು ಶ್ರದ್ಧಾಳುಗಳು ಅವಶ್ಯವಾಗಿ ಕೇಳಬೇಕು. ಏಕೆಂದರೆ ಇದರಲ್ಲಿ ಸರ್ವವ್ಯಾಪಿಯಾದ ಮತ್ತು ದೇವಾದಿದೇವನಾದ ಶಂಕರನ ಮಾಹಾತ್ಮ್ಯೆಯು ವಿಶೇಷವಾಗಿ ಹೇಳಲ್ಪಟ್ಟಿರುತ್ತದೆ.

ಗಿರೀಶಸ್ಯ ತು ಯೋಗೀಂದ್ರಾಃ ಕಿಂ ತೇನ ಸದೃಶಂ ಭವೇತ್ ।
ಶ್ರದ್ದಧಾನಃ ಶಿವೇ ಭಕ್ತೋ ನಿಯತಃ ಶೃಣುಯಾದಿದಂ ॥ ೫೮ ॥

ಬ್ರಾಹ್ಮಣಾನ್ ಶಿವಭಕ್ತಾಂಶ್ಚ ಪುರಸ್ಕೃತ್ಯ ಸಮಾಹಿತಃ ।
ಸಮಾಪ್ಯ ಸಕಲಂ ವೇದಂ ಪೂಜಯೇದ್ವಾಚಕಂ ನರಃ ॥ ೫೯ ॥

ಕನಕೇನ ಸುಶುದ್ಧೇನ ತಥಾ ಚಂದನಖಂಡಿಕೈಃ ।
ವಿಶ್ವೇಶ್ವರೋ ಮಹಾದೇವಃ ಪ್ರೀಯತಾಮಿತಿ ಭಾವತಃ ॥ ೬೦ ॥

ದದ್ಯಾತ್ ಸ್ವರ್ಣಂ ಯಥಾಶಕ್ತಿ ವಾಚಕಾಯ ಸಚಂದನಂ
ಯದ್ಯೇಕಶೀರಮಾತ್ರಾಽಪಿ ದತ್ತಾ ಭೂಮಿಃ ಶಿವಾರ್ಥಿನಾ ॥ ೬೧ ॥

ಸಾ ತಾರಯತಿ ದಾತುರ್ಹಿ ಪೂರ್ವಜಾನ್ ಸಕಲಾನಪಿ ।
ಶ್ರುತ್ವಾ ಗ್ರಂಥಮಿಮಂ ಸಮ್ಯಕ್ ದದ್ಯಾದ್ದಾನಾನಿ ಶಕ್ತಿತಃ ॥ ೬೨ ॥

ತಾನ್ಯಕ್ಷಯಫಲಾನ್ಯಾಹುರ್ಮುನಯೋ ವೇದವಾದಿನಃ ॥ ೬೩ ॥

---

೫೮. ಎಲೈ ಯೋಗೀಂದ್ರರೇ, ಪಾರ್ವತೀಪತಿಯ ಈ ಉತ್ತಮ ಚರಿತ್ರೆಯನ್ನು ಕೇಳಬೇಕು. ಇದಕ್ಕೆ ಸಮಾನವಾದದ್ದು ಯಾವುದೂ ಇಲ್ಲ. ಶ್ರದ್ಧಾಳುವಾಗಿ ಈಶ್ವರನಲ್ಲಿ ಭಕ್ತಿಯಿಟ್ಟು ಇದನ್ನು ಶ್ರವಣಮಾಡಬೇಕು.

೫೯. ಈ ಪುರಾಣವನ್ನು ಸಮಗ್ರವಾಗಿ ಕೇಳಿದಮೇಲೆ, ಶಿವನಲ್ಲಿ ಭಕ್ತಿಯಿಟ್ಟಿರತಕ್ಕ ಬ್ರಾಹ್ಮಣರನ್ನು ಅನೇಕ ಉಪಚಾರಗಳಿಂದ ಮರ್ಯಾದಿಸಬೇಕು. ವೇದಪಠಣೆ ಮಾಡಿಸಬೇಕು. ಪುರಾಣವನ್ನು ಹೇಳಿದಂತಹವನಿಗೆ,

೬೦-೬೩. ಶುದ್ಧವಾದ ಸುವರ್ಣವನ್ನೂ, ಹಾಗೆಯೇ ಚಂದನ ಖಂಡಗಳನ್ನೂ ಮಹಾದೇವನೂ, ಪ್ರಪಂಚಕ್ಕೆ ಅಧಿಪತಿಯೂ ಆದ ಶಂಭುವಿನ ಪ್ರೀತ್ಯರ್ಥವಾಗಿ ದಾನ ಮಾಡಬೇಕು. ಈ ದಾನವೂ ತನ್ನ ಶಕ್ತಿಯನ್ನು ಅನುಸರಿಸಿರಬೇಕು. ಈಶ್ವರನ ಪ್ರೀತ್ಯರ್ಥವಾಗಿ, ಒಂದು ನೇಗಿಲಗೆರೆಯಷ್ಟು ಭೂಮಿಯನ್ನಾದರೂ ದಾನಮಾಡಬೇಕು ಆ ಭೂದಾನವು ಆವನ ಪಿತೃಗಣಗಳನ್ನೆಲ್ಲಾ ಉದ್ಧರಿಸುತ್ತದೆ. ಈ ಗ್ರಂಥವನ್ನು ಕೇಳಿ ತನ್ನ ಯೋಗ್ಯತಾನುಸಾರವಾಗಿ ಅನೇಕ ದಾನಗಳನ್ನು ಮಾಡಬಹುದು. ಆ ದಾನಗಳೆಲ್ಲವೂ ಅಕ್ಷಯಫಲಪ್ರದಗಳಾಗುತ್ತದೆಯೆಂದು ವೇದಜ್ಞರು ಹೇಳಿರುವರು.

ಇತಿ ಶ್ರೀ ಬ್ರಹ್ಮಪುರಾಣೋಪಪುರಾಣೇ ಶ್ರೀ ಸೌರೇ ಸೂತಶೌನಕ ಸಂವಾದೇ ಶಿವತೀರ್ಥ ಕಥನಂ, ಮುನಿಪತ್ನಿಮೋಹನಂ ನಾಮೈಕೋನಸಪ್ತತಿತಮೋಧ್ಯಾಯಃ.

ಇಲ್ಲಿಗೆ ಬ್ರಹ್ಮಪುರಾಣೋಪಪುರಾಣವಾದ ಶ್ರೀಸೌರಪುರಾಣದಲ್ಲಿ ಸೂತ ಶೌನಕ ಸಂವಾದರೂಪವಾಗಿ ಶಿವತೀರ್ಥಕಥನ ಮತ್ತು ಋಷಿಪತ್ನಿಯರ ಮೋಹವೆಂಬ ಅರುವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

ಇಲ್ಲಿಗೆ ಶ್ರೀ ಸೌರಪುರಾಣವು ಸಮಾಪ್ತಿಯಾಯಿತು.

ಒಟ್ಟು ಪುರಾಣದ ಶ್ಲೋಕಸಂಖ್ಯೆ ೩೮೯೯.